1) ಕೃಷ್ಣಮೂರ್ತಿಪುರಂನಲ್ಲಿ ಮಹಡಿ ಇರುವ ಬಂಗ್ಲೆ. 2) ಚಾಮರಾಜಪುರಂನಲ್ಲಿ ಉತ್ತಮವಾದ ಮನೆ. 3) ವಾಣೀವಿಲಾಸಮೊಹಲ್ಲದಲ್ಲಿ ಮೂರು ಬಂಗ್ಲೆಗಳು. 4) ಕೃಷ್ಣರಾಜನಗರ ತಾಲ್ಲೂಕು, [illegible]ನಲ್ಲಿ ನಾಲ್ಕು ಎಕರೆ ತರೀ ಜಮೀನು. 5) [illegible] ಎಕರೆ [illegible] ಇನ್ನೂ ಅನೇಕ ಮನೆಗಳು ಬಿಕರಿಗಿವೆ. ಕಂಡು ವಿಚಾರಿಸಿ:—

ಆರ್. ಗುಂಡೂರಾವ್, ಮೈಸೂರು ಬ್ಯಾಂಕ್ ರೋಡ್, ಮೈಸೂರು

MEDICINES

Take your requirements from

RAGHULAL & CO.,

1748, Sayaji Rao, Road, (Upstairs, Mysore Hall), MYSORE.

ಔಷಧಗಳು

[illegible] ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ,

1748, ಸಯ್ಯಾಜೀರಾವ್ ರೋಡ್, (ಮೈಸೂರು ಹಾಲ್ ಮಹಡಿ), ಮೈಸೂರು.

ಮಹಾತ್ಮರ ಉಪದೇಶ! —ಃ— ಬಿಸಿ ವರ್ಷದ ಚಾಳಿ!

ಮೈಸೂರು ಶ್ರೀಮನ್ಮಹಾರಾಜ ಮಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

[illegible] ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ [illegible] ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

[illegible] ಬರೆ.

[illegible] ಅಯ್ಯಂಗಾರ್, ಅಂಬಳೆ, ಯಳಂದೂರ್ ಪೋಸ್ಟ್

ಶ್ರೀಯುತ ಸೌಕರ್ಯಕ್ಕೆ

[illegible] ಪ್ರತ್ಯೇಕವಾಗಿ [illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ.

ಡಿ. ಪುಟ್ಟೆಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲದ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ಕೇರಿಗಳಿಗೆ ಆರ್ಡರುಗಳಿಗೆ ಸಕ್ಕರೆ ಕೊಟ್ಟರೆ ಪ್ರತಿಯಾಗಿ [illegible] ಕಳುಹಿಸಲ್ಪಡುತ್ತದೆ

ಸಂಪುಟ ೨] ಗುರುವಾರ ೨೯-೬-೪೪ [ಸಂಚಿಕೆ ೨೮೭

ಫಿನ್ಲೆಂಡಿಗೆ ಜರ್ಮನಿಯ ಮಿಲಿಟೆರಿ ಸಹಾಯ

ಪುನರ್ರಚನಾ ಯೋಜನೆಗಳಲ್ಲಿ ಮಂತ್ರಿಗಳಿಗೇ ನಂಬಿಕೆಯಿಲ್ಲ

'ಜರ್ಮನಿ ಬಲವಾಗಿದೆ; ಯುದ್ಧ ಬೇಗ ಮುಗಿಯುವುದಿಲ್ಲ'

ಮಂತ್ರಿಗಳಿಗೇ ವಿಶ್ವಾಸವಿಲ್ಲ!

ಸಿಮ್ಲಾದಲ್ಲಿ ನಡೆದ ವ್ಯವಸಾಯ ನೀತಿ ನಿರ್ಣಯದ ಸಮಿತಿಯಲ್ಲಿ ಇಂಡಿಯಾ ಸರ್ಕಾರದ ಆಹಾರ ಮಂತ್ರಿಗಳಾದ ಸರ್ ಜೆ ಪಿ ಶ್ರೀವಾಸ್ತವರವರು ಒಂದು ದೊಡ್ಡ ಕೋಲಾಹಲವನ್ನುಂಟುಮಾಡಿದರು. ಪ್ರಜಾ ಬೆಂಬಲವುಳ್ಳ ಒಂದು ರಾಷ್ಟ್ರೀಯ ಸರ್ಕಾರವು ಮಾತ್ರ ಯುದ್ಧಾನಂತರದ ಪುನರ್ರಚನೆ ಸಮಸ್ಯೆಗಳನ್ನು ಬಗೆಹರಿಸಬಲ್ಲುದು ಎಂದು ಅವರು ಸ್ಪಷ್ಟವಾಗಿ ಹೇಳಿದರು. ಇದುವರೆಗೆ ಪುನರ್ರಚನಾ ವಿಭಾಗದ ಮಂತ್ರಿಗಳಾಗಿದ್ದ ಇವರಿಂದ ಬಂದ ಈ ಅಭಿಪ್ರಾಯವು ಹಲವು ಸದಸ್ಯರಿಗೆ ವಿಸ್ಮಯವನ್ನೂ ಇತರರಿಗೆ ಚಿಂತೆಯನ್ನೂ ಉಂಟುಮಾಡಿತು. ಆಹಾರದ ಬೆಲೆಯು ಉತ್ಪತ್ತಿಯ ವೆಚ್ಚಕ್ಕೆ ಅನುಗುಣವಾಗಿರಕೂಡದು; ದೇಶದ ಅತ್ಯಂತ ದರಿದ್ರನಾದ ಪ್ರಜೆಯೂ ಕೊಳ್ಳಲು ಅನುಕೂಲವಾಗಿರಬೇಕು ಎಂದೂ ಸಹ ಅವರು ತಿಳಿಸಿದರು.

ಒರಿಸ್ಸಾದಲ್ಲಿ ನಿರಂಕುಶ ಅಧಿಕಾರ?

ಯಾವ ರಾಜಕೀಯ ಪಂಗಡಕ್ಕೂ ಸರಿಯಾದ ಬಹುಮತದ ಬೆಂಬಲವಿಲ್ಲದೆ, ಸ್ಥಿರವಾದ ಮಂತ್ರಿಮಂಡಲವನ್ನು ರಚಿಸಲು ಸಾಧ್ಯವಿಲ್ಲದಿರುವುದರಿಂದ ಒರಿಸ್ಸಾ ಪ್ರಾಂತ್ಯದಲ್ಲಿ ೯೩ನೇ ಕಲಮಿನ ಪ್ರಕಾರ ಗವರ್ನರರ ಆಡಳಿತವೇ ಜಾರಿಗೆ ಬರಬಹುದೆಂದು ನಂಬಲಾಗಿದೆ. ಗವರ್ನರರ ಸಲಹೆಗಾರರನ್ನು ನೇಮಿಸುವ ಪ್ರಯತ್ನಗಳೂ ಆಗುತ್ತಿರುವುದಾಗಿ ವರದಿಯಾಗಿದೆ.

ಬಂಧಿತರ ಚಿತ್ರಗಳನ್ನು ಪ್ರದರ್ಶಿಸಕೂಡದು

ಮದರಾಸ್ ಸ್ಥಳೀಯ ಸಂಸ್ಥೆಗಳ ಕಟ್ಟಡಗಳಲ್ಲಿ ಬಂಧಿತರಾಗಿರುವ ಮುಖಂಡರ ಚಿತ್ರಪಟಗಳನ್ನು ಪ್ರದರ್ಶಿಸಕೂಡದೆಂದು ಅಲ್ಲಿನ ಸರ್ಕಾರ ಆಜ್ಞೆಮಾಡಿದೆ. ಏರಿದರೆ ಕಾಂಗ್ರೆಸ್ ಶಾಸನಭಂಗ ಚಳುವಳಿಗೆ ಸಹಾಯಮಾಡಿದ ಅಪರಾಧಕ್ಕೆ ಗುರಿಯಾಗಬೇಕಾಗುವುದು.

ಆಲೂಗಡ್ಡೆ ಆಮದಿಗೆ ಅಡ್ಡಿ

ಮದರಾಸಿಗೆ ಆಲೂಗೆಡ್ಡೆಯನ್ನು ತರುವವರೆಲ್ಲರೂ ತಮ್ಮಿಂದ ಲಿಖಿತಮೂಲಕ ಅನುಮತಿ ಪಡೆದೇ ಅದನ್ನು ರೈಲಿನಿಂದ ತೆಗೆದುಕೊಳ್ಳಬೇಕೆಂದೂ ತಪ್ಪಿದರೆ ೩ ವರ್ಷ ಸಜಾ ಮತ್ತು ಜುಲ್ಮಾನೆಗೆ ಗುರಿಯಾಗಬೇಕಾಗುವುದೆಂದೂ ಅಲ್ಲಿನ ಕಲೆಕ್ಟರು ಆಜ್ಞೆ ಮಾಡಿದ್ದಾರೆ.

ಗಾಂಧಿ-ವೈಸರಾಯಿ ಭೇಟಿ

ಮಹಾತ್ಮರು ವೈಸರಾಯರಿಗೆ ಬರೆದಿರುವ ಪತ್ರದ ವಿಷಯವನ್ನು ದೆಹಲಿ ರಾಜಕೀಯ ಆವರಣಗಳು ಸ್ವಾಗತಿಸುತ್ತಿವೆ. ವ್ಯಕ್ತಿಕ ಮಾತುಗಳಿಗೆ ವೈಸರಾಯರು ಅವಕಾಶ ಕಲ್ಪಿಸಬಹುದೆಂದು ನಂಬಲಾಗಿದೆ. ಈ ಭೇಟಿಯು ಬೇಗನೆ ಆಗಬಹುದೆಂಬ ನಿರೀಕ್ಷೆಯಿದೆ.

ಶೀಮೆಣ್ಣೆ ಕುಡಿದು ಮರಣ

ಮದರಾಸಿನಲ್ಲಿ ಏನು ವರ್ಷ ವಯಸ್ಸಿನ ರಾಜಾ ಎಂಬ ಹುಡುಗನು ನೀರೆಂದು ತಿಳಿದು ಶೀಮೆಎಣ್ಣೆಯನ್ನು ಕುಡಿದು ಆಸ್ಪತ್ರೆಗೆ ದಾಖಲುಮಾಡಲ್ಪಟ್ಟು ಸ್ವಲ್ಪ ಕಾಲದ ಬಳಿಕ ಮೃತಪಟ್ಟನು.

ಫಿನ್ಲೆಂಡಿಗೆ ಜರ್ಮನಿ ಸಹಾಯ

ರಷ್ಯದ ಮೇಲೆ ಯುದ್ಧವನ್ನು ಮುಂದುವರಿಸಲು ಜರ್ಮನಿಯು ಫಿನ್ಲೆಂಡಿಗೆ ಎಲ್ಲಾ ವಿಧದ ಮಿಲಿಟೆರಿ ಸಹಾಯವನ್ನೂ ಕೊಡುವುದಾಗಿ ಭರವಸೆ ಇತ್ತಿದೆಯೆಂದು ಫಿನ್ಲೆಂಡ್ ಸರ್ಕಾರವು ತಿಳಿಸಿದೆ. ಜರ್ಮನ್ ವಿದೇಶಾಂಗ ಮಂತ್ರಿ ರಿಬ್ಬೆಂಟ್ರಾಪರು ಫಿನ್ಲೆಂಡಿಗೆ ಹೋಗಿ ಇದನ್ನು ಸಂಪೂರ್ಣ ಭರವಸೆ ಇತ್ತು, ಒಪ್ಪಂದವಮಾಡಿಕೊಂಡು ಬಂದಿರುವರು. ಫಿನ್ಲೆಂಡ್ ಸರ್ಕಾರವು ಸ್ವತಂತ್ರ ಕಾರ್ಯಕ್ರಮವನ್ನು ಕೈಗೊಳ್ಳುವುದನ್ನು ತಪ್ಪಿಸಲು ಜರ್ಮನ್ ಸೈನ್ಯಗಳು ಹೆಲ್ಸಿಂಕಿಗೆ ಪ್ರವೇಶಿಸಿವೆಯೆಂದು ಹೇಳಲಾಗಿದೆ.

ಹೊಸ ಜರ್ಮನ್ ವಿಮಾನಗಳು

ಇಂಗ್ಲೆಂಡಿನ ದಕ್ಷಿಣಭಾಗದಲ್ಲಿ ಜರ್ಮನರು ಹೊಸ ಫ್ಲೈಯಿಂಗ್ ಬಾಂಬು ವಿಮಾನಗಳನ್ನು ಉಪಯೋಗಿಸುವರು. ಇವುಗಳಿಂದ ಬಾಂಬುಗಳು ಬಿಡಲು ಸಮಾರು ಒಂದೂವರೆ ನಿಮಿಷಗಳ ಹಿಡಿಯುವುವು. ಈ ಬಾಂಬುಗಳು ತಮ್ಮ ಗುರಿಯನ್ನು ಮುಟ್ಟುವವರೆಲ್ಲಿಯೇ ವಿಕ್ರಮಿನಾನಗಳು ಅವುಗಳನ್ನು ಹೊಡೆದು ಬೀಳಿಸುತ್ತಿವೆ.

ನಾರ್ಮಂಡಿ ಕದನ

ನಾರ್ಮಂಡಿಯಲ್ಲಿ ಚೆರ್ಬೂರ್ಗ್ ಮತ್ತು ಕೇನ್ ರಣರಂಗಗಳಲ್ಲಿ ಹೊಸ ಧಾಳಿಯನ್ನು ಹೂಡಿದ್ದಾರೆ. ಅಲ್ಲಿ ಘೋರ ಕದನವಾಗುತ್ತಿದೆ. ಚೆರ್ಬೂರ್ಗ್ ಪಟ್ಟಣದ ದ್ವೀಪದಲ್ಲಿ ಜರ್ಮನರ ಪ್ರತಿಭಟನೆ ಬಲವಾಗಿದೆ; ಇದೇ ಅಲ್ಲಿನ ವಾಯುವ್ಯಭಾಗದಲ್ಲಿ ಮಿತ್ರರು ಜರ್ಮನರನ್ನು ಓಡಿಸುತ್ತಿದ್ದಾರೆ.

ಓಟಿಂಗ್ ಪೇಪರುಗಳಿರಲಿಲ್ಲ

ಬೆಂಗಳೂರು ಬಸವನಗುಡಿಯಿಂದ ಪೌರಸಭೆಗೆ ನಡೆದ ಚುನಾವಣೆಯು ಜಗ್ಗಿವಾದ ನಡೆಯುತ್ತಿದೆಯಷ್ಟೆ. ಚುನಾವಣೆ ಚೀಟಿಗಳಿರುವ ಪೆಟ್ಟಿಗೆಯನ್ನು ಪರಿಶೀಲನೆಗಾಗಿ ತರುವಂತೆ ಜಡ್ಜಿ ಯವರು ಆಜ್ಞೆ ಮಾಡಿದ್ದರು. ಆದರೆ ತಾಲ್ಲೂಕ್ ಕಚೇರಿಯಿಂದ ತಂದ ಪೆಟ್ಟಿಗೆಯಲ್ಲಿ ಅಲ್ಲಿನ ಓಟಿಂಗ್ ಪೇಪರುಗಳಲ್ಲದೆ ಬೇರೇನೂ ಇದ್ದುದು ಪತ್ತೆಯಾಗಲಿಲ್ಲ. ಇದರಿಂದ ವಿಸ್ಮಯವುಂಟಾಯಿತು. ಆದರಿಂದ ಪೆಟ್ಟಿಗೆ ಕಳೆದು ಹೋಗಿದ್ದಿರಬಹುದೆಂದು ಮುಂದಕ್ಕೆ ಹೋಗಿದೆ.

ಬನರ್ಜಿ ರಾಜೀನಾಮೆ

ಸರಬರಾಜು ಮಾರ್ಗಗಳನ್ನು ಕಡಿಯಬೇಕೆಂದು ಹೋರಾಡುತ್ತಿರುವ ಚೀನಾ ಸೈನ್ಯಗಳು ಪಶ್ಚಿಮಕ್ಕೆ ಹೊರಟು ಮಾಸ್ಕೋ ಎಂಬಲ್ಲಿನ ಮೂರು ಮೈಲಿಯೊಳಗೆ ಬಂದು ಪ್ರದೇಶವನ್ನು ವಶಪಡಿಸಿವೆ. ರಷ್ಯಪಕ್ಕದ ಲುಂಗ್ಲಿಂಗ್ ನಗರದ ಬಳಿ ಭಾರಿ ಕದನವಾಗುತ್ತಿದೆ. ಒಂದು ಸೇತುವೆ ನಾಶವಾಗಿದೆ. ಇನ್ನೊಂದಕ್ಕೆ ಬಹುಪಾಗಿದೆ.

ಯುದ್ಧ ಬೇಗ ಮುಗಿಯುವುದಿಲ್ಲ

ಶತ್ರುವು ಬಹಳ ಬಲವಾಗಿದ್ದಾನೆ. ಆತನನ್ನು ಅಭ್ಯಾಸ ಸೋಲಿಸಲು ಬಹಳಕಾಲ ಬೇಕಾಗುವುದು ಎಂಬುದಾಗಿ ವಿಮಾನಬಲದ ಉಪಕಾರ್ಯದರ್ಶಿಗಳಾದ ಕ್ಯಾಪ್ಟನ್ ಬಾಲ್ಫೋರರವರು ಪಾರ್ಲಿಮೆಂಟಿನಲ್ಲಿ ಹೇಳಿದರು. ಜರ್ಮನಿಯೊಡನೆ ಯುದ್ಧವು ಬೇಗ ಮುಗಿಯಬಹುದೆಂಬ ಕಲ್ಪನೆಗೆ ಅವರ ಉತ್ತರ.

ಗೋಪಾಲರಾಯರಿಗೆ ರಜ

ಸ್ವಂ.ವ.ಪ್ರೋ] ಬೆಂಗಳೂರು ೨೮

ಅರಮನೆಯ ಮಿಲಿಟರಿ ಭಕ್ಷಿ ರಾಜಸೇನಾ ಕಲಶ ಕರ್ನಲ್ ಎಸ್. ಗೋಪಾಲರಾಯರಿಗೆ ಇದೇ ತಿಂಗಳು ೨೬ನೇ ತಾರೀಖಿನಿಂದ ಶ್ರೀಮನ್ಮಹಾರಾಜರವರು ಪೂರ್ತಿ ಸಂಬಳದಮೇಲೆ ೬ ತಿಂಗಳು ರಜ ದಯಪಾಲಿಸಿರುತ್ತಾರೆ. ರಜ ಮುಗಿದಮೇಲೆ ಶ್ರೀ ಗೋಪಾಲರಾಯರು ಸರ್ವಿಸ್ಸಿನಿಂದ ನಿವೃತ್ತರಾಗಲು ಅಪ್ಪಣೆ ಪಡೆದಿರುತ್ತಾರೆ. ಶ್ರೀಮನ್ಮಹಾರಾಜರವರು, ಅವರ ಎ. ಡಿ. ಸಿ. ಗಳಾದ ಕ್ಯಾಪ್ಟನ್ ಡಿ ಮುದ್ದ ಗೋಪಾಲರಾಯರನ್ನು ಮಿಲಿಟರಿ ಭಕ್ಷಿಯನ್ನಾಗಿ ನೇಮಿಸಿ ಅವರಿಗೆ ಲೆಫ್ಟಿನೆಂಟ್ ಕರ್ನಲ್ ಪದವಿಯನ್ನು ದಯಪಾಲಿಸಿರುತ್ತಾರೆ.

ಆಗಮನ-ನಿರ್ಗಮನ

ಮೈಸೂರಿನ ರೆಸಿಡೆಂಟರು ನೀಲಗಿರಿಯಿಂದ ಇಲ್ಲಿಗೆ ಬಂದರು. ರೆಸಿಡೆಂಟರ ಕಾರ್ಯದರ್ಶಿಗಳು, ನಿನ್ನೆ ರಾತ್ರಿ ಮೈಸೂರಿನ ಬಾದಿಗೆ ಪ್ರಯಾಣಮಾಡಿದರು. ದಕ್ಷಿಣ ಭಾರತದ ಆಹಾರ ಕಮೀಷನರಾದ ಡಿ ಸಿ. ಪದ್ಮನಾಭ್ ಪದುಗಾರರವರು ನಿನ್ನೆ ಬೆಂಗಳೂರಿಗೆ ಬಂದಿದ್ದಾರೆ. ನಿನ್ನೆ ಆಹಾರ ದಿವಾನರನ್ನೂ ಸರಬರಾಜು ಪಟವರನ್ನೂ ಭೇಟಿಮಾಡಿದ್ದು ಆಹಾರಶೀತ ಚರ್ಚಿಸಿದರು.

ನ್ಯಾಯವಿಧಾಯಕ ಸಭೆ

ಸ್ವಂ.ಸು.ಪ್ರೋ] ಬೆಂಗಳೂರು ೨೮

ಈ ದಿನ ನ್ಯಾ. ವಿ ಸಭೆಯಲ್ಲಿ ಬೆಂಗಳೂರು ಪೌರಸಭಾಧ್ಯಕ್ಷರ ಚುನಾವಣೆ ಸಂಬಂಧವಾಗಿ ಪ್ರಶ್ನೋತ್ತರಗಳು ನಡೆದುವು.

ಶ್ರೀ ಕೆ. ಎಂ. ಕೃಷ್ಣಪ್ಪಗೌಡ-ಬೆಂಗಳೂರು ಪೌರಸಭೆಗೆ ಶ್ರೀ ಸಿ. ಎ. ನರಸಿಂಗರಾಯರನ್ನು ಅಧ್ಯಕ್ಷರನ್ನಾಗಿ ಆರಿಸಲು ಕಾರಣಗಳೇನು?

ಶ್ರೀ ಗುಂಡಪ್ಪಗೌಡರು-ಅವರು ಬಹಳ ಅನುಭವಶಾಲಿಗಳು.

ಪ್ರ—ಚುನಾವಣೆ ನಡೆಸಿದವರಾರು?

ಉ—ಜಿಲ್ಲಾಧಿಕಾರಿಗಳು.

ಪ್ರ—ಇದಕ್ಕೆ ಹಿಂದೆ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಚುನಾಯಿತರಾದಾಗ ಅವರನ್ನು ಜಿಲ್ಲಾಧಿಕಾರಿಗಳೂ, ಇತರರೂ, ಅಭಿನಂದಿಸಲಿಲ್ಲವೇ?

ಉ—ಇದು ಸರ್ಕಾರಕ್ಕೆ ಗೊತ್ತಿಲ್ಲ.

ಪ್ರ—ಚುನಾವಣಾ ಕರಾರು ಅರ್ಜಿ ಹಾಕಿದಾಗ ಮಾನ್ಯರು ಈ ವಿಚಾರವಾಗಿ ತನಿಖೆಮಾಡಿ ಪರೀಕ್ಷಿಸಲಾಯಿತೆ?

ಉ—ಶ್ರೀಗಳಾದ ಜಯಪುತ್ರರಾಜ ಮೊದಲಾದವರನ್ನು.

ಪ್ರ—ಪ್ರಮಾಣ ಪೂರ್ವಕ ಹೇಳಿಕೆಯನ್ನು ಅವರಿಂದ ಪಡೆದಿರಾ?

ಉ—ಇಲ್ಲ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರ ಅಫಿಡವಿಟ್ ಹೇಳಿಕೆನೋಡಿ ಅದರಂತೆ ತನಿಖೆಮಾಡಲಾಯಿತು.

ಪ್ರ—ಅದರಲ್ಲಿ ಸಿಪಾಯಿ ವಿಚಾರ ಪತ್ರ ಮಾತ್ರಾ ಯಾವ ಮಾರ್ಗ ಅನುಸರಿಸಲಾಯಿತು.

ಉ—ನಾನಾ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲಾಯಿತು.

ಜಿಲ್ಲಾಧಿಕಾರಿಗಳನ್ನು ಪರೀಕ್ಷಿಸಿದಿರಾ?

ಉ—ಇಲ್ಲ. ಅವರು ಪಾದಿಯೊಂದು ಸರ್ಕಾರಕ್ಕೆ ಮಾಮೂಲಾಗಿ ಬಂತು.

ಇದರ ತನಿಖೆಗೆ ಒಂದು ಸಮಿತಿ ಮಾಡಬಾರದಾಗಿತ್ತೆ? ಶ್ರೀ ಎ. ಜಿ. ರಾ.

ಉ—ಸರ್ಕಾರದ ಇಷ್ಟದಂತೆ ಮಾಡಿದೆ.

ಕತ್ತರಿ ಪ್ರಯೋಗ ಬಿದ್ದುಹೋಯಿತು

ಈ ದಿನ ಸರ್ಕಾರಿ ಗ್ರಾಂಟುಗಳ ವಿಚಾರದಲ್ಲಿ ಹೈಕೋರ್ಟಿಗೆ ಕೇವಿಯಟ್ ಶಾಸನ ಸಂಬಂಧವಾಗಿ ಹೆಚ್ಚಿನ ಅಧಿಕಾರ ಕೊಡುವ ವಿಚಾರವಾಗಿ ಒಂದು ಕತ್ತರಿ ಪ್ರಯೋಗ ಬಂದಿತು. ಸರ್ಕಾರದವರು ಅವಶ್ಯವಿಲ್ಲವೆಂದುತ್ತರಕೊಟ್ಟರು. ಅದರ ಪ್ರತ್ಯಕ್ಷವಾಗಿ ವೋಟಿಗೆ ಹಾಕಲ್ಪಟ್ಟಿತು. ೩೯ ರಂತೆ ಪರ, ವಿರೋಧ ವೋಟುಗಳು ಬಂದುವು. ಅಧ್ಯಕ್ಷರು ಸರ್ಕಾರದ ಪರವಾಗಿ ವೋಟು ಕೊಟ್ಟರು. ಕತ್ತರಿ ಪ್ರಯೋಗವು ಬಿದ್ದುಹೋಯಿತು.

ನೂತನ ಸುಧಾರಣೆನಂತರ ನಡೆದ ಸಭೆಯಲ್ಲಿ ಅಧ್ಯಕ್ಷರು ವೋಟು ಕೊಟ್ಟಿದ್ದು ಇದೇ ಮೊದಲು.

ಸಭಾ ಪರಿತ್ಯಾಗ

ನೇಲ್ಯಂತ ವಿಚಾರದಲ್ಲಿ ವೋಟು ಕೊಡುತ್ತಿದ್ದಾಗ, ಮೈಸೂರು ಸದಸ್ಯರು ಶ್ರೀ ಎಂ. ನಾರಾಯಣಯ್ಯನವರು ಎದ್ದುಕಡೆಯಾ ಎದ್ದು, ಸಭೆಯ ಮರ್ಯಾದೆಯನ್ನು ಕಾಯಿ ನಡೆಸಿದರು- ಅಧ್ಯಕ್ಷರು ಗಮನಕ್ಕೆ ತಂದರು. ಅಧ್ಯಕ್ಷರು ವೈಯಕ್ತಿಕ ಕಾರಣಕ್ಕೆ ಶ್ರೀ ನಾರಾಯಣಯ್ಯನವರು ಸಭೆಯಿಂದ ಹೊರಹೋಗಬೇಕೆಂದು ಆಜ್ಞೆ ಇತ್ತರು. ಶ್ರೀ ಪುಟ್ಟಸ್ವಾಮಿ ಯವರೂ ಅವರನ್ನು ಹಿಂಬಾಲಿಸಿದರು.

ಕೌನ್ಸಿಲಿನ ಕಿಡಿಗಳು

ಸ್ಥಂ.ಸು.] ಬೆಂಗಳೂರು ೨೮

ಪ್ರ—ನಾಡ್ಪ ಜಿಲ್ಲೆಗಳಲ್ಲಿ ಕೆರೆಗಳ ಹೂಳನ್ನು ತೆಗೆಸುವ ವಿಷಯದಲ್ಲಿ ಸರ್ಕಾರವು ಏನು ಮಾಡುತ್ತಿದೆ? — ಶ್ರೀ ಗುಂಡಪ್ಪಗೌಡರು.

—ಶ್ರೀ ಗುಂಡಪ್ಪಗೌಡರು

—ಶ್ರೀ ಮುಖ್ಯ ನ್ಯಾಯಾಧೀಶರು.

—ಶ್ರೀ ಗುಂಡಪ್ಪಗೌಡರು

—ಹೌ ಮುಖರ ಸೆಕ್ರೆಟರಿ.

ಉ—ಗೊತ್ತಿಲ್ಲ.

—ಶ್ರೀ ವಿ. ಎಸ್. ಮಲ್ಲಪ್ಪ

—ಶ್ರೀ ಬಾಲಕೃಷ್ಣ

—ಶ್ರೀ ಗಿರಿಮಾಜರಾವ್

ಕೊಟ್ಟಿಲ್ಲ. ... ಸರ್ಕಾರದ ಅಧಿಕಾರವಿಲ್ಲವೆನ್ನು ... ಶ್ರೀ ಭದ್ರಪ್ಪನಾಯಕ್

—ಶ್ರೀ ಜಯಮುತ್ತುರಾಜು

—ಶ್ರೀ ಗಿರಿಮಾಜರಾವ್

—ಡಾ|| ಕರ್ನಲ್ ಎಂ. ರಾಜೇಂದ್ರ

ಹೊಸ ಮಾದರಿ ಬೆಂಕಿಕಡ್ಡಿ

ನೀರಿನಲ್ಲಿ ಮುಳುಗಿಸಿದರೂ ಹತ್ತುವ ಹೊಸ ಬೆಂಕಿಕಡ್ಡಿಯನ್ನು ಅಮೆರಿಕದಲ್ಲಿ ಕಂಡುಹಿಡಿಯಲಾಗಿದೆ. ಎಲ್ಲಾ ಹವಗಳಲ್ಲಿಯೂ ಇದು ಹತ್ತುತ್ತದೆ. ಇದುವರೆಗೆ ತಯಾರಾಗುತ್ತಿದ್ದ ಕಡ್ಡಿಗಳಿಗಿಂತ ಇದು ಹೆಚ್ಚುಹೊತ್ತು ನೀರಿನಲ್ಲಿ ಮುಳುಗಿಸಿದರೂ ಈ ಕಡ್ಡಿಯನ್ನು ಉಪಯೋಗಿಸಿ ಬೆಂಕಿಹಚ್ಚಬಹುದು.

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಚಳಿಜ್ವರದ ಗಡ್ಡೆ, ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.

ಆಯುರ್ವೇದ ವೈದ್ಯಭೂಷಣ ಪಂಡಿತ

ಕೆ. ವಿ. ವೆಂಕಟರಾಮಯ್ಯ,

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ,

ಅರಕಲವಾಡಿ (ಚಾಮರಾಜನಗರ ತಾ||)

Edited, printed and published by A. R. Nagarajan, at the Sadhvi Press, D. Subbiah Road, Mysore

೪ ಲಕ್ಷ ಮೈಸೂರಿನವರಲ್ಲ

ಮೈಸೂರಿನಲ್ಲಿ ಕಳೆದ ಸೆನ್ಸಸ್ ಪ್ರಕಾರ 3,99,720 ಜನ ಮೈಸೂರಿನವರಲ್ಲದವರಿದ್ದಾರೆ ... ಶ್ರೀ ಕೆ. ಸುಬ್ಬರಾಯರು ಹೇಳಿದರು.

ಬೆರಳ ಸಂಪರ್ಕ ತರಿಗೆಯಿಲ್ಲ

ಅಖಿಲ ಭಾರತ ನೂಲುವವರ ಸಂಘದವರು ... ತೆರಿಗೆ ಕೊಡಬೇಕೆಂದು ಸರ್ಕಾರದವರು ... ಈ ವಿಷಯದಲ್ಲಿ ... ಶ್ರೀ ... ದರಿಂದ ... ತೀರ್ಮಾನವಾಗಿದೆ.

ಮೈಸೂರು ಸೀಮೆಯ ಸಿಲ್ಕ್ ಕಂಟ್ರೋಲರ್ ಆಫೀಸಿನಿಂದ

ಬೆಂಗಳೂರು ಸಿಟಿ.

ತಾ|| 26—6—1944

ಮೈಸೂರು ರೇಷ್ಮೆ ಹತೋಟಿ ಹುಕುಂ 1943

ಇದರಿಂದ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ:—

1. ಮೈಸೂರು ರೇಷ್ಮೆ ಹತೋಟಿ ಹುಕುಂ 1943 ರ ಪ್ರಕಾರ 21-4-44 ಮತ್ತು 8-5-44 ನೇ ಪ್ರಯ್ಯಂ ಗಳ ಡಿ.6680—ಸಂ.188—43-3 ಮತ್ತು ಡಿ.7120—ಸಂ.188—43-3 ನೇ ನಂಬರಿನ ... ರೇಷ್ಮೆ ... 30-6-44 ನೇ ತಾರೀಖಿನ ... 15-7-44 ರ ...

ಹೆಚ್. ಎಸ್. ಗೋವಿಂದರಾವ್,

ಸಿಲ್ಕ್ ಕಂಟ್ರೋಲರ್.

ಶ್ರೀ ಯರ್ರ ಸೌ ಕರ್ಯ ಕ್ಕೆ

ತಾ|| ... ಹೊಸದಾಗಿ ... ಮಾಡುವ ವ್ಯವಸ್ಥೆ ಮಾಡಲಾಗಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಶ್ರೀ ಶ್ರೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ

ಡಿ. ಪುಟ್ಟಯ್ಯ, ದಿನಸಿ ಅಂಗಡಿ, ದೇವರಾಜ ಮಾರ್ಕೆಟ್, ಮೈಸೂರು

ಎಲ್ಲಾ ಜಾತಿ ಸಾಂಬಾರ ಪದಾರ್ಥಗಳು, ... ವ್ಯಾಪಾರಸ್ಥರಿಗೆ ... ಕೊಡಲ್ಪಡುತ್ತದೆ.

ಫ್ಯಾನ್ಸಿ ಬಳೆಗಳು

ಹೊಸ ನಮೂನೆಯ ಬಳೆಗಳು ಈಗತಾನೇ ಬಂದಿವೆ!

ಫ್ಯಾನ್ಸಿ ಸರಗಳು

ಫ್ಯಾನ್ಸಿ ಲೋಲಾಕುಗಳು

ಕೆಮಿಕಲ್ ವಂತದ ಬಳೆಗಳು

ದೇವರಾಜ ಮಾರ್ಕೆಟ್. **ಸೌಭಾಗ್ಯ ಸ್ಟೋರ್ಸ್** ಮೈಸೂರು.

ಸಂಪುಟ ೨] ಶುಕ್ರವಾರ ೩೦--೬--೪೪ [ಸಂಚಿಕೆ ೫೮೮

ಪುನಃ ಬಂಧಿಸುವಂತೆ ಗಾಂಧಿಜಿ ಕೇಳುವರೆ?

ಬಿಕ್ಕಟ್ಟು ಪರಿಹಾರಕ್ಕೆ ಮತ್ತೆ ಸ್ಟಾಫರ್ಡ್ ಕ್ರಿಪ್ಸರ ಪ್ರವೇಶ

ಪುನಃ ಬಂಧಿಸಲು ಗಾಂಧೀಜಿ ಮೊರೆ?

ಬಿಕ್ಕಟ್ಟನ್ನು ಪರಿಹರಿಸುವ ವಿಷಯದಲ್ಲಿ ಏನನ್ನೂ ಮಾಡಲು ಅವಕಾಶವಿಲ್ಲದಿದ್ದರೆ ತಾವೊಬ್ಬ ಸ್ವತಂತ್ರ ವ್ಯಕ್ತಿಯಾಗಿರಲು ಸಾಧ್ಯವಿಲ್ಲವಾದುದರಿಂದ ತಮ್ಮನ್ನು ಪುನಃ ಬಂಧನದಲ್ಲಿಡುವಂತೆ ಮಹಾತ್ಮರು ವೈಸರಾಯರಿಗೆ ಬರೆಯಬೇಕೆಂದಿರುವುದಾಗಿ ಸ್ನೇಹಿತರಿಗೆ ತಿಳಿಸಿದರೆಂದು ವರದಿಯಾಗಿದೆ. ಆದರೆ ಅಂತಹ ಕೆಲಸ ಮಾಡದಂತೆ ಸ್ನೇಹಿತರೂ ಮುಖ್ಯವಾಗಿ ಸಿ. ರಾಜಗೋಪಾಲಾಚಾರಿಯವರೂ ಸೂಚಿಸಿರುವರು. ಪುನಃ ಕೇಳಬೇಕಾದ ಕಾರಣವು ವೈಸರಾಯರ ಉತ್ತರದಿಂದ ಹೊಸದಾಗಿ ಉದ್ಭವಿಸಿಲ್ಲವೆಂದು ರಾಜಾಜಿಯವರು ಅಭಿಪ್ರಾಯಪಟ್ಟಿದ್ದಾರೆ. ಬೇರೆ ಮಾರ್ಗಗಳನ್ನು ಹುಡುಕಬೇಕೆಂದು ಅವರು ತಿಳಿಸಿದ್ದಾರೆ. ಮುಂದಿನ ಮಾರ್ಗದ ವಿಷಯವಾಗಿ ಕೆಲವು ಆಪ್ತ ಮಿತ್ರರೊಡನೆ ಗಾಂಧೀಜಿ ಮಾತನಾಡುತ್ತಿದ್ದಾರೆ. ಅನಂತರ ಒಂದು ಹೇಳಿಕೆ ಕೊಡುವರು.

ಗಾಂಧೀಜಿ ಉಪವಾಸಕ್ಕಾಗಿ ಕಲೆಕ್ಟರ ರಾಜೀನಾಮೆ

ಕಳೆದ ವರ್ಷ ಮಹಾತ್ಮರು ಉಪವಾಸ ಮಾಡಿದಾಗ ಧೈರ್ಯಗುಂದಿ ಕೆಲಸದಿಂದ ನಿವೃತ್ತರಾಗುವುದಾಗಿಯೂ ಈ ಸರ್ಕಾರದ ಸೇವೆಯನ್ನು ಮಾಡಲು ತಮಗೆ ಇಷ್ಟವಿಲ್ಲವೆಂದೂ ಆರ್. ಎ. ದೇ ಎಂಬ ಸಂಯುಕ್ತ ಪ್ರಾಂತದ ಕಲೆಕ್ಟರು ಮೇಲಧಿಕಾರಿಗಳಿಗೆ ತಿಳಿಸಿದ್ದರು. ಬಾಮಾಷಾ ಪ್ರಕಾರ ಪೆನ್ಷನ್ ಪಡೆದು ನಿವೃತ್ತರಾಗಬಹುದೆಂದು ಅವರಿಗೆ ತಿಳಿಸಲಾಗಿತ್ತು. ಅವರು ಅದಕ್ಕೆ ಒಪ್ಪಲಿಲ್ಲ. ಇಂಡಿಯಾ ಸರ್ಕಾರದವರು ಸದ್ಯದಲ್ಲೇ ತೀರ್ಮಾನಿಸುವರು. ಆಗಸ್ಟ್ ಗಲಭೆಗಳ ಕಾಲದಿಂದ ನಿವೃತ್ತರಾದ ಅಧಿಕಾರಿಗಳಲ್ಲಿ ಇವರು ಆರನೆಯವರು.

ವೈಸರಾಯರ ಉತ್ತರ ಸಹಕಾರಿಯಾಗಿಲ್ಲ

ಕಾಂಗ್ರೆಸ್ ಮುಖಂಡರ ಭೇಟಿಗಾಗಲಿ ಅಥವಾ ಅದರ ಬಗ್ಗೆ ಸಮರ್ಥನೆ ಮಾಡಲು ವೈಸರಾಯರ ಭೇಟಿಗಾಗಲೀ ಅವಕಾಶ ಕೊಡಬೇಕೆಂದು ಗಾಂಧೀಜಿಯವರು ಬರೆದಿದ್ದುದಕ್ಕೆ ವೈಸರಾಯರಿಂದ ಸಮರ್ಪಕವಾದ ಉತ್ತರ ಬಂದಿಲ್ಲವೆಂದು ಹೇಳಲಾಗಿದೆ. ಮಹಾತ್ಮರು ಕಾರ್ಯನೀತಿಯನ್ನು ಬದಲಾಯಿಸುವುದಿಲ್ಲವೆಂದು ಹೇಳಿದುದೇ ಇದಕ್ಕೆ ಕಾರಣವೆಂದು ಭಾವಿಸಲಾಗಿದೆ. ಈ ಬಗ್ಗೆ ಮಹಾತ್ಮರು ವೈಸರಾಯರಿಗೆ ಬರೆದ ಪತ್ರಗಳನ್ನು ಪ್ರಕಟಿಸಲು ಗಾಂಧೀಜಿಯವರ ಅನುಮತಿ ಕೇಳಿದ್ದಾರೆ. ಶೀಘ್ರದಲ್ಲೇ ಗಾಂಧೀಜಿಯವರು ಒಂದು ಹೇಳಿಕೆ ಕೊಡಲಿರುವರು.

ಶ್ರೀ ಲಿಂಗೇಗೌಡರ ಟೀ ಪಾರ್ಟಿ

ನಿನ್ನೆ ಸಂಜೆ ನ್ಯಾಯವಿಧಾಯಕ ಸಭೆ ಉಪಾಧ್ಯಕ್ಷರಾದ ಶ್ರೀ ಎಂ. ಬಿ. ಲಿಂಗೇಗೌಡರು ನ್ಯಾಯವಿಧಾಯಕ ಸಭಾ ಭವನದಲ್ಲಿ ಒಂದು ಸತ್ಕಾರವನ್ನೇರ್ಪಡಿಸಿದ್ದರು. ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದವರು ಬಂದಿರಲಿಲ್ಲ. ದಿವಾನರು, ಸಚಿವರುಗಳು, ನ್ಯಾಯವಿಧಾಯಕ ಸಭಾಧ್ಯಕ್ಷರು ಹಲವು ನ್ಯಾಯವಿಧಾಯಕ ಸಭಾಸದಸ್ಯರು ಭಾಗವಹಿಸಿದ್ದರು. ಉಪಾಹಾರವಾದ ಮೇಲೆ ಶ್ರೀ ಲಿಂಗೇಗೌಡರು ವಿನಾವರಿಗೆ ಹಾರ ಹಾಕಿದರು.

ವಿಚಿತ್ರ ಘಟನೆ

ಮೈಸೂರು ೩೦

ಶ್ರೀ ಟಿ. ಎಸ್. ರಾಜಗೋಪಾಲ್‌ರವರು ಹೀಗೆ ಬರೆಯುತ್ತಾರೆ:—

'ಸೌದೆ, ಇದ್ದಿಲು ಸರಬರಾಜು ವಿಷಯದಲ್ಲಿ ಅಧ್ಯಕ್ಷರು ಮಾಡಿರುವುದನ್ನೆಲ್ಲಾ ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸುವಂತೆ ಮೈಸೂರು ಪೌರಸಭೆಯ ಕಾಂಗ್ರೆಸ್ ಕೌನ್ಸಿಲರುಗಳು ತೀರ್ಮಾನಿಸಿರುವುದು ಆಶ್ಚರ್ಯಕರವಾಗಿದೆ. ಕಳೆದ ಎರಡು ವರ್ಷಗಳಿಂದ ಅವರು ಅಸಂಬದ್ಧವಾದ ನಿರ್ಣಯಗಳನ್ನು ಮಾಡುತ್ತಿದ್ದಾರೆ ಮತ್ತೇನೂ ಮಾಡಿಲ್ಲ. ಇದು ಅವರ ಮಾಮೂಲು ಪದ್ಧತಿ. ಇದರಿಂದ ಪ್ರಯೋಜನವಿಲ್ಲವೆಂದು ಮಹಾಜನರು ಅರಿತಿದ್ದಾರೆ. ಅವರು ಮಾಡುವ ಒಳ್ಳೇ ಕೆಲಸಗಳಿಗೆಲ್ಲ ಪೌರಸಭೆಯನ್ನು ವಂದಿಸೋಣ. ಸೌದೆ, ಇದ್ದಿಲು ನಿಜವಾಗಿಯೂ ಈಗ ಅಗ್ಗವಾಗಿ ಸಿಗುತ್ತಿದೆ. ನಾವೆಲ್ಲರೂ ಸಹಕರಿಸಿ ಇನ್ನೂ ಹೆಚ್ಚು ಸೌಕರ್ಯಗಳನ್ನು ಪಡೆಯೋಣ.'

ಭಾರತ ಧರ್ಮಸಭಾ

ಈ ಸಭೆಯ ಆಶ್ರಯದಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ತತ್ವಶಾಸ್ತ್ರದ ಮುಖ್ಯೋಪಾಧ್ಯಾಯರಾದ ಡಾ॥ ಪಿ. ಎ. ಪುರುಷೋತ್ತಮ್, ಅವರು "ಇಂದಿನ ಪ್ರಪಂಚದಲ್ಲಿ ಹಿಂದುಗಳ ಕರ್ತವ್ಯ" ಎಂಬ ವಿಷಯವಾಗಿ ತಾ॥ ೩-೭-೪೪ ರ ಸಂಜೆ ೭ ಗಂಟೆಗೆ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಉಪನ್ಯಾಸ ಮಾಡುತ್ತಾರೆ. ಎಲ್ಲರಿಗೂ ಆಹ್ವಾನವುಂಟು.

ರೇಷ್ಮೆ ಸಾಗಿಸಿದುದು

ನಿನ್ನೆ ಬೆಳಗ್ಗೆ ರೈಲ್ವೆ ಕ್ಯಾರೇಜ್ ಕ್ಲಾರ್ಕ್ ಶ್ರೀ ಗಣೇಶ ಪ್ರಸಾದ್ ಎಂಬುವರು ಮೈಸೂರಿನಿಂದ ಹಾಸನಕ್ಕೆ ಟ್ರಂಕಿನಲ್ಲಿ ಸುಮಾರು ೨೦ ಪೌಂಡ್ ರೇಷ್ಮೆಯನ್ನು ಸಾಗಿಸುತ್ತಿದ್ದುದನ್ನು ಇದರ ಪತ್ತೇದಾರಿ ಕೆಲಸದಲ್ಲಿ ವಿಶೇಷ ಅನುಭವಿಗಳಾದ ದಫೇದಾರ್ ಶ್ರೀ ರಾಮಕೃಷ್ಣಯ್ಯ, ಕಾನ್‌ಸ್ಟೇಬಲ್ ಶ್ರೀ ಸುಬ್ಬಯ್ಯರವರು ಪತ್ತೆಮಾಡಿ ಹಿಡಿದಿದ್ದಾರೆ.

ಒರಿಸ್ಸಾಕ್ಕೆ ಗೌರ್ನರ್ ಆಡಳಿತ

ಈ ದಿವಸದಿಂದ ಒರಿಸ್ಸಾ ಪ್ರಾಂತವು ಇಂಡಿಯಾ ಶಾಸನದ ೯೩ನೇ ವಿಧಿಯಂತೆ ಗೌರ್ನರ ನೇರವಾದ ಆಡಳಿತಕ್ಕೆ ಒಳಪಡುವುದು. ಮಂತ್ರಿ ಮಂಡಲವು ಮಾಯವಾಗುವುದು. ಹಿಂದಿನ ಮಂತ್ರಿಮಂಡಲವು ರಾಜೀನಾಮೆ ಇತ್ತಿದೆ.

ಪೌರ ಸಭೆಯಲ್ಲಿ

ಮೈಸೂರು ೩೦

ಈ ದಿನ ನಡೆದ ಪೌರಸಭೆಯ ಮೀಟಿಂಗಿನಲ್ಲಿ ಟ್ರಸ್ಟ್ ಬೋರ್ಡ್ ಮೀಟಿಂಗಿನ ಕಾರ್ಯ ಕಲಾಪಗಳು ಬಿಚಾರಣೆಗೆ ಬಂದಾಗ ಶ್ರೀ ವೆಂಕಟರಮಣಯ್ಯನವರು ಒಂದು ನಿರ್ಣಯವನ್ನು ಸೂಚಿಸಿ ಟ್ರಸ್ಟ್ ಬೋರ್ಡ್ ಕಾರ್ಯಕ್ರಮದಲ್ಲಿ ಅಧ್ಯಕ್ಷರು ಸ್ವಂತ ಆಸಕ್ತಿ ಉಳ್ಳವರಾದ್ದರಿಂದ ಆ ಸಭೆಯಲ್ಲಿ ನಡೆದ ಕಾರ್ಯಕಲಾಪಗಳು ಅಕ್ರಮವೆಂದು ಸರ್ಕಾರಕ್ಕೆ ತಿಳಿಸುವಂತೆ ಹೇಳಿದರು.

ಇದರ ಚರ್ಚೆಗೆ ಅವಕಾಶಕೊಡುವುದಿಲ್ಲವೆಂದು ಅಧ್ಯಕ್ಷರು ಹೇಳಿದರು.

ಇದರ ಮೇಲೆ ಬಹಳ ಬಿಸಿ ಬಿಸಿ ಚರ್ಚೆ ಆಯಿತು. ಚರ್ಚೆಗೆ ಅವಕಾಶ ಕೊಡದಿದ್ದುದಕ್ಕಾಗಿ ಸಭೆಯು ಖಂಡನೆಯನ್ನು ಸೂಚಿಸಲು ಮೀಟಿಂಗನ್ನು ಮುಂದಕ್ಕೆ ಹಾಕಬೇಕೆಂದು ಶ್ರೀ ಟಿ. ವೆಂಕಟರಮಣಯ್ಯನವರು ಠರಾವು ತಂದರು. ಶ್ರೀ ಪಿ. ಸೀತಾರಾಮಯ್ಯನವರು ಅನುಮೋದಿಸಿದರು.

ಸಭೆಯನ್ನು ಮುಂದುವರಿಸುವ ನಿರ್ಣಯವು ಬಹುಮತದಿಂದ ಮಂಜೂರಾಗಿ ಸಭೆಯು ಅಲ್ಲಿಗೇ ಮುಕ್ತಾಯವಾಯಿತು.

ರೈಲ್ವೆ ಅಧಿಕಾರಿಗಳು

ಸ್ವಂ.ಸು.ಪ್ರೋ] ಬೆಂಗಳೂರು ೩೦

ಈ ಮೊದಲೇ ತಿಳಿಸಿದ್ದಂತೆ ಶ್ರೀ ಹೆಚ್. ರಂಗಾಚಾರ್ಯರನ್ನು ಜುಲೈ ೧ ರಿಂದ ರೈಲ್ವೆ ಜನರಲ್ ಮ್ಯಾನೇಜರನ್ನಾಗಿ ಮಾಡಲಾಗಿದೆ. ಶ್ರೀ ಆರ್. ಎ. ಮಿರ್ಜಾರವರಿಗೆ ೧ ರಿಂದ ೩ ತಿಂಗಳು ಮತ್ತು ೫ ದಿನಗಳ ರಜ ಮಂಜೂರಾಗಿದೆ (ಸರ್ವೀಸಿನಿಂದ ನಿವೃತ್ತರಾಗುವುದಕ್ಕೆ ಪೂರ್ವಭಾವಿಯಾಗಿ). ಶ್ರೀ ಇನಾಯತ್ ಹುಸೇನರನ್ನು ಟ್ರಾಫಿಕ್ ಮ್ಯಾನೇಜರನ್ನಾಗಿ ನಿಯಮಿಸಿದೆ.

ರೈಲ್ವೆ ಟ್ರಾಫಿಕ್ ಪುನರ್ವ್ಯವಸ್ಥೆ

ರೈಲ್ವೆಯ ಟ್ರಾಫಿಕ್ ಭಾಗವನ್ನು ಪುನರ್ವ್ಯವಸ್ಥೆ ಮಾಡಲು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ಗೊತ್ತಾಗಿದೆ.

ಸರ್ಕಾರಿ ಸುದ್ದಿ

ಅಸಿಸ್ಟೆಂಟ್ ಕಮೀಷನರಿಂದ ಶ್ರೀ ಛ ಜಾರವನ್ನು ಸ್ಪೆಷಲ್ ಇಂಜನಿಯರ್ ಆಗಿ ನೇಮಿಸಲಾಗಿದೆ. ಮಂಡ್ಯದ ಪೌರಸಭೆಗೆ ಹೊಸ ಡಿ. ಜಿ. ಜಾರ್ಜ್ ಸಿ॥ ವಿಲಿಯ ಸಾರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ.

ಪುನಃ ಕ್ರಿಪ್ಸ್ ಪ್ರವೇಶ?

ಹಿಂದೂಸ್ಥಾನದ ರಾಜಕೀಯ ಬಿಕ್ಕಟ್ಟಿನ ವಿಷಯದಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ್ ಪುನಃ ಪ್ರವೇಶಿಸಬಹುದೆಂದು ಲಂಡನ್ನಿನಲ್ಲಿ ಹೇಳಲಾಗಿದೆ. ಗಾಂಧೀಜಿ, ನೆಹರು, ಆಜಾದ್, ಪಟೇಲ್ ಇವರುಗಳಲ್ಲಿ ಮೊದಲು ಸಮಾಲೋಚನೆ ನಡೆದು ಅನಂತರ ಗಾಂಧೀಜಿ ಮತ್ತು ವೇವೆಲ್ಲರಿಗೆ ಮಾತುಕತೆಗಳಾಗುವುವೆಂದು ನಂಬಲಾಗಿದೆ.

ಜರ್ಮನಿಗೆ ಎಣ್ಣೆ ಕಮ್ಮಿ

ಮಿತ್ರ ಬಾಂಬುಗಳ ಪರಿಣಾಮವಾಗಿ ಜರ್ಮನಿಯ ಎಣ್ಣೆ ತಯಾರಿಕೆಯು ಅದರ ಅವಶ್ಯಕತೆಯಲ್ಲಿ ಮೂರನೇ ಒಂದು ಭಾಗಕ್ಕೆ ಇಳಿದಿದೆಯೆಂದು ತಿಳಿದುಬಂದಿದೆ.

ಫ್ರಾನ್ಸಿನಲ್ಲಿ ಮಿತ್ರ ನಷ್ಟ

ಐಸನ್‌ಹೋವರ್ ಪ್ರಕಟನೆ: ಜೂನ್ ೬ ರಿಂದ ೨೦ ರವರೆಗೆ ಫ್ರಾನ್ಸಿನಲ್ಲಿ ೨೪,೧೬೦ ಜನ ಅಮೆರಿಕನರಿಗೂ ೧೩,೫೭೨ ಜನ ಬ್ರಿಟಿಷರಿಗೂ ೨,೮೧೫ ಜನ ಕೆನೇಡಿಯನರಿಗೂ ನಷ್ಟ ನೋವುಗಳಾಗಿವೆ.

ಜರ್ಮನರ ಕಡೆಯಾದರೋ ೬೦,೦೦೦ ಜನ ಜನರಲ್‌ಗಳೂ ನಷ್ಟವಾಗಿರುವರು. ಈಚೆಗೆ ಈ ಸಂಖ್ಯೆ ಇನ್ನೂ ಹೆಚ್ಚಾಗಿರಬೇಕು.

ನ್ಯಾಯವಿಧಾಯಕ ಸಭೆ

ಸ್ವಂ.ಸು.ಪ್ರೋ] ಬೆಂಗಳೂರು ೩೦

ನ್ಯಾ॥ ಇಲಾಖಾ ಗುಮಾಸ್ತರ ಸಂಬಳ ಹೆಚ್ಚುವುದು?

ನ್ಯಾ. ವಿ. ಸಭೆಯಲ್ಲಿ, ನ್ಯಾಯ ಇಲಾಖೆಯ ಗುಮಾಸ್ತ ವರ್ಗದ ಸಂಬಳವನ್ನು ಪುನರ್ವ್ಯವಸ್ಥೆ ಮಾಡಬೇಕೆಂದು ಶ್ರೀ॥ ಎಸ್. ನಾರಾಯಣರಾಯರು ನ್ಯಾಯಸ್ಥಾನಗಳ ಗುಮಾಸ್ತರ ಬಗ್ಗೆ ಒಂದು ಕರಾರು ನಿರ್ಣಯವನ್ನು ತರಲು, ನ್ಯಾಯಾಂಗ ಕಾರ್ಯದರ್ಶಿಗಳು, ವಿಚಾರ ಹೈಕೋರ್ಟಿನ ಆಲೋಚನೆಯಲ್ಲಿದೆ, ಮಾಡುತ್ತೇವೆ, ಎಂದು ಭರವಸೆ ಕೊಟ್ಟದ್ದನ್ನು ಕೇಳಿ, ಶ್ರೀ॥ ನಾರಾಯಣರಾಯರು ನಿರ್ಣಯವನ್ನು ವಾಪಸು ತೆಗೆದುಕೊಂಡರು.

ಹೈಕೋರ್ಟ್ ಜಡ್ಜಿಗಳ ಸ್ಥಾನ, ಜಿಲ್ಲಾ ಜಡ್ಜಿಗಳ ಸ್ಥಾನ, ಸಬಾರ್ಡಿನೇಟ್ ಜಡ್ಜಿಗಳ ಸ್ಥಾನ, ಇವುಗಳಲ್ಲಿ ಶೇಕಡ ೫೦ ರಷ್ಟನ್ನು ವಕೀಲ ವರ್ಗದಿಂದ ಭರ್ತಿ ಮಾಡಬೇಕೆಂದು ಶ್ರೀ॥ ಎಂ. ಪಿ. ಸೋಮಶೇಖರರಾಯರು ಕರಡು ನಿರ್ಣಯ ತಂದರು.

ನ್ಯಾಯಾಂಗ ಸಚಿವರು, "ಈಗಾಗಲೇ ಕೆಳ ದರ್ಜೆ ಅಧಿಕಾರಿಗಳ ಸ್ಥಾನಗಳನ್ನು, ಅಂದರೆ, ಮುನ್ಸೀಫರುಗಳನ್ನು, ನುರಿತ ಲಾಯರುಗಳಿಂದಲೇ ಆರಿಸಲಾಗುತ್ತಿದೆ. ಹೈಕೋರ್ಟಿನ ಜಡ್ಜಿಗಳ ಸ್ಥಾನಗಳಿಗೂ ಮತ್ತು ಜಿಲ್ಲಾ ಜಡ್ಜಿಗಳ ಸ್ಥಾನಗಳಿಗೂ ಆಗಿಂದಾಗ್ಗೆ ವಕೀಲ ವರ್ಗದವರನ್ನೇ ತೆಗೆದುಕೊಳ್ಳುತ್ತಿದ್ದೇವೆ. ಒಟ್ಟಿನಲ್ಲಿ ನಿರ್ಣಯದ ತತ್ವವನ್ನು ಸರ್ಕಾರ ಅಂಗೀಕರಿಸಿದೆ" ಎನ್ನಲು ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ರೇಷ್ಮೆ ಲೈಸೆನ್ಸ್ ರದ್ದು

ಬೆಂಗಳೂರಿನ ಸ್ಪಿನ್ನರ್ ಒಬ್ಬರಿಗೆ ಕೊಟ್ಟಿದ್ದ ೧೦೨ನೇ ನಂಬರಿನ ರೇಷ್ಮೆ ಲೈಸೆನ್ಸನ್ನು ಒಂದು ವರ್ಷ ರದ್ದು ಮಾಡಲಾಗಿದೆ.

ಬೆಂಗಳೂರಿನ ಶ್ರೀ ಡಿ. ... ಅವರ ಲೈಸೆನ್ಸನ್ನು ... ತಿಂಗಳು ರದ್ದು ಮಾಡಲಾಗಿದೆ.

ಕೌನ್ಸಿಲಿನ ಕಿಡಿಗಳು

ಸ್ವಂ. ವ.] ಬೆಂಗಳೂರು ೨೯

[illegible] ಶಿವಪುರ ... ಪ್ರ ... ಅದೇ ಆಗಿದೆ. ... ಕೆಲವರ ... ಶ್ರೀ ... ಕಾರಣ ... ಎಂದು ... ಶ್ರೀ ... ನಿಜವಾಗಿ ...

... ವಿಷಯ ... ಸದಸ್ಯರನ್ನು ... ಸಾಮಾನ್ಯ ... ಪ್ರಜಾ ... ಇವರಾ

... ನಮ್ಮ ... ಸಭೆಗಳ ... ಸರ್ಕಾರ ... ಬೇಗ ... ಶ್ರೀ ನಾರಾಯಣರಾವ್

... ಈ ಸಭೆಗೆ ... ಇದಕ್ಕೆ ... ಜೀವನ ... —ಶ್ರೀ ಎ ಜಿ ರಾ ರಾವ್

... ಬೆಂಗಳೂರು ... ಪ್ರಭುತ್ವ ... ಪ್ರಶ್ನೆ ... —ಶ್ರೀ ಮಹದೇವಯ್ಯ

೧೮೮ ಸ್ಥಳೀಯ ಕಾರ್ಯಗಳಲ್ಲಿ ನಾವು ಸರ್ಕಾರ ... ಒಂದೇ, ಬೇಕಾಯಿತ, ಸದಸ್ಯರೂ ಒಂದೇ ನನಗೆ ಚೆನ್ನಾಗಿ ಅನುಭವವಿದೆ ಡಾ॥ ರಾಯ

೧೮೯ ಮೈಸೂರಿನಲ್ಲಿ ಪಕ್ಷಗಳ ರಾಜಕೀಯವೂ ರಾಜಕೀಯ ಬಣ್ಣವೂ ರಾಷ್ಟ್ರಹಿತಕ್ಕೆ ವಿರುದ್ಧವಾದ ವಾತಾವರಣ ಕಲ್ಪಿಸಿವೆ ಅಲ್ಪ ಸಂಖ್ಯಾತರಿಗೂ ಪ್ರಾತಿನಿಧ್ಯವು ಇರಬೇಕು. ಉದ್ಯೋಗಗಳ ಬುದ್ಧಿಯು ಇರಬೇಕು. ಆದ್ದರಿಂದ ಏರೀ ಚುನಾಯಿತ ಸದಸ್ಯರೇ ಮತ ಕೊಡಬೇಕೆಂಬುದನ್ನು ನಾನು ಒಪ್ಪುವುದಿಲ್ಲ

—ಶ್ರೀ ಗುಂಡಪ್ಪಗೌಡರು

೧೯೦. ನಮ್ಮ ಸರ್ಕಾರದ ರಾಜಕೀಯ ನೀತಿ ಸರಿಯಾಗಿಲ್ಲ. ಇಂಗ್ಲೆಂಡಿನಲ್ಲಿ ಶತ್ರು ... ನಾವು ಬಹಳ ಗಾಬರಿಗೊಂಡಿದ್ದೇವೆ. ... ಆದ್ದರಿಂದ ಮಹಾ ಚುನಾವಣೆಗಳನ್ನು ಮುಂದುವರಿಸಬೇಕು.

—ಶ್ರೀ ಗಿರಿನಾಚಾರ್

೧೯೧. ನೂತನ ರಾಜ್ಯಾಂಗ ಘಟನೆ ಪ್ರಕಾರ ೪ ವರ್ಷಕೊಮ್ಮೆ ಈ ಸಭೆಯ ಅವಧಿ ಮುಗಿಯುವುದರಿಂದ ... ಚುನಾವಣೆ ನಡೆಸಬೇಕು. ... ಬಹು ದಕ್ಷತೆಯಿಂದ ಪ್ರಜಾಸೇವೆ ಮಾಡುತ್ತಿರುವ ಈಗಿನ ಸಚಿವರಿಗೇ ಅಧಿಕಾರ ದೊರೆಯಬೇಕು.

—ಶ್ರೀ ಗಿರಿನಾಚಾರ್.

೧೯೨. ಮೈಸೂರಿನವರಲ್ಲದವರ ವಿಚಾರದಲ್ಲಿ ಅವರ ಉದ್ಯೋಗ ವಗೈರೆಗಳನ್ನು ನನ್ನಗಳಲ್ಲಿ ಕೇಳಿದುಕೊಂಡಿಲ್ಲವೆ?

ಉ—ಇದು ಅನಾವಶ್ಯಕ

ಹೊರಗಿನವರು ಇಲ್ಲಿ ಬಂದು ನೆಲಸುವ ವಿಚಾರದಲ್ಲಿ ಕೆಲವು ನಿಬಂಧನೆಗಳನ್ನು ಹಾಕಬಹುದಲ್ಲವೆ?

ಉ—ಅದು ಆಗುವುದಿಲ್ಲ ಭಾರತವೆಲ್ಲ ಒಂದೇ ದೇಶ—ಎಂದು ನಮ್ಮ ಭಾವನೆ

ಭಟ್ಕಲ್ ರೇವು

ಬೊಂಬಾಯಿನ ಗ್ರಾಮಾಂತರ ಇಲಾಖೆಯ ಅಧಿಕಾರಿ ರಾ॥ ಬ॥ ಮಾಣಿಕ್ಯಲಾಲ್ ಲಲ್ಲೂಭಾಯಿ ಮತ್ತು ಉತ್ತರ ಕೆನರಾ ಜಿಲ್ಲಾ ಕಲೆಕ್ಟರ ಪ್ರಾರ್ಥನೆ ಮೇರೆ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ದೇಶಬಂಧು ರಂಗರಲಿಂಗೇಗೌಡರು ಒಂದು ವರದಿಯನ್ನು ಸಿದ್ಧಗೊಳಿಸಿ ಭಟ್ಕಲ್ ನಲ್ಲಿ ಒಂದು ಉತ್ತಮವಾದ ರೇವನ್ನು ಸ್ಥಾಪಿಸಬೇಕೆಂದು ಸಲಹೆಯಿತ್ತಿರುವರು. ಇಲ್ಲಿ ರೇವನ್ನು ಕಟ್ಟಿದರೆ ಪಾಶ್ಚಿಮಾತ್ಯ ದೇಶದ ಹಡಗುಗಳು ಬೊಂಬಾಯಿಗಿಂತಲೂ ಇಲ್ಲಿಗೆ ೨೪ ಗಂಟೆ ಮುಂಚೆ ಬರುವುವು. ಕರ್ನಾಟಕದ ವ್ಯಾಪಾರವೂ ಬಹಳ ಅಭಿವೃದ್ಧಿಯಾಗುವುದು. ಮದರಾಸ್, ಮಂಗಳೂರು ಮತ್ತು ಮಾರ್ಮಗೋವಾಗಳಿಗಿಂತಲೂ ಭಟ್ಕಲ್ಲು ಉತ್ತಮವಾದ ರೇವಿನ ಸ್ಥಳವೆಂದು ಗೌಡರು ಹೇಳಿದ್ದಾರೆ. ೧೭, ೧೮, ೧೯, ನೇ ಶತಮಾನಗಳಲ್ಲಿಯೂ, ಟಿಪ್ಪು ಸುಲ್ತಾನನ ಆಳ್ವಿಕೆಯ ಅಂತ್ಯದ ವರೆಗೆ ಭಟ್ಕಲ್ಲು ಮೊದಲನೇ ತರಗತಿಯ ರೇವಾಗಿತ್ತೆಂದು ಅವರು ಸೂಚಿಸಿರುವರು.

ಹಾಲಿನ ರೇಷನ್

ಬೊಂಬಾಯಿನಲ್ಲಿ ಹಾಲಿನ ರೇಷನ್ನನ್ನು ವಾರಕ್ಕೆ ಮೂರು ಪಿಂಟುಗಳಿಂದ ಎರಡೂವರೆ ಪಿಂಟಿಗೆ ಇಳಿಸಲಾಗಿದೆ

೧೯೪ ಸ್ಥಳೀಯ ಸಂಸ್ಥೆಗಳಲ್ಲಿ ನಾಮಕರಣ ... ಇತರ ದೇಶ ... ರಾಜಕೀಯವೇನು? ಎಂಬುದನ್ನು ತಿಳಿದು ಆದರಂತೆ ನಡೆಸಬೇಕು.

—ಶ್ರೀ ಗುಂಡಪ್ಪಗೌಡರು

ಕಸ್ತೂರಿ ಬಾ ನಿಧಿ ೨೦ ಲಕ್ಷ

ಕಸ್ತೂರಿ ಬಾಯಿ ಸ್ಮಾರಕ ನಿಧಿಗೆ ಇದುವರೆಗೆ ಸುಮಾರು ೨೦ ಲಕ್ಷ ರೂ. ವಸೂಲಾಗಿದೆ. ಬೊಂಬಾಯಿ ನಗರದಲ್ಲೇ ನಾಲ್ಕು ಕಾಲು ಲಕ್ಷ ರೂ ದೊರಕಿದೆ. ಮಹಾತ್ಮರ ವರ್ಧಂತಿ ಹೊತ್ತಿಗೆ ೭೫ ಲಕ್ಷ ರೂ. ವಸೂಲಾಗುವದೆಂಬ ಭರವಸೆ ಇದೆ.

ಹಿಂದೂ ವಿದ್ಯಾರ್ಥಿಗಳು ಕಮ್ಮಿ

ಢಾಕಾ ವಿಶ್ವವಿದ್ಯಾಲಯದಲ್ಲಿ ಹಿಂದೂ ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಕಡಮೆಯಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಸಂಖ್ಯೆ ಈ ರೀತಿ ಇದೆ—೮೬೧—೭೩೫—೭೪೦ ೬೨೪-೫೩೪

ವಿವಾಹ ಮಹೋತ್ಸವ

ಸಂಗೀತ ವಿದ್ವಾನ್ ಎಸ್. ಕೃಷ್ಣಯ್ಯಂಗಾರ್ರವರು ತಮ್ಮ ದ್ವಿತೀಯ ಪುತ್ರಿ ಸೌ॥ ರಂಗನಾಯಕಮ್ಮನನ್ನು ಶ್ರೀ ಕರಾಂಬಿ ಶ್ರೀ ರಂಗ ರಾಜಗೋಪಾಲಯ್ಯಂಗಾರ್ಯರ ಪುತ್ರ ಶ್ರೀ ಕೃಷ್ಣಸ್ವಾಮಿಯವರಿಗೆ ಕೊಟ್ಟು ವಿವಾಹವನ್ನು ನಿನ್ನೆ ದಿನ ನಡೆಸಿದರು.

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಆಯುರ್ವೇದ ವೈದ್ಯಭೂಷಣ ಪಂಡಿತ

ಕೆ. ವಿ. ವೆಂಕಟರಾಮಯ್ಯ,

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ,

ಅರಕಲವಾಡಿ (ಚಾಮರಾಜನಗರ ತಾ॥)

MEDICINES

Take your requirements from

RAGHULAL & CO.,

1748, Sayaji Rao Road,

(Upstairs Mysore Hall),

MYSORE.

ಔಷಧಿಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ.

1748, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮೇಲೆ), ಮೈಸೂರು

Edited, printed and published by A. R. Nagarajan at the Sadhvi Press, D. Subbiah Road, Mysore.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಕೆಲವು ಅಕ್ಕಪಕ್ಕದ ... ಸೈಟುಗಳನ್ನು ತಾ॥ ... ರ ಪ್ರಕಾರ ತಾ॥ ... ರಿಂದ ... ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

ಆರ್. ಶಾಮಚಂದ್ರರಾವ್ ಛಾಂಬೋರೆ

ಛೇರ್ಮನ್

ಪ್ರತಿ ದಿನ ೩ ಆಟಗಳು ನ್ಯೂ ಒಪೇರಾ ಟಾಕೀಸ್

30-6-44 ರಿಂದ ಆಮೋಘವಾದ 2 ನೇ ವಾರ

ಭರ್ತೃಹರಿ

ತಮಿಳು ಚಿತ್ರ

... ಕಾನ್‌ ... ವ್ಯಾಮ, ಎಸ್. ಎಸ್. ಕೃಷ್ಣ, ಟಿ. ಎ. ಮಧುರಂ, ಕಾಳಿ ಎನ್. ರತ್ನಂ ಪಾತ್ರವಹಿಸಿರುವರು

ಸ್ತ್ರೀಯರ ಸೌಕರ್ಯಕ್ಕೆ

... ಪ್ರತ್ಯೇಕವಾಗಿ ... ವಿಸ್ತಾರ ...

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಕ್ಷ್ಮೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

... ಸ್ಟೋರ್ಸ್, ... ದೇವರಾಜ ಮಾರ್ಕೆಟ್, ಮೈಸೂರು

... ಎಲ್ಲಾ ... ಕೊಡಲ್ಪ ...

ಮಹಾತ್ಮರ ಉಪದೇಶ! ೫೫ ವರ್ಷದ ಚಾಲ್ತಿ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಖಾಸ್ ವೈದ್ಯ

ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಟ್ಟೆ ಸಂಬಂಧದ ಹೊಟ್ಟೆ ನೋವು, ಬಂಜೆತನ ಇವುಗಳಿಗೆ ಗ್ಯಾರಂಟಿ ಔಷಧ

ಡಾಕ್ಟರುಗಳ ಶಿಫಾರಸ್ಸನ್ನೂ, ಅನೇಕ ಪ್ರಶಂಸಾ ಪತ್ರಗಳನ್ನೂ ಪಡೆದಿದೆ.

ಎಂಟು ಪೇಜಿನ ಕ್ಯಾಟಲಾಗ್ ಉಚಿತ

ಎ. ರಾಮಸ್ವಾಮಿ ಅಯ್ಯರ್, ಅಂಬಳೆ, ಯಳಂದೂರ್ ಪೋಸ್ಟ್

ಉಜ್ವಲ ಸಾಹಿತ್ಯ ಭಂಡಾರ

ಮೈಸೂರು ೧

ವಾಣೀವಿಲಾಸ ಮೊಹಲ್ಲೆಯ ತರಬ ನಾಮಸಿ ವಿದ್ಯಾರ್ಥಿಗಳಿಂದ 'ಉಜ್ವಲ ಸಾಹಿತ್ಯ ಭಂಡಾರ'ದ ಪ್ರಾರಂಭೋತ್ಸವವು ಮಂಗಳವಾರ ಸಂಜೆ ಮೊಹಲ್ಲೆಯಲ್ಲಿರುವ ಒಕ್ಕಲಿಗರ ಅನಾಥಾಲಯದಲ್ಲಿ ನೆರವೇರಿತು. ಅನೇಕ ಹಿರಿಯರೂ, ಹಿತೈಷಿಗಳೂ ಬಂದಿದ್ದರು. ಸಂಚಾಲಕರಲ್ಲೊಬ್ಬರಾದ ಚ. ಸು. ರಾಮಚಂದ್ರರಾಯರು ಸಾಹಿತ್ಯ ಭಂಡಾರದ ಮುಖ್ಯೋದ್ದೇಶಗಳನ್ನು ವಿವರಿಸಿದರು. ವಂದೇಮಾತರಂ ಒಡನೆ ಸಭೆಯು ಮುಕ್ತಾಯವಾಯಿತು. ಅತಿಥಿಗಳಿಗೆ ಉಪಾಹಾರವೇರ್ಪಡಿಸಲಾಗಿತ್ತು. ಕಿರಿಯ ವಿದ್ಯಾರ್ಥಿಗಳಿಂದ ನಡೆಸಲ್ಪಡುತ್ತಿರುವ ಈ ಉಜ್ವಲ ಸಾಹಿತ್ಯ ಭಂಡಾರಕ್ಕೆ ಸಕಲರ ಪ್ರೋತ್ಸಾಹದೊರಕುವುದಾಗಿ ನಂಬಲಾಗಿದೆ

'ಪುಷ್ಪ' ಮಾಸ ಪತ್ರಿಕೆ

ಮೈಸೂರು ಮಿತ್ರಮಂಡಲಿಯವರಿಂದ ಶ್ರೀ ಕೆ. ಪಿ ಶ್ರೀನಿವಾಸಮೂರ್ತಿಯವರ ಸಂಪಾದಕತ್ವದಲ್ಲಿ ಹೊರಟಿರುವ 'ಪುಷ್ಪ' ಎಂಬ ಕನ್ನಡ ಮಾಸಪತ್ರಿಕೆಯ ಮೊದಲನೇ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ಹಲವು ಉತ್ತಮ ಕವಿತೆಗಳೂ ಲೇಖನಗಳೂ ಇವೆ. ಬೆಲೆ ಎರಡಾಣೆ. ಶ್ರೀ ದ. ರಾ. ಬೇಂದ್ರೆಯವರು ಹೇಳುವಂತೆ ಪುಷ್ಪವು ಮಕರಂದಕ್ಕೆ ಎಡೆಯಾಗಿ ಭೃಂಗಗಳಿಗೆ ನೆಲೆಯಾಗಿ ಉತ್ತಮರಿಗೆ ಶಿರೋಧಾರ್ಯವಾಗಿ ಸಫಲತೆ ಹೊಂದಲೆಂದು ನಾವು ಹಾರೈಸುತ್ತೇವೆ.

ನಿಧನ

ವೇ|| ಬ್ರ|| ಮಾಗಡಿ ಪುರಾಣೀಕರು ನಂಜುಂಡಶಾಸ್ತ್ರಿಗಳವರು ಈ ದಿನ ಬೆಳಗಿನ ಝಾವ ತಮ್ಮ ಅರವತ್ತು ಮೂರನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಇಬ್ಬರು ಗಂಡು ಮಕ್ಕಳೂ ನಾಲ್ವರು ಹೆಣ್ಣುಮಕ್ಕಳೂ ಇರುವರು. ಇವರು ಮೈಸೂರು ನಗರದ ಹಲವಾರು ಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದ ಕುಲಪುರೋಹಿತರು.

ನ್ಯಾಯವಿಧಾಯಕ ಸಭೆ

ಸ್ವಂ.ಸು.ಪ್ರೋ] ಬೆಂಗಳೂರು ೧

ಉಪಾಧ್ಯಕ್ಷರ ವಿಚಾರ

ಪ್ರಶ್ನೋತ್ತರ ಕಾಲದಲ್ಲಿ ನ್ಯಾ. ವಿ. ಸಭೆಯ ಉಪಾಧ್ಯಕ್ಷರಿಗೆ ಸಂಬಳವೇ? ಗೌರವ ವೇತನವೇ? ಏನು ಕೊಡಲಾಗುತ್ತಿದೆ ಎಂದು ಶ್ರೀ ಕೆ. ಎಂ ಕೃಷ್ಣಪ್ಪಗೌಡರು ಕೇಳಿದರು.

ಉ—ಅವರಿಗೆ ೨೦೦ ರೂ. ಸಂಬಳ ಕೊಡಲಾಗುತ್ತಿದೆ.

ಪ್ರ—ಅವರು ಎಷ್ಟು ಕಾಲ ಇರುತ್ತಿರಬೇಕೆಂಬ ನಿಯಮವೇನಾದರೂ ಇದೆಯೆ?

ಉ—ಇಲ್ಲ

ಪ್ರ—ಬೆಂಗಳೂರಲ್ಲಿ ಅವರಿಗೆ ಮನೆಯುಂಟೆ?

ಉ—ಇರಬಹುದು

ಪ್ರ—ನಾಗಮಂಗಲದ ತಾ|| ದೇವರ ಹಾವನಕೆರೆಯಲ್ಲವೇ ಇವರಿರುವುದು

ಉ—ಹೌದು

ಪ್ರ—ಇವರಿಗೆ ಪ್ರಯಾಣ ಭತ್ಯ ದಿನಭತ್ಯಗಳುಂಟೆ?

ಉ—ಉಂಟು

ಸಂಪುಟ ೨] ಶನಿವಾರ ೧-೭-೪೪ [ಸಂಚಿಕೆ ೨೮೯

ದಕ್ಷಿಣದಿಂದ ಜಪಾನರ ಇನ್ನೊಂದು ಧಾಳಿಯೆ?

ಗಾಂಧೀಜಿಯವರಿಗೆ ನಿರಾಶೆಯಲ್ಲೂ ಆಶಾಭಾವನೆ

ನಿರಾಶೆಗೆ ಕಾರಣವಿಲ್ಲವೆಂದು ಗಾಂಧೀಜಿ

ಸತ್ಯಾಗ್ರಹದಲ್ಲಿ ನಿರಾಶೆಗೆ ಸ್ಥಾನವಿಲ್ಲ ಹಿಂದೂಸ್ಥಾನವು ಸರಿಯಾಗಿಯೇ ಇದೆ ನಮ್ಮಲ್ಲಿ ನಾವು ನಂಬಿಕೆಯನ್ನು ಕಳೆದುಕೊಳ್ಳದಿದ್ದರೆ ಆಶ್ಚರ್ಯಕ್ಕೆ ಅವಕಾಶವೇ ಇಲ್ಲ. ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಮೂಕ ಪ್ರಜೆಗಳು ತೋರಿಸಿದ ಸ್ಥಿರ ವಿಶ್ವಾಸ ಸಹಕಾರಗಳ ಮೇಲೆ ಕಾಂಗ್ರೆಸ್ಸು ನಿಂತಿದೆ. ರಾಜಕೀಯ ಅಧಿಕಾರವು ಬಂದಲ್ಲದೇ ಹಿಂದೂಸ್ಥಾನದ ಕಷ್ಟಗಳು ಪರಿಹಾರವಾಗಲಾರವು. ಅಹಿಂಸಾತ್ಮಕ ಅಸಹಕಾರದಲ್ಲಿ ನನಗೆ ಅಚಲವಾದ ನಂಬಿಕೆ ಇದೆ—ಎಂದು ಗಾಂಧೀಜಿಯವರು ಹಲವು ಕಾಂಗ್ರೆಸ್ಸಿನವರನ್ನು ಕುರಿತು ಹೇಳಿರುವರು.

ಹೊಸ ವಿಷಯಗಳಿದ್ದರೆ ಬರೆಯಿರಿ

ವೈಸರಾಯರು ಗಾಂಧೀಜಿಯವರಿಗೆ ಭೇಟಿಯನ್ನು ನಿರಾಕರಿಸಿರುವರಾದರೂ ಸಂಪೂರ್ಣ ಆರೋಗ್ಯ ಹೊಂದಿದ ಮೇಲೆ ಹೊಸ ರಚನಾತ್ಮಕ ವಿಷಯಗಳೇನಾದರೂ ಇದ್ದರೆ ತಮಗೆ ಪತ್ರ ಬರೆಯಬಹುದೆಂದು ಅವರು ಗಾಂಧೀಜಿಯವರಿಗೆ ತಿಳಿಸಿರುವುದರಿಂದ ಮಹಾತ್ಮರು ಪುನಃ ವೈಸರಾಯರಿಗೆ ಪತ್ರ ಬರೆಯಬಹುದೆಂದು ನಂಬಲಾಗಿದೆ

ಚಾಮರಾಜ ಮೊಹಲ್ಲಾ ಮಹಾಜನ ಸಭಾ

೧-೭-೪೪ ರ ವರೆಗೆ ಕಾರ್ಯನಿರ್ವಾಹಕ ಸಮಿತಿ ಸದಸ್ಯರುಗಳಿಂದ ಸಭೆಯ ಕಟ್ಟಡಕ್ಕಾಗಿ ವಸೂಲಾದ ಚಂದಾ:—ಮ|| ಟಿ. ರಾಮಕೃಷ್ಣಪ್ಪನವರು ರೂ ೨೦೦ ಮ|| ಎಲ್ ಬಸವಯ್ಯನವರು ರೂ. ೧೦೦, ಮ|| ಗಳಾದ ಲಿಂಗನೆಲ ಪ್ರಸನ್ನ ನವರತ್ನ ರಾಮರಾಯರು, ಎಚ್. ಸಿ. ಸುಬ್ಬರಾಯರು, ಎಸ್. ವೆಂಕಟಸುಬ್ಬಯ್ಯನವರು ಕೇಶವಗಿರಿರಾಯರು, ಕೆ. ಜಿ. ಸುಂದರರಾಜ್, ಎ. ವೆಂಕಟೇಶಯ್ಯನವರು, ಎ. ಎಂ. ಕಾಳಪ್ಪನವರು, ಪಿ. ಕೃಷ್ಣಸ್ವಾಮಿಯವರು, ಎಂ. ರಾಘವೇಂದ್ರ ... ರವರು, ... ದಕ್ಷಿಣ ... ೧೨೦. ಹಿಂದಿನ ಶಿಲ್ಕು ... ಮೊತ್ತ ... ಎಂದು ಕಾರ್ಯದರ್ಶಿಯವರು ತಿಳಿಸಿದ್ದಾರೆ.

ನ್ಯಾಯವಿಧಾಯಕ ಸಭೆ

ಸ್ವಂ.ಸು.ಪ್ರೋ] ಬೆಂಗಳೂರು ೧

ಹೈಕೋರ್ಟು ವಿಚಾರ

ಈ ದಿವಸ ನ್ಯಾಯವಿಧಾಯಕ ಸಭೆಯಲ್ಲಿ ಹೈಕೋರ್ಟ್ ಜಡ್ಜಿಗಳ ಸ್ಥಾನ ಶೀಘ್ರದಲ್ಲಿಯೇ ಯಾವುದಾದರೂ ಖಾಲಿ ಬೀಳುವುದೇ ಯಾರನ್ನು ನಿಯಮಿಸಲಾಗುವುದು ಎಂಬ ವಿಚಾರದಲ್ಲಿ ಶ್ರೀ ಎ. ಜಿ. ರಾಮಚಂದ್ರರಾಯರು ಅವಸರದ ಪ್ರಶ್ನೆಯೊಂದನ್ನು ತಂದರು. ನ್ಯಾಯಾಂಗ ಸಚಿವರು ಅದಕ್ಕೆ ಉತ್ತರ ಕೊಡಲು ನಿರಾಕರಿಸಿದರು. ಅಧ್ಯಕ್ಷರು ಪ್ರಶ್ನೆಯನ್ನು ತಳ್ಳಿಹಾಕಿದರು.

ಬಂಧಿತ ಸದಸ್ಯರ ಹಾಜರಾತಿ

ಕಳೆದ ವರ್ಷ ತೀರ್ಮಾನವಾಗಿದ್ದಂತೆ ಪ್ರಿವಿಲೇಜ್ ಕಮಿಟಿಯ ವರದಿಯು ಈ ದಿನ ಸಭೆಯ ಮುಂದೆ ಪರಿಶೀಲನೆಗೆ ಇಡಲ್ಪಟ್ಟಿತು. ಅದರಲ್ಲಿ ನ್ಯಾ|| ವಿ|| ಸಭಾ ಸದಸ್ಯರು ಯಾರಾದರೂ ಬಂಧಿತರಾದರೆ ಅವರಿಗೆ ಸಭೆಗೆ ಬರುವ ಹಕ್ಕು ಯಾವ ಕಾರಣದಿಂದಲೂ ಹೋಗುವುದಿಲ್ಲ, ಎಂದು ಸಮಿತಿಯವರ ತೀರ್ಮಾನವಾಗಿದೆ

ಈ ವಿಚಾರದಲ್ಲಿ ನ್ಯಾಯಾಂಗ ಸಚಿವರಾದ ಶ್ರೀ ಕೆ ವಿ. ಅನಂತರಾಮನ್‌ರವರು ಉತ್ತರ ಕೊಡುತ್ತಾ—ಈ ತೀರ್ಮಾನವು ಶ್ರೀಮನ್ಮಹಾರಾಜಾ ಸರ್ಕಾರದ ಆಕ್ಟ್ ೨೨ ನೇ ವಿಧಿಗೆ ವಿರುದ್ಧವಾಗಿದೆ. ಆದ್ದರಿಂದ ಸರ್ಕಾರವು ಇದನ್ನು ಅಂಗೀಕರಿಸುವ ಹಾಗಿಲ್ಲವೆಂದು ಹೇಳಿದರು.

ಶ್ರೀಗಳಾದ ಪಿ. ಮಹದೇವಯ್ಯ, ಎಚ್. ಎಸ್. ರಾಜು ಮುಂತಾದವರು ಸಮಿತಿ ತೀರ್ಮಾನವನ್ನು ಸರ್ಕಾರವು ಅಂಗೀಕರಿಸಬೇಕೆಂದು ಒತ್ತಾಯಪಟ್ಟರು.

ಸೂಚನೆ

ಪ್ರಥಮ ಏಕಾದಶಿ ಪ್ರಯುಕ್ತ ನಾಳೆ 'ಸಾಧ್ವಿ' ಪ್ರಕಟವಾಗುವುದಿಲ್ಲ

ವ್ಯವಸ್ಥಾಪಕ.

ಪೌರಸಭಾಧ್ಯಕ್ಷರು ಅಧ್ಯಕ್ಷತೆ ವಹಿಸಬಾರದು

(ಹಿಂದಿನ ಪುಟದಿಂದ)

ಯಾದ ಬಗ್ಗೆ ಯಾವ ನಿರ್ಣಯವನ್ನು ಮಾಡಿ ... ಆಗಲೀ ... ಅಧ್ಯಕ್ಷರು ... ವಿದ್ದರಾಗಿ ... ಮತ್ತು ... ಸಭೆಯ ... ಪ್ರಶ್ನೆ ... ರದೆ

ಪೌರಸಭಾ ಪ್ರಕರಣ

ಮೈಸೂರು ಪೌರಸಭೆಯ ... ಸದಸ್ಯರ ... ಶ್ರೀ ಟಿ. ... ಯ್ಯಂಗಾರ್ಯರವರು ನಿನ್ನೆಯ ಪೌರಸಭಾ ಮೀಟಿಂಗಿನ ವಿಷಯವಾಗಿ ಈ ರೀತಿ ಹೇಳಿಕೆ ಕೊಟ್ಟಿದ್ದಾರೆ:—

ಟ್ರಸ್ಟ್‌ಬೋರ್ಡು ತನ್ನ ಕಾರ್ಯಕಲಾಪಗಳ ವರದಿಯನ್ನು ಪೌರಸಭೆಗೂ ಪೌರಸಭೆಯು ಬೋರ್ಡಿಗೂ ಕಳುಹಿಸುವುದು ವಾಡಿಕೆ. ೧೯೩೯ ರಲ್ಲಿ ಟ್ರಸ್ಟ್‌ಬೋರ್ಡ್ ಒಂದು ನಿರ್ಣಯವನ್ನು ಮಾಡಿ ಪೌರಸಭೆಯ ಹಳೇ ಮತ್ತು ಈಗಿನ ನೌಕರರಾದ ಶ್ರೀಗಳು ಎಂ. ಎ. ಶ್ರೀನಿವಾಸ, ಬಿ. ಎಸ್. ರಾಘವೇಂದ್ರರಾವ್, ರಾಮಚಂದ್ರರಾವ್ ಘಂಟೋಳೆ, ಬಿ. ಎಲ್. ಮಾಣಿಕ್ಯಂ (ಇಂಜಿನಿಯರ್), ಟಿ. ಚಂದ್ರಶೇಖರಯ್ಯ (ಹಿಂದಿನ ಹೆಲ್ತ್ ಆಫೀಸರ್) ಡಾ|| ಎಂ. ರಾಮಚಂದ್ರರಾವ್, (ಈಗಿನ ಹೆಲ್ತ್ ಆಫೀಸರ್) ರೆವ್. ಸಿ. ಜಂಬುಕೇಶ್ವರಯ್ಯ, (ರೆ|| ಆಫೀಸರ್) ಇವರುಗಳಿಗೆ ಈ ಊರಿನಲ್ಲಿ ಸ್ವಂತ ಕಟ್ಟಡಗಳಿಲ್ಲದಿರುವುದರಿಂದ ಬಿ|| ಗಳಿಗೆ ಹತ್ತಿರದ ... ಯಾವುದಾದರೂ ... ನಿವೇಶನಗಳನ್ನು ಕೊಡುವಂತೆ ತೀರ್ಮಾನ ಮಾಡಲಾಗಿದೆ. ಸದರಿ ಬೋರ್ಡ್ ಮೀಟಿಂಗಿನಲ್ಲಿ ಹಾಜರಿದ್ದವರು ಶ್ರೀಗಳಾದ ರಾಮಚಂದ್ರರಾವ್ ಬೊಂಬೋರೆ, ಈಗಿನ ಹೆಲ್ತ್ ಆಫೀಸರ್, ... ಸಾಹೇಬ್, ಶ್ರೀ ಇ. ಪಿ. ...

ಪೌರಸಭೆಯು ... ಈ ವಿಷಯವು ಬಂದಾಗ ... ವ ಶ್ರೀ ಟಿ. ವೆಂಕಟರಮಣಯ್ಯನವರು ಟ್ರಸ್ಟ್‌ಬೋರ್ಡ್ ನಿರ್ಣಯವು ಅಕ್ರಮವೆಂಬುದಾಗಿ ತೀರ್ಮಾನ ಮಾಡಬೇಕೆಂದು, ಸೂಚಿಸಿದರು (ವಿವರ ಬೇರೆ ಕಡೆ ಕೊಟ್ಟಿದೆ). ಅಧ್ಯಕ್ಷರಿಂದ ಶ್ರೀ ಬೊಂಬೋರೆಯವರೂ ಹೆಲ್ತ್ ಆಫೀಸರ್ ಡಾ|| ರಾಮಚಂದ್ರರಾಯರೂ ಸದರಿ ವಿಷಯದ ಚರ್ಚೆಯಲ್ಲಿಯೂ ವೋಟಿನಲ್ಲಿಯೂ ಭಾಗವಹಿಸಿದ್ದು ಬೋರ್ಡಿನ ... (೨) ನೇ ಕಲಮಿಗೆ ವಿರುದ್ಧವಾಗಿರುವುದು ಮತ್ತು ಈ ವಿಷಯದ ಚರ್ಚೆ ಬಗ್ಗೆ ಮುಂಚಿತವಾಗಿ ನೋಟೀಸು ಕೊಟ್ಟಿರಲಿಲ್ಲ, ಎಂಬ ಕಾರಣವನ್ನು ...

ಬೋರ್ಡಿನ ... ವಿರುದ್ಧವಾಗಿತ್ತೆಂಬುದನ್ನು ಬೋರ್ಡ್ ಮತ್ತು ಸರ್ಕಾರದ ಗಮನಕ್ಕೆ ತರಬೇಕೆಂಬ ಈ ಸೂಚನೆಯ ಉದ್ದೇಶವಾಗಿತ್ತು. ಆದರೆ ಅಧ್ಯಕ್ಷರು ಇದಕ್ಕೆ ಅವಕಾಶ ಕೊಡಲಿಲ್ಲ. ಈ ಬಗ್ಗೆ ಚರ್ಚೆಗಾಗಲಿ ನಿರ್ಣಯಕ್ಕಾಗಲಿ ಅವಕಾಶ ಕೊಡುವುದಿಲ್ಲವೆಂದು ಹೇಳಿದರು. ಕಾರಣಗಳನ್ನು ಕೊಡಲಿಲ್ಲ ... ಮಾಡಲಿಲ್ಲ

ಈ ಸಂದರ್ಭದಲ್ಲಿ ... ಬೋರ್ಡಿನ ... ಬೋರ್ಡಿನ ... ಎಂಬುದನ್ನು ...

ಜಪಾನರು ದಕ್ಷಿಣದಿಂದ ...

...

ಕೌನ್ಸಿಲಿನ ಕಿಡಿಗಳು

ಸ್ವಂ.ವ.] ಬೆಂಗಳೂರು ೩೦

೧೧೨ ಪ್ರಶ್ನೆಗಳಿಗೆ ಈಗ ಸರ್ಕಾರದ [illegible] ಕೊಡುತ್ತಿಲ್ಲ. ಅವರ [illegible] ಸಂಸ್ಥಾನದ [illegible] ಪರಿಗಣಿಸುತ್ತೀರಾ?— ಶ್ರೀ ವೆಂಕಟ್ರಾಮಯ್ಯ [illegible].

ತೊಂದರೆ [illegible] ಈಗ ಆದರೆ [illegible]

ಶ್ರೀ ಎಚ್. ವಿ. ಶ್ರೀನಿವಾಸ

[illegible] ಸ್ಥಾನದ [illegible] ಇಲ್ಲ — ಶ್ರೀ ರಾ[illegible]

[illegible] ಈ ಬಗ್ಗೆ [illegible] — ಶ್ರೀ [illegible]

[illegible] — ಅಧ್ಯಕ್ಷರು

[illegible] — ಸಚಿವರು

೧೧೬ ನ್ಯಾಯಾಧೀಶರ ವಿಚಾರದಲ್ಲಿ ಈ ಸಭೆಯಲ್ಲಿ ಒಮ್ಮೆ ನಿರ್ಣಯ ತಂದರೂ [illegible] ಅನುಸರಿಸುತ್ತಿರುವ ನೀತಿ [illegible] ಆಗಿದೆ. [illegible] ಜಿಲ್ಲೆಗಳಲ್ಲಿ ಅನೇಕ [illegible] ಕೆಲಸಮಾಡುತ್ತಿದ್ದಾರೆ ಸರ್ಕಾರದ [illegible] ಯಾವ ಸೌಕರ್ಯವನ್ನೂ ಮಾಡಿಲ್ಲ
—ಶ್ರೀ ರುದ್ರಪ್ಪ

೧೧೭ ನಮ್ಮ ಸಂಸ್ಥಾನದ ನ್ಯಾಯಪೀಠದ ಹಿರಿತನ [illegible] ನಮ್ಮ ನ್ಯಾಯಾಧೀಶರಲ್ಲಿ [illegible] ಇದ್ದಾರೆ ಕೆಲ ಮಂದಿ [illegible] ದಕ್ಷತೆ [illegible] ಇದ್ದಾರೆ
—ಶ್ರೀ ಎಂ. ಪಿ. ಸೋಮಶೇಖರರಾವ್

೧೧೮ ಸರ್ ಅಬ್ದುಲ್ ರಹೀಂರವರು ವಕೀಲ ವೃತ್ತಿಯಿಂದ ನೇರವಾಗಿ [illegible] ಸಭೆಯ ಅಧ್ಯಕ್ಷ ಪೀಠಕ್ಕೇರಿದರು. ಸರ್ [illegible] ಫೆಡರಲ್ ನ್ಯಾಯಸ್ಥಾನ ಪೀಠ ಪಡೆದರು. ನಮ್ಮ ನಾಡಿಗೂ ಈ ಸೌಭಾಗ್ಯ ಲಭಿಸಲಿ. [illegible] ವಾದ ಬೋಧಿಸುತ್ತಿರುವ ನಮಗೆ, ನ್ಯಾಯ ಪೀಠಕ್ಕೆ ಗೌರವ ಕೊಡುತ್ತಿರುವ ನಮಗೆ ನ್ಯಾಯ ಪೀಠದಲ್ಲಿ ಕುಳಿತು ಗೌರವ ಪಡೆವ ಹಕ್ಕನ್ನು ದಯಪಾಲಿಸಿ.
—ಶ್ರೀ ಭೀಮಪ್ಪ ನಾಯಕ್

೧೨೦ ನಮ್ಮ ನ್ಯಾಯಾಧೀಶರು, ಮುನ್ಸೀಫರು ಹಗಲಿರುಳೂ ದುಡಿಯುತ್ತಾರೆ ಅವರಿಗೆ [illegible] ಸರಕಾರದ ಆದ್ಯ ಕರ್ತವ್ಯ ಮತ್ತು ಅವರ ಪ್ರಪಂಚಾನುಭವವೂ ದಕ್ಷತೆಯೂ ಯಾರಿಗೂ ಹಿಂದುಳಿದಿಲ್ಲ—ಶ್ರೀ ಮಹದೇವಯ್ಯನವರು

೧೨೧ ನಮ್ಮ ನ್ಯಾಯಸ್ಥಾನವು ನಿಷ್ಪಕ್ಷಪಾತ ದೃಷ್ಟಿಗೆ ಕೀರ್ತಿಶಾಲಿಯಾಗಿದೆ. ಸರ್ಕಾರವು ಮಾಡಬಹುದಾದ ದೋಷಗಳಿಂದ ಜನತೆಯು ಹೆಚ್ಚು ಅಪಹರಣವಾಗದಂತೆ ಪೋಷಿಸಬೇಕಾದರೆ ಹೈಕೋರ್ಟಿಗೆ "ಹೆಬಿಯಸ್ ಕಾರ್ಪಸ್" ವಿಚಾರದಲ್ಲಿ ಅಧಿಕಾರ ಅವಶ್ಯಕ. —ಶ್ರೀ ರಾಜು

೧೨೨. ವ್ಯಕ್ತಿ ಸ್ವಾತಂತ್ರ್ಯ, ಎಲ್ಲ ಸ್ವಾತಂತ್ರ್ಯಗಳಿಗಿಂತ ಹಿರಿದಾದುದು. ಆ ದೃಷ್ಟಿಯಿಂದ ಹೈಕೋರ್ಟಿಗೆ ಆ ಅಧಿಕಾರ ಅವಶ್ಯಕ. —ಶ್ರೀ ಗುಬ್ಬಯ್ಯ

೧೨೩ ಮಾದರಿ ಮೈಸೂರು ಸರ್ಕಾರವು ಈ ಹೆಚ್ಚು ಅಧಿಕಾರ [illegible] ಕೊಟ್ಟಲ್ಲಿ ಮೈಸೂರು ಕೀರ್ತಿ ಹೆಚ್ಚಿ, ಜವಾಬ್ದಾರಿ ಸರ್ಕಾರದ ಮುನ್ನಡೆಗೆ ಮತ್ತೊಂದು ಮೆಟ್ಟಿಲು ಹತ್ತಿದಹಾಗಾಗುತ್ತೆ—ಶ್ರೀ ಬೇಲೂರು

೧೨೪. ಕಳೆದ ವರ್ಷ [illegible] ಕಾಂಗ್ರೆಸ್ಸಿನವರನ್ನು ವಿಚಾರಣೆ ಇಲ್ಲದೆ ಸುಮ್ಮನೆ ಜೈಲಲ್ಲಿ ಸರ್ಕಾರ ಹಾಕಿತ್ತು. ಸರ್ಕಾರದ ಈ ನೀತಿಯು ನ್ಯಾಯಾನ್ಯಾಯ ವಿಮರ್ಶೆಗೆ ಹೈಕೋರ್ಟಿಗೆ ಅಧಿಕಾರವಿದ್ದಿದ್ದರೆ ಜನತೆಗೂ, ಸರ್ಕಾರಕ್ಕೂ, ನ್ಯಾಯ ದೊರೆಯುತ್ತಿತ್ತು. ಈಗಿನ ಆಕ್ಷೇಪಗಳಿಗೆ ಅವಕಾಶ ವಿರುತ್ತಿರಲಿಲ್ಲ—ಶ್ರೀ ಸೋಮಶೇಖರರಾವ್

೧೨೫ ಕಾನೂನು ಬಾಹಿರವಾಗಿ ಬಂಧಿಸಿದ ವಿಚಾರವಾಗಿ ಇದುವರೆಗೆ ಯಾವ ದೂರೂ ಬಂದಿಲ್ಲ. [illegible] ಈ ಬಗ್ಗೆ ಹೈಕೋರ್ಟಿಗೆ ಹೆಚ್ಚಿಗೆ ಅಧಿಕಾರಕೊಡುವ ಪ್ರಮೇಯವೇ ಇಲ್ಲ. ಅಲ್ಲದೆ ಹೈಕೋರ್ಟಿನವರು ಈ ವಿಚಾರವಾಗಿ ಅಧಿಕಾರ ಬೇಕೆಂದು ಕೇಳಿದರೆ ಅದನ್ನು ಖಂಡಿತವಾಗಿ ಕೊಡಲು ನಾವು ಸಿದ್ಧರಾಗಿದ್ದೇವೆ.
—ಶ್ರೀ ನಾರಾಯಣಸ್ವಾಮಿ ನಾಯುಡು

ಪೌರಸಭಾಧ್ಯಕ್ಷರು ಅಧ್ಯಕ್ಷತೆ ವಹಿಸಬಾರದು

ಟ್ರಸ್ಟ್ ಬೋರ್ಡ್ ನಿರ್ಣಯದ ಬಗ್ಗೆ ಪೌರಸಭೆಯಲ್ಲಿ ವಾದವಿವಾದ

ಮೈಸೂರು ೧

ಮೈಸೂರು ಟ್ರಸ್ಟ್ ಬೋರ್ಡಿನಲ್ಲಿ ಆದ ಒಂದು ನಿರ್ಣಯವು ಅಕ್ರಮವಾಗಿತ್ತೆಂಬ ಬಗ್ಗೆ ನಿನ್ನೆ ನಡೆದ ಮೈಸೂರು ಪೌರ ಸಭೆಯಲ್ಲಿ ವಿಶೇಷ ಕೋಲಾಹಲವೂ ವಾಗ್ವಾದವೂ ಆಗಿ ಸಭೆಯು ಯಾವ ಕೆಲಸವನ್ನೂ ಮಾಡದೆ ಮುಂದುವರಿಯಿತು. ಶ್ರೀ ರಾಮಚಂದ್ರರಾವ್ ಬಾಂಭೋರೆಯವರು ಅಗ್ರಾಸನವನ್ನು ವಹಿಸಿದ್ದರು. ಪೌರಸಭಾಧ್ಯಕ್ಷರು ಮತ್ತು ಜಿಲ್ಲಾ ಅಧೀಸರಾಗಿ ಟ್ರಸ್ಟ್ ಬೋರ್ಡಿನಲ್ಲಿ ಮಂಜೂರಾದ ನಿವೇಶನಗಳ ಬಗ್ಗೆ ಅವರುಗಳೇ ಸಭೆಯಲ್ಲಿ ಭಾಗವಹಿಸಿ ಓಟುಮಾಡಿರುವುದು ಅಕ್ರಮವೆಂದು ಸೂಚಿಸುವುದೇ ಚರ್ಚೆಯ ಉದ್ದೇಶವಾಗಿತ್ತೆಂದು ತಿಳಿದುಬರುತ್ತದೆ

ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ವೆಂಕಟರಮಣಯ್ಯನವರು ಈರೀತಿ ಒಂದು ನಿರ್ಣಯ ತಂದರು—"ಟ್ರಸ್ಟ್ ಬೋರ್ಡಿನ ಇಬ್ಬರು ಸದಸ್ಯರು ತಮಗೆ ಸ್ವಾರ್ಥವಾಗುವ ಒಂದು ವಿಷಯದ ಚರ್ಚೆಯಲ್ಲಿ ಭಾಗವಹಿಸಿ ಓಟುಮಾಡಿರುವುದರಿಂದ ಅವರು ಕಾನೂನಿನ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಟ್ರಸ್ಟ್ ಬೋರ್ಡ್ ನಿರ್ಣಯವು ಅಕ್ರಮ ಮತ್ತು ಅಸಾಧುವಾದದ್ದು ಎಂಬುದಾಗಿ ಠರಾವು ಮಾಡತಕ್ಕದ್ದು."

ಮೊದಲಿಂದ ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲು ಅವಕಾಶಕೊಡಲಾಗುವುದಿಲ್ಲವೆಂದೂ, ಟ್ರಸ್ಟ್ ಬೋರ್ಡಿನ ಕಾರ್ಯಕಲಾಪಗಳ ವರದಿಯು ಈ ಸಭೆಯ ಪ್ರಾರ್ಥನೆಮೇರೆ ಕೇವಲ ಅವಗಾಹನೆಗಾಗಿ ಕಳುಹಿಸಲ್ಪಡುತ್ತವೆಯೇ ವಿನಾ ಅದರ ವಿಮರ್ಶೆಗೆ ಈ ಸಭೆಗೆ ಅಧಿಕಾರವಿಲ್ಲವೆಂದೂ ಅಧ್ಯಕ್ಷರು ಸೂಚಿಸಿದರು.

ಅಧ್ಯಕ್ಷರು ಸ್ಥಳ ಬಿಡಬೇಕು

ಈ ಮಧ್ಯೆ ಶ್ರೀ ಪಿ ಸೀತಾರಾಮಯ್ಯನವರು ಒಂದು ಕ್ರಿಯಾಲೋಪವನ್ನು ಸೂಚಿಸಿ, ಈ ನಿರ್ಣಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಅಧ್ಯಕ್ಷರಿಗೆ ಆರ್ಥಿಕ ಸಂಬಂಧವಿದೆಯಾದುದರಿಂದ ಅದರ ಚರ್ಚೆಯಾಗುವಾಗ ಪೌರಸಭೆಯ ಕಾನೂನಿನಂತೆ ಅವರು ಬೇರೆಯವರಿಗೆ ಸ್ಥಳ ಬಿಟ್ಟುಕೊಡಬೇಕೆಂದು ಸೂಚಿಸಿದರು. ಕಾನೂನಿನ ಕಲಮನ್ನು ಓದಿದರು.. ಆದರೆ ಟ್ರಸ್ಟ್ ಬೋರ್ಡಿನ ಕಾರ್ಯಕಲಾಪಗಳ ವಿಮರ್ಶೆಗೆ ಈ ಸಭೆಯಲ್ಲಿ ಅವಕಾಶಕೊಡುವುದಿಲ್ಲವೆಂದೂ, ಅಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡುವುದಿಲ್ಲವೆಂದೂ ಅಧ್ಯಕ್ಷರು ತಿಳಿಸಿದರು. ಬಹಳ ಬಿಸಿಬಿಸಿ ಚರ್ಚೆಗಳು ನಡೆದುವು ಮಿ|| ಟಿ. ಎಲ್. ಅಲ್ಲಿಖಾನ್ ಶ್ರೀ ಎಫ್. ಸಿ ದೇವರಾಜೇ ಅರಸ್, ಶ್ರೀಮತಿ ಯಶೋಬಾಲ್ಡ್ ಇವರುಗಳು ಮಾತನಾಡಿ ಅಧ್ಯಕ್ಷರ ವಾದವನ್ನು ಪುಷ್ಟೀಕರಿಸಿದರು ಶ್ರೀ [illegible] ಸಾಲಹಳ್ಳಿ ಸೀತಾರಾಮಯ್ಯ, ಎಂ. ಎಸ್. ಜೋಯಿಸ್, ಅಗರ ರಂಗಯ್ಯ, ಟಿ ನರಸಿಂಹಯ್ಯಂಗಾರ್, ಇವರುಗಳು ಮಾತನಾಡಿ ಯಾವುದೊಂದು ವಿಷಯವನ್ನು ಠರಾವು ಮೂಲಕವಾಗಲೀ ಈ ಸಭೆಯು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅಧಿಕಾರವಿದೆ; ಪದ್ಧತಿಯೂ ಇದೆ—ಎಂದು ಹೇಳಿದರು. ಬಹಳ ಹೊತ್ತು ಚರ್ಚೆಯಾದುದರಿಂದ ವಿಷಯವನ್ನು ಅಲ್ಲಿಗೇ ಮುಕ್ತಾಯಮಾಡಬೇಕೆಂದು ಶ್ರೀ ಎಫ್. ಸಿ. ದೇವರಾಜೇ ಅರಸಿನವರು ನಿರ್ಣಯ ತಂದರು. ಅದಕ್ಕೆ ಬಹುಮತ ದೊರೆಯದೆ ಅದು ಬಿದ್ದುಹೋಯಿತು. ಚರ್ಚೆ ಮುಂದುವರಿಯಿತು. ಆದರೆ ಟ್ರಸ್ಟ್ ಬೋರ್ಡ್ ನಿರ್ಣಯದ ಮೇಲೆ ಈ ಸಭೆಯಲ್ಲಿ ಯಾವ ಚರ್ಚೆಗಾಗಲಿ ನಿರ್ಣಯಕ್ಕಾಗಲಿ ಅವಕಾಶವಿಲ್ಲವೆಂದು ಅಧ್ಯಕ್ಷರು ತಿಳಿಸಿದರು.

ಖಂಡನಾ ನಿರ್ಣಯ

ಆದ್ದರಿಂದ ಶ್ರೀ ವೆಂಕಟರಮಣಯ್ಯನವರು ಸಭೆಯ ಕಾರ್ಯಕಲಾಪಗಳೆಲ್ಲವನ್ನೂ ಇನ್ನೊಂದು ದಿನಕ್ಕೆ ಮುಂದುವರಿಸಲು ಈ ಕೆಳಗೆಕಂಡ ನಿರ್ಣಯವನ್ನು ತಂದ. ಅದು ಬಹುಮತದಿಂದ ಪಾಸಾದುದರಿಂದ ಸಭೆಯು ಅಲ್ಲಿಗೇ ಮುಕ್ತಾಯವಾಯಿತು:—"ಈ ವಿಷ

(ಮುಂದಿನ ಪುಟ ನೋಡಿ)

ಪ್ರತಿ ದಿನ ೩ ಆಟಗಳು ✣✣✣✣ ನ್ಯೂ ಅಪೇರಾ ಟಾಕೀಸ್
30-6-44 ರಿಂದ **ಭರ್ತೃಹರಿ**
ಅಮೋಘವಾದ 2 ನೇ ವಾರ ತಮಿಳು ಚಿತ್ರ
[illegible] ಶ್ಯಾಮ, ಎಂ. ಎಸ್. ಕೃಷ್ಣನ್, ಟಿ. ಎ. ಮಧುರಂ, ಕಾಳಿ ಎನ್. ರತ್ನಂ ಪಾತ್ರವಹಿಸಿರುವರು

[illegible] ಸೌಕರ್ಯ
[illegible]
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
[illegible] ಬ್ರಾಂಡ್ ಕಾಫಿಪುಡಿ
[illegible]
ಟಿ. [illegible], ದೇವರಾಜ ಮಾರ್ಕೆಟ್, ಮೈಸೂರು
[illegible]

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು.
ಹರಾಜು ನೋಟೀಸ್
ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—
ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಸೈಟುಗಳನ್ನು ತಾ|| ೧೫-೬-೪೪ ನೇ ಹರಾಜು ಇಸ್ತಿಹಾರ್ [illegible] ಪ್ರಕಾರ ತಾ|| ೩-೭-೪೪ ರಿಂದ ೩೦-೭-೪೪ ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.
ಆರ್. ರಾಮಚಂದ್ರರಾವ್ ಭಾಂಬೋರ
ಚೇರ್ಮನ್

MEDICINES
Take your requirements from
RAGHULAL & CO.,
1748, Sayaji Rao Road,
(Upstairs, Mysore Hall),
MYSORE.
ಔಷಧಗಳು
ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ತೆಗೆದುಕೊಳ್ಳಿ.
ರಘುಲಾಲ್ ಅಂಡ್ ಕೋ.
1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

Edited, printed and published by A. [illegible] Nagarajan at the Sadhvi Press, D Subbiah Road, Mysore

ಸ್ವಾತಂತ್ರ್ಯಹೋರಾಟದ ಸ್ಮರಣಾರ್ಥ ಉತ್ಸವ

ಮೈಸೂರು ... ಸ್ವಾತಂತ್ರ್ಯ ... ಕಾರ್ಯಕ್ರಮ ... ಪಥ ... ನಡೆಯುವುದು.

ದಿನ ಬೆಳಗ್ಗೆ ೧೦ ಗಂಟೆಗೆ ... ದರ್ಬಾರು ೬॥ ಗಂಟೆಗೆ ಮೆರವಣಿಗೆ ... ೧೧ ಮತ್ತು ... ಯ ಕಲ್ಯಾಣ ಮಂಟಪದಲ್ಲಿ ೮ ಗಂಟೆಗೆ ದರ್ಬಾರು.

ಮೆರವಣಿಗೆಯು ೬॥ ಗಂಟೆಗೆ ಅರಮನೆಯಿಂದ ಹೊರಟು, ಜಯರಾಂ ಗೇಟ್, ಎಲ್ಗಿನ್ ಫೌಂಟೆನ್, ಸಯ್ಯಾಜಿರಾವ್ ರಸ್ತೆ, ಟೆಕ್ನಿಕಲ್ ಇನ್ಸ್ಟಿಟ್ಯೂಟ್, ದೊಡ್ಡಪೇಟೆ ಚೌಕ, ಚಿಕ್ಕಗಡಿಯಾರ, ... ದ್ವಾರ ರಸ್ತೆ, ಮೂಲಕ ಗೌರ್ನಮೆಂಟ್ ಹೌಸಿಗೆ ಬೆಳೆಯುತ್ತದೆ.

ಅಲ್ಲಿನ ಕಾರ್ಯಕಲಾಪಗಳು ಮುಗಿದ ನಂತರ ಗೌ॥ ಹೌಸ್‌ನ ಎಲ್ಗಿನ್‌ಗೇಟ್ ವೆಲ್ಲಿಂಗ್ಟನ್ ಲಾಡ್ಜ್, ಇರ್ವಿನ್ ರೋಡ್, ದೊಡ್ಡಪೇಟೆ, ಶ್ರೀ ಚಾಮರಾಜ ಒಡೆಯರ ಪ್ರತಿಮಾ ಚೌಕದ ಮೂಲಕ ಜಯರಾಂ ಗೇಟಿನಲ್ಲಿ ಅರಮನೆಗೆ ಸೇರುತ್ತದೆ.

ತಿಲಕ್ ಸಂಘ

ಸಂಘದ ಆಹ್ವಾನವನ್ನು ಮನ್ನಿಸಿ ಪ್ರೊ॥ ರಸಭಾಯಿ ಉಪಾಧ್ಯಕ್ಷರು ನಿನ್ನೆ ಬೆಳಗ್ಗೆ ಒಂಟಿಕೊಪ್ಪಲಿಗೆ ದಯಮಾಡಿಸಿದ್ದರು. ಅವರನ್ನು ಅಲ್ಲಿಯ ಸೌದೆಡಿಪೋ ಮತ್ತು ಸೀಮೆಎಣ್ಣೆ ಡಿಪೋವಿಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿದ್ದ ನ್ಯೂನತೆಗಳನ್ನೆಲ್ಲಾ ಪರಿಶೀಲಿಸಿ ಸರಿಪಡಿಸುವುದಾಗಿ ಭರವಸೆ ಇತ್ತರು. ಬಡಾವಣೆಯ ನೈರ್ಮಲ್ಯತೆಗೆ ಕೂಡಲೇ ಕಾರ್ಯಕ್ರಮ ಕೈಗೊಳ್ಳುವುದಾಗಿ ಹೇಳಿದರು. ಸೀಮೆಎಣ್ಣೆ ಅಭಾವವಾಗಿರುವ ವಿದ್ಯಾರ್ಥಿಗಳಿಗೆ ತಕ್ಕ ಏರ್ಪಾಟು ಮಾಡಲಾಗಿದೆ—ಎಂದು ಸಂಘದ ಸಂಚಾಲಕರು ತಿಳಿಸುತ್ತಾರೆ.

" ಸ್ವರ್ಣ ಲತಾ "

ಇದು ವಾಣೀಗ್ರಂಥಮಾಲೆಯ ಪ್ರಥಮ ಪುಷ್ಪ. ಲೇಖಕಿ ಶ್ರೀಮತಿ ಬಿ. ಜಯಲಕ್ಷ್ಮಮ್ಮ. ಪ್ರೇಮದ ಪ್ರಭಾವವನ್ನು ಪ್ರಕಾಶಪಡಿಸುವ ಕಾದಂಬರಿ ಇದು. ಬೆಲೆ ೮ ಆಣೆ. 'ಮೈಸೂರು ರತ್ನತ್ರಯ ವಿಲಾಸ'ದಲ್ಲಿ ದೊರೆಯುವುದು. ... ಬೇಕಾದುದ.

ಅಕ್ರಮ ಬಂಧನದ ಆಪಾದನೆ

ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಬಸವರಾಜಯ್ಯನವರನ್ನು ಶ್ರೀ ಎಸ್. ಚನ್ನಪ್ಪನವರು ಅಕ್ರಮವಾಗಿ ಬಂಧಿಸತ್ತರೆಂಬ ಮೊಕದ್ದಮೆಯು ೧೪ನೇ ತಾ॥ಗೆ ಮುಂದುವರಿದಿದೆ.

———

ಇಪ್ಪತ್ತು ಸಾವಿರ ರೂ. ರೇಷ್ಮೆ ಪತ್ತೆ

ಸ್ವ. ಸು.] ಚಾಮರಾಜನಗರ

ಚಾಮರಾಜನಗರದ ತಾ॥ ಕಿರಗಸೂರು, ಬೋಗಾಪುರ, ಬಿಳ್ಳೆಪುರದ ಸರಗೂರು ಗಳಲ್ಲಿ ಪೋ॥ ಇನ್ಸ್‌ಪೆಕ್ಟರ್ ಮತ್ತು ಇತರ ಪೋ॥ ಅಧಿಕಾರಿಗಳೂ ಮತ್ತು ಕಂಟ್ರೋಲ್ ಸೂಪರಿಂಟೆಂಡೆಂಟ್‌ರೂ ಹೋಗಿ ಸುಮಾರು ಇಪ್ಪತ್ತು ಸಾವಿರ ರೂ. ರೇಷ್ಮೆಯ ಜಪ್ತಿ ಮಾಡಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದಾರೆ. ಮುಂದಿನ ತನಿಖೆಕ್ರಮ ನಡೆಯುತ್ತಿದೆ

WEEKLY EDITION

ಸಂಪುಟ ೮] ಸೋಮವಾರ ೩--೭--೪೪ [ಸಂಚಿಕೆ ೩೭

ಜರ್ಮನ್ ಅಧಿಕಾರಿಗಳ ಶಾಂತಿ ಸಂಧಾನವೆ?

ರೊಮೆಲ್ಲರೇ ನಾರ್ಮಂಡಿ ಸೇನಾನಾಯಕತ್ವ ವಹಿಸಿದರು

ಉಕ್ರಲ್ ಕಡೆಗೆ ಮಿತ್ರ ಧಾಳಿ ಬೆಳೆಯುತ್ತಿದೆ

ಜರ್ಮನ್ ಸಂಧಾನ ಪ್ರಯತ್ನ ?

ಸಂಧಾನಸಿಪುಣರೆಂದೆನಿಸಿದ ಐದು ಜನ ಜರ್ಮನ್ ವಿದೇಶಾಂಗ ಅಧಿಕಾರಿಗಳ ನಿಯೋಗವೊಂದು ಕಳೆದ ವಾರಾಂತ್ಯದಲ್ಲಿ ಸ್ಪೇನನ್ನಿನಲ್ಲಿ ಬಂದಿಳಿಯಿತು. ಅದೇ ಸಮಯಕ್ಕೆ ಪೋರ್ಚುಗಲ್ಲಿನ ಮುಖ್ಯ ಮಂತ್ರಿಯೂ ಅಲ್ಲಿಗೆ ಬಂದರು. ಬಹಳ ಮುಖ್ಯವಾದ ಮಾತುಕತೆಗೆ ಅವರು ಬಂದಿದ್ದರೆಂದು ಹೇಳಲಾಗಿದೆ. ಇದಾದನಂತರ ಪೋರ್ಚುಗಲ್ಲಿನ ಬ್ರಿ॥ ರಾಯಭಾರಿಯು ಹಟಾತ್ತಾಗಿ ಲಂಡನ್ನಿಗೆ ಬಂದರು. ಮೇಲ್ಕಂಡ ಜರ್ಮನ್ ನಿಯೋಗದವರು ಲಿಸ್ಬನ್ನಿಗೆ ಬರುವರೆಂಬ ನಿರೀಕ್ಷೆಯಿತ್ತು. ಆದರೆ ಬರಲಿಲ್ಲ. ಅವರಿಂದ ಶಾಂತಿಪ್ರಯತ್ನಗಳಾಗುವುವೆಂಬ ನಿರೀಕ್ಷಣೆಗಳು ವಿಫಲವಾಗಿವೆ.

ಉಕ್ರಲ್ ಮೇಲೆ ಧಾಳಿ

ಇಂಫಾಲಿಗೆ ಈಶಾನ್ಯದಲ್ಲಿ ೩೫ ಮೈಲಿ ದೂರದಲ್ಲಿರುವ ಪ್ರಮುಖ ಜಪಾನಿ ನಿಲ್ದಾಣವಾದ ಉಕ್ರಲ್ ಮೇಲೆ ಮಿತ್ರ ಸೈನ್ಯಗಳು ಧಾಳಿ ನಡೆಸುತ್ತಿವೆ. ಇಂಫಾಲಿನಿಂದ ೧೫ ಮೈಲಿಯಲ್ಲಿ ಜಪಾನರು ಇನ್ನೂ ಉಕ್ರಲ್ ರಸ್ತೆಯನ್ನು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿದ್ದಾರೆ.

ರೊಮೆಲ್ಲರೇ ನಾಯಕರು

ನಾರ್ಮಂಡಿ ಸಂಗ್ರಾಮದ ಫೀಲ್ಡ್ ಮಾರ್ಷಲ್ ರೊಮೆಲ್ಲರೇ ಜರ್ಮನ್ ಸೇನೆಗಳ ಅಧಿನಾಯಕತ್ವವನ್ನು ಸ್ವತಃ ವಹಿಸಿಕೊಂಡಿರುವುದಾಗಿ ವರದಿಯಾಗಿದೆ. ಕೇನ್–ಟಿಲ್ಲಿ ಪ್ರದೇಶದಲ್ಲಿ ೭ ಪ್ಯಾನ್ಸರ್ ಡಿವಿಜನ್‌ಗಳ ಕಾರ್ಯಕಲಾಪಗಳನ್ನು ಅವರೆ ನಡೆಸುತ್ತಿದ್ದಾರೆ.

ಡೆನ್ಮಾರ್ಕಿನಲ್ಲಿ ದಂಗೆ

ಕೋಪನ್ ಹೇಗನ್ ನಗರದಲ್ಲಿ ಬೀದಿಗಳಲ್ಲಿ ಜರ್ಮನರು ಶಸ್ತ್ರಸಜ್ಜಿತ ಸೈನ್ಯಗಳನು ತಂದೊಡ್ಡಿದ್ದಾರೆ. ಬೀದಿಯ ಕಾಳಗವು ಮುಂದುವರಿಯುತ್ತಿದೆ. ಜರ್ಮನರು ಅನೇಕ ವಿಮಾನಗಳನ್ನು ತಂದು ನಗರದ ಮೇಲೆ ಸುತ್ತಿಕೊಂಡು ಫಿರಂಗಿಗಳನ್ನು ಹಾರಿಸುತ್ತಿದ್ದಾರೆ. ನಗರದ ಸ್ಥಿತಿಯು ಸ್ತಬ್ಧವಾಗಿದೆ.

———

ಅದರಲ್ಲಿರುವ ಅಪೂರ್ವವೂ ಅಮೂಲ್ಯವೂ ಆದ ವಸ್ತುಗಳು ನಾಶವಾಗದಿರಲು, ಫ್ಲಾರೆನ್ಸನ್ನು ಅರಕ್ಷಿತ ನಗರವೆಂದಾಗಿ ಹಿಟ್ಲರನು ಘೋಷಿಸಿದ್ದಾನೆ.

ಗಾಂಧೀಜಿ ಪಂಚಗನಿಯಲ್ಲಿ

ಮಹಾತ್ಮರು ಪೂನಾದಿಂದ ನಿನ್ನೆ ಹೊರಟು ಪಾಂಚಗನಿಗೆ ತಲಪಿದರು. ಬಹಳ ನಿಶ್ಶಕ್ತರಾಗಿರುವರು. ಕಸ್ತೂರಬಾಯಿ ನಿಧಿ ಸಭೆಯಲ್ಲಿ ೪೦ ನಿಮಿಷ ಮಾತನಾಡಿದ್ದರಿಂದ ಅವರ ರಕ್ತದ ಒತ್ತಡ ಹೆಚ್ಚಿದ್ದರಿಂದ ೫ ದಿವಸ ಮೌನವನ್ನು ಹಿಡಿದಿದ್ದಾರೆ. ರಕ್ತಹೀನತೆಯೂ ಕೊಕ್ಕೆಹುಳುವಿನ ಬಾಧೆಯೂ ಇವೆ.

ಹೆಂಗಸರಿಗೆ ಬಳೆಗಳಿಲ್ಲ

ಒರಿಸ್ಸಾ ಪ್ರಾಂತದಲ್ಲಿ ಗಾಜಿನ ಬಳೆಗಳು ಸಿಕ್ಕದೆ ಸುಮಂಗಲೀ ಸ್ತ್ರೀಯರಿಗೆ ಬಹಳ ತೊಂದರೆಯಾಗಿರುವುದರಿಂದ ಆಗ್ರಾದಿಂದ ಬಳೆಗಳನ್ನು ತರಿಸಲು ರೈಲ್ವೆ ಸೌಕರ್ಯವನ್ನು ಒರಿಸ್ಸಾ ಸರ್ಕಾರದವರು ಒದಗಿಸಿಕೊಡಬೇಕೆಂದು ಬರ್ಹಾಂಪುರದ ಮಹಿಳಾ ಸಮಾಜದವರು ಏರ್ಪಡಿಸಿದ ಸಭೆ ನಿರ್ಣಯ ಮಾಡಿರುವರು.

ಬಿರ್ಲಾ ಮೋಟಾರ್ ಕಂಪೆನಿ

ಇನ್ನು ಕೆಲವು ದಿನಗಳಲ್ಲಿ ಬಿರ್ಲಾ ಸೋದರರು ೨೦ ಕೋಟಿ ರೂ. ಬಂಡವಾಳದ ಮೋಟಾರು ಸಂಸ್ಥೆಯನ್ನು ಆರಂಭಿಸುವರು. ದೊಡ್ಡ ದೊಡ್ಡ ವರ್ತಕರು ಇದರಲ್ಲಿ ಸೇರುವರು. ಈ ಸಂಸ್ಥೆಯು ಕಾರುಗಳು, ಟ್ರಕ್ಕುಗಳು ಅದಕ್ಕೆ ಬೇಕಾದ ಉಪಕರಣಗಳು ಇವುಗಳ ತಯಾರಿಕೆಯನ್ನು ಕೈಗೊಳ್ಳುವುದು.

ಸಿಪಾಯಿಗಳಿಗೆ ಕಣ್ಣನ್ನೆ ಮಾಡಿದಕ್ಕೆ ದಸ್ತಗಿರಿ

ಮದರಾಸ್ ೮೦ ಕಾಲೇಜ್ ಪೋಲೀಸ್ ಸ್ಟೇಷನ್ ಎದುರಿಗೆ ಸೋಲ್ಜರುಗಳಿಗೆ ಕಣ್ಣ ಸನ್ನೆ ಮಾಡಿದರೆಂಬ ಆಪಾದನೆ ಮೇಲೆ ಪೋಲೀಸಿನವರು ಪಟ್ಟ ಮತ್ತು ಲಕ್ಷ್ಮಿ ಎಂಬ ಇಬ್ಬರು ಹೆಂಗಸರನ್ನು ದಸ್ತಗಿರಿ ಮಾಡಿರುವರು.

ಡೈರಿಫಾರಂಗೆ ೫೦ ಲಕ್ಷ ರೂ.

ಸ್ವಂ.ಸು.ವ್ರೋ.] ಬೆಂಗಳೂರು ೨

ಬೆಂಗಳೂರು ನಗರದಲ್ಲಿರುವ ಹಾಲಿನ ತೊಂದರೆಯನ್ನು ನಿವಾರಿಸಲು ೫೦ ಲಕ್ಷ ರೂ ನ ಡೈರಿ ಫಾರಮ್ಮನ್ನು ಸ್ಥಾಪಿಸಲು ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದು ತಿಳಿದುಬಂದಿದೆ. ವಿಸ್ತಾರವಾದ ಹಾಲು ಸರಬರಾಜು ಮಾಡುವುದಕ್ಕೆ ಪ್ರಮುಖ ಸಾರ್ವಜನಿಕರ ಸಹಕಾರವನ್ನೂ ಕೋರಲಾಗಿದೆ

ನ್ಯಾಯವಿಧಾಯಕ ಸಭೆ

ಸ್ವಂ ಸು.ವ್ರೋ.] ಬೆಂಗಳೂರು ೭

ಕೂಲಿಗಾರರ ವೇತನದ ಶಾಸನ

ಈ ದಿನ ನ್ಯಾಯವಿಧಾಯಕ ಸಭೆ... ಬ್ರಿಟಿಷ್ ಇಂಡಿಯಾದಲ್ಲಿರುವಂತೆ ... ದಲ್ಲಿಯೂ ಕೂಲಿಗಾರರ ವೇತನ... ಬಂಧಪಟ್ಟ ಶಾಸನವೊಂದನ್ನು ... ಬೇಕೆಂದು ಶ್ರೀ ಪೋತ್ನೂರು ರಾಮಚಂದ್ರರಾಯರು ತಂದ ನಿರ್ಣಯವನ್ನು ಸಭೆಯು ಅಂಗೀಕರಿಸಿತು. ಸರ್ಕಾರದವರೂ ಇದನ್ನು ತರಬೇಕೆಂಬ ಆಲೋಚನೆ ಸ್ವರೂಪದಲ್ಲಿಯೂ ಮುಂದಿನ ಸಭೆಯ ವೇಳೆಗೆ ಈ ಶಾಸನವನ್ನು ರಚಿಸಿ ತರುವುದಾಗಿಯೂ ಸರ್ಕಾರದವರು ಉತ್ತರಕೊಟ್ಟರು

ಮಂಡ್ಯ ಹೈಸ್ಕೂಲ್

ಶ್ರೀ ಕೆ. ಸಿ. ಲಿಂಗೇಗೌಡರು ಮಂಡ್ಯ ಮುನ್ಸಿಪಲ್ ಹೈಸ್ಕೂಲನ್ನು ಗೌ॥ ಹೈಸ್ಕೂಲಾಗಿ ಮಾಡಬೇಕೆಂದು ತಂದ ನಿರ್ಣಯವು ಬಿದ್ದುಹೋಯಿತು. ಸರ್ಕಾರದವರ ಅನುಕೂಲವಾದಾಗ ನೋಡಲಾಗುತ್ತೆಂದು ಉತ್ತರಕೊಟ್ಟರು

ಸೌದೆ ಪ್ರಸಂಗ

ಬೆಂಗಳೂರಲ್ಲಿ ಇತ್ತೀಚೆಗೆ ಸೌದೆ ಧಾರಣೆಯನ್ನು ನಿಗದಿಮಾಡಿದ್ದರಿಂದ ಒಂದು ಡಿಪೋವಿನಲ್ಲಿಯೂ ಒಂದೇ ಒಂದು ಚೂರು ಸೌದೆಯೂ ಇಲ್ಲವಾಗಿದೆ. ಈ ವಿಚಾರದಲ್ಲಿ ಶ್ರೀ ಪೋತ್ನೂರು ರಾಮಚಂದ್ರರಾಯರು ಒಂದು ಅವಸರದ ನಿರ್ಣಯ ತಂದರು. ಇದು ನಾಳೆ ಚರ್ಚೆಯಾಗಲಿದೆ

ಪ್ರಶ್ನೋತ್ತರಗಳು

. ಮಹಮದ್‌ಸೇಠ್-ಬ್ರಿಟಿಷ್ ಇಂಡಿಯಾದಲ್ಲಿ ಮಾಡಿರುವ ಎಲ್ಲಾ ಭಾರತ ರಕ್ಷಣಾ ಶಾಸನ ವಿಧಿ ನಿಯಮಗಳನ್ನೂ ಮೈಸೂರಲ್ಲಿ ಯಥಾವತ್ತಾಗಿ ಜಾರಿಗೆ ತಂದಿದ್ದೇಕೆ?

ಉ. ಅವಶ್ಯಕವೆಂದು ಕಂಡಬಂದವುಗಳನ್ನು ನಮ್ಮ ಸಮಯೋಚಿತಕ್ಕನುಸಾರವಾಗಿ ಪರಿವರ್ತಿಸಿಕೊಂಡು ಜಾರಿಗೆ ತರಲಾಗಿದೆ.

ಅಕ್ರಮ ಬಂಧನಗಳು

ಶ್ರೀ ಗಿರಿಯಾಚಾರ್-ಇತ್ತೀಚೆಗೆ ನಡೆದ ಜಿಲ್ಲಾ ಬೋರ್ಡ್ ಅಧ್ಯಕ್ಷರ ಚುನಾವಣೆಯಲ್ಲಿ ಮೈಸೂರು ಕಾಂಗ್ರೆಸ್ಸಿನವರ ಕೆಲವು ಸದಸ್ಯರುಗಳನ್ನು (ಮೈಸೂರು ಹಾಸನ ಮತ್ತು ಕೋಲಾರಗಳಲ್ಲಿ) ಅಕ್ರಮವಾಗಿ ಬಂಧಿಸಿದ್ದುದು ಸರ್ಕಾರಕ್ಕೆ ಗೊತ್ತೆ ?

ಉ—ಗೊತ್ತು. ಮೈಸೂರಿಂದ ಒಂದು ಕಡೆ ಪತ್ರ ದೂರು ಬಂದಿದೆ. ಉಳಿದ ದೂರೇನೂ ಬಂದಿಲ್ಲ

ಪ್ರ—ಮೈಸೂರಿನಲ್ಲಿ ಎಷ್ಟು ಕುಲ ಪ ಸ್ವರನ್ನು ಬಂಧಿಸಿದ್ದಾರೆ?

ಉ—೧-೭-೪೪ ರಾತ್ರಿ ೫ ರಿಂದ ೧-೭-೪೪ ಬೆಳಗ್ಗೆವರೆಗೆ ಇದಕ್ಕೆಂತ ಬೇರೆ ವಿವರ ತಿಳಿಯದು

ಪ್ರ - ಶ್ರೀ ಎ. ಜಿ. ರಾಮಚಂದ್ರರಾಯರು ... ಒಂದು ಕೊಲೆ ನಲ್ಲಿ ನಡೆಯುತ್ತಿರುವಾಗ ಇಲ್ಲಿ ಬಚಾವು ವಿರೋಧವಿಲ್ಲದೆ ಸ್ವಾಮಿ

ಅಧ್ಯಕ್ಷ—ನೋಡು ಈ ವಿಚಾರ ಇದು ಚರ್ಚೆ ಬೇಡ

ಧಾನ್ಯ ಒದಗಿಸಲು ನಿಯಾಮಿತಿ

ಮೈಸೂರು ಸಂಸ್ಥಾನದೊಳಗೆ ಕ್ಷಾಮವಾದರೂ ಸಂಗ್ರಹಿಸುವ ... ಧಾನ್ಯ ಆಹಾರ ಒದಗಿಸುವ ಎಲ್ಲೆಂದಿಲ್ಲಿಗೆ ಬೇಕಾದರೂ ಒಯ್ಯಬಹುದು

ವಾರ ಭವಿಷ್ಯ

(ಶ್ರೀ [illegible])

ಮೇಷ – [illegible]

ವೃಷಭ – [illegible]

ಮಿಥುನ – [illegible]

ಕರ್ಕ – [illegible]

ಸಿಂಹ – [illegible]

ಕನ್ಯಾ – [illegible]

ತುಲ – [illegible]

ವೃಶ್ಚಿಕ – [illegible]

ಧನು – [illegible]

ಮಕರ – [illegible]

ಕುಂಭ – [illegible]

ಮೀನ – [illegible]

[illegible]

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು.

ಹರಾಜು ನೋಟೀಸ್

[illegible]

ಆರ್. ರಾಮಚಂದ್ರರಾವ್ [illegible]

[illegible]

ಮಾಂಗಲ

[illegible]

Edited, printed and published by A. R. Nagarajan, at the Sadhvi Press, D. Subbiah Road, Mysore

[illegible]



ಸಂಪುಟ ೨] ಮಂಗಳವಾರ ೪-೭-೪೪ [ಸಂಚಿಕೆ ೨೯೦

ಆಲೆಂಡ್ ದ್ವೀಪಗಳನ್ನು ನಾಜಿಗಳು ಹಿಡಿದರೆ?

ಆರ್ಕ್‌ಟಿಕ್ ಸಮುದ್ರದಲ್ಲಿ ಜರ್ಮನರ ರಕ್ಷಣಾ ಕೋಟೆ

ದ್ವಿ॥ ವಾರ್ಷಿಕೋತ್ಸವ

ಮೈಸೂರು ೪

ಮೈಸೂರು ಜೆ. ಎಸ್. ಟ್ಯುಟೋರಿಯಲ್ ವರ್ಗ್ಸಿನ ಮಾಲೀಕರಾದ ಶ್ರೀ ಎಂ. ಆರ್. ಸಿ. ಬಸಪ್ಪನವರು ತಮ್ಮ ಕಾರ್ಖಾನೆಯ ದ್ವಿತೀಯ ವಾರ್ಷಿಕೋತ್ಸವವನ್ನು ನಡೆಸಿದರು. ಈ ಸಂದರ್ಭದಲ್ಲಿ ಕೆಲಸಗಾರರಿಗೆ ವಸ್ತ್ರದಾನ ಮಾಡಲಾಯಿತು. ಈ ಸಮಾರಂಭಕ್ಕೆ ಹಲವು ಮಿತ್ರ ಸುಹೃದ್ವರ್ಗದವರು ಆಗಮಿಸಿದ್ದರು. ಎಲ್ಲರಿಗೂ ಉಪಾಹಾರ ಕೊಡುವ ನಡೆಯಿತು.

ಸ್ಥಳ ಬದಲಾವಣೆ

ಮೈಸೂರು ನಗರದ ರೇಷನಿಂಗ್ ಆಫೀಸು ಮತ್ತು ಸೆಕೆಂಡ್ ಸರ್ಕಲ್ ಆಫೀಸು ಇವೆರಡೂ ಎಕ್ಸಿಬಿಷನ್ ಕಟ್ಟಡದಿಂದ ಗಾಂಧಿಚೌಕದಲ್ಲಿರುವ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಕಟ್ಟಡದ ಮಹಡಿಯ ಮೇಲಕ್ಕೆ ನಾಳೆಯ ದಿನದಿಂದ ವರ್ಗಾಯಿಸಲ್ಪಡುತ್ತೆಂದು ರೇಷನಿಂಗ್ ಆಫೀಸರಾದ ಶ್ರೀ ಟಿ. ವಿ. ರೆಡ್ಡಿಯವರು ತಿಳಿಸಿರುತ್ತಾರೆ.

ಶ್ರೀ ಪ್ರಸನ್ನ ಸೀತಾರಾಮ ಮಂದಿರ

ಗ. ನೀಲಕಂಠ ರಾಯ ಮಂದಿರದಲ್ಲಿ ೫-೭-೪೪ ನೇ ಬುಧವಾರ ಸಾಯಂಕಾಲ ೬॥ ಗಂಟೆಗೆ ದಿವಂಗತ ಗ॥ ವಿ॥ ಬಿ. ಕೃಷ್ಣಪ್ಪನವರ ಶಿಷ್ಯಂದಿರಿಂದ ಗುರುಪೂಜೆ ಆಚರಿಸಲ್ಪಡುತ್ತ ಶಿಷ್ಯರೆಲ್ಲರೂ ಬಂದು ಸಹಕರಿಸಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ. ಎಲ್ಲರಿಗೂ ಉಚಿತ ಪ್ರವೇಶ.

ಶ್ರೀ ನೀಲಕಂಠ ಮಂದಿರದ ಭಜನಾ ಸಮಿತಿಯನ್ನು ಉತ್ತಮ ಪಡಿಸುವ ಉದ್ದೇಶ್ಯ ಕಾರ್ಯಕಾರಿ ಸಮಿತಿಯವರು ತಾತ್ಕಾಲಿಕವಾಗಿ ತೆರೆದಿದ್ದ ಗ್ರಂಥಕಶಾಲೆ ನಿಲ್ಲಿಸಿ ಸದಸ್ಯ ಶಿಷ್ಯನ್ನು ೧-೭-೪೪ ರಿಂದ ತೆಗೆದು ಹಾಕಿದ್ದಾರೆ. ಟಿಟೋ ಸದಸ್ಯರು ಒಂದು ರೂಪಾಯಿ ಸದಸ್ಯ ಶಿಷ್ಯನ್ನು ಬದಲಾಯಿಸಿ ಕೊಳ್ಳಬೇಕಾಗಿ ಕೋರುತ್ತಾರೆ.

ಜರ್ಮನರು ಆರ್ಕ್‌ಟಿಕ್ ಸಮುದ್ರದ ಗೋಡೆ ಕಟ್ಟುವರು

ಉತ್ತರ ನಾರ್ವೆ ರಕ್ಷಣೆಯನ್ನು ಜರ್ಮನರು ಬಲಪಡಿಸುತ್ತಿರುವರು. ನಾರ್ವೆ, ಫಿನ್ಲೆಂಡುಗಳು ಸಂಧಿಸುವ ಕಡೆ ಅವರು ಆರ್ಕ್‌ಟಿಕ್ ಸಮುದ್ರದಲ್ಲಿ ಒಂದು ಗೋಡೆಯನ್ನು ಕಟ್ಟಬೇಕೆಂದಿರುವರು. ರಷ್ಯದ ಲೀವಾದ ಮಾರ್ಷಲ್‌ಸ್ಕನ್ನು ಏನೇ ಆಗಲಿ ವಶಪಡಿಸಿಕೊಳ್ಳಬೇಕೆಂದು ಹಿಟ್ಲರನು ಆಜ್ಞೆ ಮಾಡಿದ್ದನು. ಅವನ ಆ ಆಶೆ ಕೈಗೂಡಲಿಲ್ಲ. ಇದು ಆರ್ಕ್‌ಟಿಕ್ಕಿನಲ್ಲಿ ಅಮೆರಿಕಾ ಇಂಗ್ಲೆಂಡುಗಳಿಂದ ಸರಬರಾಜಿಗೆ ಕೇಂದ್ರಸ್ಥಾನ.

ನಾಜಿಗಳಿಂದ ಆಲೆಂಡ್ ದ್ವೀಪ ಆಕ್ರಮಣ?

ಸ್ವೀಡನ್ನಿಗೂ ಫಿನ್ಲೆಂಡಿಗೂ ಮಧ್ಯೆ ಇರುವ ಫಿನ್ಲೆಂಡಿಗೆ ಸೇರಿದ ಆಲೆಂಡ್ ದ್ವೀಪಗಳನ್ನು ಜರ್ಮನರು ಆಕ್ರಮಿಸಿರುವರೆಂದು ಸಂಬಲಶರವಾದ ವದಂತಿಯಿಂದ ಪ್ರಚಾರವಾಗಿದೆ. ಇದಕ್ಕೆ ಅಧಿಕಾರಿ ಅಥವಾ ಖಾಸಗಿ ಸಮರ್ಥನೆ ದೊರೆತಿಲ್ಲ. ಜರ್ಮನರ ಅಧಿಕಾರಿಗಳು ಈ ದ್ವೀಪದ ಕೋಟೆಕೊತ್ತಲಗಳನ್ನು ಮುಂಚಿತವಾಗಿಯೇ ಅಣಿಮಾಡಿ ಮಾಡಿದ್ದಾರೆ.

ಫಿನ್ಲೆಂಡಿನ ನಿರ್ಧಾರ

ಜರ್ಮನಿಯು ಬಿಡದೆ ಫಿನ್ಲೆಂಡಿಗೆ ಸಹಾಯ ಮಾಡುತ್ತಿರುವುದರಿಂದ ಅದರೊಡನೆ ಸೇರಿಕೊಂಡು ಒಪ್ಪಂದವನ್ನು ರಷ್ಯದ ಮೇಲೆ ನಮಗೆ ಶಕ್ತಿ ಇರುವವರೆಗೂ ಯುದ್ಧ ಮಾಡುವುದೇ ನಮ್ಮ ಕರ್ತವ್ಯ ಎಂದು ಫಿನ್ಲೆಂಡ್ ಪ್ರಧಾನಿ ಪ್ರೊ॥ ಎಡ್ವಿನ್ ಲಿಂಕೊಮೀಸ್‌ರವರು ಹೇಳಿದ್ದಾರೆ. ಜರ್ಮನಿಯ ಸಹಾಯವಿಲ್ಲದೆ ಫಿನ್ಲೆಂಡು ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ.

ಉಕ್ರೈಲ್ ಬಳಿ ಮಿತ್ರ ಸೈನ್ಯ

ಮಿತ್ರಸೈನ್ಯಗಳು ಉಕ್ರೈಲ್‌ನಿಂದ ಕೇವಲ ನಾಲ್ಕೇ ಮೈಲಿ ದೂರದ ನಗರದ ಸಮೀಪದಲ್ಲಿ ಮಿತ್ರರು ಜರ್ಮನರ ಮೇಲೆ ವಿಜಯವನ್ನು ಹೊಂದಿದ್ದಾರೆ. ಆ ಮೈಲಿ ದಕ್ಷಿಣದಲ್ಲಿ ಮಿತ್ರರ ಎಂಟನೆಯ ಮಿತ್ರಸೇನೆಗಳು ಜರ್ಮನ್ ಸೇನೆಗಳೊಡನೆ ಯುದ್ಧ ಮಾಡುತ್ತಿವೆ.

ಜಪಾನರ ಪ್ರಯತ್ನ ವಿಫಲ

ಮಿಟ್ಕಿನಾ ಪ್ರದೇಶದಲ್ಲಿ ಜಪಾನರ ಅನೇಕ ಧಾಳಿಗಳನ್ನು ಚೀನಾ ಮತ್ತು ಅಮೆರಿಕಾ ಪಡೆಗಳು ಎದುರಿಸಿ ನಿಷ್ಫಲವಾಗಿ ಮಾಡಿವೆ. ದಕ್ಷಿಣದಿಂದ ಜಪಾನಿ ತಂಡವೊಂದು ವಿಮಾನ ಪಡೆಗೆ ಸಿಕ್ಕಿ ಪ್ರಯತ್ನಿಸಿತು. ಅನೇಕ ಸೈನ್ಯಗಳು ಅವನ್ನು ಸುತ್ತುಗಟ್ಟಿ ನಾಶವಾದುವು.

ಸ್ವದೇಶಿ ಗಡಿಯಾರಗಳು

ಜಮ್ಮುದ್‌ಪುರದಲ್ಲಿ ಸ್ವದೇಶಿ ಗಡಿಯಾರಗಳನ್ನು ತಯಾರಿಸುವ ಒಂದು ಕಂಪೆನಿಯು ಸ್ಥಾಪಿತವಾಗಿದೆ. ಮೊದಲಿನಿಂದ ಗಡಿಯಾರಗಳು ಬಹುಮಟ್ಟಿಗೆ ಕಡಮೆಯಾಗಿ ರುವುದರಿಂದ ಈ ಕಂಪೆನಿಗೆ ಗಿರಾಕಿಗಳು ಬಹಳವಾಗಿದ್ದಾರೆ. ಗಡಿಯಾರಗಳಲ್ಲದೆ ಗ್ರಾಮಾಫೋನ್ ಸೂಜಿಗಳನ್ನೂ ಇವರು ತಯಾರಿಸುತ್ತಿರುವರು.

ವಿಜ್ಞಾನ ಶೋಧನೆ

ವಿಜ್ಞಾನ ಶೋಧನೆಯನ್ನು ಕಾರ್ಯರೂಪಕ್ಕೆ ಉಪಯೋಗಿಸುವ ಪದ್ಧತಿಯನ್ನು ಬೇರೆಯವರು ಹೆಚ್ಚು ಕಡಮೆ. ಹಾಗೆ ಉಪಯೋಗಿಸಿದರೆ ಅದರ ಪ್ರಮಾಣ ಅತಿ ಸ್ವಲ್ಪ ಸರ್ಕಾರಗಳು ಈ ಬಗ್ಗೆ ಹೆಚ್ಚು ಪಾತ್ರ ವಹಿಸಬೇಕು ಎಂದು ಸರ್ ಎಂ. ವಿಶ್ವೇಶ್ವರಯ್ಯನವರು ಬೆಂಗಳೂರು ಭಾರತೀಯ ವಿಜ್ಞಾನ ಮಂದಿರದ ವಾರ್ಷಿಕ ಸಭೆಯಲ್ಲಿ ಹೇಳಿದರು.

ರಾಷ್ಟ್ರೀಯ ರಕ್ಷಣಾ ಸಂಸ್ಥೆಯ ಸ್ಪರ್ಧೆ

ರಾಷ್ಟ್ರೀಯ ರಕ್ಷಣಾ ಬಲದ ಕ್ಯಾಪ್ಟನ್‌ರ ಗಳಲ್ಲಿ ಸರ್ಕಾರವು ಅಭ್ಯರ್ಥಿಗಳಿಗೆ ಅಭಿರುಚಿ ಹುಟ್ಟಿಸುವ ಸಲುವಾಗಿ ನಾಳೆ ಪುರಭವನದಲ್ಲಿ ಸಂಜೆ ೫॥ ಗಂಟೆಗೆ ಸ್ಪರ್ಧೆ ನಡೆಸುತ್ತಾರೆ. ಎಲ್ಲಾ ಸ್ಕೂಲು ಕಾಲೇಜು ವಿದ್ಯಾರ್ಥಿಗಳೂ ಭಾಗವಹಿಸುವರು. ಹೆಚ್ಚು ಬೆಲೆ, ರೇಷನಿಂಗ್, ಜರ್ಮನ ಶತ್ರು ಪ್ರತಿಭಟನೆ ಮುಂತಾದ ವಿಷಯಗಳ ಮೇಲೆ ಕನ್ನಡ, ಇಂಗ್ಲಿಷ್, ಉರ್ದುಗಳಲ್ಲಿ ಬಾಗಣ ಚರ್ಚೆಗಳು ನಡೆಯುವುವು.

ಮಹಾಮಕತೆ-ಸ್ವಿಯೋರಾದು

ಸ್ವ. ವ.] ಕೃಷ್ಣರಾಜನಗರ ೩೦

27-6-44 ರ ದಿವಸ ಇಲ್ಲಿನ ಮುನ್ಸಿಪಲ್ ವೈಸ್‌ಪ್ರೆಸಿಡೆಂಟರಾದ ಲೋಕೇಶ್ವರರವರ ಬಿ. ಸಿದ್ದಲಿಂಗಶೆಟ್ಟರಿಗೂ ಪತ್ರ ಇಲ್ಲಿನ ಸರ್ಕಾರದ ಶ್ರೀ ಬಾಗೋಳ್ ಮಲ್ಲಪ್ಪಶೆಟ್ಟರವರಿಗೂ, ಸಂಘದ ವಿಚಾರದಲ್ಲಿ ವಿರೋಧ ಸಾಹುಕಾರ್ ನಡೆದು ಗಲಾಟೆ ಆಗುತ್ತಿರುವಾಗ ಈ ವಿಚಾರವಾಗಿ ಪೋಲೀಸ್ ಕಂಪ್ಲೇಂಟ್ ಸಹ ಹೋಗಿರುತ್ತದೆ. ಅಲ್ಲಿನ ಕೇಸು ವಿಚಾರಣೆ ನಡೆಯುತ್ತಾ ಇದೆ.

ತುಂಗಭದ್ರಾ ಅಣೆಕಟ್ಟು

ತುಂಗಭದ್ರಾ ನದಿಯ ನೀರನ್ನು ಹಂಚಿಕೊಳ್ಳುವ ವಿಚಾರದಲ್ಲಿ ಮದ್ರಾಸ್ ಮತ್ತು ಮೈಸೂರು ಸರ್ಕಾರಗಳಿಗೆ ಆಗಿರುವ ಒಪ್ಪಂದದ ಪ್ರಕಾರ ಮೈಸೂರು ಸರ್ಕಾರದವರು ಶಿವಮೊಗ್ಗ ಬಳಿ ತುಂಗಾ ನದಿಗೆ ಒಂದು ಅಣೆಕಟ್ಟನ್ನು ಕಟ್ಟಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ. ಇದರಿಂದ ಸಾವಿರಾರು ಎಕರೆ ಜಮೀನು ವ್ಯವಸಾಯಕ್ಕೆ ಬರುತ್ತದೆ. ಹಲವು ಒಕ್ಕಲುಗಳು ಇದಕ್ಕೆ ವಿರುದ್ಧವಾಗಿ ಅರ್ಜಿ ಕೊಡುವುದಾಗಿ ತಿಳಿದುಬಂದಿದೆ.

ಧೈರ್ಯ

ಬರೆದವರು:—ಬಿ. ಆರ್. ರಾಮಯ್ಯಂಗಾರ್

ನೋವ ಮುಂದೆ ತೀರ
ಮಾತ ನಿಷ್ಕಾರಣ
ಈ ಜೀವ ಮಾನಕ್ಕೆ
ನೀ ಹೇಳುವ ಮಾತೆ॥
ಮನದ ಮೌನ್ಯದ ಸೈನ್ಯ ನಿನಗೆ
ಗಿರಿಯ ಧೀರ ನೆಲ ಬರುವ॥
ನೋವ ನ ಎಲ್ಲ ಧೀರ
ಬಾಳು ಬಾಳಿಲಿ ಧೀರ॥

ನ್ಯಾಯವಿಧಾಯಕ ಸಭೆ

ಸ್ವಂ. ವ. ವರದಿ] ಬೆಂಗಳೂರು ೪

ಎ. ಆರ್. ಪಿ.

ಈ ದಿನ ನ್ಯಾಯವಿಧಾಯಕ ಸಭೆಯಲ್ಲಿ ಸದಸ್ಯರು ಎ. ಆರ್. ಪಿ. ಕಾರ್ಯಕ್ರಮ ನಡೆಸಲು ಸಂಸ್ಥಾನದಲ್ಲಿ ಒಟ್ಟಿನಲ್ಲಿ ಖರ್ಚಾಯಿತು? ಅದನ್ನು ತೆಗೆದ ಮೇಲೆ ಖರ್ಚೆಷ್ಟಾಯಿತು? ಎಂದು ಕೇಳಿದರು. ಕಾರ್ಯಕ್ರಮ ನಡೆಸಲು ಹಿಂದೆ ೦೦ ರೂ ತೆಗೆಯುವುದಕ್ಕೆ ಆದೇಶ ೦೦ ರೂ ಎಂದು ಸರ್ಕಾರದವರು ಉತ್ತರ ಕೊಟ್ಟರು.

ಹಳ್ಳಿಗಾಡಿನ ಡಿಪೋಗಳು

ಪ್ರ—ಸಂಸ್ಥಾನದಲ್ಲಿ ಹಳ್ಳಿಗಾಡಿನಲ್ಲಿ ರೇಷನ್ ಜಾರಿಗೆ ತಂದಿದ್ದೀರಾ? ಉ—ಇಲ್ಲ.

ಪ್ರ—ಏನು ಕಾರಣ ಕಾರ್ಯವಿಲ್ಲವೆ?

ಉ—ಒಟ್ಟಾಯ ಬಂದರೆ ಯಾವುದಾದರೊಂದು ಭಾಗದಲ್ಲಿ ನಡೆಸಿಕೊಡಲಾಗುವುದು. ಪ್ರ—ಈಗನ್ನು ಡಿಪೋಗಳಾಗಿವೆ ಉ—೧೦೦೦.

ನಾಳೆಯೂ ಉಂಟು

ನ್ಯಾ. ವಿ. ಸಭೆಯು ನಾಳೆಯೂ ಉಂಟು ೬-೭ ನೆಯ ತಾ॥ ನಡೆಯಬಹುದೆಂದು ತಿಳಿಯಬರುತ್ತೆ.

ಕೊಲಿಗಾರರ ಸಮ್ಮೇಳನ

ಪ್ರ—ಶ್ರೀ ಎ. ಜಿ. ರಾಮಚಂದ್ರರಾವ್—ಸಂಸ್ಥಾನದಲ್ಲಿ ಕೂಲಿಗಾರರ ಸಮ್ಮೇಳನಕ್ಕೆ ಫಿಲಿಡರ್ ಬ್ಲಾಕ್—ವ್ಯವಸಾಯಗಳ ಆಹ್ವಾನ ಬಂದಿತ್ತೆ?

ಉ—ಶ್ರೀ ಗುಂಡಪ್ಪಗೌಡರು—ಮೈಸೂರಿಗೆ ಯಾವ ಆಹ್ವಾನವೂ ಬಂದಿಲ್ಲ. ಅದೆಲ್ಲ ಭಾರತದ ಒಟ್ಟು ವ್ಯವಸ್ಥೆ.

ಸಹಕರ ಹೆಚ್ಚಿಸಬೇಕು

ಶ್ರೀ ಕೆಂಚೇಗೌಡರು, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ರೇಷನನ್ನು ಹೆಚ್ಚಿಸಬೇಕೆಂಬ ನಿರ್ಣಯವೊಂದನ್ನು ತಂದರು. ಅದಕ್ಕೆ ಸದಸ್ಯರೂ ಇತರ ಸದಸ್ಯರೂ ಅನೇಕರು ಬೆಂಬಲವಿತ್ತು ಮಾತನಾಡಿದರು. ಅದಕ್ಕೆ ಆಹಾರ ಸಚಿವರು—ಸದ್ಯವಾದ ಮಟ್ಟಿಗೂ ಹೆಚ್ಚಿಗೆ ಕೊಡಲಾಗುತ್ತೆ. ಆದೇ ನಮ್ಮ ಉದ್ದೇಶ. ಇದೇ ಸಂಸ್ಥಾನದ ಪ್ರಜೆಗಳ ಹಿತವೃಷ್ಟಿಯಿಂದ ಪ್ರಕೃತ ಹೆಚ್ಚಿಸಲು ಸಾಧ್ಯವೇ ಇಲ್ಲ. ಆಡ್ಡಿಗಳನ್ನು ಶಮನ ಮಾಡುವುದರಲ್ಲಿ ನೌಕರರುಗಳು ತಪ್ಪು ಮಾಡುತ್ತಿರಬಹುದು. ಅಂಥವರುಗಳನ್ನು ಜನರು ನಮ್ಮ ಗಮನಕ್ಕೆ ತಂದು ಸಹಕರಿಸಬೇಕು. ತಕ್ಕ ನ್ಯಾಯವನ್ನು ಮಾಡುತ್ತೇವೆ ಎಂದು ಉತ್ತರ ಕೊಟ್ಟರು. ನಿರ್ಣಯವು ವಾಪಸು ತೆಗೆದುಕೊಳ್ಳಲ್ಪಟ್ಟಿತು.

ನಂ. ಆರ್. ಜಿ. ೨೦೭೩ —೪೪-೪೫.

ರೇಷನಿಂಗ್ ಆಫೀಸ,
ಮೈಸೂರು
ತಾ॥ ೩೦-೬-೧೯೪೪

ನೋಟೀಸು ಕೇಳಿರಿ

ಹೊಸ ಕಾರ್ಡುಗಳ ಬರೆಯುವಿಕೆ ವಿಚಾರದಲ್ಲಿ ೩೦-೬-೪೪ ರವರೆಗೆ ಟಿಕ್ಕೆಟ್‌ರೆಷನ್ ಕಾರ್ಡನ್ನು ಭರ್ತಿಯಿಂದ ಸಂಬಂಧಪಟ್ಟ ಡಿಪೋಗಿಗೆ ಕೊಡಬೇಕೆಂಬ ಅವಧಿಯನ್ನು ೧೫-೭-೪೪ ರವರೆಗೆ ಮುಂದಿಟ್ಟಿದೆ.

(ಸಹಿ) ಆರ್. ರಾಮಚಂದ್ರ ರಾವ್
ಬಾಂಬೋರೆ.
ರೇಷನಿಂಗ್ ಆಫೀಸರ್ ಮೈಸೂರು ಸಿಟಿ

...ಸ್ಥಳೀಯ ಟಿಪ್ಪಣಿಗಳು

[illegible]

ಪತ್ರ ವ್ಯವಹಾರ

ಮೈಸೂರು ನಗರದ ಧರ್ಮದರ್ಶಿತ್ವ

ಈಚೆಗೆ ಜಗತ್ತಿನಲ್ಲಿ ಏನೇನೋ ನಡೆದು ಹೋಗುತ್ತಿದೆ. ಅವೆಲ್ಲವೂ ಸಾರ್ವಜನಿಕರಿಗೆ ಗೊತ್ತಾಗುತ್ತದೇ ಇಲ್ಲ. ...

ಮೈಸೂರು ನಗರದ ಟ್ರಸ್ಟ್ ಬೋರ್ಡ್‌ನಲ್ಲಿ ನಡೆದ ಒಂದು ಪ್ರಸಂಗ ಈಗ ಬೆಳಕಿಗೆ ಬಂದಿದೆ. ... ಟ್ರಸ್ಟ್ ಬೋರ್ಡಿನ ... ಧರ್ಮದರ್ಶಿಗಳ ...

[illegible]

ನವ ಯೌವನ

ಕೂಟ್ಟು, ... ಬಲಹೀನತೆ, ... ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೀ ... ಮದನಮಂಜರಿ ... ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ, 184 ... ಬಜಾರು, ಮದರಾಸು

ಅಶೋಕಾ ಫಾರ್ಮಸಿ ... ಮೈಸೂರು,

ಗುಂಡ್ಲುಪೇಟೆ: ಜಿ ಎಸ್. ಕೃಷ್ಣಸ್ವಾಮಿ

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು.

ಹರಾಜು ನೋಟೀಸ್

... ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ :—

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಕೆಲವು ... ನಿವೇಶನಗಳನ್ನು ... ಹರಾಜು ...

ಆರ್. ರಾಮಚಂದ್ರರಾವ್ ... ಚೇರ್ಮನ್

[illegible]

ವೃತ್ತಿ ಲೋಕದ ... ಟ್ರಸ್ಟ್ ಬೋರ್ಡ್ ... ಧರ್ಮದರ್ಶಿ ...

[illegible]

ನಿರ್ಧರಂತ ಅಧಿಕಾರಿಗಳು

[illegible]

Edited printed and published by A. R. Nagarajan, at the Sadhvi Press, D. Subbiah Road, Mysore

[illegible]

ಸಂಪುಟ ೨] ಬುಧವಾರ ೫-೭-೪೪ [ಸಂಚಿಕೆ ೨೯೧

ಹಿಟ್ಲರ್-ಮುಸೋಲಿನಿ ಜಪಾನಿಗೆ ಓಡುವರೆ?

ಮೈಸೂರು ಟ್ರಸ್ಟ್ ಬೋರ್ಡ್ ನಡವಳಿಕೆ ರದ್ದಾಯಿತು

ಮಿತ್ರ ಸೈನ್ಯಗಳು ಉಕ್ರುಲ್ ಅನ್ನು ಹಿಡಿದವು

ಮಿತ್ರರು ಉಕ್ರುಲ್ ಹಿಡಿದರು

ಜಪಾನರ ರಕ್ಷಣಾ ಸ್ಥಾನಗಳಲ್ಲಿ ಪ್ರಮುಖ ಕೇಂದ್ರವಾದ ಉಕ್ರುಲ್ ಅನ್ನು ಮಿತ್ರರ ೧೪ ನೇ ಸೈನ್ಯವು ವಶಪಡಿಸಿಕೊಂಡಿದೆ. ಆ ಊರಿನ ರಕ್ಷಣೆಯನ್ನು ಜಪಾನರು ಸಾಕಾದಷ್ಟು ಮಾಡಿರಲಿಲ್ಲವೆಂದು ಗೊತ್ತಾಗಿದೆ. ಕೊಹಿಮಾ-ಇಂಫಾಲ್ ರಸ್ತೆಯ ಪೂರ್ವದಲ್ಲಿ ಪಾರ್ಟಂಗ್ ಎಂಬಲ್ಲಿ ಜಪಾನರ ಪ್ರತಿಭಟನೆಯು ತಕ್ಕ ಮಟ್ಟಿಗೆ ಬಲವಾಗಿದೆಯೆಂದು ಹೇಳಲಾಗಿದೆ.

ಬರ್ಮಾದಲ್ಲಿ ೧೦,೦೦೦ ಚ|| ಮೈಲಿ ವಶ

ಮಿತ್ರರು ಬರ್ಮಾದಲ್ಲಿ ೮ ತಿಂಗಳಲ್ಲಿ ಹತ್ತುಸಾವಿರ ಚ|| ಪ್ರದೇಶವನ್ನು ಆಕ್ರಮಿಸಿದ್ದಾರೆ ಒಂದು ಡಿವಿಜನ್ ಸೈನ್ಯಕ್ಕೆ ಬೇಕಾಗುವಷ್ಟು ಸಾಮಗ್ರಿಗಳನ್ನು ಹಿಡಿದಿದ್ದಾರೆ ೧೭೦೦ ಜಪಾನರು ಮಡಿದರು

ವೈಟ್ ರಷ್ಯಾ ರಾಜಧಾನಿ ವಶ

ಕೇವಲ ಅರ್ಧ ದಿನ ಮಾತ್ರ ನಡೆಸಿದ ಕದನದಲ್ಲಿ ರಷ್ಯನರು ೧೪ ರಷ್ಯ ರಾಜಧಾನಿಯಾದ ಮಿನ್ಸ್ಕ್ ನಗರವನ್ನು ಹಿಡಿದುಕೊಂಡರು ಅದನ್ನು ರಕ್ಷಿಸಲು ಜರ್ಮನರ ಪ್ರಯತ್ನವೆಲ್ಲಾ ವಿಫಲವಾಯಿತು ಇದರಿಂದ ಪೋಲೆಂಡ್ ರಾಜಧಾನಿ ವಾರ್ಸಾ ಮತ್ತು ಜರ್ಮನ್ ರಾಜಧಾನಿ ಬರ್ಲಿನ್ನುಗಳಿಗೆ ಭೀತಿಯು ಉಂಟಾಗಿದೆ

ಸೀನಾ ಆಕ್ರಮಣ

ಫ್ಲಾರೆನ್ಸಿನಿಂದ ೩೧ ಮೈಲಿ ದಕ್ಷಿಣಕ್ಕಿರುವ ಸೀನಾ ನಗರವನ್ನು ಮಿತ್ರ ಸೈನ್ಯಗಳು ಹಿಡಿದಿವೆ. ಜರ್ಮನರಿಗೆ ಸ್ಥಾನ ಪಲ್ಲಟವಾಗಿದೆ. ಓರ್ಯೋನೋವನ್ನು ಎಂಟನೇ ಸೈನ್ಯ ಹಿಡಿದಿದೆ ಅಮೇರಿಕದ ಯುದ್ಧ ಕಾರ್ಯದರ್ಶಿ ಸ್ಟಿಂಸನ್ನರು ಯುದ್ಧ ರಂಗಕ್ಕೆ ಭೇಟಿ ಇತ್ತಿರುವರು.

ನಂಗ್‌ಪೋ ದ್ವೀಪದಲ್ಲಿ ಅಮೇರಿಕನರು

ಫಿಲಿಪೈನ್ಸಿನಿಂದ ೮೦೦ ಮೈಲಿಯಲ್ಲಿ ಡಚ್ ನ್ಯೂಗಿನಿ ತೀರದಾಚೆ ಇರುವ ನಂಗ್‌ಪೋ ದ್ವೀಪದಲ್ಲಿ ಅಮೇರಿಕದ ಸೈನ್ಯಗಳು ಭಾನುವಾರ ಬಂದಿಳಿದುವು ಜಪಾನರು ಅವರನ್ನು ಪ್ರತಿಭಟಿಸಲಿಲ್ಲ. ಒಂದು ವಿಮಾನ ನಿಲ್ದಾಣವೂ ವಶವಾಗಿದೆ ಯುದ್ಧ ಹಡಗುಗಳು ಪೂರ್ವ ಭಾವಿಯಾಗಿ ದಾಳಿ ನಡೆಸಿದುವು.

ಜಪಾನ್ ನೆಲೆಗಳಲ್ಲಿ ಧಾಳಿ

ಜಪಾನಿನ ಒಳ ರಕ್ಷಣಾ ವ್ಯೂಹಕ್ಕೆ ಸೇರಿದ ಬ ನಿನ್ ದ್ವೀಪದ ಚಿಚಿಜಿಮಾ ಮತ್ತು ವಲ್ಕೇನೊ ದ್ವೀಪದ ಇವೋಜಿಮಾಗಳ ಮೇಲೆ ಮಿತ್ರ ವಿಮಾನಗಳು ಭಾರಿ ಧಾಳಿ ನಡೆಸುತ್ತಿವೆ ಜಪಾನಿನ ದಳಗಳು ಅವುಗಳನ್ನು ಪ್ರತಿಭಟಿಸುತ್ತಿವೆ.

ನಾಲ್ಕು ಮಕ್ಕಳ ಜನನ

ಒಂದೇ ಕಾಲದಲ್ಲಿ ನಾಲ್ಕು ಮಕ್ಕಳು ಹುಟ್ಟುವುದು ಅಪೂರ್ವ. ಈಚೆಗೆ ಇಂತಹ ಪ್ರಸಂಗಗಳು ವರದಿಯಾಗಿವೆ. ಟರ್ಕಿ ದೇಶದ ಮಾರ್ಡಿನ್ ನಗರದಲ್ಲಿ ಈಗ ನಾಲ್ಕು ಮಕ್ಕಳು ಒಟ್ಟಿಗೆ ಜನಿಸಿರುವುದಾಗಿ ಗೊತ್ತಾಗಿದೆ. ಎಲ್ಲಾ ಗಂಡು ಮಕ್ಕಳು, ಎಲ್ಲವೂ ಆರೋಗ್ಯವಾಗಿವೆ.

ಸ್ವಾತಂತ್ರ್ಯದ ಒಪ್ಪಿಗೆ

ಲೆಬನಾನ್ ಮತ್ತು ಸಿರಿಯಾ ರಿಪಬ್ಲಿಕ್ಕುಗಳ ಸ್ವಾತಂತ್ರ್ಯವನ್ನು ಟ್ರಾನ್ಸ್ ಜಾರ್ಡನ್ ಸರ್ಕಾರವು ಅಂಗೀಕರಿಸಿದೆ

ಲೀಗ್ ಸಭೆಯಲ್ಲಿ ಕುರ್ಚಿ-ಬೆಂಚುಗಳ ಹಾರಾಟ

ಲಕ್ನೋ ಪೌರಸಭೆಯ ಚುನಾವಣೆಯಲ್ಲಿ ಸ್ಪರ್ಧಿಸುವ ವಿಷಯವನ್ನು ಪರ್ಯಾಲೋಚಿಸುವಾಗ ಸಂಯುಕ್ತ ಪ್ರಾಂತ ಮುಸ್ಲಿಂ ಲೀಗ್ ಸಮಿತಿಯ ಸಭೆಯಲ್ಲಿ ವಿಶೇಷ ಕೋಲಾಹಲವಾಗಿ ಸದಸ್ಯರು ಕುರ್ಚಿ, ಮೇಜುಗಳಿಂದ ಹೊಡೆದಾಡಿದರು ಚುನಾವಣಾ ಸಮಿತಿಯ ರಚನೆಯಲ್ಲಿ ಎರಡು ಪಂಗಡಗಳಿಗೆ ಭಿನ್ನಾಭಿಪ್ರಾಯ ಹುಟ್ಟಿದುದೇ ಗಲಭೆಗೆ ಕಾರಣ. ಇದುವರೆಗೆ ಸುಮಾರು ೧೫ ಜನ ಪ್ರಮುಖ ಮುಸಲ್ಮಾನರು ಲೀಗಿಗೆ ರಾಜೀನಾಮೆ ಇತ್ತಿದ್ದಾರೆ

ವಿಶ್ವವಿದ್ಯಾನಿಲಯಕ್ಕೆ ನಿಧಿ

ಕಾಶಿ ಹಿಂದೂ ವಿಶ್ವವಿದ್ಯಾಲಯಕ್ಕೆ ಹಣವನ್ನು ಸಂಗ್ರಹಿಸಲು ವೈಸ್‌ಛಾನ್ಸಲರಾದ ಡಾ|| ರಾಧಾಕೃಷ್ಣನವರು ಹೈದರಾಬಾದಿನಲ್ಲಿ ಪ್ರವಾಸ ಮಾಡುತ್ತಿರುವರು ಅಲ್ಲಿ ಎರಡು ಲಕ್ಷ ರೂ ವಸೂಲಾಗಿದೆ. ರಾಜಾ ಧನರಾಜಗಿರ್‌ರವರೊಬ್ಬರೇ ೧ ಲಕ್ಷ ರೂ. ಕೊಟ್ಟಿರುವರು

ಸುಳ್ಳುಸುದ್ದಿಗೆ ೧ ವರ್ಷ

ಬೊಂಬಾಯಿನ ಬೆಂಕಿ ಅನಾಹುತದ ಬಗ್ಗೆ ಸುಳ್ಳು ಮತ್ತು ಗಾಬರಿಗೊಳಿಸುವ ಸುದ್ದಿಗಳನ್ನು ಹರಡಿದ್ದಕ್ಕಾಗಿ ಪೋಲೀಸು ಕೋರ್ಟಿನ ಮ್ಯಾಜಿಸ್ಟ್ರೇಟರು ಒಬ್ಬ ಹೆಂಚಿನ ಎಂಟು ಜನರಿಗೆ ಒಂದು ವರ್ಷ ಸಜಾ ಮತ್ತು ೫೦೦ ರೂ ಜುಲ್ಮಾನೆ ವಿಧಿಸಿರುವರು

ಯುದ್ಧ ಬೇಗ ಮುಗಿಯುತ್ತದೆ

ಆಗಾಖಾನರು ಸ್ವಿಟ್ಜರ್‌ಲೆಂಡಿನಿಂದ ಆಫ್ರಿಕಾದಲ್ಲಿರುವ ತನ್ನ ಶಿಷ್ಯರಿಗೆ ಒಂದು ಸಂದೇಶವನ್ನು ಕಳುಹಿಸಿ ಯುದ್ಧವು ಬೇಗನೆ ಮುಗಿದುಹೋಗುವುದಾಗಿ ತಮಗೆ ತೋರುತ್ತದೆಂದು ಹೇಳಿದ್ದಾರೆ

ಮ್ಯೂನಿಕ್‌ನಲ್ಲಿ ಮುತ್ತಿಗೆ ಪರಿಸ್ಥಿತಿ

ಮುಷ್ಕರಗಳೂ ದಂಗೆಗಳೂ ಮ್ಯೂನಿಕ್ ನಗರದಲ್ಲಿ ಆಗುತ್ತಲೇ ಇವೆ. ಆದ್ದರಿಂದ ಅಲ್ಲಿ ಮುತ್ತಿಗೆಯ ಪರಿಸ್ಥಿತಿಯುಂಟಾಗಿದೆಯೆಂದು ಘೋಷಿಸಲಾಗಿದೆ.

ವಿಯೆನ್ನಾ ನಗರ ಬರಿದಾಗುವುದು

ನಾಜಿ ಮುಖಂಡರುಗಳು ಇನ್ನೊಂದು ತಿಂಗಳ ಒಳಗೆ ವಿಯೆನ್ನಾ ನಗರದ ಪ್ರಜೆಗಳನ್ನು ಖಾಲಿ ಮಾಡಿಸುವಂತೆ ನಿರ್ಧರಿಸಿರುವುದಾಗಿ ಗೊತ್ತಾಗಿದೆ

ಹಿಟ್ಲರ್-ಮುಸೋಲಿನಿಗಳು ಓಡಿಹೋಗುವರೆ?

ಸೆರೆಯಾಗುವುದನ್ನು ತಪ್ಪಿಸಿಕೊಳ್ಳಲು ಹಿಟ್ಲರ್-ಮುಸೋಲಿನಿಗಳು ಜಪಾನಿಗೆ ವಿಮಾನದಲ್ಲಿ ಓಡಿ ಹೋಗಲು ಆಲೋಚಿಸುತ್ತಿದ್ದಾರೆಂದು ಇಸ್ತಾಂಬೂಲಿನ ಒಂದು ಸುದ್ದಿ ಹೇಳುತ್ತದೆ ಸೋತ ಹೋದ ಸೇನಾ ನಾಯಕರುಗಳನ್ನು ಗೆದ್ದ ರಾಷ್ಟ್ರಗಳ ರಾಜಧಾನಿಯ ರಾಜಬೀದಿಗಳಲ್ಲಿ ನಡೆಸಿಕೊಂಡು ಹೋಗಿ ಪ್ರದರ್ಶನ ಮಾಡುವ ಒಂದು ವಾಡಿಕೆಯು ಇತಿಹಾಸ ಪ್ರಸಿದ್ಧವಾಗಿದೆಯಷ್ಟೆ ಅದರಂತೆ ಹಿಟ್ಲರ್-ಮುಸೋಲಿನಿಗಳು ಬೊಂಬಾಯಿ, ಮದರಾಸ್, ಅಥವಾ ಕಲ್ಕತ್ತಾ ಬೀದಿಗಳಲ್ಲಿಯೂ ಪ್ರದರ್ಶಿಸಲ್ಪಡುವ ಸಂಭವ ಬರಬಹುದೆಂದು ಒಂದು ಲಂಡನ್ ವರದಿ ಹೇಳುತ್ತದೆ ಕೇನ್ ರಂಗದಲ್ಲಿ ಜರ್ಮನರ ಅದೃಷ್ಟವು ನಿರ್ಧಾರವಾಗುತ್ತಿದೆ. ಅದು ಮಿತ್ರ ವಶವಾದರೆ ಫ್ರಾನ್ಸಿನಲ್ಲಿ ಜರ್ಮನ್ ಬಲವು ನಿರ್ನಾಮವಾಗುವುದು.

ಇಂಗ್ಲೀಷ್ ಭಾಷೆಗೆ ೪೨ ಅಕ್ಷರ

ಈಗಿರುವ ೨೬ ಅಕ್ಷರಗಳಲ್ಲಿ ಎಲ್ಲಾ ಪದಗಳನ್ನೂ ಸರಿಯಾಗಿ ಬರೆಯಲು ಆಗುವುದಿಲ್ಲವೆಂತಲೂ ಹಲವು ಸಂದರ್ಭಗಳಲ್ಲಿ ಅಕ್ಷರಗಳು ವ್ಯರ್ಥವೂ ಆಗುತ್ತಿದೆಯೆಂದೂ ಆದ್ದರಿಂದ ತಾವು ಇಂಗ್ಲೀಷ್ ಭಾಷೆಗೆ ೪೨ ಅಕ್ಷರಗಳನ್ನು ಕಲ್ಪಿಸಿರುವುದಾಗಿಯೂ ಸುಪ್ರಸಿದ್ಧ ಲೇಖಕರಾದ ಮಿ|| ಜಾರ್ಜ್ ಬರ್ನಾರ್ಡ್ ಷಾರವರು ತಿಳಿಸಿದ್ದಾರೆ.

ಮಹಾತ್ಮರು

ಗಾಂಧಿಜಿಯವರು ಪಂಚಗನಿಯಲ್ಲಿ ನಾಲ್ಕು ದಿನಗಳಿರುವರು ಅವರ ಆರೋಗ್ಯ ಉತ್ತಮವಾಗುತ್ತಿದೆ. ಅವರ ರಕ್ತ ಒತ್ತಡ ಸ್ವಲ್ಪ ಹೆಚ್ಚಿತ್ತು ವಿಶ್ರಾಂತಿಯಿಂದ ಅವರ ಆರೋಗ್ಯ ಉತ್ತಮವಾಗುತ್ತದೆ

ಮಹಾಜನ ಹೈಸ್ಕೂಲ್

ವಾಣೀವಿಲಾಸಪುರದಲ್ಲಿರುವ ಮಹಾಜನ ಹೈಸ್ಕೂಲಿನ ಸಾಹಿತ್ಯ ಸಂಘವು ಪ್ರಿಯರಾದ ದಿವಂಗತ ಕಸ್ತೂರಿ ಬಾ ರವರ ಭಾವಚಿತ್ರವನ್ನು ಶ್ರೀ ಸಿದ್ದಪ್ಪನಹಳ್ಳಿ ಕೃಷ್ಣಶರ್ಮರಿಂದ ಅನಾವರಣ ಮಾಡಿಸಲು ಏರ್ಪಾಟು ನಡೆಯುತ್ತಿದೆಯೆಂದು ತಿಳಿದು ಬಂದಿದೆ

ನ್ಯಾಯವಿಧಾಯಕ ಸಭೆ

ಸ್ವಂ ಸು. ಪ್ರೋ] ಬೆಂಗಳೂರು ೩

ಮೈಸೂರು ಟ್ರಸ್ಟ್ ಬೋರ್ಡ್ ನಡವಳಿಕೆ ರದ್ದಾಯಿತು

ಈ ದಿನ ನ್ಯಾಯವಿಧಾಯಕ ಸಭೆಯಲ್ಲಿ ಮೊನ್ನೆ ನಡೆದ ಮೈಸೂರು ಟ್ರಸ್ಟ್ ಬೋರ್ಡ್ ನಡವಳಿಕೆಯ ಅಕ್ರಮದ ವಿಚಾರವಾಗಿ ಶ್ರೀ|| ಎ ಜಿ ರಾಮಚಂದ್ರರಾಯರೂ ಪೌರ ಸಭೆಯಲ್ಲಿ ನಡೆದ ಅಕ್ರಮ ನಡವಳಿಕೆ ವಿಚಾರವಾಗಿ ಶ್ರೀ|| ಟಿ. ಮರಿಯಪ್ಪನವರೂ ನಿಲುವಳಿ ಸೂಚನೆಗಳನ್ನು ತಂದರು.

ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ|| ಎಚ್. ಬಿ ಗುಂಡಪ್ಪಗೌಡರು ಉತ್ತರ ಕೊಡುತ್ತಾ, ಅಧ್ಯಕ್ಷರಿಗೂ, ಹೆಲ್ತ್ ಆಫೀಸರಿಗೂ ನಿವೇಶನಗಳನ್ನು ಕೊಡಿಸುಕೊಳ್ಳುವ ಅಂದಿನ ಟ್ರಸ್ಟ್ ಬೋರ್ಡ್ ನಡವಳಿಕೆಯನ್ನು ಅಕ್ರಮವೆಂದು ರದ್ದು ಮಾಡಲಾಗಿದೆ ಎಂದು ಉತ್ತರ ಕೊಟ್ಟರು

ಈ ಭರವಸೆಯ ಮೇಲೆ ಟ್ರಸ್ಟ್ ಬೋರ್ಡ್ ನಿಲುವಳಿ ಸೂಚನೆಯು ವಾಪಸು ತೆಗೆದುಕೊಳ್ಳಲ್ಪಟ್ಟಿತು. ಇದು ಈ ರೀತಿ ತೀರ್ಮಾನವಾದ್ದರಿಂದ ಪೌರ ಸಭಾ ಕಾರ್ಯಕಲಾಪಗಳ ಪ್ರಶ್ನೆಯು ಏಳುವುದಿಲ್ಲವಾದ್ದರಿಂದ ಆ ಸೂಚನೆಯೂ ವಾಪಸ್ಸು ತೆಗೆದುಕೊಳ್ಳಲ್ಪಟ್ಟಿತು.

ಕೋರಂ ಇರಲಿಲ್ಲ

ಈ ದಿವಸ ೧೨॥ ಗಂಟೆಗೆ ನ್ಯಾಯವಿಧಾಯಕ ಸಭೆಯು ಆರಂಭವಾಗುವ ವೇಳೆಗೆ ಸಭೆಯಲ್ಲಿ ಕೋರಂ ಇಲ್ಲದೆ ೧ ಗಂಟೆಗೆ ಕಾರ್ಯಕಲಾಪಗಳು ಆರಂಭವಾದುವು.

ಸಚಿವರು ದ ಶ್ರೀ ಅಪ್ಪಾಜಿಗೌಡರು ಮಾತ್ರ ಸಕಾಲಕ್ಕೆ ಬಂದಿದ್ದರು ಅರ್ಧ ಕ್ಕಿಂತ ಕಡಿಮೆ ಸದಸ್ಯರಿದ್ದರು.

ಕಾಂ|| ಪಾರ್ಟಿಯ ಸದಸ್ಯರು ಸಹ ಆ ವೇಳೆಗೆ ಬಂದಿರಲಿಲ್ಲ ಕಾರಣ ವಿಚಾರಿಸಲಾಗಿ ಶಹರ ಬಡಾವಣೆಯಲ್ಲಿ (ಲೇಕ್ ವ್ಯೂ) ಪಾರ್ಟಿ ಸಭಾಂಗಣದಲ್ಲಿ ಊಟೋಪಚಾರಗಳು ತಡವಾಯಿತೆಂದು ತಿಳಿಯ ಬಂದಿತು.

ಅಧ್ಯಕ್ಷರು ಸಕಾಲಕ್ಕೆ ಬಂದು ೩ ನಿಮಿಷ ಕಾಲ ಕಾದು ಅನಂತರ ೧ ಗಂಟೆಗೆ ಸೇರೋಣವೆಂದು ಹೇಳಿ ಎದ್ದು ಹೋದರು. ಮತ್ತೆ ೧ ಗಂಟೆಗೆ ಸಭೆ ಸೇರಿತು.

ದಿವಾನರೂ ಬಂದಿದ್ದರು

ಈ ದಿನ ನ್ಯಾಯವಿಧಾಯಕ ಸಭೆಯಲ್ಲಿ ಇದೆ ಮೊದಲನೆಯ ದಾಗ ದಿವಾನರವರು ಸರ್ಕಾರದ ಕಡೆ ಕುಳಿತಿದ್ದರು. ಅಧ್ಯಕ್ಷರ ಪಕ್ಕದಲ್ಲಿ ಆಸನವನ್ನು ಅಲಂಕರಿಸಿದ್ದರು

ಆಹಾರ ಪ್ರಶ್ನೆ

ನಿನ್ನೆ ನ್ಯಾಯವಿಧಾಯಕ ಸಭೆಯಲ್ಲಿ ಡಿಕ್ಲೇರ್ ಹೋಲ್ಡರುಗಳಿಗೆ ೧ ಸೇರು ಪಡಿ ಕೊಡಬೇಕೆಂದು ಶ್ರೀ ತಿಪ್ಪೇಗೌಡರು ತಂದ ನಿರ್ಣಯವು ಸಚಿವರ ಉತ್ತರಾನಂತರ ವಾಪಸ ತೆಗೆದುಕೊಳ್ಳಲ್ಪಟ್ಟಿತು.

ಆದಿ ಜಾಂಬವ ಹಾಸ್ಟಲ್

ಮೈಸೂರು ೧

ಕಳೆದ ಭಾನುವಾರ ಮೈಸೂರು ದಳವಾಯಿ ಆದಿ ಜಾಂಬವರು ೨೦ ಜನ ವಿದ್ಯಾರ್ಥಿಗಳಿಗೆ ಆಗುವ ಒಂದು ಹಾಸ್ಟಲನ್ನು ಪ್ರಾರಂಭ ಮಾಡಿದರು. ಶ್ರೀ|| ಎಸ್. ಎ ಸ್ವಾಮಿಗೌಡರವರು ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು ಶ್ರೀ|| ಕೆ. ರೇವಣ್ಣ ಸಿದ್ದಯ್ಯನವರೂ, ಇತರರೂ ಸಂಘದ ಪರವಾಗಿ ಆದಿ ಜಾಂಬವರ ವಿದ್ಯಾಭ್ಯಾಸಕ್ಕೆ ಸರ್ಕಾರದ ಸಹಾಯ ಬರಬೇಕೆಂದು ಕೋರಿದರು.

ಕೌನ್ಸಿಲಿನ ಕಿಡಿಗಳು

ಸ್ವಂ.ಸು.] ಬೆಂಗಳೂರು ೪

೧೩೪ [illegible] ಆಜ್ಞೆಯಲ್ಲಿರುವುದ [illegible] ಪಟ್ಟಿಗೆ ಧಾನ್ಯವನ್ನು ಕೊಡಬೇಕು ಎಂಬ [illegible] ಉಲ್ಲಂಘಿಸಿ ದ [illegible]? ಉ—ಇಲ್ಲ

[illegible] ದವಸ [illegible]?

ಉ—ಇಲ್ಲ. [illegible] ದವಸ [illegible] ಇಲ್ಲದವರು [illegible] ಬೇಕು.

ಅಕ್ಟೋಬರಿಗೆ ಮುಂಚೆ ಹಿಂದೂಸ್ಥಾನಕ್ಕೆ ಅಮೇರಿಕದಿಂದ ೪ ಲಕ್ಷ ಟನ್ ಗೋಧಿ ತರಿಸಲು ಏರ್ಪಾಡಾಗಿದೆ. ಇದುವರೆಗೆ ೮ ಲಕ್ಷ ಟನ್ ತರಿಸಿದಂತಾಗುತ್ತದೆ. ಮುಂದಿನ ತಿಂಗಳಲ್ಲಿಯೂ ನವೆಂಬರಿನಲ್ಲಿಯೂ ಆಹಾರ ಸ್ಥಿತಿಯನ್ನು ಪುನರ್ವಿಮರ್ಶೆಮಾಡಲಾಗುವುದು

ಮಹಾತ್ಮರಿಗೆ ಮಾನಪತ್ರ

ಪಂಚಗನಿಯಲ್ಲಿ ಗಾಂಧೀಜಿಯವರು ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಅವರಿಗೆ ಪೌರಸಭೆಯು ಪರವಾಗಿ ಬಿನ್ನವತ್ತಳೆಯನ್ನರ್ಪಿಸಬೇಕೆಂದು ನಿರ್ಧಾರವಾಗಿದೆ ಆದರೆ ತಮ್ಮ ದೇಹಸ್ಥಿತಿಯು ತೃಪ್ತಿಕರವಾಗಿಲ್ಲದಿರುವುದರಿಂದ ಗಾಂಧೀಜಿಯವರು ಇದಕ್ಕೆ ಒಪ್ಪುವರೋ ಇಲ್ಲವೋ ತಿಳಿಯದು.

ಜರ್ಮನರು ಲಾಹಾಯೆ ಡಿ ಪುಟ್ಸ್ ತ್ಯಜಿಸಿದರು

ನೆನ್ನೆ ರಾತ್ರಿ ಜರ್ಮನರು ಲಾಹಾಯೆ ಡಿ ಪುಟ್ಸನ್ನು ಖಾಲಿಮಾಡಿದ್ದಾರೆಂದು ತಿಳಿಸಿದ್ದಾರೆ ಬ್ರಿಟಿಷರು ಕೇನ್ ಮೇಲೆ ಧಾಳಿ ಮಾಡಿ ಒಂದೇ [ಗಂಟೆಯೊಳಗೆ ಮುಖ್ಯಸ್ಥಾನಗಳನ್ನೆಲ್ಲಾ ಹಿಡಿದರು. ೭ ಮೈಲಿ ವಿಸ್ತಾರದ ಕ್ಷೇತ್ರದಲ್ಲಿ ಬಿರುಸಾದ ಕದನ ನಡೆಯುತ್ತಿದೆ. ಶತ್ರು ಧಾಳಿಯನ್ನು ತಡೆಯಲು ಜರ್ಮನರು ತಮ್ಮ ಕೈಲಾದ ಪ್ರಯತ್ನವನ್ನೆಲ್ಲಾ ಮಾಡುತ್ತಿದ್ದಾರೆ. ಹಲವು ಗ್ರಾಮಗಳು ಈಗಾಗಲೇ ವಿಮುಕ್ತವಾಗಿವೆ

ಲಂಡನ್-ಜರ್ಮನಿ

ಲಂಡನ್ ಮೇಲೆ ಜರ್ಮನರ ಭೂತವಿಮಾನ ಧಾಳಿಯೂ, ಜರ್ಮನಿ ಮೇಲೆ ಅಮೆರಿಕ ಫ್ಲೈಯಿಂಗ್ ಫೋರ್ಟ್ರೆಸ್ ಮತ್ತು ಲಿಬರೇಟರ್ ವಿಮಾನಗಳ ಧಾಳಿಯೂ ಉಗ್ರವಾಗಿ ನಡೆಯುತ್ತಿವೆ. ನೂರಾರು ಜರ್ಮನ್ ವಿಮಾನಗಳು ನಷ್ಟವಾದುವು ಲಂಡನಿನಿಂದ ೧೫೦೦೦ ಮಕ್ಕಳನ್ನು ಹೊರಕ್ಕೆ ಸಾಗಿಸಿ ನಗರವನ್ನು ಸಾಧ್ಯವಾದಷ್ಟು ಜನಸಂದಣಿಯಿಲ್ಲದಂತೆ ಖಾಲಿಮಾಡಲಾಗುತ್ತಿದೆ

ಉಕ್ರುಲ್‌ನಲ್ಲಿ ಭೀಕರ ಕದನ

ಜಪಾನರು ಉಕ್ರುಲ್-ಇಂಫಾಲ್ ರಸ್ತೆಯಲ್ಲಿ ಇನ್ನೂ ಅನೇಕ ಮುಖ್ಯ ಸ್ಥಾನಗಳನ್ನು ಬಿಟ್ಟು ಹಿಂದಕ್ಕೆ ಸರಿದಿರುವರು ಉಕ್ರುಲ್ ಗ್ರಾಮದಲ್ಲಿ ಭೀಕರ ಕದನವಾಗುತ್ತಿದೆ. ಮಾರ್ಚಿ ತಿಂಗಳಿಂದ ಇಂಫಾಲ್ ನಗರ ರಕ್ಷಕರು ಹನ್ನೊಂದು ಸಾವಿರ ಜಪಾನರನ್ನು ಕೊಂದಿದ್ದಾರೆ ಉಕ್ರುಲ್ ಉತ್ತರ ಭಾಗದ ಹೊರಹೊಲಯದಲ್ಲಿ ಜಪಾನರು ಇನ್ನೂ ಬೇರೂರಿದ್ದಾರೆ ಇತರ ಕಡೆ ಅವರನ್ನು ಓಡಿಸಲಾಗುತ್ತಿದೆ.

ನಾರ್ಮಂಡಿ

ಚೆರ್ಬರ್ಗ್ ಪರ್ಯಾಯ ದ್ವೀಪದಲ್ಲಿ ಅಮೆರಿಕ ಸೇನೆಗಳು ಹೊಸ ಧಾಳಿ ಮತ್ತು ಆಕ್ರಮಣ ನಡೆಸಿದುವು. ಆಕ್ರಮಣಕ್ಕೆ ಮುಂಚೆ ಫಿರಂಗಿಗಳಿಂದ ಗುಂಡಿನ ಮಳೆ ಸುರಿಸಲಾಯಿತು. ಜರ್ಮನರ ಪ್ರತಿಭಟನೆಯನ್ನು ಸಹಿಸಿಕೊಂಡು ಅವರ ಎಂಜಿನಿಯರುಗಳು ಸೈರ್ ನದಿಗೆ ತಾತ್ಕಾಲಿಕ ಸೇತುವೆಗಳು ಕಟ್ಟಿ ಸಿದ್ಧಮಾಡಿದರು.

ಬರ್ಮಾ ಕ್ಷೇತ್ರದಲ್ಲೂ ಹಾರುವ ಬಾಂಬುಗಳು

ವೈಮಾನಿಕನಿಲ್ಲದ ಬಾಂಬುಗಳು ಲಂಡನ್ ಮೇಲೆ ಹಾವಳಿ ಮಾಡುತ್ತಿವೆಯಷ್ಟೆ. ಬರ್ಮಾರಂಗದಲ್ಲಿಯೂ ಈ ಒಂದು ವಿಮಾನವು ಮಾಡಿದ ನಿಷ್ಫಲ ಸಾಹಸವನ್ನು ಮಿತ್ರ ವೈಮಾನಿಕರೊಬ್ಬರು ಹೀಗೆ ವರ್ಣಿಸಿರುವರು-ಈ ವಿಮಾನವು ತನ್ನ ನೆಲೆಯ ಮೇಲೆಯೇ ಹಾರಲು ಪ್ರಯತ್ನಿಸಿ ವಿಫಲವಾಗಿ ಅದರ ಟೈರು ನೆಲದ ಮೇಲೆಯೇ ಬರ್ಸ್ಟ್ ಆದುದರಿಂದ ಬಹಳ ಮೇಲಕ್ಕೆ ಹಾರಲಾರದೆ ಸ್ವಲ್ಪ ದೂರದಲ್ಲಿಯೇ ಕೆಳಕ್ಕೆ ಬಿದ್ದು ಒಡೆದು ಭಾರಿ ಸರ್ಕಸ್ ನೋಟವನ್ನೇ ಉಂಟುಮಾಡಿತು ಮಿತ್ರ ವೈಮಾನಿಕನು ಈ ದೃಶ್ಯವನ್ನು ತನ್ನ ವಿಮಾನದಿಂದ ನೋಡುತ್ತಿದ್ದನು ಮೇಲ್ಗಡೆ ವಿಮಾನವು ದೂರದಲ್ಲಿ ಕಾಡಿನ ಮರಗಳಿಗೆ ಡಿಕ್ಕಿ ಹೊಡೆದು ನುಚ್ಚುನೂರಾಯಿತು. ಆನೆಗಳು ಅದರ ಚೂರುಗಳನ್ನು ಚೆಲ್ಲಾಡಿದವು.

ಜಪಾನಿನ ಪ್ರಧಾನಿಯ ಹೇಳಿಕೆ

ಜಪಾನಿನ ಪ್ರಧಾನ ಮಂತ್ರಿ ಟೋಜೋರವರು ಹೀಗೆ ಹೇಳಿದ್ದಾರೆ:- ಜಪಾನ್ ರಾಷ್ಟ್ರಕ್ಕೆ ಅಪಾಯ ಸಂಭವಿಸಿದೆ. ಈ ಸಮಯದಲ್ಲಿ ಪ್ರತಿಯೊಬ್ಬರೂ ತಮ್ಮ ಜೀವನಕ್ಕೆ ಅಪಾಯ ಸಂಭವಿಸಿದೆಯೆಂದು ತಿಳಿದು ತಮ್ಮ ಸರ್ವಶಕ್ತಿಯನ್ನೂ ದೇಶಕ್ಕಾಗಿ ವಿನಿಯೋಗಿಸಬೇಕು ಇನ್ನು ೧೦ ಅಥವಾ ೨೦ ವರ್ಷಗಳವರೆಗೆ ಸಾವು ಇಂತಹ ಯುದ್ಧವನ್ನು ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಅತ್ಯಲ್ಪ ಸಾಮಗ್ರಿಗಳನ್ನೇ ಉಪಯೋಗಿಸಬೇಕು ವಿಮಾನ ಧಾಳಿಗೆ ತುತ್ತಾಗಿರುವ ಪ್ರದೇಶದಲ್ಲಿರುವರೆಲ್ಲರೂ ಎಲ್ಲರೂ ಪರಿಗಣಿಸಬೇಕು

ನೀರು ಬಿದ್ದು ಮುಳುಗಿ ನುಚ್ಚಿತು

ಮೈಸೂರು ೭

ಮೈಸೂರು ಮುನಿಸಿಪಾಲಿಟಿ ಕೌನ್ಸಿಲರ್ ಶ್ರೀ [illegible] ಎಂಬುವರು ನೆನ್ನೆ [illegible] ಮನೆಯ ಮೇಲೆ ಏನೋ ನೀರು ಬಿದ್ದು [illegible] ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತಿದ್ದಾರೆ.

ಜಿನ್ನಾ-ರಾಜಾಜಿ ವ್ಯವಹಾರ

ಕೆಲವು ಸಮಯದ ಹಿಂದೆ ಒಂದು ನಾಯಕರು ಶ್ರೀ ಸಿ. ರಾಜಗೋಪಾಲಾಚಾರಿಯವರು ಗಾಂಧೀಜಿಯವರ ಸಮ್ಮತಿಯಿಂದ ಮಿ॥ ಜಿನ್ನಾರವರೊಡನೆ ಲೀಗ್-ಕಾಂಗ್ರೆಸ್ ಸಂಧಾನದ ಸೂಚನೆಗಳನ್ನು ನಡೆಸಿದರು. ಆದರೆ ಅವು ಸಫಲವಾಗಿಲ್ಲವೆಂದು ತಿಳಿಯಬಂದಿದೆ ಪ್ರಕಟವಾಗಿರುವ ಈ ಪತ್ರವ್ಯವಹಾರದಲ್ಲಿ ಕೆಳಗೆ ಕಂಡ ಅಂಶಗಳಿವೆ:—

೧ ಕಾಂಗ್ರೆಸ್ಸಿನ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಮುಸ್ಲಿಂಲೀಗು ಅಂಗೀಕರಿಸಬೇಕು. ೨. ಕೇಂದ್ರದಲ್ಲಿ ಒಂದು ಹಂಗಾಮಿ ಸರ್ಕಾರವನ್ನು ಸ್ಥಾಪಿಸಲು ಕಾಂಗ್ರೆಸ್ಸಿನೊಡನೆ ಸಹಕರಿಸಬೇಕು ೩. ಮುಸಲ್ಮಾನರು ಸ್ಪಷ್ಟವಾಗಿ ಬಹುಸಂಖ್ಯೆಯಲ್ಲಿರುವ ವಾಯುವ್ಯ ಮತ್ತು ಪೂರ್ವ ದೇಶಗಳಲ್ಲಿ ಪ್ರತ್ಯೇಕ ಜಿಲ್ಲೆಗಳನ್ನು ರಚಿಸಲು ಒಂದು ಸಮಿತಿಯನ್ನು ಏರ್ಪಡಿಸಲಾಗುವುದು ೪. ಎಲ್ಲಾ ಪಂಗಡದವರೂ ಇದಕ್ಕೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದು. ೫ ಪ್ರತ್ಯೇಕ ಪ್ರಾಂತವನ್ನು ಸ್ಥಾಪಿಸುವ ಸಂದರ್ಭದಲ್ಲಿ ರಕ್ಷಣೆ, ವ್ಯಾಪಾರ, ಮಾರ್ಗಾನುಕೂಲ ಮುಂತಾದುವುಗಳ ಬಗ್ಗೆ ಪರಸ್ಪರ ಒಪ್ಪಂದವಾಗತಕ್ಕದ್ದು. ೬ ಕೇವಲ ಸ್ವಯಂ ಪ್ರೇರಣೆಯಿಂದ ಜನಸಂಖ್ಯೆಯನ್ನು ವರ್ಗಾಯಿಸತಕ್ಕದ್ದು ೭ ಬ್ರಿಟನ್ನು ಹಿಂದೂಸ್ಥಾನದ ಸಂಪೂರ್ಣ ಅಧಿಕಾರ ಹಕ್ಕನ್ನು ವರ್ಗಾಯಿಸಿ ಕೊಟ್ಟರೇನೇ ಈ ಷರತ್ತುಗಳು ಜಾರಿಗೆ ಬರುವುವು

ಪ್ರಭುಗಳ ವರ್ಧಂತಿ ಮೆರವಣಿಗೆ ಮಾರ್ಗ

ಮೈಸೂರು ೧೦.

ನಾಳೆ ನಮ್ಮ ಪ್ರಭುಗಳ ವರ್ಧಂತಿ, ೧೨ ಗಂಟೆಗೆ ಸೆಷ್ಟೆಯಲ್ಲಿ ದರ್ಬಾರ, ಸಂಜೆ ೬॥ ಗಂಟೆಗೆ ಮೆರವಣಿಗೆಯು ಅರಮನೆಯಿಂದ ಹೊರಟು ಅಶೋಕ ರೋಡ್ (ದೊಡ್ಡಪೇಟೆ) ಹಳೆ ಬಾಡಿಗಾರ್ಡ್ ಲೈನ್, ದಾವೂದ್‌ಖಾನ್ ರಸ್ತೆಯ ಮೂಲಕ ಗೌರ್ನಮೆಂಟ್ ಹೌಸಿಗೆ ಸೇರುವುದು. ಅಲ್ಲಿನ ಕಾರ್ಯಕಲಾಪಗಳಾದ ನಂತರ ಮೆರವಣಿಗೆಯು ಗೌ॥ ಹೌಸಿನಿಂದ ಹಾರ್ಡಿಂಗ್ ಸರ್ಕಲ್ ಮೂಲಕ ಬಂದು ಅರಮನೆಗೆ ಸೇರುವುದು ಹಿಂದೆ ಗೊತ್ತಾಗಿದ್ದಂತೆ ಸಯ್ಯಾಜಿರಾವ್ ರಸ್ತೆಯಲ್ಲಿ ಮೆರವಣಿಗೆ ಬರುವುದಿಲ್ಲ

೧೫ ನೆಯ ಅ. ಭಾ. ಫುಟ್‌ಬಾಲ್ ಟೂರ್ನಮೆಂಟ್, ಮೈಸೂರು

೧೫ ನೆಯ ಅಖಿಲ ಭಾರತ ಫುಟ್‌ಬಾಲ್ ಟೂರ್ನಮೆಂಟು ಆಗಸ್ಟ್ ಒಂದನೇ ತಾ॥ ನಿಂದ ಮೈಸೂರಿನಲ್ಲಿ ನಡೆಯುವುದು ಎಲ್ಲಾ ಸ್ಕೂಲು ಕಾಲೇಜು ತಂಡಗಳೂ [illegible] ಭಾಗವಹಿಸಬಹುದು. ಇದಕ್ಕೆ ಶ್ರೀಮನ್ಮಹಾರಾಜರವರು ಪೋಷಕರು. ದಿವಾನರವರು ಅಧ್ಯಕ್ಷರು, ಮಿ॥ ಮೆಕಾಲ್ಸ್ಟರವರು ಉಪಾಧ್ಯಕ್ಷರು, ಶ್ರೀಗಳಾದ ಎಂ ಪಿ ಸುಬ್ರಹ್ಮಣ್ಯರಾಜ ಅರಸ್ ಮತ್ತು ಬಿ ಶ್ರೀನಿವಾಸಯ್ಯಂಗಾರ್ಯರು ಕಾರ್ಯದರ್ಶಿಗಳು ಮತ್ತು ಟ್ರಷರರು

ದಸರಾ ಪ್ರದರ್ಶನ

ಮೈಸೂರು ದಸರಾ ವಸ್ತುಪ್ರದರ್ಶನವು ಸೆಪ್ಟೆಂಬರ್ ೧೮ ನೇ [illegible] ನಿಂದ ಅಕ್ಟೋಬರ್ ೧೭ ನೇ [illegible] ೧೨ ದಿನಗಳು ಮಾತ್ರವಲ್ಲದಂತೆ ನಡೆಯುವುದು.

ವಿಚಿತ್ರ ಪ್ರಪಂಚ

ಮ್ಯಾಗ್ನೆಟಿಕ್ ಕರೆಂಟಿನಿಂದ ಮೋಟಾರು

ಪ್ರೊ|| ಫಲಿಕ್ ಎರ್ಲೆ ಹಾಫ್ಸ್ ಎಂಬುವರು [illegible] ವಿಶ್ವವಿದ್ಯಾನಿಲಯವೊಂದರಲ್ಲಿ ಕೇವಲ ಮ್ಯಾಗ್ನೆಟಿಕ್ ಕರೆಂಟಿನಿಂದಲೇ [illegible] ನಡೆಸಬಹುದೆಂಬುದನ್ನು [illegible] ಪ್ರದರ್ಶಿಸಿದರು [illegible]. ಇದಕ್ಕೆ ಇನ್ನೂ [illegible] [illegible] ಸ್ಟೈಕ್ಸ್‌ಲು ವಿದ್ಯಾರ್ಥಿಗ [illegible]. ಇದರಿಂದ [illegible] ನಾನಾ ಕಷ್ಟಗಳು [illegible]

[illegible] ಪಿಶಾಚನು

[illegible] ಒಬ್ಬ ಸ್ತ್ರೀಯು [illegible] ತನ್ನ ಹೆಂಡತಿಯಿಂದ ಒಂದು ಶಿಫಾರಸ [illegible] ಆಕೆ ಬರೆದ ಪತ್ರ [illegible]:-

ನನ್ನ ಗಂಡನ [illegible] ಆತನಿಗೆ [illegible] ಈ ಕಾಗದದ [illegible] ಆತನಿಗೆ [illegible]. [illegible] ನನಗೆ [illegible] ಒಕ್ಕೆಯಾದಾಗಿಲ್ಲ [illegible]. ಮೊಟ್ಟೆ [illegible]. ಆತನ [illegible] ಮಕ್ಕಳನ್ನು ನಾನು [illegible]. ಆತನನ್ನು [illegible] ಕರೆದುಕೊಂಡು ಹೋ[illegible] ಪತ್ರ ನೋಡಿ ಸ್ತ್ರೀಯು ಆವನನ್ನು ಎಳೆದುಕೊಂಡು ಹೋಯಿತು.

ವಿಮಾನ ಪ್ರಯಾಣದ ಖರ್ಚು

[illegible] ವಿಮಾನದಲ್ಲಿ [illegible] ಈ ರೀತಿ ಒಂದು [illegible] ತಯಾರಾಗುತ್ತಿದೆ:-

[illegible] ಪ್ಯಾರಿಸ್‌ಗೆ ವಿಮಾನದಲ್ಲಿ ಹೋಗಲು [illegible] ಪೌಂಡ್, ಬರ್ಲಿನ್ನಿಗೆ ಹೋಗಲು [illegible] ಪೌಂಡ್. [illegible] ಹೋಗಲು [illegible] ಪೌಂಡ್ ಛಾರ್ಜು.

ಬೇಗ ಕಳುಹಿಸಕೂಡದು

ಸಂಯುಕ್ತ ಪ್ರಾಂತ್ಯದಲ್ಲಿ (ಯು. ಪಿ.) [illegible] ರಹದಾರಿಯಿಲ್ಲದೆ [illegible] ನಿಷೇಧಿಸಲಾಗಿದೆ.

ಮನೆ ಬಾಡಿಗೆಗೆ ಕೊಡದಿದ್ದರೆ ಆತ್ಮಹತ್ಯೆ

"ನಾನು ನನ್ನ ಹೆಂಡತಿ ಮಕ್ಕಳನ್ನು ಬಾವಿಗೆ ತಳ್ಳಿಬಿಡಲೋ ಅಥವಾ ಮನೆ ಕೊಡುತ್ತೀರೊ" ಎಂದು ಒಬ್ಬಾತ ಕೆನಡಾದಲ್ಲಿ ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ. ಇದನ್ನು ನೋಡಿದ ಕೂಡಲೇ ೨೦೦ ಕಡೆಯಿಂದ ಮನೆ ಕೊಡುತ್ತೇವೆ ಬಾ ಎಂದು ಕರೆ ಬಂತಂತೆ!

ಮಕ್ಕಳಿಗೆ 'ಕರ್ಫ್ಯೂ' ಆಜ್ಞೆ

ಕ್ವಿಬೆಕ್‌ನಲ್ಲಿ ೧೫ ವರ್ಷದೊಳಗಿನ ಮಕ್ಕಳು ರಾತ್ರಿ ೯ ಗಂಟೆ ಮೇಲೆ ಹೊರಗೆ ಬರಬಾರದೆಂದು ಕರ್ಫ್ಯೂ ಆಜ್ಞೆ ಜಾರಿ ಮಾಡಿ ಆ ಬಗ್ಗೆ ಒಂದು ಸ್ವರ ಕೂಗಿಸುತ್ತಾರೆ

Edited, printed and published by A. R. Nagarajan, at the Sadhvi Press, D. Subbiah Road, Mysore.

ತಿಗಣೆ ಮತ್ತು ಹುಳುಗಳು ಆಹಾರ

ಕಾಡಿನಲ್ಲಿ ಬೇರೆ ಏನೂ ಆಹಾರ ದೊರೆಯದಿದ್ದರೆ ತಿಗಣೆಜಾತಿಯ ಹುಳುಗಳು, ಇರುವೆ ಮೊಟ್ಟೆ, ಮಿಡತೆ ಮುಂತಾದ ಹುಳುಗಳನ್ನು ತಿಂದು ಬದುಕಬಹುದು ಎಂದು ಅಮೆರಿಕಾ ಸೈನ್ಯಶಾಖೆಯವರು ಸೈನಿಕರಿಗೆ ಸಲಹೆಮಾಡಿದ್ದಾರೆ. ಈ ಬಗ್ಗೆ ಭಾರತದ ಶ್ರೀ ಹೆಚ್. ಸಿ ವಿ. ಶ್ರೀ ಕೆ ಮಿತ್ರ ಎಂಬುವರು ಅವುಗಳ ಗುಣದೋಷ ಪರೀಕ್ಷೆಮಾಡಿ ಶಿಫಾರಸ್ಸು ಮಾಡಿದ್ದಾರೆ.

ಗರಗಸದ ವಿಮಾನ

ಅಮೆರಿಕಾದಲ್ಲಿ ಗರಗಸದ ವಿಮಾನ ಕಂಡುಹಿಡಿದಿದ್ದಾರೆ. ವಿಮಾನದ ರೆಕ್ಕೆ ಕೆಳಗೆ ಗರಗಸದ ಹಲ್ಲುಗಳಂತೆ ಬಹಳ ದೊಡ್ಡ ಹರಿತವಾದ ಹಲ್ಲುಗಳಿವೆ. ಶತ್ರು ವಿಮಾನಗಳ ಮೇಲೆ ಒಂದು ಸಲ ಬಿಟ್ಟರೆ ಸಾಕು, ಕತ್ತರಿಸಿ ಹೋಗುತ್ತೆ. ಇದನ್ನು ಕಂಡುಹಿಡಿದಾತ "ಬ್ರಿಗೆಡಿಯರ್ ಜನರಲ್ ರಾಬರ್ಟ್ ಕಾಚ್" ಎಂಬ ವಿಮಾನ ಸೈನಿಕ

ಗಡಿಯಾರ ನಿಲ್ಲಿಸುವ ಹುಡುಗಿ

ಒಂದೇ ವಿಧವಾದ ಗಡಿಯಾರ ಒಬ್ಬರ ಕೈಲಿ ನಿಧಾನ, ಮತ್ತೊಬ್ಬರ ಕೈಲಿ ಬೇಗ, ಇನ್ನೊಬ್ಬರ ಕೈಲಿ ನಿಲ್ಲುವುದು, ನಡೆಯುವುದು ಇದೆಲ್ಲಾ ನಮ್ಮ ಅನುಭವದಲ್ಲಿದ್ದೇ ಇದೆ. ಆದರೆ ಇದಕ್ಕೆ ಕಾರಣವೇನೆಂಬುದು ಇನ್ನೂ ಸ್ಪಷ್ಟವಾಗಿ ಗೊತ್ತಾಗಿಲ್ಲ. ಈಗ ಅಮೆರಿಕಾದಿಂದ ಒಂದು ವಿಚಿತ್ರ ಸುದ್ದಿ ಬಂದಿದೆ. ಎಲ್ಸಾ ಕ್ಯಾರ್ರುಥೇರ್ಸ್ ಎಂಬೊಬ್ಬ ಹುಡುಗಿಯು, ಗಡಿಯಾರ ಮುಟ್ಟುವುದು ಕಟ್ಟಿಕೊಳ್ಳುವುದು ಬೇಕಾಗಿಲ್ಲ, ಗಡಿಯಾರ ಇರುವ ಕೋಣೆಗೆ ಹೋದರೆ ಸಾಕು ಗಡಿಯಾರ ಥಟ್ಟನೆ ನಿಂತು ಹೋಗುತ್ತೆ. ಈಗ ವಿಚಿತ್ರಕಂಡು ವಿಜ್ಞಾನಿಗಳು ಇದಕ್ಕೆ ಸರಿಯಾದ ಕಾರಣ ಕಂಡುಹಿಡಿಯಲು ತಲೆಕೆಡಿಸಿಕೊಳ್ಳುತ್ತಿದ್ದಾರೆ

ಒಂದಕ್ಕೆ ನಾಲ್ಕು

ಯುರೋಪಿನಲ್ಲಿ ಜರ್ಮನಿಗೆ ಒಂದಕ್ಕೆ ನಾಲ್ಕರಷ್ಟು ಮಿತ್ರರು ಶಸ್ತ್ರ, ಸೈನ್ಯ ಜಮಾವಣೆ ಮಾಡಿದ್ದಾರೆ.

ಮೈಸೂರು ಸಿಟಿ ರೇಷನಿಂಗ್

ನೋಟಿಫಿಕೇಶನ್ :- ತಾ|| [illegible]

ನಂ. ಆರ್. [illegible]

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಪ್ರಯುಕ್ತ ಸಕ್ಕರೆ ಡಿಪೋಗಳಲ್ಲಿ [illegible] ನೇ ಸೋಮವಾರದ ನಾಮಮಾರದ ಕೊಟ್ಟಿರುವ ಬೆಳಗಿನ ರಜದ ಬದಲಾಗಿ ಮಧ್ಯಾಹ್ನ ರಜಾ ಕೊಟ್ಟಿರುತ್ತದೆ.

(ಸಹಿ) ಟಿ. ಸಿ. ರಡ್ಡಿ, ಸ್ಪೆ. ರೇಷನಿಂಗ್ ಆಫೀಸರು

ಅಪಾಯಕರವಾದ ಪ್ರಯಾಣ ಮಾಡುವದರಲ್ಲಿ ಎಚ್ಚರಿಕೆ!

ಈ ನಿಯಮವನ್ನು ನಿರಾಕರಿಸುವಿರಾದರೆ, ನಿಮ್ಮ ಪ್ರಾಣಹಾನಿಯಾಗಬಹುದು. ಜತೆಗೆ ಗಾಡಿಗಳು ಖಾಲಿಯಾಗಿ ಭರ್ತಿಯಾಗುವದರಿಂದ ನಿಮಗೆ ಕೆಲವು ಸಮಯಗಳಲ್ಲಿ ಒಳಗೆ ಪ್ರವೇಶಮಾಡಲು ಸಹಿತ ಸಾಧ್ಯವಿರುವದಿಲ್ಲ. ಆದರೆ, ಹೊರಗಡೆ ಗಾಡಿಯ ಮೆಟ್ಟಿಲಿನ ಮೇಲೆ ನಿಂತು ಪ್ರಯಾಣಮಾಡುವ ಅಪಾಯಕರವಾದ ಶಾಸ್ತ್ರಕ್ಕೆ ಹೋಗಬೇಡಿರಿ. ಅದೇ ಕಾಯಿದೆಗೆ ವಿರುದ್ಧವಾದದ್ದು. ಇದರಿಂದ ಭೀಕರವಾದ ಅಪಘಾತವಾಗಲಿ, ಪ್ರಾಣಹಾನಿಯಾಗಲಿ ಸಂಭವಿಸಬಹುದು.

ಗಾಡಿಗಳ ಒಂದು ಪಕ್ಕದಲ್ಲಿ ರೈಲುಮಾರ್ಗದಲ್ಲಿ ಸಿಕ್ಕುವ ಸುರಂಗಮಾರ್ಗಗಳ ಗೋಡೆಗಳಿಗೂ ಅಥವಾ ಕಂಬಗಳಿಗೂ ಇರುವ ಅಂತರವು ಬಹಳಿಲ್ಲ. ರೈಲು ಗಾಡಿಯು ವೇಗದಿಂದ ಹೋಗುತ್ತಿರುವಾಗ ನಿಮ್ಮ ದೇಹವು [illegible] ಯಾವುದೊಂದಕ್ಕಾದರೂ ಬಡಿಯಿತೆಂದರೆ, ಅದೇ ನಿಮ್ಮ ಕಟ್ಟಕಡೆಯ ಪ್ರಯಾಣವಾಗುವದು.

ಏನೇ ಆಗಲಿ ಗಾಡಿಯಲ್ಲಿ ಸ್ಥಳವಿಲ್ಲದಿದ್ದರೆ, ಸ್ಟೇಷನ್ನಿನಲ್ಲಿಯೇ ಉಳಿದುಬಿಡಿರಿ. ಅಪಾಯಕ್ಕೆ ಒಳಗಾಗಬೇಡಿರಿ. ನೀವಾಗ ಪ್ರಯಾಣಮಾಡಲು ಸಾಧ್ಯವಿಲ್ಲದಿದ್ದರೆ, [illegible] — ಸೈನ್ಯದವರ ಮತ್ತು ಕರ್ತವ್ಯವುಳ್ಳ ದೇಶದ ಎಲ್ಲಾ ಭಾಗಗಳಿಗೂ ಆಹಾರ ಪದಾರ್ಥ, ಬಟ್ಟೆ ಮತ್ತು ಸಾಧನ ಇವುಗಳನ್ನು ಒದಗಿಸಿ ಕೊಡುವದು.

ಕೆಟ್ಟ ಸಮಯದಲ್ಲಿ ಪ್ರಯಾಣಮಾಡಬೇಡಿರಿ

[illegible] ಮತ್ತು ಅಪಾಯಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣಮಾಡಬೇಡಿರಿ

ಸಂಪುಟ ೨] ಬುಧವಾರ ೧೧-೭-೪೪ [ಸಂಚಿಕೆ ೨೯೭

ಚೀಣದ ಸ್ಥಿತಿಯು ಕಳವಳಕರವಾಗಿದೆ

ರಾಮಚಂದ್ರಶರ್ಮರ ೫೪ ದಿನಗಳ ಉಪವಾಸ ಮುಕ್ತಾಯ

ಮದರಾಸಿನಿಂದ ಕೆಲವು ಕಚೇರಿಗಳ ರವಾನೆ

ಮಹಾ ಪ್ರಭುಗಳ ಮೆರವಣಿಗೆ

ಮೈಸೂರು ೧೧

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ನಿನ್ನೆ ಸಾಯಂಕಾಲಕ್ಕೆ ಸರಿಯಾಗಿ ಅರಮನೆಯಿಂದ ರಾಜ ಮೆರವಣಿಗೆಯು ಹೊರಟಿತು. ಮಹಾ ಪ್ರಭುಗಳು ದಿವ್ಯವಾದ ವಸ್ತ್ರಾಭರಣಗಳನ್ನು ಧರಿಸಿ ಸುಂದರವಾಗಿ ಅಲಂಕರಿಸಲ್ಪಟ್ಟು ಅನೇಕ ಭವ್ಯವಾದ ಎತ್ತುಗಳಿಂದ ಎಳೆಯಲ್ಪಟ್ಟ ಬೆಳ್ಳಿ ರಥದಲ್ಲಿ ಬಿಜಯಂಗೈದರು. ಮುಂದೆ ಹಸ್ತಿ, ಅಶ್ವ, ರಥ, ಪದಾತಿ ಸೇನೆಗಳೂ ಮಂಗಳವಾದ್ಯಗಳೂ, ರಾಜವಾದ್ಯಗಳೂ, ದರ್ಬಾರಿನ ಸಂಭ್ರಮಗಳೂ ಶೋಭಿಸುತ್ತಿದ್ದವು. ದಾರಿಯುದ್ದಕ್ಕೂ ಸಹಸ್ರಾರು ಜನ ಪ್ರೇಕ್ಷಕರು ನಿಂತು ರಾಜಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸಿದರು. ವಿದ್ಯುದ್ದೀಪಮಾಲೆಗಳು ರಸ್ತೆಯ ಇಕ್ಕೆಲಗಳಲ್ಲಿಯೂ ಜಾಜ್ವಲ್ಯಮಾನವಾಗಿದ್ದುವು. ಉದ್ದಕ್ಕೂ ಅನೇಕ ಮಹನೀಯರುಗಳೂ ಸಂಸ್ಥೆಗಳೂ ಭವ್ಯವಾದ ಮಂಟಪಗಳನ್ನು ಕಟ್ಟಿ ನಜರು ಒಪ್ಪಿಸಿದರು. ಪೌರಸಭೆಯವರು ದೊಡ್ಡಪೇಟೆ ಆರಂಭದಲ್ಲಿ ದೊಡ್ಡ ಚಪ್ಪರವನ್ನು ಹಾಕಿ ಪ್ರಭುಗಳಿಗೆ ಪುಷ್ಪಹಾರವನ್ನು ಅರ್ಪಿಸಿದರು. ೮ ಗಂಟೆ ಹೊತ್ತಿಗೆ ಮೆರವಣಿಗೆಯು ಗೌರ್ನಮೆಂಟ್ ಹೌಸನ್ನು ಸೇರಿತು. ಅಲ್ಲಿ ಪ್ರಭುಗಳು ಸೈನಿಕರ ಕವಾಯತನ್ನು ಪರಾಂಬರಿಸಿದರು. ಅತಿಥಿಗಳಿಗೆಲ್ಲಾ ಉಪಹಾರವಾಯಿತು.

ರಾತ್ರಿ ೯॥ ಗಂಟೆಗೆ ಮೆರವಣಿಗೆ ಪುನಃ ಹೊರಟು ಹಾರ್ಡಿಂಗ್ ಸರ್ಕಲ್ ಮಾರ್ಗವಾಗಿ ರಾತ್ರಿ ಹನ್ನೊಂದು ಗಂಟೆಗೆ ಅರಮನೆಯನ್ನು ತಲಪಿತು.

ಮಳೆಯು ಬಾರದೆ ವಾತಾವರಣವು ಆಹ್ಲಾದಕರವಾಗಿದ್ದುದರಿಂದ ಉತ್ಸವಕ್ಕೆ ಅತ್ಯಂತ ಶೋಭೆಯುಂಟಾಗಿತ್ತು.

ಉಚಿತ ಹಿಂದೀ ತರಗತಿ

ಮೈಸೂರು ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಡಿ ಬನುಮಯ್ಯ ಹೈಸ್ಕೂಲಿನಲ್ಲಿ ಸ್ಥಾಪಿತವಾಗಿರುವ ಹಿಂದೀ ತರಗತಿಯನ್ನು ತಾ॥ ೧೩-೭-೧೯೪೪ ರ ಬಾಗಾಯ್ತು ಪುನಃ ತೆರೆಯಲಾಗುವುದು. ಶಿಕ್ಷಣ ಉಚಿತ. ಪ್ರತಿದಿನ (ಭಾನುವಾರ ವಿನಹ) ಸಂಜೆ ೬ ಗಂಟೆ ಬಾಗಾಯ್ತು ೭ ಗಂಟೆವರೆಗೆ ತರಗತಿ ನಡೆಯುವುದು.

ಹೊಸ ರೆಸಿಡೆಂಟರು

ಸ್ವಂ.ಸು.ಫೋ.] ಬೆಂಗಳೂರು ೧೧

ಪಶ್ಚಿಮ ಭಾರತ ಸಂಸ್ಥಾನಗಳ ರೆಸಿಡೆಂಟರಾದ ಲೆ॥ ಕರ್ನಲ್ ಸಿ ಗೇಸ್‌ಫರ್ಡ್‌ರವರನ್ನು ಮೈಸೂರು ಸಂಸ್ಥಾನದ ರೆಸಿಡೆಂಟರಾಗಿ ವೈಸ್‌ರಾಯರು ನೇಮಿಸಿದ್ದಾರೆ. ಈಗಿನ ರೆಸಿಡೆಂಟರಾದ ಲೆ॥ ಕ॥ ಫ್ರೇಸರರಿಗೆ ನಿವೃತ್ತರಾಗುವ ಮುಂಚೆ ಅಕ್ಟೋಬರಿಂದ ರಜಾ ಕೊಡಲಾಗಿದೆ.

ಶೇಕಡ ೫೦ ರಷ್ಟು ಹೆಚ್ಚಿನ ವಿದ್ಯುಚ್ಛಕ್ತಿ ಸರಬರಾಜು

ಶಾಸನ ಸಭೆಯಲ್ಲಿ ಮಾನ್ಯ ಸಚಿವರು [illegible] ಹೆಚ್ಚು ನಿವಾಸಿಗಳಿರುವ ಪ್ರದೇಶಗಳಲ್ಲಿ [illegible] ಜನರಿಗೂ [illegible] ಈಗ ಶೇ॥ ೫೦ ರಷ್ಟು ವಿದ್ಯುಚ್ಛಕ್ತಿಯು ಒದಗಿಸಲ್ಪಡುವುದೆಂದು ಸೂಚಿಸಿದರು.

ಉಪವಾಸ ಮುಕ್ತಾಯ

ಜೈಪುರ ಸಂಸ್ಥಾನದ ಹಿಂದೂಗಳ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ದೆಹಲಿಯಲ್ಲಿ ೫೪ ದಿನಗಳಿಂದ ಉಪವಾಸ ಮಾಡುತ್ತಿದ್ದ ಪಂ. ರಾಮಚಂದ್ರಶರ್ಮರು, ಮೊನ್ನೆ ದಿನ ಉಪವಾಸವನ್ನು ಮುಕ್ತಾಯ ಮಾಡಿದರು. ಅವರ ತೂಕ ೫೪ ಪೌಂಡು ಕಡಮೆಯಾಗಿದೆ. ನಿಶ್ಶಕ್ತಿಯಿದ್ದರೂ ಅವರಿಗೆ ಸುಸ್ತಾಗಿಲ್ಲ. ತಮ್ಮ ಉಪವಾಸಕ್ಕೆ ಕಾರಣರಾದ ಸರ್ ಮಿರ್ಜಾರವರನ್ನು ವಜಾ ಮಾಡುವಂತೆ ಹಿಂದೂ ಮಹಾ ಸಭೆಯು ನಿರ್ಣಯ ಮಾಡಿರುವುದನ್ನು ಅವರು ಪ್ರಶಂಸಿಸಿದರು.

ಹಿಂದೂ ಸಂಸ್ಥಾನಗಳಲ್ಲಿ ಮುಸ್ಲಿಂ ದಿವಾನರು ಬೇಡ

ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಸಾವರ್ಕರರು ದೆಹಲಿಯಲ್ಲಿ ಪಂ ರಾಮಚಂದ್ರಶರ್ಮರ ಉಪವಾಸ ಮುಕ್ತಾಯಾನಂತರ ಒಂದು ಭಾಷಣ ಮಾಡಿ ಹಿಂದೂ ಸಂಸ್ಥಾನಗಳಲ್ಲಿ ಮುಸ್ಲಿಂ ದಿವಾನರುಗಳಿರಕೂಡದೆಂದು ಘೋಷಿಸಿದರು. ಜೈಪುರದಲ್ಲಿ ದೇವಸ್ಥಾನಗಳು ನಾಶಮಾಡಲ್ಪಟ್ಟವೆ; ಉರ್ದು ಭಾಷೆಯು ಶಾಲೆಗಳಲ್ಲಿ ಬಲಾತ್ಕರಿಸಲ್ಪಟ್ಟಿದೆ, ಗೋಮಾಂಸಗಳಿಗೆ ತೆರಿಗೆ ಹಾಕಲ್ಪಟ್ಟಿದೆ, ರಾಜಧಾನಿಯಲ್ಲಿ ಬದಲಾವಣೆಯಾಗಿದೆ; ಅರ್ಹರಾದ ಹಿಂದುಗಳಿದ್ದರೂ ಹೊರಗಿನ ಮುಸ್ಲಿಮರನ್ನು ಕೆಲಸಕ್ಕೆ ಆಮದು ಮಾಡಲಾಗಿದೆ—ಎಂದು ಅವರು ಹೇಳಿರುವರು.

ನಾರ್ಮಂಡಿಯಲ್ಲಿ ಹೊಸ ಧಾಳಿ

ಕೇ ನೈಋತ್ಯ ಭಾಗದಲ್ಲಿ ಓಡಾನ್ ನದೀ ತೀರದಿಂದ ಬ್ರಿಟಿಷ್ ಸೈನ್ಯಗಳು ಹೊಸ ಧಾಳಿಯನ್ನು ಹೂಡಿವೆ. ಓರ್ನ ಕಡೆ ಅವು ನುಗ್ಗಿವೆ. ಎರಡು ನಗರಗಳು ವಶವಾಗಿವೆ. ರೊಮ್ಮೆಲ್ಲನ ರಕ್ಷಣಾ ಸಾಲುಗಳಿಗೆ ಧಕ್ಕೆ ಬಂದಿದೆ. ಸಾಧ್ಯವಾದಷ್ಟು ಸೈನ್ಯ, ಯುದ್ಧ ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಾಗಿಸಲು ಅವನು ಹವಣಿಸುತ್ತಿದ್ದಾನೆ.

ಕೊಲಂಬಿಯದಲ್ಲಿ ಮಿಲಿಟರಿ ರಾಜ್ಯ

೮॥ ೯॥ ಜುಲೈ ರವರು ಕೊಲಂಬಿಯದ ಅಧ್ಯಕ್ಷರಾದ ಗೋಮೆಸ್ ಮತ್ತು ಇನ್ನು ಕೆಲವು ಮಂತ್ರಿಗಳನ್ನು ಸೆರೆ ಹಿಡಿದು, ತಾವೇ ಅಧ್ಯಕ್ಷರೆಂದು ಘೋಷಿಸಿರುವರೆಂದು ವರದಿಯಾಗಿದೆ. ಆದರೆ ಪೋಲೀಸಿನವರು ಅವರನ್ನು ಅಡಗಿಸಿ ಅಧ್ಯಕ್ಷರನ್ನೂ ಅವರ ಅನುಯಾಯಿಗಳನ್ನೂ ಬಿಡಿಸಿದರು.

ಫೀ ಹೆಚ್ಚಿಸಿದ್ದಕ್ಕೆ ವಿದ್ಯಾರ್ಥಿಗಳ ಪ್ರದರ್ಶನ

ಕೊಲ್ಲಾಪುರದ ಹೈಸ್ಕೂಲುಗಳಲ್ಲಿ ಫೀಯನ್ನು ಹೆಚ್ಚಿಸಿದ್ದಕ್ಕಾಗಿ ತಮ್ಮ ಅಸಮಾಧಾನವನ್ನು ಸೂಚಿಸಲು ಅಲ್ಲಿನ ವಿದ್ಯಾರ್ಥಿಗಳು ೮ ನೇ ತಾ॥ ಹರತಾಳವನ್ನಾಚರಿಸಿ ಸಭೆಯನ್ನು ಮಾಡಿ ಹೆಚ್ಚಿನ ಫೀಯನ್ನು ವಜಾಮಾಡಬೇಕೆಂಬ ಠರಾವು ಮಾಡಿದರು. ಅನಂತರ ೧೫೦೦ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೆರವಣಿಗೆ ಹೊರಟು ಮುಖ್ಯ ಮಂತ್ರಿಗಳ ಕಚೇರಿಗೆ ಹೋದರು. ಮಂತ್ರಿಗಳು ವಿದ್ಯಾರ್ಥಿ ಪ್ರತಿನಿಧಿಗಳನ್ನು ಕಂಡು ಮಾತನಾಡಿ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಿಳಿಸಿದರು.

ಮದರಾಸಿನಿಂದ ಕಚೇರಿಗಳ ವರ್ಗ

ಅಗತ್ಯವಾದ ಮಿಲಿಟರಿ ಕಾರ್ಯಗಳಿಗೆ ಹೆಚ್ಚು ಅವಕಾಶವನ್ನು ಒದಗಿಸುವುದಕ್ಕಾಗಿಯೂ ಅದರಿಂದ ಜನರಿಗೆ, ವಿಶೇಷ ಅನಾನುಕೂಲವಾಗದಂತೆ ನೋಡಿಕೊಳ್ಳುವುದಕ್ಕಾಗಿಯೂ ಮದರಾಸ್ ನಗರದಿಂದ ಕೆಲವು ಕಚೇರಿಗಳನ್ನು ಬೇರೆ ಕಡೆಗೆ ವರ್ಗಾಯಿಸುವ ವಿಷಯದಲ್ಲಿ ಅಲ್ಲಿನ ಸರ್ಕಾರದವರು ತಮ್ಮ ಇಲಾಖೆಗಳ ಅಭಿಪ್ರಾಯವನ್ನು ಕೇಳಿದ್ದಾರೆ. ಇದರಿಂದ ಮಹಾಜನರಲ್ಲಿ ಸ್ವಲ್ಪ ಕೋಲಾಹಲವುಂಟಾಗಿದೆ. ಆದರ ಬಗ್ಗೆ ಆ ಸರ್ಕಾರದವರು ಒಂದು ಹೇಳಿಕೆ ಹೊರಡಿಸಿ ಈ ಬಗ್ಗೆ ಮಹಾಜನರು ಅನಾವಶ್ಯಕವಾಗಿ ಗಾಬರಿ ಹೊಂದಬಾರದೆಂದು ತಿಳಿಸಿದ್ದಾರೆ. ಮದರಾಸ್ ನಗರದೊಳಗೇ ಕೆಲಸವಿಲ್ಲದಿರುವ ಕಚೇರಿಗಳನ್ನೂ ನಗರದ ಆಡಳಿತಕ್ಕೆ ಸಂಬಂಧಪಡದ ಕಚೇರಿಗಳನ್ನೂ ಮೊದಲು ವರ್ಗಾಯಿಸುವ ಆಲೋಚನೆ ಇದೆ.

ಜೂಜು

ಹಳೆ ಆಸ್ಪತ್ರೆಯ ಬಳಿ [illegible] ಈಶ್ವರ ದೇವಸ್ಥಾನದ ಹಿಂಭಾಗದ ಮನೆಯೊಂದರಲ್ಲಿ ನಿನ್ನೆ ರಾತ್ರಿ ಜೂಜು ನಡೆಯುತ್ತಿದ್ದುದನ್ನು ಪ್ರೊ॥ ಇ॥ ಶ್ರೀ ಕೆ ಹನುಮಂತರಾವ್ [illegible] ಮೇಲೆ ದಾಳಿ ಮಾಡಿ [illegible] ಜನರ ಮೇಲೆ ಮೊಕದ್ದಮೆ ಹೂಡಿದ್ದಾರೆ. ಜೂಜಿನ ಹಣ [illegible] ದೊರೆತಿದೆ.

ಶ್ರೀಮನ್ಮಹಾರಾಜರವರ ವರ್ಧಂತಿ

ಸ್ವ. ಸು.] ತಿಪಟೂರು ೧೧

ತಾ॥ ೧೧-೭-೪೪ ನೇ ಮಂಗಳವಾರ ದಿವಸ ತಿಪಟೂರು ತಾಲ್ಲೋಕು ಹಳೇ ಪಾಳ್ಯದ ಪ್ರೈಮರಿ ಸ್ಕೂಲಿನಲ್ಲಿ ಮಹಾರಾಜರವರ ಪಟವನ್ನು ಪ್ರಾತಃಕಾಲ ೯ ಗಂಟೆಯಿಂದ ಸ್ಕೂಲಿನಿಂದ ಹೊರಡಿಸಿ ಪೂರ್ಣಕಲಶ ವಾದ್ಯದಿಂದ ಮೆರವಣಿಗೆ ಮಾಡಿಸಿ ಸ್ಕೂಲಿನಲ್ಲಿ ಇರಿಸಿ ಮೀಟಿಂಗ್ ನಡೆಸಲ್ಪಟ್ಟಿತು. ಅಧ್ಯಕ್ಷರ ಸ್ಥಾನಕ್ಕೆ ಛೇರ್ಮನ್ ಟಿ ಸಿ. ಎಲ್. ನಾರಾಯಣಶೆಟ್ಟರನ್ನು ಸಭೆಯವರ ರಾಜಿಯಂತೆ ಕೂರಿಸಲ್ಪಟ್ಟಿತು. ಮೊದಲು ಬಾಲಕರಿಂದ ದೇವತಾ ಪ್ರಾರ್ಥನೆಯೂ, ಮಹಾರಾಜರವರ ಗುಣಕಥನವನ್ನೂ, ಕೆ. ವೆಂಕಟರಾಮಯ್ಯನವರೂ, ವಯಸ್ಕರ ವಿದ್ಯಾಭ್ಯಾಸದ ವಿಷಯವಾಗಿ ಟಿ. ಸಿ. ಲಕ್ಷ್ಮಣ್ಣನವರೂ, ಸ್ಕೌಟ್ ಸಂಸ್ಥೆಯ ವಿಚಾರವಾಗಿ ಎನ್. ರಾಮಣ್ಣನವರೂ, ಸ್ಕೂಲಿನ ವಿಷಯವಾಗಿ ಎ. ಸೂರ್ಯನಾರಾಯಣಪ್ಪನವರೂ, ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಬಡಹುಡುಗರಿಗೆ ಟೋಪಿಗಳನ್ನೂ, ಸ್ಲೇಟು ಬಳಪಗಳನ್ನೂ ದಾನಮಾಡಲಾಯಿತು. ಮಹಾರಾಜರವರ ಶ್ರೇಯಃಪ್ರಾರ್ಥನೆಯಾಗಿ ಫಲಪುಷ್ಪ ತಾಂಬೂಲ, ಸಿಹಿತಿಂಡಿ ಹಂಚಿದ ಮೇಲೆ ಸಭೆಯು ಮುಕ್ತಾಯವಾಯಿತು.

ಸ್ವಂ ಸ.] ತಿಪಟೂರು ೧೨

ತಿಪಟೂರಿನಲ್ಲಿ ವರ್ಧಂತ್ಯುತ್ಸವ

ತಾ॥ ೧೧-೭-೪೪ ನೇ ಮಂಗಳವಾರ ಪ್ರಾತಃಕಾಲ ೯ ಗಂಟೆಗೆ ಸರಿಯಾಗಿ ತಾಲ್ಲೋಕ್ ಕಚೇರಿಯಿಂದ ಮೆರವಣಿಗೆ ಹೊರಡಿಸಲ್ಪಟ್ಟಿತು. ಜೊತೆಯಲ್ಲಿ ಹೈಸ್ಕೂಲು ವಿದ್ಯಾರ್ಥಿಗಳೂ, ಪ್ರೈಮರಿ ಸ್ಕೂಲುಗಳ ವಿದ್ಯಾರ್ಥಿಗಳೂ, ಹೊರಟು ಎಲ್ಲಾ ಬೀದಿಗಳಲ್ಲಿಯೂ, ವಾದ್ಯ ಸಮೇತ ಬಂದು ನಾಟಕದ ಥಿಯೇಟರಿನಲ್ಲಿ ಮೀಟಿಂಗ್ ನಡೆಸಲ್ಪಟ್ಟಿತು. ಈ ಮೀಟಿಂಗಿನಲ್ಲಿ ಶ್ರೀ ಡಿ ಎಸ್. ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಿವಬಸಪ್ಪನವರೂ, ಮತ್ತು ಇತರ ಮಹನೀಯರುಗಳು ಮಹಾರಾಜರವರ ವಿಷಯವಾಗಿ ಸಭಾ ಕಥನ ಮಾಡಿ ಉಪನ್ಯಾಸ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮಹಾರಾಜರವರ ಶ್ರೇಯಃಪ್ರಾರ್ಥನೆ ನಡೆಸಲ್ಪಟ್ಟಿತು. ಅನಂತರ ಗಂಧ ಪುಷ್ಪ ತಾಂಬೂಲದೊಂದಿಗೆ ಸಭೆಯು ಬರಖಾಸ್ತಾಯಿತು. ಎಲ್ಲಾ ಬಾಲಕ ಬಾಲಕಿಯರಿಗೂ ಬಾದಾಮಿ ಹಂಚಲ್ಪಟ್ಟಿತು.

ವರ್ಧಂತಿ ಉತ್ಸವ

ಸ್ವ ಸು] ಕೃಷ್ಣರಾಜನಗರ ೧೧

ತಾ॥ ೧೧-೭-೪೪ ರ ದಿವಸ ಊರಿನಲ್ಲಿ ವರ್ಧಂತ್ಯುತ್ಸವದ ಪ್ರಯುಕ್ತ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಭಾವಚಿತ್ರವನ್ನು ಮಾನ್ಯಸಹಿತ ನೆ ಮುನಿಸಿಪಲ್ ಆಫೀಸಿನಿಂದ ಮೆರವಣಿಗೆ ಹೊರಡಿಸಿ [illegible] ನಂತರ [illegible] ಹಂಚಲಾಯಿತು.

ಬಾಲಕರಿಗೆ ತಿಂಡಿ

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ಈ ದಿನ [illegible] ಹಂಚ[illegible]ಲಾಯಿತು.

ಬಂಗಾಳದಲ್ಲಿ ಮತ್ತೆ ಕ್ಷಾಮವೇ ?

[illegible] ಶ್ಯಾಮಪ್ರಸಾದ್ ಮುಖರ್ಜಿಯವರು ಒಂದು ಹೇಳಿಕೆ ಹೊರಡಿಸಿ ಬಂಗಾಳದ ಇಂದಿನ ದುಸ್ಥಿತಿಗೆ ಅಲ್ಲಿನ ಮಂತ್ರಿಮಂಡಲವೇ ಕಾರಣವೆಂದು ಹೇಳಿದ್ದಾರೆ. [illegible] ಸರ್ಕಾರಕ್ಕೆ ಯಾರ [illegible] ಇಂತಹ ಮಂ[illegible] ಅನಿವಾರ್ಯವಾ[illegible] ಆಪಾಯಕಾರಿ. [illegible] ಇಂತ[illegible] ಮತ್ತೆ ಕ್ಷಾಮ [illegible] ಬಂಗಾ[illegible] ಸುಧಾರಿಸ[illegible] ಮಂತ್ರಿಮಂಡಲವನ್ನು [illegible] ಅಥವ ಪ್ರತಿನಿಧಿ ಸಭೆ [illegible] ಪ್ರಜಾಪ್ರತಿನಿಧಿಗಳು ರಚ[illegible] ಕಾರ್ಯಕ್ರಮ ಕೈಗೊ[illegible] ಕಲ್ಪಿಸಬೇಕು—ಎಂದು ಹೇಳಿದ್ದಾರೆ.

ಆಹಾರ ದೊರೆಯದೆ ಮಡದಿ ಮಕ್ಕಳ ಕೊಲೆ

[illegible] ಒಬ್ಬ ಗ್ರಾಮಸ್ಥನು [illegible] ತನಗೂ ತ[illegible] ಒಂದೂವರೆ ವರ್ಷದ [illegible] ಆಹಾರ ದೊರೆ[illegible] ದಿನ ಉಪವಾಸವಿದ್ದು ನರ[illegible] ಏನೂ ದೊರೆ[illegible] ಮಡದಿ ಮಕ್ಕಳ ಸ್ಥಿತಿ [illegible] ಅವರನ್ನು ಕೊಲೆ [illegible] ಅವನಿಗೆ ಜೀವಾವಧಿ ಸಜಾ ವಿಧಿಸಲಾಯಿತೆಂದೂ ಗೊ[illegible]

ಕಾರ್ಪೊರೇಷನ್ನಲ್ಲಿ ಮುಷ್ಟಿ ಪೋಲೀಸರು !

[illegible] ಸ್ವಪಕ್ಷೀಯಂತೆ [illegible] ಕಾರ್ಪೊರೇಷನ್ ಸಭಾ[illegible] ಪೋಲೀಸಿನವರ [illegible] ಅತಿಥಿಗಳ ಮತ್ತು [illegible] ಕೂಡಿದ್ದುದಕ್ಕಾಗಿ ಅಲ್ಲಿ[illegible] ಸದಸ್ಯರೂ ವಿದ್ಯಾಲಯದ [illegible] ಡಾ|| ಎಂ. ವಿ. ಕೃಷ್ಣ[illegible] ಸೆನೆಟ್ಟಿನ ಸದಸ್ಯ ತನಕ್ಕೆ [illegible] ಇತ್ತಿದ್ದಾರೆ.

ಅರಿಸೀಕೆರೆಗೆ ರೇಷನಿಂಗ್ ಬೇಕು

ಸ್ವಂ.ಸು.] ಅರಸೀಕೆರೆ ೧೦

ಪೌರಸಭೆಯ ಆಹಾರ ಸಮಿತಿಯ ಸದಸ್ಯರು ಅಧಿಕಾರಿಗಳ ಬಳಿ ಹೋಗಿ ಈಗ ಮುನಿಸಿಪಲ್ ಡಿಪೋವಿಗೆ ವಾರಕ್ಕೆ ಕೊಡುತ್ತಿರುವ ೫೦ ಪಲ್ಲ ಅಕ್ಕಿ, ೩೦ ಪಲ್ಲ ರಾಗಿ ಸಾಲದು; ಇನ್ನೂ ಕೊನೇಪಕ್ಷ ೫ ಪಲ್ಲ ಅಕ್ಕಿಯನ್ನಾದರೂ ಜಾಸ್ತಿ ಮಾಡಿಕೊಡಲು ಕೇಳಿದ್ದರಿಂದ ಕೊಡಲು ಅಧಿಕಾರಿಗಳು ನಿರಾಕರಿಸಿದರು. ಆಗ ಆಹಾರ ಸಮಿತಿಯವರು ಹಂಚಿಕೆಯನ್ನೂ ಮಾಡಲು ಸಾಧ್ಯವಿಲ್ಲವೆಂದು ಕೈ ಬಿಟ್ಟರು ಮತ್ತು ಈ ಊರಿಗೆ ಜಿಲ್ಲಾಧಿಕಾರಿಗಳು ಮೊಕ್ಕಾಂ ಮಾಡಿದ್ದಾಗ ರೇಷನಿಂಗ್ ಪದ್ಧತಿಯನ್ನೂ ಕೂಡಲೇ ಜಾರಿಗೆ ತರಬೇಕೆಂದು ಕೇಳಿಕೊಂಡರು.

ಈ ಊರಿನಲ್ಲಿ ರೇಷನಿಂಗ್ ಸೆನ್ಸಸ್ ತೆಗೆದುಕೊಂಡು ಎರಡು ತಿಂಗಳಾದರೂ ಇನ್ನೂ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಾರದಿರುವುದನ್ನು ನೋಡಿ ಜನಗಳು ಬಹಳ ಅಸಮಾಧಾನದಿಂದ ಇರುತ್ತಾರೆ. ಮತ್ತು ಸರ್ಕಾರದವರು ಕೂಡಲೇ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರುತ್ತಾರೆಂದು ನಂಬಿರುತ್ತಾರೆ.

ವಿಶ್ವಕರ್ಮ ವಿವಾಹಕ್ಕೆ ಅಡ್ಡಿಯೆ ?

ಪಿರಿಯಾಪಟ್ಟಣದ ತಾ|| ನಂದೀಪುರಗ್ರಾಮದಲ್ಲಿ ಕಳೆದ ೨೬-೬-೪೪ ರಲ್ಲಿ ಶ್ರೀ ಸಿ. ಹೆಚ್. ಮಾಯಪ್ಪಾಚಾರ್ಯರ ಲಗ್ನವು ಆ ಗ್ರಾಮದ ಮುಖಂಡರ ಮತ್ತು ಸರ್ಕಾರದ ಅಧಿಕಾರಿಗಳ ಸಹಕಾರದಿಂದ ಸುಸೂತ್ರವಾಗಿ ನೆರವೇರಿತು. ಇಪ್ಪತ್ತನೇ ಶತಮಾನದ ನಾಗರೀಕತೆಯ ಈ ಕಾಲದಲ್ಲೂ ವಿಶ್ವಕರ್ಮ ಜಾತೀಯರು ಅವರವರ ಗ್ರಾಮಗಳಲ್ಲಿ ವಿವಾಹಾದಿಗಳನ್ನು ಜರುಗಿಸಲು ಆತಂಕವುಂಟಾಗುತ್ತಿರುವುದು ಶೋಚನೀಯ. ದೇಶಬಾಂಧವರು ಈ ಕಡೆಗೆ ಗಮನ ಕೊಡಬೇಕಾದುದು ಅನಿವಾರ್ಯ.

ಒಬ್ಬ ವಿಶ್ವಕರ್ಮ ಪ್ರಜೆ

ಹೊಸ ಕ್ವಿನೈನ್ ಕಾರ್ಖಾನೆ

ಮದ್ರಾಸ್ ಸರ್ಕಾರದವರು ಹೊಸ ಕ್ವಿನೈನ್ ಕಾರ್ಖಾನೆಯೊಂದನ್ನು ಅಣ್ಣಾಮಲೆ ಬೆಟ್ಟದಲ್ಲಿ ಸ್ಥಾಪಿಸಲು ನಿರ್ಧರಿಸಿ ಆ ಬಗ್ಗೆ ಅಂದಾಜು ಪಟ್ಟಿಯ ವರದಿಗಳನ್ನು ತಯಾರಿಸಲು ಒಬ್ಬ ಅಧಿಕಾರಿಯನ್ನು ನೇಮಿಸಿರುವುದಾಗಿ ಗೊತ್ತಾಗಿದೆ.

ಕೈಗಾರಿಕಾಭಿವೃದ್ಧಿ ಯೋಜನೆಗಳು

ಸ್ವ. ಸು.] ಬೆಂಗಳೂರು ೧೧

ಕೆಳಗೆ ಕಂಡ ಕೈಗಾರಿಕಾಭಿವೃದ್ಧಿ ಯೋಜನೆಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ:—

[illegible] ಪ್ಲಾಸ್ಟಿಕ್‌ಗಳ ತಯಾರಿಕೆ, ವಿದ್ಯುಚ್ಛಕ್ತಿ ಮೋಟಾರುಗಳು ಮತ್ತು ಬೀಸಣಿಗೆಗಳು, ಎನಾಮಲಿಂಗ್ ಕೈಗಾರಿಕಾಭಿವೃದ್ಧಿ, ಮತ್ತು ರೇಡಿಯೋ ರಿಸೀವರ್ ಸೆಟ್ಟುಗಳ ತಯಾರಿಕೆ.

ಸರ್ಕಾರೀ ಸುದ್ದಿ

ಹೆಗ್ಗಡದೇವನಕೋಟೆ ಅಮಲ್ದಾರರಾದ ಶ್ರೀ ಸಿ ಎಂ. ಕೆಂಚಣ್ಣನವರನ್ನು ಹಾಸನ ಜಿಲ್ಲಾಧಿಕಾರಿಗಳ ಫುಡ್ ಅಸಿಸ್ಟೆಂಟರನ್ನಾಗಿ ನೇಮಕ ಮಾಡಲಾಗಿದೆ. ಫುಡ್ ಅಸಿಸ್ಟೆಂಟರಾಗಿದ್ದ ಶ್ರೀ ಬಿ ಎಲ್ ನಾಗಪ್ಪನವರನ್ನು ರೆವೆನ್ಯೂ ಇಲಾಖೆಗೆ ರಿಪೋರ್ಟ್ ಮಾಡಲಾಗಿದೆ.

ರೇಷ್ಮೆ ಸಾಗಿಸಲು ಪ್ರಯತ್ನಿಸಿದ್ದಕ್ಕೆ ಶಿಕ್ಷೆ

ಬೆಂಗಳೂರಿನ ಶ್ರೀ|| ನಟೇಶಮೊದಲಿಯಾರ್ ಎಂಬುವರು ಸುಮಾರು ೮೦೦ ಅಡಿ ಕಚ್ಚಾರೇಷ್ಮೆಯನ್ನು ರಹದಾರಿಯಿಲ್ಲದೆ ಸಾಗಿಸುತ್ತಿದ್ದುದು ಪತ್ತೆಯಾಗಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಆ ಪಾದಿತರಿಗೆ ನಗರನ್ಯಾಯಾಧೀಶರು ೧ ತಿಂಗಳ ಸಾದಾ ಸಜ ಮತ್ತು ೩೦೦ ರೂ. ಜುಲ್ಮಾನೆ, ತಪ್ಪಿದರೆ ಮತ್ತೊಂದು ತಿಂಗಳ ಸಾದಾಸಜ ಶಿಕ್ಷೆಯನ್ನು ವಿಧಿಸಿದರು. ಅಲ್ಲದೆ ರೇಷ್ಮೆಯನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಯಿತು.

ಬಂಗಾಳಕ್ಕೆ ಕ್ಷಾಮದ ಭಯವಿಲ್ಲ !

ಬಂಗಾಳದಲ್ಲಿ ಆಹಾರದ ಅಭಾವವುಂಟಾಗದಂತೆ ಈ ವರ್ಷ ಎಲ್ಲಾ ಏರ್ಪಾಡನ್ನೂ ಮಾಡಿದೆ. ಈ ವರ್ಷ ಕ್ಷಾಮವು ಬರಲಾರದು ಎಂದು ಅಲ್ಲಿನ ಗೌರ್ನರು ತಿಳಿಸಿದ್ದಾರೆ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಏಳು ಗಂಟೆಗೆ ೧ ಹಡಗು

ಅಮೇರಿಕದ ಜಾರ್ಜ್ ಲಾರಿ ಕಾರ್ಪೊರೇಷನ್ನಿನವರು ಒಂದು ಸೈನ್ಯ ನೌಕೆಯನ್ನು ಕೇವಲ ಏಳು ಗಂಟೆ ೧ ನಿಮಿಷದ ಕಾಲದಲ್ಲಿ ಕಟ್ಟಿ ಆಶ್ಚರ್ಯವುಂಟುಮಾಡಿದ್ದಾರೆ. ಅದರ ಉದ್ದ ೧೪೫ ಅಡಿ. ಮುನ್ನೂರು ಜನರು ಅದರ ಕೆಲಸವನ್ನು ಕೈಕೊಂಡಿದ್ದರು. ಇದಕ್ಕೆ ಮುಂಚೆ ಇಂತಹ ಹಡಗನ್ನು ಕಟ್ಟಲು ಐದು ದಿನ ಹಿಡಿದಿತ್ತು. ಮೊದಲೇ ಸಿದ್ಧವಾಗಿದ್ದ ಭಾಗಗಳನ್ನು ಉಪಯೋಗಿಸಿ ೧೮ ಗಂಟೆಗಳಲ್ಲಿ ಹಡಗನ್ನು ಅವರು ಕಟ್ಟಬೇಕೆಂದಿದ್ದರು. ಆದರೆ ಏಳೇ ಗಂಟೆಯಲ್ಲಿ ಅದು ಸಿದ್ಧವಾಯಿತು.

ಯಾತನಾ ನಿರ್ದೇಶ

ಶರೀರದ ಯಾವ ಯಾವ ಭಾಗಗಳಲ್ಲಿ ಎಂತೆಂತಹ ಯಾತನೆಗಳು ಹುಟ್ಟುತ್ತವೆ ಎಂಬುದನ್ನು ಕಂಡುಹಿಡಿಯಲು ಸಹಾಯವಾಗುವಂತೆ ಸ್ಯಾನ್ ಫ್ರಾನ್ಸಿಸ್ಕೋವಿನ ೩೬ ಜನ ವೈದ್ಯರೂ, ನರ್ಸುಗಳೂ, ವಿದ್ಯಾರ್ಥಿಗಳೂ ತಮ್ಮ ಶರೀರದ ಮೇಲೆಯೇ ಶಸ್ತ್ರ ಪ್ರಯೋಗಗಳು ನಡೆಯಲು ಅವಕಾಶ ಕೊಟ್ಟರು. ಅವರ ಕೈ, ಕಾಲುಗಳಲ್ಲಿಯೂ, ಮೂಳೆಗಳಲ್ಲಿಯೂ ಡ್ರಿಲ್ (ಬೈರಿಗೆ) ಯಂತ್ರಗಳಿಂದ ಕೊರೆಯಲಾಯಿತು. ಇದರಿಂದಾದ ವಿಶೇಷ ನೋವನ್ನು ಸಹಿಸುವುದಲ್ಲದೆ ಆಗಿಂದಾಗಲೇ ಅವರು ನೋವಿನ ವರ್ಣನೆಯನ್ನೂ ಮಾಡುತ್ತಿದ್ದರು. ೧೬೦ ಸಾರಿ ಅವರನ್ನು ಚುಚ್ಚಲಾಯಿತು.

ಗೋವನ್ನು ರಕ್ಷಿಸಲು ಪ್ರಾಣಾರ್ಪಣೆ

[illegible] ರೈಲ್ವೆ ಕಂಬಿಯ ಬಳಿ ಮೇಯುತ್ತಿದ್ದ ತನ್ನ ಹಸುವೊಂದನ್ನು ಆಚೆಗೆ ಓಡಿಸಲು ಹೋಗಿ ಅದನ್ನು ಓಡಿಸಿದ ಒಡನೆಯೇ ರೈಲು ವೇಗವಾಗಿ ಬಂದುದರಿಂದ ಇಂಡಿನ್ನಿನ ಒಂದು ಭಾಗವು ಮುದಿಯಾಸ್ ಬಳಿ ಕೂಲಿ ಕಾರ್ಮಿಕಳೊಬ್ಬಳು [illegible] ತಲೆ ಹಿಂಭಾಗಕ್ಕೆ ಬಡಿದು ಅನಂತರ ಆಕೆಯು ಆಸ್ಪತ್ರೆಯಲ್ಲಿ ಮೃತಳಾದಳೆಂದು ವರದಿಯಾಗಿದೆ.

ಚೀಣದ ಕಳವಳ ಸ್ಥಿತಿ

ಅಮೇರಿಕದ ಉಪಾಧ್ಯಕ್ಷರಾದ ಮಿ|| ವಾಲೇಸರು ಈಚೆಗೆ ಚೀಣಾಕ್ಕೆ ಭೇಟಿ ಕೊಟ್ಟಿದ್ದರಷ್ಟೆ. ಚೀಣಾದ ಸ್ಥಿತಿಯು ಅತ್ಯಂತ ಕಳವಳಕರವಾಗಿದೆಯೆಂದು ಅವರು ಹೇಳಿರುವರು. ಅಧ್ಯಕ್ಷ ರೂಸ್ವೆಲ್ಟರೂ ವ್ಯಾಲೇಸರೂ ೨ ಗಂಟೆಗಳ ಕಾಲ ಚೀಣಾದ ವಿಷಯವಾಗಿ ಮಾತುಕತೆ ನಡೆಸಿದರು.

ಸ್ತ್ರೀಯರ ಸೌಕರ್ಯಕ್ಕೆ

[illegible] ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

[illegible] ಕಾಫಿ ಡಿಪೋ, [illegible], ದೇವರಾಜ ಮಾರ್ಕೆಟ್, ಮೈಸೂರು

[illegible] ಎಲ್ಲಾ ಮೊಹಲ್ಲಾ [illegible]

[illegible] ಪ್ರತ್ಯೇಕ [illegible] ಮತ್ತು ಕಲ್ಪಿಸ್ಕರಿ ಕೊಡಲ್ಪ[illegible]

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.

ಆಯುರ್ವೇದ ವೈದ್ಯಭೂಷಣ
ಪಂಡಿತ
ಕೆ. ವಿ. ವೆಂಕಟರಾಮಯ್ಯ,
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ,
ಅರಕಲವಾಡಿ (ಚಾಮರಾಜನಗರ ತಾ||)

ಟಿ. ಸಿ. ನಟರಾಜ್
ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ.

ಹೊಸ ನಮೂನೆಯ ಬಳೆಗಳು ಈಗತಾನೇ ಬಂದಿವೆ !

[illegible] ಬಳೆಗಳು
[illegible] ತೋಳಾಕುಗಳು
ಫ್ಯಾನ್ಸಿ ಸೆರಗಳು
ಕೆಮಿಕಲ್ ದಂತದ ಬಳೆಗಳು

ಸೌಭಾಗ್ಯ ಸ್ಟೋರ್ಸ್

ದೇವರಾಜ ಮಾರ್ಕೆಟ್, ಮೈಸೂರು.

ಸಂಪುಟ ೨] ಬುಧವಾರ ೧೨-೭-೪೪ [ಸಂಚಿಕೆ ೨೯೭

ಚೀಣಾದ ಸ್ಥಿತಿಯು ಕಳವಳಕರವಾಗಿದೆ

ರಾಮಚಂದ್ರಶರ್ಮರ ೫೪ ದಿನಗಳ ಉಪವಾಸ ಮುಕ್ತಾಯ

ಮದರಾಸಿನಿಂದ ಕೆಲವು ಕಚೇರಿಗಳ ರವಾನೆ

ಮಹಾ ಪ್ರಭುಗಳ ಮೆರವಣಿಗೆ

ಮೈಸೂರು ೧೧.

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ನಿನ್ನೆ ಸಂಜೆ ೫ ಕ್ಕೆ ಸರಿಯಾಗಿ ಅರಮನೆಯಿಂದ ರಾಜ ಮೆರವಣಿಗೆಯು ಹೊರಟಿತು. ಮಹಾ ಪ್ರಭುಗಳು ದಿವ್ಯವಾದ ವಸ್ತ್ರಾಭರಣಗಳನ್ನು ಧರಿಸಿ ಸುಂದರವಾಗಿ ಅಲಂಕರಿಸಲ್ಪಟ್ಟು ಆನೋಘವಾದ ಎತ್ತುಗಳಿಂದ ಎಳೆಯಲ್ಪಟ್ಟ ಬೆಳ್ಳಿ ರಥದಲ್ಲಿ ಬಿಜಯಂಗೈದರು. ಮುಂದೆ ಹಸ್ತಿ, ಅಶ್ವ, ರಥ, ಪದಾತಿ ಸೇನೆಗಳೂ ಮಂಗಳವಾದ್ಯಗಳೂ, ರಾಜವ ಬ್ಯಾಂಡುಗಳೂ, ದರ್ಬಾರಿನ ಕಂದಗಳೂ ಶೋಭಿಸುತ್ತಿದ್ದವು. ದಾರಿಯುದ್ದಕ್ಕೂ ಸಹಸ್ರಾರು ಜನ ಪ್ರೇಕ್ಷಕರು ನಿಂತು ರಾಜಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸಿದರು. ವಿದ್ಯುದ್ದೀಪಗಳಿಂದ ರಸ್ತೆಯ ಇಕ್ಕೆಲಗಳಲ್ಲಿಯೂ ಜಾಜ್ವಲ್ಯಮಾನವಾಗಿದ್ದುವು. ಉದ್ದಕ್ಕೂ ಅನೇಕ ಮಹನೀಯರುಗಳೂ ಸಂಸ್ಥೆಗಳೂ ದಿವ್ಯವಾದ ಮಂಟಪಗಳನ್ನು ಕಟ್ಟಿ ಪ್ರಜರು ಒಪ್ಪಿಸಿದರು. ಪೌರಸಭೆಯವರು ದೊಡ್ಡ ಪೇಟೆ ಆರಂಭದಲ್ಲಿ ದೊಡ್ಡ ಚಪ್ಪರವನ್ನು ಹಾಕಿ ಪ್ರಭುಗಳಿಗೆ ಪುಷ್ಪಹಾರವನ್ನು ಅರ್ಪಿಸಿದರು. ೮ ಗಂಟೆ ಹೊತ್ತಿಗೆ ಮೆರವಣಿಗೆಯು ಗೌರ್ನ್ಮೆಂಟ್ ಹೌಸನ್ನು ಸೇರಿತು. ಅಲ್ಲಿ ಪ್ರಭುಗಳು ಸೈನಿಕರ ಕವಾಯತನ್ನು ವೀಕ್ಷಿಸಿ [illegible] ಅತಿಥಿಗಳಿಗೆಲ್ಲಾ ಉಪಹಾರವಾಯಿತು.

ರಾತ್ರಿ ೯॥ ಗಂಟೆಗೆ ಮೆರವಣಿಗೆ ಪುನಃ ಹೊರಟು ಹಾರ್ಡಿಂಗ್ ಸರ್ಕಲ್ ಮಾರ್ಗವಾಗಿ ರಾತ್ರಿ ಹನ್ನೊಂದು ಗಂಟೆಗೆ ಅರಮನೆಯನ್ನು ತಲಪಿತು.

ಮಳೆಯು ಬಾರದೆ ವಾತಾವರಣವು ಆಹ್ಲಾದಕರವಾಗಿದ್ದುದರಿಂದ ಉತ್ಸವಕ್ಕೆ ಅತ್ಯಂತ ಶೋಭೆಯುಂಟಾಗಿತ್ತು.

ಉಚಿತ ಹಿಂದೀ ತರಗತಿ

ಮೈಸೂರು ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಡಿ ಬನುಮಯ್ಯ ಹೈಸ್ಕೂಲಿನಲ್ಲಿ ಸ್ಥಾಪಿತವಾಗಿರುವ ಹಿಂದೀ ತರಗತಿಯನ್ನು ತಾ॥ ೧೩-೭-೧೯೪೪ ರ ಲಾಗಾಯ್ತು ಪುನಃ ತೆರೆಯಲಾಗುವುದು. ಶಿಕ್ಷಣ ಉಚಿತ. ಪ್ರತಿದಿನ (ಭಾನುವಾರ ವಿನಹ) ಸಂಜೆ ೬ ಗಂಟೆ ಲಾಗಾಯ್ತು ೭ ಗಂಟೆವರೆಗೆ ತರಗತಿ ನಡೆಯುವುದು.

ಹೊಸ ರೆಸಿಡೆಂಟರು

ಸ್ವಂ.ಸು.ಪ್ರೋ.] ಬೆಂಗಳೂರು ೧೧

ಪಶ್ಚಿಮ ಭಾರತ ಸಂಸ್ಥಾನಗಳ ರೆಸಿಡೆಂಟರಾದ ಲೆ॥ ಕರ್ನಲ್ ಪಿ ಗೇಸ್‌ಫರ್ಡ್ ರವರನ್ನು ಮೈಸೂರು ಸಂಸ್ಥಾನದ ರೆಸಿಡೆಂಟರಾಗಿ ವೈಸ್‌ರಾಯರು ನೇಮಿಸಿದ್ದಾರೆ. ಈಗಿನ ರೆಸಿಡೆಂಟರಾದ ಲೆ॥ ಕ॥ ಫ್ರೇಸರರಿಗೆ ನಿವೃತ್ತರಾಗುವ ಮುಂಚೆ ಅಕ್ಟೋಬರಿನಿಂದ ರಜಾ ಕೊಡಲಾಗಿದೆ.

ಸೇಲಂ ರಷ್ಟು ಹೆಚ್ಚಿನ ವಿದ್ಯುಚ್ಛಕ್ತಿ ಸರಬರಾಜು

ಶಾಸನ ಸಭೆಯಲ್ಲಿ ಮಂತ್ರಿಯವರು ಸಚಿವರು ತಿಳಿಸಿದಂತೆ ಶಿವನಸಮುದ್ರದಲ್ಲಿ ಹೆಚ್ಚಿನ ಯಂತ್ರ [illegible] ಇದ್ದ ನಾಲ್ಕು ಜನರೇಟರುಗಳ [illegible] ಈಗ ಕೆ॥ ೫೦ ರಷ್ಟು ವಿದ್ಯುಚ್ಛಕ್ತಿಯು ಒದಗಿಸಲ್ಪಡುತ್ತಿದೆ ಎಂದು ಗೊತ್ತಾಗಿದೆ.

ಉಪವಾಸ ಮುಕ್ತಾಯ

ಜೈಪುರ ಸಂಸ್ಥಾನದ ಹಿಂದುಗಳ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ದೆಹಲಿಯಲ್ಲಿ ೫೪ ದಿನಗಳಿಂದ ಉಪವಾಸ ಮಾಡುತ್ತಿದ್ದ ಪಂ॥ ರಾಮಚಂದ್ರಶರ್ಮರು, ಮೊನ್ನೆ ದಿನ ಉಪವಾಸವನ್ನು ಮುಕ್ತಾಯ ಮಾಡಿದರು. ಅವರ ತೂಕ ೫೪ ಪೌಂಡು ಕಡಿಮೆಯಾಗಿದೆ. ನಿಶ್ಶಕ್ತಿಯಿದ್ದರೂ ಅವರಿಗೆ ಸುಸ್ತಿಲ್ಲ. ತಮ್ಮ ಉಪವಾಸಕ್ಕೆ ಕಾರಣರಾದ ಸರ್ ಮಿರ್ಜಾ ರವರನ್ನು ವಜಾ ಮಾಡುವಂತೆ ಹಿಂದೂ ಮಹಾ ಸಭೆಯು ನಿರ್ಣಯ ಮಾಡಿರುವುದನ್ನು ಅವರು ಪ್ರಶಂಸಿಸಿದರು.

ಹಿಂದೂ ಸಂಸ್ಥಾನಗಳಲ್ಲಿ ಮುಸ್ಲಿಂ ದಿವಾನರು ಬೇಡ

ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಸಾವರ್ಕರರು ದೆಹಲಿಯಲ್ಲಿ ಪಂ. ರಾಮಚಂದ್ರಶರ್ಮರ ಉಪವಾಸ ಮುಕ್ತಾಯಾನಂತರ ಒಂದು ಭಾಷಣ ಮಾಡಿ ಹಿಂದೂ ಸಂಸ್ಥಾನಗಳಲ್ಲಿ ಮುಸ್ಲಿಂ ದಿವಾನರುಗಳಿರಕೂಡದೆಂದು ಘೋಷಿಸಿದರು. ಜೈಪುರದಲ್ಲಿ ದೇವಸ್ಥಾನಗಳು ನಾಶಮಾಡಲ್ಪಟ್ಟಿವೆ; ಉರ್ದು ಭಾಷೆಯು ಶಾಲೆಗಳಲ್ಲಿ ಬಲಾತ್ಕರಿಸಲ್ಪಟ್ಟಿದೆ; ಗೋಮಾಳಗಳಿಗೆ ತೆರಿಗೆ ಹಾಕಲ್ಪಟ್ಟಿದೆ; ರಾಜ [illegible]ಯಲ್ಲಿ ಬದಲಾವಣೆಯಾಗಿದೆ; ಅರ್ಹರಾದ ಹಿಂದುಗಳಿದ್ದರೂ ಹೊರಗಿನ ಮುಸ್ಲಿಮರನ್ನು ಕೆಲಸಕ್ಕೆ ಆಮದು ಮಾಡಲಾಗಿದೆ–ಎಂದು ಅವರು ಹೇಳಿರುವರು.

ನಾರ್ಮಂಡಿಯಲ್ಲಿ ಹೊಸ ಧಾಳಿ

ಕೇನ್ ನೈಋತ್ಯ ಭಾಗದಲ್ಲಿ ಓಡಾನ್ ನದೀ ತೀರದಿಂದ ಬ್ರಿಟಿಷ್ ಸೈನ್ಯಗಳು ಹೊಸ ಧಾಳಿಯನ್ನು ಹೂಡಿವೆ. ಓರ್ನ್ ಕಡೆ ಅವು ನುಗ್ಗಿವೆ. ಎಂದು ವರದಿಗಳು ವರವಾಗಿವೆ. ರೂಮೆಲ್ಲನ ರಕ್ಷಣಾ ಸಾಲುಗಳಿಗೆ ಧಕ್ಕೆ ಬಂದಿದೆ ಸಾಧ್ಯವಾದಷ್ಟು ಸೈನ್ಯ ಮತ್ತು ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಾಗಿಸಲು ಅವನು ಹವಣಿಸುತ್ತಿದ್ದಾನೆ

ಕೊಲಂಬಿಯದಲ್ಲಿ ಮಿಲಿಟರಿ ರಾಜ್ಯ

ಲೆ॥ ಕ॥ ಜಿಲ್ ರವರು ಕೊಲಂಬಿಯದ ಅಧ್ಯಕ್ಷರಾದ ಗೋಮೆಜ್ ಮತ್ತು ಇನ್ನು ಕೆಲವು ಮಂತ್ರಿಗಳನ್ನು ಸೆರೆ ಹಿಡಿದು ತಾನೇ ಅಧ್ಯಕ್ಷನೆಂದು ಘೋಷಿಸಿಕೊಂಡಿರುವನೆಂದು ವರದಿಯಾಗಿದೆ. ಆದರೆ ಪೋಲೀಸಿನವರು ಅವನನ್ನು ಬಂಧಿಸಿ ಅಧ್ಯಕ್ಷರನ್ನು ಅವರ ಅನುಯಾಯಿಗಳನ್ನೂ ಬಿಡಿಸಿರುವರು.

ಫೀ ಹೆಚ್ಚಿಸಿದ್ದಕ್ಕೆ ವಿದ್ಯಾರ್ಥಿಗಳ ಪ್ರದರ್ಶನ

ಕೊಲ್ಲಾಪುರದ ಹೈಸ್ಕೂಲುಗಳಲ್ಲಿ ಫೀಯನ್ನು ಹೆಚ್ಚಿಸಿದ್ದಕ್ಕಾಗಿ ತಮ್ಮ ಅಸಮಾಧಾನವನ್ನು ಸೂಚಿಸಲು ಅಲ್ಲಿನ ವಿದ್ಯಾರ್ಥಿಗಳು ೮ ನೇ ತಾ॥ ಹರತಾಳವನ್ನಾಚರಿಸಿ ಸಭೆಯನ್ನು ನಡಿಸಿ ಹೆಚ್ಚಿನ ಫೀಯನ್ನು ವಜಾಮಾಡಬೇಕೆಂಬ ಠರಾವು ಮಾಡಿದರು. ಅನಂತರ ೧೫೦೦ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೆರವಣಿಗೆ ಹೊರಟು ಮುಖ್ಯ ಮಂತ್ರಿಗಳ ಕಚೇರಿಗೆ ಹೋದರು ಮಂತ್ರಿಗಳು ವಿದ್ಯಾರ್ಥಿ ಪ್ರತಿನಿಧಿಗಳನ್ನು ಕಂಡು ಮಾತನಾಡಿ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಿಳಿಸಿದರು.

ಮದರಾಸಿನಿಂದ ಕಚೇರಿಗಳ ವರ್ಗ

ಆಗಸ್ಟ ಮಾಹೆ ಏ.ಆರ್.ಪಿ. ಕಾರ್ಯಗಳಿಗೆ ಹೆಚ್ಚು ಸೌಕರ್ಯವನ್ನು ಒದಗಿಸುವುದಕ್ಕಾಗಿಯೂ ಇದರಿಂದ ಜನರಿಗೆ ವಿಶೇಷ ಅನನುಕೂಲವಾಗದಂತೆ ನೋಡಿಕೊಳ್ಳುವುದಕ್ಕಾಗಿಯೂ 'ಮದರಾಸ್' ನಗರದಿಂದ ಕೆಲವು ಕಚೇರಿಗಳನ್ನು ಬೇರೆ ಕಡೆಗೆ ವರ್ಗಾಯಿಸುವ ವಿಷಯದಲ್ಲಿ ಅಲ್ಲಿನ ಸರ್ಕಾರದವರು ತಮ್ಮ ಇಲಾಖೆಗಳ ಅಭಿಪ್ರಾಯವನ್ನು ಕೇಳಿದ್ದಾರೆ ಇದರಿಂದ ನೌಕರರಲ್ಲಿ ಸ್ವಲ್ಪ ಕೋಲಾಹಲವುಂಟಾಗಿದೆ. ಅದರ ಬಗ್ಗೆ ಆ ಸರ್ಕಾರದವರು ಒಂದು ಹೇಳಿಕೆ ಹೊರಡಿಸಿ ಈ ಬಗ್ಗೆ ಮಹಾಜನರು ಅನಾವಶ್ಯಕವಾಗಿ ಗಾಬರಿ ಹೊಂದಬಾರದೆಂದು ತಿಳಿಸಿದ್ದಾರೆ. ಮದರಾಸ್ ನಗರದೊಳಗೇ ಕೆಲಸವಿಲ್ಲದಿರುವ ಕಚೇರಿಗಳನ್ನೂ ನಗರದ ಆಡಳಿತಕ್ಕೆ ಸಂಬಂಧಪಡದ ಕಚೇರಿಗಳನ್ನೂ ಮೊದಲು ವರ್ಗಾಯಿಸುವ ಆಲೋಚನೆ ಇದೆ

ಜೂಜು

ಪೇಟೆ ಅಗ್ರಹಾರದ ಚಿಕ್ಕಬಸವೇಶ್ವರ ದೇವಸ್ಥಾನದ ಹಿಂಭಾಗದ ಮನೆಯೊಂದರಲ್ಲಿ ನಿನ್ನೆ ರಾತ್ರಿ ಜೂಜು ನಡೆಯುತ್ತಿದ್ದುದನ್ನು ಪ್ರೊ॥ ಇ॥ ಶ್ರೀ ಕೆ ಹನುಮಂತರಾವ್ [illegible] ಬಸಪ್ಪ, ಬಾಲಾಜಿ ಮುಂತಾದವರುಗಳು [illegible] ಮೇಲೆ ಮೊಕದ್ದಮೆ [illegible] ಜೂಜಿನ ಮೊಬಲಗು [illegible] ದೊರೆತಿದೆ.

ಶ್ರೀಮನ್ಮಹಾರಾಜರವರ ವರ್ಧಂತಿ

ಸ್ವ. ಸು.] ತಿಪಟೂರು, ೧೧.

ತಾ॥ ೧೧-೭-೪೪ ನೇ ಮಂಗಳವಾರದ ದಿವಸ ತಿಪಟೂರು ತಾಲೋಕು ಬಳೇ ಸಾಲ್ಕದ ಪ್ರೈಮರಿ ಸ್ಕೂಲಿನಲ್ಲಿ ಮಹಾರಾಜರವರ ಪಟವನ್ನು ಪ್ರಾತಃಕಾಲ ೯ ಗಂಟೆಯಿಂದ ಸ್ಕೂಲಿನಿಂದ ಹೊರಡಿಸಿ ಪೋಲೀಸ್ ವಾದ್ಯದಿಂದ ಮೆರವಣಿಗೆ ಮಾಡಿಸಿ ಸ್ಕೂಲಿನಲ್ಲಿ ಆರಿಸಿ 'ಮೀಟಿಂಗ್' ನಡೆಸಲ್ಪಟ್ಟಿತು. ಅಧ್ಯಕ್ಷರ ಸ್ಥಾನಕ್ಕೆ ಛೇರ್ಮೆನ್ ಟಿ ಸಿ. ಎಲ್. ನಾರಾಯಣಶೆಟ್ಟರನ್ನು ಸಭಿಕರವರ ರಾಜಿಯಂತೆ ಕೂರಿಸಲ್ಪಟ್ಟಿತು. ಮೊದಲು ಬಾಲಕರಿಂದ ದೇವತಾ ಪ್ರಾರ್ಥನೆಯೂ, ಮಹಾರಾಜರವರ ಗುಣಕಥನವನ್ನೂ, ಕೆ. ವೆಂಕಟರಾಮಯ್ಯನವರೂ, ವಯಸ್ಕರ ವಿದ್ಯಾಭ್ಯಾಸದ ವಿಷಯವಾಗಿ ಟಿ. ಸಿ. ಲಕ್ಷ್ಮಣ್ಣನವರೂ, ಸ್ಕೌಟ್ ಸಂಸ್ಥೆಯ ವಿಚಾರವಾಗಿ ಎಂ. ರಾಮಣ್ಣನವರೂ, ಸ್ಕೂಲಿನ ವಿಷಯವಾಗಿ ಎ. ಸೂರ್ಯನಾರಾಯಣಪ್ಪನವರೂ, ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಬಡಹುಡುಗರಿಗೆ ಟೋಪಿಗಳನ್ನೂ, ಸ್ಲೇಟು ಬಳಪಗಳನ್ನೂ ದಾನಮಾಡಲಾಯ್ತು. ಮಹಾರಾಜರವರ ಶ್ರೇಯಃಪ್ರಾರ್ಥನೆಯಾಗಿ ಫಲ ಪುಷ್ಪ ತಾಂಬೂಲ, ಸಿಹಿತಿಂಡಿ ಹಂಚಿದ ಮೇಲೆ ಸಭೆಯು ಮುಕ್ತಾಯವಾಯಿತು

ಸ್ವಂ. ಸು.] ತಿಪಟೂರು ೧೧

ತಿಪಟೂರಿನಲ್ಲಿ ವರ್ಧಂತ್ಯುತ್ಸವ

ತಾ॥ ೧೧-೭-೪೪ ನೇ ಮಂಗಳವಾರ ಪ್ರಾತಃಕಾಲ ೯ ಗಂಟೆಗೆ ಸರಿಯಾಗಿ ತಾಲ್ಲೂಕ್ ಕಛೇರಿಯಿಂದ ಮೆರವಣಿಗೆ ಹೊರಡಿಸಲ್ಪಟ್ಟಿತು ಜೊತೆಯಲ್ಲಿ ಹೈಸ್ಕೂಲು ವಿದ್ಯಾರ್ಥಿಗಳೂ, ಪ್ರೈಮರಿ ಸ್ಕೂಲುಗಳ ವಿದ್ಯಾರ್ಥಿಗಳೂ, ಹೊರಟು ಎಲ್ಲಾ ಬೀದಿಗಳಲ್ಲಿಯೂ, ವಾದ್ಯ ಸಮೇತ ಬಂದು ನಾಟಕದ ಥಿಯೇಟರಿನಲ್ಲಿ ಮೀಟಿಂಗ್ ನಡೆಸಲ್ಪಟ್ಟಿತು ಈ ಮೀಟಿಂಗಿನಲ್ಲಿ ಶ್ರೀ ಡಿ. ಬಸ್. ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಿವಬಸಪ್ಪನವರೂ, ಮತ್ತು ಇತರ ಮಹನೀಯರುಗಳು, ಮಹಾರಾಜರವರ ವಿಷಯವಾಗಿ ಸಭಾ ಕಥನ ಮಾಡಿ ಉಪನ್ಯಾಸ ಮಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ಮಹಾರಾಜರವರ ಶ್ರೇಯಃಪ್ರಾರ್ಥನೆ ನಡೆಸಲ್ಪಟ್ಟಿತು. ಅನಂತರ ಗಂಧ ಪುಷ್ಪ ತಾಂಬೂಲದೊಂದಿಗೆ ಸಭೆಯು ಬರಖಾಸ್ತಾಯಿತು. ಎಲ್ಲಾ ಬಾಲಕ ಬಾಲಕೀಯರಿಗೂ ಬೀಡು ಹಂಚಲ್ಪಟ್ಟಿತು.

ವರ್ಧಂತಿ ಉತ್ಸವ

ಸ್ವ. ಸು.] ಕೃಷ್ಣರಾಜನಗರ ೧೧

ತಾ॥ ೧೧-೭-೪೪ ರ ದಿವಸ ಊರಿನಲ್ಲಿ ವರ್ಧಂತ್ಯುತ್ಸವ ಪ್ರಯುಕ್ತ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಛಾಯಾಚಿತ್ರವನ್ನು ವಾದ್ಯಗೋಷ್ಠಿ ಸಮೇತ ಮುನಿಸಿಪಲ್ ಆಫೀಸಿನಿಂದ ಮೆರವಣಿಗೆ [illegible] ನಂತರ [illegible] ಹಂಚಲಾಯಿತು

ಬಾಲಕರಿಗೆ ತಿಂಡಿ

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ಈ ದಿವಸ [illegible] ಹಂಚಲಾಯಿತು.

ಬಂಗಾಳದಲ್ಲಿ ಮತ್ತೆ ಕ್ಷಾಮವೇ?

ದಿ|| ಶಾಮಪ್ರಸಾದ್ ಮುಖರ್ಜಿಯವರು ಒಂದು ಹೇಳಿಕೆ ಹೊರಡಿಸಿ ಬಂಗಾಳದ ಇಂದಿನ ಪರಿಸ್ಥಿತಿಗೆ ಅಲ್ಲಿನ ಮಂತ್ರಿಮಂಡಲವೇ ಕಾರಣವೆಂದು ಹೇಳಿದ್ದಾರೆ. ಅಲ್ಪಸಂಖ್ಯಾತರಾದ ಸರ್ಕಾರಕ್ಕೆ ಯಾರ ಬೆಂಬಲವೂ ಸಿಗುವುದಿಲ್ಲ. ಇಂತಹ ಮಂತ್ರಿಮಂಡಲದ ಪತನ ಅನಿವಾರ್ಯವಾಗಿ ... ಅವರ ಪ್ರಯತ್ನವು ಆಗಬಹುದು. ... ಮುಖ್ಯಮಂತ್ರಿಗಳ ನೀತಿಯಿಂದ ... ಬಂದಿರುವುದರಿಂದ ಮತ್ತೆ ಕ್ಷಾಮ ... ಬಂಗಾಳದ ಪರಿಸ್ಥಿತಿಯನ್ನು ಸುಧಾರಿಸ ... ಈಗಿನ ಮಂತ್ರಿಮಂಡಲವನ್ನು ... ಬೇಕು ಅಥವ ಪ್ರತಿನಿಧಿ ಸಭೆ ... ಪ್ರಜಾಪ್ರತಿನಿಧಿಗಳು ರಚಿ ... ಕಾರ್ಯಕ್ರಮವು ಕೈಗೊ ... ಕಲ್ಪಿಸಬೇಕು—ಎಂದು ... ಹೇಳಿದ್ದಾರೆ

ಆಹಾರ ದೊರೆಯದೆ ಮಡದಿ ಮಕ್ಕಳ ಕೊಲೆ

... ಎಂಬಲ್ಲಿ ಒಬ್ಬ ಗ್ರಾಮಸ್ಥನು ... ಮಕ್ಕಳನ್ನೂ ತನಗೂ ತ ... ಮತ್ತು ಒಂದೂವರೆ ವರ್ಷದ ... ಆಹಾರ ದೊರೆ ... ದಿನ ಉಪವಾಸವಿದ್ದು ನಂತರ ... ಎಲ್ಲಿಯೂ ಏನೂ ದೊರೆ ... ಮಕ್ಕಳ ಸ್ಥಿತಿ ... ನೋಡಲಾರದೆ ಅವರನ್ನು ಕೊಲೆ ... ಅವನಿಗೆ ಜೀ ... ಶಿಕ್ಷೆ ವಿಧಿಸಲಾಯಿತೆಂದೂ ಗೊ ... ದೆ

ವಿದ್ಯಾರ್ಥಿಗಳ ಮೇಲೆ ಮುಷ್ಟಿ ಪ್ರಯೋಗಿಸಿದರು!

... ಅಂಧ್ರ ... ಕಾಲೇಜಿನ ... ಪೋಲೀಸಿನವರ ... ಮತ್ತು ... ಶಾಲೆಯ ... ವಿದ್ಯಾಲಯದ ... ಕೃಷ್ಣ ... ತನಕ್ಕೆ ... ದ್ದಾರೆ

ಅರಸೀಕೆರೆಗೆ ರೇಷನಿಂಗ್ ಬೇಕು

ಸ್ವಂ.ವ.] ಅರಸೀಕೆರೆ ೧೦

ಪೌರಸಭೆಯ ಆಹಾರ ಸಮಿತಿಯ ಸದಸ್ಯರು ಅಧಿಕಾರಿಗಳ ಬಳಿ ಹೋಗಿ ಈಗ ಮುನಿಸಿಪಲ್ ಡಿಪೋವಿಗೆ ವಾರಕ್ಕೆ ಕೊಡುತ್ತಿರುವ ೫೦ ಪಲ್ಲ ಅಕ್ಕಿ, ೩೦ ಪಲ್ಲ ರಾಗಿ ಸಾಲದು; ಇನ್ನೂ ಕೊನೇಪಕ್ಷ ೫೦ ಪಲ್ಲ-ಅಕ್ಕಿಯನ್ನಾದರೂ ಜಾಸ್ತಿ ಮಾಡಿಕೊಡಲು ಕೇಳಿದ್ದರಿಂದ ಕೊಡಲು ಅಧಿಕಾರಿಗಳು ನಿರಾಕರಿಸಿದರು. ಆಗ ಆಹಾರ ಸಮಿತಿಯವರು ಹಂಚಿಕೆಯನ್ನೂ ಮಾಡಲು ಸಾಧ್ಯವಿಲ್ಲವೆಂದು ಕೈ ಬಿಟ್ಟರು. ಮತ್ತು ಈ ಊರಿಗೆ ಜಿಲ್ಲಾಧಿಕಾರಿಗಳು ಮೊಕ್ಕಾಂ ಮಾಡಿದ್ದಾಗ ರೇಷನಿಂಗ್ ಪದ್ಧತಿಯನ್ನೂ ಕೂಡಲೇ ಜಾರಿಗೆ ತರಬೇಕೆಂದು ಕೇಳಿಕೊಂಡರು

ಈ ಊರಿನಲ್ಲಿ ರೇಷನಿಂಗ್ ಸೆನ್ಸಸ್ ತೆಗೆದುಕೊಂಡು ಎರಡು ತಿಂಗಳಾದರೂ ಇನ್ನೂ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಾರದಿರುವುದನ್ನು ನೋಡಿ ಜನಗಳು ಬಹಳ ಅಸಮಾಧಾನದಿಂದ ಇರುತ್ತಾರೆ. ಮತ್ತು ಸರ್ಕಾರದವರು ಕೂಡಲೇ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರುತ್ತಾರೆಂದು ನಂಬಿರುತ್ತಾರೆ.

ವಿಶ್ವಕರ್ಮ ವಿವಾಹಕ್ಕೆ ಅಡ್ಡಿಯೆ?

ಸಿರಿಯಾಪಟ್ಟಣದ ತಾ|| ನಂದೀಪುರಗ್ರಾಮದಲ್ಲಿ ಕಳೆದ ೨೬-೬-೪೪ ರಲ್ಲಿ ಶ್ರೀ ಸಿ. ಪುಟ್ಟ. ಮಾಯಪ್ಪಾಚಾರ್ಯರ ಲಗ್ನವು ಆ ಗ್ರಾಮದ ಮುಖಂಡರ ಮತ್ತು ಸರ್ಕಾರದ ಅಧಿಕಾರಿಗಳ ಸಹಕಾರದಿಂದ ಸುಸೂತ್ರವಾಗಿ ನೆರವೇರಿತು. ಇಪ್ಪತ್ತನೇ ಶತಮಾನದ ನಾಗರೀಕತೆಯ ಈ ಕಾಲದಲ್ಲೂ ವಿಶ್ವಕರ್ಮ ಜಾತೀಯರು ಅವರವರ ಗ್ರಾಮಗಳಲ್ಲಿ ವಿವಾಹಾದಿಗಳನ್ನು ಜರುಗಿಸಲು ಆತಂಕವುಂಟಾಗುತ್ತಿರುವುದು ಶೋಚನೀಯ. ದೇಶಬಾಂಧವರು ಈ ಕಡೆಗೆ ಗಮನ ಕೊಡಬೇಕಾದುದು ಅನಿವಾರ್ಯ.

ಒಬ್ಬ ವಿಶ್ವಕರ್ಮ ಪ್ರಜೆ

ಹೊಸ ಕ್ಲಿನ್ಕರ್ ಕಾರ್ಖಾನೆ

ಮದ್ರಾಸ್ ಸರ್ಕಾರದವರು ಹೊಸ ಕ್ಲಿನ್ಕರ್ ಕಾರ್ಖಾನೆಯೊಂದನ್ನು ಅನ್ನಾಮಲೆ ಬೆಟ್ಟದಲ್ಲಿ ಸ್ಥಾಪಿಸಲು ನಿರ್ಧರಿಸಿ ಆ ಬಗ್ಗೆ ಅಂದಾಜು ಪಟ್ಟಿಯ ವರದಿಗಳನ್ನು ತಯಾರಿಸಲು ಒಬ್ಬ ಅಧಿಕಾರಿಯನ್ನು ನೇಮಿಸಿರುವುದಾಗಿ ಗೊತ್ತಾಗಿದೆ

ಕೈಗಾರಿಕಾಭಿವೃದ್ಧಿ ಯೋಜನೆಗಳು

ಸ್ವ. ಸು.] ಬೆಂಗಳೂರು ೧೧

ಕೆಳಗೆ ಕಂಡ ಕೈಗಾರಿಕಾಭಿವೃದ್ಧಿ ಯೋಜನೆಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ.—

ಪ್ಲಾಸ್ಟಿಕ್‌ಗಳ ತಯಾರಿಕೆ, ವಿದ್ಯುಚ್ಛಕ್ತಿ ಮೋಟಾರುಗಳು ಮತ್ತು ಬೀಸಣಿಗೆಗಳು, ಎನಾಮಲಿಂಗ್ ಕೈಗಾರಿಕಾಭಿವೃದ್ಧಿ, ಮತ್ತು ರೇಡಿಯೋ ರಿಸೀವರ್ ಸೆಟ್ಟುಗಳ ತಯಾರಿಕೆ.

ಸರ್ಕಾರೀ ಸುದ್ದಿ

ಹೆಗ್ಗಡದೇವನಕೋಟೆ ಅಮಲ್ದಾರರಾದ ಶ್ರೀ ಸಿ ಎಂ. ಕೆಂಪಣ್ಣನವರನ್ನು ಹಾಸನ ಜಿಲ್ಲಾಧಿಕಾರಿಗಳ ಫುಡ್ ಅಸಿಸ್ಟೆಂಟರನ್ನಾಗಿ ನೇಮಕ ಮಾಡಲಾಗಿದೆ. ಫುಡ್ ಅಸಿಸ್ಟೆಂಟರಾಗಿದ್ದ ಶ್ರೀ ಜೆ ಎಲ್ ನಾಗಪ್ಪನವರನ್ನು ರೆವಿನ್ಯೂ ಇಲಾಖೆಗೆ ರಿವರ್ಟ್ ಮಾಡಲಾಗಿದೆ.

ರೇಷ್ಮೆ ಸಾಗಿಸಲು ಪ್ರಯತ್ನಿಸಿದ್ದಕ್ಕೆ ಶಿಕ್ಷೆ

ಬೆಂಗಳೂರಿನ ಶ್ರೀ|| ನಟೇಶಮೊದಲಿಯಾರ್ ಎಂಬುವರು ಸುಮಾರು ೮೦೦ ಅಡಿ ಕಚ್ಚಾರೇಷ್ಮೆಯನ್ನು ರಹದಾರಿಯಿಲ್ಲದೆ ಸಾಗಿಸುತ್ತಿದ್ದುದು ಪತ್ತೆಯಾಗಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಆ ಪಾದಿತರಿಗೆ ನಗರನ್ಯಾಯಾಧೀಶರು ೧ ತಿಂಗಳ ಸಾದಾ ಸಜ ಮತ್ತು ೩೦೦ ರೂ ಜುಲ್ಮಾನೆ, ತಪ್ಪಿದರೆ ಮತ್ತೊಂದು ತಿಂಗಳ ಸಾದಾಸಜ ಶಿಕ್ಷೆಯನ್ನು ವಿಧಿಸಿದರು. ಅಲ್ಲದೆ ರೇಷ್ಮೆಯನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಯಿತು.

ಬಂಗಾಳಕ್ಕೆ ಕ್ಷಾಮದ ಭಯವಿಲ್ಲ!

ಬಂಗಾಳದಲ್ಲಿ ಆಹಾರದ ಅಭಾವವುಂಟಾಗದಂತೆ ಈ ವರ್ಷ ಎಲ್ಲಾ ಏರ್ಪಾಡನ್ನೂ ಮಾಡಿದೆ. ಈ ವರ್ಷ ಕ್ಷಾಮವು ಬರಲಾರದು ಎಂದು ಅಲ್ಲಿನ ಗೌರ್ನರು ಹೇಳಿದ್ದಾರೆ

Edited, printed and published by A. R. Nagarajan, at the Sadhvi Press, D. Subbiah Road, Mysore.

ಏಳು ಗಂಟೆಗೆ ೧ ಹಡಗು

ಅಮೇರಿಕದ ಜಾರ್ಜ್ ಲಾಲಿ ಕಾರ್ಪೋರೇಷನ್ನಿನವರು ಒಂದು ಸೈನ್ಯ ನೌಕೆಯನ್ನು ಕೇವಲ ಏಳು ಗಂಟೆ ೧ ನಿಮಿಷದ ಕಾಲದಲ್ಲಿ ಕಟ್ಟಿ ಆಶ್ಚರ್ಯವುಂಟುಮಾಡಿದ್ದಾರೆ. ಅದರ ಉದ್ದ ೧೫೦ ಅಡಿ. ಮುನ್ನೂರು ಜನರು ಅದರ ಕೆಲಸವನ್ನು ಕೈಕೊಂಡಿದ್ದರು. ಇದಕ್ಕೆ ಮುಂಚೆ ಇಂತಹ ಹಡಗನ್ನು ಕಟ್ಟಲು ಐದು ದಿನ ಹಿಡಿದಿತ್ತು. ಮೊದಲೇ ಸಿದ್ಧವಾಗಿದ್ದ ಭಾಗಗಳನ್ನು ಉಪಯೋಗಿಸಿ ೧೪ ಗಂಟೆಗಳಲ್ಲಿ ಹಡಗನ್ನು ಅವರು ಕಟ್ಟಬೇಕೆಂದಿದ್ದರು. ಆದರೆ ಏಳೇ ಗಂಟೆಯಲ್ಲಿ ಅದು ಸಿದ್ಧವಾಯಿತು.

ಯಾತನಾ ನಿರ್ದೇಶ

ಶರೀರದ ಯಾವ ಯಾವ ಭಾಗಗಳಲ್ಲಿ ಎಂತೆಂತಹ ಯಾತನೆಗಳು ಹುಟ್ಟುತ್ತವೆಂಬುದನ್ನು ಕಂಡುಹಿಡಿಯಲು ಸಹಾಯವಾಗುವಂತೆ ಸ್ಯಾನ್ ಫ್ರಾನ್ಸಿಸ್ಕೋವಿನ ೨೬ ಜನ ವೈದ್ಯರೂ, ನರ್ಸುಗಳೂ, ವಿದ್ಯಾರ್ಥಿಗಳೂ ತಮ್ಮ ಶರೀರದ ಮೇಲೆಯೇ ಶಸ್ತ್ರಪ್ರಯೋಗಗಳು ನಡೆಯಲು ಅವಕಾಶ ಕೊಟ್ಟರು. ಅವರ ಕೈ, ಕಾಲುಗಳಲ್ಲಿಯೂ, ಮೂಳೆಗಳಲ್ಲಿಯೂ ಡ್ರಿಲ್ (ಬೈರಿಗೆ) ಯಂತ್ರಗಳಿಂದ ಕೊರೆಯಲಾಯಿತು. ಇದರಿಂದಾದ ವಿಶೇಷ ನೋವನ್ನು ಸಹಿಸುವುದಲ್ಲದೆ ಆಗಿಂದಾಗಲೇ ಅವರು ನೋವಿನ ವರ್ಣನೆಯನ್ನೂ ಮಾಡುತ್ತಿದ್ದರು. ೧೬೦ ಸಾರಿ ಅವರನ್ನು ಚುಚ್ಚಲಾಯಿತು.

ಗೋವನ್ನು ರಕ್ಷಿಸಲು ಪ್ರಾಣಾರ್ಪಣೆ

ರೈಲ್ವೆ ಕಂಬಿಯಬಳಿ ಮೇಯುತ್ತಿದ್ದ ತನ್ನ ಹಸುವೊಂದನ್ನು ಆಚೆಗೆ ಓಡಿಸಲು ಹೋಗಿ ಅದನ್ನು ಓಡಿಸಿದ ಒಡನೆಯೇ ರೈಲು ವೇಗವಾಗಿ ಬಂದುದರಿಂದ ಇಂಜನ್ನಿನ ಒಂದು ಭಾಗವು ಮದರಾಸ್ ಬಳಿ ಕೊರಕುಪೇಟೆಯ ನಿವಾಸಿಯಾದ ಮುನಿಸ್ವಾಮಿಯ ತಲೆ ಹಿಂಭಾಗಕ್ಕೆ ಬಡಿದು ಅನಂತರ ಆಳೆಯು ಆಸ್ಪತ್ರೆಯಲ್ಲಿ ಮೃತಪಟ್ಟನೆಂದು ವರದಿಯಾಗಿದೆ.

ಚೀಣದ ಕಳವಳ ಸ್ಥಿತಿ

ಅಮೇರಿಕದ ಉಪಾಧ್ಯಕ್ಷರಾದ ಮಿ|| ವಾಲೇಸರು ಈಚೆಗೆ ಚೀಣಾಕ್ಕೆ ಭೇಟಿ ಕೊಟ್ಟದ್ದರಿಂದ ಚೀಣಾದ ಸ್ಥಿತಿಯು ಅತ್ಯಂತ ಕಳವಳಕರವಾಗಿದೆಯೆಂದು ಅವರು ಹೇಳುವರು. ಅಧ್ಯಕ್ಷ ರೂಸ್ವೆಲ್ಟರೂ ವ್ಯಾಲೇಸರೂ ೨ ಗಂಟೆಗಳ ಕಾಲ ಚೀಣಾದ ವಿಷಯವಾಗಿ ಮಾತುಕತೆ ನಡೆಸಿದರು.

ಸ್ತ್ರೀಯರ ಸೌಕರ್ಯಕ್ಕೆ

... ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರ್ಯಾಂಡ್ ಕಾಫಿಪುಡಿ

ಉಪಯೋಗಿಸಿ.

... ಪುಟ್ಟಣ್ಣ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

... ದೇವರಾಜ ಮಾರ್ಕೆಟ್ ಮಂಡಿಯಲ್ಲಿಯೂ, ಸಿಟಿಯ ಎಲ್ಲಾ ... ಪ್ರತಿಯಾಗಿ ... ಮತ್ತು ... ಕೊಡಲ್ಪ ... ದೆ

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.

ಆಯುರ್ವೇದ ವೈದ್ಯಭೂಷಣ ಪಂಡಿತ

ಕೆ. ವಿ. ವೆಂಕಟರಾಮಯ್ಯ,

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ,

ಅರಕಲವಾಡಿ (ಚಾಮರಾಜನಗರ ತಾ||)

ಟಿ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ.

... ಬಳೆಗಳು ಹೊಸ ನಮೂನೆಯ ಬಳೆಗಳು ಈಗತಾನೇ ಬಂದಿವೆ! ಫ್ಯಾನ್ಸಿ ಸರಗಳು

... ಆಟದ ಸಾಮಾನುಗಳು ಕೆಮಿಕಲ್ ದಂತದ ಬಳೆಗಳು

ದೇವರಾಜ ಮಾರ್ಕೆಟ್, ಸೌಭಾಗ್ಯ ಸ್ಟೋರ್ಸ್ ಮೈಸೂರು.

ಸಂಪುಟ ೨] ಗುರುವಾರ ೧೩--೭--೪೪ [ಸಂಚಿಕೆ ೨೯೮

ರಾಷ್ಟ್ರೀಯ ಸರ್ಕಾರದ ಬಗ್ಗೆ ಗಾಂಧಿಜಿ ವಿವರಣೆ

ರಷ್ಯದಲ್ಲಿ ಹೆಚ್ಚು ಮಕ್ಕಳು ಹೆತ್ತವರಿಗೆ ಹೆಚ್ಚು ಸನ್ಮಾನ
ಕೆಂಪು ಸೈನ್ಯಗಳು ಲಾಟ್ವಿಯವನ್ನು ಪ್ರವೇಶಿಸಿದವು.

ವರ್ಧಂತಿ ಬಿರುದುಗಳು

ಮೈಸೂರು ೧೨

ಈ ದಿನ ರಾತ್ರಿ ಕಲ್ಯಾಣ ಮಂಟಪದಲ್ಲಿ ನಡೆದ ದರ್ಬಾರಿನಲ್ಲಿ ಮಹಾಪ್ರಭುಗಳು ದಯಪಾಲಿಸಿದ ಬಿರುದುಗಳಿವು:—

೧. ಮೈಸೂರು ಹೈಕೋರ್ಟ್ ಚೀಫ್ ಜಸ್ಟಿಸ್ ದಿವಾನ್ ಬಹದ್ದೂರ್ ಶ್ರೀ|| ಪಿ ವೆಂಕಟರಮಣರಾವ್ "ರಾಜಧರ್ಮ ಪ್ರವೀಣ"

೨ ಮೈಸೂರು ವಿಶ್ವ ವಿದ್ಯಾನಿಲಯದ ವೈಸ್ ಛಾನ್ಸಲರ್ ಮಿ|| ಇ. ಜಿ. ಮೆಕಾಲ್ಪೈನ್ "ರಾಜ ಸಭಾ ಭೂಷಣ"

೩ ಪಬ್ಲಿಕ್ ವರ್ಕ್ಸ್ ಸಚಿವರು, ಹಜ್ ಜೆ ಮಹಮದ್ ಇಮಾಂ "ಮುಷೀರ್-ಉಲ್-ಮುಲ್ಕ್"

೪. ಸ್ಥಳೀಯ ಸಂಸ್ಥೆಗಳ ಸಚಿವರು, ಶ್ರೀಮಾನ್ ಹೆಚ್. ಬಿ ಗುಂಡಪ್ಪಗೌಡರು, "ರಾಜ ಮಂತ್ರ ಪ್ರವೀಣ"

೫. ರಿಟೈರ್ಡ್ ಹೈಕೋರ್ಟ್ ಜಡ್ಜ್ ಶ್ರೀ|| ಸಿ. ಸುಬ್ರಹ್ಮಣ್ಯ ಅಯ್ಯರ್, "ರಾಜಧರ್ಮ ಪ್ರಸಕ್ತ"

೬ ಬೆಂಗಳೂರಿನ ವರ್ತಕರು ಶ್ರೀ|| ಕೆ. ಕುಪ್ಪುಸ್ವಾಮಿ ನಾಯ್ಡುರವರು ಮತ್ತು ಮೈಸೂರು ಕೆಮಿಕಲ್ ವರ್ಕ್ಸ್ ಪ್ರೊಪ್ರೈಟರ್ ಶ್ರೀ ಬಿ. ಎಂ. ಶ್ರೀನಿವಾಸಯ್ಯನವರಿಗೆ "ಧರ್ಮ ಪ್ರಕಾಶ"

೮ ಮದ್ರಾಸಿನ ಟೈಗರ್ ವರದಾಚಾರ್ ಮತ್ತು ೯ ಸಂಗೀತ ಶಾಸ್ತ್ರ ರಕ್ಷಕ ಅರಸಿಕೆರೆ ಹಳ್ಳಿ ಶ್ರೀ|| ವಾಸುದೇವಾಚಾರ್ಯರವರಿಗೆ "ಸಂಗೀತ ಶಾಸ್ತ್ರ ವಿಶಾರದ"

೧೦ ಶ್ರೀ|| ಡಿ. ವೆಂಕಟರಾಮಯ್ಯನವರು ಬಿ ಎ., ಎಲ್. ಟಿ. "ರಾಜಸೇವಾಸಕ್ತ"

೧೧ ಬೆಂಗಳೂರಿನ ಪ್ಲೀಡರ್ ಶ್ರೀ|| ಜಿ ವೆಂಕಟರಮಣಯ್ಯನವರು "ಧರ್ಮನಿರತ"

೧೨. ಬೆಂಗಳೂರಿನ ಹಾರ್ಡ್ ವೇರ್ ಮರ್ಚೆಂಟ್ ಹ|| ಎ ಆರ್. ಎ. ಬಾಸೀತ್ "ನಜ್ಮ್-ಉತ್-ಉಜ್ಜರ್"

ಸತ್ಕಾರ ಕೂಟ

ಮೈಸೂರು ಸರ್ಕಾರದ ಲೈಫ್ ಇನ್ಷೂರೆನ್ಸ್ ಡಿಪಾರ್ಟ್‌ಮೆಂಟಿನ ಮೈಸೂರು ಸರ್ಕಲ್ ಹೆಲ್ಪರ್ ಸಂಘದವರು, ಅಧಿಕಾರದಿಂದ ನಿವೃತ್ತರಾಗಲಿರುವ ಇನ್ಷೂರೆನ್ಸ್ ಇಲಾಖೆ ಡೆಪ್ಯುಟಿ ಸೆಕ್ರೆಟರಿ ಶ್ರೀ ಜಿ. ಮಾಧವರಾಯರನ್ನು ಮೈಸೂರು ಸಿಟಿ ಕೋ-ಆಪರೇಟಿವ್ ಹೋಂನಲ್ಲಿ ಒಂದು ಸತ್ಕಾರ ಕೂಟ ಸಮಾರಂಭದಲ್ಲಿ ಗೌರವಿಸಿದರು. ರ್‍ಯಾಷನಲಿಸ್ಟ್ ಪತ್ರಿಕೆಯ ಸಂಪಾದಕರಾದ ಶ್ರೀ ಜಿ. ಆರ್. ಜೋಸ್ಯರವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ತಮ್ಮ ವಿನೋದವಾದ ಭಾಷಣದಲ್ಲಿ ಜೀವವಿಮಾ ಸಹಾಯಕರು ಇನ್ಷೂರೆನ್ಸ್ ವ್ಯವಸ್ಥೆಯಲ್ಲಿ ಬೆನ್ನಿನ ಚೌಕಟ್ಟಿನ ರೂಪವೆಂದೂ, ಸಮಾಜದ ಅಡಿಗಲ್ಲೆಂದೂ ತಮ್ಮ ಸ್ವಂತ ಅನುಭವಗಳಿಂದ ಬಹು ಸ್ವಾರಸ್ಯವಾಗಿ ಭಾಷಣ ಮಾಡಿದರು.

ಅಕ್ಟೋಬರಿನಲ್ಲಿ ಯುದ್ಧ ಮುಕ್ತಾಯ

ಈ ವರ್ಷ-ಅಥವಾ ಅಕ್ಟೋಬರಿನಲ್ಲಿ ಜೇ ಯುದ್ಧವು ಮುಕ್ತಾಯವಾಗಬಹುದೆಂದು ಮಿತ್ರ ಮಿಲಿಟರಿ ನಾಯಕರು ಅಭಿಪ್ರಾಯಪಡುತ್ತಿದ್ದಾರೆ ಅನೇಕ ಯುದ್ಧ ಕ್ಷೇತ್ರಗಳಲ್ಲಿ ಸುತ್ತಿ ಬಂದಿರುವ ಪರ್ ಸೀವಲ್ ನ್ಯೂಮನ್ ಎಂಬ ಆಸ್ಟ್ರೇಲಿಯದ ಪತ್ರಿಕೋದ್ಯೋಗಿಗಳು ಹೀಗೆ ಹೇಳಿರುವರು.

ರಷ್ಯದಲ್ಲಿ ಹೆಚ್ಚು ಮಕ್ಕಳಾದವರಿಗೆ ಬಹುಮಾನ

ಯುದ್ಧದಿಂದಾಗಿರುವ ಜನಸಂಖ್ಯೆಯ ನಷ್ಟವನ್ನು ಭರ್ತಿಮಾಡಲು ರಷ್ಯಾ ಮತ್ತೊಂದು ಯೋಜನೆಯನ್ನು ಕೈಗೊಂಡಿದೆ. ಸ್ತ್ರೀಯರೆಲ್ಲರೂ ತಾಯಿಯರಾಗುವುದೇ ಇಂದಿನ ರಷ್ಯದ ರಾಷ್ಟ್ರೀಯ ಗುರಿ. ಹೆಚ್ಚು ಮಕ್ಕಳನ್ನು ಹಡೆದವರಿಗೆ ಹೆಚ್ಚು ಬಹುಮಾನವನ್ನು ಕೊಡಲಾಗುತ್ತದೆ. ೭ ಮಕ್ಕಳ ತಾಯಂದಿರಿಗೆ ಕೊಡುತ್ತಿದ್ದ ವೇತನವನ್ನು ಇನ್ನು ಮುಂದೆ ಮೂರು ಮಕ್ಕಳಿರುವವರಿಗೂ ಕೊಡಲಾಗುತ್ತದೆ. ಕೆಲಸಗಾರರಾಗಿರುವ ಮಹಿಳೆಯರಿಗೆ ಬಾಣಂತಿತನದ ರಜಾವು ೧೧ ವಾರಕ್ಕೆ ಹೆಚ್ಚಿಸಲ್ಪಡುತ್ತದೆ. ಬಸುರಿಕಾಲದ ಕಡೇ ಮೂರು ತಿಂಗಳಲ್ಲಿ ಯೂ ಬಾಣಂತಿತನದ ನಾಲ್ಕು ತಿಂಗಳಲ್ಲಿ ಯೂ ಒಂದಕ್ಕೆರಡರಷ್ಟು ರೇಷನ್ ಕೊಡಲಾಗುವುದು ಐದಾರು ಮಕ್ಕಳಿರುವ ಮಹಿಳೆಯರಿಗೆ ಪದಕಗಳನ್ನು ಕೊಡಲಾಗುತ್ತದೆ ೯ ಮಕ್ಕಳ ಮಾತೆಗೆ 'ಮಾತಾ ವೈಭವ' ಹತ್ತು ಮತ್ತು ಹೆಚ್ಚಿನ ಮಕ್ಕಳ ತಾಯಿಗೆ 'ವೀರಮಾತಾ' ಎಂಬಂತಹ ಪ್ರಶಸ್ತಿಗಳು ಕೊಡಲ್ಪಡುವುವು. ಮಕ್ಕಳಿಲ್ಲದವರು ತಮ್ಮ ಉತ್ಪತ್ತಿಯಲ್ಲಿ ಶೇ|| ೬ ರಂತೆಯೂ ಒಂದೇ ಮಗು ಇರುವವರು ೧|| ರಂತೆಯೂ ೨ ಮಕ್ಕಳಿರುವವರು ಶೇ|| ೧ ರಂತೆಯೂ ತೆರಿಗೆ ಕೊಡಬೇಕು. ವಿವಾಹವಿಚ್ಛೇದನಗಳಿಗೆ ಬೇಗ ಅವಕಾಶ ಕೊಡುವುದಿಲ್ಲ ಎಲ್ಲಾ ಮಾರ್ಗಗಳೂ ವಿಫಲವಾದರೆ ಆಗ ಕೊಡಲಾಗುವುದು

ಲಾಟ್ವಿಯಕ್ಕೆ ರಷ್ಯಾ ಸೇನೆಯ ಪ್ರವೇಶ

ಕೆಂಪು ಸೇನೆಯು ಲಾಟ್ವಿಯಾಕ್ಕೆ ಪ್ರವೇಶಿಸಿದೆ. ಅಲ್ಲಿಂದ ಮುಂದೆಯೂ ನುಗ್ಗುತ್ತಿದೆ. ರಷ್ಯಾದ ಸೇನೆಯ ಮುಂದೋಟವು ಬಹಳ ಬಿರುಸಾಗಿದೆ ೨೪ ಗಂಟೆಯಲ್ಲಿ ಒಂದು ಕಡೆಯು ೩೩ ಮೈಲಿ ಹೋಗಿದೆ ಕೆಂಪು ಸೇನೆಯು ಈಗ ಲಿಥುವೇನಿಯಾದ ಹಿಂದಿನ ರಾಜಧಾನಿಯಾದ ಕೋವ್ನೋ ವಿನಿಂದ ೪೦ ಮೈಲಿಯೊಳಗಿದೆ

ಗಾಂಧೀಜಿಗೆ ನೆಗಡಿ

ಪಂಚಗನಿಯಲ್ಲಿ ಮಳೆ ಜೋರಾಗಿ ಬೀಳುತ್ತಿರುವುದರಿಂದ ಗಾಂಧೀಜಿಯವರಿಗೆ ಸ್ವಲ್ಪ ನೆಗಡಿಯೂ ಕೈಕಾಲುಗಳಲ್ಲಿ ಸ್ವಲ್ಪ ನೋವೂ ಉಂಟಾಗಿದೆ

ದನಗಳ ರಕ್ಷಣೆಗೆ ಯೋಜನೆ

ಸ್ವಂ.ಸು.] ಬೆಂಗಳೂರು ೧೪

ಕರೆಯುವ ಹಸುಗಳು ಕರೆಯುವುದನ್ನು ಬಿಟ್ಟೊಡನೆ ಮಾಲೀಕರು ಅವನ್ನು ಕಟುಕರ ಪಾಲು ಮಾಡಿ ಸಂತಾನದ ಗೋ ಸಂಪತ್ತನ್ನು ನಾಶ ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾರದವರು ಹೆಸರುಘಟ್ಟದ ಬಳಿ ಒಂದು ದನಗಳ ಫಾರವನ್ನು ಏರ್ಪಡಿಸಿರುವರೆಂದು ತಿಳಿದುಬಂದಿದೆ ತಿಂಗಳಿಗೆ ದನವೊಂದಕ್ಕೆ ಸ್ವಲ್ಪ ಹಣವನ್ನು ತೆಗೆದುಕೊಂಡು ಪುನಃ ಅದು ಹಾಲು ಕರೆಯುವವರೆಗೆ ಅಲ್ಲಿಡಲಾಗುವುದು.

ಕುದುರೆ ಫಾರಂ

ಒಂದು ಲಕ್ಷ ರೂ. ವೆಚ್ಚದಲ್ಲಿ ಸರ್ಕಾರದವರು ಹೆಸರುಘಟ್ಟದ ಬಳಿ ಒಂದು ಜಟಕಾ ಕುದುರೆಗಳ ಫಾರವನ್ನು ಇಟ್ಟು ಸುಲಭ ಬೆಲೆಯಲ್ಲಿ ಕುದುರೆಗಳನ್ನು ಒದಗಿಸುವ ಏರ್ಪಾಡು ಮಾಡಬೇಕೆಂದಿದ್ದಾರೆ. ಉತ್ತರ ದೇಶದಿಂದ ಉತ್ತಮವಾದ ಕುದುರೆಗಳನ್ನು ತರಿಸಲಾಗುವುದು.

ಫಲಪುಷ್ಪ ಇಲಾಖೆ

ಇನ್ನು ಮುಂದೆ [illegible] ಹಾರ್ಟಿಕಲ್ಚರಲ್ ಇಲಾಖೆ [illegible] ವನ್ನು ಇಂಜನಿಯರಿಂಗ್ ಮತ್ತು ವ್ಯವಸಾಯ ಇಲಾಖೆಗಳಿಗೆ ಹಂಚುವರೆಂದು ಗೊತ್ತಾಗಿದೆ.

ಈ ಇಲಾಖೆ ಡೈರೆಕ್ಟರಾದ ರಾ|| ಬ|| ಹೆಚ್. ಸಿ. ಜವರಯ್ಯನವರು ಇಂದಿನಿಂದ ನಿವೃತ್ತರಾಗುವರು

ಕಳ್ಳತನ

ಮೊನ್ನೆ ಸಂಜೆ ಪರಕಾಲಸ್ವಾಮಿಗಳ ಮಠದ ಹಿಂಭಾಗದ ಬೀದಿಯಲ್ಲಿ ಶ್ರೀ ರಾಜಾರಾಂಲಾಲ್ ಎಂಬುವರ ಮನೆಯವರೆಲ್ಲಾ ವರ್ಧಂತಿ ಮೆರವಣಿಗೆ ನೋಡಲು ಹೋಗಿದ್ದಾಗ ಯಾರೋ ಮನೆ ಬೀಗ ಮುರಿದು ಸುಮಾರು ೬೦೦ ರೂ ಒಡವೆ ವಸ್ತುಗಳನ್ನೂ ಅಪಹರಿಸಿದ್ದಾರೆ. ಅಲ್ಲದೆ ಪ್ಯಾಲೇಸ್ ಥಿಯೇಟರ್ ಪಕ್ಕದಲ್ಲಿರುವ ಶ್ರೀಧರ್ ಬಾಲಿಗರ ಮನೆಯಲ್ಲಿ ಸಹ ಅನೇಕ ಒಡವೆ ವಸ್ತುಗಳನ್ನು ಅಪಹರಿಸಿದ್ದಾರೆ. ತನಿಖೆ ನಡೆಯುತ್ತಿದೆ

ಜರ್ಮನರ ಗುಪ್ತ ಸಂಚಾರ

[illegible]ದಲ್ಲಿ ಜರ್ಮನಿಯ ಪ್ರತಿನಿಧಿಯಾಗಿದ್ದ ಡಾ|| ಎಕ್ನರ್ ರವರು ಬುಧವಾರ ಲಿಸ್ಬನ್ನಿಗೆ ಬಂದಿಳಿದರು. ಅವರು ಬಂದ ಉದ್ದೇಶವನ್ನು ಸ್ಪಷ್ಟಪಡಿಸಲಿಲ್ಲ.

ಬ್ರಿಟನ್ನಿಗೆ ಮಹಾತ್ಮರ ಸೂಚನೆ

"ಈಗ ಕಾನೂನು ಭಂಗಮಾಡುವ ಉದ್ದೇಶ ನನಗಿಲ್ಲ ೧೯೪೨ ರ ಸ್ಥಿತಿಗೆ ದೇಶವನ್ನು ಕೊಂಡೊಯ್ಯುವುದು ನನ್ನಿಂದ ಸಾಧ್ಯವಿಲ್ಲ. ಇತಿಹಾಸವು ಎಂದಿಗೂ ಪುನರಾವರ್ತಿಯಾಗುವುದಿಲ್ಲ ಕಾಂಗ್ರೆಸ್ಸಿನ ಬೆಂಬಲವಿಲ್ಲದಿದ್ದರೂ ನನಗೆ ಜನಸಾಮಾನ್ಯರಲ್ಲಿರುವ ವ್ಯಾಪನೆಯಿಂದ ನಾನು ಇಷ್ಟಪಟ್ಟರೆ ಕಾನೂನು ಭಂಗವನ್ನು ಇಂದೇ ಆರಂಭಿಸಬಲ್ಲೆ. ಆದರೆ ಅದರಿಂದ ಬ್ರಿ|| ಸರ್ಕಾರಕ್ಕೆ ನಾನು ಸುಮ್ಮನೆ ಕಿರುಕುಳ ಕೊಟ್ಟಂತೆ ಮಾತ್ರ ಆಗುತ್ತದೆ ಅದು ನನ್ನ ಗುರಿಯಲ್ಲ"—ಎಂಬುದಾಗಿ ಮಹಾತ್ಮಾ ಗಾಂಧಿಯವರು ಲಂಡನ್ನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಬಾತ್ಮೀದಾರರಿಗೆ ಕೊಟ್ಟ ಭೇಟಿಯಲ್ಲಿ ತಿಳಿಸಿರುವರು.

ಯುದ್ಧಾನಂತರ ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಖಾತರಿಮಾಡುವುದಾದರೆ ಸಿವಿಲ್ ಆಡಳಿತದ ಸಂಪೂರ್ಣ ಅಧಿಕಾರವುಳ್ಳ ಒಂದು ಯುದ್ಧಕಾಲದ ರಾಷ್ಟ್ರೀಯ ಸರ್ಕಾರದಲ್ಲಿ ಕಾಂಗ್ರೆಸ್ಸು ಭಾಗವಹಿಸುವಂತೆ ಗಾಂಧೀಜಿಯವರು ಸಲಹೆ ಕೊಡಲು ಸಿದ್ಧರಾಗಿದ್ದಾರೆಂದು ಹೇಳಲಾಗಿದೆ. ಕ್ರಿಪ್ಸ್ ಸಂಧಾನಕ್ಕಿಂತಲೂ ಈಗ ಹಿಂದೂಸ್ಥಾನದ ಸಂಪೂರ್ಣ ಸಹಕಾರವನ್ನು ಬ್ರಿಟನ್ನಿನ ಕಡೆ ತೆಗೆದುಕೊಳ್ಳಲು ಸದವಕಾಶ ದೊರೆಕಿರುವುದಾಗಿ ಪದರಿ ಬಾತ್ಮೀದಾರರು ಅಭಿಪ್ರಾಯಪಡುತ್ತಾರೆ. ಕಾ|| ಮುಂಬಯಿ ಠರಾವು ಯಾವ ರೀತಿ ಸ್ವೀಕರಿಸುವರೆಂದು ಕೇಳಲು ಗಾಂಧೀಜಿಯವರು ಹೀಗೆ ಹೇಳಿರುವರು:—

"ಪರಿಸ್ಥಿತಿಯನ್ನೆಲ್ಲಾ ಪೂರ್ಣವಾಗಿ ವಿಮರ್ಶೆಮಾಡಿದೆ. ನನ್ನ ಬಿಡುಗಡೆಯಾದ ಮೇಲಿನ ವಿದ್ಯಮಾನಗಳಲ್ಲಿ ಮುಖಂಡರ ಅಭಿಪ್ರಾಯವೇನೆಂಬುದನ್ನು ಚರ್ಚಿಸುವುದೇ ನನ್ನ ಉದ್ದೇಶ. ಸರ್ಕಾರದವರು ೧೯೪೨ ರಲ್ಲಿ ತಪ್ಪರಿಸಿದ ಸಲಹೆಯನ್ನೇ ನಾನು ಮುಂದುವರಿಸಬೇಕಾಗಿದೆ ಮೊದಲು ಸಂಧಾನ ನಡೆಸಿ ಅದು ವಿಫಲವಾದರೆ ಅನಂತರ ಕಾನೂನುಭಂಗ ಮಾಡಬೇಕಾಗಿತ್ತು. ವೈಸರಾಯರಲ್ಲಿ ನಾನ ವಾದಿಸಬೇಕಾಗಿದೆ. ಕಾಂ ಮುಖಂಡರ ಅಭಿಪ್ರಾಯವನ್ನು ತಿಳಿದಮೇಲೆಯೇ ಇದು ಸಾಧ್ಯ.

ಟ್ರಾನ್ಸ್‌ಫರ್ ಅರ್ಜಿ ವಜಾ

ಮೈಸೂರು ೧೩

ಮೈಸೂರು ಕಾಂಗ್ರೆಸ್ ಕೆಲಸಗಾರರಾದ ಶ್ರೀ|| ಟಿ ಎಸ್. ಸುಬ್ಬಣ್ಣನವರ ಮೇಲೆ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ನಡೆಯುತ್ತಿರುವ ಮೊಕದ್ದಮೆಯಲ್ಲಿ ನ್ಯಾಯಾಧೀಶರು ಮುಂಚಿತವಾಗಿಯೇ ಆಪಾದಿತರು ತಪ್ಪಿತಸ್ಥರೆಂಬ ತೀರ್ಮಾನಕ್ಕೆ ಬಂದುಬಿಟ್ಟಿರುವುದರಿಂದ ಮೊಕದ್ದಮೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಬೇಕೆಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಕಿದ್ದ ಅರ್ಜಿಯನ್ನು ಅವರು ನಿರಾಕರಿಸಿ ನ್ಯಾಯಾಧೀಶರು ಮುಂಚಿತವಾಗಿ ತೀರ್ಮಾನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ.

[illegible] ಮಲಬಾರಿನಲ್ಲಿ [illegible] ನಡೆಸಿದ ದಂಗೆಯು. ಈಗ ಸಂಪೂರ್ಣವಾಗಿ ಅಡಗಿಸಲ್ಪಟ್ಟಿದೆ. [illegible] ಎಲ್ಲಾ ಕಡೆ ಶಾಂತಿ ನೆಲೆಸಿದೆ [illegible] ಅಧಿಕಾರಿಗಳು ಬಿಡುಗಡೆ ಮಾಡಲಾಗಿದೆ.

ಹಿಂದೂಸ್ಥಾನ ರಕ್ಷಣಾ ಬಲದ ಆವಶ್ಯಕತೆ

ಮೈಸೂರು ೧೨

[illegible]

ವೈಭವದ ಉತ್ಸವ

(ಸ್ವಂ. ವ.) ನಂಜನಗೂಡು ೧೨

ಶ್ರೀಮನ್ಮಹಾರಾಜರವರ ಪಟ್ಟಸತಿ ಶ್ರೀ ಮನುಸ್ವಾಮಿಯವರ ವರ್ಧಂತಿ ಪ್ರಯುಕ್ತವಾಗಿ ಪಾದ್ಮಸಮೇತ ರಾಜಬೀದಿಗಳಲ್ಲಿ ಉತ್ಸವ ಮಾಡಲ್ಪಟ್ಟಿತು. ಮ್ಯಾಜಿಸ್ಟ್ರೇಟ್ ಮುಂತಾದ ಅಧಿಕಾರಿಗಳೂ, ಶಾಲೆಯ ಬಾಲಕರೂ, ಉಪಾಧ್ಯಾಯರುಗಳೂ ಕಿಕ್ಕಿರಿದು ತುಂಬಿದ ಸಭೆಯಲ್ಲಿ ರಾಜಾಶೀರ್ವಾದವೂ, ಪ್ರಭುಗಳ ಗುಣಗಾನವೂ ಚೆಲುವು ಸಭೆಯೊಡನೆ ಸಭೆಯು ಮುಕ್ತಾಯವಾಯಿತು. ರಾಜಭಕ್ತಿಯ ಸಿದ್ಧಿಯು ಶ್ರೀ ಸರ್ವರಿಂದಲೂ ಅನುಮೋದಿಸಲ್ಪಟ್ಟು ತಂತಿಯ ದ್ವಾರಾ ಹುಜೂರ್ ಸೆಕ್ರೆಟರಿಯವರಿಗೆ ಕಳುಹಿಸಲಾಯಿತು. ಶ್ರೀ ಅಡ್ವೊಕೇಟ್ ಎಂ. ಎ. ಲಿಂಗಪ್ಪನವರೂ ಜಮೀನ್ದಾರರೂ, ಚೀಫ್ ಆಫೀಸರೂ, ಪೌರಸಭಾಧ್ಯಕ್ಷರೂ, ಸದಸ್ಯರುಗಳೂ ಹೆಚ್ಚು ವೈಭವಕ್ಕೆ ಕಾರಣರಾಗಿ ಪುರನಿವಾಸಿಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಸಮಾರಂಭ ಸಾವಿರಕ್ಕೆ ಮೇಲ್ಪಟ್ಟು ಉತ್ತಮ ತರದ ಲಾಡುಗಳೂ, ಹಣ್ಣುಹಂಪಲೂ ಬಾಲಕ, ಬಾಲಕಿಯರುಗಳಿಗೆ ಹಂಚಲ್ಪಟ್ಟುವು.

ಕೃಗಾರಿಕೆ ಕಾರ್ಖಾನೆಗಳಿಂದ ಬಟ್ಟೆ ಬಹಳ ಮುಂತಾಗಿ ಬೇಕಾದಷ್ಟು ಯುದ್ಧ ಸಾಮಗ್ರಿಗಳ ಸಹಾಯವಾಗಿದೆ. ಆಹಾರ ವಿಚಾರದಲ್ಲೂ ಸಾರ್ವಜನಿಕರು ತ್ಯಾಗಮಾಡಿದ್ದಾರೆ. ಈ ಸಂದರ್ಭದಲ್ಲಿ ಜನರಿಗೆ ಬಹಳ ತೊಂದರೆಗಳೊದಗಬಹುದು. ಆದರೆ ಸಾರ್ವಜನಿಕರೂ ತ್ಯಾಗಮಾಡಿ, ಸಹಾಯ ಮಾಡದೆ ಸೈನಿಕರು ಪ್ರಾಣಪ್ರೊಪ್ಪಿಸಿ ಹೋರಾಡಲು ಸಾಧ್ಯವಿಲ್ಲ. ಸೈನಿಕರು ಹೋರಾಡಿ ಗೆಲ್ಲದೆ ಸಾರ್ವಜನಿಕರಿಗೆ ಸುಖ ಸ್ವಾತಂತ್ರ್ಯಗಳಿಲ್ಲ. ಇದು ಪರಸ್ಪರ ಸಹಕಾರದ ಸಹಾಯಗಳಿಂದಾಗಬೇಕು. ಆದ್ದರಿಂದ ಜನರೆಲ್ಲಾ ತಮ್ಮವರಾದ ಸೈನಿಕರಿಗೆ ತಮ್ಮ ಸುಖ ಸ್ವಾತಂತ್ರ್ಯ ರಕ್ಷಣೆಗೆ ಈ ಕಾಲದಲ್ಲಿ ಕೊಂಚ ಸಹಾಯಕರಾಗಿ ಈ ಯುದ್ಧದಲ್ಲಿ ವಿಜಯಗಳಿಸಬೇಕು—ಎಂದು ಅಮೋಘ ಭಾಷಣ ಮಾಡಿದರು.

ಮೈಸೂರಿನ ಕೇಪಟನ್ ರಾ|| ರಾ|| ಶ್ರೀ ... ದಂಪತಿಗಳು ಈ ಸಮಾರಂಭಕ್ಕೆ ಆಗಮಿಸಿದ್ದರು. ಭವನದ ತುಂಬ ಮಹಿಳೆಯರು, ಮಹನೀಯರು ತುಂಬಿದ್ದರು. ಪೋಲೀಸ್ ಮತ್ತು ಸ್ಕೌಟ್ ವ್ಯವಸ್ಥೆ ಪರಿಹಸಿತ್ತು.

ಟಿ.ಡಿ.ಟಿ. ನಕ್ತ ಮಿ.ವರು ರಾ|| ರಾ|| ಬಲದ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು.

ಶ್ರೀ ಎಫ್. ಸಿ. ದೇವಂಗೀ ಬರಿಸಿದ ರು ವಂದನಾರ್ಪಣೆ ಮಾಡಿದರು.

ಶ್ರೀ ಶೇಷಣ್ಣನವರ ವಿದ್ಯಾರ್ಥಿ ನಿಲಯ

ಮೈಸೂರು ೧೨

"ಅನ್ನಾಹಾರಾದಿಗಳಿಗೆ ಬಹಳ ಕಷ್ಟವೊದಗಿರುವ ಇಂಥ ಕಾಲದಲ್ಲಿ ೪೦ ಜನ ವಿದ್ಯಾರ್ಥಿಗಳಿಗೆ ಉಚಿತ ಸ್ಥಳವಸತಿಯೊಡನೆ ಶ್ರೀ ರಾಮಚಂದ್ರದೇವರ ನೈವೇದ್ಯದ ಅನ್ನದಾನವನ್ನು ನಡೆಸಿಕೊಂಡು ಬರುವುದು ಸಾಮಾನ್ಯವಾದ ಕಾರ್ಯವಲ್ಲ. ಅನ್ನದಾನ ವಿದ್ಯಾದಾನಗಳೆರಡೂ ನಡೆವ ಮಹತ್ಪುಣ್ಯಕಾರ್ಯವಿದು" ಎಂಬುದಾಗಿ ನಿನ್ನೆಯ ಸಂಜೆ ರಿವಿನ್ಯೂ ಕಮಿಷನರ್ ರಾಜಸೇವಾಸಕ್ತ ಶ್ರೀ ಎಂ. ಶೇಷಾದ್ರಿಯವರು ಮೈಸೂರಿನ ಶ್ರೀ ಮಂತ್ರಾಲಯದ ವಿಠಲರಾಯರು ನಾರಾಯಣರಾಯರು ಮತ್ತು ದಿ|| ನರಸಿಂಗರಾಯರು ತಮ್ಮ ಹಿರಿಯರ ಹೆಸರಿನಲ್ಲಿ ಸ್ಥಾಪಿಸಿದ ಶ್ರೀ ಶೇಷಣ್ಣನವರ ಉಚಿತ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವವನ್ನು ನಡೆಸುತ್ತಾ ಭಾಷಣ ಮಾಡಿದರು.

ಪೌರಸಭಾಧ್ಯಕ್ಷರು ಆರ್ ರಾಮಚಂದ್ರರಾವ್ ಭಾಂಬೋರೆ, ಮಂಗಳೂರಿನ ಶ್ರೀ ವಿ. ಎಸ್. ಕುಡ್ವ, ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆ ಮುಂತಾದ ಅನೇಕ ಮಹನೀಯರು ಸಮಾರಂಭಕ್ಕೆ ಆಗಮಿಸಿದ್ದರು.

ಶ್ರೀ ಎಸ್. ವಿಠಲರಾಯರು ಧರ್ಮದರ್ಶಿಗಳ ಪರವಾಗಿ ಅಧ್ಯಕ್ಷರಿಗೆ ಬಿನ್ನವತ್ತಳೆಯೊಂದನ್ನರ್ಪಿಸಿದರು.

ಶ್ರೀ ವಿ|| ಬಿ. ದೇವೇಂದ್ರಪ್ಪನವರ ಸಂಗೀತ, ಡಾ|| ಎ. ಎಲ್. ನರಸಿಂಹಯ್ಯನವರ ವಂದನಾರ್ಪಣೆಗಳು ನಡೆದುವು. ಆಟಪಾಠಗಳ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನ ಕೊಡಲಾಯಿತು.

ಗೋಷಾಗಾಡಿಯಲ್ಲಿ ಭತ್ತ

ಆನೇಕಲ್ ಬಳಿ ಸರ್ಜಾಪುರದ ರಸ್ತೆಯಲ್ಲಿ ಗೋಷಾಗಾಡಿಯೊಂದು ಪರದೆಯನ್ನು ಹಾಕಿಕೊಂಡು ಭತ್ತವನ್ನು ತರುತ್ತಿದ್ದುದನ್ನು ರೆ|| ಇ|| ಸಿ|| ಅಬ್ದುಲ್ ಅಜೀಜ್ ರವರು ಪತ್ತೆಮಾಡಿ ಮುಂದಿನ ತನಿಖೆ ನಡೆಸುತ್ತಿದ್ದಾರೆ.

WANTED

Applications are invited for the post of a Residential Physician on Rs. 60-10-120 and two Junior Physicians on Rs. 60-5-100 to work in the clinical and pharmaceutical sections.

Apply to:-

The Medical Officer,
THE ABHAYA AYURVEDIC RESEARCHES LTD.,
Chamarajapuram, Mysore.

೧೫ ಕ್ಕೆ ೧೪ ಸ್ಥಾನಗಳು ಕಾಂಗ್ರೆಸ್ಸಿಗೆ

ಭದ್ರಾವತಿ ಪೌರಸಭೆ ಚುನಾವಣೆ ಎಣಿಕೆಯು ಸೋಮವಾರ ನಡೆಯಿತು. ೧೫ ಸ್ಥಾನಗಳಿಗೆ ೨೫ ಜನರು ನಿಂತಿದ್ದರು. ಅವುಗಳಲ್ಲಿ ೧೪ ಕಾಂಗ್ರೆಸ್ಸಿಗೆ ಬಂದವು.

ಜಮಖಂಡಿಗೆ ದಾಸಪ್ಪನವರು

ಜಮಖಂಡಿ ಸಂಸ್ಥಾನದ ರಾಜಾಸಾಹೇಬರಿಗೂ ಪ್ರಜಾಪರಿಷತ್ತಿನವರಿಗೂ ಆಗುತ್ತಿರುವ ಮಾತುಕತೆಗಳ ಸಂಬಂಧವಾಗಿ ಶ್ರೀ ಹೆಚ್. ಸಿ. ದಾಸಪ್ಪನವರು ಜಮಖಂಡಿಗೆ ಪ್ರಯಾಣಮಾಡಿದ್ದಾರೆ. ಒಂದು ವಾರ ಅಲ್ಲೇ ಇರುವರು.

ಪ್ರಕಟಣೆ

ಮೈಸೂರು ಒಂದನೇ ಮುನ್ಸೀಫ್ ಕೋರ್ಟಿನಲ್ಲಿ:-

O S. No. 220—1943-44

ವಾದಿ:- ಚಿಕ್ಕನಂಜೇಗೌಡರು

Vs

ಪ್ರತಿವಾದಿಗಳು:- ಪಾಪಯ್ಯ ವಗೈರೆ

ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ "ಫಕೀರ್ ಅಹಮದ್ ಸಾಬ್ ಗರಡಿ" ಎಂಬ ಗರಡಿಗೆ ಸೇರಿದ ಪೂರ್ವ ದಿಕ್ಕಿನ ಜಾಗವನ್ನು ಸದರೀ ಗರಡಿಯ ಖಲೀಫ್‌ನಾದ ಪಾಪಯ್ಯನು ನಾರಾಯಣ ಎಂಬುವಂಗೆ ಸದರೀ ಜಾಗವು ತನ್ನದೆಂದು ಹೇಳಿ ಸಾಹುಕಾರ್ ಕ್ರಯ ಮಾಡಿದನು. ಅನಂತರ ಸದರೀ ಗರಡಿಗೆ ಸೇರಿದ ಜಾಗವನ್ನು ಎಂ. ವಿ. ನಗಪ್ಪ ಎಂಬುವನು ಗೋಪಮ್ಮ ಎಂಬುವಳಿಗೆ ಕ್ರಯ ಮಾಡಿರುವುದರಿಂದ, ಸದರೀ ಜಾಗವು ಗರಡಿಗೆ ಸೇರಿದ್ದಾದ್ದರಿಂದ ಸದರಿ ಕ್ರಯಗಳು ಊರ್ಜಿತವಲ್ಲವೆಂತ ಡಿಕ್ಲರೇಷನ್ ಹೊಂದಿ, ಜಾಗದ ಸ್ವಾಧೀನವೊಂದು ಪಡೆಯುವುದಕ್ಕಾಗಿ ಮೇಲ್ಕಂಡ ಕೋರ್ಟಿನಲ್ಲಿ, ಮೇಲ್ಕಂಡ ನಂಬರಿನಲ್ಲಿ ಸದರೀ ಗರಡಿಯ ಮಾಲೀಕರೂ ಮತ್ತು ಉಸ್ತಾದ್ ರೂ ಆದ ಚಿಕ್ಕನಂಜೇಗೌಡರು, ಸದರೀ ಗರಡಿಯಲ್ಲಿ ಆಸಕ್ತಿಯುಳ್ಳ (Interested) ಎಲ್ಲರ ಪರವಾಗಿ, ದಾವಾ ಮಾಡಿರುತ್ತಾರೆ. ದಾವೆಯ ಹಿಯರಿಂಗ್ 25-7-44 ಕ್ಕೆ ಇರುತ್ತೆ. ಮೇಲ್ಕಂಡ ಗರಡಿಯ ಜಾಗದ ವಿಷಯದಲ್ಲಿ ಆಸಕ್ತಿಯುಳ್ಳವರಾಗಿಯೂ, ದಾವೆಯನ್ನು ನಡೆಸುವುದರಲ್ಲಿ ಆಸಕ್ತಿಯುಳ್ಳವರಾಗಿರುವವರೆಲ್ಲರೂ ಹಿಯರಿಂಗ್ ತಾರೀಕಿನ ಕೋರ್ಟಿಗೆ ಹಾಜರಾಗಿ, ದಾವಾಕ್ಕೆ ಪಾರ್ಟಿಯಾಗುವುದಕ್ಕೆ ಇಷ್ಟವಿದ್ದರೆ, ಅವರ ಇಷ್ಟವನ್ನು ತಿಳಿಸಬಹುದು.

ಮೈಸೂರು 12-7-44

ಸಿ. ನರಸಿಂಗರಾವ್, ಅಡ್ವೊಕೇಟ್.

Edited, printed and published by A. R Nagarajan, at the Sadhvi Press, D. Subbiah Road, Mysore.

ಶ್ರೀ ಚಾಮರಾಜ ಶೌಚ ಮಾರ್ಗ ಕ್ಕೆ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಬಿಲ್ಲೀ ಬ್ರಾಂಡ್ ಹಲ್ಲು ಪುಡಿ

[illegible]

... ಮೈಸೂರು

[illegible]

ಪ್ರತಿ ದಿನ ೨ ಆಟಗಳು ನ್ಯೂ ಅಪೇರಾ ಟಾಕೀಸ್

13-7-44 ರಿಂದ ಆಮೋಘವಾದ ಮ್ಯಾಟಿನೀ ವಾರ

ಭಿಕ್ತ್ರ ಹರಿ ತಮಿಳು ಚಿತ್ರ

ಜಯಮ್ಮ (...) ಶ್ಯಾಮು, ಎಸ್. ಎಸ್. ಕೃಷ್ಣನ್, ಟಿ. ಎ. ಮಧುರಂ, ಕಾಳಿ ಎನ್. ರತ್ನಂ ಪಾತ್ರವಹಿಸಿರುವರು

ಸಂಪುಟ ೨] ಶುಕ್ರವಾರ ೧೪--೭--೪೪ [ಸಂಚಿಕೆ ೨೯೯

ತುರ್ಕಿ ಮಿತ್ರರೊಡನೆ ಯುದ್ಧಕ್ಕಿಳಿಯುವುದೆ?

ಬವೇರಿಯದಲ್ಲಿ ಹೊಸ ಜರ್ಮನ್ ಕೇಂದ್ರ ಸ್ಥಾಪನೆ
ಮಣಿಪುರದಲ್ಲಿ ವೇಶ್ಯಾ ಸ್ತ್ರೀಯರ ಮುಷ್ಕರ

ವಿ. ಎಸ್. ಕುಡ್ವರವರಿಗೆ ಸತ್ಕಾರ

ಮೈಸೂರು ೧೪

ಈ ದಿನ ಬೆಳಿಗ್ಗೆ ರಾಜಧಾನಿಯ ಪತ್ರಿಕೋದ್ಯೋಗಿ ಸಂಘದವರು ಮಂಗಳೂರಿನ ನವ ಭಾರತ ಪತ್ರಿಕಾ ಸಂಪಾದಕರೂ, ಅ॥ ಕ॥ ಪತ್ರಿಕಾ ಸಮ್ಮೇಳನದ ಉಪಾಧ್ಯಕ್ಷರೂ ಧಾರೀ ಕೈಗಾರಿಕೋದ್ಯಮಿಗಳೂ ಆದ ಶ್ರೀ ವಿ. ಎಸ್. ಕುಡ್ವರವರನ್ನು ಆಹ್ವಾನಿಸಿ ಅವರಿಗೆ ಸತ್ಕಾರ ಕೂಟವೊಂದನ್ನಿತ್ತರು.

ಶ್ರೀ॥ ಟಿ. ನಾರಾಯಣರವರು ಪರಿಚಯ ಭಾಷಣವನ್ನೂ, ಶ್ರೀ॥ ಜಿ. ಆರ್. ಜೋಸ್ಯರ್ ರವರು ಸ್ವಾಗತ ಭಾಷಣವನ್ನೂ, ಶ್ರೀ॥ ಆಗರಂ ರಂಗಯ್ಯನವರು ಗುಣ ಕಥನವನ್ನೂ ಮಾಡಿದರು.

ಶ್ರೀ॥ ಕುಡ್ವರವರು ತಮ್ಮ ವಿದ್ಯಾರ್ಥಿ ದೆಸೆಯಿಂದಲೂ ಇದುವರೆಗೆ ಇತರ ವ್ಯಾಪಾರೋದ್ಯಮಗಳಿಗಿಂತ ಹೆಚ್ಚಾಗಿ ತಾವು ಪತ್ರಿಕೋದ್ಯಮದಲ್ಲಿ ಹೇಗೆ ಅಭಿಮಾನಪೂರ್ವಕವಾದ ಸೇವೆ ಸಲ್ಲಿಸುತ್ತಿರುವರೆಂಬುದನ್ನು ತಿಳಿಸಿ ಭಾಷಣ ಮಾಡಿದರು.

ಶ್ರೀ॥ ನಂಜುಂಡಶಾಸ್ತ್ರಿಗಳು ವಂದನಾರ್ಪಣೆ ಮಾಡಿದರು.

ಮಹಾಜನ ಹೈಸ್ಕೂಲಿನಲ್ಲಿ ವರ್ಧಂತ್ಯುತ್ಸವ

ನಿನ್ನೆ ದಿವಸ ಫೋರ್ಟಕೊಪ್ಪಲಿನ ಮಹಾಜನ ಹೈಸ್ಕೂಲಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಶಾಲೆಯ ಬಾಲಕ ಬಾಲಕಿಯರ ಸಭೆಯು ಶಾಲೆಯ ಆವರಣದಲ್ಲಿ ಸೇರಿತ್ತು. ಉಪಾಧ್ಯಾಯರಲ್ಲೊಬ್ಬರಾದ ಶ್ರೀ ವರ್ಮಾ ನಾಡಿಗ ಕೃಷ್ಣಮೂರ್ತಿಯವರು ಶ್ರೀಮನ್ಮಹಾರಾಜರವರ ಜೀವನ ಚರಿತ್ರೆಯನ್ನು ತಿಳಿಸಿದರು. ಅನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವರ್ಮಾ ಬಿ. ಪಿ. ವಿಶ್ವೇಶ್ವರಯ್ಯನವರು ವರ್ಧಂತ್ಯುತ್ಸವವನ್ನು ಆಚರಿಸಬೇಕಾದ ಆವಶ್ಯಕತೆಯನ್ನು ವಿವರಿಸಿದರು. ಬಾಲಕ ಬಾಲಕಿಯರಿಗೆ ಸಿಹಿತಿಂಡಿಯನ್ನು ಹಂಚಿದ ಮೇಲೆ ಸಭೆಯು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಮುಕ್ತಾಯವಾಯಿತು.

ನಲ್ಲಿ ನೀರಿನಲ್ಲಿ ಹುಳುಗಳು

ಇದು ವಿಚಿತ್ರವಾಗಿರುತ್ತದೆ, ಚಾಮರಾಜಮೊಹಲ್ಲಾ ಕಾಳಿಕೇರಿಯ ಕೊಳಾಯಿನಲ್ಲಿ ೩-೪ ದಿನಗಳಿಂದಲೂ ನೀರಿನಲ್ಲಿ ಹುಳುಗಳು ಬರುತ್ತಿವೆ. ಒಂದು ಬಿಂದಿಗೆಯಲ್ಲಾಗಲಿ ಅಥವ ಒಂದು ಟಿನ್ನಿನಲ್ಲಾಗಲಿ ನಲ್ಲಿಯಿಂದ ನೀರನ್ನು ಹಿಡಿದು ನೋಡಿದರೆ ಆ ನೀರಿನಲ್ಲಿ ಒಂದು ಬಗೆಯ ಬಿಳೀ ಹುಳುಗಳು ಬಹಳ ಚಮತ್ಕಾರವಾಗಿ ನೀರಿನಲ್ಲಿ ಓಡಾಡುತ್ತವೆ. ನೋಟಕ್ಕೆ ಬಿಳೀ ಕೂದಲುಗಳು ಇದ್ದಂತೆ ಕಾಣುತ್ತವೆ ಈ ಬಗೆಯ ಹುಳುಗಳು ಕುಡಿಯುವ ನೀರಿನಲ್ಲಿ ಹೇಗೆ ಬರುತ್ತವೆ; ಇವುಗಳಿಂದ ಜನರಿಗೆ ಯಾವ ಅಪಾಯ ಉಂಟು; ಇದರ ನಿವಾರಣೆ ಹೇಗೆ? ಎಂಬ ಬಗ್ಗೆ ನಲ್ಲಿ ನೀರಿಗೆ ಜವಾಬ್ದಾರರಾದ ಅಧಿಕಾರಿಗಳು ತಕ್ಷಣ ಜನರಿಗೆ ಸೂಕ್ತವಾದ ತಿಳುವಳಿಕೆಯನ್ನುಂಟು ಮಾಡಿಕೊಡುವುದಲ್ಲದೆ, ಈ ಬಗೆಯ ಹುಳುಗಳು ಕೊಳಾಯಿಗಳ ಮೂಲಕ ಬಾರದಂತೆ ಸೂಕ್ತ ಉಪಾಯಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ.

ಜಿ. ಸ್ವಾಮಿರಾವ್.

ಶ್ರೀ ಚಾಮುಂಡೇಶ್ವರಿ ವರ್ಧಂತ್ಯುತ್ಸವ

ಮೈಸೂರು ೧೪

ನೆನ್ನೆಯ ದಿವಸ ಚಾಮುಂಡೀ ಬೆಟ್ಟದ ಚಾಮುಂಡೇಶ್ವರೀ ಅಮ್ಮನವರ ವರ್ಧಂತಿ ಉತ್ಸವದ ಪ್ರಯುಕ್ತ ಮಧ್ಯಾಹ್ನ ವಿಶೇಷ ಪೂಜೆ, ಬ್ರಾಹ್ಮಣ ಸಂತರ್ಪಣೆ, ರಾತ್ರಿ ಚಿನ್ನದ ಪಲ್ಲಕ್ಕಿ ಉತ್ಸವಾದಿಗಳು ವಿಜೃಂಭಣೆಯಿಂದ ನಡೆದುವು.

ಕಾಂ॥ ಕಾರ್ಯಕರ್ತರ ಸಮ್ಮೇಳನ

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಟಿ. ಸುಬ್ರಹ್ಮಣ್ಯಂ ರವರನ್ನು ಆಹ್ವಾನಿಸಿ, ರಾಜಧಾನಿಯ ಕಾಂಗ್ರೆಸ್ ಕಾರ್ಯಕರ್ತರುಗಳ ಸಮ್ಮೇಳನವನ್ನು ನಡೆಸುವ ಬಗ್ಗೆ ನಿನ್ನೆ ಸಂಜೆ ಕಾಂಗ್ರೆಸ್ ಕಾರ್ಯಕರ್ತರುಗಳ ಸಭೆಯೊಂದು ಕಾಂಗ್ರೆಸ್ ಕಚೇರಿಯಲ್ಲಿ ನಡೆಯಿತು. ಇನ್ನೊಂದು ವಾರದಲ್ಲಿ ಸಮ್ಮೇಳನ ನಡೆಯಬಹುದಾಗಿದೆ ಈ ಬಗ್ಗೆ ಒಂದು ಉಪ ಸಮಿತಿ ರಚನೆಯಾಗಿದೆ.

ಪೋಸ್ಟ್‌ಮೆನ್ ಸಂಘದ ಸಮ್ಮೇಳನ

ಮೈಸೂರು ಸಂಸ್ಥಾನದ ಪೋಸ್ಟ್ ಮೆನ್ ಸಂಘದ ದ್ವಿತೀಯ ಸಮ್ಮೇಳನವು ೧೬ ನೇ ತಾರೀಕು ಭಾನುವಾರ ಸಾಯಂಕಾಲ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುತ್ತದೆ. ಚಿನ್ನದ ಗಣಿಯ ಅಖಿಲ ಭಾರತ ಪೋಸ್ಟಲ್ ಸಂಘದ ಅಧ್ಯಕ್ಷರಾದ ಶ್ರೀ ಕೆ. ರಾಜಗೋಪಾಲರಾಯರು ಅಧ್ಯಕ್ಷತೆ ವಹಿಸುವರು. ಮೈಸೂರು ಪೋಸ್ಟ್ ಮಾಸ್ಟರ್ ಶ್ರೀ॥ ಕನ್ನಯ್ಯನಾಯ್ಡು ರವರು ಆರಂಭೋತ್ಸವ ನೆರವೇರಿಸುವರು.

ವಿದ್ವಾನ್ ಮಹಾ ವಿದ್ವಾನ್ ಪದವಿಗಳು

ಶ್ರೀಗಳಾದ ವೈ. ಚಂದ್ರಶೇಖರಶಾಸ್ತ್ರಿಗಳು, ಮಧ್ವರಾಯಾಚಾರ್ಯರು, ಸಾಲ್ವಯ್ಯ ಹೆಗ್ಗಡೆಯವರು, ದರ್ಶನಂ ವೆಂಕಟೇಶಶಾಸ್ತ್ರಿಗಳು, ಟಿ. ನರಸೀಪುರದ ನರಸಿಂಹಾಚಾರ್ಯರು, ಚಿತ್ರದುರ್ಗದ ಕಾಶೀನಾಥಶಾಸ್ತ್ರಿಗಳು, ವಿದ್ವಾನ್ ಶ್ರೇಣಿಯಿಂದ ಮಹಾವಿದ್ವಾನ್ ಶ್ರೇಣಿಗೂ, ಶ್ರೀಗಳಾದ ಕೆ. ಪಿ. [illegible] ಉಪಾಧ್ಯಾಯರು, ಎ. ವೆಂಕಟರಮಣ [illegible] ತರು, ತಿರು [illegible] ಧನ್ಯ [illegible] ರವರು ವಿದ್ವಾನ್ ಶ್ರೇಣಿಗೂ ಸೇರಿಸಲ್ಪಟ್ಟಿದ್ದಾರೆಂದು ತಿಳಿಯಬರುತ್ತದೆ.

ಮೊಹಲ್ಲಾ ಪರಿಶೀಲನೆ

ತಾ॥ ೧೬-೭-೪೪ ನೇ ಭಾನುವಾರ ಮೈಸೂರು ಸಿಟಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿ ಸದಸ್ಯರು ಪ್ರಾತಃಕಾಲ ೯ ಗಂಟೆಯಿಂದ ಕೃಷ್ಣರಾಜ ಮೊಹಲ್ಲಾಕ್ಕೆ ಸೇರಿದ ಬಂಡಿಕೇರಿ, ಕೆಂಪ ನಂಜಾಂಬ ಅಗ್ರಹಾರ ಮತ್ತು ಇತರ ಸ್ಥಳಗಳಲ್ಲಿ ಪರಿಶೀಲನೆ ಮಾಡಲು ಸಂಚರಿಸುವರು. ಮೊಹಲ್ಲಾ ನಿವಾಸಿಗಳು ತಮ್ಮ ಕುಂದು ಕೊರತೆಗಳನ್ನು ಸದಸ್ಯರ ಗಮನಕ್ಕೆ ತಂದು ಸಹಕರಿಸಬೇಕೆಂದು ವಿನಂತಿ ಮಾಡಲಾಗಿದೆ.

ಜೂಜು

ಲಷ್ಕರ್ ಮೊಹಲ್ಲಾ ದಿವಾನ್ಸ್ ರಸ್ತೆಯ ಮನೆಯೊಂದರಲ್ಲಿ ೧೯ ಜನ ಜೂಜಾಡುತ್ತಿದ್ದುದನ್ನು ನಿನ್ನೆ ಮಧ್ಯಾಹ್ನ ಇನ್ಸ್‌ಪೆಕ್ಟರ್ ಮತ್ತು ಮಂಡಿ ಮೊಹಲ್ಲಾ ಪೋಲೀಸಿನವರು ಪತ್ತೆ ಮಾಡಿದರು. ಕೋರ್ಟಿನಲ್ಲಿ ಇಂದು ವಿಚಾರಣೆಯಾಗಿ ೧೮ ಜನರಿಗೆ ತಲಾ ೧೨ ರೂ. ದಂಡವೂ ಇನ್ನೊಬ್ಬನಿಗೆ ೩೦ ರೂ ದಂಡವೂ ವಿಧಿಸಲ್ಪಟ್ಟಿವೆ.

ಗಡಿಯಾರ ಕಳೆದುಹೋಗಿದೆ

ಮಂಡಿ ಮಾರ್ಕೆಟ್ ಬಳಿ ಹೋಗುವಾಗ ಜಲಾಲ್ ಕಂಪೆನಿಯ ವೇಲ್ಸ್ ರಿಸ್ಟ್ ವಾಚೊಂದು ಚೈನು ಸಮೇತ ಕಳೆದುಹೋಗಿದೆ. ಯಾರಿಗಾದರೂ ಸಿಕ್ಕಿದರೆ ದಯವಿಟ್ಟು ತಮಗೆ ತಲುಪಿಸಬೇಕೆಂದೂ, ತಂದುಕೊಟ್ಟವರಿಗೆ ೫ ರೂ. ಬಹುಮಾನ ಕೊಡಲಾಗುವುದೆಂದೂ ಮಂಡಿಪೇಟೆ ಚಿಲ್ಲರೆ ಅಂಗಡಿ ಗಂಜಾಂ ಜಿ. ಬಾಲಚ್ಚಯ್ಯನವರು ಕೋರುತ್ತಾರೆ.

ವರ್ಧಂತಿ ಉತ್ಸವ

ಸ್ವಂ. ವ.] ಚನ್ನರಾಯಪಟ್ಟಣ ೧೩

ಸಮ್ಮಾನ್ಯರಾದ ಶ್ರೀಮನ್ಮಹಾರಾಜರವರ ೬೨ ನೇ ವರ್ಧಂತ್ಯುತ್ಸವವು ಅತಿ ವಿಜೃಂಭಣೆಯಿಂದ ನೆರವೇರಿತು–ಪ್ರಾತಃಕಾಲ ೧೦ ಗಂಟೆಗೆ ಈ ಊರಿನ ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ಇತರ ಅಧಿಕಾರಿ ವರ್ಗದವರೂ [illegible] ರಾಜಭಕ್ತಿ [illegible] ವನ್ನು [illegible] ಸಲಾಯಿತು

ತುರ್ಕಿ ಮಿತ್ರಪಕ್ಷ ಸೇರುವುದೆ

ತುರ್ಕಿಯು ಮಿತ್ರರೊಡನೆ ಸೇರಿ ಯುದ್ಧ ಮಾಡಲು ಸಹಕಾರ [illegible] ವುದೆಂದು ಹೊರಟಿರುವ ಸುದ್ದಿ ವಿಚಾರದಲ್ಲಿ ಬಂದ ಪ್ರಶ್ನೆಗೆ ಉತ್ತರವಾಗಿ ಅಮೆರಿಕದ ಸ್ಟೇಟ್ ಸೆಕ್ರೆಟರಿ ಮಿ॥ ಕಾರ್ಡೆಲ್ ಹಲ್ ರವರು, ತುರ್ಕಿಯು ಅನೇಕಾವರ್ತಿ ಆ ಪರಿಸ್ಥಿತಿಗೆ ಬಂದಿತ್ತು, ಈಗಲೂ ಬಂದಿರಬಹುದು, ಎಂದು ಹೇಳಿದರು.

ನಾಜಿ ಹೊಸ ಕೇಂದ್ರ ಬವೇರಿಯದಲ್ಲಿ

ಜರ್ಮನರು ಬವೇರಿಯಾದಲ್ಲಿ ತಮ್ಮ ಹೊಸ ಜನರಲ್ ಹೆಡ್ ಕ್ವಾರ್ಟರನ್ನು ಸ್ಥಾಪಿಸಿದ್ದಾರೆಂದು ಹೇಳಲಾಗಿದೆ. ಇಟಲಿಯಿಂದ ಸಂಪೂರ್ಣವಾಗಿ ಹೊರ ಹೊರಡಬೇಕಾಗುವುದೆಂದು ಅವರು ಚೆನ್ನಾಗಿ ತಿಳಿದಿರುವಂತಿದೆ ಜರ್ಮನಿಯ ದಕ್ಷಿಣ ರಣರಂಗಕ್ಕಾಗಿ ಆ ಹೊಸ ಕೇಂದ್ರವನ್ನು ಏರ್ಪಡಿಸಲಾಗಿದೆ ಬ್ರೆನ್ನರ್ ಕಣಿವೆಯಿಂದ ಒವೇರಿಯಾದೊಳಕ್ಕೆ ೩೦೦ ಬಲವಾದ ರಕ್ಷಣಾಸ್ಥಳಗಳನ್ನು ಕಟ್ಟುವಂತೆ ಆಜ್ಞೆಯಾಗಿದೆ.

ವೇಶ್ಯೆಯರ ಸತ್ಯಾಗ್ರಹ

ಮಣಿಪುರದ ವೇಶ್ಯೆಯರು ವರಮಾನದ ತೆರಿಗೆ ಕೊಡುವುದಿಲ್ಲವೆಂದು ಹೇಳಿ ಮುಷ್ಕರ ಹಿಡಿದಿದ್ದಾರೆ ಒಬ್ಬಳಿಗೆ ೬೦೦೦ ರೂ. ವರಮಾನವಿದೆಯೆಂದು ಅಧಿಕಾರಿಗಳು ತೆರಿಗೆ ಹಾಕಿದ್ದರು. ಅರ್ಧ ತೆರಿಗೆಯನ್ನು ಮಾತ್ರ ಅವಳು ಕೊಟ್ಟಳು. ಯುದ್ಧದ ದೆಸೆಯಿಂದ ಯಾತ್ರಿಗೆ [illegible] ವೇಶ್ಯೆಯರ ಸಹವಾಸವನ್ನು ಸೈನಿಕರು ಬಹಳವಾಗಿ ಸೇರುತ್ತಿದ್ದರು ಇದರಿಂದ ವಿಶೇಷ ಹಣ ಉತ್ಪತ್ತಿಯಾಗುತ್ತಿತ್ತು. ಒಬ್ಬೊಬ್ಬ ವೇಶ್ಯೆಯೂ ಒಂದೊಂದು ಲಕ್ಷ ರೂ. ಸಂಪಾದಿಸಿರುವರೆಂದು ಅಧಿಕಾರಿಗಳು ಲೆಕ್ಕ ಹಾಕಿದ್ದಾರೆ. ಆದರೂ ವರಮಾನ ತೆರಿಗೆ ಕೊಡಲು ಅವರು ತಕರಾರು ಮಾಡುತ್ತಿದ್ದಾರೆ. ಈ ತೆರಿಗೆಯನ್ನು ಪ್ರತಿಭಟಿಸಲು ಅವರು ಸತ್ಯಾಗ್ರಹವನ್ನೇ ಹಿಡಿಯುವುದಾಗಿ ಹೇಳುತ್ತಿದ್ದಾರೆ.

ಯುದ್ಧರಂಗಕ್ಕೆ ಗೂಳಿಗಳು–ಹೇಸರ ಕತ್ತೆಗಳು

ಈಗ ತಾನೇ ಬರ್ಮಾ ರಂಗದಿಂದ ವಾಪಸು ಬಂದಿರುವ ಹೇಸರಕತ್ತೆಗಳು, ಯುದ್ಧರಂಗಕ್ಕಾಗಿ ಹೊಸದಾಗಿ ಹೊರಟಿರುವ ಹೇಸರಗತ್ತೆಗಳು ಮತ್ತು ಸಾಮಾನು ಹೇರುವ ಗೂಳಿಗಳು – ಇವುಗಳನ್ನು ಬಾಂಬೆ [illegible] ನಲ್ಲಿ ಸೇನಾಪತಿ ಜ॥ ಸ್ಟಿಲ್‌ವೆಲ್ ರವರು ಪರಿಶೀಲಿಸಿದರು.

ತಿರುಪತಿಯಲ್ಲಿ ಕಾಲೇಜು

ಹಿಂದೂಗಳಿಗೂ ಹಿಂದುಗಳಲ್ಲದವರಿಗೂ ಅವಕಾಶವಾಗುವಂತೆ ತಿರುಪತಿ ಅಥವ ಅದರ ಸಮೀಪದಲ್ಲಿ ಒಂದು ಮೊದಲನೇ ತರಗತಿಯ ಕಾಲೇಜನ್ನು ಸ್ಥಾಪಿಸುವುದಕ್ಕಾಗಿ ತಿರುಪತಿ ದೇವಸ್ಥಾನದ ಕಾನೂನಿನ [illegible] ಮದರಾಸು ಗೌರ್ನರು ಒಪ್ಪಿಗೆ ಕೊಟ್ಟಿರುವರು.

ಅಲಂಕಾರ

ಮೈಸೂರು, ೧೪

[illegible]
[illegible]
[illegible]
[illegible]
[illegible]
ಅಲಂಕಾರಗಳನ್ನು ಏರ್ಪಡಿಸಿವೆ.

ರಾಷ್ಟ್ರೀಯ ರಕ್ಷಣಾ ಬಲ

ಮೈಸೂರು ೧೨

ಈ ದಿನ ಸಂಜೆ ಮೈಸೂರು ರಾಷ್ಟ್ರೀಯ [illegible] ರಕ್ಷಣಾ ಬಲದ ದ್ವಿ॥ ವಾರ್ಷಿಕೋತ್ಸವದ [illegible] ದಿನದ ಕಾರ್ಯಕಲಾಪಗಳು ಧರ್ಮಪ್ರಕಾಶ [illegible] ಶಿವರಾಂರವರ ಅಧ್ಯಕ್ಷತೆಯಲ್ಲಿ ನಡೆದವು. ಹಿಂದೂಸ್ಥಾನ್ ಏರ್‌ಕ್ರಾಫ್ಟ್ [illegible] ಜನರಲ್ ಮ್ಯಾನೇಜರ್ ಶ್ರೀ ಹೆಚ್. ಎಫ್ [illegible] ಯವರು ಮುಖ್ಯ ಅತಿಥಿ ಮತ್ತು [illegible] ಕೈಗಾರಿಕೋದ್ಯಮ, ಎಂಬ ವಿ[illegible] ಭಾಷಣ ಮಾಡಿದರು. ಈ ಯುದ್ಧ [illegible] ದಲ್ಲಿ ಅನೇಕ ಕೈಗಾರಿಕೋ[illegible] [illegible] ನಡೆಸಬೇಕು [illegible] ಬಹಳ ಉಪಯುಕ್ತವಾ[illegible] ಅವರೆ ಬಾರತದಲ್ಲಿ ತಯಾರಿ[illegible] ಸಾಮಾನುಗಳು ಇನ್ನು ಚೆನ್ನಾಗಿರು[illegible] ದ ಪಂಚದ ಇತರ ಕಡೆಯ [illegible] [illegible] ಸರಿದೊರೆಯಂಥ ರೀತಿಯ[illegible] ಸಿದ್ಧಪಡಿಸಬೇಕು—ಎಂಬುದಾಗಿ [illegible]ರು.

[illegible] ಇದೇ ನಿರ್ಧಾರವಾಗಿ [illegible] ಮಾಡುತ್ತಾ, ಭಾರತದಲ್ಲೂ ಕೈ[illegible] [illegible] ಸ್ಥಾಪಿಸಲು ಬೇಕಾದ ಕೊಂ[illegible] ಇಲ್ಲ. ಬೇಕಾದಷ್ಟು ಹಣ ಕೂ[illegible] [illegible] ಆದರೆ ನಮಗೆ ಯಂತ್ರ ಸಾ[illegible] [illegible] ತಯಾರಿಕೆಗೆ ನಾನಾ ಪ್ರತಿಬಂಧ [illegible] ಒಳ್ಳೆ ಯಂತ್ರಗಳು ಪರದೇ[illegible] [illegible] ಪೂರೈಸುವುದಿಲ್ಲ. ಹಲವು ಕೈಗಾ[illegible] [illegible] ಗಳಿಗೆ, ನಮಗೆ ಅವಕಾಶವಿಲ್ಲ [illegible] ನೂಲು ಮತ್ತು ಬಟ್ಟೆಯ [illegible] [illegible] ಆರ್ಡರಿನಿಂದ ಆ ಕೈಗಾರಿಕೆ [illegible] ಏಳಿಗೆ ಹೊಂದಿರುವುದಾಗಿದೆ. [illegible] ಕೈಗಾರಿಕೆಗಳ ಮೇಲೆ ಸರಕಾರದ [illegible] ಕೈಗಾರಿಕೆಗಳ ನೈಪುಣ್ಯ ನಡೆಯಲು ಧಾರಾಳ

ಸಾರ್ವಜನಿಕ ಸೇವಾ ಪ್ರಶಸ್ತಿ ಪ್ರದಾನ

ಮೈಸೂರು ೧೨

ಆ ದಿನ ರಾತ್ರಿ ಅರಮನೆ ಕಲ್ಯಾಣ ಮಂಟಪದಲ್ಲಿ ಮಹಾಸ್ವಾಮಿಗಳವರು ದರ್ಬಾರ್ ನಡೆಸಿದಾಗ ದಯಪಾಲಿಸಿದ ಸಾರ್ವಜನಿಕ ಸೇವಾ ಪ್ರಶಸ್ತಿಗಳು:—

ಶ್ರೀಮಾನ್ ಪಟೇಲ್ ತಿಮ್ಮೇಗೌಡರು, ಮಾಕನಕುಪ್ಪೆ, ನೆಲಮಂಗಲ ತಾಲ್ಲೂಕು—ಇವರು ಬೆಂಗಳೂರು ಡಿಸ್ಟ್ರಿಕ್ಟ್ ಗ್ರಾಮ ಗೊಂಡ್ಲು ಗ್ರಾಮದ ಸ್ಕೂಲು ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ.

ಶ್ರೀಮಾನ್ ಸಾಹುಕಾರ್ ದಕ್ಷಿಣಾಮೂರ್ತಿ ಬಂಡೆಪ್ಪನವರು, ಅತ್ತಿಬೆಲೆ, ಆನೇಕಲ್ ತಾಲ್ಲೂಕು—ಇವರು ಬೆಂಗಳೂರು ಡಿಸ್ಟ್ರಿಕ್ಟ್ ಆನೇಕಲ್ ಸ್ಕೂಲು ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ

ಶ್ರೀಮಾನ್ ಅಂಬಾಲಾಲ್ ಮಾರಾಭಾಯಿ ಪಟೇಲ್ ಅವರು, ಬೆಂಗಳೂರು—ಇವರು ಬೆಂಗಳೂರಿನ ಗಾಂಧಿನಗರದಲ್ಲಿ ಬಾಲಕಿಯರ ಮಿಡ್ಲ್ ಸ್ಕೂಲು ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ

ಶ್ರೀಮಾನ್ ಬಾಷ್ಯಂರಾವ್ ಅರಸೋಜಿರಾಯರು, ಬೆಂಗಳೂರು—ಇವರು ಬೆಂಗಳೂರಿನಲ್ಲಿ ಒಂದು ಆಯುರ್ವೇದ ಮತ್ತು ಯುನಾನಿ ವೈದ್ಯಶಾಲೆಯ ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ

ಶ್ರೀಮಾನ್ ಆದಿಕೇಶವಯ್ಯನವರು, ಮೈಸೂರು—ಇವರು ತಮ್ಮ ಹಿರಿಯರ ಮೇಲ್ಪಂಕ್ತಿಯನ್ನೇ ಅನುಸರಿಸಿ ಅನೇಕ ಧರ್ಮ ಕಾರ್ಯಗಳಿಗೆ ಧನಸಹಾಯ ಮಾಡಿದ್ದಾರೆ.

ಶ್ರೀಮಾನ್ ತಂಗಲಂ ವೀರವಲ್ಲಿ ರಾಮಾನುಜಂ ಅವರು, ಬೆಂಗಳೂರು—ಇವರು "ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ" ಮತ್ತು "ರಾಯ್‌ಟರ್ಸ್" ವಾರ್ತಾ ವ್ಯವಸ್ಥೆಗಳ ಬೆಂಗಳೂರು ಪ್ರತಿನಿಧಿಗಳಾಗಿದ್ದುಕೊಂಡು ಉತ್ತಮ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ

ಡಾಕ್ಟರ್ ಬೂದಿಯಾಳ್ ಮುಕುಂದರಾವ್ ಮಾಧವರಾಯರು, ಬೆಂಗಳೂರು—ಇವರು "ಡಿವಿಜನಲ್ ಎ ಆರ್. ಪಿ ವಾರ್ಡನ್" ಕೆಲಸ, ಮುಂತಾದ ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ತೀವ್ರಾಸಕ್ತಿ ವಹಿಸಿ ಪ್ರಜಾಸೇವೆ ಮಾಡಿದ್ದಾರೆ.

ಶ್ರೀಮಾನ್ ಪಟೇಲ್ ಚಿನ್ನಮಾದೇಗೌಡರು, ಅಡಿಕೆಮಾರನಹಳ್ಳಿ, ನೆಲಮಂಗಲ ತಾಲ್ಲೂಕು—ಇವರು ಬೆಂಗಳೂರು ಡಿಸ್ಟ್ರಿಕ್ಟ್ ನೆಲಮಂಗಲದ ಸ್ಕೂಲು ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ.

ಶ್ರೀ ಮಾನ್ ರಾಮಚಂದ್ರಯ್ಯನವರು, ಮುನ್ನೂರು ಪಾಲುಗ್ರಾಮ, ಮೂಡಿಗೆರೆ ತಾಲ್ಲೂಕು—ಇವರು ಕಳಸದ "ಕಂಟ್ರೋಲ್ ಡಿಸ್ಪೆನ್ಸರಿ" ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ

ಶ್ರೀಮಾನ್ ಕೊಂಗಣ್ಣನವರು, ಬೆಗ್ಗದಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು—ಇವರು ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ಗ್ರಾಮದ ಡಿಸ್ಪೆನ್ಸರಿ ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ.

ಶ್ರೀಮಾನ್ ಮೈಸೂರು ರಾಮಚಂದ್ರರಾಯರು, ಬೆಂಗಳೂರು—ಇವರು ಬೆಂಗಳೂರಿನಲ್ಲಿರುವ ಅರಕ್ತಪೋಷಕ ಸಭೆಯ ಸಂಬಂಧವಾಗಿ ಉತ್ತಮ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ

ಶ್ರೀಮಾನ್ ಯಾದಾಳಂ ಸುಬ್ಬಯಶೆಟ್ಟಿ ನಂಜಯ್ಯಶೆಟ್ಟಿಯವರು, ಬೆಂಗಳೂರು—ಇವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ "ರೇಡಿಯೊಲಾಜಿಕಲ್" ಶಾಖೆಗೆ ಸೇರಿದಂತೆ ಒಂದು 'ವಾರ್ಡ್' ಕಟ್ಟಿಸುವುದಕ್ಕಾಗಿ ಧನಸಹಾಯ ಮಾಡಿದ್ದಾರೆ.

ಶ್ರೀಮಾನ್ ಜಗಳೂರು ಚನ್ನಪ್ಪ ರೇವಣ್ಣನವರು ಜಗಳೂರು—ಇವರು ಪೌರಸಭೆ, ಡಿಸ್ಟ್ರಿಕ್ಟ್ ಬೋರ್ಡ್, ಪ್ರಜಾಪ್ರತಿನಿಧಿ ಸಭೆ ಮುಂತಾದ ಹಲವು ಸಂಸ್ಥೆಗಳಲ್ಲಿ ಸದಸ್ಯರಾಗಿದ್ದುಕೊಂಡು ಪ್ರಜಾಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ, ಜಗಳೂರು ಪಶುವೈದ್ಯಶಾಲೆಯ ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ

ಶ್ರೀಮಾನ್ ಗುಂಡೂರು ರಾಮಯ್ಯನವರು, ಕೊರಟಗೆರೆ—ಇವರು ಕೊರಟಗೆರೆ ತಾಲ್ಲೂಕಿನ ಗ್ರಾಮಾಭಿವೃದ್ಧಿ ಕಾರ್ಯಗಳ ಸಂಬಂಧವಾಗಿ ಉತ್ತಮ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಇತರ ಅನೇಕ ರೀತಿಗಳಲ್ಲಿಯೂ ಇವರು ಪ್ರಜಾಸೇವೆ ಮಾಡುತ್ತಿದ್ದಾರೆ.

ಶ್ರೀಮಾನ್ ಪಟೇಲ್ ಸ್ವಾಮಿ ಬಸಪ್ಪನವರು, ತಮ್ಮೇನಹಳ್ಳಿ, ಮೊಳಕಾಲ್ಮೂರು ತಾಲ್ಲೂಕು—ಇವರು ೨೦ ವರ್ಷಗಳಿಗೆ ಮೇಲ್ಪಟ್ಟ ಕಾಲದಿಂದಲೂ ಬಹಳವಾಗಿ ಪ್ರಜಾಸೇವೆ ಮಾಡಿದ್ದಾರೆ. ಅಲ್ಲದೆ, ಮೊಳಕಾಲ್ಮೂರು ತಾಲ್ಲೂಕು ರಾಮಪುರ ಗ್ರಾಮದ ಪಶುವೈದ್ಯಶಾಲೆಯ ಕಟ್ಟಡಕ್ಕಾಗಿ ಧನಸಹಾಯ ಮಾಡಿದ್ದಾರೆ

ಗ್ರಹಣ ಪ್ರಯುಕ್ತ ರಜಾ

ಇದೇ ತಿಂಗಳು ೨೦ನೇ ತಾ॥ ಗುರುವಾರ ಸೂರ್ಯಗ್ರಹಣ ಪ್ರಯುಕ್ತ ಮೈಸೂರು ಸಂಸ್ಥಾನದ ಎಲ್ಲಾ ಸರ್ಕಾರೀ ಶಾಲಾ, ಕಾಲೇಜು ಮತ್ತು ಕೋರ್ಟು ಕಚೇರಿಗಳಿಗೂ ಸರ್ಕಾರದವರು ರಜಾ ಕೊಟ್ಟಿರುವರು

Edited, printed and published by A. R Nagarajan at the Sadhvi Press, D. Subbiah Road, Mysore.

ಪ್ರಕಟಣೆ

ಮೈಸೂರು ಸೀಮೆಯ ಸಿಲ್ಕ್ ಕಂಟ್ರೋಲರ್ ಆಫೀಸಿನಿಂದ

[illegible] 14.44-45 ತಾ॥ 10-7-1944

ಇದರಿಂದ ಸಮಸ್ತ ಜನಗಳಿಗೂ ಮತ್ತು ಸಂಬಂಧಪಟ್ಟವರಿಗೂ ತಿಳಿಯಪಡಿಸುವುದೇನೆಂದರೆ:—

ರೇಷ್ಮೆ ಹುರಿಮಾಡುವ (ಯಂತ್ರಗಳಿಂದ) ಮತ್ತು ರೇಷ್ಮೆ ಬಟ್ಟೆ ನೇಯುವ (ಯಂತ್ರಗಳಿಂದ ನಡೆಸುವ ಮಗ್ಗಗಳಲ್ಲಿ) ಬಗ್ಗೆ ಲೈಸನ್ಸು ಪಡೆಯುವ ಅವಧಿಯು 15—7—1944 ನೇ ತಾರೀಖಿಗೆ ಮುಗಿಯುತ್ತೆ.

2 ಕೈಯಿಂದ ಹುರಿಮಾಡುವ ಮತ್ತು ಕೈಯಿಂದ ರೇಷ್ಮೆ ಬಟ್ಟೆ ನೇಯುವ ಬಗ್ಗೆ ಕೊಡಲ್ಪಡುವ ಲೈಸೆನ್ಸುಗಳನ್ನು ಪಡೆಯುವ ಅವಧಿಯನ್ನು ಮಾತ್ರ 31—7—44 ನೇ ತಾರೀಖಿನವರೆಗೆ ಈ ಮೂಲಕ ವಿಸ್ತರಿಸಿದೆ.

3. ಮೇಲ್ಕಂಡ ಅವಧಿಯು ಯಂತ್ರಗಳಿಂದ ಹುರಿಮಾಡುವ ಮತ್ತು ಯಂತ್ರಗಳಿಂದ ನೇಯುವ ಬಗ್ಗೆ ಕೊಡಲ್ಪಡುವ ಲೈಸೆನ್ಸುಗಳಿಗೆ ಅನ್ವಯಿಸುವುದಿಲ್ಲ. ಆದ[illegible] ಪಡೆಯ ಬೇಕಾದವರು ತಮ್ಮ ಲೈಸೆನ್ಸು ಅರ್ಜಿಗಳನ್ನು [illegible] 7—1944 ನೇ ತಾರೀಖಿನೊಳಗಾಗಿ ಗುಜರಾಯಿಸಿಕೊಳ್ಳಬೇಕು.

(ಸಹಿ) ಹೆಚ್. ಎಸ್. ಗೋವಿಂದರಾವ್
ಸಿಲ್ಕ್ ಕಂಟ್ರೋಲರ್.

[illegible] ಅತಿಗಳು [illegible] ನ್ಯೂ ಅಪೇರಾ ಟಾಕೀಸ್
[illegible] 7 44 ರಿಂದ ಭರ್ತೃಹರಿ
[illegible] 4 ನೇ ವಾರ ತಮಿಳು ಚಿತ್ರ
[illegible] ಪ್ರ (ಪಿ ಸ್ಟ್ರಾಕ್) ಶ್ಯಾಮ, ಎಂ. ಎಸ್. ಕೃಷ್ಣ,
ಟಿ. ಎ. ಮಧುರಂ, ಕಾಳಿ ಎನ್. ರತ್ನಂ ಪಾತ್ರವಹಿಸಿರುವರು

ಶ್ರೀ ಯುವರಾಜ ಸೌಕರ್ಯಕ್ಕೆ

ತಾ॥ ೧೦-೧೦-೧೯೪೧ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೇಪೇಟೆ ನುಂಡಿಯಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ರೇಷನ್ ಕಾರ್ಡುಗಳಿಗೆ ಸರ್ಕಾರ ಕೋಟಾಕ್ಕೆ ಪ್ರತಿಯಾಗಿ ಬೂರಾ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಮಹಾತ್ಮರ ಉಪದೇಶ! ಲಕ್ಷ ವರ್ಷದ ಚಾಲ್ತಿ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆ ನೋವು, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

ಡಾಕ್ಟರುಗಳ ಶಿಫಾರಸ್ಸನ್ನೂ, ಅನೇಕ ಪ್ರಶಂಸಾ ಪತ್ರಗಳನ್ನೂ ಪಡೆದಿದೆ.

ಎಂಟು ಪೇಜಿನ ಕ್ಯಾಟಲಾಗ್ ಉಚಿತ

ಎ. ರಾಮಸ್ವಾಮಿ ಅಯ್ಯರ್, ಅಂಬಳೆ, ಯಳಂದೂರ್ ಪೋಸ್ಟ್

ಸಂಪುಟ ೨] ಶನಿವಾರ ೧೫-೭-೪೪ [ಸಂಚಿಕೆ ೩೦೦

ಭಾರತ ಸಂಧಾನಕ್ಕಾಗಿ ೪೦೦೦೦ ಆಂಗ್ಲರ ಅರ್ಜಿ

ಕಸದತೊಟ್ಟಿಯಿಂದ ಏನಾದರೂ ತೆಗೆದುಕೊಂಡರೆ ಅಪರಾಧ

ಹತ್ತು ಸೇರು ಅಕ್ಕಿಗಾಗಿ ದಾಶಾ ಬಳಿ ಕೊಲೆ

ಆಯುರ್ವೇದ ಆಸ್ಪತ್ರೆಗೆ ರೂ. ೮,೧೪,೦೦೦

ಸ್ವಂ.ಸು.] ಬೆಂಗಳೂರು ೧೪

ಬೆಂಗಳೂರಿನ ಆಯುರ್ವೇದ ಆಸ್ಪತ್ರೆಗೆ ಸಂಬಂಧಪಟ್ಟಂತೆ ನಾನಾ ಕಟ್ಟಡಗಳು, ಕಟ್ಟಡಗಳಿಗಾಗಿ ಕೆಲವು ಸಿವೇಶನಗಳನ್ನು ಕೊಂಡುಕೊಳ್ಳುವುದಕ್ಕಾಗಿ ಆಗುವ ವೆಚ್ಚ, ಇವೆ ಸೇರಿ ಸರ್ಕಾರದವರು ೮,೧೫,೦೦೦ ರೂ ಗಳನ್ನು ಮಂಜೂರ್ಮಾಡಿರುತ್ತಾರೆ ಈ ಸಂಬಂಧದಲ್ಲಿ, ಈ ವರ್ಷ, ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯ ಆಡ್ಮಿನಿಸ್ಟ್ರೇಷನ್ ಬ್ಲಾಕು, ಸ್ಪೆಷಲ್ ವಾರ್ಡುಗಳು, ಜನರಲ್ ವಾರ್ಡುಗಳು, ಆಯುರ್ವೇದ ಮತ್ತು ಯುನಾನಿ ಫಾರ್ಮಸಿಗಳು ಮೊದಲಾದುವುಗಳನ್ನು ಮಾತ್ರ, ರೂ ೩,೬೩,೦೧೦ ಖರ್ಚಿನಲ್ಲಿ ಕಟ್ಟತಕ್ಕದ್ದೆಂದು ಆಜ್ಞೆ ಮಾಡಿರುತ್ತಾರೆ ಈ ಖರ್ಚಿನಲ್ಲಿ ೨,೦೪,೦೦೦ ರೂ ಗಳನ್ನು ಧರ್ಮಪ್ರಕಾಶ ಎಲ್. ಎಸ್ ವೆಂಕೋಜಿರಾವ್ ಮೊದಲಾದ ಮಹನೀಯರು ಆಯುರ್ವೇದ ಆಸ್ಪತ್ರೆಗೆ ಕೊಟ್ಟಿರುವ ದೊನೇಷನ್ ಹಣದಲ್ಲಿ ನಿರ್ವಹಿಸಲಾಗುವುದು. ಉಳಿದುದನ್ನು ಸರ್ಕಾರದಿಂದ ಕೊಡಲಾಗುವುದು

ಪುರಿ ತಯಾರಿಸಿ ಮಾರಕೂಡದು

ಚಿತ್ರದುರ್ಗ ಜಿಲ್ಲೆಯಲ್ಲಿ ಯಾರೂ ತಮ್ಮ ಅಪ್ಪಣೆಯಿಲ್ಲದೆ ಪುರಿಯನ್ನು ತಯಾರಿಸಿ ಮಾರಕೂಡದೆಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಆಜ್ಞೆಮಾಡಿರುತ್ತಾರೆ

ಬೂರಾ ಸಕ್ಕರೆ ಮತ್ತು ಕಲ್ಲುಸಕ್ಕರೆ ತಯಾರಿಸಕೂಡದು

ಆಹಾರ ಪದಾರ್ಥಗಳ ಡೈರೆಕ್ಟರಿಂದ ಸ್ಪೆಷಲ್ ಪರ್ಮಿಟ್ ಇಲ್ಲದೆ, ಸಂಸ್ಥಾನದಲ್ಲಿ ಯಾರೂ ಬೂರಾಸಕ್ಕರೆಯನ್ನೂ ಕಲ್ಲುಸಕ್ಕರೆಯನ್ನೂ ತಯಾರು ಮಾಡಕೂಡದೆಂದು ಸರ್ಕಾರದ ಆಜ್ಞೆಯಾಗಿದೆ

"ರಾವ್ ಬಹದ್ದೂರ್ ಎಂ. ಸಿ. ರಂಗಯ್ಯಂಗಾರ್ ಬಹುಮಾನ"

ದಿವಂಗತ ರಾವ್‌ಬಹದ್ದೂರ್ ಎಂ ಸಿ. ರಂಗಯ್ಯಂಗಾರ್ರ ಪುತ್ರ ಶ್ರೀ ಎಸ್. ಡಿ ಚಾರ್‌ರವರು, ಶ್ರೀ ರಂಗಯ್ಯಂಗಾರ್ರು ಅವರ ಮರಣ ಶಾಸನದಲ್ಲಿ ಇಷ್ಟಪಟ್ಟಂತೆ, ಶಿಕ್ಷಣ ಇಲಾಖೆಗೆ ೫೦೦ ರೂ ಗಳನ್ನು ಕೊಟ್ಟು, ಈ ನೋಟಿನಿಂದ ಬರುವ ಬಡ್ಡಿಯಲ್ಲಿ ಪ್ರತಿ ವರ್ಷವೂ ಮಾಳೀನರ ಸೀಪುರದ ಹೈಸ್ಕೂಲಿನಲ್ಲಿ, ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚಿನ ನಂಬರುಗಳನ್ನು ಪಡೆದು ಉತ್ತೀರ್ಣನಾಗುವ ವಿದ್ಯಾರ್ಥಿಗೆ ಒಂದು ಬಹುಮಾನವನ್ನು ಕೊಡತಕ್ಕದ್ದೆಂದು ಸೂಚಿಸಿರುತ್ತಾರೆ

ಬೆಲ್ಜಿಯಂನಿಂದ ಹಾರುವ ಬಾಂಬುಗಳು

ಫ್ರಾನ್ಸಿನಲ್ಲಿ ಮಾತ್ರವೇ ಅಲ್ಲದೆ ಬೆಲ್ಜಿಯಂನಲ್ಲಿಯೂ ಜರ್ಮನರು ತಮ್ಮ ಹಾರುವ ಬಾಂಬುಗಳ ನಿಲ್ದಾಣಗಳನ್ನಿಟ್ಟಿರುವ ರೆಂತೆ ಈಚೆಗೆ ಕಾಣಬರುತ್ತದೆ ವಿಮಾನಗಳಿಂತಲೂ ಮೇಲುಗಡೆ ಉತ್ತರದಿಕ್ಕಿನಿಂದ ನೇರವಾಗಿ ಅವುಗಳು ಕಡಲ್ಗಾಲುವೆಯನ್ನು ದಾಟಿ ಲಂಡನ್ನಿನ ಮೇಲೆ ಈಗ ಬರುತ್ತಿವೆ

ವಿಲ್ನ ರಷ್ಯರ ವಶ

ರಷ್ಯರಂಗದ ಉತ್ತರ ಭಾಗದಲ್ಲಿ ಜರ್ಮನರು ಪತ್ರ ನಿರ್ವೀಣನಿದ ಪ್ರಯತ್ನವನ್ನು ಮಾಡುತ್ತಿದ್ದಾರೆ ರಷ್ಯನರು ವಿಲ್ನವನ್ನು ಹಿಡಿದಿದ್ದಾರೆ ಜರ್ಮನ್ ಸೇನೆಯನ್ನು ನಾಶಮಾಡಿದಾರೆ

ಸಂಸ್ಕೃತ ಪಾರಿತೋಷಕಗಳು

ಮೈಸೂರು ೧೫

ಈ ಸಂವತ್ಸರದ ವಿದ್ವತ್ಪರೀಕ್ಷೆಗಳಿಗೆ ಅನುಜ್ಞೆಯನ್ನು ಪಡೆದ ೧೩೫ ಜನರಲ್ಲಿ ೧೧೨ ಜನರು ಪರೀಕ್ಷೆಗೆ ಬಂದಿದ್ದು ೧೫ ಜನರು ಪ್ರಥಮ ವರ್ಗದಲ್ಲಿಯೂ, ೭೭ ಜನರು ದ್ವಿತೀಯ ವರ್ಗದಲ್ಲಿಯೂ ಒಟ್ಟು ೯೨ ಜನರು, ಎಂದರೆ, ಉತ್ತಮ ಪರೀಕ್ಷೆಯಲ್ಲಿ ೪೫ ಜನರೂ, ಮಧ್ಯಮ ಪರೀಕ್ಷೆಯಲ್ಲಿ ೩೨ ಜನರೂ, ಪ್ರವೇಶ ಪರೀಕ್ಷೆಯಲ್ಲಿ ೧೫ ಜನರೂ ಉತ್ತೀರ್ಣರಾಗಿರುತ್ತಾರೆ ಆಗಮ ಪರೀಕ್ಷೆಗಳಿಗೆ ೮ ಜನರು ಬಂದಿದ್ದು ೬ ಜನರು ದ್ವಿತೀಯ ವರ್ಗದಲ್ಲಿಯೂ ಒಬ್ಬರು ಪ್ರಥಮ ವರ್ಗದಲ್ಲಿಯೂ ಉತ್ತೀರ್ಣರಾಗಿರುತ್ತಾರೆ ಪರೀಕ್ಷಾ ವಿಷಯಾನುಸಾರವಾಗಿ ಉತ್ತೀರ್ಣರಾದವರು.—ವೇದಗಳಲ್ಲಿ ೩೬, ಸಾಹಿತ್ಯದಲ್ಲಿ ೯, ವ್ಯಾಕರಣದಲ್ಲಿ ೨, ನವೀನನ್ಯಾಯದಲ್ಲಿ ೭, ಪ್ರಾಚೀನನ್ಯಾಯದಲ್ಲಿ ೧, ಧರ್ಮಶಾಸ್ತ್ರದಲ್ಲಿ ೧ ಜ್ಯೋತಿಷದಲ್ಲಿ ೧, ಅದ್ವೈತ ದ್ವೈತ ವಿಶಿಷ್ಟಾದ್ವೈತ ವೇದಾಂತಗಳಲ್ಲಿ ೧೬, ಪ್ರವೇಶ ಪರೀಕ್ಷೆಯಲ್ಲಿ ೧೫—ಈ ರೀತಿ ಒಟ್ಟು ೯೨ ಜನರು ಇವರಲ್ಲಿ ೪೪ ಜನರು ಈ ಸಂಸ್ಥಾನದವರು; ೮ ಜನರು ಹೊರಗಿನವರು. ೩೦ ಜನರು ಸ್ವವ್ಯಾಸಂಗಿಗಳು, ೭೨ ಜನರು ಶಾಲೆಗಳಲ್ಲಿ ಶಿಕ್ಷಿತರಾದವರು. ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ನೂರಾರು ರೂ ಸಂಭಾವನೆಗಳೂ, ಶಾಲುಜೋಡಿ, ಮತ್ತು ವಿಶೇಷ ಪಾರಿತೋಷಕಗಳೂ ಮಹಾಸ್ವಾಮಿಯವರಿಂದ ಕೊಡಲ್ಪಟ್ಟಿವೆ.

ರಾಮಾನುಜ ವೈಷ್ಣವ ಸಂಘ

ಅಖಿಲ ಮೈಸೂರು ರಾಮಾನುಜ ಶ್ರೀ ವೈಷ್ಣವ ಸಂಘದ ನಾಲ್ಕನೇ ವರ್ಷದ ವಾರ್ಷಿಕೋತ್ಸವವೂ, ಜಯಂತಿ ಬಾಡಿ ಮೀಟಿಂಗೂ ಸಹ ತಾ|| ೧೬-೭-೪೪ ನೇ ಭಾನುವಾರ ಮಧ್ಯಾಹ್ನ ೩ ಗಂಟೆಗೆ ಬೆಂಗಳೂರು ಸಿಟಿ ಸ್ಟೇಟ್ ಹೈ ಸ್ಕೂಲ್‌ನ [illegible] ಮಂದಿರದಲ್ಲಿ ನಡೆಯುವುದು

ಆರಂಭೋತ್ಸವ

ಮೈಸೂರು ಚಾಮರಾಜಪೇಟೆ ಸ್ಟೇಟ್‌ಬಾಲಿಕಾ ವಿದ್ಯಾಸದನ ದೊಡ್ಡ ಗಡಿಯಾರದ ಹತ್ತಿರ ಸ್ಕಿಮೋಲ ಬಿಲ್ಡಿಂಗ್ಸಿನ ಇ ಪಡಿ ಮನೆಯ ಈ ದಿನ ಮಧ್ಯಾಹ್ನ ೩ ಗಂಟೆಯಲ್ಲಿ ಅದರ ಶಾಲೆಯ ಆರಂಭೋತ್ಸವವನ್ನು [illegible] ವರು ಆಗಮಿಸುವರು ಆಗಮಿಸುತ್ತಾರೆ

ಶ್ರೀ ಪರಕಾಲ ಮಠ

ಶ್ರೀ ಮಠದಲ್ಲಿ ಸ್ವಾಮಿಗಳು ಮೇಲಿನ ಸವೆಯದ ಚಾತುರ್ಮಾಸ್ಯ ಸಂಕಲ್ಪ ಕಟ್ಟಿ ೬೬ ನೇ ಸಂವತ್ಸರದ ವೇದ ಶಾಸ್ತ್ರ ವಿದ್ವತ್ಸಭೆಯನ್ನು ನಡೆಸುವಾಗ ಸಭೆಯ ಇದೇ ತಾರಣ ಸಂವತ್ಸರದ ಆಷಾಢ ಬಹುಳ ತ್ರಯೋದಶೀ ಮಂಗಳವಾರ ತಾ|| ೧೮-೭-೪೪ ಬರಬೇಕ್ಕ ಪ್ರತಿ ದಿನವೂ ಸಾಯಂಕಾಲ ೪ ಘಂಟೆಯಿಂದ ೭ ಘಂಟೆ ವರೆಗೆ ಶ್ರವಣ ಪ್ರಬಂಧ ಪಾರಾಯಣ ಶಿವಾರಾಮ ವಾರ ಶ್ರೀ ಶ್ರೀ ಸ್ವಾಮಿಗಳವರ ಸನ್ನಿಧಾನದಲ್ಲಿ ನಡೆಯುತ್ತಿ ಸ್ವಾಮಿಗಳ ಮೇಲಿನ ವಿದ್ವಾಂಸರು ಹಾಜರಾಗಿ ವರ್ಗ ದಿನಗಳಿಗೆ ಕಡಿಮೆ ಇರಕೂಡದೆಂದು ಅಂದ ತಿಳಿಸಿರುತ್ತ

ಸಂಗೀತ

ಮೈಸೂರಿನಲ್ಲಿರುವ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ೧೭-೭-೪೪ ನೇ ಸೋಮವಾರ ಸಾಯಂಕಾಲ ೭ ಗಂಟೆಗೆ ಪ್ರಯೋಗದ ಪ್ರಯುಕ್ತ ಆಸ್ಥಾನ ವಿದ್ವಾನ್ ಸ್ವಾಮಿಮೂರ್ತಿ [illegible] ವಾಯಿರ ಹಾಡುಗಾರಿಕೆ ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಿದೆ ಎಲ್ಲರೂ ಬರಬೇಕೆಂದು ಪ್ರಾರ್ಥನೆ

ಸದ್ವಿದ್ಯಾ ಪಾಠಶಾಲಾ

ಮೈಸೂರು ವಿದ್ಯಾರ್ಥಿಗಳಾದ ವಿ|| ಸುಬ್ರಹ್ಮಣ್ಯ ಶಾಸ್ತ್ರಿ ದ್ವಿತೀಯರವರು ತಾ|| ೧೫ ನೇ ಗುರುವಾರ ಮಧ್ಯಾಹ್ನ ಪಾಠಶಾಲೆಗೆ ಭೇಟಿಯನಾಡಿ ತರಗತಿಗಳನ್ನೆಲ್ಲವನ್ನೂ ನೋಡಿ ಸಂತೋಷಪಟ್ಟಿಕೊಂಡ. ದೊರೆ ದಳ ಧರ್ಮಪ್ರವರ್ತ ಎ ಎಸ್. ರಂಗಸ್ವಾಮಿ ಅಯ್ಯಂಗಾರ್‌ರು ನವರ ಜೊತೆಯಲ್ಲಿದ್ದು ಪಾಠಶಾಲೆಯ ವಿಷಯವನ್ನೆಲ್ಲಾ ಅವರಿಗೆ ತಿಳಿಸಿದರು.

ತೊಟ್ಟಿಯ ಕಸವನ್ನು ತೆಗೆದುಕೊಂಡರೂ ಶಿಕ್ಷೆ

ಕಸದ ತೊಟ್ಟಿಗಳಿಂದ ಆ ಗಜದ ಚೂರುಗಳನ್ನು ಅಥವಾ ಬೇರೆ ಏನನ್ನು ತೋ ಗ ತ್ತಿದ್ದವರನ್ನುಗಿ ಕಿಲ್ಲೆಸ್ತಾಯಿ ಮ್ಯಾಜಿಸ್ಟ್ರೇಟರು ಪ್ಯಾಮ ಪ್ರತಿಯೊಂದೆ ಸ್ಪ ಎಂಬುವ ೩೬ ನೇ ಲೋಕಲ್ ನಿಬಂಧನೆಗಳ ಪ್ರಕಾರ ವಿಧಿ [illegible] ಇರುವ ಹಕ್ಕುಗಳು [illegible], ಅದನ್ನು [illegible] ಎಂದು ಅ [illegible] ಎಂದು ತೀರ್ಪು ಆಗಿ ಮೊದಲನೆಯದು.

ಸಂಧಾನ ನಡೆಸಿ

ಜರ್ಮನಿಯಲ್ಲಿ [illegible] ಡರೊಡನೆ ಸಂಧಾನ ನಡೆಸಬೇಕೆಂದು ೪೦೦೦೦ ಜನ ರುಜುಮಾಡಿರುವ ಅರ್ಜಿಯನ್ನು ಬ್ರಿಟನ್ನಿನ ಮಹಿಳಾ ಶಾಂತಿ ಸಮಿತಿಯವರು ಬ್ರಿ|| ಸರ್ಕಾರಕ್ಕೆ ಒಪ್ಪಿಸುವವರಾಗಿದ್ದಾರೆ ಕಾಮನ್ಸ್ ಸಭೆಯಲ್ಲಿ ಒಂದೂ ಹೊಸದ ಪ್ರಶ್ನೆಯು ಸಧ್ಯದಲ್ಲಿಯೇ ಚರ್ಚೆಗೆ ಬರಲಿದೆ

ಹತ್ತು ಸೇರು ಅಕ್ಕಿಗಾಗಿ ಹತ್ಯೆ

ದಾಶಾ ಬಳಿ ಕೊರಟಗೆರೆ ಗ್ರಾಮದ ೧೦ ವರ್ಷದ ಬಾಲಿಕನು ಮತ್ತು ವರ್ಷದ ಒಬ್ಬ ಬಾಲಕನು ಹೊತ್ತುಕೊಂಡು ಹೋಗುತ್ತಿದ್ದ ಹತ್ತು ಸೇರು ಅಕ್ಕಿಗೆ ಎಂಟು ರೂ ಕೊಡುವುದಾಗಿ ಆಸೆ ತೋರಿಸಿ ತನ್ನ ಮನೆಗೆ ಕರೆದುಕೊಂಡು ಹೋಗಿ ಹುಡುಗನ ಕತ್ತಿಗೆ ಬಟ್ಟೆಯನ್ನು ಬಿಗಿದು ಅವನನ್ನು ಕೊಂದು ಒಂದು ಚರಂಡಿಗೆ ಎಸೆದಿದ್ದುದರಿಂದ ಚರಂಡಿಯಲ್ಲಿ ತೇಲುತ್ತಿದ್ದ ಶವವನ್ನು ಪೋಲೀಸರು ಕಂಡು ಆಪಾದಿತ ಅಪರಾಧಿಯನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲು. [illegible] ಕಠಿಣ ಸಜಾ ವಿಧಿಸಲ್ಪಟ್ಟಿತು

ಜಪಾನರನ್ನು ಓಡಿಸುವ ವೆಚ್ಚ

ಹಿಂದೂಸ್ಥಾನದಿಂದ ಜಪಾನರನ್ನು ಓಡಿಸುವ ವೆಚ್ಚವು ಹಿಂದೂ [illegible] ದ ಮೇಲೆ ಬೀಳಬಹುದೆ ಜಪಾನಿನ ಮೇಲೆ ನಡೆಸುವ ಯುದ್ಧ, ರಾಜ್ಯಾಡಳಿತ ವೆಚ್ಚದಲ್ಲಿ ಬ್ರಿಟನು ಎಷ್ಟು ಭಾಗವನ್ನು ವಹಿಸಬೇಕು. ಹಿಂದೂಸ್ಥಾನವು ಎಷ್ಟು ಭಾಗವನ್ನು ವಹಿಸಬೇಕು ಎಂಬ ವಿಷಯ ಈಗಲೇ ಹೇಳಲು ಸಾಧ್ಯವಿಲ್ಲ ಎಂದು ಮಿ|| ಅಮೆರಿಯವರು ಪಾರ್ಲಿಮೆಂಟ್‌ನಲ್ಲಿ ಹೇಳಿರುವರು.

ಒಂದು ವರ್ಷದಲ್ಲಿ ಫ್ರಾನ್ಸ್ ವಿಮೋಚನೆ

ಜರ್ಮನಿಯು ಫ್ರಾನ್ಸಿನಲ್ಲಿ ಇನ್ನು ಒಂದು ವರ್ಷದೊಳಗೆ ಸೋಲಿಸಲ್ಪಡುವುದು. ೧೯೪೫ ನೇ ಜುಲೈ ೧೪ ರಲ್ಲಿ ಫ್ರೆಂಚರು ಆಕ್ರಮಣಕಾರರಿಂದಲೂ, ವಿಚಿಯ ಸೂತ್ರದ ಗೊಂಬೆಗಳಿಂದಲೂ ವಿಮೋಚನೆ ಹೊಂದಿ ತಮ್ಮ ಜಯೋತ್ಸವದ ದಿನವನ್ನು ಉತ್ಸವವನ್ನು ನೆರವೇರಿಸುವರೆಂದು ನಾನು ನಂಬುತ್ತೇನೆ—ಎಂದು ಅಧ್ಯಕ್ಷ ರೂಸ್ವೆಲ್ಟರು ಒಂದು ಸಂದೇಶದಲ್ಲಿ ತಿಳಿಸಿದ್ದಾರೆ

ಜಪಾನಿ ಸೈನ್ಯದ ಬಂಧನ

ನ್ಯೂಗಿನಿಯಲ್ಲಿ ಭಯಂಕರವಾದ ಕದನದ ತರುವಾಯ ಜಪಾನಿಯರ ಹಿಮ್ಮೆಟ್ಟು ಆರಂಭವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ ೪೫೦೦೦ ಜಪಾನೀ ಸೈನಿಕರು ಐಟಪೆ-ವೇವಾಕ್ ಪ್ರದೇಶದಲ್ಲಿ ಬಂಧಿಸಲ್ಪಟ್ಟಿದೆ ಮಿತ್ರರಿಗೆ ಸಂಬಂಧವಾದ ಅವೆ [illegible] ಸೈನಿಕರು [illegible] ಇನ್ನು ಮತ್ತೆ [illegible]

ಚೀನಾ ವಿದ್ಯಾರ್ಥಿಗಳಿಗೆ ಸೌಕರ್ಯ

ಹಿಂದೂಸ್ಥಾನದಲ್ಲಿರುವ [illegible] ವಿದ್ಯಾರ್ಥಿಗಳು [illegible] ಅವರ [illegible] ಒಂದು [illegible] ವಿದ್ಯಾರ್ಥಿಗಳ [illegible] ಸರ್ಕಾರ [illegible] ವಿಶ್ವವಿದ್ಯಾಲಯ [illegible] ಅನುಕೂಲ ಮಾಡಿಕೊಡುವುದಾಗಿ ಪ್ರಕಟವಾಗಿದೆ

ಮೈಸೂರು ಸಂಪದಭ್ಯುದಯ ಯೋಜನೆ

ಮೈಸೂರು ೧೪

ಈದಿನ ಸಂಜೆ ರಾಜಧಾನಿಯ ರಾಷ್ಟ್ರೀಯ ರಕ್ಷಣಾ ಬಲದ ದ್ವಿ॥ ವಾರ್ಷಿಕೋತ್ಸವದ ನಾಲ್ಕನೇ ದಿನದ ಸಮಾರಂಭದ ದಿನ. ಸಭೆಯ ಸಭಾಧ್ಯಕ್ಷರಾದ ಶ್ರೀಮಾನ್ ಡಿ. ಹೆಚ್. ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಎಕನಾಮಿಕ್ ಡೆವಲಪ್‌ಮೆಂಟ್ ಕಮೀಷನರಾದ ಶ್ರೀಮಾನ್ ಪಿ. ಹೆಚ್. ಕೃಷ್ಣರಾಯರು ನಮ್ಮ ದೇಶದ ಆರ್ಥಿಕ ಅಭಿವೃದ್ಧಿ ವಿಚಾರವಾಗಿ ಭಾಷಣ ಮಾಡಿದರು. ಅಟ್ಲಾಸ್ ಫಿಸಿಕಲ್ ಕಲ್ಚರ್ ಇನ್ಸ್ಟಿಟ್ಯೂಟಿನವರು ನಾನಾವಿಧವಾದ ಸಾಧನೆಗಳನ್ನು ಪ್ರದರ್ಶಿಸಿದರು. ಮಿಸ್ ಸರೋಜ ಮತ್ತು ಮಿಸ್ ಮೋಹನರವರ ಸಂಗೀತ ನಡೆಯಿತು. ಶ್ರೀಮಾನ್ ಎಂ. ಎಸ್. ರಾಮಸ್ವಾಮಿಯವರು ವಂದನಾರ್ಪಣೆ ಮಾಡಿದರು.

ಶ್ರೀಮಾನ್ ಪಿ. ಹೆಚ್. ಕೃಷ್ಣರಾಯರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು:—

ಸೀಮೆಯ ಸಂಪತ್ತು, ಜನಗಳ ವರಮಾನ ಹೆಚ್ಚಬೇಕಾದರೆ ವ್ಯವಸಾಯ ಮತ್ತು ಕೈಗಾರಿಕೆ ಎರಡೂ ಬಹುಮಟ್ಟಿಗೆ ಅಭಿವೃದ್ಧಿಯಾಗಬೇಕು. ವ್ಯವಸಾಯಕ್ಕೆ ಮುಖ್ಯವಾದ ನೀರಿನ ವಸತಿಗಾಗಿ ಇನ್ನು ೧೧ ಕೋಟಿ ರೂಪಾಯಿ ಖರ್ಚು ಮಾಡಬೇಕು —ಹತ್ತು ಕೋಟಿ ನಾಲೆ ಮತ್ತು ಕೆರೆಗಳಿಗಾಗಿ, ಒಂದು ಕೋಟಿ ಭಾವಿಗಳಿಗಾಗಿ. ಸೀಮೆಗೊಬ್ಬರವನ್ನು ತಯಾರಿಸಲು ಇರುವ ಕಾರ್ಖಾನೆಗಳನ್ನು ಬಲಾಯಿಸಬೇಕು ಮತ್ತು ಹೆಚ್ಚು ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಇದಕ್ಕೆ ಒಂದುಕೋಟಿ ರೂಪಾಯಿ. ರೈತರ ಸಾಲದ ಹೊರೆಯನ್ನು ನೀಗಿಸಬೇಕು. ಇದಕ್ಕಾಗಿ ಕೂಡಲೆ ಹಣವನ್ನು ಒದಗಿಸಬೇಕಾಗಿಲ್ಲ. ಅವರು ಬೆಳೆದ ಬೆಳೆಗೆ ಒಳ್ಳೆಯ ಕ್ರಯ ಬರುವ ಏರ್ಪಾಟು ಮಾಡಬೇಕು. ಇದು ಇಂಡಿಯಾ ಮತ್ತು ಪ್ರಪಂಚಕ್ಕೆ ಅನ್ವಯಿಸುವ ಸಮಸ್ಯೆ. ಕೈಗಾರಿಕೆಗೆ ಮುಖ್ಯ ಅಸ್ತಿಭಾರ ವಿದ್ಯುಚ್ಛಕ್ತಿ, ರೈಲು, ರಸ್ತೆ, ಮೋಟಾರು ಮುಂತಾದ ಪ್ರಯಾಣ ಸಲಕರಣೆಗಳು, ಇವುಗಳಿಗಾಗಿ ೧೦ ಕೋಟಿ ರೂಪಾಯಿಗಳಾದರೂ ಖರ್ಚಾಗಬೇಕು. ಸರ್ಕಾರದವರು ಈಗಾಗಲೇ ಕೈಗಾರಿಕೆಗಳಲ್ಲಿ ಹಾಕಿರುವುದು ೫ ಕೋಟಿ ರೂಪಾಯಿ. ನಾವು ಹೊಸದಾಗಿ ಸ್ಥಾಪಿಸಬೇಕೆಂದಿರುವ ಕೈಗಾರಿಕೆಗಳಿಗೆ ಇನ್ನಷ್ಟು ಹಣವೂ ಬೇಕಾಗುತ್ತದೆ. ಅನುಕೂಲವಾದ ಮನೆಗಳನ್ನು ಕಟ್ಟಲು ಸಂಸ್ಥಾನಾದ್ಯಂತ ಕೂಡಲೆ ೫ ಕೋಟಿ ಖರ್ಚಾಗಬೇಕು. ನೀರು ಮತ್ತು ಚರಂಡಿಗಳ ವ್ಯವಸ್ಥೆಗಾಗಿ ೫ ವರ್ಷಗಳಲ್ಲಿ ಖರ್ಚಾಗಬೇಕಾದ್ದು ೨ ಕೋಟಿ ರೂಪಾಯಿ. ಇದಲ್ಲದೆ ವಿದ್ಯಾಭ್ಯಾಸದ ಖರ್ಚು ಒಂದಕ್ಕೆ ೩ ರಷ್ಟಾಗಬೇಕು. ಸ್ಕೂಲು ಕಟ್ಟಡಗಳಿಗಾಗಿಯೇ ಎರಡು ಕೋಟಿ ರೂಪಾಯಿ ಬೇಕು. ಆರೋಗ್ಯ ಮತ್ತು ವೈದ್ಯ ಸಹಾಯದ ಮೇಲಿನ ಖರ್ಚು ಒಂದಕ್ಕೆ ೪ ರಷ್ಟಾಗಬೇಕು. ಕಟ್ಟಡಗಳಿಗೆ ಖರ್ಚು ಒಂದುಕೋಟಿ. ಈ [illegible] ಸೋಷಿಯಲ್ [illegible] ಕೆಲವರು. [illegible] ಕೆಲಸವೆಂದು ಹೇಳುವ [illegible] ಆದರೆ ಮೈಸೂರು ಸಂಸ್ಥಾನದಲ್ಲಿ ಈ ಕೆಲಸಗಳನ್ನು [illegible] ಅನೇ [illegible] ಕೈಗೊಂಡು ಬಹಳ ಮಟ್ಟಿಗೆ ಕೆಲಸವನ್ನು ಸಾಧಿಸಿದ್ದೇವೆ. ಆಗಬೇಕಾದ ಕೆಲಸಗಳನ್ನು ಯುದ್ಧಾನಂತರದವರೆಗೆ ತಳ್ಳಿಹಾಕದೆ ಸಾಧ್ಯವಾದಷ್ಟು ಕೆಲಸವನ್ನು ಈಗಾಲೇ ಮಾಡುತ್ತಿದ್ದೇವೆ. ಯುದ್ಧ ಮುಗಿಯುವುದರೊಳಗಾಗಿಯೇ ಮಾಡಬೇಕಾದ ಕೆಲಸಗಳೂ ಎಷ್ಟೋ ಇವೆ. ನಾವು ಇಟ್ಟುಕೊಂಡಿರುವ ಗುರಿಯಲ್ಲಿ ಅಸಾಧ್ಯವಾದದ್ದು ಯಾವುದೂ ಇಲ್ಲ. ಅನೇಕ ಸಂದರ್ಭಗಳಲ್ಲಿ ನಾವು ಕಳೆದ ೧೦ ವರ್ಷಗಳಲ್ಲಿ ಮಾಡಿದ ಕೆಲಸವನ್ನು ಮುಂದೆ ಐದು ವರ್ಷಗಳಲ್ಲಿ ಮಾಡಬೇಕೆಂದಿದ್ದೇವೆ. ಕೆಲವು ಸಂದರ್ಭದಲ್ಲಿ ಇದಕ್ಕೆ ಇಮ್ಮಡಿಯಾಗಿ ಮಾಡಬೇಕೆಂದಿದ್ದೇವೆ. ಇಂಡಿಯಾ ದೇಶದಲ್ಲೆಲ್ಲಾ ಆದಾಯವನ್ನು ಎರಡರಷ್ಟು ಹೆಚ್ಚಿಸಬೇಕೆಂದು ಯೋಜನೆಗಳು ತಯಾರಾಗುತ್ತಿರುವಾಗ ನಮ್ಮ ಯೋಜನೆಯು ಅಷ್ಟೇನು ಭಾರಿಯಲ್ಲ. ಮೈಸೂರು ಸೀಮೆಯು ಜನ ಸಂಖ್ಯೆಯಲ್ಲೂ ವಿಸ್ತೀರ್ಣದಲ್ಲೂ ಇಂಡಿಯಾ ದೇಶದ ೫೦ರಲ್ಲಿ ಒಂದು ಭಾಗ. ಅವರು ೧೫ ವರ್ಷಗಳಲ್ಲಿ ೧೦ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾದರೆ ನಾವು ೧೫ ವರ್ಷದಲ್ಲಿ ೨೦೦ ಕೋಟಿ ರೂಪಾಯಿಯಾದರೂ ಖರ್ಚು ಮಾಡಬೇಕಾಗುತ್ತೆ. ೧ ನೇ ೫ ವರ್ಷ ೪೦ ಕೋಟಿ ಎರಡನೇ ೫ ವರ್ಷದಲ್ಲಿ ೬೦. ೩ ನೇ ೫ ವರ್ಷದಲ್ಲಿ ೪೦ ಅಥವಾ ಅನುಕೂಲವಾದರೆ ೧೦೦. ಈ ಹಣವನ್ನು ಹೇಗಾದರೂ ಒದಗಿಸಬೇಕು. ಮತ್ತು ಒದಗಿಸುವ ಉಪಾಯವನ್ನು ಹುಡುಕಬೇಕೇ ಹೊರತು ಸಾಧ್ಯವಿಲ್ಲವೆಂದು ಕೈಕಟ್ಟಿ ಕುಳಿತರೆ ಸೀಮೆಯು ಮುಂದುವರಿಯುವುದು ಹೇಗೆ?

ಈ ಹಣವೆಲ್ಲಾ ಸರ್ಕಾರದ ಬೊಕ್ಕಸದಿಂದಲೇ ಬರಬೇಕೆಂತಿಲ್ಲ. ಕೆಲವು ಭಾಗ ಸರ್ಕಾರದ ವರಮಾನದಿಂದ, ಕೆಲವು ಭಾಗ ಸಾಲದಿಂದ, ಮತ್ತೆ ಕೆಲವು ಭಾಗ ಜನಗಳು ಶೇಖರಿಸಿರುವ ಹಣದಿಂದ ಮತ್ತು ಅವರು ಸಂಪಾದಿಸುವ ಹಣದಿಂದ ಬರಬೇಕಾಗುತ್ತದೆ. ಮುಖ್ಯವಾಗಿ ತಮ್ಮ ಸ್ಥಿತಿಯನ್ನು ತಾವೇ ಉತ್ತಮಗೊಳಿಸುವ ಒಂದು ಬಗೆಯ ಆತುರ ಮತ್ತು ಆಸಕ್ತಿ ಜನಗಳಲ್ಲಿ ಹುಟ್ಟಿದರೆ ಮಾತ್ರ ಒಂದು ಸೀಮೆಯು ಮುಂದುವರಿಯಬಹುದು. ಈ ತರಹ ಆಸಕ್ತಿ, ಧೈರ್ಯ, ಮತ್ತು ಸಾಹಸದಿಂದ ನಾವೆಲ್ಲರೂ ಏಕೀಭವಿಸಿ ಕೆಲಸ ಮಾಡಿದರೆ ನಮ್ಮ ಕಾರ್ಯವು ಕೈಗೂಡುವುದರಲ್ಲಿ ಯಾವ ಸಂದೇಹವೂ ಇಲ್ಲ

ಅಧ್ಯಕ್ಷರ ಭಾಷಣ

ಅಧ್ಯಕ್ಷರು ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿ ಭಾಷಣಮಾಡಿದರು. ರಷ್ಯಾ ದೇಶದ ವ್ಯವಸ್ಥೆ, ಬೆವರಿಜ್ ಸ್ಕೀಂ ಮುಂತಾದುವುಗಳನ್ನು ವಿವರಿಸಿ ಆ ದೇಶಗಳಂತೆ ನಮ್ಮ ದೇಶವೂ ಬೇಗ ಸಾಧ್ಯವಾದಷ್ಟು ವ್ಯವಸ್ಥೆ ನಡೆಸಿ ಅಭಿವೃದ್ಧಿಗೆ ಬರಬೇಕೆಂದು ಹೇಳಿದರು.

ಘೋರ ದಿನಗಳಿನ್ನೂ ಇವೆ

ನಾವು ತೊಡಗಿರುವ ಯುದ್ಧದ ಅತ್ಯಂತ ಘೋರ ಪ್ರಕರಣವು ಇನ್ನೂ ಬರಲಿದೆ. ವಿಜಯಕ್ಕೆ ಮುಂಚೆ ವಿಶೇಷ ತ್ಯಾಗ ಅನೇಕ ಕಷ್ಟಗಳನ್ನು ನಾವು ಇದಿರು ನೋಡಬೇಕು ಎಂದು ಅಧ್ಯಕ್ಷ ರೂಸ್ವೆಲ್ಟರು ಹೇಳಿರುವರು.

ಮೈಸೂರು ಪೌರಸಭೆಯ ಕಾರ್ಯಕಲಾಪಗಳು

ಮೈಸೂರು ೧೫

ನಿನ್ನೆ ಸಂಜೆ ಮೈಸೂರು ಪೌರಸಭೆಯು ಮುಂದುವರಿದ ಮೀಟಿಂಗು ಸೇರಿತ್ತು. ಆಗ ನಡೆದ ನಡವಳಿಕೆಗಳಿವು—

ಸಮಿತಿಗಳ ರಚನೆ

ಮ್ಯಾನೇಜಿಂಗ್ ಕಮಿಟಿಗೆ:- ಶ್ರೀಗಳಾದ ಪಿ. ಸೀತಾರಾಮಯ್ಯ, ಬಿ ನಾರಾಯಣಸ್ವಾಮಿ, ಎಂ. ಆರ್. ಸಿ ಬಸಪ್ಪ, ಎಂ. ವಿ ವೆಂಕಟರಾಮಯ್ಯ, ಜಿ ಜನಾರ್ದನ ನಾಯುಡು, ಜಿ. ಆರ್ ರಂಗಸ್ವಾಮಯ್ಯ, ಜಿ. ಅಹಮದ್ ಖಾನ್

ವರ್ಕ್ಸ್ ಕಮಿಟಿಗೆ:- ಶ್ರೀಗಳಾದ ವಿ. ಎಸ್. ದಾನಪ್ಪ, ಎ ಕೃಷ್ಣಮೂರ್ತಿರಾವ್ ಎ ಎಸ್. ಸೂರ್ಯನಾರಾಯಣರಾವ್, ಟಿ. ವೆಂಕಟರಮಣಯ್ಯ.

ಟೌನ್‌ಹಾಲ್ ಕಮಿಟಿ:—ಶ್ರೀಗಳಾದ ಇ. ಪಿ. ನಂಜಪ್ಪ, ಎಂ. ಆರ್. ಸಿ. ಬಸಪ್ಪ ಅಗರಂ ರಂಗಯ್ಯ, ಎಂ. ಎಸ್. ಜೋಯಿಸ್

ಲೀಗಲ್ ಕಮಿಟಿಗೆ:- ಶ್ರೀಗಳಾದ ಎಂ ಎಸ್. ಜೋಯಿಸ್, ಪಿ. ಸೀತಾರಾಮಯ್ಯ, ಬಿ. ನಾರಾಯಣಸ್ವಾಮಿ (ಅಧ್ಯಕ್ಷರು)

ಆಡಿಟ್ ಕಮಿಟಿಗೆ:—ಶ್ರೀಗಳಾದ ಎ. ಕೃಷ್ಣಮೂರ್ತಿರಾವ್, ಇ. ಪಿ. ನಂಜಪ್ಪ, ಟಿ. ವೆಂಕಟರಮಣಯ್ಯ (ಅಧ್ಯಕ್ಷರು)

ಹೆಲ್ತ್ ಕಮಿಟಿಗೆ:—ಶ್ರೀಗಳಾದ. ಟಿ. ನರಸಿಂಹಯ್ಯಂಗಾರ್, ಕೆ. ಎಸ್. ಸತ್ಯನಾರಾಯಣರಾವ್, ಟಿ ಚಂದ್ರಶೇಖರಗೌಡ್ ಡಾ॥ ಎ. ವಿ. ರಂಗರಾವ್.

ಮಲೇರಿಯಾ ಆಸ್ಪತ್ರೆ

ಮೈಸೂರು ರಾಮಾನುಜ ರಸ್ತೆಯಲ್ಲಿರುವ ಮಾದರಿ ಮನೆಗಳ ಬಳಿ ಒಂದು ಮಲೇರಿಯಾ ಆಸ್ಪತ್ರೆಯನ್ನಿಡುವ ವಿಚಾರವಾಗಿ ಶ್ರೀ ಎ. ಕೃಷ್ಣಮೂರ್ತಿರಾಯರು ಒಂದು ನಿರ್ಣಯ ತಂದಿದ್ದರು. ಆರೋಗ್ಯಾಧಿಕಾರಿಗಳು ಔಷಧಿ ಬಂದಕೂಡಲೇ ತಕ್ಕಸೌಕರ್ಯ ಮಾಡಿಕೊಡಲಾಗುತ್ತೆ ಎಂದು ಹೇಳಿದರು. ನಿರ್ಣಯ ವಾಪಸು ತೆಗೆದುಕೊಳ್ಳಲ್ಪಟ್ಟಿತು

ಆಟದ ಮೈದಾನ

ಕುರನಗೆರೆಯಲ್ಲಿ ಮಕ್ಕಳಿಗೆ ಆಟದ ಸೌಕರ್ಯಗಳನ್ನುಳ್ಳ ಮೈದಾನ ಏರ್ಪಡಿಸುವ ವಿಚಾರ ಅಂಗೀಕಾರವಾಯಿತು.

ಮಾರ್ಕೆಟ್ ಬಾಡಿಗೆ ದರ

ಮಾರ್ಕೆಟ್‌ನಲ್ಲಿರುವ ಅಂಗಡಿಗಳಿಗೆ ಬಾಡಿಗೆ ಹೆಚ್ಚಿಸುವ ವಿಚಾರ ಮುಂದಕ್ಕೆ ಹಾಕಲ್ಪಟ್ಟಿತು. ಈ ಬಾಡಿಗೆ ಹೆಚ್ಚಿಸಿದರೆ ಮಾಹೆಯಾನ ಪೌರಸಭೆಗೆ ೨೫೦೦ ರೂ. ಹೆಚ್ಚು ವರಮಾನ ಬರುತ್ತೆಂದು ತಿಳಿಯಬರುತ್ತೆ.

ಹಿಂದಿನ ಮೀಟಿಂಗಿನಲ್ಲಿ ಬಹಳ ಚರ್ಚೆಯಾಗಿ ತೀರ್ಮಾನವಾಗದೆ ಇದ್ದ ಟ್ರಸ್ಟ್ ಬೋರ್ಡ್ ನಡವಳಿಕೆಯ ವಿಷಯವು ರಿಕಾರ್ಡು ಮಾಡಿರುವುದು ಸರಿಯೋ ತಪ್ಪೋ ಎಂದು ಮತ್ತೆ ಬಹಳ ಚರ್ಚೆಯಾಗಿ ಮುಂದಕ್ಕೆ ಹಾಕಲ್ಪಟ್ಟಿತು.

ಪ್ರಶ್ನೋತ್ತರಗಳು

ಪ್ರಶ್ನೋತ್ತರಗಳಲ್ಲಿ ಶ್ರೀಮಾನ್ ಎ ಕೃಷ್ಣಮೂರ್ತಿರಾಯರು ಪೌರಸಭೆಯಿಂದ ರೇಷನ್ ಶಾಪಿಗೆ ೧೫ ಜನ ನೌಕರರನ್ನು ಬಿಟ್ಟುಕೊಟ್ಟಿರುವ ವಿಚಾರದಲ್ಲಿ ಚರ್ಚೆ ನಡೆಸಿದರು. ಅಧ್ಯಕ್ಷರು ಇದಕ್ಕೆ ಪೌರಸಭೆಯ ಅನುಮತಿ ಬೇಕಾಗಿಲ್ಲ. ಸರ್ಕಾರಿ ಆಜ್ಞೆಯಂತೆ ಕೆಲಸದ ಜವಾಬ್ದಾರಿ ತೆಗೆದುಕೊಂಡು ಬಿಟ್ಟುಕೊಡಲಾಗಿದೆ ಎಂದರು

ಶ್ರೀ ಕೃಷ್ಣಮೂರ್ತಿರಾಯರು ತಂದ ಮತ್ತೊಂದು ಪ್ರಶ್ನೆಗೆ ಅಧ್ಯಕ್ಷರು ದಿನಾ ೬ ಗಾಡಿಯಷ್ಟು ಹುಲ್ಲನ್ನು ಜನರಿಗೆ ಸರಬರಾಜು ಮಾಡುತ್ತಿದೆ. ಕಮ್ಮೀತೂಕ ಬರುತ್ತಿರುವ ವಿಚಾರ ಸಂಪಾದಿಸಲಾಗುತ್ತದೆ, ಎಂದು ಉತ್ತರ ಕೊಟ್ಟರು.

ಶ್ರೀ ಎಂ. ವಿ. ವೆಂಕಟರಾಮಯ್ಯನವರು ಕೇಳಿದ ಪ್ರಶ್ನೆಗೆ ಬೆಂಕಿನವಾಬರ ಬೀದಿಯಲ್ಲಿ ಚರ್ಮ ಶೇಖರಿಸಿಡುವುದನ್ನು ಬೇರೆ ಕಡೆಗೆ ಸಾಗಿಸುವ ಏರ್ಪಾಡಾಗುತ್ತಿದೆ, ಎಂದು ಉತ್ತರ ಬಂತು.

ಶ್ರೀ ಜನಾರ್ದನನಾಯುಡುರವರ ಪ್ರಶ್ನೆಗೆ:—ಎಣ್ಣೆಗಳ ಬೆಲೆ ಮಾರಾಟದ ವಿಚಾರ ಕಾನೂನಿನ್ನೂ ಆಗಿಲ್ಲ, ಎಂದು ಉತ್ತರ ಬಂತು

ಜಿ॥ ಅಹಮದ್‌ಖಾನರವರ ಪ್ರಶ್ನೆಗೆ:— ಟೋಲುಗೇಟು ನೌಕರರನ್ನು ಸರ್ಕಾರದ ಖಾಯಂ ನೌಕರರಂತೆ ಅಂಗೀಕರಿಸಿಲ್ಲ, ಅವರು ಹಂಗಾಮಿ ನೌಕರರು ಆದ್ದರಿಂದ ಅವರಿಗೆ ಪೆನ್ಷನ್ ವಗೈರೆ ಹಕ್ಕಿಲ್ಲ ಎಂದು ಉತ್ತರ ಬಂತು.

ಭಾರತದ ಕಾಣಿಕೆ ೨೦ ಕೋಟಿ

ಮಿತ್ರ ರಾಷ್ಟ್ರಗಳ ಪುನರ್ರಚನಾ ಸಮಿತಿಗೆ ಹಿಂದೂಸ್ಥಾನದ ಪರವಾಗಿ ೨೦ ಕೋಟಿ ರೂ. ಕಾಣಿಕೆಯನ್ನು ಕೊಡುವಂತೆ ಮುಂದಿನ ಕೇಂದ್ರ ಶಾಸನ ಸಭೆಯಲ್ಲಿ ಸರ್ಕಾರದವರು ಸೂಚನೆ ತರಲಿರುವರು. ಒಂದೊಂದು ರಾಷ್ಟ್ರವೂ ತನ್ನ ರಾಷ್ಟ್ರೀಯ ಆದಾಯದಲ್ಲಿ ಶೇ॥ ೧ ರಂತೆ ಕೊಡಬೇಕೆಂದು ವಿಧಾಯಕವಾಗಿದೆ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕೆ

ತಾ॥ ೧-೧-೪೪ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ಸಂತೇಪೇಟೆ ಮಂಡಿಯಲ್ಲೂ, ಹಿಟಾಯಿ ಎಲ್ಲಾ ಮೊದಲ್ಲಾ ರೇಷನ್ ಕಾರ್ಡುಗಳಿಗೆ ಸಕ್ಕರೆ ಕೋಟಾಕ್ಕೆ ಪ್ರತಿಯಾಗಿ ಬೂರಾ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಸಂಪುಟ ೨]   ಭಾನುವಾರ ೧೬-೭-೪೪   [ಸಂಚಿಕೆ ೩೦೧

ನಾರ್ಮಂಡಿಯಲ್ಲಿ ಹಾರುವ ವಿಮಾನಗಳು

"ಜಪಾನ್ ಯುದ್ಧವು ದೀರ್ಘವೂ ಕಠಿಣವೂ ಆಗಿರುವುದು"

ಚೀಫ್ ಸ್ಕೌಟ್ ಲಾರ್ಡ್ ಸೋಮರ್ಸ್ ಸ್ವರ್ಗಸ್ಥರಾದರು

ಕಠಿಣ ಮತ್ತು ದೀರ್ಘ

[illegible] ರಕ್ಷಣಾ [illegible] ಸದಸ್ಯರು ಶಾಸನಸಭೆಯಲ್ಲಿ ಮಾತನಾಡುತ್ತಾ, ಹೀಗೆ ಹೇಳಿದರು:– ಜಪಾನ್ ಯುದ್ಧವು ಸುಲಭವಾಗಿರುವುದಿಲ್ಲ. ಜಪಾನರ ಶಕ್ತಿಯನ್ನು ನಾವು ಅಲ್ಲಗಳೆಯಲಾಗದು. ಅದು ದೀರ್ಘ ಕಾಲದ ಪುಟ್ಟ ಯುದ್ಧವಾಗಬಹುದು; ಆದರೆ ಅದು ಕಠಿಣವಾಗಿರುವುದು ಖಂಡಿತ. ಆದರೂ ನಾವು ನಮ್ಮ ಮಿತ್ರರಾಷ್ಟ್ರಗಳನ್ನು ಬಿಟ್ಟುಕೊಡದೆ ಸಂಪೂರ್ಣ ಮನಸ್ಸಿನಿಂದ ಜಪಾನರೊಡನೆ ಹೋರಾಡುವೆವು.

ಯುದ್ಧಾನಂತರ ವ್ಯಕ್ತಿ ಸ್ವಾತಂತ್ರ್ಯ

ಇಂಗ್ಲೆಂಡಿನಲ್ಲಿ ಯುದ್ಧಕಾಲದ ಪ್ರಯುಕ್ತ ಮಹಾಜನರ ಮೇಲೆ ಸರ್ಕಾರವು ಶಾಸನದ ಮೂಲಕ ಪಡೆದಿರುವ ಸರ್ವಾಧಿಕಾರವನ್ನು ಇನ್ನು ಒಂದು ವರ್ಷಕಾಲ ಹೆಚ್ಚಿಸಲು ಪಾರ್ಲಿಮೆಂಟು ಅನುಮತಿ ಇತ್ತಿದೆ. ಜರ್ಮನಿ ಸೋತ ಮೇಲೆ ಈ ನಿರ್ಬಂಧಗಳನ್ನು ಸಡಲಿಸಲಾಗುವುದೆಂದು ತಿಳಿಸಲಾಗಿದೆ.

ಲಂಡನ್ನಿಂದ ೧,೭೦,೦೦೦ ನಿರ್ಗಮನ

ಆಗಾಗಲೇ ಲಂಡನ್ ಪ್ರದೇಶದಿಂದ ೧,೩೩,೦೦೦ ಹೆಂಗಸರು ಮಕ್ಕಳನ್ನು ಹೊರಕ್ಕೆ ಸಾಗಿಸಲಾಗಿದೆ. ಹಾರುವ ವಿಮಾನಗಳಿಂದಾದ ನಷ್ಟವನ್ನು ಕ್ರಮಪಡಿಸಲಾಗುತ್ತಿದೆ. ಆಳವಾದ ಇನ್ನೊಂದು ರಕ್ಷಣಾಸ್ಥಾನವನ್ನು ಕಟ್ಟಲಾಗಿದೆ. ಅವರೂ ಜನಲು ಇನ್ನೂ ತಮ್ಮ ತಮ್ಮ ಮನೆಗಳಲ್ಲಿರುವ ರಕ್ಷಣಾ ಸ್ಥಾನಗಳಲ್ಲಿಯೇ ಮಲಗುತ್ತಿದ್ದಾರೆ. ಈ ಮಾಸಾಂತ್ಯದಲ್ಲಿ ೧,೭೦,೦೦೦ ಜನರನ್ನು ಹೊರಕ್ಕೆ ರವಾನಿಸಲಾಗುವುದು. ಮುರಿದ ಮನೆಗಳನ್ನು ಸರಿಪಡಿಸಲು ಕೆಲಸಗಾರರ ಒಂದು ಸೈನ್ಯವನ್ನೇ ಲಂಡನ್ನಿಗೆ ಕಳಿಸಲಾಗಿದೆ.

ಸಪ್ರೂ ಹೇಳಿಕೆ ನಿರೀಕ್ಷಣೆ

ಗಾಂಧಿ-ವೈಸರಾಯ್ ಪತ್ರ ವ್ಯವಹಾರದ ಬಗ್ಗೆ ಸರ್ ಸಪ್ರೂರವರು ಸಧ್ಯದಲ್ಲೇ ಒಂದು ಹೇಳಿಕೆ ಕೊಡುವರು. ಅವರಿಗೆ ಬಹಳ ವ್ಯಾಕುಲವಾಗಿದೆ. ಗಾಂಧೀಜಿ ಮತ್ತು ವೈಸರಾಯರು ಹೊಸ ಮನಸ್ಸಿನಿಂದ ಸಮಸ್ಯೆಯನ್ನು ಬಗೆ ಹರಿಸಬೇಕೆಂದು ಇಬ್ಬರನ್ನೂ ಕೋರಲಿರುವರೆಂದು ಹೇಳಲಾಗಿದೆ.

ಆಂಧ್ರ ಪ್ರಾಂತ ಪ್ರಶ್ನೆಗೆ ಸಮಯವಲ್ಲ

ಪ್ರತ್ಯೇಕವಾದ ಆಂಧ್ರ ಪ್ರಾಂತವೊಂದನ್ನು ರಚಿಸಲು ಆಂಧ್ರ ಮಹಾ ಸಭೆಯವರು ಮದರಾಸ್ ಗೌರ್ನರರಿಗೆ ಒಂದು ವರದಿಯನ್ನು ಕಳುಹಿಸಿದ್ದರು. ಅದಕ್ಕೆ ಉತ್ತರವಾಗಿ ಗೌರ್ನರರು ಈ ಪ್ರಶ್ನೆಯನ್ನು ಪುನಃ ಎತ್ತಲು ಈಗ ಸಮಯ ಸರಿಯಾಗಿಲ್ಲವೆಂದು ತಿಳಿಸಿದ್ದಾರೆ.

ತೂಕ ಕಡಮೆಯಾಗುವ ಖೈದಿಗಳನ್ನು ಬಿಟ್ಟುಬಿಡಿ

ರಾಜಕೀಯ ಖೈದಿಗಳ ಉಪವಾಸದ ವಿಷಯವನ್ನು ಪ್ರಸ್ತಾಪಿಸುತ್ತಾ ಮಹಾತ್ಮ ಗಾಂಧಿಯವರು ಹೀಗೆ ಹೇಳುವರು:— ಉಪವಾಸವೇ ಒಂದು ಅಪರಾಧವೆಂದು ಭಾವಿಸುವುದು ಬಿಟ್ಟು ಖೈದಿಗಳ ಕುಂದು ಕೊರತೆಗಳನ್ನು ಸರ್ಕಾರದವರು ಪರಿಹರಿಸಬೇಕು. ಘೋಷವಯಿಂದ ನಡೆಯಬೇಕು. ಯಾವ ಖೈದಿಗಳ ತೂಕವು ಕಡಮೆಯಾಗುತ್ತದೆಯೋ ಅವರನ್ನು ಕೂಡಲೆ ಬಿಟ್ಟುಬಿಡಬೇಕು.

ನಾರ್ಮಂಡಿಯಲ್ಲಿ ಹಾರುವ ಬಾಂಬುಗಳು

ಟಿ|| ಐಸನ್ ಹೋವರರಿಗೆ ಬಂದಿರುವ ವರದಿಯ ಪ್ರಕಾರ ನಾರ್ಮಂಡಿ ತೀರದಲ್ಲಿಯೂ ಹಾರುವ ಬಾಂಬುಗಳು ಬೀಳುತ್ತಿವೆಯೆಂದು ಹೇಳಲಾಗಿದೆ. ಮುಖ್ಯವಾದ ನಷ್ಟವೇನೂ ಆಗಿಲ್ಲ. ನಾರ್ಮಂಡಿ ತೀರದ ಮೇಲೆ ಗುರಿಯಿಟ್ಟು ಅವುಗಳನ್ನು ಹೊಡೆದಿಲ್ಲ; ಆಕಸ್ಮಾತ್ತು ಅಲ್ಲಿ ಬಿದ್ದಿವೆ, ಎಂದು ಹೇಳಲಾಗಿದೆ.

ಹಾರುವ ವಿಮಾನಗಳ ಹಾವಳಿ

ಜರ್ಮನರು ತಮ್ಮ ಹಾರುವ ವಿಮಾನಗಳನ್ನು ದಿನ ದಿನವೂ ಕಳುಹಿಸಿ ನಷ್ಟವನ್ನುಂಟುಮಾಡುತ್ತಿರುವರು. ಇದನ್ನು ಎದುರಿಸಲು ಮಿತ್ರರು ಸಕಲ ಪ್ರಯತ್ನಗಳನ್ನೂ ಮಾಡುತ್ತಿರುವರು. ಇದನ್ನು ಬೇಗನೆ ಕಡೆಗಾಣಿಸಲಾಗುವುದೆಂದು ಜನರಿಗೆ ಉತ್ತೇಜನ ಕೊಡುವುದು ಮೂರ್ಖತನ ಮತ್ತು ನಿರ್ದಯತ್ವ. ಇನ್ನೂ ಅದರ ಹಾವಳಿಯನ್ನು ಸ್ವಲ್ಪ ಮಟ್ಟಿಗೆ ಅನುಭವಿಸಬೇಕಾಗಿದೆಯೆಂದು ತಿಳಿಯುವುದು ಲೇಸು' ಎಂದು ಬ್ರಿ|| ಹೋಂ ಸೆಕ್ರೆಟರಿ ಮಿ|| ಹರ್ಬರ್ಟ್ ಮಾರಿಸನ್ ರು ಹೇಳಿದ್ದಾರೆ.

ವಿಷ್ಣುಪುರದಲ್ಲಿ ಕ್ರೂರ ಕದನ

ವಿಷ್ಣುಪುರದ ದಕ್ಷಿಣದಲ್ಲಿ ನಿಂಗ್‌ತೋಖಾಂಗ್ ಮತ್ತು [illegible]ಗಳ ಮಧ್ಯೆ ಎರಡು ಸೈನ್ಯಗಳಿಗೂ ಘೋರ ಕದನ ನಡೆದು [illegible] ಜನ ಜಪಾನರು ಮಡಿದರು. ಕೆಲವು ಕಡೆಗಳಿಂದ ಜಪಾನರು ಓಡಿ ಹೋದರು. ಒಂದು ಫಿರಂಗಿ ಸ್ವೋರ್ಡ್ ಮತ್ತು ಅನೇಕ [illegible] ಸಾಮಗ್ರಿಗಳು ವಶವಾದವು.

ಅಮೆರಿಕನರ ಸಾವುನೋವು

ಯುದ್ಧವು ಆರಂಭವಾದಂದಿನಿಂದ ಇದುವರೆಗೆ ಅಮೆರಿಕದಲ್ಲಿ ಸಾವಿರದ ಸೈನಿಕ [illegible] ಮಡಿದವರು, [illegible] ಗಾಯಗೊಂಡವರು [illegible], ಯುದ್ಧ ಖೈದಿಗಳು [illegible] ತಪ್ಪಿಸಿಕೊಂಡವರು [illegible], ಒಟ್ಟು [illegible] ಎಂದು ತಿಳಿಸಲಾಗಿದೆ.

ಚೀಫ್ ಸ್ಕೌಟರ ಮರಣ

ಮೊನ್ನೆ ದಿನ ಹರ್ಟ್‌ಫರ್ಡ್‌ಷೈರಿನ ತಮ್ಮ ಗೃಹದಲ್ಲಿ [illegible] ಚೀಫ್ ಸ್ಕೌಟರಾದ ಲಾರ್ಡ್ ಸೋಮರ್ಸ್ ರವರು ಸ್ವರ್ಗಸ್ಥರಾದರು.

ಸರ್ಕಾರವು ಬಾಯಿ ಬಿಡುವವರೆಗೆ ಸುಮ್ಮನಿರೋಣ

ಆಕ್ಷೇಪಣೆಗಳಿಗೆ ಗಾಂಧೀಜಿ ಉತ್ತರ

ಗಾಂಧೀಜಿಯವರ ಹೇಳಿಕೆಗಾಗಿ ಅವರಿಗೆ ಅನೇಕ ಆಕ್ಷೇಪಣೆಗಳು ಬಂದಿವೆ. ಮಂದಗಾಮಿಗಳ ಮತ್ತು ಸಾಹುಕಾರರ ಪ್ರೇರಣೆಯಿಂದ ದೇಶದ ಹಿತವನ್ನು ಅವರು ಬಿಟ್ಟುಕೊಟ್ಟಿರುವರೆಂದೂ ಆಪಾದನೆ ಮಾಡಲಾಗಿದೆ. ಅದಕ್ಕೆ ಅವರು ಹೀಗೆ ಉತ್ತರ ಕೊಟ್ಟಿರುವರು:— ಸುಳ್ಳು ಬಣ್ಣದಿಂದ ಹೊಳೆಯಲು ನಾನು ಬಯಸುವುದಿಲ್ಲ. ಸರ್ಕಾರವೂ ದೇಶವೂ ನನ್ನನ್ನು ಸರಿಯಾಗಿ ಅರಿಯಬೇಕು. ಮಂದಗಾಮಿಗಳು, ಸಾಹುಕಾರರು, ಆಂಗ್ಲೇಯರು, ಅಮೆರಿಕನರು ಮತ್ತಿತರರು ಇವರೆಲ್ಲರಿಗೂ ಜಾತಿ, ಕುಲ, ವರ್ಣಭೇದಗಳಿಲ್ಲದೆ ನಾನು ಮಿತ್ರನು. ನನ್ನ ಅಸಹಕಾರವು ಪಾಪದೊಡನೆ ಮಾತ್ರ, ಪಾಪ ಮಾಡುವವನೊಡನಲ್ಲ. ಅವನ ಪಾಪಕೃತ್ಯದಿಂದ ಅವನನ್ನು ತಪ್ಪಿಸುವುದೇ ನನ್ನ ಉದ್ದೇಶ. ಅನಂತರ ಅವನೊಡನೆ ನಾನು ಸಹಕರಿಸುವೆನು. ನನ್ನ ಧ್ಯೇಯಕ್ಕೆ ಸಹಾಯವನ್ನು ಪಡೆಯಲು ನಾನು ಎಲ್ಲರೊಡನೆ ಸೇರುತ್ತೇನೆ. ಇದರಿಂದ ಯಾವ ಅನರ್ಥವೂ ಆಗಿಲ್ಲ. ನನ್ನ ಇಂದಿನ ರೀತಿಯಿಂದ ಮಿತ್ರರ ಪ್ರಯತ್ನಗಳಿಗೆ ನೈತಿಕ ಬೆಂಬಲ ಕೊಟ್ಟಂತಾಗಿದೆಯೆಂದು ಕೆಲವರ ವಾದ. ಆದರೆ ಬ್ರಿಟಿಷ್ ಸರ್ಕಾರದವರು ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕೆ ಅಂಗೀಕಾರ ಕೊಡಬೇಕೆಂಬುದನ್ನು ಅವರು ಮರೆಯುತ್ತಾರೆ. ಆದ್ದರಿಂದ ನನ್ನ ವಾದದಲ್ಲಿ ಯಾವ ಅಸಮಂಜಸತ್ವವೂ ಇಲ್ಲ. ಸರ್ಕಾರದವರು ಬಾಯಿ ಬಿಡುವವರೆಗೆ ಟೀಕಾಕಾರರು ಸುಮ್ಮನಿರಬಾರದೇ?

೧೦೦೦ ಗಜ ಮುಂದಕ್ಕೆ

ಲಾಪೆ ರಸ್ತೆಯಲ್ಲಿ ಲೆಸ್ಸೆ ಎಂಬಲ್ಲಿಂದ ಆಚೆಯಿಂದ ಸೈನ್ಯಗಳು ೩೦೦೦ ಗಜ ದೂರದವರೆಗೆ ತಮ್ಮ [illegible] ಕ್ಷೇತ್ರದಲ್ಲಿ ಅಮೆರಿಕದ ಸೈನ್ಯಗಳು ಆಕ್ರಮಿಸಿ ಸುಮಾರು ೧೦೦೦ ಗಜ ಪ್ರದೇಶವನ್ನು ಗಳಿಸಿರುವು; ಆ ದೆಂಟೆಸ್ಸಿನ [illegible] ಮಿತ್ರ ಸೈನ್ಯಗಳು [illegible] [illegible] ಈ ಬಗ್ಗೆ ಇನ್ನೂ ಕಳವಳ [illegible] ಚಟುವಟಿಕೆಗಳು ನಡೆದಿವೆಯೆಂದೂ ವರದಿಯಾಗಿದೆ.

ಷಷ್ಟ್ಯಬ್ದ ಪೂರ್ತಿ ಶಾಂತಿ ಮಹೋತ್ಸವ

[illegible]

[illegible] ಶ್ರೀ ಮತ್ಸ್ಯಾರ್ಣವ [illegible] ಸಾಮ್ರಾಜ್ಯದ ಶ್ರೀ ಜಯ ಚಾಮರಾಜೇಂದ್ರ ಸಾರ್ವಭೌಮ ಮಹಾ ಪ್ರಭುಗಳವರ ಅಪ್ಪಣೆಯಂತೆ ಕುಲಗುರುಗಳಾದ ಶ್ರೀ ಪರಕಾಲ ಮಠದ ಸ್ವಾಮಿಗಳವರ ಷಷ್ಟ್ಯಬ್ದ ಪೂರ್ತಿ ಶಾಂತಿ ಮಹೋತ್ಸವವು ನಾಳೆ ಸೋಮವಾರ, ಮಂಗಳವಾರ ಮತ್ತು ಬುಧವಾರ ಬಹಳ ವಿಜೃಂಭಣೆಯಿಂದ ನಡೆಯುವುದಾಗಿದೆ. ೧೭ ನೇ ತಾ|| ಸೋಮವಾರ ಸಂಜೆ ೮ ಗಂಟೆಗೆ ಶ್ರೀಗಳವರ ಪಾದುಕೆ ಮತ್ತು ಭಾವಚಿತ್ರಗಳನ್ನು ಸಕಲ ಮರ್ಯಾದೆಗಳೊಂದಿಗೆ ಶ್ರೀ ಮಠದಿಂದ ದೊಡ್ಡ ಪಂಚ ಕಲಶ ಭಂಗಾರ ಪಲ್ಲಕ್ಕಿಯಲ್ಲಿ ಡಿಗನ್ನ್ಯೂಹನ ಜಂಗಲ್, ಸಯ್ಯಾಜಿರಾವ್ ರಸ್ತೆ ಮೂಲಕ ವೇದಘೋಷದೊಂದಿಗೆ ಶ್ರೀಮನ್ಮಹಾರಾಜರ ಸಂಸ್ಕೃತ ಪಾಠಶಾಲೆಗೆ ಬಿಜಯಮಾಡಿಸಲಾಗುವುದು. ಅಲ್ಲಿ ಪೂಜಾದಿ ಸಮಾರಂಭಗಳು ನಡೆವುವು. ೧೮ ನೆಯ ಮಂಗಳವಾರ ಪ್ರಾತಃಕಾಲ ಪೂಜಾನಂತರ ಶ್ರೀಗಳವರ ಪಾದುಕೆ ಮತ್ತು ಭಾವಚಿತ್ರಗಳನ್ನು ದೊಡ್ಡ ಪಲ್ಲಕ್ಕಿಯಲ್ಲಿ ಪಾಠಶಾಲೆಯ ಹಿಂಭಾಗದ ರಸ್ತೆ, ಸಂತೇಪೇಟೆ ಮೂಲಕ ಶ್ರೀ ಮಠಕ್ಕೆ ಬಿಜಯಮಾಡಿಸಲಾಗುವುದು. ೧೮ ಮತ್ತು ೧೯ ನೆಯ ತಾ|| ಈ ಎರಡು ದಿನಗಳೂ ಶ್ರೀ ಮಠದಲ್ಲಿ ಶ್ರೀ ಲಕ್ಷ್ಮೀಹಯಗ್ರೀವ ದೇವರಿಗೆ ವಜ್ರ ದೋಲೋತ್ಸವ ಜರುಗುವುದು. ೧೯ ನೇ ತಾ|| ಶ್ರೀಗಳವರ ೬೦ ನೇ ವರ್ಷದ ತಿರು ನಕ್ಷತ್ರ ಮಹೋತ್ಸವವು ಶ್ರೀ ಮಠದಲ್ಲಿ ಯಥಾ ವಿಧಿಯಾಗಿ ಜರುಗುವುದು.

ಭಾರತ ಸ್ವಾತಂತ್ರ್ಯಕ್ಕೆ ಸಹಾನುಭೂತಿ

ಬ್ರಿಟನ್ನಿನ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಸೆಕ್ರೆಟರಿಯವರಾದ ಮಿ|| ಫೆನ್ನರ್ ಬ್ರಾಕ್‌ವೆ ರವರು ಹೀಗೆ ಬರೆಯುತ್ತಾರೆ:— ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೇಳುವ ಕಾಂಗ್ರೆಸ್ ಮತ್ತು ಇತರ ಎಲ್ಲರಿಗೂ ನಮ್ಮ ಸಂಘದ ಬೆಂಬಲವಿದೆ. ಬ್ರಿ|| ಸಾಮ್ರಾಜ್ಯ ಶಾಹಿಯನ್ನು ಪ್ರತಿಭಟಿಸಲು ಎಂದಿಗೂ ನಾವು ಹಿಂಜರಿಯುವುದಿಲ್ಲ. ಹಿಂದೂಸ್ಥಾನದ ಬಡಜನರ ಅಭ್ಯುದಯವಾಗಬೇಕಾದರೆ ಪೂರ್ಣತರದ ಸ್ವರಾಜ್ಯ [illegible] ದೊರೆಯಬೇಕು. [illegible] ಜನರೇ ಮುಂದಿನ ಭಾರತವನ್ನು ರಚಿಸಿ ತಾವೇ ಅದಕ್ಕೆ ಒಡೆಯರಾಗಬೇಕು.

ಈ ಸುಸಂಧಿಯನ್ನು ಬಿಡಲಾಗುವುದಿಲ್ಲ

ಲಂಡನ್ನಿನ ಡೇಲಿ ವರ್ಕರ್ ಪತ್ರಿಕೆಯು ಮಹಾತ್ಮರ ಈಚಿನ ಹೇಳಿಕೆ ಬಗ್ಗೆ ಹೀಗೆ ಹೇಳುತ್ತದೆ— ಮಿ|| ಅಮೆರಿಯವರು ಪಾರ್ಲಿಮೆಂಟಿನಲ್ಲಿ ಕೊಟ್ಟ ಉತ್ತರ ಎಂದು ಮಾಮೂಲು [illegible] ಕೂಡಿದೆ. ಮಹಾತ್ಮರು ಸಂಘಾನಕ್ಕೆ ಅದ್ಭುತ ಸಹಾಯವನ್ನು ಮಾಡುವವರು. ಸರ್ಕಾರಕ್ಕೆ ಇನ್ನೇನು ಬೇಕು? [illegible] ಶಾಸನಸಭಾ [illegible] ನಾಯಕರನ್ನು ಬಂಧನದಲ್ಲಿಟ್ಟು [illegible] ಸರ್ಕಾರದವರು [illegible] [illegible] [illegible] [illegible] [illegible] ಮಾಡಬೇಕಾಗಿಲ್ಲವೆಂದು. [illegible]

ಅಖಿಲಕರ್ನಾಟಕ ಪುರಕ್ಕೆ ದಿವಾನರ ಭೇಟಿ

ಮೈಸೂರು ೧೫

ಗೌರ್ನಮೆಂಟಿನ ಪ್ರಧಾನ ಶಿರೋಮಣಿ ಎನ್. ಮಾಧವರಾಯರವರು ತಾ॥ ೧೦ ನೇ ಸೋಮವಾರ ಬೆಳಿಗ್ಗೆ ಮೈಸೂರು ಸಿಟಿ ಅಖಿಲಕರ್ನಾಟಕ ಪುರಕ್ಕೆ ದಯಮಾಡಿಸಿ ಅಲ್ಲಿನ ಬೀದಿಗಳನ್ನು ಸುತ್ತಿ ಇನ್ಸ್‌ಪೆಕ್ಷನ್ ಮಾಡಿದರು. ಇವರ ಜೊತೆಯಲ್ಲಿ ಮುನಿಸಿಪಲ್ ಪ್ರೆಸಿಡೆಂಟರವರು ಮತ್ತು ಇತರ ಮುಖ್ಯ ಅಧಿಕಾರಿಗಳಿದ್ದರು. ಈ ಸಂದರ್ಭದಲ್ಲಿ ಇವರ ಜೊತೆಯಲ್ಲಿದ್ದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಕೆ. ಸಿದ್ದಯ್ಯನವರು ಅಖಿಲಕರ್ನಾಟಕಪುರದ ಕುಂದುಕೊರತೆಗಳನ್ನು ವಿವರವಾಗಿ ವಿವರಿಸಿದರು. ಬಹು ಮುಖ್ಯವಾಗಿ ತೊಂದರೆಯಲ್ಲಿ ಸಿಕ್ಕಿರುವ ನೀಳ್ವಿಡಲಿ ತೋಟಗಳಿಗೆ ಸೆಟಲ್‌ಮೆಂಟ್ ಫಾರಂ ಪಟ್ಟದಲ್ಲಿ ಜಮೀನನ್ನು ಮನೆ ಕಟ್ಟಿಕೊಳ್ಳುವುದಕ್ಕೆ ಅಖಿಲಕರ್ನಾಟಕಪುರದ ಪಕ್ಕದ ದಿಕ್ಕಿನ ಸೈಟುಗಳನ್ನು ಕೊಡಿಸುವ ವಿಚಾರದಲ್ಲಿ ಬೇಡಿಕೊಂಡರು. ದಿವಾನರವರು ಅವನ್ನು ಶೀಘ್ರದಲ್ಲಿ ಪರಿಶೀಲಿಸಿ ಕಷ್ಟನಿವಾರಣೆಗೆ ಏನು ಮಾಡಬಹುದೋ ಅದನ್ನು ಮಾಡುವುದಾಗಿ ಆಶ್ವಾಸನೆ ದಯಪಾಲಿಸಿ ಹಿಂದಿರುಗಿದರು.

ಶಾರದಾ ವಿಲಾಸ ಹೈಸ್ಕೂಲ್

ಮೈಸೂರು ನಗರದ ಶಾರದಾ ವಿಲಾಸ ಹೈಸ್ಕೂಲಿಗೆ ವಿದ್ಯಾ ಮಂತ್ರಿಗಳಾದ ಶ್ರೀ ಮಾ॥ ವೆ. ಅಪ್ಪಾಜಿಗೌಡರೂ ವಿದ್ಯಾಇಲಾಖಾಧಿಕಾರಿಗಳಾದ ಮಿ॥ ಸಿ. ಲಕ್ಷ್ಮೀ ಮೊದಲಿಯಾರ್‌ರವರೂ ಮೊನ್ನೆ ಭೇಟಿ ಮಾಡಿದರು. ವಿದ್ಯಾರ್ಥಿಗಳ ಸಂಖ್ಯೆ ಶಾಲೆಯು ದಿನೇ ದಿನೇ ಅಭಿವೃದ್ಧಿಗೆ ಬರುತ್ತಿರುವ ವಿಚಾರವನ್ನೂ, ಪುಸ್ತಕ ಭಂಡಾರದ ಅತ್ಯುತ್ತಮ ವ್ಯವಸ್ಥೆಯನ್ನೂ ಇವರು ಕಂಡು ಬಹಳವಾಗಿ ಮೆಚ್ಚಿದರು. ಶಾಲೆಯ ಅಭಿವೃದ್ಧಿಗಳಿಗೆ ಬೇಕಾಗುವ ಗ್ರಾಂಟು ಕೊಡಿಸುವುದಾಗಿ ಭರವಸೆಯಿತ್ತರು.

ದೇವರಾಜ್ ಶಿವರಾಂ ದಂಪತಿಗಳ ಭೇಟಿ

ಉದಿತ ವಿಖ್ಯಾತ್ಯ ಧರ್ಮಪ್ರಕಾಶ ದೇವರಾಜ್ ಶಿವರಾಂ ದಂಪತಿಗಳು ಶಾರದಾ ವಿಲಾಸ ಹೈಸ್ಕೂಲಿಗೆ ದಯಮಾಡಿಸಿ ಅಲ್ಲಿ ಬಡಹುಡುಗರಿಗೆ ಪ್ರತಿದಿನವೂ ಕೊಡಲಾಗುತ್ತಿರುವ ಉಚಿತ ಉಪಾಹಾರ ವ್ಯವಸ್ಥೆಯನ್ನು, ವ್ಯಾಯಾಮ ಶಾಲೆಯನ್ನು ಪರಿಶೀಲಿಸಿ ಸಂತೋಷಪಟ್ಟರು. ಅಲ್ಲಿನ ಉಪಾಹಾರ ವ್ಯವಸ್ಥೆಗಾಗಿ ಧರ್ಮಪ್ರಕಾಶ ದೇವರಾಜ್ ಶಿವರಾಂರವರು ತಿಂಗಳೊಂದಕ್ಕೆ ಹತ್ತು ರೂಪಾಯಿಗಳ ಉದಾರ ದಾನವನ್ನು ನೀಡುತ್ತಿರುವರು. ಶಾಲೆಯ ಗೌರವ ಕಾರ್ಯದರ್ಶಿಗಳಾದ ರಾಜಸೇವಾಸಕ್ತ ಎಂ. ರಾಮರಾಯರು ಧರ್ಮಪ್ರಕಾಶ ದೇವರಾಜ್ ಶಿವರಾಂರವರ ಪರಿಚಯವನ್ನು ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ತಿಳಿಸಿದರು. ಧರ್ಮಪ್ರಕಾಶರು ವಿದ್ಯಾರ್ಥಿಗಳಿಗೆ ಸಮಯೋಚಿತವಾದ ಹಿತೋಪದೇಶ ಮಾಡಿದರು.

ಶ್ರೀಮದ್ವ್ಯಾಸರಾಜರ ಶ್ರೀಯುತ ಇಂದ್ರ ಧರ್ಮ

ಮೈಸೂರು ಕೂಲಿಗಾರರು ಉತ್ತರ ದೇಶಕ್ಕೆ

ಸ್ವಂ.ಸು.] ಬೆಂಗಳೂರು ೧೫

ಕೋಲಾರದ ಚಿನ್ನದ ಗಣಿ ಕೆಲಸವು ವಿದ್ಯುಚ್ಛಕ್ತಿ ಅಭಾವದಿಂದ ಸ್ವಲ್ಪ ತಟಸ್ಥವಾಗಿದೆಯಷ್ಟೆ. ಇಲ್ಲಿನ ಮೂರು ಸಾವಿರ ಕೆಲಸಗಾರರನ್ನು ಬಿಹಾರ್ ಮತ್ತು ಒರಿಸ್ಸಾ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡಲು ಕಳುಹಿಸುವಂತೆ ಮೈಸೂರು ಮತ್ತು ಇಂಡಿಯಾ ಸರ್ಕಾರಗಳು ಏರ್ಪಡಿಸಿವೆ. ಅಲ್ಲಿ ಕೆಲಸ ಮಾಡಿ ಇವರುಗಳು ಕ್ರಮೇಣ ಇಲ್ಲಿಗೇ ಹಿಂದಿರುಗುವರು.

ಕೋಲಾರ ಜಿಲ್ಲಾ ಉಪಾಧ್ಯಕ್ಷರು

ಕಾಂಗ್ರೆಸ್ ಉಮೇದುವಾರರಾದ ಶ್ರೀ ಜಿ. ಕೆ. ರಘುನಾಥರಾಯರಿಗೆ ೩೦ ಓಟುಗಳು ಬಂದು ಕೋಲಾರ ಜಿಲ್ಲಾ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವರು. ಸ್ವತಂತ್ರ ಉಮೇದುವಾರರಾದ ವಿ॥ ಬಾಸಿಲ್‌ರವರಿಗೆ ೧೭ ಓಟುಗಳು ಬಂದುವು.

ಪತ್ತೆ ಕೊಟ್ಟವರಿಗೆ ಬಹುಮಾನ

ಬೆಂಗಳೂರು ನಿವಾಸಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸಾವೈ, ಇದ್ದಿಲುಗಳನ್ನು ವಿಪರೀತವಾಗಿ ಸಂಗ್ರಹಿಸಿಟ್ಟುಕೊಂಡಿರುವವರ ಹೆಸರು ವಿಳಾಸಗಳನ್ನು ತಿಳಿಸುವವರಿಗೆ ಸರ್ಕಾರದವರು ಸೂಕ್ತವಾದ ಬಹುಮಾನವನ್ನು ಕೊಡುವುದಾಗಿ ತಿಳಿಸಿದ್ದಾರೆ.

ರಾಜೀನಾಮೆ

ಶ್ರೀ ಹೆಚ್. ಸಿದ್ದಯ್ಯನವರು ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಗೆ ರಾಜೀನಾಮೆ ಇತ್ತಿದ್ದಾರೆ. ರಾಜಕೀಯದಿಂದ ಇವರು ದೂರವಾಗುವುದಿಲ್ಲವೆಂದು ಹೇಳಲಾಗಿದೆ.

ಇಂಡಿಯಾ ಸರ್ಕಾರಕ್ಕೆ

ಮೈಸೂರು ಸರ್ಕಾರದ ಲೇಬರ್ ಇಲಾಖೆಯ ಶ್ರೀ ಬಿ. ಎಸ್. ರಾಮರಾಯರನ್ನು ಇಂಡಿಯಾ ಸರ್ಕಾರದ ಲೇಬರ್ ಸಂಶೋಧನಾ ಸಮಿತಿಗೆ ತೆಗೆದುಕೊಳ್ಳಲಾಗುವುದೆಂದು ತಿಳಿದುಬಂದಿದೆ.

ಗೊಬ್ಬರದ ಸಮಿತಿ

ಸೀಮೆ ಗೊಬ್ಬರವನ್ನು ತಯಾರಿಸುವ ವಿಷಯದಲ್ಲಿ ನೇಮಿಸಲ್ಪಟ್ಟಿರುವ ನಿಯೋಗ ಗೋಷ್ಠಿಯವರು ತಮ್ಮ ಭಾರತ ಸಂಚಾರ ಕ್ರಮದಲ್ಲಿ ಬೆಂಗಳೂರಿಗೆ ನಾಳೆ ಬರಲಿದ್ದಾರೆ.

ಸಮಾರಾದನೆಯ ನಂತರ ಪ್ರಕಾರಗಳೊಡನೆ ಧರ್ಮಪ್ರಕಾಶ ದಂಪತಿಗಳನ್ನು ಬೀಳ್ಕೊಡಲಾಯಿತು.

ಜೆರೂಸಲೆಂನಲ್ಲಿ ಭಾರಿ ಸ್ಫೋಟನ

ಸುಮಾರು ಮಂದಿ ಶಸ್ತ್ರಧಾರಿಗಳು ಜೆರೂಸಲೆಂ ನಗರದ ಪೋಲೀಸ್ ಕೇಂದ್ರಕಛೇರಿಗೆ ಕಳೆದ ಗುರುವಾರ ರಾತ್ರಿ ನುಗ್ಗಿ ಅನೇಕ ಕಡೆ ಬಾಂಬುಗಳನ್ನೆಸೆದುದರಿಂದ ಭಾರಿ ಸ್ಫೋಟನವಾಯಿತು. ಊರೆಲ್ಲಾ ನಡುಗಿ ಹೋಯಿತು. ಒಂದು ಗಂಟೆಕಾಲ ಬೆಂಕಿ ಉರಿಯಿತು. ಅಕ್ಕಪಕ್ಕದ ಭವನಗಳಿಗೂ ನಷ್ಟವಾಯಿತು. ತರುವಾಯ ಪುನಃ ೧೨ ಸಾರಿ ಆಸ್ಫೋಟನವಾಯಿತು. ಒಬ್ಬ ಕಾನ್ಸ್‌ಟೇಬಲ್ ಸತ್ತನು. ಇನ್ಸ್‌ಪೆಕ್ಟರನಿಗೆ ಗಾಯವಾಯಿತು. ಗುಂಡು ಹಾರಿಸಿದವರು ಕೂಡಲೇ ಪರಾರಿಯಾದರು.

ನಾಜಿಗಳ ಭೀತಿ

ರಷ್ಯನರ ಮುನ್ನುಗ್ಗುವಿಕೆಯು ನಾಜಿಗಳಿಗೆ ಅತ್ಯಂತ ಭಯವನ್ನುಂಟುಮಾಡಿದೆ. ಸರ್ವಸ್ವವೂ ನಾಶವಾದೀತೆಂಬ ಭೀತಿಯು ಅವರಿಗೆ ಬಂದಿದೆ. ಪರಿಸ್ಥಿತಿ ಉತ್ಕಟವಾಗಿದೆಯೆಂದೂ, ತಮ್ಮ ದೇಶಕ್ಕೆ ಅಪಾಯ ಬರುವ ಮುನ್ನ ಎಲ್ಲವನ್ನೂ ಧ್ವಂಸಮಾಡುವುದಾಗಿಯೂ ನಾಜಿಗಳು ಹೇಳುತ್ತಿದ್ದಾರೆ.

ರಷ್ಯ-ಜಪಾನ್ ಘೋಷಣೆಯೆ?

ಜಪಾನಿಗೆ ರಷ್ಯದ ಮೇಲೆ ಸಂದೇಹವುಂಟಾಗಿರುವಂತಿದೆ. ಆದ್ದರಿಂದಲೇ ಅದು ಬಹು ಮುಖ್ಯ ಕದನ ಕ್ಷೇತ್ರವಾದ ಹೊನಾನಿನಿಂದ ತನ್ನ ಸೈನ್ಯವನ್ನೆಲ್ಲಾ ವಾಪಸು ತೆಗೆದುಕೊಂಡು ಮಂಚೂರಿಯದಲ್ಲಿ ಸಂಗ್ರಹಿಸುತ್ತಿದೆ. ಮಂಚೂರಿಯವು ಜಪಾನಿನ ಶಸ್ತ್ರಾಸ್ತ್ರಗಳ ಕೇಂದ್ರ.

ಜರ್ಮನ್ ಪ್ರತಿಧಾಳಿ

ಕೇನ್ ರಣರಂಗದಲ್ಲಿ ಆರ್ನ್‌ನದಿ ದಾಟಲು ಪ್ರಯತ್ನಿಸುತ್ತಿದ್ದ ಬ್ರಿಟಿಷ್ ಪಡೆಗಳನ್ನು ಜರ್ಮನರು ತೀವ್ರವಾಗಿ ಪ್ರತಿಭಟಿಸಿದರು. ಸೆಂಟ್‌ಲೋವನ್ನು ಆಕ್ರಮಿಸಲು ಅಮೆರಿಕನರು ಧಾಳಿಮಾಡುತ್ತಿರುವರು.

ಪೂರ್ವ ಪ್ರಷ್ಯಾ ಯುದ್ಧ

ಪೂರ್ವ ಪ್ರಷ್ಯವನ್ನು ಹಿಡಿಯಲು ಉಗ್ರ ಯುದ್ಧವಾರಂಭವಾದಂತಿದೆ. ಸಂ. ರಷ್ಯದ ಸೇನೆ ಈಗಾಗಲೇ ಪೋಲೆಂಡಿನ ಮಧ್ಯಭಾಗಕ್ಕೆ ಪ್ರವೇಶಿಸಿ ಅನೇಕ ಪಟ್ಟಣಗಳನ್ನು ಹಿಡಿಯುತ್ತಿದೆ. ವಿಸ್ಚುಲಾ ನದಿಯನ್ನು ದಾಟಿ ಉತ್ತರಕ್ಕೆ ನುಗ್ಗಿ ಭಾರಿ ದಂಡಯಾತ್ರೆ ಆರಂಭಿಸಬಹುದು.

ಮಲೇರಿಯಾ ನಿವಾರಿಸುವ ಮೀನು

ಗ್ಯಾಂಬೂಸಿಯಾ ಜಾತಿಯ ಮೀನು ಮಲೇರಿಯಾ ಸೊಳ್ಳೆಗಳನ್ನೂ ಮೊಟ್ಟೆಗಳನ್ನು ತಿಂದು ರೋಗವು ಹರಡದಂತೆ ಮಾಡುವುದರಿಂದ ಬೊಂಬಾಯಿನ ಎಲ್ಲಾ ಕೆರೆ, ಕೊಳ, ಬಾವಿಗಳಲ್ಲೂ ಅವುಗಳನ್ನು ತಂದುಬಿಡಲಾಗುತ್ತಿದೆ.

೫೦ ರೂ. ರೇಡಿಯೋ

ಲಾಹೋರಿನ ಹಂಸರಾಜ್ (ವೈರ್‌ಲೆಸ್) ಎಂಬ ಇಂಜನೀಯ ಕೆಲಸಗಾರರು ೫೦ ರೂ.ಗೆ ಒಂದು ರೇಡಿಯೋ ಸೆಟ್ಟನ್ನು ತಯಾರಿಸಿರುವರು. ಇದನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಿ ಮಾರಾಟಕ್ಕೆ ಇಡಲು ಅವಕಾಶ ಕೊಡಬೇಕೆಂದು ಇಂಡಿಯಾ ಸರ್ಕಾರವನ್ನು ಕೇಳಿದ್ದರು. ತಮ್ಮ ಆಕ್ಷೇಪಣೆಯೇನೂ ಇಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ.

ಕಲ್ಕತ್ತದಿಂದ ಅಸ್ಸಾಮಿಗೆ

ಪೂರ್ವ ಏಷ್ಯಾ ಕಮಾಂಡಿನ ಶಾಖೆಯಾಗಿ ಕೆಲಸ ಮಾಡುತ್ತಿದ್ದ ಅಮೆರಿಕದ ಹತ್ತನೇ ವಿಮಾನ ಪಡೆಯ ಕೇಂದ್ರ ಶಿಬಿರವನ್ನು ಕಲ್ಕತ್ತಾದಿಂದ ಅಸ್ಸಾಮಿಗೆ ವರ್ಗಾಯಿಸಲಾಗಿದೆ. ಇದು ಅಸ್ಸಾಂ ಟೀ ತೋಟಗಳ ಮಧ್ಯೆ ಇದೆ. ಅಲ್ಲಿಂದ ಉತ್ತರ ಬರ್ಮಾದ ಜಪಾನೀ ನೆಲೆಗಳಿಗೆ ಒಂದೇ ಗಂಟೆಯಲ್ಲಿ ಹೋಗಬಹುದು.

ಭೂಪಾಲಿನಲ್ಲಿ ವಿಮಾನ ನೆಲೆ

ಯುದ್ಧಾನಂತರ ಸಂಚಾರಕ್ಕೆ ಅನುಕೂಲವಾಗುವಂಥ ವಿಮಾನ ನೆಲೆಯೊಂದನ್ನು ನಿರ್ಮಿಸಲು ಇದಕ್ಕಾಗಿ ನೇಮಕವಾಗಿರುವ ಸಮಿತಿಯವರು ಆಲೋಚಿಸುತ್ತಿದ್ದಾರೆ.

ಇಟಲಿಯಲ್ಲಿ ಮುನ್ನಡೆ

ಇಟಲಿಯಲ್ಲಿ ಮಿತ್ರ ಸೈನ್ಯಗಳು ಮುಂದುವರಿಯುತ್ತಿವೆ. ಎರಡು ಹಳ್ಳಿಗಳು ವಶವಾಗಿವೆ. ಲೆಗ್‌ಹಾರ್ನ್ ಬಂದರಿನ ಕಡೆ ಮಿತ್ರರು ನುಗ್ಗುತ್ತಿದ್ದಾರೆ. ಒಂದು ಮುಖ್ಯ ವಾರ್ತಾ ಕಛೇರಿಯು ವಶವಾಗಿದೆ.

ಅಮೋಘವಾದ ನಾಗಸ್ವರ

ಸ್ವಂ ಬಾ.] ಚಾಮರಾಜನಗರ ೧೫

ಇದೇ ೧೭ ನೇ ತಾ॥ ಸೋಮವಾರ ಸಾಯಂಕಾಲ ಶ್ರೀ ನಾರಾಯಣಸ್ವಾಮಿ ತೆಪ್ಪೋತ್ಸವವು ನಡೆಯಲಿದೆ. ಉತ್ಸವದ ಸಂದರ್ಭದಲ್ಲಿ ಘನ ವಿದ್ವಾಂಸರುಗಳಿಂದ ನಾಗಸ್ವರ ಮತ್ತು ಡೋಲುಗಳ ಏರ್ಪಾಟಾಗಿದೆ. ಅಯ್ಯಂಪೇಟೆ ಕೃಷ್ಣ ಮತ್ತು ಧರ್ಮಪುರಿ ಚಿನ್ನಸ್ವಾಮಿ ಇವರುಗಳಿಂದ ನಾಗಸ್ವರ; ನಾರಾಯಣಸ್ವಾಮಿ ಮತ್ತು ಮುನಿಸ್ವಾಮಿ ಇವರುಗಳ ಡೋಲು. ಭಕ್ತಾದಿಗಳು ದಯಮಾಡಿಸಿ ಶ್ರೀಯವರ ಕೃಪೆಗೆ ಪಾತ್ರರಾಗಬೇಕಾಗಿ ಸೇವಾರ್ಥಿ ನಾಗರಿಕರು ಕೋರುತ್ತಾರೆ.

ಸ್ತ್ರೀಯರ ಸೌಕರ್ಯಕ್ಕೆ

೧೯೪೨ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ಸಂತೇಪೇಟೆ ಮಂಡಿ ಮಳ್ಳೂ, ಸಿಟಿಯ ಎಲ್ಲಾ ನೌಕರರಿಗೂ ದೇಶದ ಉದ್ಯೋಗಿಗಳಿಗೆ ಸಕ್ಕರೆ ಕೊಡುವುದಕ್ಕೆ ಪ್ರತಿಯಾಗಿ ಬೆಲ್ಲ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಫ್ಯಾನ್ಸಿ ಐಟೆಗಳು ಹೊಸ ನಮೂನೆಯ ಬಳೆಗಳು ಈಗತಾನೇ ಬಂದಿವೆ! ಫ್ಯಾನ್ಸಿ ಸರಗಳು

ಫ್ಯಾನ್ಸಿ ಲೋಲಾಕುಗಳು. ಸೌಭಾಗ್ಯ ಸ್ಟೋರ್ಸ್ ಕೆಮಿಕಲ್ ದಂತದ ಬಳೆಗಳು

ದೇವರಾಜ ಮಾರ್ಕೆಟ್, ಮೈಸೂರು.

WEEKLY EDITION

ಸಂಪುಟ ೮] ಸೋಮವಾರ ೧೭--೭--೪೪ [ಸಂಚಿಕೆ ೩೯

ಸಿವಿಲ್ ಆಡಳಿತಕ್ಕೆ ಐರೋಪ್ಯ ಅಧಿಕಾರಿಗಳು

ಸರ್ಕಾರದ ನೀತಿ ಬದಲಾವಣೆಗೆ ಭಾರಿ ವರ್ತಕರ ಮನವಿ

ನಾರ್ಮಂಡಿಯಲ್ಲಿ ಭಾರಿ ಘರ್ಷಣೆಯಾಗಲಿದೆ

ಪೋಸ್ಟ್‌ಮೆನ್ ಸಮ್ಮೇಳನ

ಮೈಸೂರು ೧೬

ಮೈಸೂರು ಸಂಸ್ಥಾನದ ಪೋಸ್ಟ್‌ಮೆನ್ ಮತ್ತು ಲೋಯರ್ ಗ್ರೇಡ್ ಸ್ಟಾಫ್ ಯೂನಿಯನ್‌ನ ದ್ವಿತೀಯ ವಾರ್ಷಿಕೋತ್ಸವವು ಈ ದಿನ ಸಂಜೆ ರಾಜಧಾನಿಯಲ್ಲಿ ಟಿ ಬಸಪ್ಪನವರ ಮೈಸ್ಕೂಲಿನಲ್ಲಿ ನಡೆಯಿತು. ಅ|| ಭಾ|| ಪೋಸ್ಟಲ್ ಮತ್ತು ಆರ್ ಎಂ. ಎಸ್. ಯೂನಿಯನ್‌ನ ಕೋಲಾರ ಬ್ರಾಂಚಿನ ಅಧ್ಯಕ್ಷರಾದ ಶ್ರೀ ಕೆ. ರಾಜಗೋಪಾಲ ರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ನಗರದ ಪೋಸ್ಟ್‌ಮಾಸ್ಟರ್ ಶ್ರೀ ಎಂ. ಕನ್ನಯ್ಯ ನಾಯುಡುರವರು ಸಮ್ಮೇಳನದ ಆರಂಭೋತ್ಸವವನ್ನು ನಡೆಸಿದರು.

ಶ್ರೀ ಮಾ|| ಕನ್ನಯ್ಯನಾಯುಡುರವರು ತಮ್ಮ ಭಾಷಣದಲ್ಲಿ—ಯುದ್ಧಕಾಲವಾದ ಈಗ ಕೆಳದರ್ಜೆಯ ನೌಕರರ ಕೆಲಸ ಅಪಾರವಾಗಿದೆ. ಆದರೆ ಅವರಿಗೆ ಕಾಲಕ್ಕೆ ತಕ್ಕಷ್ಟು ಅನುಕೂಲಗಳಾಗಿಲ್ಲ. ಇವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾದರೆ ಇತರ ನೌಕರರಂತೆ ಅವರ ಜೀವನಮಾನವನ್ನು ಹೆಚ್ಚಿಸುವುದು ಅವಶ್ಯಕ. ಈ ಸಂಘದ ಮೂಲಕ ಅವರು ತಮ್ಮ ಉದ್ದಿಶ್ಯಗಳನ್ನು ಸಾಧಿಸಿಕೊಳ್ಳುವರೆಂದು ನಂಬಿದ್ದೇನೆ—ಎಂದರು.

ಅಧ್ಯಕ್ಷರು ಭಾಷಣ ಮಾಡುತ್ತಾ, ಹೇಳಿದ್ದೇನೆಂದರೆ—ಪೋಸ್ಟ್‌ಮ್ಯಾನ ಸೇವೆ ಎಂಥದ್ದೆಂಬುದನ್ನು ಒಂದು ಚಿಕ್ಕ ಮಗುವು ಕೂಡ ಅರಿತುಕೊಳ್ಳುವುದು. ಅಂಥವರಲ್ಲಿ ಅವರ ಜವಾಬ್ದಾರಿ, ಸೇವೆ ಮತ್ತು ಅದರ ಕಷ್ಟವು ಇನ್ನೂ ಈ ಇಲಾಖೆಯ ಪೂರ್ಣ ಗಮನಕ್ಕೆ ಬರದಿರುವುದು ವಿಷಾದಕರ. ಮನುಷ್ಯ ಸಾಮಾನ್ಯನ ಮೇಲೆ ಇಡಬೇಕಾದಷ್ಟು ದಯವನ್ನಾದರೂ ಅವರ ಮೇಲಿಡಬೇಕು. ಯುದ್ಧ ದೆಸೆಯಿಂದ ಎಲ್ಲರಂತೆ ಅವರಿಗೂ ಜೀವನ ಭರಿಸುವುದು ಬಹು ಕಷ್ಟವಾಗಿದೆ. ಪೋಸ್ಟಲ್ ಇಲಾಖೆಗೆ ಕಳೆದ ವರ್ಷಕ್ಕಿಂತ ಈ ವರ್ಷ ೩ ಕೋಟಿ ರೂ. ಆದಾಯ ಹೆಚ್ಚಿಗೆ ಬಂದಿದೆ. ಇಲಾಖೆಯವರು ಈ ಕೆಳದರ್ಜೆಯ ನೌಕರರ ಹಿತಸಾಧನೆಗೆ ಅದನ್ನು ಉಪಯೋಗಿಸುವುದು ಅತ್ಯಾವಶ್ಯಕ. ಈ ನೌಕರರು ತಮ್ಮ ಈ ಸಂಘದ ಮೂಲಕ ಒಗ್ಗಟ್ಟಾಗಿ ತಮ್ಮ ಕಷ್ಟಸುಖಗಳನ್ನು ಮೇಲ್ಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೆ ಖಂಡಿತ ಅವರ ಇಷ್ಟಾರ್ಥ ಕೈಗೂಡುವುದು. ನೌಕರರೆಲ್ಲಾ ಸಂಘದ ಸದಸ್ಯರಾಗಿ ಸಂಘವನ್ನು ಬೆಳಸಬೇಕು.

ಕಾರ್ಯದರ್ಶಿಗಳಾದ ಶ್ರೀ ಕುಮಾರಸ್ವಾಮಿಯವರು ಸಂಘದ ವರದಿ ಓದಿದರು. ಕಳೆದ ವರ್ಷ ೩೪೦ ಸದಸ್ಯರಿದ್ದರು, ಈ ಸಲ ೫೫೦ ಸದಸ್ಯರಿದ್ದಾರೆಂದರು. ಪ್ರೆಸಿಡೆನ್ಸಿ ಪೋಸ್ಟ್‌ಮಾಸ್ಟರ್ ಜನರಲ್, ಮತ್ತು ಶ್ರೀ ಚೆಂಗಲರಾಯರೆಡ್ಡಿ ಮುಂತಾದವರುಗಳಿಂದ ಬಂದಿದ್ದ ಸಂದೇಶಗಳನ್ನೋದಿದರು.

ಶ್ರೀಮಾನ್ ಜೆ. ಸಿ. ನಾಯುಡುರವರು ಸಂಘವನ್ನು ಬೆಳಸಿಕೊಂಡು ಕಾನೂನು ರೀತ್ಯಾ ಅಧಿಕಾರಿಗಳು ಮತ್ತು ಅಸೆಂಬ್ಲಿ ಮೆಂಬರುಗಳ ಮೂಲಕ ನಮ್ಮ ಕಷ್ಟ ಪರಿಹಾರ ಮಾಡಿಕೊಳ್ಳಬೇಕೆಂದು ಹೇಳಿದರು. ಶ್ರೀಮಾನ್ [illegible] ಪೋಸ್ಟ್‌ಮ್ಯಾನ್, ಮೇಲ್ ಪವಾನ್, ಮತ್ತು ಪೋಸ್ಟ್‌ಮಾಸ್ತರುಗಳ ಕಷ್ಟವನ್ನೂ, ಶ್ರೀ ಸೀತಾರಾಮಯ್ಯನವರು ಹೊಸ ನೌಕರರುಗಳ ನೇಮಕ ವಿಚಾರವಾಗಿ ಕಷ್ಟಸುಖಗಳನ್ನೂ, ಶ್ರೀಮಾನ್ ಗೋವಿಂದರಾಯರು ಮೈಸೂರು ನಗರದ ಪೋಸ್ಟಲ್ ಅಧಿಕಾರಿಗಳು ನೌಕರರುಗಳ ವಿಚಾರದಲ್ಲಿ ಎಷ್ಟು ಕೃಪಾಪೂರಿತರಾಗಿದ್ದಾರೆ ಎಂಬ ವಿಚಾರವನ್ನೂ ಕುರಿತು ಭಾಷಣ ಮಾಡಿದರು.

ಮದ್ರಾಸಿನ ಪೋ|| ಮಾ|| ಜನರಲ್ ಮಿ|| ಎಸ್ ರಯ್ಕ್ರಾಫ್ಟ್ [illegible]ರವರ ನಿಧನಕ್ಕಾಗಿ ಸಂತಾಪ ಸೂಚನಾ ನಿರ್ಣಯವೂ ಪೋಸ್ಟಲ್ ನೌಕರರುಗಳ ಹಿತಾರ್ಥವಾಗಿ ಹಲವು ನಿರ್ಣಯಗಳೂ ಅಂಗೀಕಾರಮಾಡಲ್ಪಟ್ಟವು. ಯುದ್ಧದಲ್ಲಿ ಜಯ ಕೋರಿ, ಜಾರ್ಜ್ ಸಾರ್ವಭೌಮರ ಮತ್ತು ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಸಮಾರಂಭ ಮುಕ್ತಾಯವಾಯಿತು. ಈ ಸಮ್ಮೇಳನಕ್ಕೆ ಸಂಸ್ಥಾನದ ನಾನಾ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಮೈಸೂರು ಡಿವಿಜನ್ನಿನ ಪೋ|| ಸೂ|| ಶ್ರೀ [illegible] ಶಾಸ್ತ್ರಿಗಳೂ ಸಮ್ಮೇಳನಕ್ಕೆ ಆಗಮಿಸಿದ್ದರು.

ಐರೋಪ್ಯ ಅಧಿಕಾರಿಗಳ ಆಮದು

'ಇಂಡಿಯಾ ಸರ್ಕಾರ ಮತ್ತು ಪ್ರಾಂತಿಕ ಸರ್ಕಾರಗಳಲ್ಲಿ ಸಿವಿಲ್ ಆಡಳಿತಕ್ಕೆ ಸೈನ್ಯ ಇಲಾಖೆಗಳಿಂದ ಬಹು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲು ಇಂಡಿಯಾ ಸರ್ಕಾರದವರು ನಿರ್ಧರಿಸಿದ್ದಾರೆ. ಸಿವಿಲ್ ಅಧಿಕಾರ ವರ್ಗಗಳಲ್ಲಿ ಐರೋಪ್ಯರ ಸಂಖ್ಯೆಯು ಕ್ರಮೇಣ ಕಡಮೆಯಾಗುತ್ತಿದೆಯೆಂದೂ ಯೂರೋಪಿಯನ್ ಅಧಿಕಾರಿ ಸಂಖ್ಯೆಯ ಪ್ರಮಾಣವನ್ನು ಮೊದಲಿನ ಮಟ್ಟದಲ್ಲಿಯೇ ಇಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳದಿರುವುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ. ಯುದ್ಧಾನಂತರವೂ ಕ್ರಮ ಪ್ರಕಾರ ಈ ಸ್ಥಾನಗಳನ್ನು ಭರ್ತಿ ಮಾಡುವುದು ಕಷ್ಟವಾಗುವುದು. ಆದ್ದರಿಂದ ಈಗಿನಿಂದಲೇ ಅಲ್ಪಾರಂಭವನ್ನು ಮಾಡಿ ಸಿವಿಲ್ ಅಧಿಕಾರಗಳಿಗೆ ಸೈನ್ಯದ ಅಧಿಕಾರಿಗಳನ್ನು ಚುನಾಯಿಸುವುದು ಸೂಕ್ತವೆಂದು ಇಂಡಿಯಾ ಸರ್ಕಾರದವರು ಭಾವಿಸಿದ್ದಾರೆ. ಸುಮಾರು ೩೦೦-೪೦೦ ಜನ ಅಧಿಕಾರಿಗಳನ್ನು ಚುನಾಯಿಸಬಹುದು.

ನೀತಿಯನ್ನು ಬದಲಾಯಿಸಿ

ಸುಪ್ರಸಿದ್ಧ ವರ್ತಕರುಗಳಾದ ಸರ್ ಹೆಚ್. ಪಿ. ಮೋದಿ, ಬಿರ್ಲಾ, ಪುರುಷೋತ್ತಮದಾಸ್, ಠಾಕೂರ್‌ದಾಸ್, ಜೆ. ಸಿ. ಸೆಟಲ್‌ವಾಡ್ ಮುಂತಾದವರು ವೈಸರಾಯರಿಗೆ ಒಂದು ಮನವಿಯನ್ನು ಮಾಡಿ, ಮಹಾತ್ಮ ಗಾಂಧಿಯವರ ಹೊಸ ನೀತಿ ವಿವರಣೆಯಿಂದ ಸರ್ಕಾರದವರೂ ಸಹ ತಮ್ಮ ನೀತಿಯನ್ನು ಪುನರ್ವಿಮರ್ಶಿಸಿ ಸಂಧಾನಕ್ಕೆ ಸಾಧಕವಾದ ಮಾರ್ಗಗಳನ್ನು ಹುಡುಕಬೇಕೆಂದು ಕೋರಿದ್ದಾರೆ. ಕಾಂಗ್ರೆಸ್ ನಾಯಕರನ್ನು ಇನ್ನು ಮುಂದೆಯೂ ಬಂಧನದಲ್ಲಿಟ್ಟಿರಲು ಯಾವ ಕಾರಣವೂ ಇಲ್ಲದಿರುವುದರಿಂದ ಅವರನ್ನು ಬಿಟ್ಟುಬಿಡಬೇಕೆಂದು ಒತ್ತಾಯಮಾಡಿದ್ದಾರೆ.

ಪಾರ್ಲಿಮೆಂಟಿನ ಚರ್ಚೆ

ಆಗಸ್ಟ್ ಒಂದನೇ ತಾ|| ಕಾಮನ್ಸ್ ಸಭೆಯಲ್ಲಿ ಹಿಂದೂಸ್ಥಾನದ ವಿಷಯ ಚರ್ಚೆಗೆ ಬರಲಿದೆ. ಲಾರ್ಡ್ಸ್ ಸಭೆಯಲ್ಲಿಯೂ ಕೂಡ ಲಾ|| ಸ್ಯಾಬೋಲ್ಗ[illegible] ಜುಲೈ ೨೬ ನೇ ತಾ|| ಈ ಬಗ್ಗೆ ಚರ್ಚೆಯನ್ನು ಆರಂಭಿಸಲಿರುವರು.

ಸರ್ಕಾರದ ಪರಿಶೀಲನೆ

ಗಾಂಧೀಜಿಯವರ ಸೂಚನೆಗಳನ್ನು ಇಂಡಿಯಾ ಮತ್ತು ಬ್ರಿಟಿಷ್ ಸರ್ಕಾರಗಳು ಕೂಲಂಕುಷವಾಗಿ ಪರಿಶೀಲಿಸುತ್ತಿವೆಯೆಂದು ತಿಳಿದುಬಂದಿದೆ. ಪಾರ್ಲಿಮೆಂಟಿನಲ್ಲಿ ಬರಲಿರುವ ಚರ್ಚೆಗೆ ಪೂರ್ವಸಿದ್ಧತೆಗಾಗಿಯೇ ಇದೆಂದು ಭಾವಿಸಲಾಗಿದೆ.

ವಿಮಾನ ರಿಪೇರಿ

ಬಂಗಾಳದಲ್ಲಿ ವಿಮಾನ ಎಂಜನ್ನು ದುರಸ್ತು ಮಾಡುವ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗಿದೆ. ಪ್ರಪಂಚದ ಭಾರಿ ಕಾರ್ಖಾನೆಗಳಲ್ಲಿ ಇದೂ ಒಂದು. ಚೀನಾ-ಬರ್ಮಾ ಇಂಡಿಯಾ ರಂಗದಲ್ಲಿ ಇದು ಅತ್ಯಂತ ದೊಡ್ಡದು. ಇದರಿಂದ ಬಹಳ ಕಾಲವು ಉಳಿಯುವುದು.

ಎರಡು ಗಂಟೆಗೊಂದು

[illegible] ಪ್ರಕರಣದಿಂದೀಚೆ [illegible] ೩೦೦೦ ಜ[illegible] ನಾಶಮಾಡಿವೆ. ಗಂಟೆಗೆ ಎರಡಕ್ಕಿಂತ ಹೆಚ್ಚು ನಾಶವಾಗಿದೆ [illegible]

ನಾರ್ಮಂಡಿ ಕದನ

ಮಿತ್ರ ಸೈನ್ಯಗಳೂ ಜರ್ಮನ್ ಸೈನ್ಯಗಳೂ ನಾರ್ಮಂಡಿಯಲ್ಲಿ ಅತ್ಯಂತ ಭಾರಿ ಕದನಕ್ಕೆ ಸಿದ್ಧವಾಗಿವೆ. ರೊಮೆಲ್ಲರು ತಮ್ಮ ಸೈನ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಸಂಟ್‌ಲೊ ಬಳಿ ಇವರು ಪ್ರತಿಭಟಿಸುವ ಶಕ್ತಿ [illegible] ಇದೆ. ಪೂರ್ವ ಭಾಗದಲ್ಲಿ ಜ|| ಮಾಂಟಿಗೊಮರಿಯವರು ಸೈನ್ಯಗಳನ್ನೂ ಸಾಮಗ್ರಿಗಳನ್ನೂ ಶೇಖರಿಸುತ್ತಿರುವರು. ಉಭಯ ಸೇನೆಗಳಿಗೂ ಆಗುವ ಘರ್ಷಣೆಯು ದಂಡಯಾತ್ರೆ ಆರಂಭಿಸಿದಂದಿನಿಂದೀಚೆಗೆ ಅತ್ಯಂತ ಭಾರಿಯಾಗಿರುತ್ತದೆಂದು ಹೇಳಲಾಗಿದೆ. ನಾರ್ಮಂಡಿಯಲ್ಲಿ ೩೦-೩೫ ಜರ್ಮನ್ ಡಿವಿಜನ್ನುಗಳಿವೆ.

ಕ್ರಿಪ್ಸ್ ಸಲಹೆಗಳಿಗೆ ವ್ಯತ್ಯಾಸ

ಮಹಾತ್ಮ ಗಾಂಧಿಯವರು ತಮ್ಮ ಹೊಸ ಸಲಹೆಗಳಿಗೂ ಕ್ರಿಪ್ಸ್ ಸಲಹೆಗಳಿಗೂ ಇರುವ ವ್ಯತ್ಯಾಸವನ್ನು ಹೀಗೆ ವಿವರಿಸಿದ್ದಾರೆ—ಮಿತ್ರ ಯುದ್ಧಕಾರ್ಯಾಚರಣೆಗೆ ಬೇಕಾದ ನಿರ್ಬಂಧಗಳೊಡನೆ ಹಿಂದೂಸ್ಥಾನದ ಸಂಪೂರ್ಣ ಸ್ವಾತಂತ್ರ್ಯವನ್ನು ಅಂಗೀಕರಿಸಬೇಕೆಂಬುದು ನನ್ನ ಸಲಹೆಯು. ಆದರೆ ಕ್ರಿಪ್ಸ್ ಸಲಹೆಗಳಲ್ಲಿ 'ಈಗಿನ ವಿಷಯಗಳಿಗಿಂತಲೂ ಭವಿಷ್ಯದ ಅಂಶಗಳೇ ಅಡಗಿದ್ದವು'. ಕ್ರಿಪ್ಸ್ ಸಲಹೆಗಳಲ್ಲಿ ಹಿಂದೂಸ್ಥಾನದ ವಿಭಜನೆಯು ಅಂತರ್ಗತವಾಗಿತ್ತು, ಸಂಸ್ಥಾನಗಳೇ ವಿಭಜನೆಯ ಉಪಕರಣಗಳಾಗಿದ್ದುವು.

ಪ್ರಷ್ಯದ ರಾಜಧಾನಿ ಖಾಲಿ

ಪ್ರಷ್ಯದ ಪೂರ್ವ ವಲಯದಲ್ಲಿರುವ ಗ್ರಾಡ್ನೊ ಸಮೀಪಕ್ಕೆ ರಷ್ಯನರು ಬಂದಿದ್ದಾರೆ. ಪೂರ್ವ ಪ್ರಷ್ಯದ ರಾಜಧಾನಿಯೂ ಕೈಗಾರಿಕೆ ಕೇಂದ್ರವೂ ಆದ ಕೋನಿಗ್ಸ್‌ಬರ್ಗ್ ನಗರವು ಖಾಲಿಯಾಗುತ್ತಿದೆ. ಕೆಂಪು ಸೈನ್ಯವು ಜರ್ಮನ್ ಗಡಿಯನ್ನು ಮುಟ್ಟುತ್ತಿದೆ.

ಫುಟ್‌ಬಾಲ್

ಮೈಸೂರು ೧೭

ದಕ್ಷಿಣ ಭಾರತ ಫುಟ್‌ಬಾಲ್ ಛಾಂಪಿಯನ್‌ಷಿಪ್ ಟೂರ್ನಿಯ ಅಂತ್ಯದಲ್ಲಿ ನಿನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಫೈನಲ್ಸ್ ಪಂದ್ಯದಲ್ಲಿ ಮೈಸೂರು ಸ್ಪೋರ್ಟ್ಸ್ ಕ್ಲಬ್ಬಿನವರು ಮೈಸೂರು ಮುಸ್ಲಿಂ ಸ್ಪೋರ್ಟ್ಸ್ ಕ್ಲಬ್ಬನ್ನು ೨ ಗೋಲುಗಳಿಂದ ಸೋಲಿಸಿದರು. ಮೈಸೂರು ಸಿಟಿ ಮುನಿಸಿಪಾಲಿಟಿಯ ಪ್ರೆಸಿಡೆಂಟರಾದ ಶ್ರೀ ರಾಮಚಂದ್ರರಾವ್ ಮೊಂಬೋರೆಯವರು ಬಹುಮಾನಗಳನ್ನು ವಿನಿಯೋಗಿಸಿದರು.

ಟಿ. ನರಸೀಪುರದ ಅಧ್ಯಕ್ಷರು

ಹೊಸದಾಗಿ ಪುರಸಭೆ ಅಧ್ಯಕ್ಷರನ್ನು ಚುನಾಯಿಸುವ ಅವಕಾಶವನ್ನು ಟಿ. ನರಸೀಪುರದ ಪೌರಸಭೆಗೆ ಕೊಟ್ಟಿರುವ ಪ್ರಕಾರ ನಿನ್ನೆ ಚುನಾವಣೆ ನಡೆಯಿತು. ಮ್ಯುನಿಸಿಪಲ್ ಕೌನ್ಸಿಲ್ ಉಪಾಧ್ಯಕ್ಷರಾದ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ರವರು ಅಧ್ಯಕ್ಷರಾಗಿ ಚುನಾಯಿತರಾದರು. ಇವರಿಗೆ ೧೩ ಓಟುಗಳೂ, ಇವರ ಪ್ರತಿಸ್ಪರ್ಧಿಯಾದ ಶ್ರೀ [illegible] ಅವರಿಗೆ ೪ ಓಟುಗಳೂ [illegible] ನಡೆಯಿತು.

[illegible] ಸ್ಥಿತಿ [illegible] ತಿಳಿಸಲಾಗಿದೆ.

ವಾರ ಭವಿಷ್ಯ

೧೬-೭-೪೪ ರಿಂದ ೨೨-೭-೪೪ ರವರೆಗೆ
(ಶ್ರೀ ಸಚ್ಚಿದಾನಂದ ಸ್ವಾಮಿಗಳಿಂದ)

ಮೇಷ— ಸಂತತಿಯ ಕಡೆ ಮಾತ್ರ ಗಮನವಿರಲಿ. ಆರೋಗ್ಯ ಉತ್ತಮ. ಉದ್ಯೋಗ, ವ್ಯಾಪಾರಗಳಲ್ಲಿ ಮಧ್ಯ ಲಾಭ. ನೌಕರಿಯನ್ನು ವೃದ್ಧಿ, ಮೇಲಧಿಕಾರಿ ಸಿಗು ವುದಿಲ್ಲ. ತಾ|| ೨೦-೨೧ ವಿಚಿತ್ರ ಪ್ರವಾಸ.

ವೃಷಭ— ದುಡ್ಡಿನ ಅಡಚಣೆ. ಮಾನಸಿಕ ವ್ಯಾಕುಲ. ನೌಕರಿ ಸ್ಥಿತಿಗಳು ಸಾಧಾರಣ. ಪ್ರವಾಸಕ್ಕೂ, ಮಾತೋಶ್ರೀಯವರ ಆರೋಗ್ಯಕ್ಕೂ ಪ್ರತಿಕೂಲ. ತಾ|| ೧೮-೨೦ ಅಸ್ವಾಧೀನ ಬಡಿಗನ, ಆಪ್ತರ ಭೇಟಿ.

ಮಿಥುನ—ಕಷ್ಟಗಳಿಂದ ಪಾರಾದಿರಿ. ಆರೋಗ್ಯ, ಆರ್ಥಿಕ ಮಾನಸಿಕ ಉತ್ತಮ. ಉದ್ಯೋಗ, ನೌಕರಿಗಳಲ್ಲಿ ಹೆಚ್ಚಿನ ಯಶ. ವಿದ್ಯಾಭ್ಯಾಸ ದೃಷ್ಟಿಯಿಂದ ಉತ್ತಮ.

ಕರ್ಕ—ಆರೋಗ್ಯ, ಸಾಂಪತ್ತಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಅಲ್ಪ ಲಾಭ. ಖರ್ಚು ಹೆಚ್ಚು. ಪ್ರವಾಸಕ್ಕೆ ಅನಾನುಕೂಲ. ತಾ|| ೧೮-೧೯ ಜಾಗರೂಕ.

ಸಿಂಹ—ಶರೀರದ ಆರೋಗ್ಯದ ಕಡೆ ಗಮನವಿರಲಿ. ವ್ಯಾಪಾರ, ನೌಕರಿಗಳಲ್ಲಿ ಹೆಚ್ಚು ಲಾಭ. ಪ್ರವಾಸಕ್ಕೆ ವಿಘ್ನ. ಲೇಖಕರಿಗೂ, ಕವಿಗಳಿಗೂ ವಿರೋಧವಾಗಿದೆ. ತಾ|| ೨೦-೨೧ ನಿರುತ್ಸಾಹ.

ಕನ್ಯಾ—ಗ್ರಹಗತಿಗಳು ಪ್ರತಿಕೂಲವಾಗಿವೆ. ಕುಟುಂಬದ ಆರೋಗ್ಯ ಉತ್ತಮವಿರಲಾರದು. ದುಡ್ಡನ್ನು ಕಳೆದುಕೊಳ್ಳುವಿರಿ. ವ್ಯಾಪಾರ, ನೌಕರಿಗಳಲ್ಲಿ ಕೋಪ. ತಾ|| ೨೦-೨೧ ಅಲ್ಪ ದ್ರವ್ಯ ಲಾಭ.

ತುಲಾ—ಗ್ರಹಗತಿಗಳು ಚೆನ್ನಾಗಿವೆ. ಆರೋಗ್ಯ, ಮಾನಸಿಕ ಉತ್ತಮ. ನೌಕರಿ ವ್ಯಾಪಾರಗಳಲ್ಲಿ ಯಶ. ಪ್ರವಾಸಕ್ಕೆ ಅನುಕೂಲ. ತಾ|| ೧೬-೨೧ ಸಜ್ಜನರ ಭೇಟಿ.

ವೃಶ್ಚಿಕ—ಆರೋಗ್ಯ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಲಾಭ, ಪ್ರವಾಸದಲ್ಲಿ ಯಶ. ತಾ|| ೨೦-೨೧ ಶುಭ ವಾರ್ತೆ, ದ್ರವ್ಯ ಲಾಭ.

ಧನು—ಆರೋಗ್ಯ, ವ್ಯಾಪಾರ, ನೌಕರಿ ಸ್ಥಿತಿಗಳು ಉತ್ತಮ. ದತ್ತ್ಯಾಸರ ಪ್ರವಾಸ, ವಿದ್ಯಾಭ್ಯಾಸ ದೃಷ್ಟಿಯಲ್ಲೂ ಯಶ. ತಾ|| ೨೦-೨೧ ಆಲಸ್ಯ, ಖರ್ಚು.

ಮಕರ—ಆರೋಗ್ಯ ನೆಟ್ಟಗಿರಲಾರದು. ಜಲ ಭಯ, ಅಗ್ನಿ ಭಯ ಸಂಭವವಿದೆ. ಆರ್ಥಿಕ ಸಾಧಾರಣ. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ವಾದವಿವಾದ. ಪ್ರವಾಸಕ್ಕೆ ವಿಘ್ನ. ತಾ|| ೨೦ ಮಿತ್ರ ಸಹಾಯ.

ಕುಂಭ—ಆರೋಗ್ಯ, ಆರ್ಥಿಕ, ಮಾನಸಿಕ, ಆರ್ಥಿಕ ಉತ್ತಮ. ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಯಶ. ಪ್ರವಾಸ, ದಾನ ಧರ್ಮಗಳಲ್ಲಿ ಲಾಭ. ತಾ|| ೨೦-೨೧ ಸ್ತ್ರೀಯರಿಗಾಗಿ ಖರ್ಚು, ಅಸ್ವಸ್ಥತೆ.

ಮೀನ—ಪರರನ್ನು ಅತ್ಯಂತ ನಂಬಿ ದೇಹ ನಿಂದೆಯ ಅನುಭಕ್ಕೆ ಬರುತ್ತದೆ. ಆರೋಗ್ಯ, ಮಾನಸಿಕ ಸ್ಥಿತಿಗಳು ಉತ್ತಮ. ವ್ಯಾಪಾರ ನೌಕರಿಗಳಲ್ಲಿ ಲಾಭ. ಪ್ರವಾಸ ... ತಾ|| ೧೬-೧೮-೧೯ ಖರ್ಚು.

ಮಂತ್ರಿ ಮಂಡಲದ ಸಭೆ

ಸ್ವಂ.ಸು.] ಬೆಂಗಳೂರು ೧೬

ದಿವಾನರ ಅಧ್ಯಕ್ಷತೆಯಲ್ಲಿ ೧೭ ನೇ ತಾ|| ಸೋಮವಾರ ಅರಮನೆ ಕಚೇರಿಯಲ್ಲಿ ಮಂತ್ರಿಮಂಡಲವು ಸಭೆ ಸೇರುವುದು.

ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯ

ಸರ್ಕಾರೀ ನೌಕರರಿಗೆ ಕೊಟ್ಟಿದ್ದ ತುಟ್ಟಿ ಭತ್ಯ ೧೯೪೪ ರ ಜೂನ್ ಅಖೈರುವರೆಗೆ ಮಾತ್ರ ಮಂಜೂರಾಗಿತ್ತು. ಈಗ, ಈ ವರ್ಷ ಅಂತ್ಯದವರೆಗೆ ಕೊಡತಕ್ಕದ್ದೆಂದು ಆಜ್ಞೆಯಾಗಿದೆ.

ಫರ್ಟಿಲೈಸರ್ ಮಿಷನ್ ಆಗಮನ

ಭಾರತದಲ್ಲಿ ಪ್ರವಾಸಮಾಡುತ್ತಿರುವ ಇಂಗ್ಲೆಂಡಿನ ಆರ್ಟಿಫಿಷಿಯಲ್ ಫರ್ಟಿಲೈಸರ್ಸ್ ಮಿಷನ್ನಿನವರು ೧೯ ನೇ ತಾರೀಖು ಬೆಂಗಳೂರಿಗೆ ಬಂದು ೨೨ ನೇ ತಾರೀಖಿನ ವರೆಗೂ ಇರುವರು. ನಾನಾ ಕೈಗಾರಿಕಾ ಸಂಸ್ಥೆಗಳಿಗೂ, ವ್ಯವಸಾಯದ ಕ್ಷೇತ್ರಗಳಿಗೂ ಭೇಟಿ ಕೊಡುವರು.

ವರ್ಗಾವರ್ಗಿ

ವೈದ್ಯ ಇಲಾಖೆಯಲ್ಲಿ ಡಾ|| ಬಿ ನಾರಾಯಣರಾಯರನ್ನು ಬೆಂಗಳೂರಿನ ಹೆಡ್ ಕ್ವಾರ್ಟರ್ ಎಸ್ಟಾಬ್ಲಿಷ್‌ಮೆಂಟಿಗೂ ಸರ್ವೀಸಿನಿಂದ ನಿವೃತ್ತರಾಗಲು ಅನುಮತಿ ಪಡೆದಿರುವ ಡಾ|| ವಿ. ಶ್ರೀನಿವಾಸ ಮೊದಲಿಯಾರ್ರವರ ಸ್ಥಾನದಲ್ಲಿ ಡಾ|| ಕಣಿಯಾರ್ ನರಸಿಂಹಯ್ಯಂಗಾರ್ಯರನ್ನು ಚಿತ್ರದುರ್ಗ ಜಿಲ್ಲಾ ವೈದ್ಯಾಧಿಕಾರಿಗಳನ್ನಾಗಿಯೂ ವರ್ಗಮಾಡಲಾಗಿದೆ.

ಆಗ್ನೇಯ ಕಮ್ಯಾಂಡಿನಲ್ಲಿ ಭಾರತಕ್ಕೆ ಸ್ಥಾನ

ಮೌಂಟ್ ಬ್ಯಾಟನ್ ರವರ ನೇತೃತ್ವದಲ್ಲಿ ಆಗ್ನೇಯ ಏಷ್ಯಾ ಕಮ್ಯಾಂಡನ್ನು ಸ್ಥಾಪಿಸುವುದಕ್ಕೆ ಮುಂಚೆ, ಅಮೆರಿಕದ ರಾಯಭಾರಿ ಮಿ|| ವಿಲಿಯಂ ಫಿಲಿಪ್ಸರು ಬಂದಿದ್ದಾಗ ಹಿಂದೂಸ್ಥಾನದ ಸಮಸ್ಯೆಯನ್ನು ಬಗೆಹರಿಸಲು ಇಲ್ಲಿ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿ, ಸದರಿ ಕಮ್ಯಾಂಡಿನಲ್ಲಿ ಭಾರತವನ್ನೂ ಸೇರಿಸುವ ಸಲಹೆ ಮಾಡಲಾಗಿತ್ತೆಂದು ವರದಿಯಾಗಿದೆ

ಸಂಗೀತ ವಿದ್ವಾಂಸರಿಗೆ ಸನ್ಮಾನ

ಶ್ರೀಗಳಾದ ಕೆ. ವಾಸುದೇವಾಚಾರ್ ಮತ್ತು ಟೈಗರ್ ವರದಾಚಾರ್ಯರಿಗೆ ಶ್ರೀಮನ್ಮಹಾರಾಜರವರು ಸಂಗೀತ ಶಾಸ್ತ್ರ ವಿಶಾರದ ಎಂಬ ಪ್ರಶಸ್ತಿಯನ್ನು ಕೊಟ್ಟಿರುವುದಕ್ಕಾಗಿ ಅವರುಗಳನ್ನು ಅಭಿನಂದಿಸಲು ಮೈಸೂರು ಮಾಡರ್ನ್ ಕೆಫೆ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ನಿನ್ನೆ ಸಾಯಂಕಾಲ ತಮ್ಮ ದಾಸಪ್ರಕಾಶ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಅನೇಕ ಜನ ಪ್ರಮುಖರೂ ವಿದ್ವಾಂಸರೂ ಬಂದಿದ್ದರು. ಫೋಟೋ ಆದನಂತರ ಉಪಹಾರವಾಯಿತು. ಶ್ರೀ ರಾಮರಾಜಪ್ಪನವರು ಸ್ವಾಗತಸ್ಥವಾದ ಭಾಷಣಮಾಡಿ ಅತಿಥಿಗಳ ಗುಣಕಥನಮಾಡಿದರು. ಸಂಗೀತ ಶಾಸ್ತ್ರ ವಿಶಾರದರುಗಳೂ ಸಹ ತಮ್ಮ ಕೃತಜ್ಞತೆಯನ್ನು ಸೂಚಿಸಿ ತಮ್ಮ ಪ್ರಶಸ್ತಿಗೆ ಪ್ರಭುಗಳ ಕಟಾಕ್ಷವೂ ಮಹಾಜನರ ಅನುಗ್ರಹವೂ ಕಾರಣವೆಂದು ಹೇಳಿದರು. ಜಯಕಾರದೊಡನೆ ಸಭೆ ಮುಗಿಯಿತು.



ಒಂದು ಕಾಲದಲ್ಲಿ ... ಕೊಡುವದಕ್ಕೆ ಪ್ರಾರಂಭವಾದ ಬೆಲೆಗೆ ನಿಮಗೆ ... ನಿಮ್ಮ ಟಿಕೆಟ್ಟನ್ನು ಪಡೆಯಬಹುದಾಗಿತ್ತು. ... ಕೊಂಡುಕೊಳ್ಳಬೇಕಾಗಿತ್ತು ... ಆದರೆ, ಆ ದಿನಗಳು ಹೋದವು. ಈಗ ನೀವು ಜನಗಳ ಗುಂಪಿನಲ್ಲಿ ಸೇರಿಕೊಂಡು ನಿಮ್ಮ ಟಿಕೆಟ್ಟನ್ನು ಪಡೆಯಬೇಕು. ... ಯುದ್ಧ ... ಸಾಮಾನುಗಳು ... ಸಂಖ್ಯೆ ... ಅವುಗಳನ್ನು ... ಆದರೆ, ಈ ದಿನಗಳಲ್ಲಿ ... ಇದರ ... ದಕ್ಕಾಗಿ ... ಪ್ರಯಾಣಗಳನ್ನು ಸೇರಿಸಿ ನೋಡಿದರೆ, ... ಪ್ರಯಾಣದಲ್ಲಿ ಏನೂ ಪ್ರಯೋಜನವಿಲ್ಲವೆಂದು ... ತಿಳಿಯುವಿರಿ. ... ಪ್ರಯಾಣವು ಅಸಂತೋಷಕರ ಮತ್ತು ... ವಿವೇಕಿಯಾದ ಮನುಷ್ಯನು ಪ್ರಯಾಣ ಮಾಡಿಯೇ ತೀರಬೇಕೆಂಬ ಪ್ರಸಂಗವಿಲ್ಲ ದೂರತು, ... ಪ್ರಯಾಣ ಮಾಡುವದಿಲ್ಲ. ... ನಿಮ್ಮ ಕುಟುಂಬವೂ ಸಹ ... ಮನೆಯಲ್ಲಿಯೇ ಉಳಿಯಿರಿ. ಇದರಿಂದ ... ಅನೇಕ ತೊಂದರೆಗಳಿಂದ ಪಾರಾಗುವಿರಿ.



Edited printed and published by A. R. Nagarajan, at the Sadhvi Press, D. Subbiah Road, Mysore

ಸಂಪುಟ ೨] ಮಂಗಳವಾರ ೧೮-೭-೪೪ [ಸಂಚಿಕೆ ೩೦೨

ಕೂರೈಲ್ ದ್ವೀಪಗಳಲ್ಲಿ ಅಮೆರಿಕದ ಮುತ್ತಿಗೆ?

ಅಸ್ಸಾಂ ಲೋಕಲ್ ಬೋರ್ಡಿಗೆ ಮೊಚ್ಚಿಯೊಬ್ಬನ ಚುನಾವಣೆ
ಕರಾಚಿಯಲ್ಲಿ ಮಳೆಯಿಂದ ಆರು ಜನರ ಮರಣ

ಕೂರೈಲ್ ದ್ವೀಪದ ಮುತ್ತಿಗೆ

ಉತ್ತರ ಪೆಸಿಫಿಕ್ಕಿನಲ್ಲಿ ಜಪಾನಿನ ಈಶಾನ್ಯದಲ್ಲಿರುವ ಕ್ಯೂರೈಲ್ ದ್ವೀಪಗಳ ಮೇಲೆ ಅಮೆರಿಕನರು ದಂಡಯಾತ್ರೆ ನಡೆಸುವರೆಂದು ಟೋಕ್ಯೋ ವರದಿಯೊಂದು ತಿಳಿಸುತ್ತದೆ. ಈ ದ್ವೀಪಗಳ ಮೇಲೆ ಈಚೆಗೆ ಅಮೆರಿಕದ ಕಾರ್ಯಾಚರಣೆ ಹೆಚ್ಚಾಗಿದೆ. ಈ ಧಾಳಿ ಪ್ರಯತ್ನವನ್ನು ಜಪಾನರು ಉದಾಸೀನದಿಂದ ಕಾಣಕೂಡದೆಂದು ಸದರಿ ವರದಿಯು ಹೇಳುತ್ತದೆ.

ಕೈ ಕೈ ಕದನ

ಕೇನ ನಗರದ ನೈರುತ್ಯದಲ್ಲಿ ನೋಯರ್ಸ್ ಎಂಬಲ್ಲಿ ಕೈ ಕೈ ಕದನ ನಡೆಯುತ್ತಿದೆ. ರೊಮೆಲ್ಲನು ಹೊಸ ಹೊಸ ಸೈನ್ಯಗಳನ್ನೂ ಸಾಮಗ್ರಿಗಳನ್ನೂ ತರುತ್ತಿರುವನು. ವಾಯುವ್ಯದಲ್ಲಿಯೂ ಮಿತ್ರರು ಘೋರ ಕದನದಲ್ಲಿ ತೊಡಗಿದ್ದಾರೆ. ಓಡೋನ್ ಮತ್ತು ಓರ್ನ ನದಿಗಳ ಮಧ್ಯೆ ಎಸ್‌ಕ್ವೆ ಗ್ರಾಮದಿಂದ ಮಿತ್ರರು ವಾಪಸಾಗಬೇಕಾಯಿತು.

ಸಿನಿಮಾ ನಟರಿಗೆ ಆಕಸ್ಮಿಕ

ಬ್ರಿಟನ್ನಿನ ಸುಪ್ರಸಿದ್ಧ ನಟರೂ ಗ್ರಂಥಕರ್ತರೂ ಆದ ಎ.॥ ನೋಯೆಲ್ ಕವರ್ಡ್ ರ ಬೊಂಬಾಯಿನ ಸಮುದ್ರ ತೀರದಲ್ಲಿ ಮೋಟಾರಿನಲ್ಲಿ ಗಾಳಿಸವಾರಿ ಹೋಗುತ್ತಿದ್ದಾಗ ಅವರ ಮೋಟಾರು ಕಾಲುದಾರಿ ಮೇಲೇರಿ ಸಮುದ್ರದ ಗೋಡೆಗೆ ಢಿಕ್ಕಿ ಹೊಡೆಯಿತು. ಅವರಿಗೆ ಸ್ವಲ್ಪ ಗಾಯವಾಯಿತು.

ಗಾಂಧಿ-ವೈಸರಾಯಿ ಭೇಟಿ ಸಂಭವವಿಲ್ಲ

ಮಹಾತ್ಮರ ಹೊಸ ಸಲಹೆಗಳು ಹೊಸ ದೆಹಲಿಯಲ್ಲಿ ಯಾವ ಅನುಕೂಲ ಪರಿಣಾಮವನ್ನೂ ಉಂಟುಮಾಡಿಲ್ಲವೆಂದು ಹೇಳಲಾಗಿದೆ. ಕೆಲವರು ಗಾಂಧಿಯವರನ್ನು ಪರಿಹಾಸ್ಯಮಾಡುತ್ತಲೂ ಇರುವರೆಂದು ಗೊತ್ತಾಗಿದೆ. ಆಗಸ್ಟ್ ನಿರ್ಣಯವನ್ನು ವಾಪಸು ತೆಗೆದುಕೊಂಡು ಯುದ್ಧದಲ್ಲಿ ಸಂಪೂರ್ಣ ಸಹಕಾರ ಮಾಡುವದಾಗಿ ಭರವಸೆ ಕೊಟ್ಟರೇನೇ ಭೇಟಿಯ ಸಂಭವ ಉಂಟಾಗುವುದೆಂದು ಹೇಳಲಾಗಿದೆ. ಮಹಾತ್ಮರ ಚೌಕಚೌಕತೆಯು ದಹಲಿ ಅಧಿಕಾರಿಗಳ ಮನೋಭಾವವನ್ನು ಬದಲಾಯಿಸಿಲ್ಲ. [illegible] ಚೌಕತೆಯಿಂದ ಕೂಡಿಯೂ [illegible] ದಹಲಿಯ ವಾತಾವರಣವನ್ನು [illegible] ವೈಸರಾಯರು ನಿರಾಕರಿಸಿದಲ್ಲದೆ ಗಾಂಧಿ-ವೈಸರಾಯಿ ಭೇಟಿಯ ಪ್ರಸಂಗವೇ ಇಲ್ಲವೆಂದೂ ಸಂಧಾನದ ಸಂಭವವು ಶೂನ್ಯವೆಂದೂ ಹೇಳಲಾಗಿದೆ.

ಕಾಂಗ್ರೆಸ್-ಲೀಗ್ ಪ್ರಮಾಣವೆಷ್ಟು?

[illegible] ಸರ್ಕಾರವು ಒಪ್ಪಿದಾದರೆ ಆದರಲ್ಲಿ ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಯಾವ ಪ್ರಮಾಣದ ಪ್ರಕಾರ ಪ್ರಾತಿನಿಧ್ಯ [illegible] ಪ್ರಶ್ನೆಗೆ ಮಹಾತ್ಮರು ಹೀಗೆ ಉತ್ತರ ಕೊಟ್ಟಿದ್ದಾರೆ-ನನ್ನ ಸಲಹೆಗಳು ಅಧಿಕಾರಿಗಳಿಗೆ ಸಮರ್ಪಕವಾಗಿದ್ದರೆ, ಈ ವಿಷಯದಲ್ಲಿ ಅಧಿಕಾರಿಯುವನಾಗಿ [illegible] ಬಂಧನದಿಂದ ಬಿಡುಗಡೆ ಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಅಷ್ಟು [illegible] ಅವಕಾಶ [illegible] ಕೊಡಬೇಕು.

ಮಳೆಯಿಂದ ಮರಣಗಳು

ಕಳೆದ ಶುಕ್ರವಾರ ಭಾರಿ ಮಳೆಯು ಬಿದ್ದುದರಿಂದ ಕರಾಚಿಯಲ್ಲಿ ಆರು ಮರಣಗಳುಂಟಾದುವು. ಒಂದು ಟ್ಯೂಬ್ ಬಾವಿಯಲ್ಲಿ ಮೂವರು ಕೊಚ್ಚಿಕೊಂಡು ಹೋಗಿ ಬಿದ್ದು ಉಸಿರು ಕಟ್ಟಿಕೊಂಡುದರಿಂದಲೂ ಇನ್ನು ಮೂವರು ಪ್ರವಾಹದಲ್ಲಿ ಸಿಕ್ಕಿ ನಗರದ ಹಳ್ಳ ಪ್ರದೇಶದಲ್ಲಿ [illegible] ಗಿದುದರಿಂದಲೂ ಮಡಿದರು.

ಗ್ರಾಡ್ನೊ ರಷ್ಯರ ವಶ

ವಿ॥ ಸ್ಟಾಲಿನರು ಒಂದು ಪ್ರಕಟಣೆ ಹೊರಡಿಸಿ ರಷ್ಯನರು ಗ್ರಾಡ್ನೊವನ್ನು ಹಿಡಿದಿರುವರೆಂದು ತಿಳಿಸಿದ್ದಾರೆ. ಜರ್ಮನರು ಭಾರಿ ಟ್ಯಾಂಕ್ ಪಡೆಗಳನ್ನು ತಂದೊಡ್ಡುತ್ತಿರುವರು. ಆದ್ದರಿಂದ ಕದನಕ್ಕೆ ಹೊಸ ಬಿರುಸು ಉಂಟಾಗಿದೆ.

ಗೋಧಿ ಮತ್ತು ಬಾರ್ಲಿ ಬೆಳೆಯಕೂಡದು

ಸ್ವಂ.ಪ್ರ.ಫೋನ್] ಬೆಂಗಳೂರು ೧೮

ಸಂಸ್ಥಾನದಾದ್ಯಂತವಾಗಿ ಗೋಧಿ ಮತ್ತು ಬಾರ್ಲಿ ಬೆಳೆಗೆ ಸಂಬಂಧಿಸಿದ ರೋಗವಿರುವುದರಿಂದ, ಗೋಧಿಯನ್ನೂ, ಬಾರ್ಲಿಯನ್ನೂ ಯಾರೂ ಬೆಳೆಯಕೂಡದೆಂದೂ ೧೯೪೪ ರ ಏಪ್ರಿಲ್ ೧ ನೇ ತಾರೀಖಿನಿಂದ ೧೯೪೪ ರ ಸೆಪ್ಟೆಂಬರ್ ೩೦ ರ ವರೆಗೆ, ಸಂಸ್ಥಾನದಲ್ಲಿ ಬೆಳೆದ ಗೋಧಿ ಮತ್ತು ಬಾರ್ಲಿ ಗಿಡಗಳನ್ನು ಕಿತ್ತುಹಾಕಬೇಕು ಅಥವಾ ಸುಟ್ಟುಬಿಡಬೇಕೆಂದೂ ಸರ್ಕಾರದಾಜ್ಞೆಯಾಗಿದೆ. ಈ ಆಜ್ಞೆಯು ಈ ಜುಲೈ ನ ೧೯೪೫ ನೇ ಮಾರ್ಚಿ ೩೧ ರ ವರೆಗೆ ಜಾರಿಯಲ್ಲಿರುವುದು.

ಏಕನಾಮಿಕ್ ಸಮ್ಮೇಳನದ ಕೇಂದ್ರ ಸಮಿತಿ

ಏಕನಾಮಿಕ್ ಸಮ್ಮೇಳನದ ಕೇಂದ್ರ ಸಮಿತಿಯು [illegible] ॥ [illegible] ರ ಪ್ರಧಾನ ಭವನದಲ್ಲಿ ಸಭೆ ಸೇರ [illegible] ಅಧ್ಯಕ್ಷರಾಗಿ [illegible] ವರು.

ಪಬ್ಲಿಕ್ ಅಕೌಂಟ್ಸ್ ಸಮಿತಿ

೧೯೪೪-೪೫ ನೇ ಸಾಲಿನ ಪಬ್ಲಿಕ್ ಅಕೌಂಟ್ಸ್ ಸಮಿತಿಗೆ, ರಿಪ್ರೆಸೆಂಟೇಟಿವ್ [illegible] ನ್ನೂ, ಚುನಾಯಿಸಿದ [illegible] ನ್ನೂ, ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ. [illegible] ಅಧ್ಯಕ್ಷರು.

ಮೊಚ್ಚಿಯ ಚುನಾವಣೆ

ಅಸ್ಸಾಮಿನ ನೌಗಾಂಗ್ ಲೋಕಲ್ ಬೋರ್ಡಿನ ಉಪಚುನಾವಣೆಯಲ್ಲಿ ಒಬ್ಬ ಮೊಚ್ಚಿಯು ಪ್ರತಿಸ್ಪರ್ಧಿ ಇಲ್ಲದೆ ಚುನಾಯಿತನಾಗಿದ್ದಾನೆ. ಈ ರೀತಿ ಚುನಾವಣೆಯಾಗುವುದು ಆ ಬೋರ್ಡಿನ ಇತಿಹಾಸದಲ್ಲಿ ಇದೇ ಮೊದಲು.

ಹಿಂದೂ ಮಹಾ ಸಭೆಯ ಅಸಮಾಧಾನ

ಬಿಕ್ಕಟ್ಟಿನ ಪರಿಹಾರಕ್ಕೆ ಗಾಂಧೀಜಿಯವರೂ, ರಾಜಾಜಿಯವರೂ ಕೊಟ್ಟಿರುವ ಸಲಹೆಗಳು ಹಿಂದೂ ಮಹಾ ಸಭೆಯವರಿಗೆ ಅಸಮಾಧಾನವುಂಟುಮಾಡಿವೆ. ಅದರಂತೆ ನಡೆದರೆ ವಿನಾಶದ ಪ್ರಥಮ ಸೋಪಾನವನ್ನು ಕಟ್ಟಿದಂತೆಯೇ ಸರಿ ಎಂದು ಅವರು ಭಾವಿಸಿರುವರು.

ಬಿನ್ನವತ್ತಳೆ ಬೇಡ

ಕೇವಲ ಆರೋಗ್ಯ ಸಾಧನೆಗಾಗಿ ತಾವು ಪಂಚಗನಿಗೆ ಬಂದಿರುವುದರಿಂದ [illegible] ನ ಪೌರಸಭೆಯ ಮಾನ [illegible] ತಾವು ಸ್ವೀಕರಿಸಲಾಗ [illegible] ಯಾವ [illegible] ಗಾಂಧೀಜಿ [illegible]

ಸರ್ಕಾರದ ನೀತಿ ಬದಲಾವಣೆ

ಬ್ರಿಟಿಷ್ ಸರ್ಕಾರದವರು ಹಿಂದೂಸ್ಥಾನದ ಬಗ್ಗೆ ತಮ್ಮ ನೀತಿಯನ್ನು ಸ್ವಲ್ಪ ಬದಲಾವಣೆಯನ್ನು ಮಾಡುವರೆಂಬುದಕ್ಕೆ ವಿಶೇಷ ಆಧಾರಗಳವೆಯೆಂದು ವರದಿಯಾಗಿದೆ. ಇತ್ತೀಚಿನ ಪಾರ್ಲಿಮೆಂಟಿನ ಚರ್ಚೆಯಲ್ಲಿ ವಿಶೇಷ ಕುತೂಹಲವಾಗಿರುವುದು.

ಮಂಡ್ಯದ ಪೌರಸಭಾಧ್ಯಕ್ಷರ ಚುನಾವಣೆ ರದ್ದು

ಮಂಡ್ಯದ ಪೌರಸಭಾಧ್ಯಕ್ಷರಾಗಿ ಶ್ರೀ [illegible] ಚುನಾಯಿತರಾಗಿ ಆದರ ಮೇಲೆ [illegible] ಪ್ರಕಟಿಸಿ [illegible] ಸದರಿ [illegible] ರದ್ದು ಮಾಡಲಾಗಿದೆ [illegible]

ಸಂಜನಗೂಡು ಉಪಾಧ್ಯಕ್ಷರು

[illegible] ಶ್ರೀಮಾನ್ ಲಕ್ಷ್ಮಣ [illegible] ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಮೈ॥ ಜಿಲ್ಲಾಬೋರ್ಡಿಗೆ ಉಪಾಧ್ಯಕ್ಷತೆ

ಮೈಸೂರು, ೧೮

ಮೈಸೂರು ಜಿಲ್ಲಾಬೋರ್ಡಿಗೆ ಉಪಾಧ್ಯಕ್ಷರು ಬೇಕೇ ಬೇಡವೇ ಎಂಬ ವಿಚಾರವನ್ನು ಕಾನೂನು ಪ್ರಕಾರ ಚುನಾವಣೆಗೆ ಮುಂಚೆ ತಿಳಿಯುವ ಸಲುವಾಗಿ ಮೈ॥ ಜಿ॥ ಬೋ॥ ಅಧ್ಯಕ್ಷರು ಎಲ್ಲಾ ಸದಸ್ಯರಿಗೂ ನೋಟೀಸ್ ಕಳಿಸಿದ್ದಾರೆ. ಸಾಮಾನ್ಯವಾಗಿ ಇದನ್ನು ಒಂದು ಮೀಟಿಂಗಿನಲ್ಲಿ ತೀರ್ಮಾನಿಸುವ ಪದ್ಧತಿ. ವೃಥಾ ಕಾಲಾತೀತವಾಗುತ್ತ ಕೆಲಸ ನಿಲ್ಲುವುದರಿಂದ ಬೇಗ ತೀರ್ಮಾನಿಸಲು ಈ ರೀತಿ ಸದಸ್ಯರ ಅಭಿಪ್ರಾಯ ಕೇಳಲಾಗಿದೆಯೆಂದು ತಿಳಿಯಬರುತ್ತದೆ.

ಸದಸ್ಯರಿಗೂ ೨೦ ನೆಯ ತಾರೀಖಿನೊಳಗೆ ಜವಾಬು ಕೊಡಬೇಕು. ಸೂಚಿಸಿದ್ದರೆ ಉಪಾಧ್ಯಕ್ಷರು ಬೇಕೆಂದು ನಿರ್ಧರಿಸಲ್ಪಟ್ಟು ಅದರ ಚುನಾವಣೆ ಗೊತ್ತುಮಾಡಲಾಗುವುದೆಂದು ಗೊತ್ತಾಗಿದೆ. ಈಗಾಗಲೇ ಕೆಲವರು ಇದನ್ನು ಮೀಟಿಂಗಿನಲ್ಲೇ ತೀರ್ಮಾನಿಸಬೇಕೆಂದು ತೀವ್ರವಾಗಿ ತಿಳಿದುಬರುತ್ತದೆ.

ಬಿನ್ನವತ್ತಳೆ

ಶ್ರೀಮಾನ್ ಜವಳಿ ಅಂಗಡಿ ಸಾ॥ ಅದಿಶೇಷಯ್ಯನವರಿಗೆ ಪಬ್ಲಿಕ್ ಸರ್ವಿಸ್ ಮೊದಲನೆ ಶ್ರೇಣಿ [illegible] ದವರು ಬಹುಮಾನಿತರನ್ನಾಗಿ ಮೈಸೂರು ದೇವಾಂಗ ಸಂಘದವರು ನೆನ್ನೆ ಸಾಯಂಕಾಲ ಬಿ॥ ಕಾಡಯ್ಯನವರ ಛತ್ರದಲ್ಲಿ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀಮಾನ್ ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಫಲಹಾರಾನಂತರ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು.

ಚರ್ಚಾಕೂಟ

"ಯುದ್ಧವು ರಾಷ್ಟ್ರೀಯ ಅಭಿವೃದ್ಧಿಗೆ ಉತ್ತೇಜನಕಾರಕವಾದುದು" ಎಂಬ ವಿಷಯದಲ್ಲಿ ಈ ದಿನ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲೀಷಿನಲ್ಲಿ ಒಂದು ಚರ್ಚಾಕೂಟವಿದೆ.

"ಲೋಕಕ್ಕೆ ಒಂದು ಹೊಸ ವ್ಯವಸ್ಥೆಯು ಬರುತ್ತದೆಂಬುದು, ಬರಲು ಬಯಲು [illegible]" ಎಂಬ ವಿಷಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಕನ್ನಡದಲ್ಲಿ ಒಂದು ಚರ್ಚಾಕೂಟವಿದೆ.

ಅತ್ಯಾಚಾರ ಮೊಕದ್ದಮೆ ಸೆಷನ್ಸ್‌ಗೆ

ತಾ॥ ೨೫-೪-೪೪ ರಲ್ಲಿ ಚಿಕ್ಕಮಗಳೂರಿನ [illegible] ಎಂಬುವನು ೨೩ ವರ್ಷದ [illegible] ಎಂಬಾಕೆಯ ಮೇಲೆ [illegible] ಅತ್ಯಾಚಾರ ನಡೆಸಿದನೆಂದು ಡಿ॥ ಮ್ಯಾಜಿಸ್ಟ್ರೇಟ್ [illegible] ವಿಚಾರಣೆ ನಡೆದು, ಸೆಷನ್ಸ್‌ಗೆ ಕಮಿಟ್ಟಾಯಿತು.

ಪ್ಲೇಗು ಉಪದ್ರವ

[illegible]] [illegible] ೧೬

[illegible] ಪ್ಲೇಗ್ [illegible] ಶ್ರೀಮಾನ್ [illegible] ಈ ವಿಷಯದಲ್ಲಿ [illegible] ಕದವನು ಬೇಗ ಕೊಡಬೇಕು.

ಕೃಷ್ಣರಾಜೇಂದ್ರ ಮಿಲ್ಸ್

ಮೈಸೂರು ೧೭

ಶ್ರೀ ಕೃಷ್ಣರಾಜೇಂದ್ರ ಹತ್ತಿಗಿರಣಿಯಲ್ಲಿ ಕೆಲಸ ಪ್ರಾರಂಭವಾಗಿರುವುದರಿಂದ [illegible] ದಲ್ಲಿ ತೊಡಗಿರುವ ಕೆಲಸಗಾರರು ಕೂಡಲೆ ಕೆಲಸಕ್ಕೆ ಬರಬೇಕಾಗಿ ಶ್ರೀ ಟಿ. ಮುನಿಯಪ್ಪನವರು ಕೋರುತ್ತಾರೆ.

ಎಂ.ಬಿ.ಬಿ.ಎಸ್. ಪರೀಕ್ಷೆ ಫಲಿತಾಂಶ

[illegible] ತಿಂಗಳಲ್ಲಿ ನಡೆದ ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ ಈ ಕೆಳಗೆ ಕಂಡ ನಂಬರಿನವರು ಉತ್ತೀರ್ಣರಾಗಿರುತ್ತಾರೆ:—

II ಎಂ.ಬಿ.ಬಿ.ಎಸ್ (ಎರಡನೇ ಭಾಗ)

ಮೊದಲನೇ ದರ್ಜೆ ಇಲ್ಲ. ಎರಡನೇ ದರ್ಜೆ ಇಲ್ಲ. ಪಾಸ್ ೩.

[illegible] (ಮೂರನೇ ಭಾಗ)

ಮೊದಲನೇ ದರ್ಜೆ ಇಲ್ಲ. ಎರಡನೇ ದರ್ಜೆ ೩, ೯, ೫, ೬. ಪಾಸ್ ೪.

ಫೈನಲ್

ಮೊದಲನೇ ದರ್ಜೆ ಇಲ್ಲ. ಎರಡನೇ ದರ್ಜೆ ೭. ಪಾಸ್ ೧೩, ೧೫, ೧೭, ೨೦, ೨೯, ೩೦, ೩೭, ೩೭.

ಮೈಸೂರಿನ ಮಕ್ಕಳ ಗಂಟಲ ರೋಗ

ಮೈಸೂರು ನಗರದಲ್ಲಿ ಮಕ್ಕಳ ಗಂಟಲ ರೋಗ ಕಾಣಿಸಿಕೊಂಡಿದೆ. ಈ ರೋಗವು ಸಾಮಾನ್ಯವಾಗಿ ಮಕ್ಕಳಿಗೆ ಬರುವುದು. [illegible] ಗಂಟಲಿನಲ್ಲಿ ಬೀಳುವ ಪೊರೆ [illegible] ಕಾಣಿಸಿಕೊಳ್ಳುವುದು. [illegible] ಚಿಕಿತ್ಸೆಯನ್ನು ಕೈಗೊಳ್ಳದೆ ಹೋದರೆ ಅಪಾಯಕರವಾದುದು.

ಆದುದರಿಂದ ಪೌರಸಭೆಯವರು ಈ ಚಿಕಿತ್ಸೆಗೆ ಬೇಕಾದ ಔಷಧಿಯನ್ನು ಶೇಖರಿಸಿಟ್ಟಿದೆ. ಬಡಜನರಿಗೆ ಉಚಿತವಾಗಿಯೂ, ಅನುಕೂಲಸ್ಥರಿಗೆ ಅದಕ್ಕೆ ತಗಲುವ ಬೆಲೆಗೂ ಔಷಧಿಯನ್ನು ಒದಗಿಸಲು ಏರ್ಪಡಿಸಿದೆ. [illegible] ಈ ರೋಗ ಕಾಣಿಸಿಕೊಂಡ [illegible] ವೈದ್ಯರ ಚಿಕಿತ್ಸೆ ಪಡೆಯುವುದಲ್ಲದೆ ಪೌರಸಭೆಗೂ ತಿಳಿಸಬೇಕು [illegible] ಪೌರಸಭೆ [illegible]

[illegible]

Edited, printed and published by A. R. Nagarajan, at the Sadhvi Press, D [illegible] Road, Mysore

ಮಣ್ಣಿನಿಂದ ಕ್ರಿಮಿ ನಾಶಕ

[illegible] ಅಮೆರಿಕ [illegible] ಮಣ್ಣಿನಲ್ಲಿ ಸಿಗುವ ಒಂದು ಕ್ರಿಮಿಯಿಂದ ನಾಶವಾಗುವುದೆಂದು ಗೊತ್ತುಮಾಡಲಾಗಿದೆ. ಈ ಬಗ್ಗೆ ಅಮೆರಿಕದಲ್ಲಿ ಹಲವು ಶೋಧನೆಗಳಾಗುತ್ತಿವೆ. ಮೊದಲು ಪ್ರಾಣಿಗಳ ಮೇಲೆ ಪ್ರಯೋಗಗಳನ್ನು ಮಾಡಲಾಗುತ್ತದೆ.

ಒಂದಕ್ಕೆ ಮೂವತ್ತೊಂದು

ಅಮೆರಿಕದ ನೌಕಾ ಕ್ಯಾರಿಯರ್ ವಿಮಾನಗಳು ಪೆಸಿಫಿಕ್ಕಿನಲ್ಲಿ ಕಳೆದ ತಮ್ಮ ಒಂದು ವಿಮಾನಕ್ಕೆ ಜಪಾನರ ಮೂವತ್ತೊಂದು ವಿಮಾನಗಳನ್ನು ಹೊಡೆದುರುಳಿಸಿವೆ ಎಂದು ಈಗ ಗೊತ್ತಾಗಿದೆ. ಇದು ಗಗನ ಯುದ್ಧಕ್ಕೆ ಮಾತ್ರ ಸಂಬಂಧಪಟ್ಟಿದ್ದು. ಭೂಮಿಯ ಮೇಲೆ ನಾಶಮಾಡಿರುವುದಕ್ಕಿಲ್ಲ.

ಫೈಟರ್ ವಿಮಾನದ ಪ್ರಮಾಣ

ಅಮೆರಿಕದಲ್ಲಿ ಹೊಸದಾಗಿ ತಯಾರಿಸಲ್ಪಡುವ ಫೈಟರ್ ವಿಮಾನಗಳು ಬಹು ದೊಡ್ಡದಾಗುತ್ತಿವೆ. ಅಮೆರಿಕದ [illegible] ಸಾಮಾನ್ಯ ಭಾರಗಳಲ್ಲಿ ಬೆಳೆಯುವ ಪದಾರ್ಥವನ್ನು ತೆಗೆಯುವಷ್ಟು [illegible] ಅವುಗಳಿಗಿರುತ್ತವೆ. ಎಂದರೆ, ಒಣಗಿದ [illegible] ೭೦ ಸಾವಿರ [illegible], ಇಂಗಿಸಿದ ಹಾಲು ೬೦ ಸಾವಿರ ಬ್ಯಾರೆಲ್, ೩೦ ಸಾವಿರ ಬೇಲ್ [illegible], ೧೪ ಸಾವಿರ [illegible], ೧೯,೮೦೦ [illegible] ೬೦೦ [illegible] —ಇವಿಷ್ಟನ್ನು [illegible]

ಗುಜರಾತಿನಲ್ಲಿ ಭಾರಿ ಮಳೆ

ಗುಜರಾತ್ ಜಿಲ್ಲೆಯಲ್ಲೆಲ್ಲಾ ಭಾರಿ ಮಳೆಗಳಾಗಿವೆ. [illegible] ಒಂದೇ ದಿನ [illegible] ಅಂಗುಲಕ್ಕಿಂತ ಹೆಚ್ಚು ಮಳೆಯು ಸೂರತ್ತಿನಲ್ಲಿ ಆಗಿದೆ. ಈ ತಿಂಗಳಲ್ಲಿ ಈ ಪ್ರಮಾಣದ ವರೆಗೆ ೨೭ ಅಂಗುಲ ಆಗಿದೆ.

ನವಯೌವನ

ಶಕ್ತಿ, ಬಲಹೀನತೆ, [illegible]
[illegible]
ಮದನಮಂಜರಿ
[illegible]
ಡಬ್ಬಿ ಒಂದಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 [illegible]
ಅಶೋಕಾ ಫಾರ್ಮಸಿ
[illegible]

ಮಹಿಳಾ ಉಪಾಧ್ಯಕ್ಷರು

ಸ್ವ. ಸು.] ಬೆಂಗಳೂರು ೧೭

ಬೆಂಗಳೂರು ಜಿಲ್ಲಾ ಬೋರ್ಡ್ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರೂ ಶ್ರೀ ಸೋಲೂರು ಸಿದ್ದಪ್ಪನವರೂ ಉಮೇದುವಾರರಾಗಿದ್ದರು. ಶ್ರೀಮತಿಯವರಿಗೆ ೧೮ ಓಟುಗಳೂ ಸಿದ್ದಪ್ಪನವರಿಗೆ ೮ ಓಟುಗಳೂ ಬಂದು ಶ್ರೀಮತಿಯವರು ಚುನಾಯಿಸಲ್ಪಟ್ಟರು. ಉಪಾಧ್ಯಕ್ಷಸ್ಥಾನಕ್ಕೆ ಚುನಾಯಿತರಾಗಿರುವ ಪ್ರಥಮ ಮಹಿಳೆ ಇವರೇ.

ಶ್ರೀವಾಸ್ತವರ ಆಗಮನ

ಇಂಡಿಯಾ ಸರ್ಕಾರದ ಆಹಾರ ಸಚಿವರಾದ ಶ್ರೀ ಜೆ. ಪಿ. ಶ್ರೀವಾಸ್ತವರವರು ಆಗಸ್ಟ್ ಮೊದಲನೇ ವಾರದಲ್ಲಿ [illegible] ಮೈಸೂರು, ಬೆಂಗಳೂರುಗಳಿಗೆ ಭೇಟಿಕೊಡುವರೆಂದು ಗೊತ್ತಾಗಿದೆ.

ಧನ ಸಹಾಯವಿಲ್ಲ

ಬೆಂಗಳೂರು ಪೌರಸಭೆಗೆ ನೀರು ಸರಬರಾಜು ಸೌಲಭ್ಯಕ್ಕಾಗಿ ೩೦ ಸಾವಿರ ರೂ [illegible] ಕೊಡಬೇಕೆಂದು ಸಭೆಯವರು ಪುನಃ ನಿರ್ಣಯಿಸಿದ್ದುದರ ಮೇಲೆ ಮತ್ತೆ ಆಗುವುದಿಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ.

ಕೂಲಿಗಾರರ ಪ್ರಾತಿನಿಧ್ಯ

ಬೆಂಗಳೂರು ಪೌರಸಭೆಯಲ್ಲಿ ಕೂಲಿಗಾರರ ಪ್ರತಿನಿಧಿಯೊಬ್ಬರನ್ನು ಚುನಾಯಿಸುವಂತೆ ಅವಕಾಶ ಕಲ್ಪಿಸಬೇಕೆಂದು ಸಭೆಯವರು ನಿರ್ಣಯಮಾಡಿದ್ದ ವಿಷಯದಲ್ಲಿ ಪುನಃ ಸಭೆಯು ಆಲೋಚನೆಮಾಡುವುದಕ್ಕೆ ಮುಂಚೆ ನಿರ್ಣಯಮಾಡಿ ಕಳುಹಿಸಿದರೆ ಪರ್ಯಾಲೋಚಿಸಲಾಗುವುದೆಂದು ಸರ್ಕಾರದವರು ತಿಳಿಸಿದ್ದಾರೆ.

ಅಡ್ಮಿರಲ್ ಸಿಗೆಟರೋ ಶಿಮಾಡಾ ಎಂಬ ಜಪಾನಿ ನೌಕಾ ಮಂತ್ರಿಯನ್ನು ತೆಗೆದು ಅವರ ಸ್ಥಾನದಲ್ಲಿ ಅಡ್ಮಿರಲ್ ನಾಸುನ್ನಿ ನೊಮುರಾ ಎಂಬುವರನ್ನು ನೇಮಿಸಲಾಗಿದೆ.

ಒಗೆಯಬಹುದಾದ ಕಾಗದ

ಯುದ್ಧದ ಪರಿಣಾಮವಾಗಿ ಅಮೆರಿಕವು ಹೊಸ ಬಗೆಯ ಒಂದು ಕಾಗದವನ್ನು ಕಂಡು ಹಿಡಿದಿದೆ. ಅದನ್ನು ಒಗೆದು ಮತ್ತೆ ಮತ್ತೆ ಉಪಯೋಗಿಸಬಹುದು. ಡೇರೆಗಳನ್ನೂ ಉಡುಪುಗಳನ್ನೂ ಸಹ ಮಾಡಬಹುದು. ಈ ಕಾಗದದಿಂದ ಮಾಡಿದ ಪ್ಯಾರಾಚೂಟುಗಳಲ್ಲಿ ಸಾಮಾನುಗಳನ್ನು ರವಾನಿಸಬಹುದು. ಉತ್ತಮ ಡಬ್ಬಿಗಳ ಬದಲು ಕಾಗದದ ಚೀಲಗಳನ್ನೇ ಉಪಯೋಗಿಸಬಹುದು. ಕಾಗದವು ತಯಾರಾಗುವಾಗ ಒಂದು ಬಗೆಯ ಮೇಣವನ್ನು ಸೇರಿಸುವುದರಿಂದ ಇಷ್ಟು ಪ್ರಯೋಜನಗಳು ಕಂಡುಬರುವುವು. ಇದರಿಂದ ಕಾಗದದ ಬಣ್ಣವು ವ್ಯತ್ಯಾಸವಾಗುವುದಿಲ್ಲ.

ರಾಜರುಗಳಿಗಾಗಿ ಪ್ರಚಾರ ಸಮಿತಿ

ನರೇಂದ್ರ ಮಂಡಲದ ಸ್ಥಾಯಿ ಸಮಿತಿಯು ಬೊಂಬಾಯಿನಲ್ಲಿ ಸೇರಿ ಸಂಸ್ಥಾನಗಳ ವಿಷಯದಲ್ಲಿ ಸಾಮಾನ್ಯವಾಗಿ ಹರಡಿರುವ ಅಜ್ಞಾನ ಮತ್ತು ತಪ್ಪುಭಾವನೆಗಳನ್ನು ಹೋಗಲಾಡಿಸಿ ಸಂಸ್ಥಾನಗಳ ಪರವಾಗಿ ಪ್ರಚಾರ ನಡೆಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ತೀರ್ಮಾನಿಸಿತು.

ಜಿನ್ನಾ ಭೇಟಿಗೆ ಸಿದ್ಧ

ತಾವು ಸ್ವತಃ ಜಿನ್ನಾರವರನ್ನು ಭೇಟಿ ಮಾಡುವಿರಾ? ಎಂದು ಗಾಂಧೀಜಿಯವರನ್ನು ಕೇಳಲು ನಾನು ಯಾವಾಗಲೂ ಅವರನ್ನು ಕಾಣಲು ಸಿದ್ಧನಾಗಿದ್ದೇನೆ. ಎಂದು ಉತ್ತರ ಕೊಟ್ಟರು.

೪೦ ಕೋಟಿ ಡಾಲರ್ ಕೊಡಬೇಕು

ಎಲ್ಲ ದೇಶಗಳಿಂದಲೂ ಒಟ್ಟು ೮೦೦ ಕೋಟಿ ಡಾಲರುಗಳನ್ನು ಅಂತರಾಷ್ಟ್ರೀಯ ನಿಧಿಗಾಗಿ ಶೇಖರಿಸಬೇಕೆಂದು ಗೊತ್ತಾಗಿದೆ. ಹಿಂದೂಸ್ಥಾನವೂ ಇದಕ್ಕೆ ೪೦ ಕೋಟಿ ಡಾಲರು ಕೊಡಬೇಕು.

[illegible]

[illegible]

[illegible]

ಪ್ರತಿ ದಿನ ೩ ಆಟಗಳು ನ್ಯೂ ಅಪೇರಾ ಟಾಕೀಸ್

ರಾಗಿಣಿ, ಮಜ್ನು, ದೂಸಲೇಮಿ, ರಾಣಿ ಮುಂತಾದ ನಟನಟಿಯರು ಪಾತ್ರ ವಹಿಸಿರುವ ಹಿಂದೀ ಭಾಷೆಯ ಚಿತ್ರ

19-7-44 ರಿಂದ ★ ನಿ ಶಾ ನಿ ★

ಸಂಪುಟ ೨] ಬುಧವಾರ ೧೯--೭--೪೮ [ಸಂಚಿಕೆ ೩೦೩

ಚಿಕಾಗೋ ಬಂದರಿನಲ್ಲಿ ಭಾರಿ ಆಸ್ಫೋಟನೆ

ಹಿಂದೂ ಮಹಾಸಭೆಗೆ ಸರ್ ಮಿರ್ಜಾರವರ ಸವಾಲ್

ತಿರುಪತಿ ದೇವಸ್ಥಾನಗಳಿಗೆ ರೇಷನ್ ಖೋತಾ

'ಸಾಧ್ವಿ' ಪತ್ರಿಕಾ ದ್ವಿತೀಯ ವಾರ್ಷಿಕೋತ್ಸವ

ತಾ|| ೨೧-೭-೪೮ ನೇ ಶುಕ್ರವಾರ
ಸಾಯಂಕಾಲ ಆರೂವರೆ ಗಂಟೆಗೆ
ಡಿ ಸುಬ್ಬಯ್ಯ ರಸ್ತೆಯಲ್ಲಿರುವ "ಸಾಧ್ವಿ" ಆಫೀಸಿನಲ್ಲಿ
ಮೇಲ್ಕಂಡ ಸಮಾರಂಭವು ನಡೆಯುವುದು
ಶ್ರೀ|| ಕೆ. ಟಿ. ಭಾಷ್ಯಂರವರು ಅಗ್ರಾಸನ ವಹಿಸುವರು

ಕಾರ್ಯಕ್ರಮ:

೧. ಮಂಗಳಾಚರಣೆ · ಸರಸಕವಿ ಭಾರತಿ, 'ಅಕ್ಷರವಿ ರತ್ನ' ವೇ|| ಬ್ರ|| ವೆಂಕಟಸುಬ್ಬಶಾಸ್ತ್ರಿಗಳವರಿಂದ.
೨. ಭಾರತ ವಾಚನ: ಶ್ರೀಮಾನ್ ಎ ಕಲ್ಲೇಶಯ್ಯನವರಿಂದ
೩. ವೀಣಾ ವಾದನ: ಆ|| ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು ಮತ್ತು ವಿದ್ವಾನ್ ವಿ ದೊರೆಸ್ವಾಮಿಯ್ಯಂಗಾರ್, ವಿದ್ವಾನ್ ದೇಶಿಕಾಚಾರ್ಯರ ಕೊಳಲು
೪. ಅಧ್ಯಕ್ಷರ ಭಾಷಣ
೫. "ಗಾನ ಕೋಕಿಲ" ಕುಮಾರಿ ಎಸ್. ಲಕ್ಷ್ಮಮ್ಮನವರ ಗಾನ; ವಿದ್ವಾನ್ ಎಚ್. ವಿ ಕೃಷ್ಣರಾಯರ ಪಿಟೀಲು, ವಿದ್ವಾನ್ ವರದಾಚಾರ್ಯರ ಮೃದಂಗ

ನಮ್ಮ ಚಂದಾದಾರರುಗಳಿಗೆ ಪ್ರತ್ಯೇಕವಾದ ಆಹ್ವಾನವನ್ನು ಕಳುಹಿಸಲು ಅವಕಾಶವಿಲ್ಲ ದಿರುವುದರಿಂದ ಇದನ್ನೇ ಆಹ್ವಾನವೆಂದು ಭಾವಿಸಿ ಅವರು ದಯಮಾಡಿಸ ಬೇಕಾಗಿ ಕೋರುವೆವು. ಸಂಪಾದಕ

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನ

ಮೈಸೂರು ೧೮

ಈ ತಿಂಗಳು ೨೦, ೨೧ ನೇ ತಾ|| ಗಳಲ್ಲಿ ರಾಜಧಾನಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವನ್ನು ನಡೆಸುವಂತೆ ಹಂಗಾಮಿಯಾಗಿ ಗೊತ್ತಾಗಿದೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಆ ಸಮಯಕ್ಕೆ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿ ಕಾಂಗ್ರೆಸ್ಸಿನ ನೀತಿಯನ್ನು ವಿವರಿಸುವರೆಂದು ಗೊತ್ತಾಗಿದೆ

ಲಾವಣಿ

ವಾಣೀ ವಿಲಾಸಪುರದಲ್ಲಿರುವ ಮಹಾಜನ ಹೈಸ್ಕೂಲಿನ ಸಾಹಿತ್ಯ ಸಂಘದಾಶ್ರಯದಲ್ಲಿ ನೆನ್ನೆ ಸಾಯಂಕಾಲ ಶ್ರೀಮಾನ್ ಲಾವಣಿ ವಿಷಕಂಠರಾಯರು ಲಾವಣಿಗಳನ್ನು ಹಾಡಿದರು ಸಾಹಿತ್ಯ ಸಂಘದ ಅಧ್ಯಕ್ಷರಾದ ಶ್ರೀ|| ನಾಡಿಗ ಕೃಷ್ಣಮೂರ್ತಿಯವರು ಬಾಲಕರೆಲ್ಲರೂ ಈಗಿನಿಂದಲೂ ಲಾವಣಿಗಳನ್ನು ಬರೆಯುವುದನ್ನು ಕಲಿಯಬೇಕೆಂದು ಪ್ರೋತ್ಸಾಹಿಸಿದರು. ಶ್ರೀ|| ವಿಷಕಂಠರಾಯರೂ ಕೂಡ ಲಾವಣಿಗಳ ವಿಷಯವಾಗಿ ಮಾತನಾಡಿದರು.

ಡ್ರಾಯಿಂಗ್ ಮಾಸ್ಟರುಗಳ ನಿಯೋಗ

ಮೊನ್ನೆ ವರ್ಧಂತಿ ಸನ್ನಿವೇಶದಲ್ಲಿ ವಿದ್ಯಾ ಇಲಾಖಾಧಿಕಾರಿಗಳಾದ ಮಿ|| ಸುಲ್ತಾನ್ ಮೊಹಿಯುದ್ದೀನರು ರಾಜಧಾನಿಗೆ ಬಂದಿದ್ದಾಗ್ಗೆ ನಗರದ ಡ್ರಾಯಿಂಗ್ ಟೀಚರುಗಳು ಹಲವರು, ಇಲಾಖೆಯು ಇತರ ಉಪಾಧ್ಯಾಯರುಗಳಿಗೆ ಸಂಸ್ಥಾನವಾಳೆ ಸಂಬಳವನ್ನು ಹೆಚ್ಚಿಸಿಕೊಟ್ಟಿರುವಂತೆ ಡ್ರಾಯಿಂಗ್ ಉಪಾಧ್ಯಾಯರುಗಳಿಗೂ ಸಹ ಬಡ್ತಿ ಮಾಡಿಸಿಕೊಡಬೇಕೆಂಬ ಬಗ್ಗೆ ಪ್ರಾರ್ಥನೆ ಮಾಡಿಕೊಂಡರು ಮಿ|| ಮೊಹಿಯುದ್ದೀನರವರು ಎಲ್ಲವನ್ನೂ ಆಲಿಸಿ ಸಾಧ್ಯವಾದಷ್ಟು ಅನುಕೂಲಪಡಿಸಿಕೊಡುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

ಸೆಂಟ್‌ಲೋ ಪ್ರವೇಶ ಮತ್ತು ನಿರ್ಗಮನ

ಅಮೆರಿಕದ ಸೈನ್ಯಗಳು ಸೆಂಟ್‌ಲೋ ನಗರದ ಹೊರಗೆ ಬಿರುಸಿನಿಂದ ಹೋರಾಡಿ ನಗರದ ಎಲ್ಲೆಯೊಳಕ್ಕೆ ಪ್ರವೇಶಿಸಿದರು. ಶತ್ರು ಸಟಕವಾಗಿ ಜರ್ಮನರು ನಡೆಸಿದ ಎರಡು ಧಾಳಿಗಳ ಒತ್ತಾಯದಿಂದ ಅವರು ಹಿಂದಕ್ಕೆ ಬಂದರು. ಸದ್ಯಕ್ಕೆ ಅಮೆರಿಕನರು ನಗರದ ಪೂರ್ವ ಭಾಗದಲ್ಲಿರುವರು. ನೋರ್ಮಂಡಿ ನಗರದ ಬೀದಿಗಳಲ್ಲಿ ಘೋರ ಕದನ ನಡೆಯುತ್ತಿದೆ.

ವಿಷ್ಣುಪುರದ ಬಳಿ ಗ್ರಾಮ ವಶ

ಬಹಳ ಬಿರುಸಾದ ಕದನವನ್ನು ಮಾಡಿ ಮಿತ್ರ ಸೈನ್ಯಗಳು ವಿಷ್ಣುಪುರಕ್ಕೆ ೫ ಮೈಲಿಯಲ್ಲಿರುವ ನಿಂಗ್ ಥೌಖಾಂಗ್ ಖಾಬು ನಾ ಎಂಬ ಗ್ರಾಮವನ್ನು ಹಿಡಿದುಕೊಂಡರು. ಜಪಾನಿನ ಅನೇಕ ಶಸ್ತ್ರಾಸ್ತ್ರಗಳೂ ಮಿತ್ರರ ವಶವಾದುವು. ಅಲ್ಲಿಂದ ಎರಡು ಮೈಲಿ ಮುಂದೆ ಇರುವ ತಿನಾಂಗ್ಗೆ ಗ್ರಾಮವನ್ನೂ ಹಿಡಿಯಲಾಗಿದೆ

ಬ್ರಿಟಿಷರ ಹೊಸ ಧಾಳಿ

ನೇಪಿಲ್ಸ ನೈಋತ್ಯ ಭಾಗದಲ್ಲಿ ಬ್ರಿಟಿಷ್ ಸೈನ್ಯಗಳು ಹೊಸ ಭಾರಿ ದಾಳಿಗಳನ್ನು ಆರಂಭಿಸಿವೆ. ಜರ್ಮನರು ಮದ್ದು ಗುಂಡು. ಫಿರಂಗಿಗಳ ಸಮೇತ ನಗ್ಗಿ ಕೆಲವು [illegible] ಹಿಂದೆ ಬಂದರು

ಹೊಸ ಚಿನ್ನದ ಗಣಿ

ಸ್ವಂ. ಸು. ಪ್ರೋ] ಬೆಂಗಳೂರು ೧೮

ಬೆಂಗಳೂರಿನಿಂದ ೧೦೦ ಮೈಲಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಒಳ್ಳೆಯದ ಬಳಿ ಚಿನ್ನದ ಗಣಿಯನ್ನು ಸ್ಥಾಪಿಸುವ ಪ್ರಯತ್ನವನ್ನು ಸರ್ಕಾರದವರು ಪುನಃ ಕೈಗೊಂಡಿರುವರು. ಇದಕ್ಕೆ ೧೭೦೦೦೦ ರೂ ವೆಚ್ಚವಾಗುವುದೆಂದು ಹೇಳಲಾಗಿದೆ ಈ ಭಾಗ್ಯದಿಂದ ಸರಕಾರಕ್ಕೆ ಫಲ ದೊರೆಯದಿದ್ದರೂ ಈಗ ಸಿಕ್ಕಿರುವ ಅದುರಿನಿಂದಲೇ ಖರ್ಚು ಸ್ವಲ್ಪ ಎಷ್ಟು [illegible] ಹೇಳಲಾಗಿದೆ

ಹಾಸನ ಜಿಲ್ಲೆಯ ಬಂಗಾರದ [illegible] ಗಣಿಯನ್ನು ತೆಗೆಯ ಬಹುದಾಗಿ ಸಲಹೆ ಮಾಡಿದ್ದಾರೆ.

ಕೈಗಾರಿಕಾ ವ್ಯವಸಾಯವನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು ೩,೦೦೦೦ ರೂ. ವೆಚ್ಚದಲ್ಲಿ ಕೆಲವು ಯಂತ್ರಗಳನ್ನು ತರಿಸಿರುವರು

ಮನೆ ತೆಗೆದುಕೊಂಡದಕ್ಕೆ ದಂಡ

ಬೆಂಗಳೂರು ಕಂಟೋನ್ಮೆಂಟ್ ಕಲೆಕ್ಟರರ ಲೈಸೆನ್ಸಿಲ್ಲದೆ ಮನೆಗಳನ್ನು ಬಾಡಿಗೆಗೆ ಕೊಡಲೂ ಕೂಡದು, ಪಡೆಯಲೂ ಕೂಡದು ಅದನ್ನು ಮೀರಿ ಬಾಡಿಗೆಗೆ ತೆಗೆದುಕೊಂಡದ್ದಕ್ಕಾಗಿ [illegible] ದಂಡ, ತಪ್ಪಿದರೆ [illegible] ಸಜಾ ವಿಧಿಸಲ್ಪಟ್ಟಿತು.

ಬಂದರಿನಲ್ಲಿ ಆಸ್ಫೋಟನ

ಬೊಂಬಾಯಿನಲ್ಲಿ ಆದಂತೆಯೇ ಚಿಕಾಗೋ ಬಂದರಿನಲ್ಲಿಯೂ ಭಾರಿ ನೌಕಾ ಸಂಬಂಧದಲ್ಲಿ ಆಸ್ಫೋಟನೆಯಾಗಿ ೩೦೦ ಜನರು ಮಡಿದಿರಬಹುದೆಂದೂ ನೂರಾರು ಜನರಿಗೆ ಗಾಯವಾಗಿದೆಯೆಂದೂ ಹೇಳಲಾಗಿದೆ ಚಿಕಾಗೋ ಬಂದರಿನಲ್ಲಿದ್ದ ನೌಕಾ ಮದ್ದುಗುಂಡುಗಳ ಉಗ್ರಾಣಕ್ಕೆ ಬೆಂಕಿಬಿದ್ದು ಅನೇಕ ನೌಕಾಧಿಕಾರಿಗಳು ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾರೆ ೪೦ ಮೈಲಿ ದೂರಕ್ಕೆ ಈ ಆಸ್ಫೋಟನೆಯು ಶಬ್ದವು ಕೇಳಿಸಿತು. ನಗರದ ಕಿಟಕಿಗಳು ಒಡೆದುವು. ಆ ನಷ್ಟ ಎಷ್ಟಾದವು ವಸ್ತುತಃ ನಿಲುಕದ ವಾರ್ತೆ ತಿಂದೂ ಹೇಳಲಾರದು ಕಾರಣ ಗೊತ್ತಾಗಿಲ್ಲ

ಇಂದೂರಿನಲ್ಲಿ ನಿಷೇಧ ರದ್ದು

೧೯೪೨ನೇ ಆಗಸ್ಟಿನಲ್ಲಿ ಇಂದೂರು ಸಂಸ್ಥಾನದ ಪ್ರಜಾ ಮಂಡಲಿತ್ರ ಪಾಮಾಜ್ಯವೇ ಸರ್ಕಾರದ ಸ್ಥಾನಗಳ ಕಾನೂನು ಭಂಗವನ್ನು ಆರಂಭಿಸಿದೆಯೆಂದು ನಿರ್ಣಯ ಮಾಡಿದ್ದರಿಂದ ಅವನ್ನು ಅಕ್ರಮ ಸಂಸ್ಥೆಯೆಂದು ಸರ್ಕಾರದವರು ಸಾರಿದ್ದರು ಅವರೆ ಮುಖಂಡರುಗಳನ್ನು ಬಿಡುಗಡೆ ಮಾಡಿ [illegible] ನಿರ್ಣಯವನ್ನು [illegible] ಹಿಂತೆಗೆದು [illegible] ಹಂಗಾಮಿಯಾಗಿ ಈ ನಿರ್ಬಂಧವನ್ನು ತೆಗೆದುಹಾಕಿದ್ದಾರೆ.

ತಿರುಪತಿ ದೇವಸ್ಥಾನಗಳಿಗೆ ರೇಷನ್ ಖೋತ

ತಿರುಪತಿ ದೇವಸ್ಥಾನಗಳಿಗೆ ಅದರಲ್ಲೂ ಮುಖ್ಯವಾಗಿ ಶ್ರೀ ಗೋವಿಂದರಾಜಸ್ವಾಮಿ ಮತ್ತು ರಾಮಸ್ವಾಮಿ ದೇವಾಲಯಗಳಲ್ಲಿ ರೇಷನನ್ನು ಕನಿಷ್ಠ ದರ್ಜೆಗೆ ಇಳಿಸಲಾಗುವುದೆಂದು ಗೊತ್ತಾಗಿದೆ ಪೋರ್ಟಿನಿಂದ ಬರುವವರಿಗೆ ಇನ್ನು ಮೇಲೆ ಪ್ರಸಾದವನ್ನು ಸಹ ಕೊಡುವುದಿಲ್ಲ.

ಮಿರ್ಜಾರವರ ಸವಾಲ್

ಜೈಪುರ ಸಂಸ್ಥಾನದ ವಿಷಯವಾಗಿ ಬಂದಿರುವ ಅಪವಾದನೆಗಳ ಬಗ್ಗೆ ಹಿಂದೂ ಮಹಾಸಭೆಯ ನಾಯಕರೊಬ್ಬರಿಗೆ ಸರ್ ಮಿರ್ಜಾ ಇಸ್ಮಾಯಿಲರು ಒಂದು ಸವಾಲನ್ನು ಹಾಕಿ ಅವರು ಜಯಪುರಕ್ಕೆ ಬಂದು ನೋಡಿ ತಮ್ಮ ಮೇಲೆ ಬಂದಿರುವ ಆರೋಪಣೆಗಳು ನಿರಾಧಾರವಾದುದೆಂದು ಕಂಡುಬಂದರೆ ಮಹಾ ಸಭೆಯು ತಮಗೆ ಬಹಿರಂಗವಾಗಿ ಕ್ಷಮಾಪಣೆ [illegible] ಮಾಡಬೇಕೆಂದೂ ಜಯಪುರದಲ್ಲಿ ಎಲ್ಲಿಯಾದರೂ ದೊಡ್ಡ ಕಸವಿದ್ದರೆ ಹೀಗೆ ಮಾಡಬೇಕೆಂದೂ ಸೂಚಿಸಿದ್ದಾರೆ

ಇನ್ನೊಂದು ಕ್ಷಾಮಭೀತಿ

ಕಲ್ಕತ್ತಾ ಪೌರಸಭಾಧ್ಯಕ್ಷರು ಬಂಗಾಳದಲ್ಲಿ ಮತ್ತೊಂದು ಕ್ಷಾಮವು ಬರಬಹುದೆಂದು ಹೆದರುತ್ತಿದ್ದಾರೆ ತಾ|| ೫೦ ರಷ್ಟು ಬೆಳೆ ನಷ್ಟವಾಗಿದೆ. ಎರಡು ಕೋಟಿ ಕಡಮೆಯಿಲ್ಲದ ಜನರು ತೊಂದರೆಗೆ ಒಳಗಾಗುವರೆಂದು ಹೇಳಲಾಗಿದೆ. ರೋಗರುಜಿನಗಳೂ ಹಬ್ಬುವ ಸಂಭವವಿದೆ

ಒಂದು ವಾರದಲ್ಲಿ ಬಿಡುಗಡೆಯೋ?

ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸದಸ್ಯರು ಇನ್ನು ಒಂದು ವಾರದಲ್ಲಿ ಬಿಡುಗಡೆಯಾಗುವರೆಂಬುದು ಕಲ್ಕತ್ತೆಯ ಕ್ರಮಬದ್ಧ ರಾಜಕೀಯ ವಲಯಗಳ ಅಭಿಪ್ರಾಯವಾಗಿದೆ ಒಪ್ಪಂದವಾಗುವುದೆಂದು ಪ್ರಮುಖರು ನಿರೀಕ್ಷಿಸುತ್ತಿದ್ದಾರೆ ಯಾವ ರೀತಿ ಆಗುವುದೆಂಬುದು ನಿಜವಾಗಿ ಗೊತ್ತಿಲ್ಲ. ಗೌರ್ನರುಗಳ ಸಲಹೆಯನ್ನು ತೆಗೆದುಕೊಳ್ಳಲಾಗುತ್ತಿದೆ ದೆಹಲಿಗೂ ಲಂಡನ್ನಿಗೂ ಈ ಬಗ್ಗೆ ಪತ್ರವ್ಯವಹಾರವಾಗುತ್ತಿರುವುದೆಂದು ಹೇಳಲಾಗಿದೆ

ದೆಹಲಿಯ ಪಲ್ಲವಿ

ಬಾರ್ಡರ್ ಮೇಲ್ಪಂಕ್ತಿ, ಮಿ|| ಅಮೆರಿಯ ಇವರ ರಾಷ್ಟ್ರೀಯ ಸರ್ಕಾರ ಸ್ಥಾಪನೆ ವಿಷಯದಲ್ಲಿ [illegible], ಇಂಡಿಯಾ ಸರ್ಕಾರದವರು [illegible] ಲೀಗಿನೊಡನೆ ಒಪ್ಪಂದವಿಲ್ಲದೆ ಶಸ್ತ್ರ [illegible] ಬದಲಾಯಿಸಬೇಕು ಸಾಧ್ಯವಿಲ್ಲವೆಂದು ಹೇಳುತ್ತಿರುವುದಾಗಿ ಗೊತ್ತಾಗಿದೆ

ರೇಷನ್ ಡಿಪೋ

ನಾಳೆ ಪೂರ್ಣಗ್ರಹಣವಾದ್ದರಿಂದ ಮೈಸೂರು ನಗರದ ರೇಷನ್ ಡಿಪೋಗಳಿಗೆ ಬೇಗ, ರಜಾ. ಸಂಜೆ ಡಿಪೋ [illegible]

ಮುಂಬೈ ಪೌರಸಭೆ

[illegible] ಪ್ರಕಟ [illegible]

ಅಂಚೆ ನೌಕರರ ಸಮ್ಮೇಳನದ ನಿರ್ಣಯಗಳು

ಮೈಸೂರು ೧೮

ಮೊನ್ನೆ ಮೈಸೂರಿನಲ್ಲಿ ನಡೆದ ಅಂಚೆ ನೌಕರರ ಸಮ್ಮೇಳನದಲ್ಲಿ ಸರ್ವಾನುಮತದಿಂದ ತೀರ್ಮಾನವಾದ ನಿರ್ಣಯಗಳು :—

೧. ಅಂಚೆ ಇಲಾಖೆಯ ಡೆಲಿವರಿ ಏಜೆಂಟ್ಸ್, ಮೇಲ್ ಕ್ಯಾರಿಯರ್ಸ್ ಮುಂತಾದ ಚಿಕ್ಕ ನೌಕರರನ್ನೂ ಮೇಲ್ ಜವಾನರು ಮ್ಯಾರರ್ಸ್‌ಗಳ ಅಂತಸ್ತಿಗೆ ಸೇರಿಸಿ, ಪೆನ್ಷನ್ ರಜಾ ವಗೈರೆ ಸೌಕರ್ಯಮಾಡಿಕೊಡಬೇಕು.

೨. ಒಬ್ಬನೇ ಮೇಲ್ ಜವಾನನಿದ್ದು ಹಗಲು ಕಛೇರಿ ಕೆಲಸ, ರಾತ್ರಿ ರೈಲ್ವೆ ಸ್ಟೇಷನ್ನಿನಲ್ಲಿ ಚೀಲ ಕೊಡುವುದು ಕೆಲಸಮಾಡುತ್ತಿರುವ ಆಫೀಸುಗಳಲ್ಲೆಲ್ಲಾ ಹೆಚ್ಚಿಗೆ ಭತ್ಯ ಕೊಡಬೇಕು.

೩. ಹಂಗಾಮಿ ಗುಮಾಸ್ತರುಗಳನ್ನು ಒಂದು ವರ್ಷಾನಂತರ ಮುತ್ತಾವ ಪರೀಕ್ಷೆ ವಗೈರೆ ಇಟ್ಟು ಆತಂಕಗಳನ್ನೂ ತರದೆ ಖಾಯಂ ಮಾಡಬೇಕು.

೪. ಹೊಸ ಮತ್ತು ಹಳೆಯ ಪೋಸ್ಟ್ ಮೇನ್ ಮುಂತಾದ ನೌಕರರುಗಳ ಸಂಬಳ ಸಾರಿಗೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲದಂತೆ ಮಾಡಬೇಕು. ರುಟಗ್ಗಿ ೧೯೩೧ ರ ವಿಧಿ ನಿಯಮ ವಜಾ ಮಾಡಬೇಕು.

೫. ಎಲ್ಲಾ ಕೆಳ ದರ್ಜೆಯ ನೌಕರರನ್ನೂ ಕಾಲಸ್ಥಿತಿಯು ಬಹಳ ಕಠಿಣವಾಗಿರುವುದರಿಂದ ಖರ್ಚು, ಸಂಬಳ ವಗೈರೆ ಕಮ್ಮಿ ಇರುವುದರಿಂದಲೂ ರಜಾ-ಭತ್ಯಾ ಮುಂತಾದ ವಿಚಾರಗಳಲ್ಲಿ ಉತ್ತಮ ದರ್ಜೆಯ ನೌಕರರಂತೆ ಭಾವಿಸಬೇಕು.

೬. ಒಬ್ಬೊಬ್ಬರೇ ನೌಕರರುಗಳಿರುವ ಕಡೆ ಎಂಥ ಕಷ್ಟಬಂದರೂ, ರಜಾ ಮಂಜೂರಾದರೂ ಅವರು ಉಪಯೋಗಿಸಿಕೊಳ್ಳುವಂತಿಲ್ಲವಾದುದರಿಂದ ಹೆಚ್ಚಿಗೆ ರಿಲೀವಿಂಗ್ ನೌಕರುಗಳನ್ನು ನೇಮಿಸಬೇಕು.

೭. ಹಾಸನ, ಅರಸೀಕೆರೆಯ ರೈಲ್ವೆ ಸ್ಟೇಷನ್‌ಗಳಿಗೆ ರಾತ್ರಿ ಡ್ಯೂಟಿಗೆ ಹೆಚ್ಚಿಗೆ ನೌಕರರನ್ನು ನೇಮಿಸಬೇಕು.

೮. ಹೆಚ್ಚಿನ ವಿದ್ಯಾ ಯೋಗ್ಯತೆ ಇಲ್ಲಿ ಇಲ್ಲದಿರುವ ಪರ್ಮನೆಂಟ್ ಕೆಲಸವಿಲ್ಲದ ಎಲ್ಲ ಹಂಗಾಮಿ ಮತ್ತು ಖಾಯಂ ನೌಕರರುಗಳನ್ನು ಪ್ರಿವಿಲೇಜ್ ಲೀವ್‌ಗೆ ಉಳಿಸಿಕೊಳ್ಳಲು ಅವಕಾಶ ಕೊಡಬೇಕು.

೯. ಎಲ್ಲಾ ಕೆಳ ದರ್ಜೆ ನೌಕರರಿಗೂ ೨೦ ರೂ ಗೆ ಕಮ್ಮಿ ಇಲ್ಲದ ತಾತ್ಕಾಲಿಕ ಭತ್ಯ ಕೊಡಬೇಕು.

೧೦. ಹೆಚ್ಚಿನ ಕೆಲಸ ಮಾಡುವ ಕೆಲಸಕ್ಕೆ ಮೀರಿದ ನೌಕರರಿಗೆಲ್ಲಾ ಹೆಚ್ಚಿಗೆ ಭತ್ಯ ಕೊಡಬೇಕು.

೧೧. ಅನಾರೋಗ್ಯಕರವಾದ ಸ್ಥಳಗಳಲ್ಲಿರುವ ಅಂಚೆ ನೌಕರರಿಗೂ ಮೈಸೂರು ಸರ್ಕಾರದ ಇತರ ನೌಕರರಂತೆ ಹೆಚ್ಚಿಗೆ ಭತ್ಯ ಕೊಡಬೇಕು.

೧೨. ಮೈಸೂರು ಸರ್ಕಾರದ ಇತರ ನೌಕರರಂತೆ ಚಿನ್ನದ ಗಣಿಯಲ್ಲಿರುವ ಅಂಚೆ ನೌಕರರಿಗೂ ವಿಶೇಷ ಸ್ಥಳ ಭತ್ಯ ಕೊಡಬೇಕು.

೧೩. ಮೈಸೂರು ಸಂಸ್ಥಾನವು ಸಾಮಾನ್ಯವಾಗಿ ಶೀತ ಪ್ರದೇಶವಾಗಿರುವುದರಿಂದ ಸಂಸ್ಥಾನದ ಎಲ್ಲಾ ಪೋಸ್ಟ್‌ಮೇನ್ ಮತ್ತು ಕೆಳ ದರ್ಜೆಯ ನೌಕರರಿಗೂ ಉಲ್ಲನ್ ಕೋಟ್ ಕೊಡಬೇಕು

೧೪. ಶುಚಿ ಮತ್ತು ಆರೋಗ್ಯಕರವಾಗಿರುವ ಸಲುವಾಗಿ ಎಲ್ಲಾ ನೌಕರರಿಗೂ ಯೂನಿಫಾರಂ ಅನ್ನು ೨ ರಿಂದ ೩ ಸೆಟ್ಟಿಗೆ ಏರಿಸಬೇಕು.

೧೫. ಎಲ್ಲಾ ದರ್ಜೆಯ ನೌಕರರೂ ಯಾವಾಗಲೂ ಮಳೆ, ಗಾಳಿಯಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಅವರಿಗೆ ಛತ್ರಿ ಮತ್ತು ಪಾದರಕ್ಷೆಗಳನ್ನು ಒದಗಿಸಿಕೊಡಬೇಕು.

೧೬. ಹಳ್ಳಿಯ ಪೋಸ್ಟ್ ಮ್ಯಾನನಿಗೆ ದಿನಕ್ಕೆ ೧೦ ಮೈಲಿಗಿಂತ ಹೆಚ್ಚಿಗೆ ಪ್ರಯಾಣ ಕೊಡಕೂಡದು. ಮತ್ತು ವಾರಕ್ಕೆರಡು ಸಲ ಟಪ್ಪಾಲು ಹಂಚುವುದನ್ನು ನಿಲ್ಲಿಸಿ ವಾರಕ್ಕೊಂದು ಸಲ ಮಾಡಬೇಕು.

೧೭. ಮೈಸೂರು ನಗರ ಬಹಳ ದೊಡ್ಡದಾಗಿರುವುದರಿಂದ ಈಗಿರುವ ಪೋಸ್ಟ್ ಮೇನ್ ಸಾಲದು, ಹೆಚ್ಚಿಸಬೇಕು.

೧೮. ಸ್ಥಳಕ್ಕೆ ತಕ್ಕಂತೆ ಎಲ್ಲಾ ಕಡೆಯಲ್ಲಿಯೂ ಮನೆ ಬಾಡಿಗೆ ಕೊಡಬೇಕು.

೧೯. ಹಂಗಾಮಿ, ಖಾಯಂ ಅಥವ ಪೆನ್ಷನ್ ನೌಕರರು ಯಾರೇ ಮೃತರಾದರೂ ಅವರ ಕುಟುಂಬಗಳಿಗೆ ವಿಶೇಷ ಪರಿಹಾರ ನಿಧಿ ಕೊಡಬೇಕು.

೨೦. ಎಲ್ಲಾ ಪೋಸ್ಟ್‌ಮೇನ್ ಮತ್ತು ಕೆಳ ದರ್ಜೆಯ ನೌಕರರಿಗೂ (ಗ್ರೇಡ್‌ಲಿಸ್ಟ್) ತಯಾರಿಸಿ ಎಲ್ಲಾ ಪೋಸ್ಟಾಫೀಸಿಗೂ ಕೊಡಬೇಕು

೨೧. ಈಗ ಈ ಸಂಘಕ್ಕೆ ಇರುವ ಮೈ॥ ಸಂ॥ ಪೋಸ್ಟ್‌ಮೇನ್ ಮತ್ತು ಲೋಯರ್ ಗ್ರೇಡ್ ಸ್ಟಾಫ್ ಯೂನಿಯನ್ ಎಂಬ ಹೆಸರನ್ನು ಇನ್ನು ಮುಂದೆ " ಮದ್ರಾಸ್ ಪ್ರೆಸಿಡೆನ್ಸಿ ಪೋಸ್ಟ್‌ಮೇನ್ ಮತ್ತು ಲೋಯರ್ ಗ್ರೇಡ್ ಸ್ಟಾಫ್ ಯೂನಿಯನ್, ಮೈಸೂರು ಸ್ಟೇಟ್ ಬ್ರಾಂಚ್ " ಎಂದು ಬದಲಾಯಿಸಬೇಕು

೨೨. ಮೈಸೂರು ನಗರದಲ್ಲಿ ಈ ಯೂನಿಯನ್ ಒಂದು ಬ್ರಾಂಚ್ ತೆರೆಯಬೇಕು

ಗುರುವಾರದ ಗ್ರಹಣ ವಿಚಾರ

೯-೨೭ ಕ್ಕೆ ಸ್ಪರ್ಶ; ೧-೮ ಕ್ಕೆ ಮೋಕ್ಷ

ಇದೇ ೨೦ ನೇ ತಾ॥ ಗುರುವಾರ ಸೂರ್ಯ ಗ್ರಹಣ ಸಂಭವಿಸುತ್ತದೆ. ಉದಯಾದಿ ಸ್ಪರ್ಶಕಾಲ ಬೆ ೯-೨೭ ಗಂಟೆ; ಮಧ್ಯಕಾಲ ಬೆಳಗ್ಗೆ ೧೧-೧೦ ಗಂಟೆ; ಮೋಕ್ಷಕಾಲ ಮಧ್ಯಾಹ್ನ ೧-೮ ಗಂಟೆ, ಅತ್ಯಂತ ಪುಣ್ಯಕಾಲ ಮಧ್ಯಾಹ್ನ ೩-೪೧ ಗಂಟೆಗೆ. ವಾಯುವ್ಯ ಸ್ಪರ್ಶ, ಆಗ್ನೇಯ ಮೋಕ್ಷ ರಾಹು ಗ್ರಸ್ತ; ಗ್ರಾಸ ಪ್ರಮಾಣ ೧೦೦ ಕ್ಕೆ ಎಂಬತ್ತೊಂದೂವರೆ.

ಸ್ಪರ್ಶಕಾಲದಿಂದ ೧೧-೧೦ ಗಂಟೆ ಒಳಗೆ ತರ್ಪಣಾದಿಗಳನ್ನು ಮಾಡುವುದು ಸೂಕ್ತವಾಗಿದೆ ಈ ಗ್ರಹಣದ ಮೊದಲನೇ ದಿವಸ ಅಂದರೆ ೧೯ ನೇ ಬುಧವಾರ ರಾತ್ರಿ ೯-೨೭ ಗಂಟೆ ಮೇಲೆ ಭೋಜನಾದಿಗಳನ್ನು ಮಾಡಬಾರದು ಗ್ರಹಣಮೋಕ್ಷಾನಂತರ ಭೋಜನಾದಿಗಳನ್ನೂ ಪ್ರಥಮ ತಿಥಿಯ ಕಾಲ ಶ್ರಾದ್ಧವನ್ನೂ ಮಾಡಬಹುದು

(ಶ್ರೀ ಸಂಪತ್ಕೃಷ್ಣಜೋಯಿಸರ ಪಂಚಾಂಗದಿಂದ)

ದೀಪದ ತೊಂದರೆ

ಸ್ವಂ ಸು.] ಕೃಷ್ಣರಾಜನಗರ ೧೭

ಈ ಊರಿನಲ್ಲಿ ರಾತ್ರಿ ೧೦ ಗಂಟೆ ಮೇಲೆ ಎಲೆಕ್ಟ್ರಿಕ್ ದೀಪವನ್ನು ಹಚ್ಚುವರು ರಾತ್ರಿ ವೇಳೆ ೧೦ ಗಂಟೆವರೆವಿಗೂ ಜನಸಂದಣಿಯು ಇರುತ್ತದೆ. ಬೀದಿ ಕಲ್ಲುಗಳು ಮೇಲಕ್ಕೆ ಎದ್ದಿರುವುದರಿಂದ ಜನಗಳು ಎಡವಿ ಘಾಯವಾಗಿ ತೊಂದರೆಪಡುತ್ತಾರೆ. ಮೇಲಿನ ಅಧಿಕಾರಿಗಳು ಗಮನ ಕೊಡಬೇಕು.

ಸೂಚನೆ

ಗುರುವಾರ ೨೦ ನೇ ತಾ॥ ಸೂರ್ಯಗ್ರಹಣ ಪ್ರಯುಕ್ತ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ. ವ್ಯವಸ್ಥಾಪಕ

ಪತ್ರಿ ಸಾಗಿಸಕೂಡದು

ಸ್ವಂ. ಸು.] ಬೆಂಗಳೂರು ೧೮

ರೈಲುಮೂಲಕವಾಗಲಿ, ರಸ್ತೆಮೂಲಕವಾಗಲಿ ಸಂಸ್ಥಾನದಲ್ಲಿ ಬೆಳೆದ ಹತ್ತಿಯನ್ನು ರಹದಾರಿ ಪಡೆಯದೆ ರವಾನಿಸಕೂಡದೆಂದು ಆಜ್ಞೆಯಾಗಿದೆ.

ಮೊಕದ್ದಮೆ ವಜಾ

ವಿಶ್ವಕರ್ನಾಟಕ ಪತ್ರಿಕಾ ಸಂಪಾದಕರಾದ ಶ್ರೀ ಟಿ ಟಿ ಶರ್ಮರವರ ಮೇಲೆ ಶ್ರೀ ಜಯಮೃತ್ಯುಂಜಯರವರು ಹೂಡಿದ್ದ ಮಾನನಷ್ಟ ಮೊಕದ್ದಮೆ ವಿಚಾರಣೆಯ ಕಾಲದಲ್ಲಿ ಫಿರ್ಯಾದಿ ಹಾಜರಿರಲಿಲ್ಲವೆಂದು ನ್ಯಾಯಾಧೀಶರು ಮೊಕದ್ದಮೆ ವಜಾಮಾಡಿದರು.

ಮತಾಂತರ ತಪ್ಪಿತು

ಪರಸ್ಥಳದ ಲಕ್ಷ್ಮಮ್ಮ ಎಂಬೊಬ್ಬ ೧೪ ವರ್ಷದ ಹಿಂದೂ ಬಾಲಿಕೆಯು ಶಿವಮೊಗ್ಗೆಯ ಹಲವು ಪುಂಡರ ಕೈಗೆ ಸಿಕ್ಕಿ ಮತಾಂತರವಾಗುವುದರಲ್ಲಿದ್ದಳೆಂದೂ ಹಿಂದೂ ಮಹಾ ಸಭೆಯವರು ಆಕೆಯನ್ನು ರಕ್ಷಿಸಿ ತಕ್ಕ ವ್ಯವಸ್ಥೆಯನ್ನು ಮಾಡಿರುವರೆಂದೂ ಗೊತ್ತಾಗಿದೆ.

ಇಂಜನೀಯರುಗಳು

ಅಸಿಸ್ಟೆಂಟ್ ಇಂಜನಿಯರುಗಳಾದ ಶ್ರೀ ಡಿ ಎಸ್. ವೆಂಕಣ್ಣ ಮತ್ತು ಕೆ. ರಾಮಶೇಷನ್ ಇವರುಗಳನ್ನು ಅಫಿಷಿಯೇಟಿಂಗ್ ಎಗ್ಸಿಕ್ಯುಟಿವ್ ಇಂಜಿನಿಯರಾಗಿ ಬಡ್ತಿ ಮಾಡಲಾಗಿದೆ.

ಕೋರ್ಟಿನ ವಿನಾಯಿತಿ

ನಂಜನಗೂಡು ತಾ॥ ಸುತ್ತೂರಿನ ಶ್ರೀ ಶಿವರಾತ್ರಿಸ್ವಾಮಿಗಳವರು ಸ್ವತಃ ಸಿವಿಲ್ ಕೋರ್ಟುಗಳ ಮುಂದೆ ಹಾಜರಾಗಬೇಕಾಗಿಲ್ಲವೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ

Edited, printed and published by A. R. Nagarajan, at the Sadhvi Press, D. Subbiah Road, Mysore

ಸ್ತ್ರೀಯರ ಸೌಂದರ್ಯಕ್ಕೆ

ಹೆಂಗಸರ ಅಲಂಕಾರಕ್ಕೆ ಪ್ರಶಸ್ತವಾಗಿ ವ್ಯಾಪಾರ ಕೊಡುವ ಪರಿಮಳದ್ರವ್ಯ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಕ್ಷ್ಮೀ ಬ್ರಾಂಡ್ ಕಾಶ್ಮೀರಪುಡಿ

ಉಪಯೋಗಿಸಿ

ಪ್ರತ್ಯುಪ್ಪಯ್ಯ, ಏನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಬ್ರಾಂಚ್ ... ಕುಂಚಿಟಿಗೆ ಮುಂತಾದುವುಗಳೂ, ಸಿಟಿಯ ಎಲ್ಲಾ ಮೊಹಲ್ಲಾ ರೀಟೇಲ್ ವರ್ತಕರ ಬಳಿ ತೋರುವುದಕ್ಕೆ ಪ್ರತಿಯಾಗಿ ಮಾರಾಟ ಮತ್ತು ಕಮೀಷನ್ ಕೊಡಲ್ಪಡುತ್ತದೆ.

ಪ್ರತಿ ದಿನ ೩ ಆಟಗಳು ನ್ಯೂ ಅಪೇರಾ ಟಾಕೀಸ್

ರಾಗಿಣಿ, ಮಜ್ನು, ರೂಪಲೇಖ, ರಾಣಿ ಮುಂತಾದ ನಟನಟಿಯರು ಪಾತ್ರ ವಹಿಸಿರುವ ಹಿಂದೀ ಭಾಷೆಯ ಚಿತ್ರ

19-7-44 ರಿಂದ ★ ನಿಶಾನಿ ★

ಸಂಪುಟ ೩] ಶನಿವಾರ ೨೨-೭-೪೪ [ಸಂಚಿಕೆ ೨

ಹಿಟ್ಲರ್ ಕೊಲೆಗೆ ನಾಜಿ ನಾಯಕರ ಪಿತೂರಿ

ಲೆಗ್‌ಹಾರ್ನ ಬಂದರು ಮಿತ್ರ ವಶವಾಯಿತು

ಜೈಪುರದಲ್ಲಿ ಉರ್ದು ಭಾಷೆ ಬಗ್ಗೆ ಸತ್ಯಾಗ್ರಹವೇ?

ಹಿಟ್ಲರನ ಕೊಲೆ ಪ್ರಯತ್ನ

ತೀಕ್ಷ್ಣವಾಗ ಸಿಡಿಯುವ್ವ[illegible] ಉಪಯೋಗಿಸಿ ಹಿಟ್ಲರನನ್ನು ಕೊಲ್ಲಲು ಒಂದು ಭಾರಿ ಪ್ರಯತ್ನವು ನಡೆದು ವಿಫಲವಾಯಿತು. ಇಂತಹ ಪ್ರಯತ್ನಗಳಲ್ಲಿ ಇದು ಮೂರನೆಯದೆಂದು ಹೇಳಲಾಗಿದೆ. ಹಿಂದೆ ಕೆಲಸಕ್ಕೆ ಅನರ್ಹರೆಂದು ವಜಾ ಮಾಡಲ್ಪಟ್ಟಿದ್ದ ಕೆಲವು ಸೇನಾಧಿಕಾರಿಗಳ ಪಿತೂರಿಯಿಂದ ಈ ಪ್ರಯತ್ನವು ನಡೆಯಿತೆಂದು ಹೇಳಲಾಗಿದೆ. ಹಿಟ್ಲರನಿಗೆ ಗಾಯಗಳೇನೂ ಆಗಿಲ್ಲ. ಸ್ವಲ್ಪ ಸುಟ್ಟ ಗುರುತುಗಳಾಗಿವೆ. ಲೆ॥ ಜ॥ ಷ್ಮುಂಟ್, ಜ॥ ಒಲ್ರಿಂಟ್, ಲೆ॥ ಜ॥ ಬೋರ್ಮ ಮತ್ತು ಬರ್ಗರ್ ಇವರುಗಳಿಗೆ ಗಾಯಗಳಾಗಿವೆ. ಇದಾದ ಕೂಡಲೇ ಹಿಟ್ಲರನು ತನ್ನ ಕೆಲಸ ಕಾರ್ಯದಲ್ಲಿ ತೊಡಗಿದ್ದನೆಂದು ಹೇಳಲಾಗಿದೆ. ಅನಂತರ ಅವನು ಮುಸೋಲಿನಿಯೊಡನೆ ಸಂಭಾಷಣೆ ನಡೆಸಿದನು. ಆ ನಂತರ ಮಾ॥ ಗೋರಿಂಗನು ಹಿಟ್ಲರನ ಭೇಟಿ ಮಾಡಿದನು. ಒಬ್ಬ ಸೇನಾಧಿಕಾರಿಯು ಮಡಿದನೆಂದು ಹೇಳಲಾಗಿದೆ. ಅವನ ಹೆಸರನ್ನು ತಿಳಿಸಿಲ್ಲ. ಈ ಪಿತೂರಿಯು ಸಂಪೂರ್ಣವಾಗಿ ವಿಫಲವಾಯಿತೆಂದು ಜರ್ಮನ್ ವಾರ್ತಾ ಸಂಸ್ಥೆ ಹೇಳುತ್ತದೆ. ಇದರ ಮುಖಂಡರನ್ನು ಗುಂಡಿನಿಂದ ಹೊಡೆಯಲಾಗಿದೆ. ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜರ್ಮನಿಯಲ್ಲಿ ಗೊಂದಲ

ಹಿಟ್ಲರನ ಮೇಲೆ ನಡೆದ ಕೊಲೆ ಪ್ರಯತ್ನದ ಹಿಂದೆ ದೊಡ್ಡ ಪಿತೂರಿಯೇ ನಡೆದಿದೆಯೆಂದು ಹೇಳಲಾಗಿದೆ. ಜರ್ಮನಿಯಲ್ಲಿ ಅಂತರ್ಯುದ್ಧದ ಪರಿಸ್ಥಿತಿ ಇದೆಯೆಂದು ವರದಿಯಾಗಿದೆ. ಪಿತೂರಿಗಾರರು ತಾವೇ ಸರ್ವಾಧಿಕಾರವನ್ನು ವಹಿಸಿರುವುದಾಗಿ ಹೇಳಿಕೊಂಡು ಗೊಂದಲವನ್ನೆಬ್ಬಿಸುತ್ತಿದ್ದಾರೆ. ಸೈನ್ಯಗಳಿಗೆ ಅವರೂ ಸಹ ಆಜ್ಞೆಗಳನ್ನು ಕೊಡುತ್ತಿದ್ದಾರೆ.

ಮೂರನೇ ಒಂದು ಭಾಗ ಇಟಲಿ ವಶ

ಇದು ಪ್ರಾಂತಗಳನ್ನು ಮಿತ್ರರು ಇಟಲಿ ಸರ್ಕಾರದ ವಶಕ್ಕೆ ವರ್ಗಾಯಿಸಿದ್ದಾರೆ. ರೋಂ ನೇಪಲ್ಸ್ ಸೇರಿ ಇನ್ನು ಮೂರನ್ನು ಆಗಸ್ಟ್ ೧೫ಕ್ಕೆ ವರ್ಗಾಯಿಸಲಾಗುವುದು. ಅವನ್ನು ಹೊತ್ತಿಗೆ ಒಂದುವರೆ ಕೋಟಿ ಪ್ರಜಾ ಸಂಖ್ಯೆಯುಳ್ಳ ಇಟಲಿಯ ಮೂರನೇ ಒಂದು ಭಾಗವನ್ನು ಇಟಲಿ ಸರ್ಕಾರಕ್ಕೆ ಒಪ್ಪಿಸಿದಂತಾಗುತ್ತದೆ.

ಬೊಂಬಾಯಿ ಅನಾಹುತಕ್ಕೆ ಪರಿಹಾರ

ಬೊಂಬಾಯಿಯಲ್ಲಿ ನಡೆದ ಹಡಗಿನ ಅನಾಹುತದಲ್ಲಿ ನಿರ್ಗತಿಕರಾದವರಿಗೆ ಭಾರತ ಕೇಂದ್ರ ಸರ್ಕಾರವು ಸಹಾಯ ಕೊಡಲು ನಿರ್ಧರಿಸಿದೆಯೆಂದು ... ಇವನ್ನು ... ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಯವರ ಪ್ರತಿನಿಧಿಗಳು ... ಹಾನಿ ಸ್ವರೂಪ ಮತ್ತು ... ಅನಾಹುತ ... ಅವಶ್ಯಕತೆಗಳನ್ನು ... ಈ ಅನಾಹುತದಿಂದ ಇತರ ... ಬೇರೆ ನಷ್ಟ ಭಾರ ... ಕಾರಣವಿಲ್ಲವೆಂದು ... [illegible]

ಹಿಟ್ಲರನ ಭಾಷಣ

ಕೊಲೆ ಪ್ರಯತ್ನವು ನಡೆದಮೇಲೆ ಹಿಟ್ಲರನು ಈ ರೀತಿ ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡಿದನು:— "ನನ್ನ ಧ್ವನಿಯನ್ನೇ ಜನರು ಕೇಳುವುದಕ್ಕಾಗಿ ನಾನೀಗ ಮಾತನಾಡುತ್ತಿದ್ದೇನೆ. ಇದು ನನ್ನ ಕೊಲೆಗೆ ಮೂರನೇ ಪ್ರಯತ್ನ. ಕೆಲವು ಜನ ಅಧಿಕಾರಿಗಳ ಗುಂಪಿನವರು ಈ ಪ್ರಯತ್ನವನ್ನು ಮಾಡಿದರು. ನನಗೆ ಯಾವ ಅಪಾಯವೂ ಆಗಿಲ್ಲ ಸುಖವಾಗಿದ್ದೇನೆ. ಜರ್ಮನಿ ಇತಿಹಾಸದಲ್ಲೇ ನಡೆಯದಂತಹ ಒಂದು ಅಪರಾಧದ ವಿಷಯವನ್ನು ತಿಳಿಸುವುದಕ್ಕಾಗಿಯೂ ನಾನೀಗ ಮಾತನಾಡುತ್ತಿದ್ದೇನೆ. ... ಕೆಲವು ಅಧಿಕಾರಿಗಳು ನನ್ನನ್ನೂ ನನ್ನ ಸಹೋದ್ಯೋಗಿಗಳನ್ನೂ ತೆಗೆದುಹಾಕಲು ಪ್ರಯತ್ನಿಸಿದರು ... ಬಾಂಬು ಹಾಕಿದನು ... ನನ್ನ ಬಳಿ ಇದ್ದವನೊಬ್ಬನು ಸತ್ತನು. ನನಗೆ ಏನೂ ಆಗಿಲ್ಲ. ನಾನು ಇದುವರೆಗೆ ಮಾಡುತ್ತಿರುವ ಕಾರ್ಯವನ್ನೇ ಮುಂದುವರಿಸಬೇಕೆಂಬುದು ದೈವೇಚ್ಛೆಯೆಂಬುದು ಇದರಿಂದಲೇ ಗೊತ್ತಾಗುತ್ತದೆ. ... ನನ್ನ ಜೀವವನ್ನು ದೇಶಕ್ಕೆ ಒಪ್ಪಿಸಿಬಿಟ್ಟಿದ್ದೇನೆ ... ಈ ಪಿತೂರಿಗಾರರು ಎಷ್ಟೇ ಸಿಕ್ಕಿದರೂ ಅವರನ್ನು ಹಿಡಿಯಬೇಕು. ಈ ಪಿತೂರಿಯು ಯಶಸ್ವಿಯಾಗಿದ್ದರೆ ಜರ್ಮನಿಗೆ ಯಾವ ವಿಪತ್ತು ಪ್ರಾಪ್ತವಾಗುತ್ತಿತ್ತೆಂಬುದನ್ನು ಊಹಿಸಲೂ ಕಷ್ಟವಾಗಿದೆ. ನನ್ನನ್ನು ಉಳಿಸಿದ ದೇವರಿಗೆ ಕೃತಜ್ಞತೆಯನ್ನು ... ಈ ತೊಂದರೆಗಳನ್ನೆಲ್ಲಾ ಸಹಿಸಿ ನನ್ನ ಪ್ರಯತ್ನಗಳನ್ನು ಮುಂದುವರಿಸಲು ... ಗೆ ಕೃತಜ್ಞನಾಗಿದ್ದೇನೆ. ... ಇವರಿಂದಲೇ ಗೊತ್ತಾಗುತ್ತದೆ.

ಲೆಗ್‌ಹಾರ್ನ ಬಂದರು ಮಿತ್ರ ವಶ

ಬುಧವಾರ ಐದನೇ ಸೇನೆಗಳು ಇಟಲಿಯ ಮುಖ್ಯ ಬಂದರಾದ ಲೆಗ್‌ಹಾರ್ನ ಅನ್ನು ಹಿಡಿದವು. ಇನ್ನೊಂದು ಕಡೆ ಎಂಟನೇ ಸೇನೆಗಳು ಅಂಕೋನಾ ಬಂದರನ್ನು ವಶಪಡಿಸಿಕೊಂಡವು.

ಜಪಾನಿನ ಹೊಸ ಸರ್ಕಾರ

ಕೊರಿಯದ ಗೌರ್ನರ್ ಜನರಲ್ ಆದ ಜ॥ ಕುನಿಯಾಕಿ ಕೊಯಿಸೊ ಮತ್ತು ನೌಕಾ ಮುಖ್ಯ ಮಂತ್ರಿ ಯಿತ್ಸುನಾಯೊನಾಯಿ ಇವರುಗಳು ಜಪಾನಿನಲ್ಲಿ ಹೊಸ ಮಂತ್ರಿ ಮಂಡಲವನ್ನು ರಚಿಸುವಂತೆ ಅಲ್ಲಿನ ಚಕ್ರವರ್ತಿಗಳು ಹೇಳಿದ್ದಾರೆ.

ಹಾರುವ ಬಾಂಬುಗಳು

ಮೊನ್ನೆ ರಾತ್ರಿಯೆಲ್ಲಾ ಜರ್ಮನರು ಹಾರುವ ಬಾಂಬುಗಳನ್ನು ಲಂಡನ್ ಮತ್ತು ದಕ್ಷಿಣ ಪ್ರದೇಶಗಳ ಮೇಲೆಲ್ಲ ಕಳಿಸಿದರು ... ಕಳೆದ ಕೆಲವು ವಾರಗಳಿಂದಲೂ ... ಅಪಾರ ಹಾನಿಯನ್ನುಂಟುಮಾಡಿದೆ ... ಉತ್ತರ ಫ್ರಾನ್ಸಿನಲ್ಲಿ ಅವುಗಳ ನಿಲ್ದಾಣವನ್ನು ನಾಶ ಮಾಡಲಾಯಿತು.

ಬ್ರಿಟನ್ ಮಾತ್ರ; ಬ್ರಿ॥ ಸಾಮ್ರಾಜ್ಯವಲ್ಲ

ವಾಷಿಂಗ್ಟನ್ನಿನಲ್ಲಿ ... ವ್ಯಾಪಾರ ಸಮ್ಮೇಳನಕ್ಕೆ ಸೇರಿ ... ದಕ್ಷಿಣ ... ಇಂಗ್ಲೆಂಡ್, ರಷ್ಯ, ಚೀಣ, ಮತ್ತು ಗ್ರೇಟ್ ಬ್ರಿಟನ್ನು ... ಬ್ರಿಟಿಷ್ ಸಾಮ್ರಾಜ್ಯದ ವಿವಿಧ ದೇಶಗಳ ಬದಲು ಬ್ರಿಟನ್ನೇ ಪ್ರತಿನಿಧಿಯಾಗಿರುವುದೆಂದು ಕೆನಡಾ ಮುಖ್ಯಮಂತ್ರಿ ಮಿ॥ ಮೆಕೆನ್ಜಿ ಕಿಂಗ್‌ರವರು ಹೇಳಿದ್ದಾರೆ.

ಗೌರ್ನರುಗಳ ಸಭೆ

ಗಾಂಧೀಜಿಯವರು ಈಚೆಗೆ ... ದ ಜೊತೆ ಸಂಬಂಧಪಟ್ಟಂತೆ ಈ ದಿನದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಲು ... ತಿಂಗಳ ಅಂತ್ಯಭಾಗದಲ್ಲಿ ... ಗೌರ್ನರುಗಳ ಸಭೆಯೊಂದನ್ನು ... ಪರಿಶೀಲಿಸಬಹುದು.

ಜೈಪುರದಲ್ಲಿ ಭಾರಿ ಚಳುವಳಿಯೋ?

ಜೈಪುರದಲ್ಲಿ ಉರ್ದು ಭಾಷೆಯನ್ನು ಉಪಯೋಗಿಸುವಂತೆ ಮಾಡಿರುವ ಆಜ್ಞೆಯ ಬಗ್ಗೆ ದೊಡ್ಡ ಆಂದೋಳನವೇ ನಡೆಯುತ್ತಿದೆ. ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಸಾವರ್ಕರರು ಇದನ್ನು ... ನಡೆಸುವರು. ಎಲ್ಲಾ ಮಾರ್ಗಗಳೂ ವಿಫಲವಾದರೆ ಅಖಿಲ ಹಿಂದೂಸ್ಥಾನದಿಂದ ಸಾವಿರ ಜನ ಸ್ವಯಂ ಸೇವಕರನ್ನು ದಸ್ತಗಿರಿಗಾಗಿ ಅಲ್ಲಿಗೆ ಕಳುಹಿಸಲಾಗುವುದು.

"ಅಖಂಡ ಹಿಂದೂಸ್ಥಾನ; ವಿರೋಧ ಪಾಕಿಸ್ಥಾನ"

ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ವಿ. ಡಿ. ಸಾವರ್ಕರರು ಒಂದು ಹೇಳಿಕೆ ಹೊರಡಿಸಿ ಆಗಸ್ಟ್ ಮೊದಲನೇ ವಾರವನ್ನು ಹಿಂದೂಗಳೆಲ್ಲರೂ ಅಖಂಡ ಹಿಂದೂಸ್ಥಾನ, ವಿರುದ್ಧ ಪಾಕಿಸ್ಥಾನದ ವಾರವಾಗಿ ಆಚರಿಸಬೇಕೆಂದು ಕೋರಿದ್ದಾರೆ. ಮಹಾತ್ಮ ಗಾಂಧಿಯವರೂ ರಾಜಾಜಿಯವರೂ ಈಚೆಗೆ ಮುಸ್ಲಿಂಲೀಗಿಗೆ ಮಾಡಿರುವ ಸಲಹೆಗಳು ರಾಷ್ಟ್ರ ಘಾತಕವೆಂದೂ ಅವುಗಳನ್ನು ಎಲ್ಲರೂ ಪ್ರತಿಭಟಿಸಬೇಕೆಂದೂ ಹೇಳಿದ್ದಾರೆ.

ವಿಶ್ವವಿದ್ಯಾನಿಲಯ ಸಂಘ

ಮೈಸೂರು ...

ಮೈಸೂರು ವಿಶ್ವವಿದ್ಯಾನಿಲಯ ಸಂಘದ ಉಪಾಧ್ಯಕ್ಷರ ಚುನಾವಣೆ ... ತಾ॥ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿಯೂ, ... ತಾ॥ ಮಹಾರಾಜಾ ಕಾಲೇಜಿನಲ್ಲಿಯೂ, ಸಂಜೆ ... ರಿಂದ ... ರವರೆಗೆ ನಡೆಯುವುದು.

ಮೆಡಿಕಲ್ ಕಾಲೇಜ್ ಸಂಘ

ಮೈಸೂರು ಮೆಡಿಕಲ್ ಕಾಲೇಜ್ ಸಂಘದ ಆರಂಭ ಭಾಷಣವನ್ನು ಡಾ॥ ... ಪುರುಷೋತ್ತಮ್‌ರವರು ... ನೇ ತಾರೀಖು ಸಂಜೆ ... ಗಂಟೆಗೆ ನಡೆಸುವರು. ಡಾ॥ ಸಿ. ಕೃಷ್ಣಸ್ವಾಮಿರಾಯರು ಅಧ್ಯಕ್ಷತೆ ವಹಿಸುವರು.

ವೈಶ್ಯ ಯುವಜನ ಮಹಾ ಸಭೆ

ವಿದ್ವಾನ್ ಶ್ರೀ ... ವೆಂಕಟಸ್ವಾಮಿಗುಪ್ತರು ಆದಿತ್ಯವಾರ ಸಂಜೆ ... ಗಂಟೆಗೆ ... ರಸ್ತೆಯಲ್ಲಿರುವ ಶ್ರೀ ... ದೇವಸ್ಥಾನದಲ್ಲಿ "... ಸಾಂಸ್ಕೃತಿಕ ... " ಎಂಬ ವಿಷಯವನ್ನು ಕುರಿತು ... ಉಪನ್ಯಾಸವನ್ನು ... ಶ್ರೀ ... ಅಧ್ಯಕ್ಷತೆ ವಹಿಸುವರು.

ಪೊಲಿಟಿಕಲ್ ಸೈನ್ಸ್ ಸಂಘ

ಮೈಸೂರು ಮಹಾರಾಜಾ ಕಾಲೇಜಿನ ಪೊಲಿಟಿಕಲ್ ಸೈನ್ಸ್ ಸಂಘಕ್ಕೆ ಶ್ರೀ ಎಂ. ಪಿ. ... ಎಂ. ಎ. ... ಮತ್ತು ... ಎಸ್. ... ಗಳು ... ಚುನಾಯಿತರಾಗಿದ್ದಾರೆ.

ಪ್ರೊಫೆಸರ್ ಗೌರ್ನರ್ ಜನರಲ್ ... ದಿನ ... ಬಂದರು. ... ದಿನ ಇಲ್ಲಿ ಇರುವರು.

ಸಾಧ್ವಿ ' ದ್ವಿತೀಯ ವಾರ್ಷಿಕೋತ್ಸವ

[illegible] 'ಸಾಧ್ವಿ' ದಿನ ಪತ್ರಿಕೆಯ ದ್ವಿ[illegible] ವಾರ್ಷಿಕೋತ್ಸವದ ಪ್ರಯುಕ್ತ [illegible] ಶ್ರೀ ಕೆ. ಟಿ. ಭಾಷ್ಯಂ [illegible] ಶ್ರೀ ವೆಂಕಟ [illegible] ರಂಗ [illegible] ಪತ್ರಿಕೋದ್ಯೋಗಿ [illegible]

[illegible] ಅಧ್ಯಕ್ಷರಾದ ಶ್ರೀ ಬಿ. [illegible] ಮತ್ತು [illegible]

[illegible] ಅಧ್ಯಕ್ಷತೆ [illegible] ಸಾಧ್ವಿ [illegible] ಪತ್ರಿಕೆ [illegible]

[illegible]

ಗಳನ್ನು ಮನೋಹರವಾಗಿ ಹರಿಸಿ ಸಭಾ ಕಾರ್ಯಕ್ರಮಗಳನ್ನು ಆರಂಭಿಸಿದರು. ಶ್ರೀ ಎ. ಕಲ್ಲೇಶಯ್ಯನವರು ಮಹಾಭಾರತದ ಪದ್ಯಗಳನ್ನು ಸುಶ್ರಾವ್ಯವಾಗಿ ಪಠಿಸಿದರು. ಅನಂತರ ಆಸ್ಥಾನ ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು ಮತ್ತು ಅವರ ಶಿಷ್ಯರಾದ ಟಿ॥ ವಿದ್ವಾನ್ ವಿ. ದೊರೆಸ್ವಾಮಿಯವರ ವೀಣಾ ವಾದನ, ವಿದ್ವಾನ್ ದೇಶಿಕಾಚಾರ್ಯರ ಕೊಳಲು, ವಿದ್ವಾನ್ ವರದಾಚಾರ್ಯರ ಮೃದಂಗ ಕಾನ್ಸರ್ಟ್ ಕಛೇರಿಯು ಬಹಳ ಇಂಪಾಗಿ ಜರುಗಿತು.

ತರುವಾಯ 'ಗಾನಕೋಕಿಲ' ಕುಮಾರಿ ಲಕ್ಷ್ಮಮ್ಮನವರ ಸಂಗೀತವು ವಿದ್ವಾನ್ ಹೆಚ್. ವಿ. ಕೃಷ್ಣರಾಯರ ಪಿಟೀಲು ಮತ್ತು ವಿದ್ವಾನ್ ವರದಾಚಾರ್ಯರ ಮೃದಂಗದೊಡನೆ ನಡೆದು ಸಭಿಕರನ್ನು ಆನಂದ ಸಾಗರದಲ್ಲಿ ಮುಳುಗಿಸಿತು.

ಅಧ್ಯಕ್ಷರ ಭಾಷಣ

ಅಧ್ಯಕ್ಷರಾದ ಶ್ರೀ॥ ದಾಸಪ್ಪನವರು ಪತ್ರಿಕಾ ಜಗತ್ತಿನಲ್ಲಿ ಸಾಧ್ವಿ ಪತ್ರಿಕೆಯು ಇದುವರೆಗೆ ಮಾಡಿರುವ ಸೇವೆಯನ್ನು ಪ್ರಶಂಸಿಸಿ ಮುಂದೆಯೂ ಅದು ಚಿರಕಾಲ ಇನ್ನೂ ಹೆಚ್ಚು ಹೆಚ್ಚಾಗಿ ಸೇವೆ ಮಾಡಿ ಮಹಾಜನರ ಪಾದರ ಪ್ರೋತ್ಸಾಹಗಳಿಗೆ ಪಾತ್ರವಾಗಲೆಂದು ಹಾರೈಸಿದರು. ಪತ್ರಿಕೋದ್ಯಮಕ್ಕೆ ಈಗ ಅನೇಕ ತೊಂದರೆಗಳಿವೆ. ಒಂದು ಬರೆದರೆ ಹೆಚ್ಚು, ಒಂದು ಬರೆದರೆ ಕಮ್ಮಿ ಕಾಣುವ ಶಾಸನವು ಬಾಯಿ ಬಿಟ್ಟುಕೊಂಡೇ ಇದೆ. ಈಚೆಗಂತೂ ಈ ಶಾಸನದ ಬಾಣವು ಮತ್ತಷ್ಟು ತೀಕ್ಷ್ಣವಾಗಿರುತ್ತದೆ ಎಂಬುದ ವಿಷಯದಲ್ಲಿ "ವಿಶ್ವ ಕರ್ನಾಟಕ" ಪತ್ರಿಕೆಯು ಟೀಕಿಸಿದ ದಕ್ಕೆ ಸರ್ಕಾರದವರು ಅದಕ್ಕೆ ಒಂದು ವರ್ಷ ಅಜ್ಞಾತ ವಾಸದ ಶಿಕ್ಷೆಯನ್ನು ವಿಧಿಸಿದ್ದಾರೆ. ಅದರ ಬದಲಿನಲ್ಲಿ ಇದೇ ರೀತಿಯ ಬರವಣಿಗೆಗೆ ಪತ್ರಿಕಾ ಸಂಪಾದಕರು ನಿರ್ದೋಷಿಗಳೆಂದು ಹೇಳಿ ಖುಲಾಸೆಯಾಗಿದ್ದಾರೆ. ಅವರ ಪತ್ರಿಕೆಯ ಪ್ರಕಟನೆಗೂ ಅವಕಾಶ ದೊರೆತಿದೆ. ನಮ್ಮ ಸಂಸ್ಥಾನದಲ್ಲಿ ನಮ್ಮವರೇ ಆದ ಅಧಿಕಾರಿ ವರ್ಗದವರು ಈಗಲಾದರೂ ಆ ಪತ್ರಿಕೆಯ ಮೇಲಿನ ನಿರ್ಬಂಧವನ್ನು ತೆಗೆದು ಅದು ಹೊರಡುವಂತೆ ಕೂಡಲೇ ಅವಕಾಶ ಕೊಡಬೇಕು, ಎಂದು ಹೇಳಿದರು.

ಪಂಚಗನಿಯಲ್ಲಿ ತಾವು ಮೊನ್ನೆ ಗಾಂಧಿ ಮಹಾತ್ಮರ ಸಂದರ್ಶನವನ್ನು ಮಾಡಿ ಬಂದ ವಿಚಾರವನ್ನು ಶ್ರೀ॥ ದಾಸಪ್ಪನವರು ತಿಳಿಸಿದರು. ತಾವು ಗಾಂಧಿಜಿಯವರೊಡನೆ ಯಾವ ರಾಜಕೀಯ ವಿಷಯದಲ್ಲಿಯೂ ಪ್ರಸ್ತಾಪ ಮಾಡಲಿಲ್ಲವೆಂದೂ ಆದರೂ ದೇಶೀಯ ಸಂಸ್ಥಾನಗಳ ಅಭಿವೃದ್ಧಿ ವಿಷಯದಲ್ಲಿ ಮಹಾತ್ಮರು ಸಂಪೂರ್ಣ ಆಸಕ್ತಿಯುಳ್ಳವರಾಗಿರುವರೆಂದೂ, ಸಂಸ್ಥಾನಗಳ ಹಿತಕ್ಕೆ ಧಕ್ಕೆ ತರುವಂತಹ ಯಾವ ವ್ಯವಸ್ಥೆಗೂ ಅವರು ಒಪ್ಪಿಗೆ ಕೊಡುವುದಿಲ್ಲವೆಂದೂ ಹೇಳಿದರು. ಮಹಾಜನರು "ಸಾಧ್ವಿ" ಪತ್ರಿಕೆಗೆ ಸಂಪೂರ್ಣ ಸಹಾಯವನ್ನು ನೀಡಬೇಕೆಂದು ಕೋರಿದರು.

ಶ್ರೀ॥ ಆನಂದ ರಂಗಯ್ಯನವರು ಇಂದಿನ ಉತ್ಸವದಲ್ಲಿ ಭಾಗಿಗಳಾಗಿ ಸಹಾಯ ಮಾಡಿದವರಿಗೆಲ್ಲ ಧನ್ಯವಾದಗಳನ್ನು ಸಲ್ಲಿಸಿದರು. ಗಂಧ, ಪುಷ್ಪ, ತಾಂಬೂಲಗಳ ವಿನಿಯೋಗವಾದನಂತರ ಸಭೆ ಮುಗಿಯಿತು.

ಚೀಣಾಕ್ಕೆ ಸಹಾಯ

ಸಾಧ್ಯವಾದ ಸಮಾಯವನ್ನೆಲ್ಲಾ ಅಮೆರಿಕ, ಬ್ರಿಟನ್ನುಗಳು ಚೀಣಾಕ್ಕೆ ಸಲ್ಲಿಸುತ್ತಿವೆ ಎಂದು ಮಿ॥ ಚರ್ಚಿಲ್ ಹೇಳಿದರು. ಉತ್ತರ ಚೀಣಾಕ್ಕೆ ನುಗ್ಗುತ್ತಿರುವ ಜಪಾನರನ್ನು ತಡೆಯಲು ಯಾವುದಾದರೂ ವಿಶೇಷ ಪ್ರಯತ್ನಗಳನ್ನು ಮಾಡುತ್ತಿರುವಿರಾ? — ಎಂಬ ಪ್ರಶ್ನೆಗೆ ಉತ್ತರವಾಗಿ ಅವರು ಹೀಗೆ ಹೇಳಿದರು.

ಪತ್ರ ವ್ಯವಹಾರ

ಚಾಮರಾಜನಗರದ ಉಪಾಧ್ಯಕ್ಷತೆ

ಸ್ವಂ ವ.] ಚಾಮರಾಜನಗರ 21

ಚಾಮರಾಜನಗರದ ಪೌರಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ವೆಂಕಟಸುಬ್ಬಶೆಟ್ಟರನ್ನು ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ಮಾಡಬೇಕೆಂದು ೯-೭-೪೪ ರಲ್ಲಿ ಸೇರಿದ್ದ ತಾಲ್ಲೂಕ್ ಮತ್ತು ಟವ್ನ್ ಕಾಂಗ್ರೆಸ್ ಸಮಿತಿ ಮೀಟಿಂಗಿನಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು. ೧೯-೭-೪೪ ರ ಚುನಾವಣೆಯಲ್ಲಿ ಚಾಮರಾಜನಗರದ ಕಾಂಗ್ರೆಸ್ ಪಾರ್ಟಿಯವರು ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದು ಪ್ರಕಟವಾಗಿರುವುದು ತುಂಬ ಆಶ್ಚರ್ಯಕರವಾಗಿದೆ. ೯-೭-೪೪ ರಲ್ಲಿ ತೀರ್ಮಾನವಾದ ಮತ್ತು ಚರ್ಚಿಸಲ್ಪಟ್ಟ ವಿಷಯಗಳನ್ನೆಲ್ಲಾ ಆಮೂಲಾಗ್ರವಾಗಿ ಅಂದಿನ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೇ ರಿಕಾರ್ಡು ಮಾಡಿಟ್ಟಿದ್ದಾರೆ. ಮೇಲ್ಕಂಡ ತೀರ್ಮಾನಗಳನ್ನು ತಕ್ಷಣ ಮಹಾಜನಗಳ ಅವಗಾಹನೆಗೆ ತರತಕ್ಕ ಜವಾಬ್ದಾರಿಯು ಅಧ್ಯಕ್ಷರದಾಗಿತ್ತು. ಅಧ್ಯಕ್ಷರು ಯಾವ ಕಾರಣಗಳಿಂದ ಸಮಿತಿಯ ತೀರ್ಮಾನಗಳನ್ನು ಹೊರಗೆಡಹಲಿಲ್ಲವೋ ಗೊತ್ತಾಗಿಲ್ಲ. ಅಂದಿನ ಅಧ್ಯಕ್ಷರು ಶ್ರೀ ಸಿ. ಗೋಪಾಲರಾಯರು. ಈಗಲಾದರೂ ೯-೭-೪೪ ರಲ್ಲಾದ ಚಾಮರಾಜನಗರದ ಕಾಂಗ್ರೆಸ್ಸಿನ ತೀರ್ಮಾನಗಳನ್ನು ತಾಲ್ಲೂಕ್ ಕಾಂಗ್ರೆಸ್ ಸಮಿತಿಯ ಪರವಾಗಿ ಮಹಾಜನರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ. ಡಿ. ಜಿ. ಶಂಕರಪ್ಪ, ತಾಲ್ಲೂಕು ಕಾಂಗ್ರೆಸ್ ಕಮಿಟಿ ಸದಸ್ಯ.

ಮಾ॥ ಗ್ರಾಜಿಯಾನಿ ರಾಜೀನಾಮೆ

ಫ್ಯಾಸಿಸ್ಟ್ ಸೈನ್ಯ ದಳಗಳನ್ನು ಜರ್ಮನರ ಆಜ್ಞೆಗೆ ಒಳಪಡಿಸುವಂತೆ ಫೀಲ್ಡ್ ಮಾ॥ ಕೆಸೆಲ್ರಿಂಗರು ತೀರ್ಮಾನಿಸಿರುವುದರಿಂದ ಫ್ಯಾಸಿಸ್ಟ್ ಯುದ್ಧ ಮಂತ್ರಿ ಮಾ॥ ಗ್ರಾಜಿಯಾನಿಯವರು ರಾಜೀನಾಮೆ ಇತ್ತಿರುವರೆಂದು ವರದಿಯಾಗಿದೆ.

MYSORE GOVT LIFE INSURANCE DEPARTMENT,
(Public Branch)

Application having been received for the issue of a duplicate of policy No. 6348/c on the life of Mr. Kullaiah it is hereby notified that the duplicate will be issued unless valid objection therefor is received by the undersigned within one month from this date.

Bangalore, 22-7-1944. M. Shamanna Secretary.

Edited, printed and published by A. R. Nagarajan, [illegible] Press, D Subbaiah Road, Mysore

ಶ್ರೀ [illegible] ಸ್ಥಾ [illegible] ಕ್ಕೆ

[illegible] ಕೊಡುವ [illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಶ್ರೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

[illegible] ದೇವರಾಜ ಮಾರ್ಕೆಟ್, ಮೈಸೂರು.

[illegible] ನೊಪಲ್ಲಾ [illegible]

[illegible] ಮತ್ತು ಕಲ್ಪತರು [illegible]

ಪ್ರತಿ ದಿನ ೩ ಆಟಗಳು ನ್ಯೂ ಅಪೇರಾ ಟಾಕೀಸ್

ರಾಗಿಣಿ, ಮುಚ್ಚು, ರೂಪಲೇಖ, ರಾಣಿ, ಮುಂತಾದ ನಟೀನಟರು ಪಾತ್ರ ವಹಿಸಿರುವ ಹಿಂದೀ ಟಾಕಿಯ ಚಿತ್ರ

19-7-44 ರಿಂದ ★ ನಿಶಾನಿ ★

ಬನುಮಯ್ಯನವರ ಸ್ಕೂಲು

ಮೈಸೂರು ೨೨

ರಾ॥ ಬ॥ ಧ॥ ಬಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಸ್ಥಾಪಕರ ದಿನಾಚರಣೆಯು ೨೫ ನೇ ತಾ॥ ಮಂಗಳವಾರ ಸಾಯಂಕಾಲ ಶ್ರೀ ಪಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಹರಿಕಥೆ

ನಾಳೆ ದಿನ ಸಂಜೆ ೬-೩೦ ಗಂಟೆಗೆ ೧೦ ಜಗನ್ನಾಥ ಒಂಟಿಕೊಪ್ಪಲಿನಲ್ಲಿ ಶಂಕರಾಚಾರ್ ಮಂದಿರ ಸಂಘದ ಆಶ್ರಯದಲ್ಲಿ, ಹರಿಕಥಾ ವಿದ್ವಾನ್ ಕೆ. ಟಿ. ರಾಮಣ್ಣನವರಿಂದ 'ಸೀತಾ ಕಲ್ಯಾಣ' ಎಂಬ ಹರಿಕಥೆಯು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಹರಿಕಥಾ ಸಪ್ತಾಹ

ಮೈಸೂರಿನ ಸುಪ್ರಸಿದ್ಧ ಹರಿಕಥಾ ವಿದ್ವಾನ್ ವೇ॥ ಶ್ರೀ ವೆಂಕಟಸುಬ್ಬದಾಸರವರು ನಂಜನಗೂಡಿಗೆ ದಯಮಾಡಿಸಿ ಹರಿಕಥಾ ಸಪ್ತಾಹವನ್ನು ಇದೇ ಶ್ರಾವಣ ಶುದ್ಧ ಸಂಚಮಿ (ತಾ॥ ೨೪-೭-೪೪) ಸೋಮವಾರದಿಂದ ಶ್ರೀ ಕಣ್ಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರತಿದಿನವೂ ರಾತ್ರಿ ೯ ಗಂಟೆಯಿಂದ ೧೧ ಗಂಟೆಯವರೆಗೆ ಮಾಡಲು ಒಪ್ಪಿರುತ್ತಾರಾಗಿ ಸರ್ವರೂ ಸಕಾಲಕ್ಕೆ ದಯಮಾಡಿಸಿ ಕಥಾಶ್ರವಣಮಾಡಿ ಶ್ರೀ ರಾಮಚಂದ್ರನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸಲಾಗಿದೆ.

ಮುಚ್ಚಿನಿಂದ ಹೊಡೆದುದು

ಟಿ ನರಸೀಪುರ ತಾ॥ ಕೊತ್ತೇಗಾಲದಲ್ಲಿ ೨೧ ನೆಯ ತಾ॥ ದಿವಸ ಮಹಂತದೇವರು ಯಾನೆ ಪುಟ್ಟಬುದ್ಧಿ ಎಂಬಾತನೆ, ಮರಿಮಲ್ಲಪ್ಪ ಎಂಬುವನನ್ನು ಮುಚ್ಚಿನಿಂದ ಹೊಡೆದುದರಿಂದ ಬಹಳ ಗಾಯಗಳಾಗಿ ಕೃ॥ ರಾ॥ ಆಸ್ಪತ್ರೆಗೆ ಸೇರಿಸಲಾಗಿದೆ.

ಡಿಪೋ ವಾರ್ಡನ್‌ಗಳು

ಸಂಸ್ಥಾನದ ಕೇಂದ್ರ ಆಹಾರ ಸಮಿತಿ ಸದಸ್ಯರಾದವರೆಲ್ಲರನ್ನೂ ಸಂಸ್ಥಾನದ ಎಲ್ಲಾ ಸರ್ಕಾರಿ ಧಾನ್ಯದ ಡಿಪೋಗಳ ಗೌರವ ವಾರ್ಡನ್ನರಾಗಿ ಸರ್ಕಾರದವರು ನೇಮಿಸಿದ್ದಾರೆ.

ಮದರಾಸಿನಲ್ಲಿ ಮನೆಗಳನ್ನು ಖಾಲಿ ಮಾಡಿಸುವುದು

ಮದರಾಸಿನಲ್ಲಿ ಜನರು ವಾಸಮಾಡುವ ಮನೆಗಳನ್ನು ಸರ್ಕಾರದವರು ಅಪೇಕ್ಷಿಸಿದಾಗ ಮಾಲೀಕರು ಬಿಟ್ಟುಕೊಡಬೇಕೆಂಬ ಬಗ್ಗೆ ಅಲ್ಲಿನ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಯಾವಾಗ ಅಗತ್ಯವಾಗುವುದೋ ಆಗ ಮಾತ್ರ ಈ ಆಜ್ಞೆಯನ್ನು ಜಾರಿಮಾಡಲಾಗುವುದೆಂದೂ, ಸಧ್ಯವಾದಷ್ಟು ಮನೆಗಳನ್ನು ಹೊಂದಿರಿಸಿಕೊಳ್ಳುವುದಿಲ್ಲವೆಂದೂ ತಿಳಿಸಿದ್ದಾರೆ.

ಚಿತ್ರ ಪತ್ರಿಕೆಗಳ ಹರತಾಳ

ಪತ್ರಿಕಾ ಹಕ್ಕೊತ್ತಾಯ ಆಜ್ಞೆಯಿಂದ ತಮಗೆ ಉಂಟಾಗಿರುವ ತೊಂದರೆಗಳನ್ನು ಇಂಡಿಯಾ ಸರ್ಕಾರದವರು ಪರಿಹರಿಸುವವರೆಗೆ ತಾವು ತಮ್ಮ ಪತ್ರಿಕೆಗಳನ್ನು ನಡೆಸುವುದಿಲ್ಲವೆಂದು ಬಂಗಾಳದ ಪ್ರಮುಖ ಸಿನಿಮಾ ಪತ್ರಿಕೆಗಳು ನಿರ್ಧರಿಸಿವೆ.

ಗಾಂಧೀಜಿ ಸೇವಾಗ್ರಾಮಕ್ಕೆ

ಆಗಸ್ಟ್ ಮೊದಲನೇ ವಾರದಲ್ಲಿ ಮಹಾತ್ಮರು ಸೇವಾಗ್ರಾಮಕ್ಕೆ ಹಿಂತಿರುಗುವರೆಂದು ಗೊತ್ತಾಗಿದೆ

ಸಂಪುಟ ೩] ಭಾನುವಾರ ೨೩-೭-೪೪ [ಸಂಚಿಕೆ ೩

ಹಿಟ್ಲರನ ದಸ್ತಗಿರಿಯೇ?

ಕೆಂದ್ರಾಯಕ್ಕಾಗಿ ಮಹಾತ್ಮರ ಮುದ್ರಣಾಲಯ ಜಪ್ತಿ

ಜಪಾನಿನಲ್ಲಿ ಹೊಸ ಮಂತ್ರಿಮಂಡಲದ ರಚನೆ

ಜಪಾನಿನ ಹೊಸ ಸರ್ಕಾರ

ಜ॥ ಕೊಯಿಸೋರವರು ಜಪಾನಿನ ಮುಖ್ಯ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು. ಅ॥ ಮಿತ್ಸುಮಾಸಾ ಯೋನಾಯಿ ಯವರು ನೌಕಾ ಮಂತ್ರಿ; ಮಾಮೊರು ಶಿಗೆಮಿಟ್ಸು ರವರು ವಿದೇಶಾಂಗ ಮಂತ್ರಿ. ಜ॥ ಸುಗಿಯಾಮಾರವರು ಫೀಲ್ಡ್ ಮಾರ್ಷಲ್; ಹಿಗೆವೊ ಒಡಾಚಿಯವರು ಗೃಹ ಮಂತ್ರಿ; ಸೊಟಾರೊ ಇಶಿವಾಟಾ ಹಣಕಾಸಿನ ಮಂತ್ರಿ; ಚಿಂಜಿರೋ ಫುಜಿವಾರಾ ಮದ್ದುಗುಂಡುಗಳ ಮಂತ್ರಿ; ಯೊನೆ ಮೆಪುಯಿದಾ ಸಂಚಾರ ಮಂತ್ರಿ; ಟಾಸಿ ಶಿರೋಶಿಮದಾ ವ್ಯವಸಾಯ ಮತ್ತು ವಾಣಿಜ್ಯ ಮಂತ್ರಿ; ಹಿರೋಸೆಯಾಸಾ ಮತ್ಸುಜಾಕಾ ನ್ಯಾಯ ಮಂತ್ರಿ; ಹರಿಶಿಗೆ ನಿನೋಮಿಯ ವಿದ್ಯಾ ಮಂತ್ರಿ; ಹಿಸ್ಸಾದ ಹಿರೋಸೆ ಆಭಿವೃದ್ಧಿ ಮಂತ್ರಿ; ಮತ್ತು ಚಿಜಿವ ಬಿದ, ಒಟಿಯೊ ಕೊಡಮಾ ಮತ್ತು ಟಿಕಿಟೋರಾ ಒಗಾಟಾರವರುಗಳು ಸ್ಟೇಟ್ ಮಂತ್ರಿಗಳು.

ಜಪಾನಿನ ಶಾಂತಿ ಭಿಕ್ಷೆಯೇ?

ಜಪಾನಿನ ಹೊಸ ಮಂತ್ರಿಮಂಡಲವು ರಾಜೀನಾಮೆ ಇತ್ತುದನ್ನು ಅವಕ್ಕ ಎಲ್ಲಾ ಕಡೆಯೂ ಆಗುತ್ತಿರುವ ಸೋಲಿನ ಸೂಚನೆಯೆಂದೂ ಹಿಂದಿನ ರಾಜಕೀಯವ್ಯಕ್ತಿಗಳು ಈಗ ಶಾಂತಿಸಂಧಾನಕ್ಕೆ ಪ್ರಯತ್ನಿಸುವ ದಿಂದೂ ಆ ದೇಶದ ಅಧಿಕಾರವರ್ಗಗಳಲ್ಲಿ ನಂಬಲಾಗಿದೆ. ಹೊಸ ಮಂತ್ರಿಮಂಡಲವು ಈಗ ರಚನೆಯಾಗಿರುವುದರಿಂದ ಇನ್ನೂ ಅರುದಿನದ ನಂತರ ಈ ಪ್ರಯತ್ನವಾಗಬಹುದೆಂದು ಭಾವಿಸಲಾಗಿದೆ.

ಗ್ವಾಂನಲ್ಲಿ ಅಮೆರಿಕನರು

ಗುರುವಾರ ಬೆಳಗ್ಗೆ ಅನೇಕರ ಸೇನೆಗಳೂ ಹಡಗುಗಳೂ ಗ್ವಾಂ ದ್ವೀಪಗಳನ್ನು ಇಳಿದವು. ಜಪಾನರು ಹಿಡಿದ ಅಮೆರಿಕನ್ ಠಾಣ್ಯಗಳ ಪ್ರಕೆ ಅಮೆರಿಕನರು ಕಾಲಿಟ್ಟಿರುವುದು ಇಲ್ಲೇ. ಮೊದಲು ಜಪಾನರ ಪ್ರತಿಭಟನೆ ಸುಮಾರಾಗಿತ್ತು.

ಪಾರ್ಲಿಮೆಂಟ್ ಸದಸ್ಯರ ಸಹಾನುಭೂತಿ

ಭಾರತದ ಬಿಕ್ಕಟ್ಟನ್ನು ಪರಿಹರಿಸುವ ಬಗ್ಗೆ ಲಂಡನ್ನಿನಲ್ಲಿ ಸಿದ್ಧವಾಗಿರುವ ಘೋಷಣೆಯನ್ನು ವಿ.॥ ಎಮರಿಯವರು ಪರಿಶೀಲಿಸುತ್ತಿರುವರು ಅಧ್ಯಕ್ಷ ಗಾಂಧಿಯವರ. ಲಂಡನ್ನಿಗೆ ಬರುವರೆಂಬ ವರ್ತಮಾನ ಬಂದರೆ ವೇಲ್ಸಿನಿಂದ ಪ್ರಕಟನೆ ಬಗ್ಗೆ ಅವರಿಗೆ ವಿವರಗಳನ್ನು ತಿಳಿಸಲಾಗಿದೆ. ಅನೇಕ ಪಾರ್ಲಿಮೆಂಟ್ ಸದಸ್ಯರು ಈ ಬಗ್ಗೆ ಸಹಾನುಭೂತಿಯುಳ್ಳವರಾಗಿರುವರು.

ಹಿಟ್ಲರ್ ದಸ್ತಗಿರಿಯೇ?

ಹಿಟ್ಲರನು ದಸ್ತಗಿರಿಯಾಗಿದ್ದಾನೆಂಬ ವದಂತಿಯು ಬಲವಾಗಿ ಹರಡುತ್ತಿದೆಯೆಂದು ನ್ಯಾಷನಲ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್ನಿನ ಲಂಡನ್ ವಾರ್ತಾದಾರರು ತಿಳಿಸಿದ್ದಾರೆ.

ದಕ್ಷಿಣ ಜರ್ಮನಿಯಲ್ಲಿ ದಂಗೆ

ಕೆಲವು ಸೈನ್ಯದಳಗಳು ದಂಗೆ ಎದ್ದಿರುವುದರಿಂದ ದಕ್ಷಿಣ ಜರ್ಮನಿಯಲ್ಲಿ ಕದನವಾಗುತ್ತಿದೆಯೆಂದು ಜರ್ಮನ್ ರಾಯಭಾರಿಗಳು ವರದಿ ಮಾಡಿರುವುದಾಗಿ ಗೊತ್ತಾಗಿದೆ.

ಪೋಪರ ಅಭಿನಂದನೆಯೇ?

ಹಿಟ್ಲರನು ಮೃತ್ಯುವಿನಿಂದ ಪಾರಾದುದಕ್ಕಾಗಿ ಪೋಪ್ ಗುರುಗಳು ಅವನಿಗೆ ಅಭಿನಂದನೆಯನ್ನು ಕಳುಹಿಸುವ ಬಗ್ಗೆ ವ್ಯಾಟಿಕನಿನಲ್ಲಿ ಯಾವ ಸಮರ್ಥನೆಯೂ ದೊರೆತಿಲ್ಲ.

ಬಿಗಿ ಹೆಚ್ಚುವುದು

ಹಿಟ್ಲರನ ಮೇಲೆ ನಡೆದ ಆಘಾತದ ಪರಿಣಾಮವಾಗಿ ಜರ್ಮನಿಯ ರಕ್ಷಣೆಯನ್ನೂ ಹೆಚ್ಚು ಕಠಿಣವಾಗುವುದೆಂದು ಹೇಳಲಾಗಿದೆ. ಸೈನ್ಯಗಳಿಗೂ ಗುಪ್ತದಳಗಳಿಗೂ ಬೀದಿಯಲ್ಲಿ ಹೊಡೆದಾಟವಾಗುತ್ತಿದೆ.

ಜರ್ಮನಿಯಲ್ಲಿ ಪ್ರತಿಭಟನಾ ಚಳುವಳಿ

ನಾಜಿ ಆಡಳಿತವನ್ನು ಪ್ರತಿಭಟಿಸಲು ಜರ್ಮನಿಯಲ್ಲಿ ಒಂದು ಭಾರಿ ಚಳುವಳಿಯು ಎದ್ದಿರುವಂತಿದೆ. ಅದರಲ್ಲಿ ಅನೇಕ ಮಿಲಿಟರಿ ಅಧಿಕಾರಿಗಳಿದ್ದಾರೆ. ಹಿಟ್ಲರನ ಸರ್ವಾಧಿಕಾರವನ್ನೂ ನಾಜಿ ದುಷ್ಟಕೃತ್ಯಗಳನ್ನೂ ನಿರ್ಮೂಲ ಮಾಡುವುದೇ ತಮ್ಮ ಗುರಿಯೆಂದು ಅವರು ಘೋಷಿಸಿದ್ದಾರೆ. ಹಿಟ್ಲರನ ಆಜ್ಞೆಯನ್ನು ಯಾರೂ ಪಾಲಿಸಕೂಡದೆಂದೂ ತಮ್ಮ ಆಜ್ಞೆಗಳನ್ನೇ ನೆರವೇರಿಸಬೇಕೆಂದೂ ಕೋರಿದ್ದಾರೆ.

ಹಿಟ್ಲರ್ ಕೊಲೆ ಪ್ರಯತ್ನ

ವ್ಯೂಹವಿಕ್ಷೇಪಣ ವಿಭಾಗದ ಕೌಂಟ್ ಸ್ಟಾಫೆನ್ ಬರ್ಗ್‌ನು ಒಂಟಿಯಾಗಿ ಬಾಂಬಿನಿಂದವನನ್ನು ಹಿಟ್ಲರನ ಬಳಿ ಎಸೆದನು. ದಸ್ತ್ರಗಳೊಡನೆ ಸಂಚುಗಾರನೊಂದಿಗೆ ಒಂದು ಸಣ್ಣ ದುರ್ವ್ಯಕಿಯು ಈ ದಾಳಿಯನ್ನು ಸಂಯೋಜಿಸಿತ್ತೆಂದೂ ಗೊತ್ತಾಗಿದೆ. ಕೆಲವು ಸೈನ್ಯ ಜನರಲ್‌ಗಳು ಇದರಲ್ಲಿ ಸೇರಿದ್ದಾರೆಂದು ಹಿಟ್ಲರನ ವಾರ್ತಾ ಸಂಸ್ಥೆ ತಿಳಿಸಿದೆ.

ನವಜೀವನ ಕಚೇರಿ ಜಪ್ತಿ

ಅಹಮದಾಬಾದಿನ ದಿವಸ್ಸು ಆಫೀಸಿ ನಗಳು ಮಹಾತ್ಮಾ ಗಾಂಧಿಯವರ 'ನವಜೀವನ' ಆಫೀಸಿಗೆ ನುಗ್ಗಿ ನವಜೀವನ ಪ್ರೆಸ್ಸಿಗೆ ಸೇರಿದ್ದೆಂದು ಬಗ್ಗೆ ಹರಿಜನ ಪತ್ರಿಕೆಯ ಬಗ್ಗೆ ಸಂಬಂಧಿಸಿದ ಬಾಕ್ಸಸನ್ನು ಜಪ್ತಿ ಮಾಡಿ ೬-೧-೪೦ ಯನ್ನು ವಶಪಡಿಸಿಕೊಂಡು ಹೋದರು.

ಹೆಚ್ಚು ತರಕಾರಿ

ನಗರ ಬಳ ತರಕಾರಿ ಬೆಳೆಸುವುದಕ್ಕೆ ನೆರವು ೫೦೦ ಎಕರೆ ಜಮೀನನ್ನು ಮದರಾಸ್ ಸರ್ಕಾರದವರು ಗುತ್ತಿಗೆಗೆ ತೆಗೆದುಕೊಂಡು ೫೦೦೦೦ ರೂ ವೆಚ್ಚದಲ್ಲಿ ಅಲ್ಲಿ ತರಕಾರಿ ಬೆಳೆಯುವ ಯೋಜನೆಯನ್ನು ಜಾರಿಗೆ ತರುವವರಾಗಿದ್ದಾರೆ.

ಇನ್ನೊಂದು ಚಿನ್ನದ ಗಣಿ

ಚಿತ್ರದುರ್ಗ ಜಿಲ್ಲೆಯಲ್ಲಿ ಕೋಲಾರಕ್ಕೆ ದಕ್ಷಿಣದಲ್ಲಿ ಇನ್ನೊಂದು ಚಿನ್ನದ ಗಣಿಯು ಕಂಡ ಹಿಡಿಯಲ್ಪಟ್ಟಿದೆಯೆಂದೂ ಕೋಲಾರದ ಗಣಿಗಿಂತ ಇದು ಸಮನಾಗುವುದೆಂದೂ ಗೊತ್ತಾಗಿದೆ.

ಜರ್ಮನ್ ಸರ್ಕಾರಿ ಕೇಂದ್ರ ಹಿಡಿಯಲು ಯತ್ನ

ಬರ್ಲಿನ್ನಿನಲ್ಲಿ ಜರ್ಮನ್ ಸರ್ಕಾರದ ಭವನಗಳನ್ನು ಹಿಡಿಯಲು ಕೆಲವು ಜನ ಧಾರಿ ಅಧಿಕಾರಿಗಳ ಗುಂಪಿನವರು ಪ್ರಯತ್ನಿಸಿದರೆಂದೂ ಅದನ್ನು ಡಾ॥ ಗೊಬೆಲ್ಸರು ತಪ್ಪಿಸಿದರೆಂದೂ ಹೇಳಲಾಗಿದೆ. "ಹಿಟ್ಲರನಿಗೆ ಗಾಯವಾಗಿದೆ; ಬದುಕುವುದು ಅನುಮಾನ; ಗೊಂದಲಗಳೆದ್ದಿವೆ; ಆಡಳಿತಾಧಿಕಾರವು ಮಾರ್ಷಲ್ ರ ನಾಯಕತ್ವಕ್ಕೆ ವರ್ಗಾಯಿಸಿದೆ ಅಲ್ಲಿಂದ ಸರ್ಕಾರಿ ಭವನಗಳನ್ನು ಹಿಡಿಯತಕ್ಕದ್ದು" ಎಂಬ ಆಜ್ಞೆಯು ಮೇಜರ್ ಜನರಲ್ ರೆಮರ್‌ನಿಗೆ ಕೊಡಲ್ಪಟ್ಟಿತ್ತೆಂದು ಗೊತ್ತಾಗಿದೆ.

ಮಧ್ಯ ಪೋಲೆಂಡ್ ಕದನ

ಮಧ್ಯ ಪೋಲೆಂಡ್ ಮತ್ತು ಬಾಲ್ಟಿಕ್ ರಷ್ಯನ್ನರ ಯುದ್ಧವು ಆರಂಭವಾಗಿದೆ. ಎರಡು ಕಡೆಗಳಿಂದ ಕೆಂಪು ಸೈನ್ಯವು ವಾರ್ಸಾ ಕಡೆ ನುಗ್ಗುತ್ತಿದೆ. ಒಸ್ಸ್ಟ್ರವನ್ನು ರಷ್ಯನರು ಹಿಡಿದಿದ್ದಾರೆ.

ಹಿಟ್ಲರ್ ತಪ್ಪಿಸಿಕೊಂಡ ಬಗೆ

"ಓಬರ್‌ಸಾಲ್ಸ್‌ಬರ್ಗ್" ಎಂಬಲ್ಲಿ ನಡೆದ ಒಂದು ಸಮಾಲೋಚನಾ ಮಧ್ಯಾಹ್ನದ ಸಮ್ಮೇಳನದ ಸಮಯಕ್ಕೆ ಹಿಟ್ಲರನ ಕೊಲೆ ಪ್ರಯತ್ನ ನಡೆಯಿತೆಂದು ಒಂದು ವರದಿ ತಿಳಿಸುತ್ತದೆ. ಹಿಟ್ಲರನು ಬರುವುದು ಎರಡು ನಿಮಿಷ ಮುಂಚಿತವಾಯಿತು. ಕೊಠಡಿ ಬಾಗಿಲಿನಲ್ಲಿ ಅವನು ನಿಂತಿದ್ದಾಗಲೇ ಬಾಂಬು ಸಿಡಿಯಿತು. ಅದೃಷ್ಟದಿಂದ ಅವನು ಬದುಕಿಕೊಂಡನೆಂದು ಗೊತ್ತಾಗಿದೆ.

ಹಿಟ್ಲರ್ ಭಾಷಣ

ಕೊಲೆಯ ಸಂಚಿನ ಕೆಲಸ ಮಾಡಲು ನಡೆದ ಪ್ರಯತ್ನ ಮತ್ತು ಅದರ ಪರಿಣಾಮಗಳನ್ನು ಕುರಿತು ಎಲ್ಲಾ ವಿವರಗಳನ್ನೂ ಹಿಟ್ಲರನು ಜರ್ಮನ್ ಪಾರ್ಲಿಮೆಂಟಿನ ಮುಂದಿಡುವನೆಂದು ನಂಬಲಾಗಿದೆ.

ದಂಗೆಗೆ ಕಾರಣ

ಇನ್ನೊಂದು ವಾಕ್ಯಗಳ ಪ್ರಕಾರ ಯುದ್ಧವನ್ನು ನಿಲ್ಲಿಸಬೇಕೆಂದು ಜರ್ಮನ್ ಸೇನಾಧಿಕಾರಿಗಳು ಹಿಟ್ಲರನಿಗೆ ಸೂಚಿಸಿದಾಗ ಅವನು ಒಪ್ಪದಿದ್ದುದರಿಂದ ಈ ದಂಗೆ ಉಂಟಾಯಿತೆಂದು ತಿಳಿಸಲಾಗಿದೆ

ಶುಭ ಸಂದೇಶಗಳು

'ಸಾಧ್ವಿ'ಯ ದ್ವಿತೀಯ ವಾರ್ಷಿಕೋತ್ಸವಕ್ಕೆ ಆಗಮಿಸಲಾಗದ ಸ್ನೇಹಿತರು ಈ ಕೆಳಗೆ ಕಂಡ ಶುಭಸಂದೇಶಗಳನ್ನು ಕಳುಹಿಸಿದ್ದಾರೆ:—

೧ ಶ್ರೀ ಪಿ. ನಾರಾಯಣಸ್ವಾಮಿ, ಬಿ. ಎ., ಬಿ. ಎಲ್., ಪ್ರೋಕಸ್ಥೆಯ ಉಪಾಧ್ಯಕ್ಷರು [illegible] ಸ್ನೇಹಿತರೇ, ತಮ್ಮ 'ಸಾಧ್ವಿ' ಪತ್ರಿಕೆ ವಾರ್ಷಿಕೋತ್ಸವ ಸಮಾರಂಭಕ್ಕೆ ಭಾಗವಹಿಸಲು ನೇಮಾಲ [illegible] ಕ್ಷಮಿಸಬೇಕೆಂದು ಕೋರುತ್ತೇನೆ. ನನ್ನ ಮನಸ್ಸಿನಲ್ಲಿ ಈ ಎರಡು ವರ್ಷಾರಂಭದ ಕಡೆ [illegible] ನಿಮ್ಮ ಪತ್ರಿಕೆಯು ಯಶಸ್ವಿಯಾಗಿ ಬೆಳೆಯಲಿ. ತನ್ನ [illegible] ಸೇವೆಯನ್ನು [illegible] ತಮ್ಮ ಪತ್ರಿಕೆಗೆ [illegible] ಭಗವಂತನು [illegible].

೨ ಶ್ರೀ ಎಚ್. ಸಿ. ದೇವರಾಜೇ ಅರಸ್, [illegible] ತಮ್ಮ ಪತ್ರಿಕೆಯು ಎರಡನೇ ವಾರ್ಷಿಕೋತ್ಸವಕ್ಕೆ ಕಳುಹಿಸಿದ ಆಹ್ವಾನಕ್ಕಾಗಿ ಅನೇಕ ವಂದನೆಗಳು. [illegible] ಗೌರವದ [illegible] ಭಾಗವಹಿಸಲಾಗದಿರುವುದಕ್ಕೆ ಅತ್ಯಂತ ವಿಷಾದಿಸುತ್ತೇನೆ. ಈ ಸಮಾರಂಭವು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ. ಈ ಸಮಯದಲ್ಲಿ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು [illegible].

೩ ಶ್ರೀ ಟಿ. ಎಸ್. ವಾಚಗೋಪಾಲಯ್ಯಂಗಾರ್, ಎಂ. ಎ., ಎಲ್. ಎಲ್. ಬಿ., ಅಡ್ವೊಕೇಟ್, ಸದಸ್ಯರು:— 'ಸಾಧ್ವಿ' ಪತ್ರಿಕೆಯ ಎರಡನೇ ವಾರ್ಷಿಕೋತ್ಸವಕ್ಕೆ ತಾವು ಕಳುಹಿಸಿದ ಆಹ್ವಾನಕ್ಕಾಗಿ ವಂದಿಸುತ್ತೇನೆ. [illegible] ಸಭೆಯ [illegible] ಭಾಗಿಯಾಗಲು [illegible] ವಿಷಾದಿಸುತ್ತೇನೆ. ತಮ್ಮ ಪತ್ರಿಕೆಗೆ ಸಕಲ ಯಶಸ್ಸೂ, ಅಭ್ಯುದಯವೂ ಉಂಟಾಗಲೆಂದು ಹಾರೈಸುತ್ತೇನೆ.

೪. ಶ್ರೀ ಪಿ. ಸುಬ್ಬರಾಯ ಶಾಸ್ತ್ರಿ, ಎಂ. ಎ., [illegible] ಪ್ರಿನ್ಸಿಪಾಲ್‌ರು:— 'ಸಾಧ್ವಿ' ಪತ್ರಿಕೆಯ ಎರಡನೇ ವಾರ್ಷಿಕೋತ್ಸವದ [illegible] ಕಾರ್ಯಕ್ರಮದ ಆಹ್ವಾನಕ್ಕಾಗಿ [illegible] ಪೇಪರ್ [illegible] ಗೌರವಿಸುವ ಪ್ರಯತ್ನ [illegible] ಈ ಸಮಾರಂಭದಲ್ಲಿ [illegible] ಪತ್ರಿಕೆಯ [illegible] ಹಾರೈಸುತ್ತೇನೆ.

೫ ಶ್ರೀ ಬಿ. ಎಸ್. ಸುಬ್ಬರಾವ್, [illegible] 'ಸಾಧ್ವಿ' [illegible] ಪತ್ರಿಕೆ [illegible] ಬಾಳ [illegible] ಸಾಧಿಸಲಿ [illegible]

ನಿರಂಕುಶತ್ವ ಹೋಗಬೇಕು

ಮಾಜಿ ರೆಸಿಡೆಂಟರ ಅಭಿಪ್ರಾಯ

ಮೈಸೂರಿನ ಮಾಜಿ ರೆಸಿಡೆಂಟರಾದ ಸರ್ ವಿಲಿಯಂ ಬಾರ್ಟನ್‌ರವರು ಲಂಡನ್ನಿನಲ್ಲಿ ಭಾಷಣ ಮಾಡುತ್ತ ಹೀಗೆ ಹೇಳಿದ್ದಾರೆ:—ಇಂದಿನ ಯುದ್ಧವು ಮಾನವ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದೆ. ನಾಜಿ ವಿರುದ್ಧವಾಗಿ ಹೋರಾಡಿದ ಸಾಮ್ರಾಜ್ಯಗಳಲ್ಲಿಯೂ ನಿರಂಕುಶತ್ವವು ಉಳಿಯಾಪುದೆಂದು ಹೇಳಲು ಸಾಧ್ಯವಿಲ್ಲ. ಹಿಂದೂಸ್ಥಾನದ ಅನೇಕ ರಾಜರು ತಮ್ಮ ಪ್ರಜೆಗಳಿಗೆ ತಕ್ಕ ಮಟ್ಟಿನ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಮೈಸೂರು ಒಂದು ರಚನಾತ್ಮಕ ಸರ್ಕಾರವಾಗಿದೆ ರಾಜರುಗಳೆಲ್ಲರೂ ಈಗಿನ ಕಾಲಕ್ಕೆ ತಕ್ಕಂತೆ ರಾಜ್ಯ ಪದ್ಧತಿಯನ್ನು ಅನುಸರಿಸಬೇಕು

ಪ್ರತ್ಯೇಕ ಒಪ್ಪಂದಗಳೇ?

ಈ ಯುದ್ಧದ ಪರಿಣಾಮವಾಗಿ ಹಲವು ರಾಷ್ಟ್ರಗಳಿಗೆ ಇಲ್ಲಿಲ್ಲೇ ತೀರ್ಮಾನಿಸಿದ ಪ್ರತ್ಯೇಕ ಒಪ್ಪಂದಗಳಾದೀತೆಂಬ ಸಂಶಯ ಆಸ್ಟ್ರೇಲಿಯಕ್ಕೆ ಉಂಟಾಗಿರುವಂತಿದೆ ಫ್ರೆಂಚ್, ಪೋರ್ಚುಗೀಸ್ ಮತ್ತು ನೆದರ್‌ಲೆಂಡ್ಸ್ ಸರ್ಕಾರಗಳೊಡನೆ ಯುದ್ಧಾನಂತರ ಆಸ್ಟ್ರೇಲಿಯವು ಸಂಬಂಧ ಬೆಳೆಸುವ ಆಲೋಚನೆ ಇದೆ. ಪ್ರತ್ಯೇಕವಾದ ತೀರ್ಮಾನಿಸಿದ ಒಪ್ಪಂದಗಳಾಗಿ ಇನ್ನೂ ಪೆಸಿಫಿಕ್ಕಿನಲ್ಲಿ ಯುದ್ಧವಾಗುತ್ತಿದ್ದರೆ ಇಲ್ಲಿ ಒಪ್ಪಂದವಾಗಲು ಅಡಚಣೆಯಾಗುವುದೆಂದು ಭಾವಿಸಲಾಗಿದೆ.

ರೋಂ ಪೋಲೀಸರಿಗೆ ೧೩ ರೂ

ಯೂರೋಪಿನಲ್ಲಿರುವ ಎಲ್ಲಾ ಪ್ರಜೆಗಳೂ ನಮ್ಮ ದೇಶದವರಿಗಿಂತ ಹೆಚ್ಚು ಸಂಪಾದನೆ ಮಾಡುತ್ತಿರುವರೆಂಬ ಭಾವನೆಯಿದೆ. ಆದರೆ ರೋಂ ನಗರದ ಪೋಲೀಸರಿಗೆ ನಮ್ಮವರಿಗಿಂತಲೂ ಕಡಿಮೆ ಸಂಬಳವೆಂದು ತಿಳಿದುಬಂದಿದೆ. ಅವರಿಗೆ ತಿಂಗಳಿಗೆ ೧೩-೩-೦ ಮಾತ್ರ ಸಲ್ಲುತ್ತಿದೆ. ಆದ್ದರಿಂದ ಅವರಲ್ಲಿ ಲಂಚ ರುಷುವತ್ತು ಮತ್ತು ಅಕ್ರಮಗಳು ತುಂಬಿವೆ. ಅವರ ಸಂಬಳವನ್ನು ಇಮ್ಮಡಿ ಮಾಡಲು ಪ್ರಯತ್ನವಾಗುತ್ತಿದೆ.

ತಳಿ ಅಭಿವೃದ್ಧಿ ಕಮೀಷನರು

ಇಂಡಿಯಾ ಸರ್ಕಾರದ ತಳಿಗಳ ಅಭಿವೃದ್ಧಿಯ ಕಮೀಷನರಾದ ಮೇಜರ್ ವಿಲಿಯಂಸನ್‌ರವರು ಬೆಂಗಳೂರಿಗೆ ಬಂದಿರುವರು ಅವರು ಇಂದಿನ ಇಂಪೀರಿಯಲ್ ಡೈರಿ ಫಾರಂ, ಪಶುವೈದ್ಯ ರೀಸರ್ಚ್ ಸಂಸ್ಥೆ ಮುಂತಾದವುಗಳನ್ನು ನೋಡಿಕೊಂಡು ಸ್ಥಳೀಯ ಸಂಸ್ಥೆಗಳ ಸಚಿವರೊಡನೆಯೂ ಮಾತುಕತೆ ನಡೆಸುವರೆಂದು ಗೊತ್ತಾಗಿದೆ.

ಟಿ. ಸಿ. ನಟರಾಜ್

ಔಷಧಾಲಯ

ಇಸವಿಯ ನಿತ್ಯಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಆತ್ಮಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಧನ್ವಂತರಿಯ ಆಯುರ್ವೇದಿಯ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ. [illegible]

ಇಂಡಿಯವು ದೊಡ್ಡ ಸೈನ್ಯ ಕ್ಷೇತ್ರವಾಗುತ್ತದೆ

ಮಿತ್ರ ರಾಷ್ಟ್ರಗಳು ತಮ್ಮ ಸಂಪೂರ್ಣ ಶಕ್ತಿಯನ್ನು ಪ್ರಯೋಗಿಸಿ ಜಪಾನರನ್ನು ಸೋಲಿಸುವ ಪ್ರಯತ್ನದಲ್ಲಿ ತೊಡಗುವಾಗ ಹಿಂದೂಸ್ಥಾನದಲ್ಲಿ ಇಡಲ್ಪಡುವ ದೊಡ್ಡ ಸೈನ್ಯಗಳಿಗೆ ಬೇಕಾದ ಸಾಮಗ್ರಿಗಳನ್ನು ಹಿಂದೂಸ್ಥಾನದಲ್ಲಿ ಕೊಂಡುಕೊಳ್ಳುವ ವಿಷಯವು ಬುಧವಾರ ಆಗ್ರಾ ನಗರದಲ್ಲಿ ನಡೆದ ಆರ್ಥಿಕ ಸಮಸ್ಯೆಯ ಸಮ್ಮೇಳನದ ಕಾಲದಲ್ಲಿ ಚರ್ಚಿಸಲ್ಪಟ್ಟಿತು. ಸೆಂಟ್ರಲ್ ಕಮ್ಯಾಂಡಿನ ಎಸ್ಟೇಟ್ ಏಜಂಟ್ ಅಧಿಕಾರಿಗಳು ಭಾಗ ವಹಿಸಿದ್ದರು.

ಪ್ರೊ|| ಮಾಧವ

ಕಲ್ಕತ್ತಾ ವಿಶ್ವವಿದ್ಯಾನಿಲಯದವರು ಪ್ರೊ|| ಮಾಧವರಾವರಿಗೆ ತಮ್ಮ ವಿದ್ಯಾಲಯದ ಗೌರವ ಪ್ರೊಫೆಸರಾಗಿರಲು ಆಹ್ವಾನ ಕಳುಹಿಸಿದ್ದಾರೆ. ಅವರು ತಮ್ಮ ಈಗಿನ ಕೆಲಸದ ಜೊತೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ 'ಸ್ಟಟಿಸ್ಟಿಕ್ಸ್' ವಿಷಯವಾಗಿ ಕೆಲವು ಉಪನ್ಯಾಸಗಳನ್ನು ಕೊಡಬೇಕಾಗಿದೆ. ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನವರೂ ಇವರನ್ನು ಇದೇ ರೀತಿ ಆಹ್ವಾನಿಸಿರುವರೆಂದು ಗೊತ್ತಾಗಿದೆ

ಗಂಡನಿಗೆ ಬಳುವಳಿ

ಅಮೆರಿಕದ ಮೇರಿ ಕ್ಯಾಬೇರ ಎಂಬಾಕೆಯು ತನ್ನ ಗಂಡನಿಗೆ ವಿಚಿತ್ರವಾದ ಒಂದು ಬಳುವಳಿಯನ್ನು ಕೊಟ್ಟು ಮೃತಳಾದಳು. ಗಂಡನು ಬುದ್ಧಿ ಅಲ್ಪ ಮತ್ತು ಕ್ರೂರಿಯೆಂದು ಅವಳ ಭಾವನೆ. ಎರಡು ಡಾಲರ್ರೇ ಅವಳು ಬಿಟ್ಟ ಆಸ್ತಿ. ಇದರ ಮೇಲೆ ಒಂದು ಡಾಲರನ್ನು ತನ್ನ ಗಂಡನು ನೇಣುಹಾಕಿಕೊಳ್ಳಲು ಒಂದು ಹಗ್ಗವನ್ನು ಕೊಳ್ಳಬೇಕೆಂಬುದೇ ಅವಳ ಒಂದು ಷರತ್ತು.

ನವಯೌವನ

ಕೊಟ್ಟು, ಬಲಹೀನತೆ, ಮುಖಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಲು ಮದನಮಂಜರಿ ಮಾತ್ರೆಗಳು ದಿವ್ಯ ಔಷಧ. ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ, 184 ಚೈನಾ ಬಜಾರು, ಮದರಾಸು

ಅಶೋಕಾ ಫಾರ್ಮಸಿ

ಬ್ಯಾಂಕು ರಸ್ತೆ, ಮೈಸೂರು

ಗಂಡಸಿಪೇಟೆ: ಜಿ. ಎಸ್. ಕೃಷ್ಣಪ್ಪ

Edited, printed and published by A. R. Nagarajan, at the Sadhvi Press, D Subbiah Road, Mysore.

ಅಮೆರಿಕಾದವರ ಪರಿವರ್ತನೆ

ಹಿಂದೂಸ್ಥಾನದ ಸಮಸ್ಯೆ ವಿಷಯದಲ್ಲಿ ಇಂಡಿಯಾ ಸೆಕ್ರೆಟರಿ ಮಿ|| ಅಮೇರಿಯವರು, ಮಿ|| ಚರ್ಚಿಲರು ಒಪ್ಪಿದರೆ, ಉದಾರ ನೀತಿಯನ್ನು ಅನುಸರಿಸಲು ಸಿದ್ಧರಾಗಿರುವರೆಂದೂ ಇಲ್ಲಿನ ಘಟನಾವಳಿಗಳನ್ನು ನೋಡಿ ಅವರ ಮನಸ್ಸು ಕರಗಿದೆಯೆಂದೂ ಹೇಳಲಾಗಿದೆ ಇದರಿಂದ ಬಂಧನದಲ್ಲಿರುವ ಮುಖಂಡರ ಬಿಡುಗಡೆಯಾಗುವ ಸಂಭವವಿದೆ.

ಮಿತ್ರ ಮುನ್ನಡೆಗೆ ತಡೆ

ಜಪಾನರ ವಿನಾಶ ಕಾರ್ಯಗಳಿಂದಲೂ ಮಳೆ ಹಾವಳಿಯಿಂದಲೂ ಟಿಡ್ಡಿಂ ಮೇಲೆ ಮಿತ್ರ ಧಾಳಿಯು ಸ್ವಲ್ಪ ತಡೆಗಟ್ಟಲ್ಪಟ್ಟಿದೆ. ಟಿಡ್ಡಿಂ ರಸ್ತೆಯ ಮೇಲೆ ಎಡಬಿಡದೆ ವಿಮಾನಗಳಿಂದ ಬಾಂಬುಗಳನ್ನು ಸುರಿಸಲಾಗುತ್ತಿದೆ

೪೮೦೦೦ ಪೌಂ. ರೇಡಿಯೋ

ಜ|| ಮಾಂಟೆಗೋಮರಿಯವರು ತಮ್ಮ ಬಳಿ ಯಾವಾಗಲೂ ಇಟ್ಟುಕೊಂಡಿರುವ ರೇಡಿಯೋ ಸೆಟ್ಟುಗಳಿಗೆ ೪೮೦೦೦ ಪೌಂಡು ಬೆಲೆಯಾಗುತ್ತದೆ. ಸೈನ್ಯವು ಸಂಚರಿಸುತ್ತಿರುವಾಗಲೇ ಒಂದು ತಂತಿವಿನವರು ಮತ್ತೊಂದು ತಂತಿಯೊಡನೆ ಮಾತನಾಡಲು ಸೌಕರ್ಯವಾಗುವಂತಹ ರೇಡಿಯೋ ಸೆಟ್ಟಿನ ಬೆಲೆ ೬೫೦೦೦ ಪೌಂಡು

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ!

ಚಂದಾ ತಿಂಗಳಿಗೆ 0-8-0 ಮಾತ್ರ

ಪರಸ್ಥಳಕ್ಕೆ ಟಪಾಲು ಮೂಲಕ 1-0-0

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.

ಆಯುರ್ವೇದ ವೈದ್ಯಭೂಷಣ ಪಂಡಿತ

ಕೆ. ವಿ. ವೆಂಕಟರಾಮಯ್ಯ,

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ,

ಅರಕಲವಾಡಿ (ಚಾಮರಾಜನಗರ ತಾ||)

ಶ್ರೀಯುತರ ಸೌಕರ್ಯಕ್ಕೆ

೩೦ ವರ್ಷಗಳಿಂದಲೂ ಪ್ರತ್ಯೇಕವಾಗಿ ವ್ಯಾಪಾರ ಕೆಲಸ ನಡೆಸುತ್ತಿರುವರಾಗಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಹೋಟಲ್ಲು ರೀಸರ್ ಕಾರ್ಖಾನೆಗಳಿಗೆ ಸಕ್ಕರೆ ಕೊಡುವುದಕ್ಕೆ ಪ್ರತಿಯಾಗಿ ಬೂರಾ ಮತ್ತು ಅಚ್ಚುಕ್ಕರೆ ಕೊಡಲ್ಪಡುತ್ತದೆ.

WEEKLY EDITION

ಸಂಪುಟ ೯] ಸೋಮವಾರ ೨೪-೭-೪೪ [ಸಂಚಿಕೆ ೧

ಜರ್ಮನಿಯಲ್ಲಿ ಹೊಸ ಸರ್ಕಾರ ಸ್ಥಾಪನೆ

ಹಿಟ್ಲರನ ಪಲಾಯನಕ್ಕೆ ವಿಮಾನ ಸಿದ್ಧತೆಗಳೇ ?

ಪೂರ್ವಪ್ರಷ್ಯದಲ್ಲಿ ಜರ್ಮನ್ ಸೈನಿಕರ ದಂಗೆ

ಜರ್ಮನಿಯಲ್ಲಿ ಹೊಸ ಸರ್ಕಾರ

ಜರ್ಮನ್ ಸೈನ್ಯದ ದೊಡ್ಡ ದೊಡ್ಡ ಅಧಿಕಾರಿಗಳನ್ನೊಳಗೊಂಡ ಒಂದು ಹೊಸ ಜರ್ಮನ್ ಸರ್ಕಾರವನ್ನು ರಚಿಸಲಾಗಿದೆ. ಎಲ್ಲಾ ನಾಜಿ ಅಧಿಕಾರಿಗಳನ್ನೂ ದಸ್ತಗಿರಿ ಮಾಡಿರುವ ಒಂದು ಪ್ರದೇಶದಲ್ಲಿ ಅದು ಅಧಿಕಾರವನ್ನು ಚಲಾಯಿಸುತ್ತದೆ. ವಾನ್ ಲೀಟಿಬ್, ಕ|| ಜ|| ಫ್ರಾಂ, ಜ|| ಬ್ರೌಚಿಷ್, ಜ|| ಹಾಲ್ಡರ್ ಮತ್ತು ಜ|| ವಾನ್ ಬಾಕ್ ಇವರುಗಳು ಈ ಹೊಸ ಸರ್ಕಾರದಲ್ಲಿ ಸೇರಿರುವರು—ಎಂದು ಒಂದು ಜರ್ಮನ್ ಗುಪ್ತ ಸಂಸ್ಥೆಯು ಹೇಳಿದುದಾಗಿ ಮಾಸ್ಕೋ ರೇಡಿಯೋ ಪ್ರಕಟಿಸಿದೆ.

ದಕ್ಷಿಣ ಜರ್ಮನಿಯಲ್ಲಿ ಕದನ

ಕೆಲವು ಸೈನಿಕ ತಂಡಗಳು ದಂಗೆ ಎದ್ದಿರುವುದರಿಂದ ದಕ್ಷಿಣ ಜರ್ಮನಿಯಲ್ಲಿ ಕದನವಾಗುತ್ತಿದೆಯೆಂದು ಜರ್ಮನ್ ರಾಯಭಾರಿ ಕಚೇರಿಯು ತಿಳಿಸುವುದಾಗಿ ವರದಿಯಾಗಿದೆ

ಹಿಟ್ಲರ್ ಪಲಾಯನದ ಸಿದ್ಧತೆ

ಆರು ಸಾವಿರ ಮೈಲಿ ಪ್ರಯಾಣಕ್ಕೆ ಸಾಕಾಗುವಷ್ಟು ಪೆಟ್ರೋಲ್ ತುಂಬಿದ ೬ ದೊಡ್ಡ ವಿಮಾನಗಳು ಹಿಟ್ಲರ್ ಮತ್ತು ಅವನ ಸಹಪಾಟಿಗಳ ಉಪಯೋಗಕ್ಕಾಗಿ ಸಿದ್ಧವಾಗಿವೆಯೆಂದು ಹೇಳಲಾಗಿದೆ. ದಕ್ಷಿಣ ಅಮೆರಿಕಾ ಅಥವಾ ಪೂರ್ವ ಏಷ್ಯದಲ್ಲಿ ಜಪಾನ್ ಆಕ್ರಮಿತ ಪ್ರದೇಶಗಳಿಗೆ ೬೦೦೦ ಮೈಲಿಯಾಗುವುದೆಂದು ಹೇಳಲಾಗಿದೆ

ಹಿಟ್ಲರ್ ಮುಸೋಲಿನಿ ಭೇಟಿ

ಮುಸೋಲಿನಿಯು ಹಿಟ್ಲರನಿಗೆ ಭೇಟಿ ಕೊಟ್ಟನು. ದೊಡ್ಡ ಮರ್ಯಾದೆಯಿಂದ ಅವನನ್ನು ಸ್ವಾಗತಿಸಲಾಯಿತು. ಜರ್ಮನ್ ಸುದ್ದಿಗಳ ಮೇಲೆ ಬಹಳ ನಿರ್ಬಂಧಗಳು ಹಾಕಲ್ಪಟ್ಟಿವೆ. ಬರ್ಲಿನ್, ಕೀಲ್, ಹ್ಯಾಂಬರ್ಗುಗಳಲ್ಲಿ ದಂಗೆ ಎದ್ದಿವೆ ಎಂಬುದನ್ನು ಬರ್ಲಿನ್ ರೇಡಿಯೋವು ಅಲ್ಲಗಳೆದಿದೆ. ದಂಗೆಕೋರ ಸೇನಾಪತಿಗಳು ಇನ್ನೂ ದಸ್ತಗಿರಿಯಾಗಿಲ್ಲವೆಂದೂ ಧಾರಾಳವಾಗಿ ಓಡಾಡುತ್ತಿರುವರೆಂದೂ ವರದಿಯಾಗಿದೆ.

ಹಿಟ್ಲರನ ವಿನಂತಿ

ತನ್ನ ಸೇನೆಗಳಿಗೆ ಹಿಟ್ಲರನು ಈ ರೀತಿ ವಿನಂತಿ ಮಾಡಿದ್ದಾನೆ:—

ನನ್ನನ್ನೂ ಇತರ ಅಧಿಕಾರಿಗಳನ್ನೂ ಕೊಂದು ಆಡಳಿತವನ್ನು ಆಕ್ರಮಿಸಲು ತೀಗೇಡಿ ಅಧಿಕಾರಿಗಳ ಒಂದು ಸಣ್ಣ ಗುಂಪು ಪ್ರಯತ್ನಿಸಿತು. ಈ ಪ್ರಯತ್ನವು ವಿಫಲವಾಗುವಂತೆ ದೈವಾಜ್ಞೆಯು ಮಾಡಿತು. ತಕ್ಷಣವೇ ದ್ರೋಹಿಗಳನ್ನೂ ನಿರ್ಮೂಲ ಅಥವಾ ದಸ್ತಗಿರಿ ಮಾಡಲಾಯಿತು. ಇನ್ನೆಲ್ಲಾ ಆದರೂ ಜಯವು ನಮಗೆ ದೊರೆಯುವವರೆಗೆ ನೀವೆಲ್ಲರೂ ವಿಧೇಯತೆಯಿಂದ ಎಂದಿನಂತೆ ಕಾದಾಡುವಿರೆಂದು ನಾನು ಬಲ್ಲೆ.

ಜಪಾನ್-ಜರ್ಮನಿ ಸಂಬಂಧ

ಹೊಸ ಜಪಾನಿ ಸರ್ಕಾರವು ಹಿಂದಿನ ನೀತಿಯಲ್ಲಿ ಇನ್ನು ಮುಂದೆ ಜಪಾನ್ ಜರ್ಮನಿಗಳ ಸಂಬಂಧವನ್ನು ಹೆಚ್ಚು ದೃಢಮೂಲವಾಗುವಂತೆ ಮಾಡುವ ಉದ್ದೇಶ [illegible] ಟೋಕಿಯೋದ [illegible] ಇಡಲಾಗಿದೆ

ಕೊಲೆಪ್ರಯತ್ನದ ಹಿನ್ನೆಲೆ

ಹಿಟ್ಲರ್ ಕೊಲೆಪ್ರಯತ್ನದ ಹಿನ್ನೆಲೆಯನ್ನು ಕುರಿತು ಜರ್ಮನ್ ಕೆಲಸಗಾರರ ನಾಯಕ ಡಾ|| ರಾಬರ್ಟ್ ಲೇಯವರು ಹೀಗೆ ಹೇಳಿದ್ದಾರೆ.—ಅತ್ಯಂತ ಘೋರ ವೈರಿ ಒಂದನ್ನು ಇಂಗ್ಲೆಂಡಿನಿಂದ ತಂದು ಬಚ್ಚಿಡಲಾಗಿತ್ತು. ವಾನ್‌ಸ್ಟೌಫಿನ ಬರ್ಗ್ ಕೌಂಟನು ಅದನ್ನು ತರಿಸಲು ಆರ್ಡರ್ ಕೊಟ್ಟವನು. ಇಂಗ್ಲೆಂಡ್ ಮತ್ತು ಅದರ ಲಾರ್ಡುಗಳು ಅದನ್ನು ಒದಗಿಸಿದರು. ಜರ್ಮನಿಯ ಉನ್ನತಾಧಿಕಾರಿಗಳು ಅದನ್ನು ಪ್ರಯೋಗಿಸಿದರು

ಬರ್ಲಿನ್ನಿನಲ್ಲಿ 'ಮುತ್ತಿಗೆ'

ಹಿಟ್ಲರ್ ಕೊಲೆ ಪ್ರಯತ್ನ ಮತ್ತು ಅಧಿಕಾರಿಗಳ ದಂಗೆಗಳ ವಿಷಯದಲ್ಲಿ ೨೪ ಗಂಟೆ ಕಾಲ ಮೌನವನ್ನು ಧರಿಸಿ ಅನಂತರ ಜರ್ಮನ್ ರೇಡಿಯೋವು ಬರ್ಲಿನ್ನಿನಲ್ಲಿ ಮುತ್ತಿಗೆ ಪರಿಸ್ಥಿತಿಯೇ ಉಂಟಾಗಿದೆಯೆಂದು ತಿಳಿಸಿತು. ಇದರಿಂದ ಸರ್ಕಾರದ ಕೈ ಇನ್ನೂ ಬಿಗಿಯಾಗುತ್ತದೆ. ಕೊಲೆ ಪಾತಕರು, ವಿನಾಶಕಾರರು, ದುರ್ಬಲ ಹೃದಯರು ಇವರುಗಳು ಎಲ್ಲಿದ್ದರೂ ನಾಶ ಮಾಡಲಾಗುವುದು—ಎಂದು ತಿಳಿಸಲಾಗಿದೆ.

ಪೂರ್ವ ಪ್ರಷ್ಯದಲ್ಲಿ ದೊಂಬಿ

ಜರ್ಮನ್ ಸೈನ್ಯಗಳು ಪೂರ್ವ ಪ್ರಷ್ಯದಲ್ಲಿಯೂ ದಂಗೆ ಎದ್ದಿರುವುದಾಗಿ ವದಂತಿ ಇದೆ. ನೂರಾರು ಜನ ಜರ್ಮನ್ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ ಅಥವ ಕೊಲ್ಲಲಾಗಿದೆ. ಬರ್ಲಿನ್ ನಗರದಲ್ಲಿ ಗೆಸ್ಟಪೋ ಸೈನ್ಯಗಳು ರಕ್ಷಣೆಗಾಗಿ ಬೀದಿಗಳಲ್ಲಿ ಕಾವಲಿದ್ದಾರೆ. ಪೂರ್ವ ಪ್ರಷ್ಯದ ರಾಜಧಾನಿಯಾದ ಕೋನಿಗ್ಸ್‌ಬರ್ಗಿನಲ್ಲಿ ಮಾರ್ಷಲ್ ಲಾ ಜಾರಿ ಮಾಡಲಾಗಿದೆ

ಚಿನ್ನಕ್ಕೆ ಬದಲು ಕಲ್ಲು

ಬೊಂಬಾಯಿನಿಂದ ಮದರಾಸಿಗೆ ಕಳುಹಿಸಿದ ಚಿನ್ನದ ಪಾರ್ಸಲ್ಲಿನ ಬಗ್ಗೆ ಗುಮಾನಿ ಬಂದು ಪೋಲೀಸಿನವರು [illegible] ಮದರಾಸ್ ಸೆಂಟ್ರಲ್ ಸ್ಟೇಷನ್ನಿನಲ್ಲಿ ಒಡೆದು ನೋಡಲಾಗಿ ಅದರಲ್ಲಿ ತಂತಿದ ಬೆಣಚು ಕಲ್ಲುಗಳನ್ನು ಕಂಡರು. ಈ ಬಗ್ಗೆ ಬಾಂಬೆ ಸಿ.ಐ.ಡಿ. [illegible] ತನಿಖೆ ನಡೆಸುತ್ತಿದೆ

ಸಿವಿಲ್ ಆಡಳಿತಕ್ಕೆ ಮಿಲಿಟರಿ ಅಧಿಕಾರಿಗಳು

ಯುದ್ಧ ಕಾಲದಲ್ಲಿಯೂ ಆದಾದ ಸ್ವಲ್ಪ ಕಾಲದ ವರೆಗೂ ಪ್ರಾಂತಿಕ ಆಡಳಿತದ ಉಪಯೋಗಕ್ಕಾಗಿ ೭೦೦ ಜನ ಮಿಲಿಟರಿ ಅಧಿಕಾರಿಗಳನ್ನು ಇಂಡಿಯಾ ಸರ್ಕಾರದವರು ಕಟ್ಟಿಕೊಡಲಿದ್ದಾರೆಂದು ತಿಳಿಯಬರುತ್ತದೆ. ಅವರಲ್ಲಿ ಭಾರತೀಯರೂ ವಿದೇಶೀಯರೂ ಇರುವರು. ಸಂಬಳ ಒಂದು ವರ್ಷಕ್ಕೆ ೬೦೦ ಇನ್ನೊಂದಕ್ಕೆ ೧೨೦೦ ರೂ. ಚೆನ್ನಾಗಿ ಕೆಲಸ ಮಾಡುವವರನ್ನು ಹೆಚ್ಚು ಕಾಲ ಇಟ್ಟುಕೊಳ್ಳಲಾಗುವುದು.

೧೦೦೦೦ ರೂ. ವೇತನ

ಆಕ್ಸ್‌ಫರ್ಡಿನಲ್ಲಿ ೨ ವರ್ಷಗಳ ಕಾಲ ಅರಣ್ಯ 'ಇಂಜನಿಯರಿಂಗ್' ಅಭ್ಯಾಸವನ್ನು ಕಲಿಯುವುದಕ್ಕಾಗಿ ಶಿವಮೊಗ್ಗ ಡಿ|| ಫಾರೆಸ್ಟ್ ರೇಂಜರಾಗಿರುವ ಶ್ರೀ ಎಸ್. ಕೆ. ಅನಂತನಾರಾಯಣ ಅಯ್ಯರ್ ಅವರಿಗೆ ಟಾಟಾ ಕಂಪೆನಿಯವರು ಹತ್ತು ಸಾವಿರ ರೂ. ವೇತನವನ್ನು ಕೊಟ್ಟಿರುವರು. ಅಯ್ಯರವರು ಸದ್ಯದಲ್ಲೇ ಆಕ್ಸ್‌ಫರ್ಡಿಗೆ ತೆರಳುವರು

ರೈಲ್ವೆ ಸಾಮಗ್ರಿಗಳು ಅರವತ್ತೆರಡು ಕೋಟಿ

ಬರುವ ವರ್ಷ ಭಾರತದ ರೈಲುಗಳಿಗೆ ೬೨ ಕೋಟಿ ರೂ ನ ಸಾಮಾನುಗಳನ್ನು ಕೊಳ್ಳುವಂತೆ ಅಂದಾಜಾಗಿದೆ. ಸಾಧ್ಯವಾದಷ್ಟು ಪದಾರ್ಥಗಳನ್ನು ಹಿಂದೂಸ್ಥಾನದಲ್ಲಿ ಕೊಳ್ಳಲಾಗುವುದು. ಉಳಿದುವನ್ನು ಇಂಗ್ಲೆಂಡಿನಿಂದ ತರಿಸಲಾಗುವುದು

ಹೋರರಿಗೆ ಅಪಮಾನವೇ ?

ಜ|| ಫ್ರಾಂಕೋರವರು ಕೊಟ್ಟ ಒಂದು ಸಂತೋಷ ಕೂಟದಲ್ಲಿ ಯುದ್ಧ ಮಂತ್ರಿ ಅಸೆನ್ಸಿಯೋರವರ ಪತ್ನಿಯು ತಮ್ಮ ಪತಿಯ ಜೊತೆಯನ್ನು ಬಿಟ್ಟು ಜರ್ಮನ್ ರಾಯಭಾರಿ ಪತ್ನಿ ಜೊತೆ ಹೋದುದಕ್ಕಾಗಿ ತಮಗೆ ಅವಮಾನವಾಯಿತೆಂದು ಬ್ರಿ|| ರಾಯಭಾರಿ ಸರ್ ಸಾಮ್ಯುಯಲ್ ಹೋರ್ ರವರು ಕೂಟವನ್ನು ಬಿಟ್ಟು ಹೊರಗೆ ಬಂದರು. ಅಮೇರಿಕನ್ ಬ್ರಿ|| ಅತಿಥಿಗಳೆಲ್ಲರು ಒಂದು [illegible] ಬಹಳ ಕೋಲಾಹಲವುಂಟುಮಾಡಿದ.

ವಿ. ವಿ. ಸಂಘದ ಚುನಾವಣೆ

ಮೈಸೂರು ೨೪

ಮೈಸೂರು ವಿಶ್ವವಿದ್ಯಾನಿಲಯ ಸಂಘದ ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳ ಚುನಾವಣೆಯು ಅಸೆಂಬ್ಲಿ ಕೌನ್ಸಿಲ್‌ಗಳ ಚುನಾವಣೆಯಂತೆ ಭಾರಿ ಭಾರಿ ಪ್ರಚಾರದೊಡನೆ, ಹುಡುಗರು ಮತ್ತು [illegible] ಡನೆ ಬಹಳ ಬಿರುಸಾಗಿ ಕಾಲೇಜ್ ಒಳಗೆ ನಡೆಯುತ್ತಿದೆ.

ಸದ್ವಿದ್ಯಾ ಪಾಠಶಾಲಾ

ಈ ಪಾಠಶಾಲೆಯ ಉಪಾಧ್ಯಾಯರುಗಳೆಲ್ಲರೂ ಸೇರಿ ಆಳುವ ಮಹಾಸ್ವಾಮಿಯವರ ವರ್ಧಂತ್ಯುತ್ಸವವನ್ನು ಈ ಸ್ಕೂಲಿನ ಮ್ಯಾನೇಜರವರಾದ ಧರ್ಮಪ್ರವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಶುಕ್ರವಾರ (೨೧-೭-೪೪) ದ ದಿನ ನೆರವೇರಿಸಿದರು. ಪಾಠಶಾಲೆಯ ಹಾಲಿನಲ್ಲಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಅಂದವಾಗಿ ಅಲಂಕರಿಸಿದ್ದರು. ಪಾಠಶಾಲೆಯ ವಿದ್ಯಾರ್ಥಿಗಳೆಲ್ಲರೂ ಸೇರಿ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ನಡೆಸಿದ ತರುವಾಯ ಬಾಲಕರು ಸಂಗೀತವನ್ನು ಹಾಡಿದರು. ಅಧ್ಯಕ್ಷರು ಮಹಾರಾಜರವರ ಜೀವನ, ರಾಜ್ಯಭಾರ ಇವುಗಳ ವಿಚಾರವಾಗಿ ಉಪನ್ಯಾಸಮಾಡಿದರು. ವಿದ್ಯಾರ್ಥಿಗಳಿಗೆ ಬುದ್ಧಿವಾದ ಹೇಳಿ ಶ್ರೀಮನ್ಮಹಾರಾಜರವರಿಗೂ ರಾಜಮನೆತನದವರಿಗೂ ಸಹ ಮಂಗಳಗಳನ್ನು ಕೋರಿ ಸಭೆಯನ್ನು ಜಯಘೋಷದೊಡನೆ ಮುಕ್ತಾಯಗೊಳಿಸಿದನಂತರ ವಿದ್ಯಾರ್ಥಿಗಳಿಗೆ ಲಾಡುಗಳನ್ನು ಹಂಚಲಾಯಿತು

ಶ್ರೀ ಶಾರದಾ ಸಂಘ

ಜೆಡವಾಡದಿಂದ ರಾಜಧಾನಿಗೆ ದಯಮಾಡಿಸಿರುವ ಶ್ರೀ ಮಧ್ವ ವಿದ್ಯಾವಾಚಸ್ಪತಿ ಸಾಹಿತ್ಯ ಸರಸ್ವತಿ ಇತ್ಯಾದಿ ಬಿರುದಾಂಕಿತರಾದ ವಿದ್ವಾನ್ ಶ್ರೀ ದೋರೆ ವೆಂಕಟಸ್ವಾಮಿಗಳವರು ೨೫-೭-೪೪ನೇ ಮಂಗಳವಾರ ರಾತ್ರಿ ೯-೩೦ ಗಂಟೆಗೆ ಮೈಸೂರು ಆರೋಗ್ಯ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ 'ಶ್ರೀ ಕೃಷ್ಣನ ಚರಿತ್ರೆ' ಎಂಬ ಅಧ್ಯಾಯವನ್ನು ಭಕ್ತಿಪ್ರೋತ್ಸಾಹನದಿಂದ ವಿಚಿತವಾದ ಭಾಗವತದಿಂದ ಓದಲು ಒಪ್ಪಿರುವರು. ಸಂಘದ ಅಧ್ಯಕ್ಷರಾದ ಶ್ರೀಯುತ ಪುಟ್ಟ ಗೋಪಾಲಕೃಷ್ಣಶ್ರೇಷ್ಠಿಯವರು ಅಧ್ಯಕ್ಷತೆ ವಹಿಸಲು ದಯಮಾಡಿ ಒಪ್ಪಿರುವರು. ಸರ್ವರಿಗೂ ಆಹ್ವಾನವುಂಟು

ಕಳ್ಳತನ

ಮಂಡಿ ಮೊಹಲ್ಲಾ ರಾ|| ಗುಲಾಂ [illegible] ರವರ ಪತ್ನಿಯವರ ಸುಮಾರು ೧೭೫ ರೂ ಬೆಲೆ ಬಾಳುವ ಚಿನ್ನದ ಹಾರವೊಂದು ಕಳ್ಳತನವಾಗಿದೆಯೆಂದೂ ಇದೇ ಮೊಹಲ್ಲಾ [illegible] ರವರ ಮನೆಯಲ್ಲಿ [illegible] ಸುಮಾರು ೭೫ ರೂ ಬೆಲೆ ಬಾಳುವಷ್ಟು ಪಾತ್ರೆಗಳನ್ನು ಕಳವು ಮಾಡಿದ್ದಾರೆಂದೂ ಪೋಲೀಸ್ ದೂರು ಬಂದಿದೆ. ತನಿಖೆ ನಡೆಯುತ್ತಿದೆ

ನಂಬಿಕೆ ದ್ರೋಹದ ಮೊಕದ್ದಮೆ ವಜಾ ಆಯಿತು

ಶ್ರೀ [illegible] ಶ್ರೀಮತಿ [illegible] ಎಂಬುವರ ಮೇಲೆ ಶ್ರೀ ಎ. ವಿ. [illegible] ಎಂಬುವರು ನ್ಯಾಯಾಧಿಕಾರರ ಕೋರ್ಟಿನಲ್ಲಿ ಹಾಕಿದ್ದ ನಂಬಿಕೆ ದ್ರೋಹದ ಮೊಕದ್ದಮೆ [illegible] ದಿನ ವಜಾ ಆಯಿತು.

ಸಾಧ್ವಿ ಸತ್ಕಾರ ಕೂಟ

ಮೈಸೂರು ೨೪

"ಸಾಧ್ವಿ" ದ್ವಿತೀಯ ವಾರ್ಷಿಕೋತ್ಸವ ಸಂಬಂಧದಲ್ಲಿ ವ್ಯವಸ್ಥಾಪಕರಾದ ಶ್ರೀಮಾನ್ ಅಗರಂ ರಂಗಯ್ಯನವರು ನಿನ್ನೆ ಸಂಜೆ ಪ್ರಿನ್ಸೆಸ್ ಭವನದಲ್ಲೊಂದು ಸತ್ಕಾರಕೂಟವನ್ನಿತ್ತರು. ಪತ್ರಿಕೋದ್ಯೋಗಿಗಳು, ಪೌರ ಸಭಾ ಸದಸ್ಯರು, ಸಾಧ್ವಿ ಪತ್ರಿಕೆ ಕೆಲಸಗಾರರು, ಪ್ರಕಟಣಕಾರರು ಶ್ರೀಗಳಾದ ಹೆಚ್. ಸಿ. ದಾಸಪ್ಪನವರು ಎಸ್. ರಂಗರಾಮಯ್ಯನವರು ಎಸ್. ಚನ್ನಯ್ಯನವರು ಫೋಟೋಗ್ರಾಫರ್ ಆದ ರಾ|| ಟಿ|| ರಾಮಸ್ವಾಮಿಯವರು, ಪಿ. ಆರ್. ರಾಮಯ್ಯನವರು ಮುಂತಾಗಿ ನೂರಾರು ಜನರು ಆಗಮಿಸಿದ್ದರು.

ಉಪಹಾರಾನಂತರ ಶ್ರೀ|| ಅಗರಂ ರಂಗಯ್ಯನವರು ಮಾತನಾಡಿ ಕೇಳಿದ್ದೇನೆಂದರೆ, ಸಾಧ್ವೀ ಪತ್ರಿಕೆಯು ದ್ವಿತೀಯ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಈ ಪತ್ರಿಕೆಯ ಹಿತೈಷಿಗಳನ್ನು ನಾನಾ ರೀತಿಯಲ್ಲಿ ಇದಕ್ಕೆ ಬೆಂಬಲ ಕೊಡುವವರನ್ನೂ ಮತ್ತು ಇದನ್ನು ನಡೆಯಿಸುವ ಕಾರ್ಯದಲ್ಲಿ ಶ್ರಮಿಸುವವರೆಲ್ಲರನ್ನೂ ಇಲ್ಲಿಗೆ ಆಹ್ವಾನಿಸಿ, ಪತ್ರಿಕೆಗಳ, ಸಾರ್ವಜನಿಕರಿಗೂ ನಿಕಟವಾದ ಸಂಬಂಧವಿರುವುದನ್ನು, ಪತ್ರಿಕೋದ್ಯಮದ [illegible] ಅನುಭವಗಳನ್ನು ತಿಳಿಸಿ, ನಮ್ಮ ಕರ್ತವ್ಯಗಳನ್ನು [illegible] ಕೊಟ್ಟಿದ್ದಕ್ಕಾಗಿ [illegible] ವಂದಿಸುತ್ತೇನೆ. [illegible] ದೇಶಗಳಲ್ಲಿ ವೃತ್ತ ಪತ್ರಿಕೆಗಳ [illegible] ಸಂಪೂರ್ಣ ಸ್ವಾತಂತ್ರ್ಯವುಂಟು [illegible] ಮುಕ್ತ ಮಂಡಲಿ, [illegible] ಸಭೆಗಳಂತೆ [illegible] ಪ್ರಜೆಗಳಿಗೂ [illegible] ಸಂಬಂಧ ಮಾಡಿಕೊಡುತ್ತದೆ. ಪತ್ರಿಕೋದ್ಯಮದಲ್ಲಿ ಬಹಳ ಎಡರುತೊಡರುಗಳು [illegible] ಪತ್ರಿಕೆಗಳನ್ನು [illegible] ಪ್ರಕಾಶ ಜನರೂ ಪತ್ರಿಕೆಗಳೂ ಒಂದು ಕುಟುಂಬದಂತೆ. ಈ ಭಾವನೆಯನ್ನು [illegible] ನಾವು ಪ್ರತಿ [illegible] ಈ ರೀತಿ ಒಂದು ಕಡೆ ಸೇರುವ [illegible] 'ಸಾಧ್ವಿ' [illegible] ಸಾರ್ವಜನಿಕರ ಬೆಂಬಲಕ್ಕೆ ಪತ್ರಿಕೆಗಳು [illegible] ಭಾಗಗಳಾಗಬೇಕು. [illegible] ಜನ ಅಭಿಪ್ರಾಯಗಳಿಗೆ ಪತ್ರಿಕೆಗಳಲ್ಲಿ [illegible] ಮಾರ್ಗಗಳಲ್ಲಿ [illegible] ಈ ದಿನ 'ಸಾಧ್ವಿ' ಪತ್ರಿಕೆಯು ದ್ವಿತೀಯ ವಾರ್ಷಿಕೋತ್ಸವದ ಈ ಸಮಾರಂಭಕ್ಕೆ [illegible] ಆಹ್ವಾನಿಸಿ, ಈ ದಿನ [illegible] ನಡೆಯಿಸಲಾಗಿ [illegible] 'ಸಾಧ್ವಿ' [illegible]

[illegible], "ತಾಯಿನಾಡು" ಪತ್ರಿಕೆಯ ಮಾಲೀಕರಾದ ಶ್ರೀ ಪಿ. ಆರ್. ರಾಮಯ್ಯನವರು, [illegible] 'ತಾಯಿನಾಡು' [illegible] 'ಸಾಧ್ವಿ' [illegible] ತಾಯಿನಾಡನ್ನು [illegible] 'ಸಾಧ್ವಿ' [illegible] ಪತ್ರಿಕೆಯನ್ನಾಗಿ [illegible] ಪತ್ರಿಕೆ [illegible]

ಗೂ, ನನಗೂ ಶ್ರೀ|| ಅಗರಂ ರಂಗಯ್ಯನವರಿಗೂ ಈ ಒಂದು ವಿಶೇಷ ಬಾಂಧವ್ಯವೂ ಇದೆ. ಪತ್ರಿಕೆಗಳನ್ನು ನಡೆಯಿಸುವುದು ಪ್ರಯಾಸಕರ. ಅದರಲ್ಲೂ ಮೂಗು ಬಾಯನ್ನು ಹಿಡಿದುಬಿಡುವ ಈ ಕಾಲದಲ್ಲಂತೂ ಇದು ಬಹಳ ಕಷ್ಟಕರವಾದುದು. ಆದರೂ ಇದು ಅಗತ್ಯ. ಜನರ ಅಭಿಪ್ರಾಯಗಳು ವರ್ತಮಾನ ಪತ್ರಿಕೆಗಳ ಮೂಲಕ ಹೊರಬೀಳಬೇಕೇ ವಿನಃ ಅನ್ಯಥಾ ದಾರಿಯಿಲ್ಲ. ಪತ್ರಿಕೆಗಳು ಜನರಿಗೆ ಕಣ್ಣಾಗಿವೆ, ಇವು ಕಿವಿಗಳಂತಿವೆ, ಇವು ಆತ್ಮನಂತಿರುತ್ತವೆ. ಕೆಲವು ವೇಳೆ ಪತ್ರಿಕೆಗಳ ಅಭಿಪ್ರಾಯಗಳು ಜನರಿಗೆ ಹಿಡಿಯದೆ ಕಹಿಯಾಗಿರಬಹುದು. ಆದರೂ ಪತ್ರಿಕಾಕರ್ತರು ಜನರಿಗೆ ಒಂದು ಭಾವನೆಯನ್ನು ಮೂಡಿಸಲು ತಮ್ಮ ಅಭಿಪ್ರಾಯಗಳನ್ನು ಬರೆಯುತ್ತಾರೆ. ಶ್ರೀ|| ಎಂ. ವೆಂಕಟಕೃಷ್ಣಯ್ಯನವರು ಹೊರಡಿಸುತ್ತಿದ್ದ "ಸಾಧ್ವಿ"ಯನ್ನು ಈಗ ನಡೆಸುತ್ತಿರುವ ಶ್ರೀ|| ಅಗರಂ ರಂಗಯ್ಯನವರ ಈ ಪ್ರಯತ್ನವು ಸರ್ವ ಪ್ರಕಾರಗಳಿಂದಲೂ ಪ್ರೋತ್ಸಾಹಿಸಲ್ಪಡತಕ್ಕದ್ದಾಗಿದೆ. ನಮ್ಮ ದೇಶದಲ್ಲಿ ವೃತ್ತ ಪತ್ರಿಕೆಗಳ ಸಂಖ್ಯೆಯು ಅಧಿಕವಾಗಬೇಕು. ೭೫ ಲಕ್ಷ ಪ್ರಜಾ ಸಂಖ್ಯೆಗೆ ೭೫ ಪತ್ರಿಕೆಗಳಾದರೂ ಇರಬೇಕು. ಕೈಗಾರಿಕೆ, ವಾಣಿಜ್ಯ, ಕಲೆ, ವಿಜ್ಞಾನ, ಉದ್ಯೋಗ ಭಾಗಗಳಿಗೆಲ್ಲಾ ಒಂದೊಂದು ಪತ್ರಿಕೆಯಿದ್ದರೂ ಒಳ್ಳೆಯದು. ಪತ್ರಿಕೆಗಳು ಬೆಳೆದಂತೆಲ್ಲಾ ದೇಶವೂ ಬೆಳೆಯುತ್ತದೆ. ಈ ದಿನ ನಾನು ನಿಮ್ಮೊಡನೆ 'ಸಾಧ್ವಿ' ಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗಿಯಾಗಿ ಇದಕ್ಕೆ ಶ್ರೇಯಸ್ಸನ್ನು ಕೋರುತ್ತೇನೆ" ಎಂದು ತಿಳಿಸಿದರು.

ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ಮಾನ್ಯ ಮುಖಂಡರಾದ ಶ್ರೀ|| ಪಾಲಹಳ್ಳಿ ಸೀತಾರಾಮಯ್ಯನವರು ಪುರನಿವಾಸಿಗಳ ಪರವಾಗಿ ಮಾತನಾಡುತ್ತಾ, 'ಸಾಧ್ವಿ'ಯನ್ನು ಶ್ರೀ|| ಎಂ. ವೆಂಕಟಕೃಷ್ಣಯ್ಯನವರು ಸ್ಥಾಪಿಸಿದರು. ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಅವರ ರೀತಿ ನೀತಿಗಳನ್ನು ಅನುಸರಿಸಿ ಈಗಲೂ, ಈ ಕಷ್ಟ ಕಾಲದಲ್ಲೂ ಶ್ರೀ|| ಅಗರಂ ರಂಗಯ್ಯನವರು 'ಸಾಧ್ವಿ'ಯನ್ನು ನಡೆಸುತ್ತಿರುವುದು ಅಭಿನಂದನೀಯವಾದುದು. ಪತ್ರಿಕೆಗಳ ಬೆಳವಣಿಗೆಯಲ್ಲಿ ಮಹಾಜನ ಸಹಾಯ ಸಲಹೆಗಳು ಎಷ್ಟು ದೊರೆತರೂ ಅಷ್ಟು ಕ್ಷೇಮ. ಟೀಕೆ ಟಿಪ್ಪಣಿಗಳಿಂದ ಪತ್ರಿಕೆಗಳಿಗೂ ಎಷ್ಟೋ ಪ್ರಯೋಜನವುಂಟು, ಪತ್ರಿಕೆಗಳ ಬೆಳವಣಿಗೆಗೆ ಮಹಾಜನ ಬೆಂಬಲವಿರಬೇಕು, ಎಂದು ತಿಳಿಸಿದರು. ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಗಳಾದ ಶ್ರೀ|| ನಂಜುಂಡಶಾಸ್ತ್ರಿಗಳು ಪತ್ರಿಕೋದ್ಯಮಿಗಳ ಪರವಾಗಿ 'ಸಾಧ್ವಿ' ಪತ್ರಿಕೆಗೆ ಶ್ರೇಯಸ್ಸನ್ನು ಕೋರಿದರು. ಶ್ರೀಮತಿ ಸುನಂದಾದೇವಿಯವರು ವಂದೇ ಮಾತರಂ ಗೀತೆ ಹಾಡಿದ ಮೇಲೆ ಜಯಕಾರಗಳಿಂದ ಸಭೆಯು ಪರಿಸಮಾಪ್ತವಾಯಿತು.

ಸೂಚನೆ

ಗರುಡ ಪಂಚಮಿ ಪ್ರಯುಕ್ತ ನಾಳೆ ದಿನ ನಮ್ಮ ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ, "ಸಾಧ್ವಿ"

Edited, printed and published by A. R. Nagarajan, at the Sadhvi Press, D. Subbiah Road, Mysore.



ಎಂದಿಗೂ ಇದನ್ನು ಮಾಡದಿರಿ

ಗಾಡಿಯ ಹೊರಗಡೆ ಪ್ರಯಾಣಮಾಡದಿರಿ. ಹಾಗೆ ಮಾಡಿದಾದರೆ, ಕೈಕಂಬಕ್ಕೋ, ಸೇತುವೆಗೋ ತಗಲಿ, ನಿಮ್ಮ ದೇಹವು ಚೂರುಚೂರಾಗುವದು. ಈ ರೀತಿಯ ಪ್ರಯಾಣವು ಕಾಯಿದಾ ವಿರುದ್ಧವಾದದ್ದರಿಂದ, ಅಪಘಾತವು ಸಂಭವಿಸಿದರೆ, ಅದಕ್ಕಾಗಿ ಯಾವ ಉಪಶಮನವೂ ಸಿಕ್ಕುವದಿಲ್ಲ. ಗಾಡಿಯ ಒಳಕ್ಕೆ ಪ್ರವೇಶವು ಸಿಕ್ಕದಿದ್ದರೆ, ಪ್ರಯಾಣವನ್ನೇ ಮಾಡಬೇಡಿ. ಮರಣಕ್ಕಾ ಅಥವಾ ಶಾಶ್ವತ ಅಸ್ವಸ್ಥತೆಗೆ ಅಪಾಯಕರವಾದ ಪ್ರವಾಸವು ನಿಮಗೂ, ನಿಮ್ಮ ಕುಟುಂಬಕ್ಕೂ ಒಳ್ಳೆಯದಲ್ಲ.

ರೈಲುಗಾಡಿಗಳ ಮತ್ತು ರೈಲುಡಬ್ಬಿಗಳ ಸಂಖ್ಯೆಯು ಕಡಿಮೆಯಾಗಿರುವದರಿಂದ, ಈಚೆಗೆ ಗಾಡಿಗಳು ವಿಶೇಷವಾಗಿ ಜನರಿಂದ ಭರ್ತಿಯಾಗಿರುತ್ತವೆ. ಹೀಗೆ ಕಡಿಮೆಯಾಗಿರುವದಕ್ಕೆ ಕಾರಣವೆಂದರೆ, ಈಗ ರೈಲ್ವೆಯವರ ಪ್ರಥಮ ಕೆಲಸವೆಂದರೆ, ದೇಶದ ಎಲ್ಲಾ ಭಾಗಕ್ಕೂ ಆಹಾರಪದಾರ್ಥ, ಬಟ್ಟೆ ಮತ್ತು ಸಾಮಾನುಗಳನ್ನು ರವಾನಿಸುವದು. ಪ್ರಯಾಣಕ್ಕಿಂತಲೂ ನಿಮಗೆ ನಿಮ್ಮ ಆಹಾರ, ಬಟ್ಟೆ ಮತ್ತು ಆರೋಗ್ಯ ಇವುಗಳೇ ಮುಖ್ಯವಾದವುಗಳು.

ಕಡಮೆಯಾಗಿ ಪ್ರಯಾಣಮಾಡಿರಿ

ಮತ್ತು ಅಪಾಯಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣ ಮಾಡದಿರಿ.

SAA 804 KN.

ಸಂಪುಟ ೩] ಬುಧವಾರ ೨೬--೭--೪೪ [ಸಂಚಿಕೆ ೪

ಇಟಲಿಗೆ ಬ್ರಿಟಿಷ್ - ಚಕ್ರವರ್ತಿಗಳ ಭೇಟಿ

ಸಿಟುಬಿದ್ದಿದ್ದ ಇಬ್ಬರು ಜರ್ಮನ್ ಸೇನಾಪತಿಗಳ ಮರಣ

ಯುದ್ಧಕಾಲದಲ್ಲಿ ಇಂಡಿಯಾ ಸರ್ಕಾರದಲ್ಲಿ ಬದಲಾವಣೆಯಿಲ್ಲ

ಧರಂಪುರದ ರಾಜರು

ಮೈಸೂರು ೨೬

ಈ ತಿಂಗಳು ೩೧ ನೇ ತಾ॥ ಸೋಮವಾರ ರಾಜಧಾನಿಗೆ ಧರಂಪುರದ ಮಹಾರಾಜರು ಬಂದು ಸುಮಾರು ಒಂದು ವಾರ ಕಾಲ ರಾಜ ಅತಿಥಿಗಳಾಗಿ ಇರುವರೆಂದು ಗೊತ್ತಾಗಿದೆ.

ಡೆತ್‌ವಾರ್ಡ್‌ಗೆ ಸ್ಥಾನಪಲ್ಲಟ

ಇದುವರೆವಿಗೂ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ದಕ್ಷಿಣಭಾಗದ ಕಾಂಪೌಂಡಿನೊಳಗೇ ಇದ್ದ ಡೆತ್‌ವಾರ್ಡು ಸ್ವಲ್ಪದಿನದಿಂದೀಚೆಗೆ ಮೆಡಿಕಲ್ ಕಾಲೇಜಿನ ಆವರಣದೊಳಕ್ಕೆ ವರ್ಗಾಯಿಸಲ್ಪಟ್ಟಿರುವುದಾಗಿ ತಿಳಿಯಬರುತ್ತೆ.

ಹಿಂದೂ ರಜಗಳಿಗೆ ಕತ್ತರಿ ?

ವಿಶ್ವವಿದ್ಯಾನಿಲಯದಲ್ಲಿ ಇದುವರೆವಿಗೆ ಗಣೇಶಚತುರ್ಥಿ, ವರಮಹಾಲಕ್ಷ್ಮಿ ವ್ರತ, ಮೊದಲಾದ ಹಿಂದೂ ಹಬ್ಬಗಳ ರಜವನ್ನೂ ಅಮಾವಾಸ್ಯೆಗಳಲ್ಲಿ ಮೊತ್ತಮೊದಲ ಕಚೇರಿಗೆ ಬರಲು ಇದ್ದ ಅವಕಾಶವನ್ನೂ ಕತ್ತರಿಸಿಬಿಟ್ಟಿರಲಿದೆಯೆಂದು ಸುದ್ದಿ ಹೊರಟಿರುತ್ತದೆ.

ಅಷ್ಟಾವಧಾನ

ವಿದ್ವಾನ್ ಶ್ರೀ ದೋರ್ಣಾ ವೆಂಕಟಸ್ವಾಮಿಗುಪ್ತರು ತಾ॥ ೨೭-೭-೪೪ ನೇ ಗುರುವಾರ ಸಂಜೆ ೬ ಘಂಟೆಗೆ ಮೈಸೂರು ಟೌನ್ ಹಾಲಿನಲ್ಲಿ ಅಷ್ಟಾವಧಾನ ಪ್ರದರ್ಶನವನ್ನು ಆಂಧ್ರಭಾಷೆಯಲ್ಲಿ ಮಾಡಲು ದಯೆಯಿಟ್ಟು ಒಪ್ಪಿರುವರು. ಮೈಸೂರು ಶ್ರೀಮನ್ಮಹಾರಾಜ ಕಾಲೇಜಿನಲ್ಲಿ ತೆಲುಗು ಪಂಡಿತರಾಗಿರುವ ಶ್ರೀಮಾನ್ ರಾಳ್ಳಪಳ್ಳಿ ಅನಂತಕೃಷ್ಣಶರ್ಮರವರು ಅಧ್ಯಕ್ಷತೆ ವಹಿಸಲು ದಯೆಯಿಟ್ಟು ಒಪ್ಪಿರುವರು. ಸರ್ವರಿಗೂ ಆಹ್ವಾನ ಉಂಟು.

ರಿಕ್ರೂಟಿಂಗ್ ಕಛೇರಿಗಳು

ಈಗ ಮೈಸೂರು ನಗರದಲ್ಲಿ ಸ್ಥಾಪನೆಯಾಗಿರುವ ರಿಕ್ರೂಟಿಂಗ್ ಶಾಖಾ ಆಫೀಸಿನ ಮಾದರಿಯಲ್ಲಿಯೇ ಕೋಲಾರ, ಕಡೂರು ಮತ್ತು ಶಿವಮೊಗ್ಗಗಳಲ್ಲಿಯೂ ಆರಂಭವಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಉಪಶಾಖಾ ಕಛೇರಿಗಳು ತೆರೆಯಲ್ಪಡುತ್ತೆ.

ಎರಡು ಹೊಸ ಹೈಸ್ಕೂಲು

ಗುಬ್ಬಿ ಮತ್ತು ನೆಲಮಂಗಲಗಳಲ್ಲಿ ಎರಡು ಹೊಸ ಮುನಿಸಿಪಲ್ ಹೈಸ್ಕೂಲುಗಳನ್ನು ತೆರೆಯಲು ಸರ್ಕಾರದವರು ಮಂಜೂರು ಮಾಡಿರುತ್ತಾರೆ.

ಲುಬ್ಲಿನ್ ರಷ್ಯ ವಶ

ವಾರ್ಸಾ ಮಾರ್ಗದಲ್ಲಿ ಪ್ರಮುಖ ಜರ್ಮನ್ ಕೇಂದ್ರವಾದ ಲುಬ್ಲಿನ್ ಅನ್ನು ರಷ್ಯನರು ಹಿಡಿದಿದ್ದಾರೆ. ಟ್ಯಾಂಕುಗಳು ಅಶ್ವ ಮತ್ತು ಕಾಲುಬಲಗಳು ಜೋರಾಗಿ ಉಪಯೋಗಿಸಲ್ಪಟ್ಟವು. ಜರ್ಮನ್ ರಂಗದಲ್ಲಿ ರಷ್ಯನರು ಹೊಸ ಧಾಳಿಯನ್ನು ಹೂಡಿದ್ದಾರೆ.

ಇಬ್ಬರು ಜರ್ಮನ್ ಸೇನಾಪತಿಗಳ ಮರಣ

ಪೂರ್ವರಂಗದಲ್ಲಿ ಜೀ ಜೀ ಪೆಲ್ಲರ್ ಮತ್ತು ಮೇಜರ್ ಜ॥ ವಾಟ್ಸ್‌ಕ್ಲೀ ಎಂಬ ಇಬ್ಬರು ಜರ್ಮನ್ ಸೇನಾಪತಿಗಳು ಹತರಾದರು. ಮೂರನೇ ಬಾರಿ ಸತ್ತವರ ದಿನಾಂಕದಲ್ಲಿ ಜರ್ಮನರ ಕಡೆ ೧೮ ನೇ ಜನರಲ್ ಸಾವನ್ನೊಪ್ಪಿ, ಪತ್ರಿಕೆಗಳಿಂದ ಹಿಂದು ತಿಳಿಸಲಾಗಿದೆ.

ಇಟಲಿಯಲ್ಲಿ ಚಕ್ರವರ್ತಿಗಳು

ಕಳೆದ ಭಾನುವಾರ ಬ್ರಿಟಿಷ್ ಸಾರ್ವಭೌಮರು ಇಟಲಿಗೆ ಭೇಟಿ ಕೊಟ್ಟರು. ಸಾಮಂತರಾಗಿ ೮-೧೦ ಕ್ಷೇತ್ರ ಸೇನೆಪಡೆಯಲ್ಲಿ ಅವರು ಬಂದಿಳಿದರು. ಮಿತ್ರ ಸೈನ್ಯಗಳ ಪರಿಶೀಲನೆಯೇ ಅವರ ಭೇಟಿಯ ಉದ್ದೇಶ. ಚಕ್ರವರ್ತಿಗಳ ವಿಮಾನವನ್ನು ಸರ್ವ ರೀತಿಯಿಂದಲೂ ರಕ್ಷಿಸಲಾಗಿತ್ತು.

ಬದಲಿ ನೇಮಕಗಳು

ತಮ್ಮ ರಾಜ್ಯದಿಂದ ತಾವು ಹೊರಗಡೆ ಇರುವಾಗ ತಮ್ಮ ಬದಲು ರಾಜ್ಯಭಾರಗಳನ್ನು ನಡೆಸಲು ಚಕ್ರವರ್ತಿಗಳು ಸ್ಟೇಟ್ ಕೌನ್ಸಿಲರುಗಳನ್ನು ನೇಮಿಸಿದ್ದರು - ಚಕ್ರವರ್ತಿನಿಯವರು, ರಾಜ ಕುಮಾರಿ ಎಲಿಜಬೆತ್, ಗ್ಲೋಸ್ಟರ್ ಡ್ಯೂಕ್, ಪ್ರಿನ್ಸೆಸ್ ರಾಯಲ್ ಮತ್ತು ಕೌಂಟ್ ಆರ್ಥರ್ ರಾಜಕುಮಾರ - ಇವರೇ ಕೌನ್ಸಿಲರ್‌ಗಳು.

ದೆಹಲಿಯಿಂದ ಲಂಡನ್ನಿಗೆ ಏರ್‌ಲೈನ್ಸ್

ಆಗಸ್ಟ್ ಮಧ್ಯಭಾಗದಲ್ಲಿ ದೆಹಲಿಯಿಂದ ಲಂಡನ್ನಿಗೆ ನೇರವಾಗಿ ಏರ್‌ಲೈನ್ಸ್ ಸರ್ವಿಸನ್ನು ಏರ್ಪಡಿಸುವುದಾಗಿ ಗೊತ್ತಾಗಿದೆ. ಪತ್ರಿಕಾವರದಿಗಳು ಮತ್ತು ಸರ್ಕಾರಿ ಸುದ್ದಿಗಳನ್ನು ಇವರ ಮೂಲಕ ಕಳುಹಿಸಲಾಗುವುದು. ಇದುವರೆಗೆ ಎಲ್ಲಾ ಸುದ್ದಿಗಳೂ ಬೊಂಬಾಯಿಗೆ ಬಂದು ಅಲ್ಲಿಂದ ಹೊರಕ್ಕೆ ಹೋಗಬೇಕಾಗಿತ್ತು.

ಬರೋಡಾ ವಿವಾಹ ಕಾನೂನು ತಿದ್ದುಪಡಿ

ಒಬ್ಬ ಹೆಂಡತಿ ಇರುವಾಗ ಇನ್ನೊಬ್ಬಳನ್ನು ಮದುವೆಯಾಗದಂತೆ ನಿರ್ಬಂಧಿಸುವ ಬರೋಡಾ ಶಾಸನವನ್ನು ಸ್ವಲ್ಪ ಬದಲಾಯಿಸಿ ಕೆಲವು ಸಂದರ್ಭಗಳಲ್ಲಿ ಬೇರೊಬ್ಬಳನ್ನು ಮದುವೆಯಾಗಲು ಅವಕಾಶ ಕಲ್ಪಿಸುವ ಪ್ರಯತ್ನ ನಡೆದಿದೆ. ಹಿಂದಿನಿಂದ ರಾಜರ ಮಗಳನ್ನು ಬರೋಡಾ ರಾಜರು ಎರಡನೆಯವರ ಮದುವೆಯಾದ ವಿಚಾರ ಎಲ್ಲರಿಗೂ ಜ್ಞಾಪಕವಿರಬಹುದು.

ಪೂರ್ವರಂಗದಲ್ಲಿ ಬಿರುಸು

ಮಧ್ಯ ಯೂರೋಪ್ ಮತ್ತು ಬಾಲ್ಟಿಕ್ ನ ಹಬ್ಬಗಳಾದ ಅವಾರಿನೊಳಗೆ ತೀಕ್ಷ್ಣವಾದ ಕದನ ನಡೆಯುತ್ತಿದೆಯೆಂದು ವರದಿಯಾಗಿದೆ. ಲಿಥ್ಯುನಿಯಲ್ಲಿ ಜರ್ಮನರ ಮುನ್ನುಗ್ಗಿದೆ ವಿಮಾನಗಳ ಮೇಲಿನ ಧಾಳಿಗೆ ಇದೊಂದು ನಿರ್ಗನ.

ಟ್ರಸ್ಟ್ ಬೋರ್ಡ್ ಮೀಟಿಂಗು

ಮೈಸೂರು ೨೬

ಈ ದಿನ ಬೆಳಗ್ಗೆ ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು ಶ್ರೀ॥ ಆರ್. ರಾಮಚಂದ್ರರಾವ್ ಬೊಂಗೋರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ನಿವೇಶನಗಳನ್ನು ಅಧ್ಯಕ್ಷರು ಹರಾಜು ಮಾಡುವುದಕ್ಕೆ ಮುಂಚೆ ಹರಾಜಿಗೆ, ಯಾವುದಕ್ಕಾಗಿ ಕೊಡಲ್ಪಡುತ್ತದೆ, ಎಂಬ ವಿಚಾರವು ರಾಜಧಾನಿಯಂತೆ ಟ್ರಸ್ಟ್ ಬೋರ್ಡ್ ಮುಂದೆ ಬರಬೇಕೆಂದು ಶ್ರೀ॥ ಪಿ ಸೀತಾರಾಮಯ್ಯನವರು ಚರ್ಚಿಸಿದರು ಈ ಚರ್ಚೆ ಮಾಡಿದರು.

ಈ ವಿಚಾರದಲ್ಲಿ ಅಧ್ಯಕ್ಷರಿಗೇ ಅಧಿಕಾರ ಕೊಡಲ್ಪಟ್ಟಿದೆಯೆಂದೂ, ಟ್ರಸ್ಟ್ ಬೋರ್ಡ್ ಮುಂದೆ ಬರುವ ಆವಶ್ಯಕತೆಯಿಲ್ಲವೆಂದೂ, ಮೊದಲೇ ಬೋರ್ಡಿನವರು ಚರ್ಚಿಸಿ ಮುಂದಿನ ವಿಚಾರವನ್ನು ನಿರ್ಧರಿಸುತ್ತಾರೆಂದೂ, ೧೦ ವರ್ಷದಿಂದ ಹೀಗೇ ನಡೆದು ಬರುತ್ತಿದೆಯೆಂದೂ ಅಧ್ಯಕ್ಷರು ಹೇಳಿದರು.

ಮಾನಂದವಾಡಿ ರಸ್ತೆಯಲ್ಲಿ ನೌಕರಸಭಾ ಭವನಕ್ಕೆ ನಿವೇಶನ ಕೊಡುವುದು, ಹೊಸ ಬಡಾವಣೆ ಕಟ್ಟುವ ಬಡವರಿಗೆ ೧೫,೦೦೦ ರೂ. ಸಾಲ, ದಸರಾ ಮೆರವಣಿಗೆಯ ಹೊಸ ಬೀದಿಗೆ ೧,೫೫,೦೦೦ ರೂಗಳು ಮಂಜೂರು ಮಾಡಲ್ಪಟ್ಟವು. ಶಾರದಾವಿಲಾಸ ಹೈಸ್ಕೂಲು ಆಟದ ಮೈದಾನಗಳಿಗೆ ಬೇಲಿಗೆ ಹಾಗೆ ಕಟ್ಟುವುದಕ್ಕಾಗಿ ೮ ಗ ೧ ಕ್ಕೆ ೧ ಅಡಿ ಅಗಲ ನಿವೇಶನವನ್ನು ಕೊಡಲು ಒಂದಾಗಿಕಾರವಾಯಿತು.

ವಾಣೀವಿಲಾಸ ಮಾರ್ಕೆಟ್ ಬಳಿ ಇರುವ ಸ್ಕೂಲು ಬಳಿಯ ಸ್ಥಳಗಳನ್ನು ಮಾರ್ಕೆಟ್ ಬಡಾವಣೆಗಾಗಿ ಪಡೆದುಕೊಳ್ಳಬೇಕೆಂದೂ, ಅದಿರಾಯಿ ಬೆಕಪ್ಪುದ ಬಳಿ ಮಾದರಿ ನಿವೇಶನಗಳನ್ನು ಕಟ್ಟಿಸಬೇಕೆಂದೂ, ತೀರ್ಮಾನವಾಯಿತು.

ವಾರ್ಸಾ ಕದನ

ಕೆಲ ಪುಷ್ಕಳ ವಾರ್ಸಾದತ್ತ ನುಗ್ಗುತ್ತಿರುವ ರಷ್ಯನರು ವಾರ್ಸಾದಿಂದ ೫೦ ಮೈಲಿಯಲ್ಲಿದ್ದಾರೆ. ವಿಸ್ತುಲಾ ನದಿ ತೀರ ಸೇರಿದ್ದಾರೆ. ಪಶ್ಚಿಮದಲ್ಲಿ ಪ್ರಾಂತ್ಯಗಳು ವಿಸ್ತಾರವಾಗಿ ಬಿಟ್ಟಿವೆ. ಇದನ್ನು ಮಾಡುವುದರಿಂದ ಜರ್ಮನ್ ಪಡೆಗಳು ಪೋಲೆಂಡ್ ನಿಂದ ನಾಶದ ಕಡೆ ಓಡುತ್ತಿವೆ.

ಬದಲಾವಣೆ ಇಲ್ಲ

ಯುದ್ಧ ನಡೆಯುತ್ತಿರುವವರೆಗೆ ಇಂಡಿಯಾ ಸರ್ಕಾರದ ರೂಪರೇಖೆಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ--ಎಂಬ ಹೇಳಿಕೆ ಇಂದಿನ ರಾಜಕೀಯ ಚಲನವಲನಗಳ ಮೇಲೆ ಲಂಡನ್ ಸಂಡೇ ಅಬ್ಸರ್ವರ್ ಪತ್ರಿಕಾ ಸುದ್ದಿಗಾರರ ವರದಿ.

ಜರ್ಮನರ ಪಲಾಯನ

ವಾರ್ಸಾದಿಂದ ಪೂರ್ವಕ್ಕೆ ೫೦ ಮೈಲಿಯಲ್ಲಿರುವ ಸಿಡ್ಲೀಸ್ ಮತ್ತು ಕ್ರಾಕೋವಿನಿಂದ ೧೨೦ ಮೈಲಿ ಪೂರ್ವಕ್ಕಿರುವ ಯಾರೊಸ್ಲಾವ್ ನಗರಗಳನ್ನು ಜರ್ಮನರು ಬಿಟ್ಟು ಪಲಾಯನ ಮಾಡುತ್ತಿರುವರು.

ಬೊಂಬಾಯಿ ನೀರು ಸರಬರಾಜು

ಎರಡೂವರೆ ಕೋಟಿ ರೂ. ವೆಚ್ಚದಿಂದ ಬೊಂಬಾಯಿ ನಗರಕ್ಕೆ ಪ್ರತಿದಿನವೂ ೫೦ ಲಕ್ಷ ಗ್ಯಾಲನ್ ಹೆಚ್ಚಿಗೆ ನೀರನ್ನೊದಗಿಸುವ ಒಂದು ಯೋಜನೆಯನ್ನು ಅಲ್ಲಿನ ಕಾರ್ಪೊರೇಷನ್ ಮಂಜೂರು ಮಾಡಿದೆ. ಇದನ್ನು ಸರ್ ಎಂ ವಿಶ್ವೇಶ್ವರಯ್ಯ ಮತ್ತು ಸಿ. ಸಿ ಇಂಗ್ಲಿಸ್ ಎಂಬುವರು ಸಿದ್ಧಗೊಳಿಸಿರುವರು.

ಪನೆ ಮರದಿಂದ ಸಕ್ಕರೆ

ಸ್ವಂ.ಸು.ತಂತಿ] ಬೆಂಗಳೂರು ೨೬

ಪನೆ ಮರಗಳಿಂದ ಸಕ್ಕರೆಯನ್ನೂ ಬೋರ್ಡ್‌ನಲ್ಲಿ ಎಲೆಕ್ಟ್ರೋ ಕೆಮಿಕಲ್ ಮತ್ತು ಫರ್ಮೆಂಟೇಷನ್ ಕ್ರಿಯೆಗಳನ್ನೂ ನಡೆಸುವ ವಿಷಯವನ್ನೂ ವಿಜ್ಞಾನ ಮತ್ತು ಕೈಗಾರಿಕೆ ಸಂಶೋಧನಾ ಸಮಿತಿಯಲ್ಲಿ ನಿರ್ಧರಿಸಲಾಯಿತು.

ಸಂಪೂರ್ಣವಾದ ವಿದ್ಯುಚ್ಛಕ್ತಿ ಸಹಾಯದಿಂದ ಪನೆಮರದಿಂದ ಸಕ್ಕರೆ ಮುಂತಾದ ಪದಾರ್ಥಗಳ ತಯಾರಿಯನ್ನು ಹೆಚ್ಚಿಸುವ ವಿಷಯವಾಗಿ ದಿವಾನರೂ ಶ್ರೀ ಎಂ. ಎ. ಶ್ರೀನಿವಾಸನ್‌ರವರೂ ಫರ್ಟಿಲೈಸರ್ ನಿಯೋಗದವರೊಡನೆ ಸಮಾಲೋಚನೆ ಮಾಡಿದರು.

ಶ್ರೀ ಜಿ. ಮಹಮ್ಮದ್ ರಾಜಾರವರು ಜನವಾಣಿ ಸಂಪಾದಕರ ನೇರೆ ಹೂಡಿರುವ ಮಾನನಷ್ಟ ಮೊಕದ್ದಮೆ ೫ ನೇ ತಾ॥ ಗೆ ಮುಂದಕ್ಕೆ ಹೋಗಿದೆ.

ದಿವಾನರ ದೆಹಲಿ ಪ್ರಯಾಣ ರದ್ದಾಗಿದೆ.

ಜೂಜಿಗೆ ಶಿಕ್ಷೆ

ಮೈಸೂರು ೨೬

ತಾ॥ ೨೬ ೧೧ ಸುದಲ್ಲಿ ಮಾನಂದವಾಡಿ ರಸ್ತೆಯಲ್ಲಿ ಹೋಟೆಲು ಮಾಲೀಕರಾದ ಕೆ ಸುಬ್ಬರಾವ್ ಮತ್ತು ನಾರಾಯಣರಾವ್ ಎಂಬುವರು ಬೊಂಬಾಯಿ, ಕಲ್ಕತ್ತ, ವ ದ್ರಾಸುಗಳ ಕುದುರೆ ಜೂಜಿನ ಸಂಬಂಧವಾಗಿ ಬೆಟ್ಟಿಂಗ್ ನಡೆಸುತ್ತಿದ್ದರೆಂದು ದ್ವಿತೀಯ ನ್ಯಾಯಾಧೀಶರು ತಲಾ ೫೦ ರೂ. ದಂಡ ತಪ್ಪಿದರೆ ಎರಡೆರಡು ವಾರ ಸಾದಾ ಶಿಕ್ಷೆ ವಿಧಿಸಿದರು ಮತ್ತು ವಸೂಲಾದ ಹಣದಲ್ಲಿ ಅರ್ಧವನ್ನು ಈ ಮೊಕದ್ದಮೆ ಪತ್ತೆ ಹಿಡಿದ ಪೋಲೀಸಿನವರಿಗೆ ಬಹುಮಾನ ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ.

ಉಪಾಧ್ಯಕ್ಷರ ಚುನಾವಣೆ

ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರ ಚುನಾವಣೆ ಆಗಸ್ಟ್ ೭ ನೇ ತಾ॥ ನಡೆಯುತ್ತದೆ.

ಹೈಸ್ಕೂಲು ಸ್ಥಾಪಕರ ದಿನಾಚರಣೆ

[illegible] ೨೫

[illegible] ವಿದ್ಯಾದಾನ [illegible] ದಿನಾಚರಣೆ [illegible] ವಿದ್ಯಾರ್ಥಿಗಳಿಗೆ, ವಿದ್ಯಾದಾನ [illegible] ಈ ಸಮಾರಂಭ [illegible] ವಿದ್ಯಾರ್ಥಿ [illegible]

ವಿದ್ಯಾರ್ಥಿಗಳ ಡ್ರಿಲ್ ಪ್ರದರ್ಶನ, ಹಳೆ ವಿದ್ಯಾರ್ಥಿಗಳ ಸಂಗೀತ, ಆಟಪಾಟ [illegible] ಸ್ಪರ್ಧೆಗಳಲ್ಲಿ ಜಯ ಪಡೆದವರಿಗೆ ಬಹುಮಾನ ವಿತರಣೆ, 'ಬೇಕು' ನಾಟಕ ಪ್ರದರ್ಶನ ಮುಂತಾದುವು ನಡೆದುವು.

ಅಧ್ಯಕ್ಷರು ತಮ್ಮ ಭಾಷಣವನ್ನು ಮುಂದುವರಿಸಿ ಹೇಳಿದ್ದೇನೆಂದರೆ:—ಶಾಲೆಯ ಅಭಿವೃದ್ಧಿಯು ಪ್ರಶಂಸನೀಯವಾಗಿದೆ. ಈ ಶಾಲೆಯಲ್ಲಿ ಹಿಂದೆ ಓದಿದ ಹಲವು ವಿದ್ಯಾರ್ಥಿಗಳು [illegible] ಸಂಪಾದನೆ, [illegible] ಜೀವನ ನಡೆಸುತ್ತಿದ್ದಾರೆ. ಅಂಥವರು ತಾವು ಓದಿದ ಶಾಲೆಯ ಅಭಿವೃದ್ಧಿಗಾಗಿ, ತಮ್ಮಂತೆ ಓದಲು ಬಂದಿರುವ ವಿದ್ಯಾರ್ಥಿಗಳ ಸಹಾಯಕ್ಕಾಗಿ ತಮ್ಮ ವರಮಾನದಲ್ಲಿ ಪ್ರತಿತಿಂಗಳೂ, ಪ್ರತಿವರ್ಷವೂ ಏನಾದರೂ ಕಾಣಿಕೆ ಕೊಟ್ಟು ಕೃತಜ್ಞತೆ ಸಲ್ಲಿಸಬೇಕು. ಆಗ್ಗೆ ಶಾಲೆಯು ಸ್ವತಂತ್ರವಾಗಿ ನಿರಾತಂಕವಾಗಿ ನಡೆಯುವುದು, ಮತ್ತು ಇಂಟರ್ ಕಾಲೇಜನ್ನು ಇಲ್ಲಿ ಸ್ಥಾಪಿಸಬೇಕು. ಆಗ್ಗೆ ವಿದ್ಯಾರ್ಥಿಗಳಿಗೆ ಬಹಳ ಸೌಕರ್ಯವಾಗುವುದು. ವಿದ್ಯಾರ್ಥಿಗಳು ಚೆನ್ನಾಗಿ ವಿದ್ಯಾರ್ಜನೆ ಮಾಡಬೇಕು. ಉಪಾಧ್ಯಾಯರು ಹೇಳುವ ಪಾಠಗಳ [illegible] ಮಾಡಬೇಕು. [illegible] ಗಂಡುಮಕ್ಕಳಿಗಿಂತ [illegible] ನಡೆಯುವುದೇ [illegible] ಪ್ರಯೋಜನ [illegible]

[illegible]ಕೆಗಳನ್ನು ಗಂಡುಮಕ್ಕಳು ಚೆನ್ನಾಗಿ ಕಲಿಯಬೇಕು. ಇಂದಿನ ಮಕ್ಕಳಾದ ನೀವು ಮುಂದಿನ ಸತ್ಪ್ರಜೆಗಳಾಗಿ, ಪ್ರಭಾವಶಾಲಿಗಳಾಗಿ ಬಾಳುವ ಶ್ರೇಯಸ್ಸುಳ್ಳವರಾಗಬೇಕು. ಇಂದಿನ ಈ ಸಮಾರಂಭಕ್ಕೆ ಕಾರಣರಾದ ಶ್ರೀ ಬಸುಮಯ್ಯನವರ ಪುತ್ರಪೌತ್ರಾದಿಗಳಿಗೆ ಭಗವಂತನು ಆಯುರಾರೋಗ್ಯ ಭಾಗ್ಯವನ್ನೀಯಲಿ—ಎಂದು ಹೇಳಿದರು.

ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ ವಿ ಶ್ರೀನಿವಾಸಮೂರ್ತಿಗಳು ಶಾಲಾ ವರದಿಯನ್ನೋದಿದರು. ಈಗ ಈ ಶಾಲೆಯಲ್ಲಿ ಹೈಸ್ಕೂಲಿನಲ್ಲಿ ಸುಮಾರು ೬೫೦ ವಿದ್ಯಾರ್ಥಿಗಳೂ, ಮಿಡಲ್ ಸ್ಕೂಲಿನಲ್ಲಿ ೩೫೦ ವಿದ್ಯಾರ್ಥಿಗಳೂ ವಿದ್ಯಾಭ್ಯಾಸ ಮಾಡುತ್ತಿರುವರೆಂದು ತಿಳಿಸಿದರು.

ಶ್ರೀ ವಿಶ್ವಂಭರಯ್ಯನವರು ಸರ್ವರಿಗೂ ವಂದನೆಗಳನ್ನರ್ಪಿಸಿದರು. ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಉತ್ಸವ ಮುಕ್ತಾಯವಾಯಿತು.

ರೀವಾ ರಾಜರ ಪುನರಾಗಮನ

ರೀವಾ ಸಂಸ್ಥಾನದ ಮಹಾರಾಜರ ಮೇಲೆ ಬಂದಿದ್ದ ಅನೇಕ ಆಪಾದನೆಗಳಿಂದ ಅವರು ವಿಮುಕ್ತರಾಗಿದ್ದರೂ ಸಹ ಈಗ ಅವರು ತಮ್ಮ ಸಂಸ್ಥಾನದೊಳಕ್ಕೆ ಬರಲು ಮಾತ್ರ ಅವಕಾಶ ಕೊಡಲಾಗಿದೆ. ಆದರೆ ಆಡಳಿತದಲ್ಲಿ ಅವರಿಗೆ ಯಾವ ಅಧಿಕಾರವೂ ಇರುವುದಿಲ್ಲ. [illegible] ಮೇಲೆ ಮಾತ್ರ ಅಧಿಕಾರವಿರುತ್ತದೆ. ಮಂತ್ರಿಮಂಡಲವೇ ರಾಜ್ಯಭಾರವನ್ನು ನಡೆಸುತ್ತದೆ. ಯೂರೋಪಿಯನ್ ದಿವಾನರು ಎಲ್ಲರಮೇಲೂ ಇರುತ್ತಾರೆ.

ಜೈಪುರದ ಚಳುವಳಿ

ಜೈಪುರ ಸಂಸ್ಥಾನದಲ್ಲಿ ಸಿವಿಲ್ ಸರ್ವಿಸ್ಸಿಗೆ ಸೇರುವವರೆಲ್ಲರೂ ಉರ್ದು ಲಿಪಿಯನ್ನು ಕಲಿಯಬೇಕೆಂದು ಸರ್ ಮಿರ್ಜಾ ಇಸ್ಮಾಯಿಲ್ ಮಾಡಿರುವ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಹಿಂದೂ ಮಹಾ ಸಭಾಧ್ಯಕ್ಷ ಶ್ರೀ ವಿ ಡಿ. ಸಾವರ್ಕರರು ಅಲ್ಲಿನ ರಾಜರಿಗೆ ಬರೆದಿದ್ದಾರೆ. ಅಲ್ಲಿನ ಸ್ಥಿತಿಗತಿಗಳನ್ನು ಅರಿಯಲು ಶ್ರೀ ವರದರಾಜುಲುನಾಯುಡುರವರು ಅಲ್ಲಿಗೆ ಹೋಗುವವರಾಗಿದ್ದಾರೆ.

[illegible] ಪೂರ್ವಕ್ಕೆ ಮಿತ್ರರು ಒಂದು ಸಾವಿರ ಟ್ಯಾಂಕುಗಳನ್ನು ಕಳುಹಿಸಿದ್ದಾರೆ. ಎಂಟನೆ ಸೈನ್ಯವು ಹೊಸದೊಂದು ಧಾಳಿಯನ್ನು ಹೂಡಲಿವೆಯೆಂದು ತಿಳಿದುಬಂದಿದೆ.

ಅಧಿಕಾರ ವರ್ಗದಲ್ಲಿ ಬದಲಾವಣೆಗಳು

ಸ್ವಂ.ಸು.] ಬೆಂಗಳೂರು ೨೫

ಈ ವರ್ಷದ ಡಿಸೆಂಬರ್ ೨೫ಕ್ಕೆ ಫೈನಾನ್ಷಿಯಲ್ ಸೆಕ್ರೆಟರಿಗಳಾದ ರಾಜಸೇವಾಪ್ರಸಕ್ತ ಶ್ರೀ ವೀರರಾಜೆ ಅರಸ್‌ರವರು ಸರ್ವೀಸ್ಸಿನಿಂದ ನಿವೃತ್ತರಾಗಲು ಅನುಮತಿ ಪಡೆದಿರುವರಷ್ಟೆ. ಅದಕ್ಕೆ ಪೂರ್ವಭಾವಿಯಾಗಿ ಅವರು ಸುಮಾರು ಎರಡೂವರೆ ತಿಂಗಳು ರಜ ಹೋಗುವರೆಂದೂ, ಅವರ ಸ್ಥಾನದಲ್ಲಿ ಶ್ರೀ ಬಿ ಎಸ್ ರಾಘವೇಂದ್ರ ರಾಯರನ್ನು ನೇಮಕ ಮಾಡಲಾಗುವುದೆಂದೂ, ಶ್ರೀ ನವನೀತಂ ನಾಯ್ಡುರವರನ್ನು ಆಹಾರದ ಸರಬರಾಜಿನ ಡೈರೆಕ್ಟರನ್ನಾಗಿ ನಿಯಮಿಸಲಾಗುವುದೆಂದೂ ಜವಾಬ್ದಾರಿ ಅಧಿಕಾರ ವರ್ಗಗಳಲ್ಲಿ ಹೇಳಲಾಗುತ್ತಿದೆ. ಶ್ರೀ ಬಿ ಎಸ್. ರಾಘವೇಂದ್ರರಾಯರನ್ನು ಫೈನಾನ್ಷಿಯಲ್ ಸೆಕ್ರೆಟರಿಗಳನ್ನಾಗಿ ಮಾಡುವುದಕ್ಕೆ ಮುಂಚೆ ಸುಮಾರು ೩ ತಿಂಗಳು ದೊರೆಗಳ ಮದರಾಸಿಗೂ, ಬೊಂಬಾಯಿಗೂ ಹಣಕಾಸಿನ ವಿಚಾರದಲ್ಲಿ [illegible] ಪಡೆಯಲು ಡೆಪ್ಯುಟೇಷನ್ ಮೇಲೆ ಕಳಿಸಲಾಗುವುದೆಂದೂ ಹೇಳಲಾಗಿದೆ.

ಸರ್ ಮಿರ್ಜಾ ಇಸ್ಮೇಲ್

ಮೂರು ವಾರಗಳ [illegible]ಕ್ಕಾಗಿ ಬೆಂಗಳೂರಿಗೆ ಬಂದಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಮೊನ್ನೆ ಪ್ರಾತಃಕಾಲ ಗುಂಟಕಲ್ ಮಾರ್ಗವಾಗಿ ಜಯಪುರಕ್ಕೆ ಪ್ರಯಾಣಮಾಡಿರು.

ಸೌದೆ ರೇಷನಿಂಗ್

ಬೆಂಗಳೂರಿನಲ್ಲಿ ಸೌದೆ ರೇಷನಿಂಗ್ ಜಾರಿಗೆ ತರುವ ವಿಚಾರವನ್ನು ಸರ್ಕಾರ ಪರ್ಯಾಲೋಚಿಸುತ್ತಿರುವುದಾಗಿ ಗೊತ್ತಾಗಿದೆ.

ನಿಧನ

ಸ್ವಂ.ಸು] ಚಾಮರಾಜನಗರ ೨೫

ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಕಂಪೆನಿಯು ಇಲ್ಲಿ ನಡೆಯುವುದು ತಿಳಿಯಷ್ಟೆ. ಸದರಿ ಕಂಪೆನಿಯ ಕಂಟ್ರಾಕ್ಟರಾದ ಶ್ರೀ ಆರ್. ಸಿ. ಕುಬೇರಪ್ಪನವರು ನಿನ್ನೆ ಬೆಳಗ್ಗೆ ೫-೩೦ ಗಂಟೆಯಲ್ಲಿ ವಿಧಿವಶರಾದರು. ಇವರು ಪ್ರಜಾಭಿಮಾನಿಗಳಾಗಿಯೂ, ಉಪಕಾರಿಗಳಾಗಿಯೂ ಇದ್ದರು. ಇವರ ಅಕಾಲಮರಣದಿಂದ ನಾಟಕದ ಕಂಪೆನಿ ನಟ-ನಟಿಯರುಗಳಿಗೂ, ಬಂಧು ಮಿತ್ರ ಕುಟುಂಬದವರಿಗೂ ಅತ್ಯಂತ ವ್ಯಸನ ಉಂಟಾಗಿದೆ. ಮೃತರಿಗೆ ಸುಮಾರು ೪೫ ವರ್ಷ ವಯಸ್ಸು. ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೂ, ಕುಟುಂಬ ವರ್ಗದವರಿಗೆ ಸಮಾಧಾನವನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ಮುನಿಸಿಪಾಲಿಟಿಯವರು ಗಮನಿಸುವರೆ ?

ಟೋಲ್‌ಗೇಟಿನಲ್ಲಿ ಆಕ್ಟ್ರಾಯಿ ವಸೂಲಿ ಮಾಡುತ್ತಿರುವ ವಿಷಯಗಳಲ್ಲಿ ಅನೇಕ ಕುಂದುಕೊರತೆಗಳಿವೆ:—

ಹೊರಗಿನಿಂದ ಬೆಣ್ಣೆ ಮುಂತಾದ ಪದಾರ್ಥಗಳನ್ನು ತಂದಾಗ ಮಣಕ್ಕೆ ಇಷ್ಟೆಂದು ಪಟ್ಟ್ಯಾಲು ನೇಮಿಸಿದ್ದಾರೆ. ಇಷ್ಟು ಮಣ ಅಥವ ಇಷ್ಟು ಸೇರಿದೆಯೆಂಬುದನ್ನು ನಿರ್ಧರಿಸಲು ಟೋಲ್‌ಗೇಟುಗಳಲ್ಲಿ ಯಾವ ಉಪಕರಣವೂ ಇಲ್ಲ. ಮುತ್ಸದ್ದಿಗೆ ತೋರಿದ್ದೇ ಪ್ರಮಾಣ. ಮಾಲೀಕನ ಪ್ರಮಾಣ ವಚನಗಳೂ ಅತನ ಮುಂದೆ ನಡೆಯುವುದಿಲ್ಲ. ಹಾಗೆ ತೂಗಬೇಕಾದರೆ, ಕೇವಲ ೪-೫ ಸೇರು ಬೆಣ್ಣೆ ತಂದವರೂ ಆಕ್ಟ್ರಾಯಿ ಆಫೀಸಿಗೆ ಓಡಬೇಕು; ಗಂಟೆ ಗಟ್ಲೆ ಕಾಯಬೇಕು. ಹಾಗಿಲ್ಲದಿದ್ದರೆ ತಾನು ಕೊಡಬೇಕಾದ ಮೊಬಲಗಿಗಿಂತ ಹೆಚ್ಚಿಗೆಯಾದರೂ ಪಾವತಿಮಾಡಿ ಬರಬೇಕು.

ಈರೀತಿ ನನ್ನಿಂದ ತಾ|| ೨೩-೭-೪೪ರಲ್ಲಿ ೨೭ ಸೇರು ಬೆಣ್ಣೆ ಇದ್ದರೂ ಕೂಡ, ಮುಕ್ಕಾಲು ಮಣದ ಆಕ್ಟ್ರಾಯಿ ವಸೂಲು ಮಾಡಿರುತ್ತಾರೆ. ನನ್ನನ್ನು ಪ್ರಶ್ನಿಸುವ ಮುನ್ನವೇ ರಶೀತಿ ಬರೆದು ಬಿಟ್ಟರು. ಈ ಚರ್ಚೆಯಲ್ಲಿ ಬಸ್ಸು ಹೊರಟುಹೋಗಿ ನಾನು ಮೈಲಿಗಟ್ಟಲೆ ನಡೆಯಬೇಕಾಯಿತು. ಈ ತೊಂದರೆಗಳನ್ನು ತಪ್ಪಿಸಲು ಪೌರಸಭೆಯವರು ಗಮನ ಕೊಡಬೇಕು ಮತ್ತು ಟೋಲ್‌ಗೇಟುಗಳಲ್ಲಿ ಕೊಂಚ ಚಿಲ್ಲರೆ ದುಡ್ಡು ಇಡುವ ಏರ್ಪಾಡೂ ಮಾಡಬೇಕೆಂದು ಸೂಚಿಸಬಯಸುತ್ತೇನೆ.

ಸಿ ಗೋಪಾಲರಾವ್,
ಮುನಿಸಿಪಲ್ ಕೌನ್ಸಿಲರ್,
ಚಾಮರಾಜನಗರ.

Edited, printed and published by A R. Nagarajan, at the Sadhvi Press, D Subbiah Road, Mysore

26-7-44 ರಿಂದ 2 ನೆಯ ವಾರ
[illegible], [illegible], [illegible], ರಾಣಿ ಮುಂತಾದವರ ಪಾತ್ರ
ಹಿಂದೀ ಭಾಷೆಯ ಚಿತ್ರ
ಒಪೇರಾ ಟಾಕೀಸ್‌ನಲ್ಲಿ ★ ನಿಶಾನಿ ★

ಸ್ತ್ರೀಯರ ಸೌಕರ್ಯಕ್ಕೆ
ಈ ೧-೧-೪೪ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಉಪಯೋಗಿಸಿ.
ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ಇಲ್ಲೂ ಮತ್ತು ಸಂತೇಪೇಟೆ ಮಂಡಿಯಲ್ಲೂ, ಒಟ್ಟು ಎಲ್ಲಾ ಮೊಹಲ್ಲಾ ರೇಷನ್ ಕಾರ್ಡುದಾರರಿಗೆ ಸಕ್ಕರೆ ಕೋಟಾಕ್ಕೆ ಪ್ರತಿಯಾಗಿ ಬೆಲ್ಲ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಫ್ಯಾನ್ಸಿ ಬಳೆಗಳು
ಫ್ಯಾನ್ಸಿ [illegible]
ಹೊಸ ನಮೂನೆಯ ಬಳೆಗಳು ಈಗತಾನೇ ಬಂದಿವೆ!
ಫ್ಯಾನ್ಸಿ ಸರಗಳು
ಕೆಮಿಕಲ್ ಮಂತದ ಬಳೆಗಳು
ದೇವರಾಜ ಮಾರ್ಕೆಟ್, ಸೌಭಾಗ್ಯ ಸ್ಟೋರ್ಸ್ ಮೈಸೂರು.

ಸಂಪುಟ ೩] ಗುರುವಾರ ೨೭--೭--೪೪ [ಸಂಚಿಕೆ ೫

ಗಾಂಧೀಜಿ ಸ್ನೇಹ ಹಸ್ತದ ನಿರಾಕರಣೆಯೆ?

ಸಂಪೂರ್ಣ ಯುದ್ಧ ಸಿದ್ಧತೆಗೆ ಹಿಟ್ಲರನ ಘೋಷಣೆ

೪೩ ಜನರು ತುಂಗಭದ್ರಾ ನದಿ ನೀರಿನ ಪಾಲಾದರು

ದೊಡ್ಡ ಮನುಷ್ಯರ ವೇಷದಲ್ಲಿ ಕಳ್ಳತನ

ಮೈಸೂರು ೨೭

"ಸಾಲಿಗ್ರಾಮದ ಸೇವಾಂಜ್ ಎಂಬ ಜೈನ ಮಹಶಯನು ವಿದ್ಯಾವಂತ. ಒಳ್ಳೆ ದೊಡ್ಡ ಮನುಷ್ಯನಂತೆ ವೇಷ ಭೂಷಣ. ೨೫ನೆಯ ತಾ॥ ದಿವಸ ರಾತ್ರಿ ಶ್ರೀರಾಮಪೇಟೆಯಲ್ಲಿ ವಾಸವಾಗಿರುವ ರವಿಚಂದ್ರ ನಾಟಕ ಮಂಡಲಿಯ ಮಾಲೀಕರಾದ ಶ್ರೀ ರಾಜಣ್ಣ ಎಂಬ ಸ್ನೇಹಿತರ ಕೊಠಡಿ ಬಾಗಿಲು ಬೀಗ ಮುರಿದು ಬಟ್ಟೆ ಬರೆ ನಗದು ಹಣ ಇದ್ದ ಟ್ರಂಕೊಂದನ್ನು ಹಾರಿಸಿಕೊಂಡು ಹೋದ. ಮತ್ತೆ ತರದೂದಿನಲ್ಲಿ ಮಾಲು ಸಹಿತ ಸಿಕ್ಕಿದ್ದ. ಪೋಲೀಸ್ ತನಿಖೆ ಕ್ರಮ ನಡೆಯುತ್ತಿದೆ. ಮಾಲು ಎಲ್ಲ ಒಟ್ಟು ಸುಮಾರು ೯೭ ರೂ. ಬೆಲೆ ಬಾಳುತ್ತೆ" —ಎಂಬುದಾಗಿ ವರದಿಯಾಗಿದೆ.

ಜಗದಾಂಬಾ ಶಿಶುವಿಹಾರ

ಕಳೆದ ಸೋಮವಾರ ಮೈಸೂರು ಜಗದಂಬಾ ಶಿಶುವಿಹಾರದಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ರಾಲಾ ಮಕ್ಕಳ ಆಟಪಾಟ, ವಿನೋದಗಳೂ ಪ್ರಭುಗಳ ಶ್ರೇಯಃಪ್ರಾರ್ಥನೆಯೂ ಆಗಿ, ಎಲ್ಲರಿಗೂ ಸಿಹಿತಿಂಡಿ ಹಂಚಲಾಯಿತು. ಪೌರಸಭಾ ಸದಸ್ಯರುಗಳಾದ ಶ್ರೀಗಳು ಅಗರಂ ರಂಗಯ್ಯ ಮತ್ತು ಎ. ಕೃಷ್ಣಮೂರ್ತಿಯವರು ದಯಮಾಡಿ, ಶಾಲಾ ಕಾರ್ಯಕಲಾಪಗಳನ್ನು ನೋಡಿ ಸಂತೋಷ ವ್ಯಕ್ತಪಡಿಸಿ ಶಿಶುವಿಹಾರವು ಇನ್ನೂ ಹೆಚ್ಚು ಹೆಚ್ಚಾಗಿ ಅಭಿವೃದ್ಧಿಗೆ ಬರಲೆಂದು ಹಾರೈಸಿದರು. ಶಾಲಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿಯವರು ಧನ್ಯವಾದವನ್ನು ಸಲ್ಲಿಸಿದರು.

ಬ್ರೈಟ್ ಇನ್‌ಸ್ಟಿಟ್ಯೂಟ್

ರಾಜಧಾನಿಯ ಬ್ರೈಟ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯ [illegible] ನೇ ವಾರ್ಷಿಕೋತ್ಸವವು ಆಗಸ್ಟ್ ೮ನೇ ತಾ॥ ಸಾಯಂಕಾಲ ೫ ಗಂಟೆಗೆ ಟೌನ್ ಹಾಲಿನಲ್ಲಿ [illegible] ಎ. [illegible] ಅಧ್ಯಕ್ಷತೆಯಲ್ಲಿ ನಡೆಯುವಂತೆ ಏರ್ಪಾಟಾಗಿದೆ. [illegible] ಕಾರ್ಯಕ್ರಮಗಳೂ ಇವೆ

ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ

ಮೈ॥ ಕಾಂ॥ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಇತರ ಕಾರ್ಯ ಗೌರವದ ನಿಮಿತ್ತ ೩೦ ನೆಯ ತಾ॥ ಮೈಸೂರಿಗೆ ಬರಲಾಗದಿರುವ ಪ್ರಯುಕ್ತ ಮೈಸೂರಲ್ಲಿ ನಡೆಯಬೇಕಾಗಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವು ಮುಂದಿನ ತಿಂಗಳಿಗೆ ಮುಂದೂಡಲ್ಪಟ್ಟಿದೆ

ತರಕಾರಿ ಬುಟ್ಟಿಯಲ್ಲಿ ರೇಷ್ಮೆ

ಮೈಸೂರಿನ ಅಬ್ದುಲ್ ರಹಮಾನ್ ಎಂಬಾತನು ಮೊನ್ನೆ ದಿವಸ ಮೈಸೂರಿಂದ ಬೆಂಗಳೂರಿಗೆ ಹೋಗುವ ರೈಲಿನಲ್ಲಿ ಫ್ರೆಂಚ್ ರಾಕ್ಸಿಗೆ ಪ್ರಯಾಣ ಮಾಡುವಾಗ್ಗೆ ತರಕಾರಿ ಬುಟ್ಟಿಯಲ್ಲಿ ೮ ಪೌಂ ರೇಷ್ಮೆಯನ್ನು ಇಟ್ಟುಕೊಂಡು ಕಾನೂನು ವಿರೋಧವಾಗಿ ಸಾಗಿಸುತ್ತಿದ್ದುದನ್ನು ರೈಲ್ವೆ ಪೋಲೀಸಿನವರು ಪತ್ತೆ ಮಾಡಿದ್ದಾರೆ.

ಚಿಕಿತ್ಸೆ

[illegible]

[illegible]

[illegible]

ಗಿ ಇಂಜಕ್ಷನ್ ಕೊಡುತ್ತಾರೆ.

ವಿವಿಧ ವಿನೋದಾವಳಿ

ಮೈಸೂರು ೨೭

ಕಸ್ತೂರಬಾಯಿ ಸ್ಮಾರಕನಿಧಿಗೆ ಹಣವನ್ನು ಸಂಗ್ರಹಿಸುವುದಕ್ಕೋಸ್ಕರ ಮುಂದಿನ ಮಾಹೆ ಮೊದಲನೇ ವಾರದಲ್ಲಿ ಒಂದು ವಿವಿಧ ವಿನೋದಾವಳಿಯನ್ನು ಬಿಂಟಿಕೊಪ್ಪಲಿನಲ್ಲಿ ಏರ್ಪಡಿಸುವರೆಂದು ತಿಳಿದುಬಂದಿದೆ

ರಷ್ಯದ ಹಿತೈಷಿ ಸಂಘ

ರಾಜಧಾನಿಯಲ್ಲಿ ಸೋವಿಯಟ್ ರಷ್ಯಾ ಮಿತ್ರರ ಸಂಘದ ರೀತಿಯೊಂದನ್ನು ಸ್ಥಾಪಿಸಲು ೨೮ ನೇ ತಾ॥ ಶುಕ್ರವಾರ ಸಾಯಂಕಾಲ ೭ ಗಂಟೆಗೆ ಡಿ. ಬನುಮಯ್ಯನವರ ಶಾಲೆಯಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿದೆ

ಚಾಕು ತಿವಿದು ಕೊಲೆ

೨೫ ನೆಯ ತಾ॥ ಬಸ್ತೂರಿನಲ್ಲಿ [illegible]

[illegible]

[illegible]

ಭಾಗಕ್ಕೆ ಚಾಕುವಿನಿಂದ ತಿವಿದು ಸತ್ತುಹೋದನೆಂದೂ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಲ್ಲಿ ವ್ಯಕ್ತನಾದನೆಂದೂ ತಿಳಿದುಬಂದಿದೆ

ಅಪ್ಪೀಲು ವಜಾ

ಹಾಸನ ರಾಜಮಗಳ ದೊಂಬಿ ಮೊಕದ್ದಮೆಯ ವಿಚಾರಣೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಿ ಕೊಡಬೇಕೆಂದು ಮುಸ್ಲಿಂರ ಪರವಾಗಿ ಹೈಕೋರ್ಟಿಗೆ ಹೋಗಿದ್ದ ಅಪ್ಪೀಲು ವಜಾ ಆಗಿದೆ. ಈ ಮೊಕದ್ದಮೆ ೭ ನೇ ತಾ॥ ಇದೆ

ಭತ್ತದ ಕುಯಿಲಿಗೆ ರಹದಾರಿಯೇ?

ತುರುವೇಕೆರೆ ತಾಲ್ಲೂಕಿನಲ್ಲಿ ಈಗಾಗಲೇ ಭತ್ತದ ಕಟಾವಾಗಲು ಪ್ರಾರಂಭವಾಗಿದೆ. ಗದ್ದೆ ಕುಯ್ಯುವವರೂ ಒಕ್ಕಲು ಮಾಡುವವರೂ ರಹದಾರಿ ಪಡೆಯಬೇಕೆಂದು ಅಮಲ್ದಾರರು ಹುಕುಂ ಹೊರಡಿಸಿದ್ದಾರೆ. ಆದರೆ ಅವರು ಸಿಗುವುದೇ ಕಷ್ಟ. ರೈತರು ಕಚೇರಿಗೆ ಅಲೆದು ತೊಂದರೆ ಪಡುತ್ತಿದ್ದಾರೆ.

[illegible]

[illegible]

[illegible]

ರು ಬೇಡಿದ್ದಾರೆ.

ಸಂಪೂರ್ಣ ಸೈನ್ಯ ಸಿದ್ಧತೆಗೆ ಹಿಟ್ಲರನ ಆಜ್ಞೆ

ಜರ್ಮನಿ ಮತ್ತು ಆಕ್ರಮಿತ ಪ್ರದೇಶಗಳಲ್ಲಿ ಸಂಪೂರ್ಣ ಯುದ್ಧ ಸಿದ್ಧತೆಗಾಗಿ ಹಿಟ್ಲರನು ಒಂದು ಘೋಷಣೆ ಹೊರಡಿಸಿದ್ದಾನೆ. ಈ ಕೆಲಸವನ್ನು ಗೋಬೆಲ್ಸನಿಗೆ ವಹಿಸಲಾಗಿದೆ. ರಾಷ್ಟ್ರದಲ್ಲಿ ಸಿಕ್ಕುವ ಸಕಲ ಸಾಧನಗಳನ್ನೂ ಉಪಯೋಗಿಸಬೇಕೆಂಬುದೇ ಇವರ ಉದ್ದೇಶ. ಗೋಬೆಲ್ಸನಿಗೆ ಸರ್ವಾಧಿಕಾರವನ್ನು ಕೊಡಲಾಗಿದೆ

ಘೋಷರ ಸಂಧಾನವೇ?

ಪೂರ್ವ ಯೂರೋಪಿನಲ್ಲಿ ರಷ್ಯಾ [illegible] ಸ್ಥಾಪಿಸಲು ಪ್ರೋಪ್ [illegible] ಪ್ರಯತ್ನ ನಡೆಸಿದೆಂದು ನಂಬಲಾಗಿದೆ [illegible] ಸಂಪೂರ್ಣವಾಗಿ [illegible] ದೃಷ್ಟಿಯಿಂದ ಅವರು [illegible] ನೊಡನೆ ಪ್ರತ್ಯೇಕವಾಗಿ ಸಂಧಾನ ನಡೆಸಲೂ ಸಿದ್ಧವಾಗಿದ್ದಾರೆ [illegible]

ಹಿಟ್ಲರನನ್ನು ತ್ಯಜಿಸಿ

ರಷ್ಯದಲ್ಲಿ ಬಂಧಿತರಾಗಿರುವ ಹದಿನಾರು ಜನ ಜರ್ಮನ್ ಸೇನಾಪತಿಗಳು ಜರ್ಮನ್ ಸೈನಿಕರಿಗೆ ಒಂದು ವಿಜ್ಞಾಪನೆಯನ್ನು ಹೊರಡಿಸಿ ಹಿಟ್ಲರನನ್ನು ದೂರ ತಳ್ಳಿ ಯುದ್ಧವನ್ನು ಕೂಡಲೇ ನಿಲ್ಲಿಸಬೇಕೆಂದು ಬೇಡಿಕೊಂಡಿದ್ದಾರೆಂದು ವರದಿಯಾಗಿದೆ.

ಮೂರು ತಿಂಗಳಲ್ಲಿ ಯುದ್ಧ ಮುಕ್ತಾಯ

ಸ್ಟಾಲಿನರವರು ಈ ಯುದ್ಧವು ಇನ್ನು ಮೂರು ತಿಂಗಳಲ್ಲಿ ಮುಕ್ತಾಯವಾಗುವುದೆಂದು ಆಶಿಸಿದ್ದಾರೆ. ಜರ್ಮನಿಯ ಒಳಸಂಚು, ರಷ್ಯಾದಲ್ಲಿ ನಾಜಿಗಳ ಅಪಜಯ ಮತ್ತು ಪಶ್ಚಿಮದ ಘಟನೆಗಳೇ ಇದಕ್ಕೆ ಕಾರಣ

ಲೈಪ್ಜಿ ಕತ್ತರಿಸಿತು

ರಷ್ಯನ್ ಸೇನೆಗಳು ಬ್ರೆಸ್ಟ್-ಲಿಟೋವ್ಸ್ಕ್ ರೈಲ್ವೆಯನ್ನು ಕತ್ತರಿಸಿದುವು, ೪೦ ಗ್ರಾಮಗಳನ್ನು ಆಕ್ರಮಿಸಿದುವು. ಲಿವಾನ್ ಪ್ರದೇಶದಲ್ಲಿ ಅವರು ರಷ್ಯ ಸೈನ್ಯಗಳನ್ನು ಸುತ್ತುಗಟ್ಟಿದ್ದಾರೆ.

ಕೊಡಗೆ ರೇಷ್ಮೆ ಸುತ್ತಿದ್ದರು

ನಂಜನಗೂಡಿನಲ್ಲಿ ಸಿದ್ಧ ಮತ್ತು ಒಬ್ಬ [illegible] ಕೊಡಗೆ ರೇಷ್ಮೆಯನ್ನು ಸುತ್ತಿ [illegible]

[illegible]

ದರು.

ಗಾಂಧೀಜಿ ಸಲಹೆ ನಿರಾಕರಣೆಯೆ?

ಲಾರ್ಡ್ ಸಭೆಯಲ್ಲಿ ಇಂಡಿಯಾ ವಿಷಯವಾಗಿ ಮಾತನಾಡುತ್ತಾ "ಅಂಡರ್ ಸೆಕ್ರೇಟರಿ ಅ॥ ಮನ್ಸ್ಟರ್‌ರವರು ಹೀಗೆ ಹೇಳಿದರು:—ಗಾಂಧಿಯವರ ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಕ್ರಿಪ್ಸ್ ಸಂಧಾನವನ್ನು ಮರೆಯಾಡಿಸಿದ ವಾದವನ್ನೇ ಅವರು ಈಗಲೂ ಮಾಡುತ್ತಿದ್ದಾರೆ. ವೈಸರಾಯಿಗೆ ಈಗಿರುವ ಅಧಿಕಾರಗಳೊಡನೆ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಅವರು ಒಪ್ಪುತ್ತಿಲ್ಲ. ಕ್ರಿಪ್ಸ್ ಸೂಚನೆಗಳು ಇನ್ನೂ ಜೀವಂತವಾಗಿಯೇ ಇವೆಯೆಂಬುದನ್ನು ಯಾರೂ ಮರೆಯಲಾಗದು.

ಪುಟ್ಟರಾಜೇ ಅರಸಿನವರು ದಂಡಿನ ಜಡ್ಜರು

ಸ್ವಂ.ಸು.ತಂತಿ] ಬೆಂಗಳೂರು ೨

ದಂಡಿನ ಜಿ॥ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಸೋಮಪ್ಪನವರನ್ನು ಮೈಸೂರು ಹೈಕೋರ್ಟಿಗೆ ತೆಗೆದುಕೊಂಡಿರುವುದರಿಂದ ಅವರ ಸ್ಥಾನಕ್ಕೆ ಸಮ್ಮಾನಸ್ಥಾನದ ಸಬಾರ್ಡಿನೇಟ್ ಜಡ್ಜರು, ಹಾಸನ ಮತ್ತು ಲ್ಯಾಂಡ್ ರೆಕಾರ್ಡ್ಸ್ ಸೂಪರಿಂಟೆಂಡೆಂಟ್‌ರಾಗಿ ಕೆಲಸ ಮಾಡುತ್ತಿರುವ ಶ್ರೀ ಪುಟ್ಟರಾಜೆ ಅರಸಿನವರನ್ನು ೫ ವರುಷದ ಕರಾರಿನ ಮೇಲೆ ದಂಡಿನ ಜಿಲ್ಲಾ ಜಡ್ಜಿಯಾಗಲು ಇಂಡಿಯಾ ಸರ್ಕಾರದ ಸರ್ವೀಸ್ಸಿಗೆ ನೇಮಿಸಲಾಗಿದೆ.

ಹೈಕೋರ್ಟ್ ಜಡ್ಜಿ

ಶ್ರೀ ಸೋಮಪ್ಪನವರನ್ನು ಸ್ಪೆ॥ ಸರ್ವೀಸ್ಸಿಗೆ ಸೇರಿ [illegible] ಪ್ರಥಮ ದರ್ಜೆಯ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಗಳನ್ನಾಗಿಯೂ ತಾತ್ಕಾಲಿಕ ಹೈಕೋರ್ಟ್ ಜಡ್ಜಿಗಳನ್ನಾಗಿಯೂ ನೇಮಕಮಾಡಿ, ನಿನ್ನೆ ಸಂಜೆ ಸರ್ಕಾರದಾಜ್ಞೆಯಾಯಿತು. ಹೈಕೋರ್ಟ್ ಜಡ್ಜಿಗಳಾದ ರಾಜಧರ್ಮ ಪ್ರವೀಣ ಶ್ರೀ ಕೆ. ಲಿಂಗರಾಜೇಅರಸು ಅವರಿಗೆ ಆಗಸ್ಟ್ ೭ರಿಂದ ೩ ತಿಂಗಳು ರಜ ರೂಪಾಯಿ ರಜ ಮಾಡಿದ ಮೇಲೆ ಅವರಿಗೆ ನಿವೃತ್ತರಾಗಲು ಅನುಮತಿ ಕೊಡಲಾಗಿದೆ. ಅವರ ಸ್ಥಾನದಲ್ಲಿ ಜಸ್ಟಿಸ್ ವೆಂಕಟರಂಗ ಅಯ್ಯಂಗಾರ್ಯರನ್ನು ಖಾಯಂ ಜಡ್ಜಿಗಳನ್ನಾಗಿ ಮಾಡಲಾಗಿದೆ.

ನಿವೃತ್ತ ಎಂಜನಿಯರ ಪುನರ್ ನೇಮಕ

ನಿವೃತ್ತ ಎಕ್ಸಿಕ್ಯೂಟಿವ್ ಎಂಜನಿಯರಾದ ಶ್ರೀ ಮೈ [illegible] ಸ್ವಾಮಿಯವರನ್ನು ಬೆಂಗಳೂರು ನಗರದ ಅಭಿವೃದ್ಧಿ ಟ್ರಸ್ಟ್ ಬೋರ್ಡ್ ಕೈಗೊಳ್ಳುವ ಕೆಲಸಗಳ ಸಂಬಂಧದಲ್ಲಿ ಪೂರ್ವಭಾವಿಯಾಗಿ ಪ್ಲಾನುಗಳನ್ನು ತಯಾರು ಮಾಡಲು ಎಂಜನಿಯರನ್ನಾಗಿ ಎರಡು ವರ್ಷಗಳಿಗೆ, ತಿಂಗಳಿಗೆ ೫೦೦ ರೂ. ಸಂಬಳ ಮತ್ತು ೧೦೦ ರೂ. ಅಲೋಯನ್ಸ್ ಮೇಲೆ ನೇಮಕ ಮಾಡಲಾಗಿದೆ. ಟ್ರಸ್ಟ್ ಬೋರ್ಡ್ ಮುಸೂದೆ ನ್ಯಾಯವಿಧಾಯಕ ಸಭೆಯಲ್ಲಿ ಅಂಗೀಕೃತವಾಗುವವರೆಗೆ [illegible] ಮೇಲೆ, ಈ ಹುದ್ದೆಯನ್ನು ಕಲ್ಪಿಸಲಾಗಿದೆ. ಶ್ರೀ [illegible] ಈ ದಿನ ಚಾರ್ಜ್ ವಹಿಸುವರು.

[illegible]

[illegible]

ಮಾಡಿದೆ

ಮೈಸೂರ್ಟ್ ಜಿಲ್ಲಿ

[illegible] ಬೆಂಗಳೂರು [illegible]

ಬೆಂಗಳೂರು [illegible] ಪದವಿಯಿಂದ ಶ್ರೀ ಟಿ. ವೆ[illegible] ನೇಮಿಸಲಾಗಿದೆ

ಶರಪರಾಯ ಕಾರ್ಯದರ್ಶಿ

[illegible]

ಶೆ ಕಮೀಷನರ ಬತ್ತಿ

[illegible]

ಪತ್ರಿಕೆಗಳಿಗೆ ಹೆಚ್ಚು ಕಾಗದ

[illegible]

ರಿಜಿಸ್ಟ್ರಾರ್ ಆಗಿಸಕೊಡದ

[illegible]

ಗಂಡನಿರುವಾಗಲೇ ವಷನ ?

ಟಾಡರಾತ್ರದ ಜಿಲ್ಲಾ ಜೋರ್ಡ್ ಹಿಂದಿ ಶಾಲೆಯ ಉಪಾಧ್ಯಾಯರು, ಅಲಹಾಬಾದ್ ವಿಶ್ವವಿದ್ಯಾಲಯದ 'ಸಾಹಿತ್ಯರತ್ನ' ಎಂಬ ಪ್ರಶಸ್ತಿ ಪಡೆದವರೂ ಆದವಲ್ಲಿಯ್ಯ ಎಂಬುವರು ತನ್ನ ಹೆಂಡತಿ ಕಲಿಸಿಕೊಡಲನ್ನ ತೆಗೆದ ವಿಷಯವು, ಊರಿನಲ್ಲೆಲ್ಲಾ ವಿಶೇಷ ಆಶ್ಚರ್ಯವನ್ನುಂಟುಮಾಡಿದೆ. ಅಧಿಕಾರಿಗಳು ಅವನನ್ನು ಕೆಲಸದಿಂದ ತೆಗೆದುಹಾಕಿರುವರು.

ಬಿಳಿಬಳಿತಕ್ಕೆ ಸೈನ್ಯಾಧಿಕಾರರು

[illegible] ೨೦೦ ಜನ [illegible] ಅಧಿಕಾರಿಗಳನ್ನು [illegible] ವಿವಿಧ ಪ್ರಾಂತಗಳ ಸಿವಿಲ್ ಅಡಳಿತಾಧಿಕಾರಿಗಳನ್ನಾಗಿ ನೇಮಿಸಬೇಕೆಂದು ಇಂಡಿಯಾ ಸರ್ಕಾರದವರ ನಿರ್ದೇಶಿಸ್ತಾರೆ. ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ನಡೆಸದೆ ಇರುವುದರಿಂದ ಉಂಟಾಗಿರುವ ತೊಂದರೆಯನ್ನು ಪರಿಹರಿಸಲು [illegible] ಈ ಅಧಿಕಾರಿಗಳ [illegible] ಬೇಕೆಂದು ಕೇಳಲಾಗಿದೆ. ಇದು ಕೇವಲ ತಾತ್ಕಾಲಿಕವಾದುದು. ಸಿವಿಲ್ ಸರ್ವಿಸ್ ಪರೀಕ್ಷೆಯಿಂದ ನೇರವಾಗಿ ಅಧಿಕಾರಿಗಳನ್ನು ಆರಿಸುವ [illegible] ಇವರನ್ನು ನೇಮಿಸಲಾಗುತ್ತದೆಂದು ಹೇಳಲಾಗಿದೆ

ಹಿಂದೂ ಮಹಾ ಸಭೆಯೂ ಸ್ಪರ್ಧಿಸ ಬಹುದು

ಮೈಸೂರು ಸಂಸ್ಥಾನದಲ್ಲಿ ನಡೆಯಲಿ[illegible] ಹಿಂದೂ ಮಹಾಸಭೆ ಸ್ಪರ್ಧಿಸಬೇಕೆಂದು [illegible] ಸೂಚನೆಗಳನ್ನು [illegible] ಮಾಡಿದೆ

ಲಕ್ಷ ರೂ. ದಾನ

ಕೊಳ್ಳೇಗಾಲದ ಪ್ರಸಿದ್ಧ ವರ್ತಕರಾದ ಶ್ರೀ ಮಾದಪ್ಪನವರು ಮೈಸೂರು ಸರ್ಕಾರದವರಿಗೆ ಒಂದು ಲಕ್ಷ ರೂ ಅನ್ನು ದಾನವಾಗಿ ಕೊಟ್ಟು, ಸ್ವಲ್ಪ ಭಾಗವನ್ನು ದೇವರ ಸೇವೆಗೂ ಉಳಿದುದನ್ನು ವೀರಶೈವ ವಿದ್ಯಾರ್ಥಿಗಳ ಸಹಾಯಕ್ಕೂ ವಿಶ್ವವಿದ್ಯಾನಿಲಯಕ್ಕೂ ವಿನಿಯೋಗಿಸಬಂತೆ ಕೋರಿದ್ದಾರೆ

ಕಸ್ತೂರಿಬಾಯಿಯವರ ಭಾವಚಿತ್ರ ಅನಾವರಣ

ಮೈಸೂರು ೨೭

ನಿನ್ನೆ ಸಾಯಂಕಾಲ ಒಂಟಿಕೊಪ್ಪಲಿನ ಮಹಾಜನ ಸ್ಕೂಲಿನಲ್ಲಿ ಸುಪ್ರಸಿದ್ಧ ಸಾಹಿತಿಗಳೂ, ವಿಶ್ವಕರ್ಣಾಟಕ ಪತ್ರಿಕೆಯ ಮಾಜಿ ಸಂಪಾದಕರೂ ಆದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ಪೂಜ್ಯಮಾತೆ ಕಸ್ತೂರಿಬಾಯಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ನೆರವೇರಿಸಿದರು.

ಶಾಲೆಯ ಸ್ವಯಂಸೇವಕರು ಶ್ರೀ ಸಿದ್ದವನಹಳ್ಳಿಯವರಿಗೆ "ಗಾರ್ಡ್ ಆಫ್ ಆನರ್" ಕೊಟ್ಟರು. [illegible] ಸ್ವಯಂಸೇವಕರುಗಳ ಸ್ವಹಸ್ತದಿಂದ [illegible] ಬಾಪಿಷ್ಟದ [illegible] ನ್ನು [illegible] ಬಾಲಿಕೆಯರು ಸಂಗೀತದಿಂದ ಅವರನ್ನು ಸ್ವಾಗತಿಸಿದರು. ಸಭೆಯು ಪ್ರಾರ್ಥನೆಯೊಡನೆ ಪ್ರಾರಂಭವಾಯಿತು.

ಪ್ರಾರ್ಥನೆಯಾದ ನಂತರ ಶ್ರೀಮಾನ್ ಕೆ. ವಿ ಅನಂತರಾಮಯ್ಯನವರು ಶ್ರೀ ಶರ್ಮರವರನ್ನು ಸಭೆಗೆ ಪರಿಚಯ ಮಾಡಿಕೊಟ್ಟು ಸ್ವಾಗತ ಭಾಷಣ ಮಾಡಿದರು. ಶಾಲೆಯ ಬಾಲಕಿಯರುಗಳಿಂದ ಆಕರ್ಷಕ ನಡೆಯಿತು. ಸಾಹಿತ್ಯ ಸಂಘದ ಕಾರ್ಯದರ್ಶಿಯವರಾದ ಶ್ರೀಮತಿ ಕೆ. ಎಲ್. [illegible] ಯವರು ಸಂಘದ ವರದಿಯನ್ನು ಒಪ್ಪಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ [illegible] ಯವರು ಕಸ್ತೂರಿ ಬಾ ಜೀವನ ಚರಿತ್ರೆಯನ್ನು ಬಹಳ ಚನ್ನಾಗಿಯೂ ಸ್ವಾರಸ್ಯವಾಗಿಯೂ ತಿಳಿಸಿದರು. ಶಾಲೆಯ ವಿದ್ಯಾರ್ಥಿಯಾದ [illegible] ರವರು, ಕಸ್ತೂರಿ ಬಾ ರವರ ವಿಷಯವಾಗಿ ಮಾತನಾಡಿದರು.

ಸಂಘದ ಪರವಾಗಿ ಸಂಘದ ಅಧ್ಯಕ್ಷರಾದ ಶ್ರೀಮಾನ್ [illegible] ಕೃಷ್ಣಮೂರ್ತಿಯವರು ಶ್ರೀ ಶರ್ಮರವರಿಗೆ ಮಾನ ಪತ್ರವೊಂದನ್ನರ್ಪಿಸಿದರು.

ತುಂಗಭದ್ರೆಯಲ್ಲಿ ೪೨ ಜನ ಮುಳುಗಿದರು

ಮುಂಚಾಲಿಯ ಬಳಿ ತುಂಗಭದ್ರಾ ನದಿಯನ್ನು ಒಂದು ದೋಣಿಯಲ್ಲಿ ದಾಟುತ್ತಿದ್ದ ೪೭ ಜನರು ಕಳೆದ ೨೩ ನೇ ತಾ॥ ನದಿಯಲ್ಲಿ ಮುಳುಗಿ ಮೃತರಾದರು. ದೋಣಿಯಲ್ಲಿ ಹೆಚ್ಚು ಭಾರವಿದ್ದುದೇ ಕಾರಣ. ೧೩ ಜನರು ಮಾತ್ರ ಬದುಕಿಕೊಂಡರು ಇವರು ಜನರಲ್ಲದೆ ೧೫ ಮೂಟೆ ಜೋಳ ಮತ್ತು ಜೇಳಿಯೂ ದೋಣಿಯಲ್ಲಿದ್ದವು.

ವಿವಾಹ

ಚಾಮರಾಜನಗರದ ಪೌರಸಭಾ ಸದಸ್ಯರೂ, ಕಾಂಗ್ರೆಸ್ ಸೇವಕರೂ ಆದ ಶ್ರೀ. ಸಿ. ಗೋಪಾಲಯ್ಯಂಗರ್, ಕೃಷ್ಣರಾಜನಗರದಲ್ಲಿರುವ ಶ್ರೀ ಕೆ ಶ್ರೀನಿವಾಸರಾಯರ ಪುತ್ರಿ ಚಿ॥ ಸೌ॥ [illegible] ರವರನ್ನು ಕೊಟ್ಟು ೬-೮-೪೪ ನೇ ಭಾನುವಾರ ಕೃಷ್ಣರಾಜನಗರದಲ್ಲಿ ವಿವಾಹ ಮಹೋತ್ಸವವು ನಡೆಯುತ್ತದೆ

ಶಾಲೆಯ ಬಾಲಕ ಬಾಲಕಿಯರಿಂದ ಕಸ್ತೂರಿ ಬಾ ನಿಧಿಗೆ ವಸೂಲಾದ ೫೧ ರೂ. ಗಳನ್ನೂ ಮತ್ತು ಶ್ರೀ ಭೂಪಾಲರವರು ಬೆಳ್ಳಿ ತಟ್ಟೆಯೊಂದನ್ನೂ ನಿಧಿಗೆ ಅರ್ಪಿಸಿದ್ದು ಅವುಗಳನ್ನು ಸಾಹಿಗರು [illegible] ಒಪ್ಪಿಸಿದರು. ಇದರ ಜೊತೆಯಲ್ಲಿಯೇ 'ಕಸ್ತೂರಿ ಬಾ' ಎಂಬ ಒಂದು ಪುಸ್ತಕದ ಪ್ರಾರಂಭೋತ್ಸವವನ್ನು ನೆರವೇರಿಸಬೇಕೆಂದು [illegible] ಕೇಳಿಕೊಂಡರು. ಶ್ರೀ [illegible] ಪುಸ್ತಕವನ್ನು ಮತ್ತು ಭಾವಚಿತ್ರವನ್ನು ಅನಾವರಣ ಮಾಡಿದರು. ಸಭೆಯಲ್ಲಿ ಕಸ್ತೂರಿ ಬಾಯಿ ಸ್ಮಾರಕ ನಿಧಿಗೆ ಒಟ್ಟು ೩೫ ರೂ. ಗಳೂ ಒಂದು ಬೆಳ್ಳಿ ತಟ್ಟೆಯೂ ವಸೂಲಾಯಿತು. ವಂದನಾರ್ಪಣೆಯಾದ ಮೇಲೆ ರಾಷ್ಟ್ರಗೀತೆಯೊಡನೆ ಸಭೆ ಮುಗಿಯಿತು

Edited, printed and published by A R. Nagarajan, at the Sadhvi Press, D. Subbiah Road, Mysore

ಬಿಳಿ ಬಂಗ್ಲೆ ಸ್ಟೌವುಗಳು

ಬೆಂಗಳೂರು ಸಿಟಿ ಮಲ್ಲೇಶ್ವರಂ ೧೭ ನೇ ಕ್ರಾಸ್‌ನಲ್ಲಿ

ಶ್ರೀಮಂತರಿಗೂ, ವರ್ತಕರಿಗೂ

ಅನುಕೂಲವಾಗಿ ಬಂಗ್ಲೆ ಕಟ್ಟಿಕೊಂಡಿರಲು

ಎಂಟು ಬಂಗ್ಲೆ ಸ್ಥಳ

ಈ ಕೂಡಲೇ ಮಾರಾಟಕ್ಕಿದೆ

ಎಂಟು ತಪ್ಪೊಂದು ಸೈಟೂ ಸುಮಾರು ೪೦×೫೦ ಚದರ ಗಜಗಳು ಹಿಂದಕ್ಕೆ ೧೦ ರೂ. ಗಳಿಗೆ ಕಮ್ಮಿ ಬರುವ ಆಫರ್‌ಗಳಿಗೆ ಬಿಗಾ ಕೊಡಲಾಗುವುದಿಲ್ಲ.

[illegible] ಹೆಚ್ಚು ವಿವರಗಳಿಗೆ ನನಗೆ ಬರೆಯಬಹುದು

ಬಿ. ಎಸ್. ಸುಬ್ಬರಾವ್,

[illegible] ಮೈಸೂರು [illegible] ಬೆಂಗಳೂರು ಸಿಟಿ

ಸುಸಮಯ ! ಶ್ರಾವಣಮಾಸದ ಪ್ರಯುಕ್ತ !!

ಕಾಶೀಗೆ, ಟೀಗೆ ಬಿಳಿ ಬೆಲ್ಲ ಎಲ್ಲಿ ಸಿಕ್ಕುತ್ತೆ ?

[illegible]

ದೇವರಾಜ ಮಾರ್ಕೆಟ್ ಕೆ. ಪಿ. ಚನ್ನಬಸಪ್ಪನವರ ಅಂಗಡಿಯಲ್ಲಿ

[illegible] ಒಪ್ಪವಾಗಿ ಕೊಡುವವರಿಗೆ [illegible] ಒಂದಾವರ್ತಿ ಪರೀಕ್ಷಿಸಿ ನೋಡಿ.

ಸ್ತ್ರೀಯರ ಸೌಂದರ್ಯಕ್ಕೆ

[illegible] ಶ್ರೇಷ್ಠವಾಗಿ [illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಶಿ ಪುಡಿ

ಉಪಯೋಗಿಸಿ.

ಸಿ. ಸುಬ್ಬಯ್ಯ, ಸಿನಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible]

ಸಂಪುಟ ೨] ಶುಕ್ರವಾರ ೨೮-೭—೪೪ [ಸಂಚಿಕೆ ೬

ಜರ್ಮನ್ ಪಿತೂರಿಯ

- ಪ್ರತಿಧ್ವನಿ -

" ಜರ್ಮನ್ ಸೈನ್ಯವು ಇನ್ನೂ ಮುರಿದು ಬಿದ್ದಿಲ್ಲ.

ಮಹಾತ್ಮ ಗಾಂಧಿಯವರಿಗೆ ಆಶಾಭಂಗ

ಬಡತನವಿದ್ದರೇನು ? ಕಾವ್ಯಾನಂದ ಹೊಂದಿರಿ

ಮೈಸೂರು, ೨೮

ಮನುಷ್ಯನು ಜೀವನದ ಅಂತ್ಯದವರೆಗೂ ನಮ್ಮ ಒಂದು ಸೊಗಸು ಬಡಿಯುವ ಸಂಸ್ಕೃತಿ ಅವಶ್ಯಕಗಿದೆ. ಎಷ್ಟು ಸಂಪಾದಿಸಿದರೂ ತೃಪ್ತಿಯಾಗದ ಹಣಕ್ಕಾಗಿ ಏಕೆ ಬಡಿದಾಡು ವಿರಿ? ಭಾರತವು ಹಣದಲ್ಲಿ ಬಡವಾದರೇನು? ಸಂಸ್ಕೃತಿ ಮತ್ತು ಶಾಂತಿಮಯ ಆನಂದ ಜೀವನದಲ್ಲಿ ಇಂದೂ ಯಾವ ದೇಶಕ್ಕೂ ಹಿಂದುಳಿದಿಲ್ಲ. ಸಹಸ್ರಾರು ವರ್ಷಗಳಿಂದಲೂ ನಮ್ಮ ವೇದ ಪುರಾಣ, ಕಾವ್ಯ ಗ್ರಂಥಗಳಲ್ಲಿ ಹರಿದು ಬೆಳೆದು ಬಂದಿರುವ ಅತ್ಯುತ್ತಮ ಸಂಸ್ಕೃತಿಯ ರುಚಿಯನ್ನು ಸವಿದು ಎಲ್ಲರೂ ಆನಂದ ಪಡಿರಿ — ಎಂಬುದಾಗಿ ನಿನ್ನೆ ಸಂಜೆ ಡಾ|| ಎಂ. ಎಚ್. ಕೃಷ್ಣರವರು ಸುತ್ತೂರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರ ವಿದ್ಯಾರ್ಥಿ ನಿಲಯದ ಸಂಘದ ಆರಂಭ ಭಾಷಣವಾಡುತ್ತಾ ವಿದ್ಯಾರ್ಥಿಗಳಿಗೆ ಉಪದೇಶವಾಡಿದರು. ಶ್ರೀ ಕೆ. ಸಿ ಸುಬ್ಬಣ್ಣನವರು ಅಧ್ಯಕ್ಷತೆ ವಹಿಸಿದ್ದರು.

ಒಬ್ಬ ಸಂಗೀತಗಾರ, ಒಬ್ಬ ನಾಟ್ಯಕಾರ, ಒಬ್ಬ ಶಿಲ್ಪಿ, ಒಬ್ಬ ಯತಿ ಒಬ್ಬ ಕವಿ, ಇವರೆಲ್ಲಾ ಯಾವ ರೀತಿ ತಮ್ಮ ಕಲೆಯಲ್ಲಿ ಮೈಮರೆತು ಭಗವಂತನನ್ನರಿಯುತ್ತಾರೆಂಬುದನ್ನು ನಾವೂ ಕೊಂಚ ತಿಳಿದು ಅನುಭವಿಸಬೇಕು ಅನುಭವಿಸಿ ಉಣಬಡಿಸಬೇಕು. ಭಗವಂತನು ಕೊಟ್ಟಿರುವ ಈ ವಿಶಾಲವಾದ ಪ್ರಕೃತಿ ಸೌಂದರ್ಯದ ಅರಿವನ್ನು ಮಾಡಬೇಕು ಭಾವನಾ ಪ್ರಪಂಚವನ್ನು ಬೆಳೆಸಿಕೊಳ್ಳಬೇಕು. ಯಾವ ಮತ ಯಾವ ಭಾಷೆಯ ಗ್ರಂಥವಾದರೇನು? ಪ್ರತಿ ಭಾಷೆಯಲ್ಲೂ, ಪ್ರತಿ ಮತದಲ್ಲೂ ಉತ್ಕೃಷ್ಟವಾ ಕಾವ್ಯಗಳಿವೆ. ಎಲ್ಲರಿಗೂ ದತ್ತವಾಗಿವೆ ಎಲ್ಲರೂ ಸವಿಯಬಹುದು. ಜಗಳವೇಕೆ? - ಎಂದು ಹೇಳಿ ಶ್ರೀ ಕೃಷ್ಣರವರು ಭಾಷಣವನ್ನು ಮುಕ್ತಾಯಮಾಡಿದರು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದನಂತರ ಸಭೆಯು ಮುಗಿಯಿತು.

ಸ್ಪರ್ಧೆಗಳು

ಮಾಣಿಕ್ಯವಿಲಾಸಪುರದಲ್ಲಿರುವ ತಿಲಕ್ ಸಂಘದಲ್ಲಿ ತಿಲಕ್ ದಿನಾಚರಣೆ ಸಂದರ್ಭದಲ್ಲಿ ೩೦ನೇ ತಾ|| ಭಾನುವಾರದ ದಿನ ಬೆಳಗ್ಗೆ ನೂಲಿನ ಸ್ಪರ್ಧೆಯನ್ನೂ ಮಧ್ಯಾಹ್ನದ ಮೇಲೆ ಪ್ರಬಂಧ ಸ್ಪರ್ಧೆಯನ್ನೂ ನಡೆಸಲು ಏರ್ಪಾಟುಮಾಡಿದ್ದಾರೆ ಪ್ರಬಂಧ ಸ್ಪರ್ಧೆಯು ಮಾಧ್ಯಮಿಕ ಶಾಲೆಯವರಿಗೆ, ಹೈಸ್ಕೂಲಿನವರಿಗೆ ಬೇರೆ ಬೇರೆಯಾಗಿ ಏರ್ಪಾಡಾಗಿದೆ, ಶನಿವಾರ ಸಾಯಂಕಾಲದೊಳಗಾಗಿ ಸ್ಪರ್ಧೆಯಲ್ಲಿ ಭಾಗವಹಿಸುವವರು ಹೆಸರುಗಳನ್ನು ಕಾರ್ಯದರ್ಶಿಯವರಿಗೆ ತಿಳಿಸಬೇಕು

ಬಾಲ ಕನ್ನಡ ಸೇವಾ ಮಂಡಲಿ

ಮೈಸೂರು ಸೊಪ್ಪಿನಕೊಳದ ಬೀದಿಯಲ್ಲಿರುವ ಬಾಲ ಕನ್ನಡ ಸೇವಾ ಮಂಡಲಿಯಲ್ಲಿ ತಾ|| ೩೦ [illegible] ನೇ ಭಾನುವಾರ ಸಾಯಂಕಾಲ ೬|| ಗಂಟೆಗೆ ಸರಿಯಾಗಿ "ಪ್ರಾಚ್ಯ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯದಿಂದ ಕನ್ನಡ ಸಾಹಿತ್ಯಕ್ಕೆ ಹೆಚ್ಚು ಸೇವೆ ಸಂದಿದೆ" ಎಂಬ ವಿಷಯದ ಮೇಲೆ ಚರ್ಚೆ ನಡೆಯುವುದು ಶ್ರೀಮಾನ್ ಎಂ. ಜಿ ರಾಮಚಂದ್ರಾಚಾರ್, [illegible] ಅಧ್ಯಕ್ಷತೆ ವಹಿಸುತ್ತಾರೆ [illegible] ಆಹ್ವಾನ ವಿದೆ

ಗಾಂಧೀಜಿಗೆ ಆಶಾಭಂಗ

ಲಂಡನ್ನಿನ ಸಭೆಯಲ್ಲಿ ಹಿಂದೂಸ್ಥಾನದ ಬಗ್ಗೆ ನಡೆದ ಚರ್ಚೆಗಳು ಗಾಂಧೀಜಿಯವರಿಗೆ ಆಶಾಭಂಗವುಂಟುಮಾಡಿವೆ ಅವರು ಹೀಗೆ ಹೇಳಿದ್ದಾರೆ.—

ಚರ್ಚೆಯನ್ನು ಓದಿದ ಬಳಿಕ ನನಗೆ ನಿರಾಶೆಯನ್ನುಂಟುಮಾಡಿದೆ ನಾನು ಮಾಡಿರುವ ಸೂಚನೆಗಳು ಅತ್ಯಂತ ರಚನಾತ್ಮಕವಾದುವು. ಬ್ರಿಟನ್ನಿನ ಬರಿಯಾಸಕ್ತಿಗೆ ಸ್ನೇಹಪೂರಿತವಾದ ಮನೋಭಾವ [illegible] ಬಂಧನದಲ್ಲಿರುವ ನಾಯಕರನ್ನು ನೋಡುವುದಕ್ಕೂ ನನಗೆ ಅವಕಾಶ ಕೊಡುವುದಿಲ್ಲವಾದರೆ, ಬ್ರಿಟನ್ನನ್ನು ಬಹಿಷ್ಕರಿಸಿ ವುದು ಬ್ರಿಟಿಷ್ ಸರ್ಕಾರಕ್ಕೆ ಬೇಕಿಲ್ಲವೆಂದು ನಾನು ಹೇಳಬೇಕಾಗುತ್ತದೆ ನನಗೆ ಎಷ್ಟೇ ಆಸಕ್ತಿಯಿದ್ದರೂ ಸರ್ಕಾರದಿಂದಲೂ ಮುಂದೆ ಬಾರದಿದ್ದರೆ ಬ್ರಿಟನ್ನಿನ ಹಿತಾಸಕ್ತಿಗಾಗಿ ನನ್ನಿಂದ ಏನುಮಾಡಲೂ ಸಾಧ್ಯವಿಲ್ಲ ಕೋಮುವಾರು ಭಾವನೆಯನ್ನು ಚರ್ಚೆಯಲ್ಲಿ ಬೈಸಿದ್ದರೆ ಚೆನ್ನಾಗಿತ್ತು. ಈಗೀಗ ನಡೆಸುವ ಮಾತಿಗೆ, ಕಾಂಗ್ರೆಸ್ಸಿನವರಿಗೆ ಭಿನ್ನಭಾವಗಳು ಇದ್ದೇ ಇರುತ್ತವೆ ನನಗೆ ನಿಜವೆಂದು ತೋರಿದುದನ್ನು ಹೇಳಿದ್ದೇನೆ ಮುಚ್ಚುಮರೆಮಾಡಲು ಇದು ಸಮಯವಲ್ಲ.

ವಿಫಲವಾದ ಜರ್ಮನ್ ಪಿತೂರಿ

ಜರ್ಮನಿಯ ಸಂಪ್ರದಾಯ ಪಕ್ಷದ ಸಭೆಯು ಸರ್ವಾಧಿಕಾರಿಯಾಗಿ ನೇಮಿತವಾಗಿರುವ ಡಾ|| ಗೋಬೆಲ್ಸ್ ಒಂದು ಭಾಷಣ ಮಾಡಿ ಹೀಗೆ ಹೇಳಿದ್ದಾರೆ:—

ಹಿಟ್ಲರನನ್ನು ಪರಮಾತ್ಮನು ರಕ್ಷಿಸಿ ತನ್ನ ಕೆಲಸವನ್ನು ಮುಂದುವರಿಸುವಂತೆ ಮಾಡಿದ್ದಾನೆ. ಸ್ವಲ್ಪ ಕಾಲದ ಹಿಂದೆ [illegible] ಅದೃಷ್ಟವು ಒದಗಿದೆ. ನಮ್ಮ ಕೆಲಸವು [illegible] ವಾಗಿ ನಡೆಯುವ [illegible] ಶಕ್ತಿ ಇದೇ ಗುರುತು. ಬ್ರಿಟಿಷರ ತಯಾರಾದ ಬಾಂಬನ್ನು ಉಪಯೋಗಿಸಲಾಗಿತ್ತು ಆದರೆ ಜರ್ಮನಿಯ ಸೈನಿಕರನ್ನು ನಮ್ಮಿಂದ ಅಗಲಿಸುವುದಿಲ್ಲ [illegible] ಒಂದು ಸಣ್ಣ ಗುಂಪಿನವರು ಹಿಟ್ಲರನ ನಾಯಕತ್ವದಲ್ಲಿಯೇ [illegible] ಆದರೆ ಹಿಟ್ಲರರು ಜೀವಂತವಾಗಿರುವ [illegible] ಹಿಡಿದ್ದ ಪಕ್ಷದವರೂ ಮಾತ್ರ ಹಿಟ್ಲರನ ಪಕ್ಷಕ್ಕೆ ಸೇರಿಕೊಂಡಿದ್ದಾರೆ

ಈ ದಿನ ಬೆಳಿಗ್ಗೆ ಕೋರ್ಟು ಕಚೇರಿಗಳು

ಸ್ವಂ.ವ.ಪ್ರೋ] ಬೆಂಗಳೂರು ೨೮

ನಗರದಲ್ಲಿ ಹಬ್ಬಕ್ಕಾಗಿ ಮಾಮೂಲಾಗಿ ರಜವಿಲ್ಲ. ಆದರೆ, ನಿನ್ನೆ ಅರಮನೆ ಕಚೇರಿಯ ನೌಕರವರ್ಗದವರು ಅರ್ಜಿ ಮಾಡಿಕೊಂಡಿದ್ದರಿಂದ, ಈ ದಿನ ಪ್ರಾತಃಕಾಲ ೮-೩೦ ರಿಂದ ೧೧-೩೦ ರವರೆಗೆ ಮಾತ್ರ ಕೋರ್ಟು ಕಚೇರಿಗಳಲ್ಲಿ ಕೆಲಸ ನಡೆಯುತ್ತದೆಂದು, ನಿನ್ನೆ ಸಂಜೆ ನೋಟೀಸಿನ ಮೂಲಕ ಪ್ರಕಟಿಸಲ್ಪಟ್ಟಿತು.

ಡಾಕ್ಟರೇಟ್ ಪ್ರಶಸ್ತಿ

ವಿಶ್ವವಿದ್ಯಾಲಯದವರು ವಿಜ್ಞಾನ ಶಾಸ್ತ್ರದ ಒಂದು ವಿಷಯ ಶೋಧನೆಗಾಗಿ, ಸೆಂಟ್ರಲ್ ಕಾಲೇಜಿನ ಶ್ರೀ ಟಿ ಎಸ್. ಸುಬ್ಬರಾಯರವರಿಗೆ, "ಡಾಕ್ಟರ್ ಆಫ್ ಸೈನ್ಸ್" ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದಾರೆ

ಸರ್ಕಾರೀ ಸುದ್ದಿ

ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ ಎ. ವಿ ವಿ [illegible] ಕೆಲವು ದಿನಗಳ [illegible] ರಜ ಈಗ ಆದ್ದರಿಂದ ನವದಾಗಿ [illegible] ನೇಮಕ ಮಾಡಲಾಗಿದೆ

ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ ರಾದ ಮಿ|| ವಜೀರ್ ಅಹಮದ್‌ರನ್ನು ಆ ಜಾಗದಿಂದ ಬೆಂಗಳೂರು ಸಿವಿಲ್ ಸಪ್ಲೈಸ್ ಇಲಾಖೆಗೆ ವರ್ಗ ಮಾಡಲಾಗಿದೆ

ವಾಣಿಜ್ಯ ಶಾಖೆಗೆ ನಿಯಮಿಸಲ್ಪಟ್ಟಿದ್ದ ಶ್ರೀ ಟಿ ಆರ್ ಅಯ್ಯಂಗಾರ್ ರವರನ್ನು ಈಗ ಬೆಂಗಳೂರು ಮೈಸೂರಿನ ಮುನಿಸಿಪಾಲಿಟಿಯ ರನ್ನಾಗಿ ನೇಮಕ ಮಾಡಲಾಗಿದೆ

ಮಾಧ್ಯಮಿಕ ಪರೀಕ್ಷೆಗೆ ಹೆಚ್ಚು ಕೇಂದ್ರಗಳು

[illegible] ನಡೆಯುವ ಮಾಧ್ಯಮಿಕ [illegible] ಪರೀಕ್ಷೆಗಳಿಗೆ, ಹೊಸಕೋಟೆ [illegible] ಗಲು, ಸಿಡ್ಲಘಟ್ಟ, ಬಾಗೇಪಲ್ಲಿ, ಶ್ರೀನಿವಾಸಪುರ, [illegible], ಗುಬ್ಬಿ, ಶಿರಾ [illegible], ಅರಸೀಕೆರೆ, ಹೊಸ [illegible] ಚನ್ನರಾಯಪಟ್ಟಣ [illegible] ಕೇಂದ್ರಗಳನ್ನಾಗಿ ಮಾಡಲಾಗಿದೆ

ಸಿಟಿ ಸ್ಟೇಟ್ ಕೌನ್ಸಿಲ್

ಮೈಸೂರು ೨೮

ರಾಜಧಾನಿ ನಗರ ಸ್ಟೇಟ್ ಕೌನ್ಸಿಲ್‌ನ ಅವಮಾನವನ್ನು ವಿಚಾರಿಸುವ ಬಗ್ಗೆ ಒಂದು ಲೋಕಲ್ ಒಂದು ಸಮಿತಿ ಮಾಡಬೇಕು; ಕಟ್ ಮಾತ್ರಗಳಿಗೆ ಪ್ರತಿಕ್ಷಣ ಕೊಡಬೇಕು; ಸ್ಟೇಟ್ ಕೌನ್ಸಿಲಿನ ಬ್ಯಾಂಕ್ ಒಂದು ದಿನ ನಡೆಸಬೇಕು; ಲಾರ್ಡ್ ಬೇಡನ್ ಪೊವೆಲ್‌ರ ಜೀವನ ಚರಿತ್ರೆ ಅಂಶಗಳನ್ನು ತಿಳಿಸಲು ಎಲ್ಲಾ ಸ್ಕೌಟ್ ಟ್ರೂಪ್‌ಗಳಿಗೂ ಉಚಿತವಾಗಿ ಹಂಚಬೇಕು ಎಂಬೀ ತೀರ್ಮಾನಗಳನ್ನು ನಿನ್ನೆ ಸಂಜೆ ನಡೆದ ಸ್ಟೇಟ್ ಮೀಟಿಂಗಿನಲ್ಲಿ ಶ್ರೀ ಆರ್. ರಾಮಚಂದ್ರರಾವ್ ಬಾಂಧೋರಿಯವರ ಅಧ್ಯಕ್ಷತೆಯಲ್ಲಿ ನಡೆದು, ತೀರ್ಮಾನಿಸಿತು ಮುಂದಿನ ಸಾಲಿಗೆ ೨೦೭೫ ರೂ ಆಯವ್ಯಯದ ಅಂದಾಜನ್ನು ಅಂಗೀಕರಿಸಲಾಯಿತು.

ಮೋಟು ಸಕ್ಕರೆ ಉತ್ಪಾದಕರ ಸಂಘ

೨೬-೭-೪೪ ನೇ ಬುಧವಾರ ರಾಮದಾಸ್ ಕಾಸ್ಪರರ ಹಾಸ್ಪಿಟಲ್‌ನಲ್ಲಿ ಶ್ರೀ ಬಿ. ಆರ್. ವಣೀಕ್ಕರ್, ಮುನಿಸಿಪಲ್ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ "ಮೋಟು ಸಕ್ಕರೆ ಉತ್ಪಾದಕರ ಸಂಘ" ವನ್ನು ಸ್ಥಾಪಿಸಲಾಯಿತು. ಅಧ್ಯಕ್ಷರು ಸಂಘದ ಉದ್ದೇಶವನ್ನು ವಿವರವಾಗಿ ಹೇಳಿದರು. ಈ ಸಂಘದ ಉದ್ದೇಶ, ಹಿಂದುಳಿದಿರುವ ಈ ಜನಾಂಗವನ್ನು ಒಟ್ಟುಗೂಡಿಸಿ ನೈತಿಕ, ಆರ್ಥಿಕ ಮತ್ತು ಸಾಮಾಜಿಕ ವಿಚಾರವಾಗಿ ಜ್ಞಾನ ಪ್ರಚಾರ ಮಾಡಿ, ಬಾಲಕ, ಬಾಲಕಿಯರನ್ನು ವಿದ್ಯಾವಂತರನ್ನಾಗಿ ಮಾಡಲಿಕ್ಕೆ ಹೋಗುವಂತೆ ಮಾಡುವುದು, ಇತ್ಯಾದಿ ಈ ಸಂಘಕ್ಕೆ ಮ|| ರಾ|| ರಿ ಹನುಮಂತವನ್ನು ಅಧ್ಯಕ್ಷರನ್ನಾಗಿಯೂ, ಸಿ ಚೌಡಪ್ಪ ಮತ್ತು ಮೈ ಎಸ್ ಲಿಂಗಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು ಶ್ರೀಮಾನ್ ಬೆಳ್ಳೂರು ತಮ್ಮಯ್ಯನವರಿಗೆ (ನಿಲಿಂದ ಹೋಟೆಲ್) ಅನಂತಾನಂತ ಧನ್ಯವಾದಗಳನ್ನು ಅರ್ಪಿಸಲಾಯಿತು. ರಾಷ್ಟ್ರಗೀತೆ ಗೀತೆಯೊಡನೆ ಸಭೆ ಮುಗಿಯಿತು

ಬೀಡಿ ಕೆಲಸಗಾರರ ಸಂಘ

ನಿನ್ನೆ ಸಂಜೆ ಬೀಡಿ ಲೇಬರ್ ಸಂಘದ ಆಫೀಸಿನಲ್ಲಿ ಮೈಸೂರಿನ ಎಲ್ಲಾ ಬೀಡಿ ಫ್ಯಾಕ್ಟರಿಗಳ ಕೆಲಸಗಾರರ ಸಭೆಯು ಅಸಿಸ್ಟೆಂಟ್ ಲೇಬರ್ ಕಮಿಷನರ್ ರವರ [illegible] ನಡೆಯಿತು ಈ ಕೆಲಸಗಾರರೆಲ್ಲರೂ ಒಟ್ಟಾಗಿ ಒಂದು ಸಂಘವನ್ನು ಸ್ಥಾಪಿಸಬೇಕೆಂದೂ ನಿರ್ಧರಿಸಲಾಯಿತು ಮ.ಹ ಮಹಮದ್ ಹುಸೇನರನ್ನು ಅಧ್ಯಕ್ಷರನ್ನಾಗಿಯೂ ಟಿ ಎ. ಮಹಮದ್, ಬಿ. ವಿ ಕಣ್ಣೀರಪ್ಪ [illegible] ಕಾರ್ಯದರ್ಶಿಗಳನ್ನಾಗಿಯೂ, [illegible] ಗಳನ್ನು [illegible] ಗಳನ್ನಾಗಿಯೂ, [illegible] ಸಮಿತಿಯನ್ನು ಚುನಾಯಿಸಲಾಯಿತು. ಸಂಘದ [illegible] ಸಭೆಯು [illegible]

ಜರ್ಮನ್ ಸೇನೆ ಮುರಿದಿಲ್ಲ

[illegible]

[illegible]

[illegible]

ಮೈಸೂರು ೨೭

[illegible]

"ಕಸ್ತೂರಿ ಬಾಯಿಯವರ ಕಂಡರೆ ನನಗೆ ಬಹಳ ಗೌರವ [illegible]

[illegible]

[illegible] ಯಾರು ಊಹಿಸಿದ್ದರು? ಎಂದು ಯೋಚಿಸಿರಿ. ಆಕೆಯ ಮುಖದಲ್ಲಿ ಅಂತಹ ಅಪೂರ್ವವಾದ ಸತ್ವವನ್ನು ತೋರಿಸತಕ್ಕಂಥ ವರ್ಚಸ್ಸಿಲ್ಲ—ಆದರೆ ಆಕೆಯ ಕಣ್ಣುಗಳ ತುಂಬಿದ ಬೆಳಕು ನೋಡಿದಂತೆ ಕಾಣಿಸುತ್ತವೆ. ಸ್ವಲ್ಪ ಕಾಲ ನೋಡಿದರೆ ಸಾಕು ಆಕೆಯು ಜೀವನದಲ್ಲಿ ಯಾವ ದೊಡ್ಡ [illegible] ಎಂಬುದು ತಿಳಿಯುತ್ತದೆ. ಗಾಂಧೀಜಿ ಜೊತೆಯಲ್ಲಿ ನಡೆಸಿ ಹೋಗಬೇಕಾದರೆ ಕಷ್ಟ. ಅವರು ಹೊಸ ಜನ್ಮಗಳಲ್ಲಿ ಬಾಳಬೇಕಾದುದು, ಸ್ಥಿರ [illegible] ಒಂದೇ ಜನ್ಮದಲ್ಲಿ [illegible] ಕಸ್ತೂರಿಬಾ ಗಾಂಧಿಯವರೂ ನಡೆಯಬೇಕೆಂಬುದು ಬಹಳ ಕಷ್ಟ—ಆದರೆ ತನ್ನ ಸ್ತ್ರೀ ಧರ್ಮಕ್ಕೆ [illegible] ಗಂಡನಿಗೆ [illegible] ಸಾಧಿಸಿ [illegible] ಶೀಲವು [illegible] ಹೇಳಿದಾಗ, ಜೀವನವನ್ನು [illegible] ಸ್ತ್ರೀ ಧರ್ಮವನ್ನು ಸ್ತ್ರೀಯು ಪುರುಷ ವಿಗ್ರಹ ಎಂದು [illegible] ಕಸ್ತೂರಿಬಾಯಿಯವರೂ ತನ್ನ ಗಂಡನ ಮಾತಿಗೆ [illegible] ಕಸ್ತೂರಿಬಾಯಿಗೆ ಆಶೆಯೇ ಜೀವನದಲ್ಲಿರಲಿಲ್ಲ. ಗಂಡ, ಮಕ್ಕಳು, ಸಂಸಾರ, ಇವುಗಳ ಆಶೆಯೇ ಇಲ್ಲದೆ ಹೋಯಿತು. ಗಾಂಧೀಜಿ ಸತ್ಯಸಂಕಲ್ಪದಲ್ಲಿ ಬಹಳ ಬದಲಾಯಿಸಿಕೊಂಡು ತಮ್ಮ ಕುಟುಂಬಕ್ಕೆ ಎಲ್ಲರನ್ನೂ ಸೇರಿಸಲು ಪ್ರಾರಂಭಿಸಿದರು— ದಕ್ಷಿಣ ಆಫ್ರಿಕದಲ್ಲಿ ಒಂದು ಆಶ್ರಮವನ್ನು ತೆಗೆಯುತ್ತೇನೆ ಎಂದರು. ಆಶ್ರಮವನ್ನು ತೆಗೆಯುವುದಕ್ಕೆ ಮುಂಚೆಯೇ ತಮ್ಮ ದಾಂಪತ್ಯ ಸುಖವನ್ನು ಬಿಟ್ಟು ತಮ್ಮ ಗಂಡನು ಹೇಳಿದಂತೆ ಕೇಳುವುದು. ತಮ್ಮ ಕೆಲಸ ಎಂದು ತಿಳಿಸಿದರು ಕಸ್ತೂರಿಬಾಯಿ. ಅಂದಿನಿಂದ ಆವರಿಗೆ ನಾನು, ನನ್ನ ಮಕ್ಕಳು ಎಂಬ ಸ್ವಾರ್ಥತೆ ಹೋಗಿ ನಮ್ಮ ಪ್ರಪಂಚ, ಎಲ್ಲರೂ ನನ್ನ ಮಕ್ಕಳು ಎಂಬ ಭಾವನೆ ಆಕೆಯಲ್ಲಿ ಹುಟ್ಟಿತು.

[illegible] ಒಂದು ಸಲ್ಲಿಕೆ. [illegible] ದಕ್ಷಿಣ ಆಫ್ರಿಕದಲ್ಲಿ [illegible] ಹೋಗಿ [illegible] ಗಾಂಧಿ [illegible] ಕಸ್ತೂರಿಬಾ [illegible] ಗಾಂಧೀಜಿ [illegible]

[illegible]

[illegible] ನಾಗಿ ಮಾಡಿದ್ದಾರೆ.

ಗಾಂಧೀಜೀ ಅಹಿಂಸೆಯನ್ನು ಪಲಂಬಲಿಯಿಂದ ಕಲಿಯಲಿಲ್ಲ, ಬಗ್ಗಸಿಂದ ಕಲಿಯಲಿಲ್ಲ ಅದನ್ನು ಅವರು ಕಸ್ತೂರಿಬಾಯವರಿಂದ ಕಲಿತರು "ನನ್ನ ಹೆಂಡತಿಯನ್ನು ಆರಂಭಗ ಸ್ತ್ರೀಯರನ್ನೆಲ್ಲಾ ನಾನು ಅರಿತೆ, ಅವರಿಂದ ನಾನು ಸ್ತ್ರೀಯರನ್ನು ಹೆಗಿನ. [illegible] ಕಲಿತೆ, ಎಂದು ಹೇಳಿದ್ದಾರೆ" ಎಂದು ಹೇಳಿದರು.

ನಂತರ ಕಸ್ತೂರಿಬಾ ನಿಧಿಯ ವಿಷಯವಾಗಿ ಮಾತನಾಡುತ್ತ, ಇದರ ಮುಖ್ಯೋದ್ದೇಶವು ಸ್ತ್ರೀ ಜನರನ್ನು ಮುಂದಕ್ಕೆ ತರುವುದು, ಹಳ್ಳಿ [illegible] ಸ್ತ್ರೀಯರಿಗೆ ಬಂದು ಯೋಜನೆಯನ್ನು ಮಾಡಿದ್ದಾರೆಂದು ತಿಳಿಸಿದರು. ಸ್ತ್ರೀ ಜನರು ಏನಾದರೊಂದು ಕಸ್ತೂರಿಬಾ ಹೆಸರಿನಲ್ಲಿ ಕೆಲಸ ನಡೆಸಲಿ ಎಂಬುದು ಉದ್ದೇಶ. ನಮ್ಮ ದೇಶದ ಅನಾಥ ಬಾಲಿಕೆಯರು ದೇಶದ ದುಷ್ಟ ಜನರ ಬಲೆಗೆ ಸಿಕ್ಕಿ ಬಿದ್ದು ತಮ್ಮ ಜೀವನವನ್ನು ಬಾಧೆ ಮಾಡಿಕೊಳ್ಳದಂತೆ ನೋಡಿಕೊಳ್ಳುವುದು ಒಂದು. ಒಂದೊಂದು ತಾಲ್ಲೂಕಿನಲ್ಲೂ ಮಹಿಳಾ ಶ್ರಮಗಳನ್ನು ಸ್ಥಾಪಿಸಿ ಮಹಿಳೆಯರಿಗೆ ವಿದ್ಯೆಯನ್ನೂ, ಕೈಗಾರಿಕೆ ಕುಶಲ ವಿದ್ಯೆಗಳನ್ನೂ ಹೇಳಿಕೊಡುವುದು, ಪ್ರಾಂತೀಯ, ಸ್ಥಾನ ಹಣ ಮುಂತಾದುವುಗಳಿಂದ ನಮ್ಮ ದೇಶದ ಸ್ತ್ರೀ ಜನರನ್ನು ರಕ್ಷಿಸಿ ಉದ್ಧರಿಸುವುದು, ಅಂದರೆ ರಕ್ಷಣಾ ಗೃಹ (ರೆಸ್ಕ್ಯೂ ಹೋಮ್ಸ್) ಗಳನ್ನು ಕಟ್ಟಿಸುವುದು, ದೂರದ ಹಳ್ಳಿಗೆ ತಿಕ್ಕಂತ ಜನರನ್ನು ತರಬೇತಿ ಮಾಡುವುದಕ್ಕೆ, ಸ್ತ್ರೀಯರಲ್ಲಿ ಜನರ ಜೀವನದಲ್ಲಿ ಒಂದು ಹೊಸ ಬೆಳಕು ತರುವುದಕ್ಕಾಗಿ ಹಣವು ವಿನಿಯೋಗಿಸಲ್ಪಡುವುದು. ಇದು ಸ್ತ್ರೀ ಜನಕ್ಕೋಸುಗವಾಗಿ ಇರುವುದರಿಂದ ಸ್ತ್ರೀಯರೂ ಇದರಲ್ಲಿ ಪ್ರಮುಖ ಪಾತ್ರ ವಹಿಸಿ ಹಣ ಸಂಗ್ರಹ ಮಾಡಬೇಕೆಂದು ಕೇಳಿಕೊಂಡರು.

ಸ್ತ್ರೀ ಅಪಹಾರ-ಪೊಡೆದಾಟ

ಒಬ್ಬ ಹಿಂದೂ ಮಹಿಳೆಯನ್ನು ಅಪಹರಿಸಿದ ಕಾರಣವಾಗಿ ಗುರುವಾರ [illegible] ಪ್ರಾಂತ ನಗರದಲ್ಲಿ ಹಿಂದೂ-ಮುಸ್ಲಿಮರ ಕದನವಾಗಿ ೭ ಜನರು ಮಡಿದರು. ಅನೇಕರಿಗೆ ಗಾಯಗಳಾದವು. ಪೋಲೀಸರು ಸ್ಥಳಕ್ಕೆ ಹೋಗಿ ಈಗ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ.

Edited, printed and published by A. R. Nagarajan, at the Sadhvi Press, D Subbiah Road, Mysore

[illegible]

[illegible] ಹೊಗೆ [illegible] ಬಳಿ [illegible] ಕೊಠಡಿಯಲ್ಲಿ ಸುಗ್ಗಿ ಸಯ್ಯದ್ ರಹ್ಮತುಲ್ಲಾ ಎಂಬುವರ ಸುಮಾರು ೧೦೦ ರೂ. ಬೆಲೆಬಾಳುವಷ್ಟು ಬಟ್ಟೆಬರೆಗಳನ್ನು ಕದ್ದು ಬ್ಯಾಂಕ್ ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

ಮೈಸೂರು ಶೈಲಿ ಸ್ಟೋರ್ಸ್‌ನಲ್ಲಿ ೨೨ನೆಯ ತಾ॥ ವ ಭಾನುವಾರ ರಾತ್ರಿ ೨೪ನೆಯ ತಾ॥ ಬೆಳಿಗ್ಗೆ ಬಾಗಿಲು ತೆಗೆದು ನೋಡುವ ವೇಳೆಗೆ ಯಾರೋ ಬೀಗ ತೆಗೆದು ಒಳಕ್ಕೆ ನುಗ್ಗಿ ಸುಮಾರು ೩೦೦ ರೂ. ಬೆಲೆಬಾಳುವಷ್ಟು ಅರಿ, ಡ್ರಿಲ್, ಬ್ರಷ್ ಮುಂತಾದುವನ್ನು ಅಪಹರಿಸಿರುವುದಾಗಿ ಪೋಲೀಸರಿಗೆ ದೂರು ಬಂದಿದೆ.

ಬೆಂಗಳೂರು ೨೮

ಮಹಿಳಾ ವೈದ್ಯರು

ಮಿಸೆಸ್ ಹನೀಫ್ ಬೇಗಂ ಎಂಬುವರನ್ನು ಬೆಂಗಳೂರಿನ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯ ಯುನಾನಿ ಭಾಗದ ಫಿಸಿಷಿಯನ್ನಾಗಿಯೂ, ಶ್ರೀಮತಿ [illegible] ಎಂಬುವರನ್ನು ಆಯುರ್ವೇದ ಭಾಗದ ಫಿಸಿಷಿಯನ್ನಾಗಿಯೂ ನೇಮಕವಾಗಿದೆ.

ಬೀಣಾನಾಯಕರ ಒತ್ತಾಯ

ಮಹಾತ್ಮ ಗಾಂಧಿಯವರ ಬಿಡುಗಡೆಯಿಂದ ಬಿಕ್ಕಟ್ಟು ಪರಿಹಾರವಾಗಿ ಹಿಂದೂಸ್ಥಾನ ರಾಷ್ಟ್ರೀಯ ಸರ್ಕಾರವು ಸ್ಥಾಪಿಸಲ್ಪಡಬೇಕು. ಎಂಬುದಾಗಿ ಬೀಣಾನಾಯಕ್, ಮುಸ್ಲಿಂ ಲೀಗ್ ಕೇಂದ್ರ ಸಮಿತಿ ಅಧ್ಯಕ್ಷರು ಹೇಳುತ್ತಾರೆ.

ವೀರಶೈವ ವಿದ್ಯಾರ್ಥಿ ಸಂಘ

ಮೈಸೂರು ವೀರಶೈವ ವಿದ್ಯಾರ್ಥಿ ಸಂಘದ ಜನರಲ್ ಬಾಡಿ ಮೀಟಿಂಗು ತಾ॥ ೩೦-೭-೪೪ ನೇ ಭಾನುವಾರ ಮಧ್ಯಾಹ್ನ [illegible] ರಸ್ತೆಯಲ್ಲಿರುವ ಸುಪ್ತೂರು ಮಠದಲ್ಲಿ ಸರದಾರ್ ಶ್ರೀ [illegible] ಅವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಜನರಲ್ ಪ್ರತಿಭಟನೆ

[illegible] ಎಲ್ಲಾ ಕಡೆಯೂ ಜನರಲ್ [illegible] ಆವೇಶದಿಂದ ಪ್ರತಿಭಟನೆ [illegible] ಸಂಪೂರ್ಣ ಪ್ರಯತ್ನ ಮಾಡುತ್ತಿರುವುದು ಎಲ್ಲರಿಗೂ ಗೊತ್ತಾಗಿದೆ. [illegible] ಮತ್ತು [illegible] ಗಳ ಮೂಲಕ ಪ್ರಚಾರ ನಡೆಯುತ್ತಿದೆ.

ಸ್ತ್ರೀಯರ ಸೌಂದರ್ಯಕ್ಕೆ

[illegible] ಇಂದಲೇ ಕೃತ್ರಿಮವಾಗಿ [illegible] ತಯಾರಾಗುತ್ತಿರುವ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಶ್ಮೀರ ಪುಡಿ

ಉಪಯೋಗಿಸಿ

ಟಿ. ಪುಟ್ಟಯ್ಯ, ಏನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಮಂಡಿಯಲ್ಲೂ, [illegible] ಎಲ್ಲಾ [illegible] ಬೇಕಾದಷ್ಟು ದೊರೆಯುತ್ತದೆ.

ಸಂಪುಟ ೩] ಶನಿವಾರ ೨೯-೭-೪೪ [ಸಂಚಿಕೆ ೭

ಮಹಾತ್ಮರಿಗೆ ಪುನಃ ಭೇಟಿ ನಿರಾಕರಣೆಯೇ?

ಕಸ್ತೂರಿಬಾಯಿ ನಿಧಿಗೆ ಪೌರಸಭಾ ಹಣ ಕೊಡಕೂಡದಂತೆ

ಕಲ್ಕತ್ತಾ ಡಿಗ್ರಿ ಪರೀಕ್ಷೆಗಳಲ್ಲಿ ಸ್ತ್ರೀಯರಿಗೇ ಅಗ್ರಸ್ಥಾನ

ವಿದ್ಯಾರ್ಥಿನಿಯರ ಪ್ರಶಸ್ತಿ

ಬಿ. ಎ. ಮತ್ತು ಬಿ. ಎಸ್‌ಸಿ ಪರೀಕ್ಷೆಗಳಲ್ಲಿ ಈ ಸಾರಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಮಹಿಳೆಯರು ನಾಲ್ಕು ಆನರ್ಸ್ ವಿಭಾಗಗಳಲ್ಲಿ ಅಗ್ರಸ್ಥಾನವನ್ನು ಪಡೆದಿದ್ದಾರೆ. ತತ್ವಶಾಸ್ತ್ರ, ಬಂಗಾಳಿ, ಪ್ರಾಣಿಶಾಸ್ತ್ರ, ಮಾನವ ವರ್ಣನಾ ಶಾಸ್ತ್ರಗಳಲ್ಲಿ [illegible], ವ. ಮುಜುಂದಾರ್, ದೀಪ್ತಿ ಸನ್ಯಾಲ್, [illegible] ಬೋಸ್, ನಿರ್ಮಲಾ ದತ್ ಎಂಬ ಮಹಿಳೆಯರು ಪ್ರಥಮ ದರ್ಜೆಯ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಇಂಗ್ಲಿಷ್ ಆನರ್ಸ್‌ನಲ್ಲಿ ಯಾರೂ ಪ್ರಥಮ ತರಗತಿಯಲ್ಲಿ ಬರಲಿಲ್ಲ. ಅದರೂ ಎರಡನೇ ತರಗತಿಯ ಪ್ರಥಮ ಸ್ಥಾನವು ಒಬ್ಬ ಮಹಿಳೆಗೇ ದೊರೆತಿದೆ.

ಸುಂಕ ತಪ್ಪಿಸಿಕೊಳ್ಳಲು ಕೊಲೆ; ಆತ್ಮಹತ್ಯೆ

[illegible]ಯಿಂದ ಸಿಕಂದರಾಬಾದಿಗೆ ಬಂದ ಒಬ್ಬ ಸಿಖ್ ಪ್ರಯಾಣಿಕನ ಬಳಿ ಇದ್ದ ಕೆಲವು ಪದಾರ್ಥಗಳಿಗೆ ಸುಂಕ ಕೊಡದೆ ತಪ್ಪಿಸಿಕೊಂಡು ಹೋಗಲು ಅವನು ಪ್ರಯತ್ನಿಸುತ್ತಿದ್ದಾಗ ಪೋಲೀಸಿನವನು ನಿಲ್ಲು ಎಂದು ಹೇಳಿದರೂ ಓಡಿಹೋಗುತ್ತಿದ್ದುದರಿಂದ ಪೋಲೀಸಿನವನು ಅಟ್ಟಿಸಿಕೊಂಡು ಬರುತ್ತಿದ್ದುದನ್ನು ಕಂಡು ಸಿಖ್ಖನು ತನ್ನಲ್ಲಿದ್ದ ರಿವಾಲ್ವರಿನಿಂದ ಪೋಲೀಸಿನವನನ್ನು ಹೊಡೆದು ಕೊಂದು ಹಾಕಿ, ತಾನು ತಪ್ಪಿಸಿಕೊಳ್ಳಲು ಮಾರ್ಗವಿಲ್ಲವೆಂದು ತಿಳಿದಾಗ ತಾನೂ ಆತ್ಮಹತ್ಯೆ ಮಾಡಿಕೊಂಡನೆಂಬ ಘೋರ ಪ್ರಸಂಗವು ವರದಿಯಾಗಿದೆ.

ಸಿವಿಲ್ ಆಡಳಿತಕ್ಕೆ ಮಿಲಿಟರಿಯವರೇ?

ಸಿವಿಲ್ ಆಡಳಿತದಲ್ಲಿ ಮಿಲಿಟರಿ ಅಧಿಕಾರಿಗಳನ್ನು ತಂದು [illegible] ಪ್ರಮಾಣವನ್ನು ಇಟ್ಟುಕೊಳ್ಳಬೇಕೆಂದು ಇಂಡಿಯಾ ಸರ್ಕಾರದವರು ಮಾಡಿರುವ ಆಲೋಚನೆಯನ್ನು ಪ್ರತಿಭಟಿಸಿ [illegible] ವರ್ಗವನ್ನು ಭಾರತೀಕರಣ ಮಾಡುವ ತತ್ವಕ್ಕೆ ವಿರೋಧವಾಗಿದೆಯೆಂದು ಕಲ್ಕತ್ತೆಯ ಭಾರತೀಯ ವಾಣಿಜ್ಯ ಸಂಸ್ಥೆಯವರು ಠರಾವು ಮಾಡಿದ್ದಾರೆ.

ರೈಲ್ವೆ ಕೋರ್ಟುಗಳು

ಟಿಕೀಟಿಲ್ಲದೆ ರೈಲಿನಲ್ಲಿ ಪ್ರಯಾಣ ಮಾಡುವವರನ್ನು ವಿಚಾರಿಸಿ ಕೂಡಲೇ ಶಿಕ್ಷಿಸಲು ಬೊಂಬಾಯಿ, ಸೂರತ್, ಅಹಮದಾಬಾದುಗಳಲ್ಲಿ ಗೌರವ ಮ್ಯಾಜಿಸ್ಟ್ರೇಟರುಗಳ ರೈಲ್ವೆ ಕೋರ್ಟುಗಳನ್ನು ಸ್ಥಾಪಿಸಲಾಗುವುದು. ಇನ್ನು ಮುಂದೆ ಈ ಅಪರಾಧಕ್ಕೆ ೧೦೦ ರೂ ಜುಲ್ಮಾನೆ ಅಥವಾ ೩ ತಿಂಗಳು ಕಠಿಣ ಸಜಾ ವಿಧಿಸಲ್ಪಡುವುದು.

ಕೋಳಿ ಮತ್ತು ಮೊಟ್ಟೆ ಪ್ರೋತ್ಸಾಹ

ಬಿಹಾರ್ ಪ್ರಾಂತದಲ್ಲಿ ಕೋಳಿ ಮತ್ತು ಮೊಟ್ಟೆಗಳ ಬೆಲೆಯು ಮಿತಿಮೀರಿ ಏರುತ್ತಿರುವುದನ್ನು ತಪ್ಪಿಸಿ ಹೆಚ್ಚು ಕೋಳಿಗಳನ್ನೂ ಮೊಟ್ಟೆಗಳನ್ನೂ ಬೆಳೆಸಲು [illegible] ಸಂಘದವರಿಗೆ [illegible] ಒಂದು ದರ್ಜೆ ಕೋಳಿ ಮತ್ತು ಒಂದೊಂದು ಹುಂಜಗಳನ್ನು ಕೊಟ್ಟು ಅವುಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹ ಕೊಡುವಂತೆ ಸರ್ಕಾರ [illegible] ಇಲ್ಲದ ಹಂದಿಗಳ ಸಂಖ್ಯೆಯನ್ನು [illegible] ಉತ್ತೇಜನ ಕೊಡಲಾಗುತ್ತಿದೆ.

ಕಸ್ತೂರಿ ಬಾ ನಿಧಿಗೆ ಪೌರಸಭಾ ಸಹಾಯವಿಲ್ಲ

[illegible] ಪೌರಸಭೆಯವರು ಕಸ್ತೂರಿಬಾಯಿ ನಿಧಿಗೆ ಹನ್ನೊಂದು ಸಾವಿರ ರೂ ಸಹಾಯ ಧನವನ್ನು ಮಂಜೂರು ಮಾಡಿದ್ದರು. ಆದರೆ ಹೊರಗಿನ ಧರ್ಮದರ್ಶಿಗಳ ಆಡಳಿತಕ್ಕೆ ಒಳಪಟ್ಟಿರುವ ನಿಧಿಗೆ ಪೌರಸಭೆಯ ಹಣವನ್ನು ಕೊಡಕೂಡದೆಂದು ಅಲ್ಲಿನ ಕಮಿಷನರು ಇದಕ್ಕೆ ತಡೆ ಹಾಕಿರುವರು.

ಬಿಕ್ಕಟ್ಟಿನ ಪರಿಹಾರವಿಲ್ಲವೇ?

ವೈಸರಾಯಿ ಮಂತ್ರಿ ಮಂಡಲದ ಸದಸ್ಯರಾದ ಸರ್ [illegible] ಅವರು ಒಂದು ಭೇಟಿಯಲ್ಲಿ ಗಾಂಧಿ-ವೈಸರಾಯಿ ಭೇಟಿ ಬಗ್ಗೆ ತಮಗೆ ಏನೂ ಗೊತ್ತಿಲ್ಲವೆಂದೂ ಬಿಕ್ಕಟ್ಟು ಬೇಗ ಪರಿಹಾರವಾಗುವುದೇ ಎಂಬುದನ್ನು ಹೇಳಲು ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ.

ಸರ್ಕಾರದ ನೀತಿಯಿಂದ ಕಠಿಣ ಪರಿಸ್ಥಿತಿ

ಬ್ರಿ|| ಸರ್ಕಾರದಲ್ಲಿ ರಾಜನೀತಿ ಚತುರತೆಯು ನಿರ್ನಾಮವಾಗಿಲ್ಲವಾದರೆ ಗಾಂಧೀಜಿಯವರ ಸಲಹೆಗಳನ್ನು ಅವರು ಈ ಕಾಲದಲ್ಲಿ ಅಂಗೀಕರಿಸಲಿ. ಇಲ್ಲದಿದ್ದರೆ ಪರಿಸ್ಥಿತಿ ಇನ್ನೂ ಬಿಕ್ಕಟ್ಟಾಗ ಬಹುದು; ಜನರಿಗೂ ಆಳರಸರಿಗೂ ವೈಮನಸ್ಯ ಹೆಚ್ಚುತ್ತದೆ, ಕಾಂಗ್ರೆಸ್ಸು ಅದನ್ನು ಹತೋಟಿಯಲ್ಲಿಡಲು ಸಾಧ್ಯವಾಗುವುದಿಲ್ಲ, ಎಂದು ಬೊಂಬಾಯಿಯ ಮಾಜಿ ಕಾಂಗ್ರೆಸ್ ಮುಖ್ಯ ಮಂತ್ರಿ ಶ್ರೀ|| ಬಿ. ಜಿ. ಖೇರರು ನುಡಿದಿರುವರು.

ಒಬ್ಬೊಬ್ಬರಿಗೂ ಒಂದೊಂದು ವಿಮಾನ

ಯುದ್ಧಾನಂತರ ೩ ಅಥವಾ ೧೦ ವರ್ಷದಲ್ಲಿ ಇಂಗ್ಲೆಂಡಿನಲ್ಲಿ ಕಡಿಮೆ ಪಕ್ಷ ೩೦೦,೦೦೦ ಖಾಸಗೀ ವಿಮಾನಗಳಿರುವವೆಂದು ಬ್ರಿಟಿಷ್ ಸಿವಿಲ್ ವಿಮಾನ ಸಂಸ್ಥೆಯ ಪ್ರಧಾನ ಪರೀಕ್ಷಕರು ಹೇಳಿದ್ದಾರೆ. ಇವು [illegible] ಕಡಿಮೆ ಬೆಲೆಯವಾಗಿ [illegible] ವಿಮಾನ ಸಂಸ್ಥೆಯ [illegible] ಈಗಿರುವ ವಿಮಾನ ಸಂಚಾರ ಮಾರ್ಗಗಳನ್ನು [illegible] ಸ್ಥಿತಿಯನ್ನು [illegible] ಹೇಳಿದರು.

ಪುನಃ ಭೇಟಿ ನಿರಾಕರಣೆ?

ಗಾಂಧೀಜಿಯವರು ವೈಸರಾಯರೊಡನೆ ಇನ್ನೂ ಪತ್ರವ್ಯವಹಾರ ಬೆಳೆಸುತ್ತಿರುವರೆಂದೂ ವೈಸರಾಯರು ಎರಡನೇ ಸಾರಿ ಗಾಂಧೀಜಿಯವರಿಗೆ ಭೇಟಿಯನ್ನು ನಿರಾಕರಿಸಿರುವುದಾಗಿ ವದಂತಿಯಿದೆ. ಈ ವೈ[illegible] ಲಂಡನ್ ನ್ಯೂಸ್ ಕ್ರಾನಿಕಲ್ ಪತ್ರಿಕಾ [illegible] ಗಾಂಧಿಯವರು ವೈಸರಾಯರಿಗೆ ಭೇಟಿ [illegible] ಪತ್ರ ಬರೆದ ರೀತಿ ಹೇಳಲಾಗಿದೆ.

ಗಾಂಧೀಜಿಯವರೇ ಜವಾಬ್ದಾರರು

ಡಾ|| ಬಿ. ಎಸ್. ಮುಂಜೆಯವರು ಗಾಂಧೀಜಿಯವರಿಗೆ ಒಂದು ಕಾಗದವನ್ನು ಬರೆದು ಆಗಸ್ಟ್ ನಿರ್ಣಯ ಮತ್ತು ಅದರ [illegible] ಬಗ್ಗೆ [illegible] ಗಾಂಧೀಜಿಯವರೇ ಜವಾಬ್ದಾರರೆಂದೂ, ಯುದ್ಧಕಾಲದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪನೆಗೆ ಹಿಂದೂ ಮಹಾಸಭೆಯ ವಿರೋಧವಾಗಿದೆಯೆಂದೂ ತಿಳಿಸಿದ್ದಾರೆ.

ಗಾಂಧೀಜೀ ಪ್ರಯಾಣ

ಆಗಸ್ಟ್ ಎರಡನೇ ವಾರ ಮಹಾತ್ಮರು ಪೂನಾಕ್ಕೆ ಹೋಗುವರು. ಆಗಸ್ಟ್ ೫ ರಿಂದ ೧೦ ರೊಳಗೆ ಸೇವಾ ಗ್ರಾಮಕ್ಕೆ ತಲುಪುವರು. ಪಂಚಗನಿಯಲ್ಲಿ ತಮ್ಮ ಆರೋಗ್ಯವು ಬಹಳ ಉತ್ತಮಗೊಂಡಿರುವುದಾಗಿ ಅವರು ಹೇಳಿದರು.

ಲಾರ್ಡ್ಸ್ ಚರ್ಚೆ?

ಇಂಡಿಯಾ ವಿಷಯವಾಗಿ ಲಾರ್ಡ್ಸ್ ಸಭೆಯಲ್ಲಿ ಚರ್ಚೆಯನ್ನು ಆರಂಭಿಸಿ ಮಿ|| [illegible] ಈಗ ಎಲ್ಲ ಕಡೆ [illegible] ಇವನ್ನು [illegible] ಸ್ಥಿತಿಯನ್ನು [illegible] ಹೇಳಿದರು.

ನಾರ್ಮಂಡಿ ಕದನದ ಬಿರುಸು

ಕೇನಿನ ಪ್ರದೇಶ ಮತ್ತು ಸೇಂಟ್‌ಲೋ [illegible] ಕದನದ ಬಿರುಸು ಬಹಳ [illegible] ಸೇಂಟ್‌ಲೋ [illegible] ೩ ದಿನ [illegible]

ಜರ್ಮನ್ ಪಿತೂರಿಗಾರರು

ಜ|| ಒಲ್‌ಬ್ರಿಕ್ಟ್, ಕ|| ಜ|| [illegible] ಮತ್ತು ಕ|| ಜ|| ಬೆಕ್ [illegible] ಇವರು ಹಿಟ್ಲರ್ ಕೊಲೆ ಪ್ರಯತ್ನದ ಪಿತೂರಿಗಾರರೆಂದು ಜರ್ಮನ್ [illegible] ತ್ತವೆ. ಕ|| ಜ|| ಬೆಕ್ ಆತ್ಮಹತ್ಯೆ ಮಾಡಿಕೊಂಡರು. [illegible] ಒಲ್‌ಬ್ರಿಕ್ಟ್‌ರನ್ನು ಕೋರ್ಟ್ ಮಾರ್ಷಲ್‌ನವರು ಗುಂಡಿನಿಂದ ಕೊಂದರು. [illegible] ತಮ್ಮ ಸ್ಥಾನಗಳನ್ನು ದುರುಪಯೋಗ ಪಡಿಸಿ ಪಿತೂರಿ ನಡೆಸಿದರೆಂದು ಹೇಳಲಾಗಿದೆ.

ಅಮೆರಿಯನ್ನು ಬಹಿಷ್ಕರಿಸಿರಿ

ಲಾರ್ಡ್ಸ್ ಸಭೆಯಲ್ಲಿ [illegible] ಲಂಡನ್ [illegible] ಇಂಡಿಯಾ ವಿಷಯದಲ್ಲಿ ಕೊಟ್ಟಿರುವ ಹೇಳಿಕೆಯನ್ನು ನೋಡಿ, [illegible] ಸಭೆಯಲ್ಲಿ ಇಂಡಿಯಾ ಸೆಕ್ರೆಟರಿ ಮಿ|| ಅಮೆರಿಯವರು ಅವಕ್ಕಿಂತಲೂ ಉತ್ತಮವಾದ ಹೇಳಿಕೆಯನ್ನು ಕೊಡುವ ಸಂಭವವಿಲ್ಲವಾದುದರಿಂದ ಭಾರತೀಯ ಪತ್ರಿಕೆಗಳೆಲ್ಲವೂ ಅವರ ಭಾಷಣವನ್ನು ಬಹಿಷ್ಕರಿಸಬೇಕೆಂದು ಲಂಡನ್ ಸ್ವರಾಜ್ಯ ಭವನದ ಮಿ|| [illegible] ಕರೆ ಕೊಟ್ಟಿದ್ದಾರೆ.

ನಾರ್ಮಾರ್ಫ ರಸ್ತೆಯ ವಶ

[illegible] ನಾಜಿಗಳ ಪ್ರಧಾನ [illegible] ರಸ್ತೆಯನ್ನು [illegible] ೩೦ [illegible] ನಗರ [illegible] ಇದು [illegible] ೬೦ ಮೈಲಿ ದೂರದಲ್ಲಿದೆ [illegible] ಮತ್ತು [illegible] ಘೋರ ಕದನವಾಗುತ್ತಿದೆ.

೫ ಲಕ್ಷ ರೂ. ದಾನ

ಶ್ರೀ|| ಅಳಗಪ್ಪ ಚೆಟ್ಟಿಯಾರ್ ಎಂಬುವರು ಮದರಾಸ್ ವಿಶ್ವವಿದ್ಯಾಲಯದ [illegible] ಒಂದು ಲಕ್ಷ ರೂ. [illegible] ಮದರಾಸ್ ವಿಶ್ವವಿದ್ಯಾಲಯದಲ್ಲಿ [illegible] ಕಾಲೇಜನ್ನು ತೆರೆಯಲು ಒಟ್ಟು ಐದು ಲಕ್ಷ ರೂ. ದಾನ ಮಾಡಿರುವರು. ಇವರಿಗೆ ಮದರಾಸ್ ವಿಶ್ವವಿದ್ಯಾಲಯದವರು ಗೌರವ 'ಡಾಕ್ಟರ್ ಆಫ್ ಲಾಸ್' ಪ್ರಶಸ್ತಿಯನ್ನು ಕೊಟ್ಟರು.

ಅಕೌಂಟು ಪುಸ್ತಕಗಳಿಗೆ ರಿಯಾಯಿತಿ

ಇಂಡಿಯಾ ಸರ್ಕಾರದವರು ಕಾಗದ ಕಂಟ್ರೋಲ್ ಆಜ್ಞೆಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಅಕೌಂಟು ಪುಸ್ತಕಗಳನ್ನು ತಯಾರು ಮಾಡುವವರು ಕಳೆದ ವರ್ಷ [illegible] ಉಪಯೋಗಿಸಿದುದಕ್ಕಿಂತ ಶೇ|| [illegible] ರಷ್ಟು ಹೆಚ್ಚು ಕಾಗದವನ್ನು ಉಪಯೋಗಿಸಬಹುದೆಂದು ತಿಳಿಸಿರುವರು.

ಗಂಡನ ಅನುಮತಿ ಇಲ್ಲದೆ ದತ್ತು

[illegible] ಎಂಬುವರಿಗೆ [illegible] ದತ್ತು ಸ್ವೀಕಾರದ [illegible] ಗಂಡನ [illegible] ದತ್ತು ತೆಗೆದುಕೊಳ್ಳಲು [illegible] ತೀರ್ಪಿತ್ತಿರುವರು.

ಘಟಿಕೋತ್ಸವ

ಮೈಸೂರು ೨೦

ಸೆಪ್ಟೆಂಬರ್ ೨೦ ನೇ ತಾ॥ ಬೆಳಗ್ಗೆ ೧೧ ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವವು ಜಗನ್ಮೋಹನ ಬಂಗಲೆಯಲ್ಲಿ ನಡೆಯುವುದು. ನಿವೃತ್ತ ಪ್ರಧಾನ ನ್ಯಾಯಾಧೀಶರಾದ ಶ್ರೀ ಕೆ. ಎಸ್. ಚಂದ್ರಶೇಖರಯ್ಯರವರು ಉಪದೇಶ ಭಾಷಣ ಮಾಡುವರು.

ಸ್ವಸ್ತಿಕ ಸಾಹಿತ್ಯ ಸಂಘ

ಈ ಸಂಘದ ಬೆಂಗಳೂರು ಶಾಖೆಯ ಪ್ರಾರಂಭೋತ್ಸವವು ರಾಜಸೇವಾ ಪ್ರಸಕ್ತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಮಾನ್ಯ ಅಧ್ಯಕ್ಷತೆಯಲ್ಲಿ ಈ ದಿನ ಸಂಜೆ ೭ ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನೆರವೇರುತ್ತದೆ.

ನಿರ್ಬಂಧ ವಜಾ

ಮೈಸೂರು ಬ್ಲೂಸ್ ಟೀಮಿನ ಮೇಲೂ ಆಟಗಾರರ ಮೇಲೂ ಹಾಕಿದ್ದ ನಿರ್ಬಂಧವನ್ನು ಮೈಸೂರು ಫುಟ್‌ಬಾಲ್ ಅಸೋಸಿಯೇಷನ್‌ನವರು ನಿನ್ನೆ ದಿನ ತೆಗೆದುಹಾಕಿದರೆಂದು ತಿಳಿದುಬಂದಿದೆ.

ಪಾಟ್ನಾದಲ್ಲಿ ಸ್ವರಾಜ್ಯ ಸರ್ಕಾರ

ಕಳೆದ ಆಗಸ್ಟ್ ಗಲಭೆಗಳ ಸಂದರ್ಭದಲ್ಲಿ ಚೋಂಬೆಯನ ಸಮಾರಂಭವು ನಡೆದ ಕಾಲದಲ್ಲಿಯೇ ಪಾಟ್ನಾ ಜಿಲ್ಲೆಯ ಮಾಯಾಪುರವೆಂಬ ಒಂದು ಹಳ್ಳಿಯಲ್ಲಿ ಐವತ್ತು ಜನರ ಒಂದು ಗುಂಪು ಸೇರಿ ಈಗಿನ ಸರ್ಕಾರಕ್ಕೆ ವಿರುದ್ಧವಾಗಿ ಒಂದು ಸ್ವರಾಜ್ಯ ಸರ್ಕಾರವನ್ನು ಸ್ಥಾಪಿಸಿ ಜನರ ಮೇಲೆ ತೆರಿಗೆಗಳನ್ನು ಹೇರಿಸಿ, ಈಗಿನ ಸರ್ಕಾರವನ್ನು ಯಾರೂ ಲಕ್ಷಿಸಕೂಡದೆಂದೂ ತಮಗೇ ಕಂದಾಯ ತೆರಿಗೆಗಳನ್ನು ಕೊಡಬೇಕೆಂದೂ ಮುಂತಾಗಿ ಆಜ್ಞೆ ಮಾಡಿದ್ದರೆಂದೂ ವರದಿಯಾಗಿದೆ. ಈ ಸರ್ಕಾರಕ್ಕೆ ಒಬ್ಬ ದೊರೆ, ಒಬ್ಬ ಪ್ರಧಾನಮಂತ್ರಿ, ಮೂವರು ಮಂತ್ರಿಗಳು ಒಬ್ಬ ಸೇನಾಪತಿ, ಒಬ್ಬ ಉಪಸೇನಾಪತಿ ಮತ್ತು ಉಳಿದ ೪೫ ಜನ ಸೈನಿಕರೂ ಇದ್ದರು. ಈ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ಮರಣ ದಂಡನೆಯೆಂದು ಟಾಂ ಟಾಂ ಮಾಡಲಾಯಿತು. ನೂರು ಜನ ಗ್ರಾಮಸ್ಥರು ಈ ಸರ್ಕಾರವನ್ನು ಲಕ್ಷಿಸದೆ ಕಂದಾಯವನ್ನೂ ಕೊಡಲಿಲ್ಲ. ಅವರ ಮನೆಗಳು ಲೂಟಿ ಮಾಡಲ್ಪಟ್ಟು ಮನೆಯಲ್ಲಿದ್ದವರಿಗೆ ಏಟುಗಳೂ ಬಿದ್ದವು. ಈ ಮೂವರೂ ಡೇಗೋ ಕಸ್ಟಡಿಯಲ್ಲಿ ... ಹೊಕ್ಕಿರು. ಅವರ ಮೇಲೆ ... ಜನರನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಆದರೆ ಈ ಕಥೆಯು ಬಹಳ ನಂಬಲರ್ಹವಲ್ಲವೆಂದು ಹೇಳಿ ನ್ಯಾಯಾಧೀಶರು ಈಗ ಎಲ್ಲರನ್ನೂ ಖುಲಾಸೆ ಮಾಡಿರುವರು.

ಫ್ಲಾರೆನ್ಸ್ ಕದನಾರಂಭ

ಫ್ಲಾರೆನ್ಸ್ ನಗರವನ್ನು ಮಿತ್ರ ಸೈನ್ಯಗಳು ಸಮೀಪಿಸುತ್ತಿವೆ. ನ್ಯೂಜಿಲೆಂಡ್ ಸೈನಿಕರು ನಗರಕ್ಕೆ ಕೇವಲ ಆರು ಮೈಲಿಯಲ್ಲಿದ್ದಾರೆ. ಪಶ್ಚಿಮ ಭಾಗದಲ್ಲಿ ೮ ನೇ ಸೈನ್ಯದವರು ಆರ್ನೋ ಕಡೆಗೆ ನುಗ್ಗುತ್ತಿದ್ದಾರೆ. ಪೂರ್ವದಲ್ಲಿ ಪೋಲೆಂಡ್ ಸೈನ್ಯಗಳು ನದಿಯ ದಕ್ಷಿಣದಲ್ಲಿ ಬೀಡು ಬಿಟ್ಟಿದ್ದಾರೆ.

ಸಂಪುಟ ೩] ಭಾನುವಾರ ೩೦-೭-೪೪ [ಸಂಚಿಕೆ ೮

ಪಾರ್ಲಿಮೆಂಟಿನಲ್ಲಿ ಇಂಡಿಯಾ ಚರ್ಚೆ

ಗಾಂಧೀಜಿಯವರ ಸಲಹೆಗಳಿಗೆ ತಿರಸ್ಕಾರ

ಬೊಂಬಾಯಿನಲ್ಲಿ ಗಾಂಧಿ-ಜಿನ್ನಾ ಭೇಟಿ

ಗಾಂಧಿ-ಜಿನ್ನಾ ಭೇಟಿ

ಆಗಸ್ಟ್ ಎರಡನೇ ವಾರದಲ್ಲಿ ಬೊಂಬಾಯಿನಲ್ಲಿ ಮಹಾತ್ಮ ಗಾಂಧಿಯವರಿಗೂ ಜಿನ್ನಾರವರಿಗೂ ಭೇಟಿಯಾಗುವುದೆಂದು ಗೊತ್ತಾಗಿದೆ. ಲೀಗಿಗೂ ಕಾಂಗ್ರೆಸ್ಸಿಗೂ ಒಪ್ಪಂದ ಮಾಡಲು ಇಬ್ಬರೂ ಭೇಟಿಮಾಡುವುದು ಅವಶ್ಯಕವೆಂದು ಮಿ॥ ಜಿನ್ನಾರವರಿಗೆ ಅವರು ಶ್ರೀನಗರದಲ್ಲಿದ್ದಾಗ ಬರೆದಿದ್ದರು. ಬೊಂಬಾಯಿಯಲ್ಲಿ ಗಾಂಧೀಜಿಯನ್ನು ಸ್ವಾಗತಿಸುವುದಾಗಿ ಜಿನ್ನಾ ಬರೆದಿರುವರೆಂದು ಗೊತ್ತಾಗಿದೆ.

ಲೀಗಿನಲ್ಲಿ ಚರ್ಚೆ

ಶ್ರೀ ರಾಜಗೋಪಾಲಾಚಾರಿಯವರ ಸಲಹೆಗಳನ್ನು ಮುಸ್ಲಿಂಲೀಗ್ ಕಾರ್ಯಕಾರಿ ಮಂಡಲಿಯು ಎರಡುವರೆ ಗಂಟೆಗಳ ಕಾಲ ಪರಿಶೀಲಿಸಿತು. ಈ ಬಗ್ಗೆ ಜಿನ್ನಾರವರು ಲೀಗಿನ ನೀತಿಯನ್ನು ಕುರಿತು ಒಂದು ಹೇಳಿಕೆ ಕೊಡಲಿರುವರು.

ಸಪ್ರೂ-ಗಾಂಧಿ ಭೇಟಿ

ಗಾಂಧೀಜಿಯವರು ಆಗಸ್ಟ್ ೩ ನೇ ತಾ॥ ಪಂಚಗಣಿಗೆ ಬರುವಾಗ ಸರ್ ತೇಜ್ ಬಹದ್ದೂರ್ ಸಪ್ರೂರವರು ಅವರನ್ನು ಅಲ್ಲಿ ಭೇಟಿಮಾಡಲು ೫ ನೇ ತಾ॥ ಬರುವರು.

ಲೋಕಮಾನ್ಯ ತಿಲಕರ ದಿನಾಚರಣೆ

ಮೈಸೂರು ೨೦

ಪೋಂಟಿಕೊಪ್ಪಲಿನಲ್ಲಿರುವ ತಿಲಕ್ ಸಂಘದಲ್ಲಿ ೧-೮-೧೯೪೪ ನೇ ಮಂಗಳವಾರ ಸಾಯಂಕಾಲ ಲೋಕಮಾನ್ಯ ಬಾಲಗಂಗಾಧರ ತಿಲಕರ ದಿನಾಚರಣೆಯು ಶ್ರೀಮಾನ್ ಸಿದ್ಧವ್ವನಹಳ್ಳಿ ಕೃಷ್ಣಶರ್ಮರವರ ಅಧ್ಯಕ್ಷತೆಯಲ್ಲಿ ಜರುಗುತ್ತದೆ. ಪ್ರಾತಃಕಾಲ ೩ ಗಂಟೆಗೆ ಪ್ರಭಾತ ಫೇರಿಯೂ ೮ ಗಂಟೆಗೆ ಮೈಸೂರು ಪೌರಸಭಾ ಉಪಾಧ್ಯಕ್ಷರಾದ ಶ್ರೀಮಾನ್ ಬಿ. ನಾರಾಯಣಸ್ವಾಮಿಯವರಿಂದ ಧ್ವಜಾರೋಹಣವೂ ನಡೆಯುತ್ತದೆ. ಸಾಯಂಕಾಲ ೬-೩೦ ರಿಂದ ಪ್ರಾರ್ಥನೆ, ಲೆಜಿಮ್ ಡ್ರಿಲ್ (ನೆಹರು ಸಂಘದವರಿಂದ), ಭಜನೆ (ವಾಣೀವಿಲಾಸ ತೊಟ್ಟಿಲು ಮಾತೃಮಂಡಲಿಯವರಿಂದ), ಕೋಲಾಟ (ಕಾಲೇಜು ವಿದ್ಯಾರ್ಥಿಗಳಿಂದ), ಕವನವಾಚನ (ಕವಿ ಅನಂತ ರವರಿಂದ), ಸಂಕೀರ್ತನ ವಿನಿಯೋಗ ಇವು ನಡೆಯುತ್ತವೆ.

ಗಾಂಧೀಜಿ ಸಲಹೆಗೆ ಅಮೇರಿ ತಿರಸ್ಕಾರ

ಭಾರತದ ಬಿಕ್ಕಟ್ಟನ್ನು ಪರಿಹರಿಸಲು ಗಾಂಧೀಜಿಯವರು ಕೊಟ್ಟಿದ್ದ ಸಲಹೆಗಳನ್ನು ಇಂಡಿಯಾ ಸೆಕ್ರೆಟರಿ ಮಿ॥ ಅಮೇರಿಯವರು ತಿರಸ್ಕರಿಸಿ ಪಾರ್ಲಿಮೆಂಟ್ ಸಭೆಯಲ್ಲಿ ಭಾಷಣಮಾಡಿರುವರು. ಅವರು ಹೇಳುತ್ತಿರುವುದೇನೆಂದರೆ:—

ಕ್ರಿಪ್ಸ್ ಸೂಚನೆಗಳು ಇನ್ನೂ ಇದ್ದೇ ಇವೆ; ವಿಜಯದ ಕಾಲದಲ್ಲೂ ಶಾಂತಿಕಾಲದಲ್ಲೂ ಸಹಾಯಕಾರಿಯಾಗಿ ನಾವು ಈ ಸಲಹೆಗಳನ್ನು ಎತ್ತಿಹಿಡಿಯುತ್ತೇವೆ. ಗಾಂಧಿಯವರ ಸಲಹೆಗಳು ಸ್ಪಷ್ಟವಾಗಿಲ್ಲ. ಒಂದು ಹಂಗಾಮಿ ಸರ್ಕಾರದಲ್ಲಿ ಹಿಂದೂಸ್ಥಾನದ ಸ್ವಾತಂತ್ರ್ಯ ಸ್ಥಾನವನ್ನು ಕೂಡಲೇ ಅಂಗೀಕರಿಸಬೇಕೆಂದು ಗಾಂಧಿಯವರು ಕೇಳುತ್ತಾರೆ. ಅದರ ಅರ್ಥ ಕಾಂಗ್ರೆಸ್ಸಿನ ... ಎಂದು ... ಕಾಂಗ್ರೆಸ್ಸಿನೊಡನೆ ಸಂಧಾನವು ಮುರಿದುಬಿತ್ತು. ಈ ವಿಷಯದಲ್ಲಿ ಗಾಂಧಿಯವರು ತಮ್ಮ ಅಭಿಪ್ರಾಯವನ್ನು ಸ್ವಲ್ಪವೂ ಬದಲಾಯಿಸಿಲ್ಲ. ಅವರ ಸಲಹೆಗಳಿಗೆ ಇದೇ ಆಧಾರಗಳೇ. ಇಂಥವರೆಗೆ, ಹೈಕಮಾಂಡಿನೊಡನಾಗಲಿ, ಬಂಧನದಲ್ಲಿರುವ ಮುಖಂಡರೊಡನಾಗಲಿ ಚರ್ಚಿಸ ಬಿಡುವುದರಿಂದ ಯಾವ ಪ್ರಯೋಜನವೂ ಇಲ್ಲ. ರಚನಾತ್ಮಕ ಸಲಹೆಗಳನ್ನು ಕೊಡುವಂತೆ ಸೈನ್ಯ... ... ಅನುಗುಣವಾಗಿಲ್ಲ.

ಕರಾಚಿಯಲ್ಲಿ ಮಳೆ

ಜಲಪ್ರಳಯ

ಈ ವರ್ಷ ಕರಾಚಿಯಲ್ಲಿ ಪ್ರಚಂಡವಾದ ಮಳೆಯಾಗುತ್ತಿದೆ. ಹದಿನೈದು ದಿನಗಳ ಹಿಂದೆ ಮಳೆ ಪ್ರವಾಹದಲ್ಲಿ ನಾಲ್ಕು ಮಕ್ಕಳು ಬಿದ್ದು ಕೊಚ್ಚಿಹೋದರು. ಈಚೆಗೆ ಮಳೆ ಅನಾಹುತದಿಂದ ಐದು ಜನರು ಸತ್ತಿರುವರು. ೫೦೦೦ ಜನರಿಗೆ ಮನೆಯಿಲ್ಲದಂತಾಗಿದೆ. ಅಪಾರ ಆಸ್ತಿಪಾಸ್ತಿಗಳಿಗೆ ನಷ್ಟವಾಗಿದೆ. ಬೆಸ್ತರು ನದೀ ತೀರದಲ್ಲಿಟ್ಟಿದ್ದ ೬೦,೦೦೦ ರೂ ನ ಒಣಗಿದ ಮೀನುಗಳೂ ಹೋಗಿವೆ.

ಇಟಲಿಯಲ್ಲಿ ಮಿತ್ರ ಮುನ್ನೋಟ

ಮಿತ್ರ ಸೈನ್ಯಗಳು ಇಟಲಿಯಲ್ಲಿ ಮುಂದೆ ನುಗ್ಗುತ್ತಿವೆ. ಸ್ಕಾಗಿಲಿಯೋನಿ ಪಟ್ಟಣವು ಸನ್ನಿಹಿತವಾಗಿದೆ.

ಪಾರ್ಲಿಮೆಂಟ್ ಚರ್ಚೆ

ಇಂಡಿಯಾ ಬಗ್ಗೆ ಕಾಮನ್ಸ್ ಸಭೆಯಲ್ಲಿ ಚರ್ಚೆ ನಡೆದಾಗ ಮಿ॥ ಪೆತಿಕ್ ಲಾರೆನ್ಸ್‌ರು ಸರ್ಕಾರದವರು ಹೊಸ ಹೆಜ್ಜೆಯಿಡಬೇಕೆಂದು ಹೇಳಿದರು. ಒಂದು ದುಂಡು ಮೇಜಿನ ಪರಿಷತ್ತನ್ನು ನಡೆಸುವಂತೆ ಸರ್ ಜಾರ್ಜ್ ಶೂಸ್ಟರ್‌ರವರು ಅಭಿಪ್ರಾಯಪಟ್ಟರು. ಇಂಡಿಯಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕೆಂದು ಪ್ರೊ॥ ಹಿಲ್‌ರವರು ತಿಳಿಸಿದರು. ಅಷ್ಟರ ಮೇಲೆಯೇ ಕುಳಿತಿರಬಾರದೆಂದು ಮಿ॥ ಸೊರೆನ್ಸನ್ನರು ಹೇಳಿದರು. ಆದರೆ ಇವ್ಯಾವುದೂ ಯಾವ ಪರಿಣಾಮವನ್ನುಂಟುಮಾಡಲಿಲ್ಲ.

ಚಿತ್ರದುರ್ಗದಲ್ಲಿ ದರೋಡೆ

ಕಳೆದ ೧೯ ನೇ ತಾ॥ ರಾತ್ರಿ ೨೦-೨೦ ಮಂದಿ ದರೋಡೆಕೋರರು ಆಯುಧಪಾಣಿಗಳಾಗಿ ಶಸ್ತ್ರಸಜ್ಜಿತರಾಗಿ ಚಿತ್ರದುರ್ಗದ ತಾ॥ ಚಿಕ್ಕಪ್ಪನಹಳ್ಳಿ ಸಾಹುಕಾರರಾದ ಗುರುಸಿದ್ದಪ್ಪನವರ ಮನೆಗೆ ನುಗ್ಗಿ ... ಅವರ ಕೊಡಗೆ ಹೊಡೆದು ಕೆಲವು ಪೆಟ್ಟಿಗೆ ಒಡೆದು ಸುಮಾರು ರೂ ನಗದು ೫೦೦೦ ರೂ ಒಡವೆ, ೩,೦೦೦೦ ರೂ ನ ಕಾಗದಪತ್ರಗಳನ್ನು ತೆಗೆದುಕೊಂಡು ಹೋದರೆಂದೂ, ಒಬ್ಬಾತನನ್ನು ದಸ್ತಗಿರಿ ಮಾಡಿರುವರೆಂದೂ ವರದಿಯಾಗಿದೆ.

'ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್'

ಸ್ವಂ.ಸು.] ಬೆಂಗಳೂರು ೨೯

ಮಿ॥ ಫೋರ್ಬ್ಸ್‌ರವರು ನಿವೃತ್ತರಾದ ಮೇಲೆ ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಎಂಬ ಹುದ್ದೆಯ ಹೆಸರು ಹೋಗಿ, ಅವರ ಸ್ಥಾನಕ್ಕೆ ಬಂದ ಮಿ॥ ನಯನಾರ್‌ರವರನ್ನು ಡೈರೆಕ್ಟರ್ ಪವರ್ ಯೋಜನೆಯ ಸೂಪರಿಂಟೆಂಡೆಂಟಾಗಿ ನೇಮಕ ಮಾಡಲಾಯಿತು. ಆದರೆ ಈಗ ಅವರನ್ನು ಇನ್ನು ಮುಂದೆ ಚೀಫ್ ಎಲೆಕ್ಟ್ರಿಕಲ್ ಇಂಜನಿಯರನ್ನಾಗಿಯೇ ಕರೆಯಬೇಕೆಂದು ಸರ್ಕಾರದ ತೀರ್ಮಾನವಾಗಿದೆ.

ಮಂಡ್ಯದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್

ಮಂಡ್ಯ ಅಡ್ವೊಕೇಟರಾದ ಶ್ರೀ ಜಿ. ಕೋದಂಡರಾಮ ಎಂಬುವವರನ್ನು ಟೆಂಪರರಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಕ ಮಾಡಿದ್ದಾರೆ.

ಪ್ರಾ॥ ಪ್ರಾ॥ ಸಭೆಯ ಕಾಂ॥ ಪಕ್ಷದ ಸಭೆ

ಈ ಸಂಜೆ ಕಾಂಗ್ರೆಸ್ ... ಪ್ರಾ. ಪ್ರಾ. ಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಡೆದು, ಪ್ರಾ. ಪ್ರಾ. ಸಭೆಯ ದಸರಾ ಅಧಿವೇಶನಕ್ಕೆ ಪಕ್ಷದ ... ಪ್ರಶ್ನೆಗಳು, ನಿರ್ಣಯಗಳು, ತಿದ್ದುಪಡಿಗಳು, ಯಾವುವೆಂಬುದನ್ನು ಗೊತ್ತುಮಾಡಲಾಯಿತು.

ಕಟ್ಟ ಕಡೇ ಸುದ್ದಿ

ವಿಶ್ವವಿದ್ಯಾನಿಲಯ ಸಂಘದ ಚುನಾವಣೆ

ಮೈಸೂರು ೨೦

ಮೈಸೂರು ವಿಶ್ವವಿದ್ಯಾನಿಲಯ ಸಂಘದ ಚುನಾವಣೆಗಳ ಎಣಿಕೆಯು ಈ ಸಾಯಂಕಾಲ ಮುಗಿದ. ಶ್ರೀ ಸಿ. ಬಿ. ... ಅವರು ಉಪಾಧ್ಯಕ್ಷರಾಗಿಯೂ (೫೩೭) ಶ್ರೀ ಪೀಟರ್ ... ಕಾರ್ಯದರ್ಶಿಯಾಗಿಯೂ (೫೨೭) ... ಆಗಿ ಚುನಾಯಿತರಾಗಿದ್ದಾರೆ.

ಮಾರ್ಕೆಟ್ ಮಳಿಗೆಗಳ ಬಾಡಿಗೆ ಹೆಚ್ಚುವುದು

ಮೈಸೂರು ಪೌರಸಭೆಯ ಮೀಟಿಂಗಿನ ಕಾರ್ಯಕಲಾಪಗಳು

ಮೈಸೂರು, [illegible]

[illegible] ಪೌರಸಭೆಯ [illegible] ಮೀಟಿಂಗು ನಡೆಯಿತು. [illegible]

ವಂದೇಮಾತರಂ ಪ್ರಕರಣ

[illegible]

ಮಾರ್ಕೆಟ್ ಅಂಗಡಿಗಳ ಬಾಡಿಗೆ

ಮಾರ್ಕೆಟ್ ಅಂಗಡಿಗಳ ಬಾಡಿಗೆ ಹೆಚ್ಚಿಸುವ ವಿಚಾರ ಚರ್ಚೆಗೆ ಬಂತು. [illegible] ರೂ. ಬಾಡಿಗೆ ಅಂಗಡಿ, [illegible] ರೂ. ಗೆ [illegible] ರೂ. ಅಂಗಡಿಗೆ [illegible] ರೂ. [illegible] ಎಷ್ಟು ಹೆಚ್ಚು ಲಾಭ ಪಡೆ[illegible]; [illegible] ಹೆಚ್ಚು ಬಾಡಿಗೆ ಕೊಡಲು [illegible]. [illegible] ಬಾಡಿಗೆ [illegible] ಅಂಗಡಿ ಬಾಡಿಗೆ [illegible], ಎಂದು [illegible] ಹೇಳಿದರು.

[illegible]

ಗರ್ಭಿಣಿ ಶಿಶು ಸಂರಕ್ಷಣೆ

[illegible]

ನಿರ್ಣಯಗಳು

ಮೈಸೂರು ಪೌರಸಭೆಯು ಒಂದು [illegible] ಕಾರ್ಪೊರೇಷನನ್ನು ಸ್ಥಾಪಿಸಬೇಕೆಂದು, ಶ್ರೀ ಟಿ. ವೆಂಕಟರಮಣಯ್ಯನವರು ತಂದ ನಿರ್ಣಯವೂ, ಎಷ್ಟು [illegible] ಸಿಂಕಿಂಗ್ ಫಂಡ್ ಬಳ [illegible] ಗಳನ್ನು ಕೊಡಬೇಕೆಂದು ಟ್ರಸ್ಟ್ ಬೋರ್ಡನ್ನು ಕೇಳಿಕೊಳ್ಳಬೇಕೆಂದು ಶ್ರೀ [illegible] ತಂದ ನಿರ್ಣಯವೂ, ಆದಿಕರ್ನಾಟಕರಿಗಾಗಿ [illegible] ಮನೆ, ಮತ್ತು [illegible] ಮನೆಗಳನ್ನು ಕಟ್ಟಿಸಬೇಕು; ಎಂದು ಶ್ರೀ ಕೆ. ಸಿದ್ದಯ್ಯನವರು ತಂದ ನಿರ್ಣಯಗಳೂ ಅಂಗೀಕಾರವಾದುವು.

ನಾಯಿಗಳ ನಾಶದ ಬಗ್ಗೆ [illegible] ರೂ. ಮಂಜೂರಾಯಿತು.

ರೆವಿನ್ಯೂ ಆಫೀಸರ್ ಶ್ರೀ [illegible] ರವರು [illegible] ವಿಚಾರದಲ್ಲಿ ಬಹು [illegible] ರೂ. ಬಾಕಿ [illegible] ಅವರಿಗೆ [illegible] ವಿಶೇಷ ಭತ್ಯ ಕೊಡಲು ತೀರ್ಮಾನವಾಯಿತು.

ರಾಜೀನಾಮೆ ಪ್ರಸಂಗ

ಶ್ರೀಮಾನ್ ಜಿ. [illegible] ರವರು ಮ್ಯಾನೇಜಿಂಗ್ ಕಮಿಟಿಗೂ, ವೇಸ್ ಅಂಡ್ ಮೀನ್ಸ್ ಕಮಿಟಿಗೂ ರಾಜೀನಾಮೆ ಕೊಟ್ಟಿರುವುದನ್ನು ಸಭೆಯು ಅಂಗೀಕರಿಸಿತು. ಈ ರಾಜೀನಾಮೆ [illegible] ಕೊಟ್ಟಿರುವ ಕಾರಣ [illegible] ಮಾಡುವ [illegible] ಕೆಲಸ [illegible], [illegible] ಇಷ್ಟವಿಲ್ಲ, ಸಾಧ್ಯವಿಲ್ಲ ಎಂಬುವನ್ನು ಬಿಟ್ಟು, ಇತರರನ್ನು ಸಮಿತಿಗಳಿಗೆ ತೆಗೆದುಕೊಂಡಿದೆ. ಇದರಲ್ಲಿ ಕಾಂಗ್ರೆಸ್ ಪಕ್ಷದವರ ಯಾವ [illegible] ಅಥವಾ [illegible] ನಾಮಕರಣ ಸದಸ್ಯರನ್ನು [illegible] ಅಭಿಪ್ರಾಯ ಲೇಶವೂ ಇಲ್ಲ-ಎಂದು ಶ್ರೀ ಟಿ. ಸೀತಾರಾಮಯ್ಯನವರು ಒಂದು ವಿವರ [illegible] ಕೊಟ್ಟರು. [illegible] ಸ್ಥಾನಕ್ಕೆ ಶ್ರೀ ಕೆ. ಸಿದ್ದಯ್ಯನವರನ್ನು ಮ್ಯಾನೇಜಿಂಗ್ ಕಮಿಟಿಗೂ, ಶ್ರೀ ಟಿ. [illegible] ರನ್ನು ವೇಸ್ ಎಂಡ್ ಮೀನ್ಸ್ ಕಮಿಟಿಗೂ [illegible].

ಪ್ರಶ್ನೋತ್ತರಗಳು

[illegible] ಪೌರಸಭೆಯು [illegible] ಯಾರಿಗೆ [illegible] ಶ್ರೀ ವೆಂಕಟರ[illegible] ಪ್ರಶ್ನೆಗೆ [illegible] ಕೊಡಲಾಗಿದೆ.

ದುಕಲು ನೋಡಬೇಕು; ಸ[illegible] ವ್ಯವಸ್ಥೆ ಮಾಡಬೇಕೆಂದು ಪೌರಸಭೆಯು ಮಾಡಿದ [illegible] ಬಗ್ಗೆ ಪ್ರೆಸಿಡೆಂಟರು ಏನು ಕಾರ್ಯ ಕೈಗೊಂಡಿದ್ದಾರೆ-ಎಂದು ಶ್ರೀ ಟಿ. [illegible] ಕೇಳಿದರು. ವಿವರ [illegible]. ಕಾರ್ಯಕರ್ತರ [illegible] ಆದರೂ ಮುಂದಿನ ಮೀಟಿಂಗಿಗೆ ಒಂದು ವಿವರಣೆಯಾಗಲಾಗುತ್ತದೆ ಎಂದು ಅಧ್ಯಕ್ಷರು ಹೇಳಿದರು.

[illegible] ಗಳಿಗೆ [illegible] ಗಳನ್ನು [illegible] ಎಲ್ಲಾ ಸರಿಯಾಗಿ ಉಪಯೋಗವಾಗಿದೆಯೇ ಎಂಬ ವಿಚಾರದಲ್ಲಿ ಶ್ರೀ ಟಿ. [illegible] ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ—[illegible] ರೂ. ಗೆ ಕೊಳ್ಳಲಾಯಿತು. [illegible] ರೂ. ಕೊಟ್ಟಿದೆ. [illegible] ಎಲ್ಲಾ ಸರಿಯಾಗಿ ಉಪಯೋಗಿಸಲ್ಪಡುತ್ತಿದೆ [illegible] ಮಾಡುತ್ತಿದೆ. [illegible] ವರ್ಷದ [illegible] ಹಚ್ಚಿನ [illegible] ನಡೆಯುತ್ತಿದೆ ಎಂದು ಉತ್ತರ ಬಂತು.

ಈ ದಿನದ ಪೌರಸಭೆಯಲ್ಲಿ [illegible] ಜನ ಕಾಂಗ್ರೆಸ್ ಸದಸ್ಯರೂ ಸಭೆಗೆ ಹಾಜರಿದ್ದರು. ಒಂದು ವಿಶೇಷ ಸಂಗತಿ [illegible] ಜನ ನಾಮಕರಣ ಸದಸ್ಯರು ಮಾತ್ರ ಬಂದಿದ್ದರು.

ವಿದ್ಯುಚ್ಛಕ್ತಿಯಿಂದ ವೈದಿಯ ಮರಣ

[illegible] ಲ್ಲಿ [illegible] ವೈದಿಯು ಸ್ನಾನ ಮಾಡುತ್ತಿದ್ದನು. ವಿದ್ಯುಚ್ಛಕ್ತಿಯ [illegible] ತಂತಿ [illegible] ಮೇಲೆ [illegible] ಟವಲನ್ನು ತೆಗೆದುಕೊಳ್ಳುವಾಗ ಮಳೆ ಬಿದ್ದು ನೆಲವು [illegible] ಆಗಿದ್ದುದರಿಂದ ಅವನಿಗೆ ಷಾಕ್ ತಗಲಿ ಮೃತನಾದನೆಂದೂ ತಿಳಿದು ಬಂದಿದೆ.

Edited, printed and published by A. R. Nagarajan, at the Sadhvi Press, D. Subbiah Road, Mysore

ಅಪೇರಾ ಟಾಕೀಸ್
ಪ್ರತಿ ದಿನ ೩ ಆಟಗಳು
29-7-44 ರಿಂದ
ಟೈರ್ನ್ ಪವರ್ ಮತ್ತು
ಜೋನ್ ಫಂಟೇನ್ ನಟಿಸಿರುವ
ದಿಸ್ ಅಬೌ ಆಲ್
ತಾ. 3-8-44 ರಿಂದ
[illegible]
ಹಿಂದಿ ಚಿತ್ರ ಲ ಪಾತ್ರ ವಹಿಸಿರುವವರು:
ಸರದಾರ್ ಅಖ್ತರ್-ಚಂದ್ರ ಮೋಹನ್
ಸವಿತಾದೇವಿ-ಬಾಬು-ಅಡ್ವಾನಿ
[illegible] ಪ್ರಸಾದ್

[illegible] ಕಣ್ಣುಗಳಿಗೆ [illegible] ಸಹಾಯಕಾರಿಯಾದ ನವನವೀನ ಬಳೆಗಳಿಗೆ
[illegible] ಪಾತ್ರವಾದ
[illegible] ಕೆಮಿಕಲ್ ದಂತದ ಬಳೆಗಳು
[illegible] ಗೆ ಬನ್ನಿರಿ ಮೈಸೂರು.

WEEKLY EDITION

ಸಂಪುಟ ೯] ಸೋಮವಾರ ೩೧--೭—೪೪ [ಸಂಚಿಕೆ ೨

ರೊಮೆಲ್ ಮಡಿದರೇ?

ತುರ್ಕಿಯು ಬೇಗನೆ ಮಿತ್ರ ರಾಷ್ಟ್ರಗಳೊಡನೆ ಸೇರುವುದು

ಮಹಾತ್ಮರೊಡನೆ ಸಂಧಾನ ನಡೆಸಲು ಜಿನ್ನರಿಗೆ ಸರ್ವಾಧಿಕಾರ

ವೀರಶೈವ ವಿದ್ಯಾರ್ಥಿ ಸಂಘ

ಮೈಸೂರು ೩೧

ಮೈಸೂರು ನಗರದ ವೀರಶೈವ ವಿದ್ಯಾರ್ಥಿ ಸಂಘದ ಜನರಲ್ ಬಾಡಿ ಮೀಟಿಂಗು ಶ್ರೀಮಾನ್ ಸರ್ದಾರ್ ಕೆ. ಬಸವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಸುತ್ತೂರು ಹಾಸ್ಟೆಲಿನಲ್ಲಿ ನಿನ್ನೆ ಸಂಜೆ ನಡೆಯಿತು. ಶ್ರೀಗಳಾದ ಪಿ. ಎಸ್. ಸಂಗಪ್ಪನವರೂ ಗುರುಬಸಪ್ಪನವರೂ, ನೂರಾರು ವಿದ್ಯಾರ್ಥಿಗಳೂ ಸೇರಿದ್ದರು. ಹೊಸ ವರ್ಷಕ್ಕೆ ಶ್ರೀಗಳಾದ ಟಿ. ಜಿ. ಚಂದ್ರಶೇಖರಾಧ್ಯರು ಉಪಾಧ್ಯಕ್ಷರಾಗಿಯೂ ತಿಪ್ಪೇಸ್ವಾಮಿ, ಗುರುಮಲ್ಲಪ್ಪನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ವಿದ್ವಾನ್ ಶ್ರೀ ಜಿ. ಮರುಳ ಸಿದ್ಧಯ್ಯನವರು ಸ್ವಾಗತ ಭಾಷಣ ಮಾಡಿದರು. ಪ್ರತಿ ವರ್ಷವೂ ೨೦೦ ರೂಗಳನ್ನು ರಿಸರ್ವ್ ಫಂಡಿಗೆ ಸೇರಿಸಬೇಕೆಂದೂ ನಗರದ ಪ್ರತಿ ಹಾಸ್ಟೆಲಿನಿಂದಲೂ ಒಬ್ಬೊಬ್ಬ ಸದಸ್ಯರನ್ನು ಮ್ಯಾನೇಜಿಂಗ್ ಕಮಿಟಿಗೆ ಸೇರಿಸಿಕೊಳ್ಳಬೇಕೆಂದೂ ತೀರ್ಮಾನಗಳಾದುವು. ಅಧ್ಯಕ್ಷರು ವಿದ್ಯಾರ್ಥಿಗಳಲ್ಲಿ ಸಂಘಟನೆ, ಶಿಸ್ತು ಇರಬೇಕು. ಸಂಸ್ಥಾನದಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಇರುವಷ್ಟು ಹಾಸ್ಟೆಲುಗಳ ಸೌಕರ್ಯ ಇತರರಿಗಿಲ್ಲ. ಇವನ್ನು ಅವರು ಸದುಪಯೋಗಪಡಿಸಿಕೊಳ್ಳಬೇಕೆಂದು ಹಿತೋಪದೇಶ ಮಾಡಿದರು.

ಮೈಸೂರು ಫುಟ್‌ಬಾಲ್ ಸಂಘ

ನಿನ್ನೆ ಈ ಸಂಘದ ಜನರಲ್ ಬಾಡಿ ಮೀಟಿಂಗು ನಡೆಯಿತು. ೨೭ ಜನ ನಾನಾ ಕ್ಲಬ್‌ಗಳ ಸದಸ್ಯರುಗಳು ಬಂದಿದ್ದರು. ಮಹಾರಾಜಾ ಕಾಲೇಜಿನ ಶ್ರೀ ಬಿ. ಕೃಷ್ಣರಾವ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ಟಿ. ಶ್ರೀನಿವಾಸಯ್ಯಂಗಾರ್ಯರು ಛೇರ್ಮನ್ನರಾಗಿಯೂ ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರು ಗೌ|| ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಮೈಸೂರು ಬ್ಲೂಸ್ ಕ್ಲಬ್‌ನವರು ತಮ್ಮ ತಪ್ಪು ನಡತೆಯ ಬಗ್ಗೆ ಕ್ಷಮಾಪಣೆ ಕೇಳಿಕೊಂಡು, ಮುಂದೆ ಸರಿಯಾಗಿ ನಡೆದುಕೊಳ್ಳುವುದಾಗಿ ಕೊಟ್ಟ ಭರವಸೆಯ ಮೇಲೆ, ಮೈ|| ಫು|| ಅಸೋಸಿಯೇಷನ್ ಕೌನ್ಸಿಲ್‌ನವರು ಸದರಿ ಕ್ಲಬ್ಬಿನ ಮೇಲೂ, ಆಟಗಾರರಾದ ಶ್ರೀಗಳಾದ ಎಂ. ಎಸ್. ನಂಜುಂಡಯ್ಯ, ರಾಯಪ್ಪ ಮತ್ತು ಯತಿರಾಜ್‌ರವರ ಮೇಲೆಯೂ ಹಾಕಿದ್ದ ಪ್ರತಿಬಂಧಕವನ್ನು ವಜಾ ಮಾಡಿದ್ದಾರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ವಿ. ವಿ. ಸಂಘದ ಚುನಾವಣೆ ಫಲಿತಾಂಶ

ಮೊನ್ನೆ ನಡೆದ ವಿ|| ವಿ|| ಸಂಘದ ಚುನಾವಣೆ ಫಲಿತಾಂಶ ಹೀಗಿದೆ. ಉಪಾಧ್ಯಕ್ಷರು ಶ್ರೀ ಪಿ. ಆರ್. ಬ್ರಹ್ಮಾನಂದ್, ಕಾರ್ಯದರ್ಶಿಗಳು ಶ್ರೀ ಹೆಚ್. ಕೆ. ಕುಮಾರಸ್ವಾಮಿ. ಇಂಡೋರ್ ಗೇಮ್ಸ್ ಕ್ಯಾಪ್ಟನ್ ಶ್ರೀ ಜಿ. ಕೃಷ್ಣಸ್ವಾಮಿ. ಆಡಿಟರ್-ಶ್ರೀ ಮಹದೇವ್. ಮಹಾರಾಜಾ ಕಾಲೇಜು ಪ್ರತಿನಿಧಿಗಳು ಶ್ರೀಗಳಾದ ಎ. ಜಿ. ಕೃಷ್ಣಮೂರ್ತಿ, ಎ. ರಾಜಾರಾವ್, ತುಳಜಾರಾಂ, ನಂದೀಶ್ವರ, ಬಶೀರ್ ಹುಸೇನ್, ರಾಮಸ್ವಾಮಿ ಗೌಡ; ಇಂಟರ್ ಕಾಲೇಜು ಪ್ರತಿನಿಧಿಗಳು-ಶ್ರೀಗಳಾದ ವಿಜಯ ದೇವರಾಜ ಅರಸ್, ವಿ. ಶಾಮ ಭಟ್ಟ, ಅರಣಾಚಲಮ್, ಪಿ. ಆರ್. ಸೀತಾರಾಂ, ಕೆ. ಶಿವಯ್ಯ, ಹೆಚ್. ಎಲ್. ತಿಮ್ಮೇಗೌಡ.

ಜಿನ್ನರಿಗೆ ಸರ್ವಾಧಿಕಾರ

ನಿನ್ನೆ ಲಾಹೋರಿನಲ್ಲಿ ಮುಸ್ಲಿಂಲೀಗ್ ಕೌನ್ಸಿಲ್ ಸಭೆ ನಡೆದು ಹಿಂದೂ-ಮುಸ್ಲಿಂ ಸಮಸ್ಯೆ ಬಗ್ಗೆ ರಾಜಾಜಿಯವರ ಸಲಹೆಗಳನ್ನು ಪರಿಶೀಲಿಸಿ ಅವುಗಳಲ್ಲಿ ಲೀಗಿನ ಉದ್ದೇಶವು ನೆರವೇರಿಲ್ಲವೆಂದೂ ಮುಸಲ್ಮಾನರ ಅಭಿಪ್ರಾಯವನ್ನು ತೆಗೆದುಕೊಳ್ಳುವ ಕ್ರಮ ಪ್ರಾಮಾಣಿಕವಲ್ಲವೆಂದೂ ಅಭಿಪ್ರಾಯವು ಸೂಚಿಸಲ್ಪಟ್ಟಿತು. ಗಾಂಧೀಜಿಯವರನ್ನು ಭೇಟಿ ಮಾಡಿ ಸಂಧಾನ ನಡೆಸಿ ಒಂದು ತೀರ್ಮಾನಕ್ಕೆ ಬರಲು ಜಿನ್ನಾರವರಿಗೆ ಸರ್ವಾಧಿಕಾರ ಕೊಡತಕ್ಕದ್ದೆಂತ ತೀರ್ಮಾನವಾಯಿತು.

ಜಿನ್ನಾ ಭೇಟಿ ೮ ನೇ ತಾ||

ಬಹುಶಃ ಆಗಸ್ಟ್ ೮ ನೇ ತಾ|| ಬೊಂಬಾಯಿನಲ್ಲಿ ಗಾಂಧೀಜಿಯವರಿಗೂ ಜಿನ್ನಾರವರಿಗೂ ಭೇಟಿ ನಡೆಯಬಹುದು. ಒಪ್ಪಂದಕ್ಕೆ ಬರುವ ಅವಕಾಶಗಳು ಈಗ ಹೆಚ್ಚಾಗಿವೆಯೆಂದು ಜಿನ್ನಾರವರು ಹೇಳಿದ್ದಾರೆ.

ನೆಹರು, ಪಟೇಲ್, ಕೃಪಲಾನಿಗಳ ಸಾಕ್ಷ್ಯ ಬೇಕು

ಸರ್ಕಾರದವರು ಹಿಂದೂಸ್ಥಾನದ ಕಾಂಗ್ರೆಸ್ ಸಭೆಗೆ ಸೇರಿದ ೭೫೦೦೦ ರೂ ಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಕಾಂಗ್ರೆಸ್ಸಿನ ಒಬ್ಬ ಸಾಮಾನ್ಯ ಸದಸ್ಯರಾದ ಛೀಮಜಿ, ಶಾಮಜಿ ಗಾಡಿಯಾ ಎಂಬುವರು ಬೊಂಬಾಯಿನ ಕೋರ್ಟಿನಲ್ಲಿ ಹೂಡಿರುವ ಮೊಕದ್ದಮೆಯಲ್ಲಿ ವಾದಿಸುತ್ತ ಶ್ರೀ ಕೆ. ಎಂ. ಮುನ್ಷಿಯವರು ಮೇಲ್ಕಂಡ ಮೊಬಲಗಿನ ಬಗ್ಗೆ ಪಂ|| ಜವಾಹರ್‌ಲಾಲ್ ನೆಹರು, ಸರದಾರ್ ವಲ್ಲಭಾಯಿ ಪಟೇಲ್ ಮತ್ತು ಆಚಾರ್ಯ ಕೃಪಲಾನಿಯವರ ಸಾಕ್ಷ್ಯವು ಬೇಕೆಂದು ಅರ್ಜಿ [illegible] ಸಿರುವರು.

ಹಾಲು ಮಾರುವವರ ಮುಷ್ಕರ

ಎಳು ಆಣೆಗೆ ಒಂದು ಸೇರು ಹಾಲು ಮಾರಬೇಕೆಂದು ದೆಹಲಿಯಲ್ಲಿ ಸರ್ಕಾರದವರು ವಿಧಿಸಿದ್ದ ಆಜ್ಞೆಗೆ ಪ್ರತಿಭಟಿಸಲು ಅಲ್ಲಿನ ಗೌಳಿಗರೆಲ್ಲರೂ ಮುಷ್ಕರ ಹಿಡಿದಿದ್ದರು. ಹೊರಗಿನವರು ಹಾಲು ತಂದು ಕೊಡುತ್ತಿದ್ದುದನ್ನು ತಡೆದುದಕ್ಕಾಗಿ ಹತ್ತು ಜನ ಗೌಳಿಗರನ್ನು ದಸ್ತಗಿರಿ ಮಾಡಲಾಯಿತು. ಅಧಿಕಾರಿಗಳು ಗೌಳಿಗರಲ್ಲಿಗೆ ಹೋಗಿ ಸಮಾಧಾನ [illegible] ಈ ಮುಷ್ಕರ ನಿಂತಿದೆ.

ರೊಮೆಲ್ ಮಡಿದನೇ?

ಜರ್ಮನ್ ಸೇನಾಪತಿ ರೊಮೆಲ್ಲನು ಗಾಯಗೊಂಡು ಮರಣ ಹೊಂದಿದನೆಂದು ಜರ್ಮನ್ ಪತ್ರಿಕೆಗಳು ತಿಳಿಸಿದರೆಂದು ಒಬ್ಬ ಫ್ರೆಂಚ್ ರೆಡ್‌ಕ್ರಾಸ್ ಕೆಲಸಗಾರರು ತಿಳಿಸಿದರೆಂದು ಅಸೋಸಿಯೇಟೆಡ್ ಪ್ರೆಸ್ ಸುದ್ದಿ ತಿಳಿಸುತ್ತದೆ. ೪೦ ವಯಸ್ಸಿನ ಒಬ್ಬ ಮಹಿಳೆಯೇ ಆ ರೆಡ್‌ಕ್ರಾಸ್ ಕೆಲಸಗಾರಳು. ಜರ್ಮನಿಯಲ್ಲಿರುವ ಫ್ರೆಂಚ್ ಸೈನಿಕರನ್ನು ಪರಿಶೀಲಿಸಲು ಆಕೆಗೆ ಅನುಮತಿ ಇದೆ. ಫ್ರಾನ್ಸಿನ ಎಂಬಲ್ಲಿ ಬಾಂಬು ಬಿದ್ದಾಗ ರೊಮೆಲ್ಲನು ಗಾಯ ಹೊಂದಿ ಬರ್ನೆ ಆಸ್ಪತ್ರೆಯಲ್ಲಿ ಮರಣ ಹೊಂದಿದನೆಂದು ಆಕೆ ಕೇಳಿದಳೆಂದು ಗೊತ್ತಾಗಿದೆ. ಈ ಸುದ್ದಿಗೆ ಇನ್ನೂ ಸಮರ್ಥನೆ ದೊರೆತಿಲ್ಲ.

ತುರ್ಕಿ ಮಿತ್ರರ ಕಡೆ ಸೇರುವುದೇ?

ಮಿತ್ರರಾಷ್ಟ್ರಗಳೊಡನೆ ಮಿಳಿತವಾಗುವ ಕಾರ್ಯಕ್ರಮವನ್ನು ತುರ್ಕಿಯು ಕೈಗೊಳ್ಳುವುದೆಂದು ತಿಳಿಯಲಾಗಿದೆ. ಸದ್ಯದಲ್ಲಿಯೇ ಯಾವ ಖಚಿತವಾದ ಪ್ರಕಟನೆಯೂ ಹೊರಡುವುದಿಲ್ಲ. ಆದರೆ ಅದು ಬಹಳ ಸಾವಕಾಶವಾಗುವುದೂ ಇಲ್ಲ. ಜರ್ಮನಿ ರಾಯಭಾರಿ ವಾನ್ ಪೇಪನ್ನರು ತುರ್ಕಿ ಪ್ರಧಾನಿಗಳೊಡನೆ ಮಾತನಾಡಲು ಅಂಕಾರಕ್ಕೆ ಹೊರಟರೆಂದೂ ಈಗಿನ ಸಂಬಂಧವನ್ನೇ ಮುಂದುವರಿಸಲು ಅವರು ಸರ್ವಪ್ರಯತ್ನ ಮಾಡುವರೆಂದೂ ಹೇಳಲಾಗಿದೆ. ಆದರೆ ಜರ್ಮನ್ ಸಾಮರ್ಥ್ಯದ ಬಗ್ಗೆ ತುರ್ಕಿಯವರಿಗೆ ನಂಬಿಕೆಯುಂಟಾಗಿಲ್ಲ.

ಇಟಲಿಯಲ್ಲಿ ಮರಣ ದಂಡನೆ ವಜಾ

ಮರಣ ದಂಡನೆಯನ್ನು ಪೀನಲ್ ಕೋಡಿನಿಂದ ವಜಾ ಮಾಡುವಂತೆ ಇಟಲಿ ಸರ್ಕಾರದವರು ನಿರ್ಧರಿಸಿದ್ದಾರೆ. ಫ್ಯಾಸಿಸ್ಟರು ಈ ಶಿಕ್ಷೆಯನ್ನು ಜಾರಿಗೆ ತಂದಿದ್ದರು. ಮಿಲಿಟರಿ ಮತ್ತು ಕೆಲವು ರಾಜದ್ರೋಹ ಅಪರಾಧಗಳಿಗೆ ಈ ಶಿಕ್ಷೆಯು ಇದ್ದೇ ಇರುತ್ತದೆ.

ಜಪಾನರ ಜೋಳಿಗೆ

[illegible]

ಶ್ರೀ ಹಯಗ್ರೀವ ಜಯಂತಿ

ಮೈಸೂರು ೩೧

ಶ್ರೀ ಹಯಗ್ರೀವ ಜಯಂತ್ಯುತ್ಸವವು ಆಗಸ್ಟ್ ೩ ಮತ್ತು ೪ ನೆಯ ತಾ|| ಶ್ರೀಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯುವುದು. ೩ ನೆಯ ತಾ|| ೪|| ಗಂಟೆಗೆ ಸಂಸ್ಕೃತ ಭಾಷಣ ಸ್ಪರ್ಧೆ, ಶ್ರೀ ಎಂ. ಕೆ. ಅಯ್ಯಂಗಾರ್ಯರಿಂದ ಯೋಗಾಸನ, ಮಂಗಳಾರತಿ. ೪ ನೆಯ ತಾ|| ಬೆಳಗ್ಗೆ ೮|| ಗೆ ಶ್ರೀ ಹಯಗ್ರೀವ ಉಪಾಖ್ಯಾನ ಪಠಣ, ಮಂಗಳಾರತಿ, ಸಂಜೆ ೫|| ಗೆ ಬಹುಮಾನ ವಿನಿಯೋಗ, ಶ್ರೀಮನ್ಮಹಾರಾಜರವರ ಸ|| ಕಾರ್ಯದರ್ಶಿಗಳಾದ ಶ್ರೀ ಕೆ. ನರಸಿಂಹಯ್ಯಂಗಾರ್ಯರ ಭಾಷಣ, ೮|| ವಿ|| ಬಿ. ದೇವೇಂದ್ರಪ್ಪನವರ ಸಂಗೀತ ಏರ್ಪಾಡಾಗಿದೆ.

ಚರ್ಚಾ ಕೂಟ

ಪ್ರಾಚೀನ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯದಲ್ಲಿ ಹೆಚ್ಚು ಜನಸೇವೆ ನಡೆಯುತ್ತದೆ ಎಂಬ ವಿಚಾರವಾಗಿ ನಿನ್ನೆ ಬಾಲಕನ್ನಡ ಸೇವಾ ಮಂಡಲಿಯಲ್ಲಿ ನಡೆದ ಚರ್ಚೆಯಲ್ಲಿ ವಿಷಯವು ಸಭೆಯಲ್ಲಿ ಅಂಗೀಕಾರವಾಯಿತು.

ಯುದ್ಧರಂಗವೇ ಶಾಂತಿಗೆ ಜನ್ಮಸ್ಥಾನ ಎಂಬ ದಾಗಿ ಸುತ್ತೂರು ವೀರಶೈವ ಹಾಸ್ಟೆಲಿನಲ್ಲಿ ನಡೆದ ಚರ್ಚೆಯಲ್ಲಿ ವಿಷಯವು ಸಭೆಯಲ್ಲಿ ಬಿದ್ದು ಹೋಯಿತು.

ಹೈಕೋರ್ಟಿಗೆ ಹೋಗಿದೆ

ಅಕ್ಷೇಪಕರವಾದ ಸಾಹಿತ್ಯವಿಟ್ಟುಕೊಂಡಿದ್ದರೆಂದು ತಮ್ಮ ಮೇಲೆ ಹೂಡಿದ್ದ ಮೊಕದ್ದಮೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಬೇಕೆಂದು ಶ್ರೀ ಸುಬ್ಬಣ್ಣನವರು ಜಿಲ್ಲಾ ಮ್ಯಾಜಿಸ್ಟ್ರೇಟರಲ್ಲಿ ಮಾಡಿದ್ದ ಅರ್ಜಿಯು ತಿರಸ್ಕರಿಸಲ್ಪಟ್ಟಿತು. ಇದರ ಮೇಲೆ ಶ್ರೀ ಸುಬ್ಬಣ್ಣನವರು ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದಾರೆ.

ಕೋರ್ಟು ವಿನಾಯಿತಿ

ನಂಜನಗೂಡು ತಾ|| ಸುತ್ತೂರು ಶ್ರೀ ವೀರಸಿಂಹಾಸನಾಧೀಶ್ವರರ ದ ಪಟ್ಟದ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ಮೈಸೂರು ಸಂಸ್ಥಾನದಲ್ಲಿರತಕ್ಕ ಸಿವಿಲ್ ಕೋರ್ಟುಗಳಿಗೆ ಹಾಜರಾಗಬೇಕಾಗಿಲ್ಲವೆಂಬದಾಗಿ ಘನ ಸರ್ಕಾರದವರು ವಿನಾಯಿತಿ ಕೊಟ್ಟಿರುವುದಾಗಿ ತಿಳಿದುಬಂದಿದೆ.

ಆತ್ಮಹತ್ಯ

ಒಂದು ನಾಟಕ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ನಂಜನಗೂಡಿನ ಶ್ರೀ ಸುಬ್ರಹ್ಮಣ್ಯಶಾಸ್ತ್ರಿ ಎಂಬುವರು ಮೊನ್ನೆ ಸಂಜೆ ದೇವರಾಜಮೊಹಲ್ಲಾ [illegible] ಬೀದಿಯಲ್ಲಿ ಬಾವಿಯೊಂದಕ್ಕೆ ಬಿದ್ದು ಪ್ರಾಣ ಕಳೆದುಕೊಂಡರು. ಇದಕ್ಕೆ ಜೀವನ ಬೇಸರವೇ ಕಾರಣವೆಂದು ತಿಳಿಯಬರುತ್ತೆ.

ಜರ್ಮನಿಯಲ್ಲಿ ಸುಗ್ರೀವಾಜ್ಞೆ

[illegible]

ಸಂಗ್ರಾಮ ಸರ್ಕಾರದ ರಾಜೀನಾಮೆ

[illegible]

ವಾರ ಭವಿಷ್ಯ

ತಾ|| ೩೦-೭-೪೪ ರಿಂದ ೬-೮-೪೪ ರವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ, ಆರ್ಥಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಲಾಭ. ಪ್ರವಾಸ ಸುಗಮ. ತಾ|| ೩೧ ಮಾನಸಿಕ ಸ್ವಲ್ಪ ಉದ್ವಿಗ್ನತೆ, ಖರ್ಚು, ಆಲಸ್ಯ.

ವೃಷಭ—ಆರೋಗ್ಯ ಉತ್ತಮ. ಆದರೆ ಮಾನಸಿಕ ಸ್ಥಿತಿ ದುರ್ಲಭ. ಲಾಭ ಸ್ವಲ್ಪ ಖರ್ಚು. ತಾ|| ೧-೨ ಉದ್ರಿಕ್ತ ಖರ್ಚು, ಆಲಸ್ಯ.

ಮಿಥುನ—ಆರೋಗ್ಯ, ಆರ್ಥಿಕ ಉತ್ತಮ, ವ್ಯಾಪಾರ, ನೌಕರಿಗಳಲ್ಲಿ ಲಾಭ. ಸ್ನಾನ ಮತ್ತು ದಾನ ಧರ್ಮಗಳಲ್ಲಿ ರುಚಿ. ... ಕಪಟಿಗಳ ಸಹವಾಸ, ಖರ್ಚು

ಕರ್ಕ—ಬಂಧು ಮಿತ್ರರಲ್ಲಿ ಕಚ್ಚಾಟ ... ವಿನಿಯೋಗ. ಮಾನಸಿಕ, ಆರೋಗ್ಯ ಉತ್ತಮ. ವ್ಯಾಪಾರ, ನೌಕರಿ ... ಜಾಗರಣೆ, ಖರ್ಚು

ಸಿಂಹ—ಆರೋಗ್ಯ ಉತ್ತಮ. ಮಾನಸಿಕ ಸ್ಥಿತಿ ಹಿತವು. ವ್ಯಾಪಾರ ನೌಕರಿಗಳಲ್ಲಿ ... ವಂಶಸ್ಥರಲ್ಲಿ ವಾದ. ತಾ|| ೩೧ ... ಕ್ಲೇಶ.

ಕನ್ಯಾ—ಆರೋಗ್ಯ ಉತ್ತಮ. ಮಾನಸಿಕ, ವ್ಯಾಪಾರ, ನೌಕರಿ, ಲಾಭ ... ಸಂತೋಷ ... ಆಲಸ್ಯ. ತಾ|| ೧-೩ ಚಿಂತೆ, ಕೆಟ್ಟ ವಾರ್ತೆ, ಹಾನಿ

ತುಲಾ—ಆರೋಗ್ಯ ಮಾನಸಿಕ ಉತ್ತಮ. ಲಾಭ ಒಂದಕ್ಕೆ ನಾಲ್ಕರಷ್ಟು. ಪ್ರವಾಸ ದಾನ ಧರ್ಮಗಳಲ್ಲಿ ಯಶ. ತಾ|| ... ವಸ್ತ್ರಾದಿಗಳನ್ನು ಕೊಳ್ಳುವ ಸಂಭವ

ವೃಶ್ಚಿಕ—ವ್ಯಾಪಾರಿಗಳಿಗೂ, ಲೇಖಕರಿಗೂ ಯಶ. ಮಾನಸಿಕ ಉತ್ತಮ. ವ್ಯಾಪಾರ ನೌಕರಿಗಳಲ್ಲಿ ಲಾಭ, ಮಾನ್ಯತೆ. ತಾ|| ೩೧ ಅತಿಥಿಗಳ ಆಗಮನ.

ಧನು—ಆರೋಗ್ಯ, ಆರ್ಥಿಕ, ಮಾನಸಿಕ ಉತ್ತಮ. ಉದ್ಯೋಗ ನೌಕರಿಗಳಲ್ಲಿ ಉಚ್ಚ ಅಧಿಕಾರ ಪ್ರಾಪ್ತಿ. ತಾ|| ೩-೪ ಸ್ತ್ರೀಗಮನ, ಲಾಭ, ಶುಭ ಸ್ವಪ್ನ.

ಮಕರ—ಆರೋಗ್ಯ ... ವಾಗಿರುವುದು. ಆದರೆ ವ್ಯಾಪಾರ, ನೌಕ

ಪ್ರಕಟಣೆ

ನಂ. ಓಸಿ 14—44-45.
28-7-44.

ಇದರಿಂದ ಸಮಸ್ತ ಜನರಿಗೂ ಮತ್ತು ... ತಿಳಿಯಪಡಿಸುವುದೇನೆಂದರೆ:—

... 1-7-44 ರಿಂದ 15-?-44 ರ ವರೆಗೆ ...

ಸಹಿ
ಕೆ. ಎಸ್. ಗೋವಿಂದರಾವ್,

ಮಕ್ಕಳ ಕೂಟ, ಮೈಸೂರು

ಮಕ್ಕಳ ಕೂಟದ ಆಶ್ರಯದಲ್ಲಿ ೧-೮-೪೪ ನೆಯ ಮಂಗಳವಾರ ಸಂಜೆ ೭ ಗಂಟೆಗೆ ಸರಿಯಾಗಿ ಡಾ|| ಗೋಪಾಲಸ್ವಾಮಿಯವರ ಶಿಶುವಿಹಾರದಲ್ಲಿ ಮಕ್ಕಳ ಮನರಂಜನೆಗಾಗಿ ಮಾಯಾ ಚಿತ್ರ ಪ್ರದರ್ಶನ ಏರ್ಪಡಿಸಿದೆ. ಮಕ್ಕಳೆಲ್ಲರೂ ದಯಮಾಡಿಸಬೇಕೆಂದು ಕೋರಿದೆ.

ರಿಗಳಲ್ಲಿ ಲಾಭ, ಮನಸ್ಸಂಭ್ರಮ, ಪ್ರವಾಸ ತಾ|| ೧-೨-೩ ಭಯ, ಹಾನಿ, ಚಿಂತೆ

ಕುಂಭ—ಸಜ್ಜನರ ಭೇಟಿ. ವ್ಯಾಪಾರ, ನೌಕರಿಗಳಲ್ಲಿ ಬಡ್ತಿ ಜವಾಬ್ದಾರಿ ಹೆಚ್ಚುವುದು. ಪ್ರವಾಸದಲ್ಲಿ ಯಶ. ತಾ|| ೩-೪ ಚಿಂತೆ, ಸ್ತ್ರೀಯೊಡನೆ ಕಲಹ, ಸನ್ಮಾನ

ಮೀನ—ಆರೋಗ್ಯ, ಮಾನಸಿಕ ಉತ್ತಮ. ಉದ್ಯೋಗ ವ್ಯಾಪಾರ ಪ್ರವಾಸಗಳಲ್ಲಿ ಯಶ, ಲಾಭ ತಾ|| ೩೦-೩-೪ ಕೀರ್ತಿ, ಗೌರವ, ಮಿತ್ರ ಭೇಟಿ

ರಾಜರು ಬ್ರಿಟಿಷ್ ಸಂಬಂಧ ಬಿಡುವಂತಿಲ್ಲ

ಹೈದರಾಬಾದ್ ನೈಜಾಮರು ತಮ್ಮ ಸಂಸ್ಥಾನದ ಒಂದು ಪತ್ರಿಕೆಯಲ್ಲಿ ಒಂದು ಲೇಖನ ಬರೆದು ಹೀಗೆ ಹೇಳಿದ್ದಾರೆ:—ಬ್ರಿಟಿಷ್ ರಾಜ್ಯದೊಡನೆ ತಮ್ಮ ಸಂಬಂಧವನ್ನು ಸಂಸ್ಥಾನಗಳು ಕಡಿದು ಹಾಕಲು ಯಾವಾಗಲೂ ಸಾಧ್ಯವಾಗುವುದಿಲ್ಲ ಏಕೆಂದರೆ ಈ ಸಂಸ್ಥಾನಗಳ ಅಸ್ತಿತ್ವವೇ ಬ್ರಿಟಿಷ್ ಸರ್ಕಾರದೊಡನೆ ನಿಗದಿತವಾಗಿದೆ. ಇದೊಂದು ದೊಡ್ಡ ವರಪ್ರಸಾದ. ಇದನ್ನು ಎಂದಿಗೂ ಬಿಟ್ಟುಕೊಡದಿರುವುದೇ ವಿವೇಕ. ಸಂಸ್ಥಾನಗಳ ಯೋಗಕ್ಷೇಮವು ಇದರಲ್ಲಿಯೇ ಅಡಗಿದೆ. ಇದನ್ನು ಇಲ್ಲವೆನ್ನಲಾಗುವುದಿಲ್ಲ ಎಂದು ವರ್ಷದ ಹಿಂದೆ ಹೈದರಾಬಾದಿಗೆ ಕೊಟ್ಟ ಸುಧಾರಣೆಗಳಲ್ಲಿ ಪ್ರಾತಿನಿಧ್ಯದ ಸರ್ಕಾರದ ವಿವರಣೆ ಇದೆ, ಅಷ್ಟೆ. ಜವಾಬ್ದಾರಿ ಸರ್ಕಾರವಲ್ಲ. ಕಾಲಕ್ಕೆ ಸನ್ನಿಹಿತವಾದಾಗ ಪ್ರಾತಿನಿಧ್ಯ ಸರ್ಕಾರವನ್ನು ಹೊಂದಬಹುದು.

ಕಾಗದದ ಬೆಲೆ ಕಡಮೆಯಾಗುವುದು

ಆಗಸ್ಟ್ ಮೊದಲನೇ ವಾರದಲ್ಲಿ ಬೊಂಬಾಯಿಯಲ್ಲಿ ಪತ್ರಿಕೆಗಳಿಗೆ ಕೊಡುವ ನ್ಯೂಸ್ ಪ್ರಿಂಟ್ ಕಾಗದದ ವರ್ತಕರ ಮತ್ತು ಸರಬರಾಯಿ ಸಮಿತಿಯವರ ಸಭೆ ನಡೆಯುವುದು. ಇಂಡಿಯಾ ಸರ್ಕಾರದ ನ್ಯೂಸ್‌ಪ್ರಿಂಟಿನ ಕಂಟ್ರೋಲರೂ ಕೈಗಾರಿಕೆ ಅಧಿಕಾರಿಗಳೂ ಸೇರುವರು. ಹೊಸದಾಗಿ ಬಂದಿರುವ ನ್ಯೂಸ್‌ಪ್ರಿಂಟ್ ಕಾಗದದ ವಿಲೇವಾರಿ ಮತ್ತು ಈ ಕಾಗದದ ಬೆಲೆಯನ್ನು ಇಳಿಸುವ ವಿಚಾರವನ್ನು ಪರಿಶೀಲಿಸುವರು.

ಶ್ರೀ ಪಿ ಮೇದಪ್ಪನವರು ಆಗಸ್ಟ್ ೨ ನೇ ತಾ|| ಹೈಕೋರ್ಟಿನ ಜಡ್ಜ್‌ಪದವಿಯ ಚಾರ್ಜುವಹಿಸುವರು.

Edited, printed and published by A. R. Nagarajan, at the Sadhvi Press, D. Subbiah Road, Mysore.

ಪೀಪ್ಸ್ ಎಂದಾದರೂ ರೈಲ್ವೇ ಪ್ಲಾಟ್‌ಫಾರಮ್ಮಿನಲ್ಲಿ ಗಾಡಿಗಾಗಿ ಕಾದು ನಿಂತಿರುವಿರಾ?



ಒಂದು ಕಾಲದಲ್ಲಿ ರೈಲ್ವೇ ಪ್ಲಾಟ್‌ಫಾರಮ್ಮುಗಳು ಅಗಲವಾಗಿಯೂ ವಿಶಾಲವಾಗಿಯೂ ಇರುತ್ತಿದ್ದವು. ನಿಮ್ಮ ಗಾಡಿಗಾಗಿ ಕಾದು ನಿಂತಿರಲು ನಿಮಗೆ ಯಥೇಚ್ಛವಾಗಿ ಸ್ಥಳವಿರುತ್ತಿತ್ತು. ಆದರೆ, ಈಗ ರೈಲ್ವೇ ಪ್ಲಾಟ್‌ಫಾರಮ್ಮುಗಳು ಪೆಟ್ಟಿಗೆಗಳಿಂದಲೂ, ಪಾರ್ಸಲುಗಳಿಂದಲೂ ತುಂಬಿರುತ್ತವೆ. ಸ್ವಲ್ಪ ಸರಿದಾಡಲು ಸಹಿತ ಸ್ಥಳ ಸಿಕ್ಕುವುದು ದುರ್ಲಭ. ಕೂತುಕೊಂಡು ವಿಶ್ರಮಿಸಿಕೊಳ್ಳುವ ಆಸೆಯಂತೂ ಇಲ್ಲವೇ ಇಲ್ಲ. ಒಂದುವೇಳೆ ನಿಮಗೆ ಸ್ಥಳ ಸಿಕ್ಕಿತಾದರೂ, ರೈಲ್ವೇ ನೌಕರರು ಟ್ರಾಲಿಗಳನ್ನು ತಳ್ಳಿಕೊಂಡು ಹೋಗುತ್ತಿರುವಾಗ ನಿಮ್ಮ ಕಾಲುಗಳಮೇಲೆ ಹಾಯಬಹುದು. ನಿಮಗೆ ಏನಾದರೂ ಫಲಾಹರದ ಸಾಮಾನುಗಳು ಬೇಕಾದರೆ, ನಿಮ್ಮ ಸಾಮಾನುಗಳನ್ನು ಬಿಟ್ಟು ಹೋಗಲು ನಿಮಗೆ ಧೈರ್ಯವಿರುವುದಿಲ್ಲ. ಅವುಗಳನ್ನು ನೋಡಿಕೊಳ್ಳಲು ಕೂಲಿಯೂ ಸಿಕ್ಕುವುದು ಕಷ್ಟ. ಇದರ ಜೊತೆಗೆ ಟಿಕೆಟ್ಟನ್ನು ಪಡೆಯುವುದರಲ್ಲಿರತಕ್ಕ ತೊಂದರೆ. ಗಾಡಿಯು ಒಳಕ್ಕೆ ಪ್ರವೇಶ ದೊರೆಯುವ ಅಸಾಧ್ಯತೆ. ಇವುಗಳನ್ನು ಸೇರಿಸಿ ನೋಡಿದರೆ, ಪ್ರಯಾಣವು ಎಷ್ಟೊಂದು ಕಷ್ಟ. ಇಂತಹ ಪ್ರಯಾಣದಲ್ಲಿ ಏನೂ ಪ್ರಯೋಜನವಿಲ್ಲ. ಕಾಲವು ಪುನಃ ಯಥಾಸ್ಥಿತಿಗೆ ಬರುವವರೆಗೂ ವಿಶೇಷಗಳಾಗಿ ಮನೆಯಲ್ಲಿಯೇ ಉಳಿಯಿರಿ. ಇದು ಒಂದೇ ಸೂಕ್ತವಾದ ಕೆಲಸವು.

...ಯಾಗಿ ಪ್ರಯಾಣಮಾಡಿರಿ

ಸಂಪುಟ ೩]   ಮಂಗಳವಾರ ೧-೮-೪೪   [ಸಂಚಿಕೆ ೯

ತುರ್ಕಿಯನ್ನು ಬಿಡಲು ಜರ್ಮನರಿಗೆ ಸೂಚನೆ

ಪರಿಸ್ಥಿತಿ ತಿಳಿಯಲು ಮಹಾತ್ಮರು ದೇಶಸಂಚಾರಮಾಡುವರು

ಗೌರ್ನರನ್ನು ಹಿಂದಕ್ಕೆ ಕರೆಸಲು ಲೀಗ್ ಒತ್ತಾಯ

ಜರ್ಮನರು ತುರ್ಕಿ ಬಿಡುತ್ತಿರುವರು

ತುರ್ಕಿಯನ್ನು ಬಿಟ್ಟು ತಮ್ಮ ದೇಶಕ್ಕೆ ತೆರಳಲು ಸಿದ್ಧರಿರುವ ಜರ್ಮನರು ಸಿದ್ಧವಾಗಿರಬೇಕೆಂದು ಅಲ್ಲಿನ ಜರ್ಮನ್ ರಾಯಭಾರಿಗಳು ತಿಳಿಸಿದ್ದಾರೆ. ವ್ಯಾಪಾರ ಮತ್ತು ಇತರ ಸಂಸ್ಥೆಗಳ ನೌಕರರೂ ಅವರ ಹೆಂಡಿರು ಮಕ್ಕಳೂ ಊರುಗಳಿಗೆ ಹೋಗುತ್ತಿದ್ದಾರೆ. ತುರ್ಕಿ ಜರ್ಮನಿ ಸಂಬಂಧಗಳು ಯಾವ ರೀತಿ ಪರಿಣಮಿಸುವುವೆಂಬುದನ್ನು ಕುತೂಹಲದಿಂದ ಇದಿರು ನೋಡಲಾಗುತ್ತಿದೆ.

ನಾಜಿ ಪಶ್ಚಿಮ ಸೈನ್ಯ ವಾಪಸು

ದಂಡಯಾತ್ರೆಯ ಪ್ರದೇಶದಲ್ಲಿ ತಮ್ಮ ಸೈನ್ಯ ಸಾಲನ್ನು ಚಿಕ್ಕದು ಮಾಡಲು ಜರ್ಮನರು ನಾರ್ಮಂಡಿಯಲ್ಲಿ ಇಡೀ ಪಶ್ಚಿಮ ಸೈನ್ಯ ಪಡೆಯನ್ನೆಲ್ಲಾ ವಾಪಸು ಕರೆಸಿಕೊಳ್ಳಲಿರುವರೆಂದು ಗೊತ್ತಾಗಿದೆ. ಕೌಮಾಂಟ್ ಹತ್ತಿರ ಬ್ರಿಟಿಷರು ಹೊಸ ಧಾಳಿಯನ್ನು ಆರಂಭಿಸಿದ್ದಾರೆ. ಕೆಲವು ಕಡೆ ಜರ್ಮನರ ಪ್ರತಿಭಟನೆ ಬಿಗಿಯಾಗಿದೆ.

ವಾರ್ಸಾ ಬಳಿ ಕೆಂಪು ಸೈನ್ಯ

ಬಾಲ್ಟಿಕ್ಕಿನಿಂದ ನಾಜಿಗಳನ್ನು ಓಡಿಸಲು ಮೂರು ಭಾರಿ ಕದನಗಳಾಗುತ್ತಿವೆ. ಸೋವಿಯೆಟ್ ಸೈನ್ಯಗಳು ವಾರ್ಸಾ ಸಮೀಪದ ನೆಲೆಗಳನ್ನು ಹಿಡಿದಿವೆ. ನೆಲೀಸಿಯದಲ್ಲಿ ನಾಜಿಗಳು ಬಯಲಿನಾಗಿ ಹಿಂದೆ ಸರಿದಿದ್ದಾರೆ. ಬಾಲ್ಟಿಕ್ಕಿನಲ್ಲಿ ಲಿಂಡೆಮನ್ ಎಂಬಲ್ಲಿಗೆ ಭೀತಿ ತಪ್ಪಿದೆ.

ರೊಮೆಲ್ ಸತ್ತರೇ?

ಅನೇಕ ವದಂತಿಗಳು ರೊಮೆಲ್ ಸತ್ತನೆಂದೇ ಹೇಳುತ್ತಿವೆ. ಆದರೆ ಇಂದಕ್ಕೂ ಸಮರ್ಥನೆಯಿಲ್ಲ. ರೊಮೆಲ್ಲನಿಗೆ ಗಾಯವಾಯಿತು; ಅವನನ್ನು ಕರೆದುಕೊಂಡು ಹೋಗುತ್ತಿದ್ದ ಮೋಟಾರು ಪಲ್ಟಿಯಾಯಿತು; ಅದ್ದರಿಂದ ಎಷ್ಟು ಹಿಕ್ಕದಲ್ಲೇ ಅವನನ್ನು ಜ್ಞಾನವಿಲ್ಲದ ಸ್ಥಿತಿಯಲ್ಲಿ ೬ ಗಂಟೆ ಕಾಲ ಬಿಡಬೇಕಾಯಿತು; ಈ ಸ್ಥಿತಿ ಕಠಿಣವಾಗಿದೆ; ಅವನಿಗೆ ಗಾಯವಾದದ್ದು ಜುಲೈ ೧೭ ರಲ್ಲಿ, ಎಂದು ಒಬ್ಬ ಜರ್ಮನ್ ಖೈದಿ ಹೇಳಿದ್ದಾನೆ.

ಚಕ್ರವರ್ತಿಗಳ ಸಮೀಪದಲ್ಲಿ ಆಸ್ಫೋಟನೆ

ಶುಕ್ರವಾರ ಉಪಾಹಾರ ಸಮಯದಲ್ಲಿ ಆರನೇ ಜಾರ್ಜ್ ಸಾರ್ವಭೌಮರಿದ್ದೆಡೆಯಿಂದ ೩೦೦ ಗಜದೊಳಗೆ ಎರಡು ಜರ್ಮನ್ ವೈಮಾನಗಳು ಸಿಡಿದುವೆಂದು ಇಟಲಿ ಯುದ್ಧ ವಾರ್ತೆ ತಿಳಿಸುತ್ತದೆ. ಬ್ರಿ॥ ಮತ್ತು ಅಮೆರಿಕದ ಸೇನಾಪತಿಗಳೂ ಅಮೆರಿಕದ ಪಾದ್ರಿ ಮಿ॥ ಸ್ಪೆಲ್‌ಮನ್ನರೂ ಚಕ್ರವರ್ತಿಗಳೊಡನೆ ಇದ್ದರು. ಒಬ್ಬ ಅಮೆರಿಕದ ಸಿಪಾಯಿಯು ಕೂಡಲೇ ಪಾರಾದನು. ಚಕ್ರವರ್ತಿಗಾ ಅಪಾಯವಾಗಲಿಲ್ಲ.

ಪಂಜಾಬ್ ಗೌರ್ನರನ್ನು ವಾಪಸು ಕರೆಸಿ

ಪಂಜಾಬಿನ ಮಂತ್ರಿಯಾಗಿದ್ದ ಮಿ॥ ಷೌಕತ್ ಹಯಾತ್ ಖಾನರನ್ನು ಅಲ್ಲಿನ ಗೌರ್ನರವರು ನಿಸ್ಕಾರಣವಾಗಿ ತೆಗೆದು ಹಾಕಿ, ಪ್ರಜಾಪ್ರಭುತ್ವ ಪದ್ಧತಿಗೆ ವಿರುದ್ಧವಾಗಿ ವರ್ತಿಸಿರುವುದರಿಂದ ಪಂಜಾಬ್ ಗೌರ್ನರರನ್ನು ಅಲ್ಲಿಂದ ವಾಪಸು ಕರೆಸಬೇಕೆಂದು ಮುಸ್ಲಿಂ ಲೀಗ್ ಕೇಳಿದೆ. ಬ್ರಿ॥ ಸರ್ಕಾರವನ್ನು ಒತ್ತಾಯಪಡಿಸಿ ನಿರ್ಣಯ ಮಾಡಲಾಗಿದೆ.

'ಇನ್ನೊಂದು ಅವಕಾಶವನ್ನು ಬ್ರಿ॥ ಕಳೆದುಕೊಂಡಿತು'

ಹಿಂದೂಸ್ಥಾನದ ರಾಜಕೀಯ ಅಭಿವೃದ್ಧಿಗಿಂತಲೂ ಆರ್ಥಿಕ ಅಭ್ಯುದಯವೇ ಮುಖ್ಯವೆಂದು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಲಾದ ಬಗ್ಗೆ ಗಾಂಧೀಜಿಯವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ :—

ಕುದುರೆ ಮುಂದೆ ಗಾಡಿಯೇ?

ರಾಜಕೀಯ ಸ್ವಾತಂತ್ರ್ಯಕ್ಕಾಗಿ ವಿಶೇಷ ಕಷ್ಟನಷ್ಟಗಳನ್ನನುಭವಿಸಿದ ಬ್ರಿಟಿಷರು ಈಗ ಹಿಂದೂಸ್ಥಾನದಲ್ಲಿ ರಾಜಕೀಯ ಅಭಿವೃದ್ಧಿಯನ್ನು ಆರ್ಥಿಕ ಸ್ಥಿತಿಯಿಂದ ಬೇರ್ಪಡಿಸುವುದು ಆಶ್ಚರ್ಯಕರವಾಗಿದೆ. ಇದು ಕುದುರೆಯ ಮುಂದೆ ಗಾಡಿಯನ್ನು ಕಟ್ಟಿದಂತಿದೆ. ಯಾವ ಕುದುರೆಯೂ ತನ್ನ ಮೂಗಿನಿಂದ ಗಾಡಿಯನ್ನು ತಳ್ಳಿಕೊಂಡು ಹೋಗಲಾರದು.

ಜ್ಞಾಪಕವು ಮಾನಸಿಕ(?)

ಬಂಗಾಳ ಮತ್ತು ಇತರ ಕಡೆಗಳಲ್ಲಿನ ಕ್ಷಾಮವು ಮಾನವಕೃತವಾದುದಲ್ಲವೆ ದೈವಕೃತವಲ್ಲವೆಂಬ ಬಗ್ಗೆ ನನಗೆ ಸ್ವಲ್ಪವೂ ಸಂದೇಹವಿಲ್ಲ. ಬ್ರಿಟಿಷರು ಭಾರತೀಯರ ನಿಜವಾದ ತೊಂದರೆಯನ್ನು ಅರಿಯಲು ಅಸಮರ್ಥರು.

"ಕ್ವಿಟ್ ಇಂಡಿಯಾ" ಸಮರ್ಥನೆ

ಪಾರ್ಲಿಮೆಂಟ್ ಚರ್ಚೆಯು ಒಂದು ಕಾರಣ ಪಾಲಿನಾಗಿದೆ. 'ಕ್ವಿಟ್ ಇಂಡಿಯಾ' ಭಾರತವನ್ನು ಬಿಟ್ಟು ಹೊರಡಿ—ಎಂಬ ನಿರ್ಣಯವು ಆತುರದಲ್ಲಿ ಆಗ್ರಹದಿಂದ ಮಾಡಿದುದಲ್ಲವೆಂಬ ನನ್ನ ಅಭಿಪ್ರಾಯವನ್ನು ದೃಢಪಡಿಸುತ್ತದೆ. ಆದ್ದರಿಂದ ಹಿಂದೂಸ್ಥಾನವನ್ನು ಹಿಂದೂಸ್ಥಾನದ ಪ್ರತಿನಿಧಿಗಳಿಗೆ ಬಿಡಬೇಕು.

ಯುದ್ಧದಲ್ಲಿ ಜಯ; ಆದರೆ ಮುಂದೆ ಇನ್ನೂ ಘೋರ ಯುದ್ಧ

ಬಡಜನರನ್ನು ಸುಲಿಗೆಮಾಡುವ ಪರರಾಷ್ಟ್ರಗಳ ನಿರಂಕುಶ ಪ್ರಭುತ್ವಕ್ಕೆ ವಿರುದ್ಧವಾದ ಪ್ರಜಾ ಸರ್ಕಾರಕ್ಕಾಗಿಯೆ ಹೋರಾಡುತ್ತಿವೆಯೆಂಬ ಮಾತು ಜಗತ್ತಿಗೆ ಸಾರಬೇಕಾದ ಇನ್ನೊಂದು ಸದವಕಾಶವನ್ನು ಇಂಗ್ಲೆಂಡ್ ಕಳೆದುಕೊಂಡಿತು. ಇದು ಮಿತ್ರರಿಗೆ ಜಯವೇನೋ ಲಭಿಸುವುದು. ಆದರೆ ಪರಿಣಾಮ ಬಳಲಿದ ರಾಷ್ಟ್ರಗಳು ಶಾಂತಿ ಸ್ಥಾಪನೆಯ ಕೆಲಸದಲ್ಲಿ ಈ ಯುದ್ಧಕ್ಕಿಂತಲೂ ಹೆಚ್ಚು ಘೋರವಾದ ಯುದ್ಧಕ್ಕೆ ಸಿದ್ಧತೆಯಾಗುವುದು.

ಮಹಾತ್ಮರ ದೇಶಸಂಚಾರ

ಗಾಂಧೀಜಿಯವರ ಸೂಚನೆಯನ್ನು ಬ್ರಿ॥ ಸರ್ಕಾರವು ನಿರಾಕರಿಸಿರುವುದರಿಂದ ಎಲ್ಲರೂ ಮುಂದೇನು?—ಎಂದು ಕೇಳುತ್ತಿರುವರು. ರಚನಾತ್ಮಕ ಕಾರ್ಯವೇ ಮುಂದಿನ ಮಾರ್ಗವೆಂದು ಗಾಂಧೀಜಿ ಹೇಳುತ್ತಿರುವರು. ಆರೋಗ್ಯವು ಅನುಕೂಲವಾಗುತ್ತಲೆ ಮಹಾತ್ಮರು ದೇಶದ ನಾನಾ ಭಾಗಗಳಿಗೆ ಭೇಟಿಕೊಟ್ಟು ಪರಿಸ್ಥಿತಿಯನ್ನು ಸ್ವತಃ ಅರಿಯಲಿರುವರೆಂದು ಹೇಳಲಾಗಿದೆ.

ಇನ್ನು ಜೈಲಿಗೆ ಹೋಗುವುದೆ?

ತಮ್ಮ ಸಲಹೆಗಳನ್ನು ಬ್ರಿ॥ ಸರ್ಕಾರವು ನಿರಾಕರಿಸಿರುವುದರಿಂದ ಕಾಂಗ್ರೆಸ್ಸಿನವರೆಲ್ಲರೂ ಜೈಲಿಗೇ ವಾಪಸು ಹೋಗುವಂತೆ ಹೇಳುವಿರಾ?—ಎಂದು ಗಾಂಧೀಜಿಯನ್ನು ಒಬ್ಬರು ಕೇಳಲು ಅವರು ಹೀಗೆ ಹೇಳಿದರು—ಯಾವ ಧ್ಯೇಯವೂ ಇಲ್ಲದೆ ಒಬ್ಬ ತಿಳುವಳಿಕಸ್ಥನಾದ ಮನುಷ್ಯನು ಕಾರಾಗೃಹಕ್ಕೆ ಎಂದಾದರೂ ಹೋಗಿರುವನೇ? ಅಥವಾ ಬಿಡುಗಡೆಯಾದೊಡನೆ ಮತ್ತೆ ಹೋಗಿರುವನೇ? ಆದರೆ ಆತ್ಮಗೌರವ, ದೇಶದ ಸ್ವಾತಂತ್ರ್ಯಗಳು ಪ್ರಾಣಕ್ಕಿಂತ ಹೆಚ್ಚು ಅಮೂಲ್ಯವೆಂದು ತಿಳಿಯುವವನು ಮರಣ ಕಷ್ಟಕ್ಕಿಂತ ಕಷ್ಟವನ್ನು ಸ್ವಾಗತಿಸುತ್ತಾನೆ. ಕಾರಾಗೃಹವು ಪ್ರಾಪ್ತವಾದರೆ ಸಂತೋಷದಿಂದ ಅನುಭವಿಸುತ್ತಾನೆ. ಬಿಟ್ಟು ಬಂದವರನ್ನೆಲ್ಲಾ ಪುನಃ ಯಾವಾಗ ಹಿಡಿಯುವಿರಿ?—ಎಂಬ ಪ್ರಶ್ನೆಯನ್ನು ಸರ್ಕಾರಕ್ಕೆ ಹಾಕುವುದು ಒಳ್ಳೆಯದು. ಆದರೆ ಸರ್ಕಾರವು ಉತ್ತರ ಕೊಡುವುದಿಲ್ಲವೆಂಬುದನ್ನು ನಾನು ಒಲ್ಲೆ.

ಶಿಕ್ಷೆಗಳು

'ಮೈಸೂರು ೩೧

ಮೊನ್ನೆ ಮೈಸೂರು ಹಾಸ್ಪಿಟಲಿನಲ್ಲಿ ಬಸ್ಸಿನ ಕದ್ದ ಫಕೀರ್ ಅಹ್ಮದ್‌ನಿಗೆ ೩ ತಿಂಗಳು ಕಠಿಣ ಶಿಕ್ಷೆಯೂ, ಮಂಡ್ಯ ಹೋಟೆಲ್ಲಿನಲ್ಲಿ ಸರ್ವರ್ ಕೋಟ್ ಪಸ್ಸ್ ಕದ್ದ ಅಜೀಜ್ ಪಾಷಾ ಎಂಬುವನಿಗೆ ೧ ವರ್ಷ ಕಠಿಣ ಶಿಕ್ಷೆಯೂ ಪ್ರಿ॥ ನ್ಯಾಯಾಧೀಶರ ಕೋರ್ಟಿನಲ್ಲಿ ವಿಧಿಸಲ್ಪಟ್ಟಿವೆ.

ನನ್ನ ಅವರು ನಿಂತಿರುವ ಇಂತಹ ಹೊಳ್ಳು ನಿಜಾಂಶಕ್ಕಾಗಿ ದಕ್ಷತೆಕೊಡಿಗ ಇವ ಸರಿಯೇ? ಎಂಬ ಪ್ರಶ್ನೆಯನ್ನು ನನಗೆ ನಾನೇ ಹಾಕಿಕೊಳ್ಳುತ್ತೇನೆ.

೧೦೭ ವಯಸ್ಸಿನವರ ನಿಧನ

ಮೈಸೂರು ೩೧

ಮೈಸೂರು ನರಸಿಂಹರಾಜ ಮೊಹಲ್ಲಾ ರಾಜಪುತ್ರ ಬ್ಲಾಕಿನಲ್ಲಿ ಯಜಮಾನ ಮೇಗನಾರಾಯಣಸಿಂಗರವರು ತಮ್ಮ ೧೦೭ ನೇ ವಯಸ್ಸಿನಲ್ಲಿ ತಾ॥ ೨೭-೭-೪೪ನೇ ಮಧ್ಯಾಹ್ನ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಪರಮ ದೈವಭಕ್ತರು. ರಾಜಪುತ್ರ ಮತಸ್ಥರಲ್ಲಿ ರೀತಿಕಾರರುಗಳಾಗಿ ಕೇವಲ ಸ್ವಯಾರ್ಜಿತದಿಂದ ಲಭಿಸಿದ ದ್ರವ್ಯದಲ್ಲಿ ಸಂತೋಷಪಡುತ್ತಿದ್ದರು. ಭಗವಂತನು ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಚಾಕುವಿನಿಂದ ತಿವಿದ

ಸೈಯದ್ ಮಹಮ್ಮದ್ ಎಂಬುವನು ಹಂಪಾಪುರದಲ್ಲಿ ನಾರಾಯಣರಾವ್ ಎಂಬುವನನ್ನು ಚಾಕುವಿನಿಂದ ತಿವಿದು ಗಾಯಪಡಿಸಿದ್ದಕ್ಕಾಗಿ ಸ್ಪೆ॥ ಫ॥ ಮ್ಯಾಜಿಸ್ಟ್ರೇಟರು ಅವನಿಗೆ ೨ ತಿಂಗಳು ಶಿಕ್ಷೆ ವಿಧಿಸಿದರು.

ಕಳ್ಳತನ

ದೀವಟಿಗೆ ಬೀದಿಯ ಮನೆಯೊಂದರಲ್ಲಿ ಮೊನ್ನೆ ರಾತ್ರಿ ಬಟ್ಟೆಬರೆಗಳನ್ನು ಕಳ್ಳತನ ಮಾಡಿದ ಕೃಷ್ಣ ಎಂಬುವನನ್ನು ಕ್ರೈ ಬ್ರಾಂಚಿನವರು ಬಂಧಿಸಿದ್ದಾರೆ.

ನ್ಯಾಯಸ್ಥಾನದ ಸ್ವಾತಂತ್ರ್ಯ

ಸ್ವಂ.ಸು.]   ಬೆಂಗಳೂರು ೩೧

ನಮ್ಮ ಸಂಸ್ಥಾನದಲ್ಲಿ ಹೈಕೋರ್ಟ್ ಜಡ್ಜಿಗಳಿಗೆ ಸ್ವಾತಂತ್ರ್ಯವಿಲ್ಲವೆಂದು ಕೆಲವೆಡೆಗಳಲ್ಲಿ ಇರುವ ಅಭಿಪ್ರಾಯ ತಪ್ಪೆಂದೂ ಬ್ರಿಟಿಷ್ ಭಾರತದ ಜಡ್ಜಿಗಳಿಗಿರುವಷ್ಟೇ ಸ್ವಾತಂತ್ರ್ಯವು ನಮ್ಮ ಹೈಕೋರ್ಟ್ ಜಡ್ಜಿಗಳಿಗೂ ಇರುವುದೆಂದೂ, ಈ ದಿನದಿಂದ ನಿವೃತ್ತರಾಗುವುದಕ್ಕೆ ಪೂರ್ವಭಾವಿಯಾಗಿ ರಜ ಪಡೆದಿರುವ ಹೈಕೋರ್ಟ್ ಜಡ್ಜಿಗಳ ಪ್ರಧಾನ ಪ್ರಸಕ್ತ ಶ್ರೀ ಶಿಂಗಾರಯ್ಯನವರು ಮೊದಲಿಯಾರ, ಈ ಮಧ್ಯಾಹ್ನ ಹೈಕೋರ್ಟಿನಲ್ಲಿ ಅವರಿಗೆ ವಕೀಲ ವೃಂದದಿಂದ ಕೊಡಲ್ಪಟ್ಟ ಬೀಳ್ಕೊಡುವ ಸಮಾರಂಭದಲ್ಲಿ ನುಡಿದರು. ಮೊದಲು, ಅಡ್ವೊಕೇಟ್-ಜನರಲ್‌ರು, ವಕೀಲರ ಪರವಾಗಿ, ಶ್ರೀ ಶಿಂಗಾರವೇಲು ಮೊದಲಿಯಾರ್‌ರ ಗುಣಗಾನ ಮಾಡಿದರು. ತರುವಾಯ ವಕೀಲ ಸಂಘದ ಅಧ್ಯಕ್ಷರಾದ ಶ್ರೀ ಡಿ ರಾಮಸ್ವಾಮಿ ಅಡ್ವೊಕೇಟ್-ಜನರಲ್ ಹೇಳಿದ ಮಾತು ಪುಷ್ಟೀಕರಿಸಿದರು. ಚೀಫ್ ಜಸ್ಟಿಸರು ಪುಷ್ಪ ಧಾರಣೆ ಮಾಡಿ, ಶ್ರೀ ಶಿಂಗಾರವೇಲು ಮೊದಲಿಯಾರರ ಸಾಮರ್ಥ್ಯ, ಸದ್ಗುಣಗಳನ್ನು ಕೊಂಡಾಡಿದರು.

ಜಿಲ್ಲಾಧಿಕಾರಿಗಳಲ್ಲಿ ಬದಲಾವಣೆಗಳು

ಜಿಲ್ಲಾಧಿಕಾರಿಗಳಲ್ಲಿ ಮುಂದೆ ಕಂಡಂತೆ ಬದಲಾವಣೆಗಳು ಆಗುವ ಸಂಭವವಿದೆಯೆಂದು ತಿಳಿದುಬಂದಿದೆ,—

ಶ್ರೀ ಗೋವಿಂದರಾವ್ ರಜದಿಂದ ವಾಪಸ್ ಬಂದ ಮೇಲೆ, ಸರ್ಕಾರದ ಲೇಬರ್ ಸೆಕ್ರೆಟರಿಗಳಾಗಿ; ಶ್ರೀ ಕೆ ಸುಬ್ಬರಾಯರು ಬೆಂಗಳೂರು ಜಿಲ್ಲಾಧಿಕಾರಿಗಳಾಗಿ; ಈಗ ಸ್ಪೆ ಆಫೀಸರು ಬೆಂಗಳೂರು ಪೌರಸಭಾ ಕಮೀಷನರ್, ಶ್ರೀ ಸಿ. ಸುಬ್ಬರಾಯಶೆಟ್ಟರಿಗೆ ಸುಮಾರು ೩ ತಿಂಗಳ ರಜ.

ದಕ್ಷಿಣ ಆಫ್ರಿಕದ ಸರ್ಕಾರವು ... ಗಳ ಬೇರೆ ... ಗಳು ... ಇಂಡಿಯನ್ ದೇಶಕ್ಕೆ ಆಹ್ವಾನ ಕೊಟ್ಟಿದೆ.

ಬಂಧನ

ಸ್ವಂ.ಸು.] ಬೆಂಗಳೂರು ೩೧.

ಎರಡು ವರ್ಷದಿಂದಲೂ ಪೋಲೀಸರ ಕೈಗೆ ಸಿಕ್ಕದೆ ಇದ್ದ ದಾವಣಗೆರೆ ವಿದ್ಯಾರ್ಥಿ ಮುಖಂಡರೂ ಬೆಂಗಳೂರು ಇಂಟರ್ ಕಾಲೇಜಿನ ವಿದ್ಯಾರ್ಥಿಗಳೂ ಆದ ವೇದಮೂರ್ತಿ ಎಂಬುವರನ್ನು ಶನಿವಾರ ಎರಡು ರಿವಾಲ್ವರ್ ಮತ್ತು ಬಂದು. ಟಾ. ಸಹಿತವಾಗಿ ೨೦ ಜನ ಪೋಲೀಸಿನವರು ಬಂದು ದಸ್ತಗಿರಿ ಮಾಡಿರುವರು.

ಇಂಜಿನಿಯರ್ ವರ್ಗ

ಬೆಂಗಳೂರು ಪೌರಸಭೆಯ ಇಂಜಿನಿಯರ್ ಶ್ರೀ ಟಿ ಗೋವಿಂದಪ್ಪನವರನ್ನು ಶಾಶ್ವತ ವರ್ಗ ... ವರ್ಗಾಯಿಸಲಾಗಿದೆ ಮೈಸೂರು ಡಿವಿಜನ್ನಿನಲ್ಲಿರುವ ... ಶ್ರೀ ಆರ್ ಮಾಧವ ... ಬೆಂಗಳೂರು ಪೌರಸಭೆಗೆ ನೇಮಿಸಲಾಗಿದೆ.

ರಾಜೀನಾಮೆ ವಾಪಸು

... ಎದ್ದು ಮ್ಯಾನವರು ಕಾಂ॥ ... ಸಮಿತಿ ಅಧ್ಯಕ್ಷತೆಗೆ ಕೊಟ್ಟಿದ್ದ ರಾಜೀನಾಮೆಯನ್ನು ಕಾಂ॥ ಅಧ್ಯಕ್ಷರಾದ ಶ್ರೀ. ಟಿ. ಸುಬ್ರಹ್ಮಣ್ಯಂರವರ ಕೋರಿಕೆ ಮೇರೆ ವಾಪಸ ತೆಗೆದುಕೊಂಡಿರುವರು.

ಲಾವಣಿ ಸಾಹಿತ್ಯಕ್ಕೆ ೨೦೦೧ ರೂ.

... ಲಾವಣಿ ಸಾಹಿತ್ಯವನ್ನು ... ಪ್ರಕಟಿಸಲು ಬೆಂಗಾಲ್ ಬಲ್ಬ್ ಮಿಲ್ಸಿನ ಶ್ರೀ ಜಿ ಎ ಆಚಾರ್ಯರು ೨೦೦೧ ರೂ ಅನ್ನು ಬೆಂಗಳೂರು ಸ್ಟೇಟ್ ಸಂಸ್ಥೆಗೆ ಕೊಟ್ಟಿರುವರು.

ಹೊಸ ವೀರಶೈವ ಸಂಘ

ಹೊಸದಾಗಿ ಸ್ಥಾಪಿತವಾಗಿರುವ ಅಖಿಲ ವೀರಶೈವ ಸಂಘದ ಉದ್ದೇಶ್ಯಗಳು ಬಹಳ ಹಿಂದೆ ಸ್ಥಾಪಿಸಲ್ಪಟ್ಟ ವಿಶ್ವಾಭಿವೃದ್ಧಿ ಸಂಘದ ಉದ್ದೇಶಕ್ಕೆ ಭಂಗ ತರುವ ದೆಂದು ಕೆಲವು ಪ್ರಮುಖ ವೀರಶೈವ ಮಹನೀಯರು ಹೇಳಿದ್ದು ... ಸ್ಥಾಪಿಸಿದ್ದ ... ೧೦೦೦ ರೂ ವಸೂಲಾಗಿದೆ.

ಕಾಂ॥ ನಾಯಕರ ಸಭೆ

ತುಮಕೂರಿನಲ್ಲಿ ಮೈಸೂರು ಕಾಂಗ್ರೆಸ್ ಮುಖಂಡ ... ಇಂದಿನ ರಾಜಕೀಯ ವಾತಾವರಣವನ್ನು ಪರಿಶೀಲಿಸಿ ಮುಂದಿನ ... ಕಾಂ॥ ... ನಡೆಸು ... ಕಾರ್ಯಕ್ರಮ ... ಕಾಂ॥ ಅಧ್ಯಕ್ಷರು ... ಕರೆದಿರುವರು.

Edited, printed and published by A R Nagarajan, at the Sadhvi Press, D Subbiah Road, Mysore

ಉತ್ಸವ

ಸ್ವ. ಸು.] ... ನಗರ ೩೦

ಶ್ರೀ ಚಾಮರಾಜೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ವರಲಕ್ಷ್ಮಿಹಬ್ಬದ ಪ್ರಯುಕ್ತ ಹಾಲಿ ಈ ಊರಿನಲ್ಲಿ ನಾಟಕವಾಡುತ್ತಿರುವ ಮೈಸೂರು ಶ್ರೀ ಚಾಮುಂಡೇಶ್ವರಿ ಕಂಪೆನಿಯವರು ಸೇವೆ ನಡೆಸಿದರು ಸ್ವಾಮಿಗೆ ರುದ್ರಾಭಿಷೇಕ ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಕುಂಕುಮಸೀರೆ ಅಲಂಕಾರ, ಕಂಠನಂಜಾಂಬಾರವರಿಗೆ ಗಜಲಕ್ಷ್ಮಿ ಅಲಂಕಾರ, ಮೊದಲಾದ ಸೇವೆಗಳು ಬಹಳ ವಿಜೃಂಭಣೆಯಿಂದ ನೆರವೇರಿದವು. ಉತ್ಸವದಲ್ಲಿ ನಾಟಕಮಂಡಲಿಯವರ ಸಂಗೀತ ಕಚೇರಿ ಆಯಿತು.

ಸಕ್ಕರೆ ಪತ್ತೆ

... ನಗರದ ಕಸಬ ಪೋಲೀಸಿನವರು ... ನೇ ತಾ॥ ಶನಿವಾರ ಸಾಯಂಕಾಲ ... ಊರಿನ ... ಮಾದಪ್ಪ ರ ... ಎಂಬುವನು ... ಊರಿನ ಆಫೀಸು ... ಕೊ-ಆಪರೇಟಿವ್ ಸೊಸೈಟಿಯಲ್ಲಿ ... ಸಕ್ಕರೆಯನ್ನು ಬ್ಲಾಕ್ ಮಾರ್ಕೆಟ್ ಮೂಲಕ ಕೊಂಡು ... ಸಾಗಿಸುತ್ತಿದ್ದವನ್ನು ಕಂಡು ಹಿಡಿದು ಮುಂದಿನ ತನಿಖೆ ಕ್ರಮವನ್ನು ನಡೆಸುತ್ತಿದ್ದಾರೆ.

ಹುಲಿ ಹಾವಳಿ

... ಗ್ರಾಮ ... ನಗರದ ಬಳಿ ... ಬಾಗಿಲು ಗ್ರಾಮದ ಒಂದು ಮನೆಯ ಕೊಟ್ಟಿಗೆಯ ಮಣ್ಣುಗೋಡೆಯಲ್ಲಿ ಕಿಂಡಿಯನ್ನು ಮಾಡಿಕೊಂಡು ಒಂದು ಹುಲಿಯು ಒಳಗೆ ನುಗ್ಗಿ ಕರುವನ್ನು ... ಹೋಗಿ ... ಹೊರ ... ಕೊಂಡು ... ಪ್ರಯೋಜನವಾಗಲಿಲ್ಲವೆಂದೂ ಇನ್ನೊಂದು ದಿನ ಎರಡು ಹುಲಿಗಳು ಬಂದುವೆಂದೂ ಅವುಗಳನ್ನು ನಗರದ ಶ್ರೀ ಕೃಷ್ಣಯ್ಯ ಅವರು ... ಹೊಡೆದು ಕೊಂದು ... ಗೊತ್ತಾಗಿದೆ.

ಹುಣಸೂರು ಪೌರಸಭೆ

ಮೊನ್ನೆ ನಡೆದ ಚುನಾವಣೆಗಳಲ್ಲಿ ಐದು ಜನ ಕಾಂ॥ ಸದಸ್ಯರೂ, ಹತ್ತು ಜನ ಇತರರೂ ಹುಣಸೂರು ಪೌರಸಭಾ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವರು

ಮೈಸೂರಿನಲ್ಲಿ ಹಿಂದೂ ಮಹಾ ಸಭಾಧಿವೇಶನ

... ಶಿವರಾತ್ರಿ ... ಮೈಸೂರಿನಲ್ಲಿ ಹಿಂದೂ ಮಹಾ ಸಭಾಧಿವೇಶನಕ್ಕೆ ಡಾ॥ ... ಅಧ್ಯಕ್ಷತೆ ವಹಿಸಲು ... ಒಪ್ಪಿದ್ದಾರೆ.

ದಾನದ ಅಕ್ಕಿ ರೇಷನ್ ವಿರುದ್ಧವಲ್ಲ

... ಬಂದ ... ಸೇರು ಅಕ್ಕಿಯನ್ನು ಲೈಸನ್ಸಿಲ್ಲದೆ ಕಲ್ಕತ್ತೆಗೆ ತಂದುದಕ್ಕಾಗಿ ಹಿಡಿದ ಪೋಲೀಸರು ಒಬ್ಬ ಪುರೋಹಿತನನ್ನು ಕೋರ್ಟಿನ ಮುಂದೆ ನಿಲ್ಲಿಸಿದಾಗ ಈ ಅಕ್ಕಿಯನ್ನು ಇಟ್ಟುಕೊಳ್ಳಲು ಆತನಿಗೆ ಹಕ್ಕಿದೆಯೆಂದೂ ಇದು ಅಪರಾಧವಲ್ಲವೆಂದೂ ಹೇಳಿ ಆತನನ್ನು ಖುಲಾಸೆ ಮಾಡಲಾಯಿತು.

ಗುಮಾಸ್ತರುಗಳ ಮುಷ್ಕರ

ಬಂಗಾಳ ... ಆಫೀಸಿನ ಇನ್ನೂರು ಜನ ಗುಮಾಸ್ತರುಗಳು ... ಮುಷ್ಕರ ಹೂಡಿದ್ದಾರೆ ... ಅವರಿಗೆ ... ಮಾಡುವುದಾಗಿ ... ಭರವಸೆ ಬರುವುದಾದರೆ ಕೆಲಸ ... ಹೇಳುತ್ತಾರೆ

ಗುಡಿಯಲ್ಲಿ ಕಳುವು

ರಾಮನಾಥಪುರದ ರಾಮೇಶ್ವರ ದೇವಾಲಯದಲ್ಲಿ ಕಳ್ಳರು ನುಗ್ಗಿ ಎರಡು ಸಾವಿರ ರೂ ಬಾಳುವ ಆಭರಣಗಳನ್ನು ಅಪಹರಿಸಿರುವುದಾಗಿ ಗೊತ್ತಾಗಿದೆ

ಪಾರ್ಲಿಮೆಂಟ್ ಪ್ರಕರಣ

ಇಂಡಿಯಾ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ಆದಾಗ ಕೇವಲ ೪೦-೪೫ ಜನ ಸದಸ್ಯರು ಮಾತ್ರ ಇದ್ದರು ... ಅನೇಕರು ... ಎಲ್ಲಾ ಒಂದು ... ಎಂದು ... ವರದಿಯಾಗಿದೆ.

ಅಮೇರಿ ಹೋಗಬೇಕು

ಪಾರ್ಲಿಮೆಂಟಿನಲ್ಲಿ ಇಂಡಿಯಾ ಚರ್ಚೆ ಆದನಂತರ ಅನೇಕ ಬ್ರಿಟಿಷ್ ಪತ್ರಿಕೆಗಳು ಇಂಡಿಯಾ ಸೆಕ್ರೆಟರಿ ಅಮೇರಿಯವರು ಹೋಗಬೇಕೆಂದು ಹೇಳಿವೆ

ಉಪಾಧ್ಯಕ್ಷಿಣಿ

... ಎಲ್ಲಾ ಇಂಡಿಯ ... ಉಪಾಧ್ಯಕ್ಷೆ ... ಶ್ರೀಮತಿ ... ಅವರು ... ಚುನಾಯಿತರಾಗಿರುವರು ... ಉಪಾಧ್ಯಕ್ಷ ... ರಾಜೀನಾಮೆ ... ಬರದ ...

ಒಪೇರಾ ಟಾಕೀಸ್

29-7-44 ರಿಂದ

ಶ್ವೈರ್ ಪವರ್ ಮತ್ತು ಜೋನ್ ಫಂಟೇನ್ ನಟಿಸಿರುವ

ದಿಸ್ ಅಬೌ ಆಲ್

ಪ್ರತಿ ದಿನ ೩ ಆಟಗಳು

ತಾ. 2-8-44 ರಿಂದ

... ಹಿಂದಿ ಚಿತ್ರ ... ನಟಿಸಿರುವವರ:

ಸರದಾರ್ ಅಖ್ತರ್-ಚಂದ್ರ ಮೋಹನ್

ಸವಿತಾದೇವಿ-ಜುದ್ದನ್-ಅಡ್ವಾನಿ

ಕಾಂತ ಪ್ರಸಾದ್

ಶಿಶು ಪ್ರದರ್ಶನ

ಮೈಸೂರು ೧

ನಿನ್ನೆಯ ದಿವಸ ಮೈಸೂರು ಮುನ್ಸಿಪಾಲಿಟಿಯವರು ಕೆಲಸಮಾಡುತ್ತಿರುವ ಕೆಲಸಗಾರರ ಮಕ್ಕಳ ಪ್ರದರ್ಶನವು ... ಆವರಣದಲ್ಲಿ ನಡೆಯಿತು. ಗು... ಗರ್ಭಿಣೀ ಶಿಶುಸಂರಕ್ಷಣಾಲಯದ ವೈದ್ಯರು ಮಕ್ಕಳ ಪರೀಕ್ಷೆ ನಡೆಸಿದರು. ಸುಮಾರು ೭೦ ಮಕ್ಕಳು ಪರೀಕ್ಷಿಸಲ್ಪಟ್ಟು ಆ ಮಕ್ಕಳಿಗೆಲ್ಲಾ ಬಹುಮಾನಗಳನ್ನು ಕೊಡಲಾಯಿತು. ಎಲ್ಲಾ ... ಗಳ ಮಕ್ಕಳಿಗೆ ... ಕೆಲ ... ಶ್ರೀ ... ಕೆಲಸಗಾರರಲ್ಲಿ ಬಹುಜನ ಅನಿಶ್ಚಿತ ... ಈ ಕಾರ್ಯಾನಯ ... ನಡೆಯುವುದಾಗಿ ... ಇದ ... ಕೆಲಸಗಾರರ ಮಕ್ಕಳಿಗೆ ಆಟಪಾಟದ ಸೌಕರ್ಯಗಳನ್ನು ಮಾಡಿಕೊಡಲಾಗುವುದೆಂದು ತಿಳಿದುಬರುತ್ತದೆ.

ಸಂಗೀತ

ಮೈಸೂರಿನಲ್ಲಿರುವ ಬಿಹಾರ, ಕೃಷ್ಣಸ್ವಾಮಿ ... ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ... ಬುಧವಾರ ಸಾಯಂಕಾಲ ೬-೩೦ ಗಂಟೆಗೆ ಪ್ರವೇಶದ ... ಸಂಗೀತ ವಿದ್ವಾಂಸರುಗಳಾದ 'ಮೈಸೂರು ... ರವರ ... ವಾದ್ಯಗಳೊಡನೆ ನಡೆಸಿಕೊಡುವರು ... ಎಲ್ಲರಿಗೂ ಉಚಿತ ಪ್ರವೇಶವುಂಟು.

ನಿಧನ

ಮೈಸೂರು ... ಸಂಸ್ಕೃತ ... ನಿನ್ನೆ ಸಂಜೆ ... ನಿಧನರಾದರು ... ಗಂಡುಮಕ್ಕಳೂ, ಇಬ್ಬರು ಹೆಣ್ಣುಮಕ್ಕಳೂ ಇದ್ದಾರೆ. ... ಸಂತಾಪವುಂಟಾಗಲಿ.

ನವ ಯೌವನ

... ವೀರ್ಯವೃದ್ಧಿ ... ಮದನಮಂಜರಿ

... ಬೆಲೆ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

181 ... ಮೈಸೂರು.

ಅಶೋಕ ಫಾರ್ಮಸಿ

... ಮೈಸೂರು

MEDICINES

Take your requirements from

RAGHULAL & CO.,

1749, Sayaji Rao Road,

(Opposite Mysore Hall). MYSORE.

ಔಷಧಗಳು

... ರಘುಲಾಲ್ ಅಂಡ್ ಕೋ,

1749 ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಎದುರು), ಮೈಸೂರು.

ಸ್ತ್ರೀಯರ ಸೌಂದರ್ಯ ರಕ್ಷ

... ವಿದ್ಯಾ ... ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಸ್ನೋ ಪೌಡರ್

ಬಳಸಿರಿ

ಕೆ. ... ದಿನಸಿ ... ದೇವರಾಜ ಮಾರ್ಕೆಟ್, ಮೈಸೂರು.

... ದೊರೆಯುತ್ತದೆ.

ಸಂಪುಟ ೩] ಬುಧವಾರ ೨-೮-೪೪ [ಸಂಚಿಕೆ ೧೦

ಇಂಡಿಯಾ ಬಗ್ಗೆ ರೂಸ್ವೆಲ್ಟರ ಪ್ರವೇಶವೇ ?

ಲಂಡನ್ ಮೇಲೆ ಜರ್ಮನರ ಹೊಸ ಅವಿಚ್ಛಿನ್ನ ಪ್ರತೀಕಾರಾಸ್ತ್ರ

ಲಾಹೋರಿನಲ್ಲಿ ೪೦೦ ರೈಲ್ವೆ ಗುಮಾಸ್ತರ ಮುಷ್ಕರ

ಇಂಡಿಯಾ ಬಗ್ಗೆ ರೂಸ್ವೆಲ್ಟರು

ಅಧ್ಯಕ್ಷ ರೂಸ್ವೆಲ್ಟರು ಮಿ|| ಚರ್ಚಿಲರೊಡನೆ ಹಿಂದೂಸ್ಥಾನದ ಪ್ರಶ್ನೆಯನ್ನು ಪ್ರಸ್ತಾಪಿಸುವರೆಂಬ ಜನಾಭಿಪ್ರಾಯ ... ನ್ಯೂಯಾರ್ಕ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಟ್ಲಾಂಟಿಕ್ ಘೋಷಣೆಯನ್ನು ಈಗ ಹಿಂದೂಸ್ಥಾನಕ್ಕೆ ಅನ್ವಯಿಸುವಂತೆ ಮಾಡಬೇಕೆಂದು ರೂಸ್ವೆಲ್ಟರ ಪ್ರತಿನಿಧಿಯಾಗಿದ್ದ ಮಿ|| ವಿಲಿಯಂ ಫಿಲಿಪ್ಸರು ಸಲಹೆ ಮಾಡಿರುವರೆಂಬುದೂ ವರದಿಯಾಗಿದೆ.

ಟರ್ಕಿಗೆ ಜರ್ಮನ್ ಬೆದರಿಕೆ

ಜರ್ಮನಿಯೊಡನೆ ಸಂಬಂಧವನ್ನು ತಪ್ಪಿಸಿಕೊಂಡರೆ ತಕ್ಕ ... ಅನುಭವಿಸಬೇಕಾಗುವುದೆಂಬ ಬೆದರಿಕೆಯನ್ನು ಜರ್ಮನ್ ರಾಯಭಾರಿ ವಾನ್ ಪೇಪನ್ನರು ಟರ್ಕಿಯ ಪ್ರಧಾನ ಮಂತ್ರಿಗಳಿಗೆ ಹಾಕಿದ್ದಾರೆ. ತುರ್ಕಿಯ ... ಜರ್ಮನ್ ರಾಜತಾಂತ್ರಿಕರೆಲ್ಲ ದೇಶ ಬಿಟ್ಟು ಹೊರಡಲು ಸಿದ್ಧರಾಗುತ್ತಿದ್ದಾರೆ.

ಮೈಸೂರರಾಯರೊಡನೆ ವ್ಯವಹಾರ

ಗಾಂಧೀಜಿಯವರು ರಾಜಕೀಯ ವಿಚಾರದಲ್ಲಿ ಶ್ರೀ ಮೈಸೂರರಾಯರೊಡನೆ ಪತ್ರವ್ಯವಹಾರ ನಡೆಸುತ್ತಿರುವುದಾಗಿ ಗೊತ್ತಾಗಿದೆ. ... ಈಗಲೇ ... ಆ ಪತ್ರಗಳನ್ನು ... ತಿಳಿಸುವುದಿಲ್ಲ ... ರಾಜಾಜಿಯವರೊಡನೆ ಮಾತುಕತೆ ನಡೆಸುವರು.

ಜರ್ಮನರ ಪ್ರತೀಕಾರಜ್ವಾಲೆ

ಹಾರುವ ಬಾಂಬುಗಳನ್ನು ಕಳುಹಿಸುವ ಕ್ರಮವನ್ನು ಜರ್ಮನರು ಜಾರಿಗೆ ತಂದಿದ್ದಾರೆ. ಅನೇಕ ನಿಲ್ದಾಣಗಳಿಂದ ... ವಿಮಾನಗಳ ... ಬ್ರಿಟನ್ನಿನ ಮೇಲೆ ... ಪ್ರಯೋಗಿಸುವ ಕ್ರಮವನ್ನು ಆರಂಭಿಸಿದ್ದಾರೆ. ಇವುಗಳನ್ನು ಬ್ರಿಟನ್ನಿನ ವಿಮಾನದಳದವರು ... ಎದುರಿಸುತ್ತಿದ್ದಾರೆ. ಪ್ರತೀಕಾರಜ್ವಾಲೆಗೆ ಲಂಡನ್ನು ತುತ್ತಾಗುತ್ತಿದೆಯೆಂದು ಜರ್ಮನ್ ರೇಡಿಯೋ ಹೇಳುತ್ತದೆ.

ಪಟ್ಟಣದ ಬೆಲೆ ಇನ್ನು ಮುಂದೆ ಗ್ರಾಮಗಳಿಗೆ ... ಮಾರಾಟ ... ಸರ್ಕಾರ ... ಗ್ರಾಮಗಳಲ್ಲಿ ... ಆಜ್ಞೆ ಮಾಡಿದ್ದಾರೆ.

೪೦೦ ಗುಮಾಸ್ತರ ಮುಷ್ಕರ

ಲಾಹೋರಿನ ವಾಯುವ್ಯ ರೈಲ್ವೆ ಆಫೀಸಿನ ನಾನೂರು ಜನ ಗುಮಾಸ್ತರು ತಮ್ಮ ಸಂಬಳವನ್ನು ಒಂದರಷ್ಟರಷ್ಟು ಹೆಚ್ಚಿಸಬೇಕೆಂದು ಮುಷ್ಕರ ಹೂಡಿದ್ದಾರೆ. ಅವರ ಸಂಬಳ ರೂ ೪೦, ಭತ್ಯಗಳು ೩೩ ರೂ. ಸಂಬಳವನ್ನು ೮೦ ರೂ. ಗೆ ಹೆಚ್ಚಿಸಿ ಅಷ್ಟೇ ಹಣವನ್ನು ಭತ್ಯವಾಗಿಯೂ ಕೊಡಬೇಕೆಂಬುದು ಅವರ ಬೇಳಿಕೆ. ಅಧಿಕಾರಿಗಳು ಒಪ್ಪಲಿಲ್ಲ. ಗುಮಾಸ್ತರು ಕೆಲಸ ಮಾಡಲಿಲ್ಲ ಹೋಗಲೂ ಇಲ್ಲ. ಅಧಿಕಾರಿಗಳು ಪೋಲೀಸರ ಸಹಾಯದಿಂದ ಬಲಾತ್ಕಾರವಾಗಿ ಗುಮಾಸ್ತರುಗಳನ್ನು ಹೊರಕ್ಕೆ ತಳ್ಳಿಸಿದರು.

ಕಾಂಗ್ರೆಸ್ಸು ಸಂಸ್ಥಾನಗಳು

ಸಂಸ್ಥಾನಗಳಲ್ಲಿ, ಪ್ರಜಾಮಂಡಲಗಳೂ ಕಾಂಗ್ರೆಸ್ ಸಮಿತಿಗಳೂ ಇದ್ದರೆ ಒಂದಕ್ಕೊಂದು ವಿರುದ್ಧವಾಗಿ ವರ್ತಿಸಕೂಡದೆಂದು, ಜನಾಭಿಪ್ರಾಯಗಳಿದ್ದರೆ ಪ್ರಜಾಮಂಡಲದ ರೀತಿನೀತಿಗಳನ್ನೇ ಆ ನಾ ... ಕಾಂಗ್ರೆಸ್ ಸಂಸ್ಥೆಗಳು ಸಹಕರಿಸಬೇಕು ಎಂದು ಮಹಾತ್ಮರು ತಿಳಿಸಿದ್ದಾರೆ.

ಜರ್ಮನಿಯ ಯುದ್ಧ ಸಿದ್ಧತೆ

ಯುದ್ಧ ಪ್ರಯತ್ನಕ್ಕೆ ಉಪಯೋಗವಿಲ್ಲದ ಎಲ್ಲಾ ಕೆಲಸಗಳನ್ನೂ ನಿಲ್ಲಿಸಲಾಗುವುದು. ಕೈಗಾರಿಕೆ ಮತ್ತು ಇತರ ಸಂಸ್ಥೆಗಳನ್ನು ರದ್ದುಮಾಡಲಾಗುವುದು. ಎಲ್ಲಾ ಹೊರೆಯನ್ನೂ ಎಲ್ಲರಿಗೂ ಸಮನಾಗಿ ಹಂಚಲಾಗುವುದು. ವಿಜಯಕ್ಕೆ ಬೇಕಾದ ಸಕಲ ಸಾಮಗ್ರಿಗಳೂ ನಮ್ಮಲ್ಲಿವೆ. ಅವುಗಳನ್ನು ಸರಿಯಾಗಿ ಉಪಯೋಗಿಸಿದರೆ ಒಟ್ಟಿನ ಗುರಿಯನ್ನು ಖಂಡಿತ ಮುಟ್ಟುವೆವು ಎಂದು ಡಾ|| ಗೊಬೆಲ್ಸರು ಹೇಳಿರುವರು.

ಸಾಮೂಹಿಕ ಕಾರ್ಯಕ್ರಮ

ಸಭೆ ಧ್ವಜಾರೋಹಣ ಮುಂತಾದ ಸಾಮೂಹಿಕ ಕಾಂಗ್ರೆಸ್ ಕಾರ್ಯಕ್ರಮಗಳನ್ನು ಅಧಿಕಾರಿಗಳೊಡನೆ ಘರ್ಷಣೆಯಿಲ್ಲದ ರೀತಿಯಲ್ಲಿ ನಡೆಸಿಕೊಂಡು ಹೋಗುವ ಬಗ್ಗೆ ಮಹಾತ್ಮರಲ್ಲಿ ಚರ್ಚೆ ನಡೆಯಿತೆಂದೂ ಈ ಬಗ್ಗೆ ಅವರು ಸಧ್ಯದಲ್ಲಿಯೇ ಒಂದು ಹೇಳಿಕೆ ಕೊಡುವರೆಂದೂ ಗೊತ್ತಾಗಿದೆ.

ವಿವಿಧ ವಿನೋದಾವಳಿ

ಮೈಸೂರು, ೨

ಮಾಣೇವಿಲಾಸ ರಸ್ತೆಯಲ್ಲಿರುವ ... ಗಳು ೬ ನೇ ತಾರೀಖು ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಕಸ್ತೂರಿ ಬಾ ಸ್ಮಾರಕ ನಿಧಿಗೆ ಹಣ ಶೇಖರಿಸಲು ಒಂದು ವಿವಿಧ ವಿನೋದಾವಳಿಯನ್ನು ಏರ್ಪಡಿಸಿದೆ.

ವಿಖನಸಾಚಾರ್ಯರ ಜಯಂತಿ

ಇದೇ ತಾರಣ ನಾಮ ಸಂವತ್ಸರದ ಶ್ರಾವಣ ಶುದ್ಧ ಪೌರ್ಣಮಿ ಶುಕ್ರವಾರ ತಾ|| ೪-೮-೪೪ ಶ್ರೀಮನ್ನಾರಾಯಣರ ಸಂಸ್ಕೃತ ಮಹಾಪಾಠಶಾಲಾ ವೇದದ ತೋಟದಲ್ಲಿ ನಡೆಯುವುದು. ಅಸ್ಥಾನವಿದ್ವಾನ್ ಟಿ. ಕೃಷ್ಣಯ್ಯಂಗಾರ್ಯರ ... ಅಸ್ಥಾನವಿದ್ವಾನ್ ... ಪಿಟೀಲು; ವೆಂಕಟೇಶ ದೇವರ ... ಉತ್ಸವ.

ಕಸ್ತೂರಿ ಬಾ ನಿಧಿಗೆ ಚಿತ್ರಾರ್ಪಣೆ

ಮೈಸೂರಿನ ನಾಟ್ಯಕಲಾವಿದ ಶ್ರೀಮಾನ್ ಎಸ್. ಎನ್. ಸ್ವಾಮಿಯವರು ಕಸ್ತೂರಿ ಬಾ ಅವರ ಛಾಯಾಚಿತ್ರವೊಂದನ್ನು ಬರೆದು ಮಹಾತ್ಮ ಗಾಂಧೀಜಿಯವರಿಗೆ ಕಳುಹಿಸಿದ್ದಾರೆ. ಅದನ್ನು ಮಾರಿ ಬಂದ ಹಣವನ್ನು ನಿಧಿಗೆ ಸೇರಿಸಲಾಗುವುದು.

ದೇಶಪ್ರೇಮಿ ಸಂಘ

ಈ ಸಂಘದವರು ೧-೮-೪೪ ರಲ್ಲಿ ತಿಲಕ್ ದಿನಾಚರಣೆಯನ್ನು ... ವಿಲಾಸ ಹೈಸ್ಕೂಲ್ ಮೈದಾನದಲ್ಲಿ ಆಚರಿಸಿದರು. ಶ್ರೀ ಎ. ಸಿ. ಶ್ರೀನಿವಾಸರಾವ್ ಅಧ್ಯಕ್ಷತೆ ವಹಿಸಿದ್ದರು. ... ಚಂದ್ರಶೇಖರ ... ತಿಲಕರ ಗುಣಗಾನ ಮಾಡಿದರು. ಬಳಿಕ ಆಟಪಾಟಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನ ಕೊಟ್ಟರು. ... ತಿಲಕರ ... ಹಾಡನ್ನು ಹಾಡಿದರು. ಅಧ್ಯಕ್ಷರ ... ವಂದನಾರ್ಪಣೆಯೊಡನೆ ಸಭೆ ಮುಗಿಯಿತು.

ಕಸ್ತೂರಿ ಬಾ ನಿಧಿ

(ಮೈಸೂರು ಸಂಸ್ಥಾನದ ಸಮಿತಿ)

ತಾ|| ೩೧-೭-೪೪ ರ ವರೆಗೆ

ಬಂದಿನ ಲೆಕ್ಕ ೩೪೩ ...೦-೦

ಶ್ರೀಗಳಾದ:— ಎಸ್. ವಿ. ಶ್ರೀನಿವಾಸ ... ೧೦೦೧-೦-೦, ಟಿ. ಎ. ... ೧೦೦೧-೦-೦ ... ೧೦೦೧-೦-೦ ... ೧೦೦೧-೦-೦ ... ೧೦೦-೦-೦ ... ೧೦೦-೦-೦ ... ೧೦೦-೦-೦ ... ೧೦೦-೦-೦ ... ೨೨೦೦ ...

ಒಟ್ಟು ...

... ಕೃಷ್ಣಸ್ವಾಮಿ ...

... ಕಾರ್ಯದರ್ಶಿ

ದಿವಾನರ ಸಂಚಾರ

ಸ್ವಂ. ವ. ಸಂ.] ಬೆಂಗಳೂರು ೨

ದಿವಾನರು ೫ ನೇ ತಾ|| ಬೆಂಗಳೂರನ್ನು ಬಿಟ್ಟು ೧೦ ನೇ ತಾ|| ವರೆಗೆ ತುಮಕೂರು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರವಾಸಮಾಡುವರು. ತುಮಕೂರು ತಿಪಟೂರು ಭದ್ರಾವತಿಗಳಿಗೆ ಭೇಟಿ—ಭದ್ರಾವತಿಯಲ್ಲಿ ೩ ದಿನ ಮೊಕ್ಕಾಂ. ೧೧ ತಾ|| ಬೆಂಗಳೂರಿಗೆ ವಾಪಸು ಬರುವರು.

ಈ ದಿನ ಶ್ರೀ ಮೇದಪ್ಪನವರು ಹೈಕೋರ್ಟಿನಲ್ಲಿ ಚಾರ್ಜು ವಹಿಸಿ ಚೀಫ್ ಜಡ್ಜರೊಡನೆ ಕುಳಿತರು. ಅಡ್ವೋಕೇಟ್ ಜನರಲ್ಲರೂ ವಕೀಲ ಸಂಘದ ಅಧ್ಯಕ್ಷ ಶ್ರೀ ಡಿ. ... ರಾಯರೂ ಅವರನ್ನು ಸ್ವಾಗತಿಸಿ ಭಾಷಣಮಾಡಿದರು. ವಂದನೆಯನ್ನು ಸಲ್ಲಿಸುತ್ತಾ ಮೈಸೂರು ಹೈಕೋರ್ಟಿನ ಗೌರವವನ್ನು ರಕ್ಷಿಸುವುದಾಗಿ ಮೇದಪ್ಪನವರು ಹೇಳಿದರು.

ಶ್ರೀ ಗುರುದತ್ತರವರು ೧೧ ತಾ|| ಕೆಲಸದ ಮೇಲೆ ವಾಪಸು ಬರುವರು. ಬಹುಶಃ ಕೋಲಾರದ ಜಿಲ್ಲಾಧಿಕಾರಿಗಳಾಗುವರು.

ಪೌರಸಭೆಯ ಮೀಟಿಂಗು ಈ ದಿನ ನಡೆಯಿತು.

ರೇಷ್ಮೆ ಸಾಗುವಿಕೆ

ಕೃಷ್ಣರಾಜನಗರದಿಂದ ಮಹಮ್ಮದ್ ಗೌಸ್ ಎಂಬುವರು ೩೦ ಪೌ|| ರೇಷ್ಮೆಯನ್ನು ಅನಧಿಕೃತವಾಗಿ ರೈಲಿನಲ್ಲಿ ಸಾಗಿಸುತ್ತಿದ್ದುದನ್ನು ರೈಲ್ವೆ ಪೋಲೀಸರು ಪತ್ತೆಮಾಡಿದ್ದಾರೆ.

ಅಕ್ರಮ ಬಂಧನ ಮೊಕದ್ದಮೆ

ಶ್ರೀ ಎಸ್. ಚನ್ನಯ್ಯನವರು ಹೂಡಿರುವ "ಅಕ್ರಮ ಬಂಧನ" ಮೊಕದ್ದಮೆಯಲ್ಲಿ ವಾದಯ್ಯನವರ ವಿಚಾರಣೆ ಈ ದಿನ ಪ್ರ|| ನ್ಯಾ|| ರ ಕೋರ್ಟಿನಲ್ಲಿ ನಡೆಯಿತು. ಶ್ರೀ ಟಿ. ... ಯ್ಯನವರು ಶ್ರೀ ಚನ್ನಯ್ಯನವರ ಪರ ವಕಾಲತ್ತು ನಡೆಸಿದರು.

೧ ತಿಂಗಳು ವ್ಯಾಪಾರ ನಿಲ್ಲಿಸಬೇಕು

ಮೈಸೂರು ದೇವರಾಜ ಮಾರ್ಕೆಟ್ಟಿನಲ್ಲಿರುವ ಶುಕ್ರ ... ಯವರು ಗಡ ೧ ಕ್ಕೆ ೧-೯-೪ ರಾತ್ರಿ ... ೧ ತಿಂಗಳು ವ್ಯಾಪಾರ ನಡೆಸಕೂಡದೆಂದು ... ಡೈರೆಕ್ಟರು ಆಜ್ಞೆ ಮಾಡಿದ್ದಾರೆ.

ತಿಲಕ್ ದಿನಾಚರಣೆ

೩೧ ನೇ ತಾ|| ಸೋಮವಾರ ... ಪೇಟೆಯ ಮಹಾಜನ ಹೈಸ್ಕೂಲಿನಲ್ಲಿ ತಿಲಕ ದಿನಾಚರಣೆಯನ್ನು ಸ್ಕೂಲಿನ ವಿದ್ಯಾರ್ಥಿ ಶ್ರೀ ಕೆ. ಡಿ. ತುಳಸಿದಾಸರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಶ್ರೀಮಾನ್ ಬಿ. ಆರ್. ... ರವರು ತಿಲಕರ ವಿಷಯವಾಗಿ ಭಾಷಣ ಮಾಡಿದರು.

ನೂತನ ಸಂಘ ಸ್ಥಾಪನೆ

೩ ನೇ ತಾರೀಖು ಸಾಯಂಕಾಲ ... ಗಂಟೆಗೆ ... ಟಿಕೆಟ್ ಬಸ್ಸಿನಲ್ಲಿ ಒಂದು ನೂತನ ಸಂಘವು "ರಾಷ್ಟ್ರೀಯ ಸಂಘ" ವೆಂಬ ಹೆಸರಿನಿಂದ ಸ್ಥಾಪಿಸಲಾಗುತ್ತದೆ. ಶ್ರೀಮಾನ್ ... ಕೃಷ್ಣಶರ್ಮರ ಪ್ರಾರಂಭೋತ್ಸವವನ್ನು ನಡೆಸುವರು. ಶ್ರೀಮಾನ್ ಎಂ. ಎ. ... ಸ್ವಾಮಿ ಅಯ್ಯಂಗಾರರವರು ಭಾಷಣ ಮಾಡುತ್ತಾರೆ.

ಲೋಕಮಾನ್ಯ ತಿಲಕರ ಪುಣ್ಯಸ್ಮರಣೆ

ಒಂಟಿಕೊಪ್ಪಲು ತಿಲಕ ಸಂಘದಲ್ಲಿ ಸಮಾರಂಭಗಳು

ಮೈಸೂರು ೩

ನಿನ್ನೆ ದಿನ ಒಂಟಿಕೊಪ್ಪಲಿನ ತಿಲಕ್ ಸಂಘದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರ ದಿನಾಚರಣೆಯನ್ನು ವೈಭವದಿಂದ ನೆರವೇರಿಸಲಾಯಿತು. ಪ್ರಾತಃಕಾಲ ೬ ಗಂಟೆಗೆ ಪ್ರಭಾತ ಪೇರಿಯಾಯಿತು. ೮ ಗಂಟೆಗೆ ಮೈಸೂರು ಪೌರಸಭಾ ಉಪಾಧ್ಯಕ್ಷರಾದ ಶ್ರೀಮಾನ್ ಟಿ. ನಾರಾಯಣಸ್ವಾಮಿಯವರು ಧ್ವಜಾರೋಹಣವನ್ನು ಮಾಡಿದರು.

ಸಾಯಂಕಾಲ ೬-೩೦ ಗಂಟೆಗೆ ಬಹಿರಂಗ ಸಭೆ ಸೇರಿತು. ಸಂಘದ ಆವರಣವೆಲ್ಲವೂ ತಳಿರುತೋರಣಗಳಿಂದ ಶೋಭಾಯಮಾನವಾಗಿತ್ತು. ಜನರು ಕಿಕ್ಕಿರಿದು ನೆರೆದಿದ್ದರು. ಶ್ರೀಮಾನ್ ಸಿದ್ದಯ್ಯನಹಳ್ಳಿ ಕೃಷ್ಣಶರ್ಮರವರನ್ನು ಮಂಗಳವಾದ್ಯದೊಡನೆ ಎದುರುಗೊಳ್ಳಲಾಯಿತು. ಮಾತೃಮಂಡಲಿಯ ಬಾಲಿಕೆಯರಿಂದ ಪ್ರಾರ್ಥನೆಯಾದನಂತರ ಸಭೆಗೆ ಶ್ರೀಮಾನ್ ಶರ್ಮರವರನ್ನು ನಾಗರತ್ನಮ್ಮನವರು ಪರಿಚಯ ಮಾಡಿಕೊಟ್ಟು ಸ್ವಾಗತ ಭಾಷಣ ಮಾಡಿ ಇಂದಿನ ಉತ್ಸವವನ್ನು ನೆರವೇರಿಸಬೇಕೆಂದು ಕೇಳಿಕೊಂಡರು.

ಶ್ರೀಮಾನ್ ಅನಂತ ನಾರಾಯಣರವರು ತಮ್ಮ ಸ್ವಂತ ಕವಿತೆಗಳನ್ನು ಓದಿದರು. ಮಾತೃಮಂಡಲಿಯ ಬಾಲಿಕೆಯರಿಂದ ಆಟಗಳನ್ನು ನಡೆಸಿತು. ನೆಹರೂ ಸಂಘದವರು ಲೆಜಿಮ್ ಡ್ರಿಲ್ ಮಾಡಿದರು. ಕಾಲೇಜು ವಿದ್ಯಾರ್ಥಿಗಳಿಂದ ಕೋಲಾಟ ನಡೆಯಿತು. ನೂಲುವ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದವರಿಗೆ ಬಹುಮಾನ ಹಂಚಲಾಯಿತು.

ಶ್ರೀ ಶರ್ಮರವರು ತಿಲಕರ ವಿಷಯವಾಗಿ ಉಜ್ವಲ ಭಾಷಣ ಮಾಡಿ ಹೀಗೆ ಹೇಳಿದರು:—

'ಸತ್ಯಂವದ. ಧರ್ಮಂಚರ, ಆಚಾರ್ಯ [illegible],'—ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಬರುವ ಈ ಮಹಾನುಭಾವರ ಉಪದೇಶಗಳನ್ನು ಕೇಳಿದವನೋ ಇಂದಿಗೂ ಕೂಡ ಎಲ್ಲರ ನೆನಪಿನಲ್ಲಿ ಸೂತ್ರಗಳಾಗಿ ನಿಂತಿವೆ. ಅಂತೆಯೇ ಒಂದು ದೊಡ್ಡ ಮಂತ್ರವನ್ನು ನಮಗೆ ತಿಲಕರು ಕೊಟ್ಟಿದ್ದಾರೆ. ಅದು "ಸ್ವರಾಜ್ಯ ನಮ್ಮ ಜನ್ಮಸಿದ್ಧವಾದ ಹಕ್ಕು." ಸುಮಾರು ೪೦ ವರ್ಷಗಳ ಕೆಳಗೆ ದೇಶದ ಪರಿಸ್ಥಿತಿಯನ್ನು ಕಂಡು ದಾದಾಭಾಯಿ ನವರೋಜಿಯವರು ಇದಕ್ಕೆ ನಾಲಿಗೆ ಕೊಟ್ಟರು. ಅವರೇ ನಿಜವಾಗಿಯೂ ಭಾರತದ ವಾಣಿಯು ರೂಪಗೊಂಡು ಹೊರಟದ್ದು ತಿಲಕರು ಬಂದ ಮೇಲೆ. ಸ್ವರಾಜ್ಯವನ್ನು ಬೇಡುವ ಹಾಗಿಲ್ಲ, ಅದು ನಮ್ಮ ಹಕ್ಕು—ಎಂದು ಹೇಳಿದ ಮೇಲೆ.

ತಿಲಕರು ಆಗಿನ ಕಾಲಕ್ಕೆ ಎಂದರೆ ೧೮೮೦-೯೫ ರವರೆಗೆ ದೇಶದಲ್ಲೆಲ್ಲಾ ಕ್ರಾಂತಿಯೆಬ್ಬಿಸಿ ಗುಡುಗಾಡಿದರು. ಶ್ರೀಮಂತರಲ್ಲಿಯೂ ಕೂಡ ಕೊಂಚ ಮಟ್ಟಿಗೆ ಕ್ರಾಂತಿ ಉಂಟು ಮಾಡಿದರು. ಆಗ ತಿಲಕರು ೩೦ ರೂ. ಸಂಬಳ ತೆಗೆದುಕೊಳ್ಳುತ್ತಿದ್ದರು. ಕೇಸರಿ ಪತ್ರಿಕೆಯ ಸಂಪಾದಕರೂ ಆಗಿದ್ದರು. ತಿಲಕರು ಭಿಕ್ಷೆ ಬೇಡುವುದು ಸಲ್ಲದು; ಭಿಕ್ಷೆ ಬಿಟ್ಟು ಕದನ ಮಾಡಬೇಕೆಂದರು. ದೊಡ್ಡ ದೊಡ್ಡ ಬಂಗಲೆಗಳಲ್ಲಿಯೂ ಚೌಕ ಚೌಕನಾಗಿ ಮಾತನಾಡುವವರಲ್ಲಿಯೂ ಅಡಗಿದ್ದ ರಾಜಕೀಯವನ್ನು ಬಿಡ. ಅಧಿಕಾರ, ಶ್ರೀಮಂತಿಕೆ ಇರುವವರಿಗೇ ಸೇರಿದ್ದಲ್ಲ; ಬಡವರದು, ಎಂದು ಅದನ್ನು ನಡುಬೀದಿಗೆ ಎಳೆದು ತಂದರು. ಹಳ್ಳಿಯ ಚಾವಡಿಗಳು, ಅಕ್ಕಪಕ್ಕದ ಕಟ್ಟೆಗಳು ಅವರ ಕಾರ್ಯರಂಗದ ಕಛೇರಿಗಳಾದುವು. ಅಂದಿನಿಂದ ಅವರು ತಮ್ಮ ರಾಜಕೀಯಕ್ಕೆ ಇನ್ನೊಂದು ಪಿಣ್ಣವನ್ನೇ ಕೊಟ್ಟರು. ರಾಜಕೀಯದಲ್ಲಿ ಧರ್ಮ, ವೇದ ಮಂತ್ರಾದಿಗಳನ್ನು ತಂದರು. ಗಣಪತಿ ಪೂಜೆಯೇ ಅವರಿಗೆ ಕಾರ್ಯಕ್ಷೇತ್ರವಾಯಿತು.

ತಿಲಕರು ಪರಭಾಷಾ ಮೋಹಿಗಳಾಗಿರುವ ಜನರನ್ನು ಕುರಿತು ಅನ್ಯಭಾಷೆಗೆ ಮೋಹಗೊಳ್ಳಬೇಡಿರಿ, ಮುಗ್ಧರಾಗಬೇಡಿರಿ, ಎಂದು ತಿಳಿಸಿ ತಮ್ಮ ಪತ್ರಿಕೆಯಾದ ಕೇಸರಿಯನ್ನು ಮರಾಠಿ ಭಾಷೆಯಲ್ಲಿ ಹೊರಡಿಸಿದರು.

ಮಲಗುವ ಹಾಸಿಗೆಯು ಅವರಿಗೆ ಮೇಜು. ಎಂತಹ ನಿರಾಡಂಬರಜೀವಿ ತಿಲಕ್! ದೇಶಕ್ಕೆ ಸರ್ವಸ್ವವನ್ನೂ ಅರ್ಪಿಸಿದವರು ಅವರು ಅವತಾರ ಪುರುಷರು, ಎಂದು ಗಾಂಧೀಜಿ ಹೇಳಿದ್ದಾರೆ.

ತಿಲಕರು ಮೊದಲು ಗಾಂಧೀಜಿಯ ಮಾರ್ಗವನ್ನು ಒಪ್ಪಲಿಲ್ಲ. ರಾಜಕೀಯದಲ್ಲಿ ಚದುರಂಗವಾಡಬೇಕು; ಧಾರ್ಮಿಕ ರಾಜಕೀಯ ಒಂದಾಗಲಾರದು, ಎಂದರು. ಗಾಂಧೀಜಿ ಸತ್ಯದಿಂದ ಗೆಲ್ಲಬೇಕು, ಅಹಿಂಸೆಯಿಂದ ಗೆಲ್ಲಬೇಕು, ಎಂದರು. ತಿಲಕರು ತಮ್ಮ ಕೊನೆಗಾಲದಲ್ಲಿ ತಮ್ಮ ಅವಸಾನ ಕಾಲಕ್ಕೆ ೧೦-೧೫ ದಿನ ಮುಂಚೆ ಗಾಂಧೀಜಿಯವರ ಮಾರ್ಗವೇ ಸರಿಯಾಗಿ ಕಾಣುತ್ತದೆಯೆಂದು ಹೇಳಿದರು. ಅಂದಿನಿಂದ ಅವರ ಆಶೀರ್ವಾದ ಹೊಂದಿ ಗಾಂಧೀಜಿ ಕೆಲಸ ನಡೆಸುತ್ತಿದ್ದಾರೆ. ಕಸ್ತೂರಿ ಬಾ ನಿಧಿ ಮಹಿಳೆಯರ ಉನ್ನತಿಗಾಗಿ ೭೫ ಲಕ್ಷ ಶೇಖರವಾಗಬೇಕು. ನಮ್ಮ ಸಂಸ್ಥಾನದಲ್ಲಿ ೩೦,೦೦೦ ಮಾತ್ರ ಆಗಿದೆ. ಇನ್ನೂ ೧,೭೦,೦೦೦ ಸಾವಿರ ಆಗಬೇಕು. ನಿಧಿಗೆ ಹಿರಿಯರು ಹೊರಟು ಸಹಾಯ ಮಾಡಲಿ ಎಂದು ಹೇಳಿ ಭಾಷಣ ಮುಗಿಸಿದರು.

ಕಸ್ತೂರಿ ಬಾ ನಿಧಿಗೆ ತಿಲಕ್ ಸಂಘದಿಂದ ೫ ರೂ. ಕೊಡಲಾಯಿತು. ಸಭೆಯಲ್ಲಿ ೧೦-೫-೯ ರೂ. ಶೇಖರವಾಯಿತು. ಕಾರ್ಯದರ್ಶಿಯವರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಮದುವೆ ಮಾಡಿಕೊಳ್ಳಬೇಡ ಎಂದು ಚೂರಿ ತಿವಿದರು

ಚಾಮರಾಜನಗರದ ತಾ|| ಸಂತೇಮರಳ್ಳಿ ಬಳಿ ಕೆಳಸೂರು ಗ್ರಾಮದಲ್ಲಿ ೨೪-೭-೪೪ ರಲ್ಲಿ ಮಾದ ಎಂಬುವನನ್ನು ಅವನ ಚಿಕ್ಕಪ್ಪನ ಮಕ್ಕಳು ಗಂಗ, ಮಾಗ ಎಂಬುವರು ಒಬ್ಬೊಬ್ಬರೂ ಒಂದೊಂದು ಕೈ ಹಿಡಿದುಕೊಂಡು ಲಿಂಗ ಎಂಬುವನು ಚೂರಿಯಿಂದ ಹೊಟ್ಟೆಗೆ ತಿವಿದ ದೂರೊಂದು ಬಂದಿದೆ. ಮಾದ ಎಂಬುವನು ತನ್ನ ಹೆಂಡತಿ ಸತ್ತುಹೋಗಿ ತನಗೆ ಅನ್ನ ಬೇಯಿಸಿ ಹಾಕುವವರಿಲ್ಲವೆಂದು ಬೇರೆ ಮದುವೆ ಮಾಡಿಕೊಳ್ಳಲು ಹೆಣ್ಣು ನೋಡಿಕೊಂಡು ಬರಲು ನೂರಾರು ರೂ. ಒಡವೆವಸ್ತ್ರಗಳನ್ನು ಕಟ್ಟಿಕೊಂಡು ಹೊರಟಾಗ್ಗೆ ಅದಕ್ಕೆ ವಿರೋಧಿಸಿ ಮೇಲ್ಕಂಡ ಕೃತ್ಯ ನಡೆಸಿ ಒಡವೆ ವಸ್ತುಗಳನ್ನೆಲ್ಲಾ ಎತ್ತಿಕೊಂಡು ಪರಾರಿಯಾಗಿದ್ದಾರೆಂದು ತಿಳಿಯಬರುತ್ತದೆ.

ದೇವಸ್ಥಾನದಲ್ಲಿ ೧ ಲಕ್ಷ ರೂ. ಕಳುವು

ಪೂನಾದಿಂದ ೩೮ ಮೈಲಿ ದೂರದಲ್ಲಿ ಜೆಜ್ಜೂರಿಯಲ್ಲಿರುವ ಖಂಡೋಬಾ ದೇವಸ್ಥಾನಕ್ಕೆ ೧೫ ಜನ ಡಕಾಯಿತರು ನುಗ್ಗಿ ಒಂದು ಲಕ್ಷ ರೂ. ನ ಜವಾಹಿರಿ, ಚಿನ್ನ ಬೆಳ್ಳಿ ಒಡವೆವಸ್ತುಗಳು ಮತ್ತು ಕೆಲವು ವಿಗ್ರಹಗಳನ್ನು ಹೊತ್ತುಕೊಂಡು ಹೋದರೆಂದು ತಿಳಿದುಬಂದಿದೆ.

ಗಾಂಧೀಜಿ ಪ್ರಯಾಣ

ನಿನ್ನೆ ಮಧ್ಯಾಹ್ನ ಮಹಾತ್ಮರು ಪಂಚಗನಿಯಿಂದ ಪೂನಾಕ್ಕೆ ತೆರಳಿದರು. ದಾರಿಯಲ್ಲಿ ವಾಯ್ ಎಂಬಲ್ಲಿನ ಗೋಶಾಲೆಯನ್ನೂ ಬ್ರಾಹ್ಮಣ ಸಮಾಜವನ್ನೂ ಭೇಟಿ ಮಾಡುವರು.

ರೊಮೆಲ್ಲರಿಗೆ ಗಾಯವಾಗಿಲ್ಲ

ರೊಮೆಲ್ಲರಿಗೆ ಗಾಯವಾಗಿದೆಯೆಂದು ಅನೇಕವಾಗಿ ಹೊರಟಿರುವ ಸುದ್ದಿಗಳನ್ನು ಜರ್ಮನ್ ವಾರ್ತೆಯು ಅಲ್ಲಗಳೆದಿದೆ

ಜರ್ಮನ್ ಹಡಗು ದುರಸ್ತು

ಟರ್ಪಿಟ್ಸ್ ಎಂಬ ೩೫,೦೦೦ ಟನ್ನು ತೂಕದ ಜರ್ಮನ್ ಯುದ್ಧ ಜಹಜು ರಿಪೇರಿ ಮಾಡಲ್ಪಟ್ಟಿದೆ. ಅಡಮಿರಾಲಿಟಿ ಸಮಾಚಾರವನ್ನು ನೀಡಿದೆ

ಘನವಾದ ಸಂಗೀತ ಕಚೇರಿ

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ

೧೭-೮-೪೪ ನೇ ಗುರುವಾರ

ಸಾಯಂಕಾಲ

೬|| ಗಂಟೆಗೆ ಸಂಗೀತ ರತ್ನಾಕರ

ಅರಿಯಾಕುಡಿ ರಾಮಾನುಜ ಐಯ್ಯಂಗಾರ್ ರವರ

ಸಂಗೀತ, ಸಂಗೀತ ರತ್ನ ಅಸ್ಥಾನ ವಿದ್ವಾನ್ ಟಿ. ಚೌಡಯ್ಯನವರ ಪಿಟೀಲು

ವಿದ್ವಾನ್ ಟಿ. ಯಂ. ಪುಟ್ಟಸ್ವಾಮಯ್ಯನವರ ಮೃದಂಗ ನಡೆಯುತ್ತೆ

ಎಲ್ಲರಿಗೂ ಟಿಕೇಟು ಮೂಲಕ ಪ್ರವೇಶ

ಗಂಡಸರಿಗೆ 1-8-0; ಹೆಂಗಸರಿಗೆ 1-0-0

ಮಕ್ಕಳಿಗೆ 0-8-0

ರಣಜಿತ್ ಟಾಕೀಸ್

ಪ್ರತಿ ದಿನ ಮೂರು ಆಟಗಳು

೪-೮-೪೪ ನೇ ಶುಕ್ರವಾರದಿಂದ

ಅಪ್ಮಾನ್

ಮೋತೀಲಾಲ್, ಷಾಮೀನ್, ನಾಗೇಂದ್ರ ಪಾತ್ರವಹಿಸಿರುವರು.

ಅಪೇರಾ ಟಾಕೀಸ್

ಪ್ರತಿ ದಿನ ೩ ಆಟಗಳು

ತಾ. 2-8 44 ರಿಂದ

ಫ್ಯಾಷನ್

ಹಿಂದಿ ಚಿತ್ರ ಪಾತ್ರವಹಿಸುವವರು:

ಸರದಾರ್ ಅಖ್ತರ್-ಚಂದ್ರ ಮೋಹನ್

ಸಬಿತಾದೇವಿ-ಬುದ್ದು-ಅಡ್ವಾನಿ

ಕಾಂತ ಪ್ರಸಾದ್

ಮುಂದಿನ ಬದಲಾವಣೆ

ನಾಗಯ್ಯ, ಮಾಲತಿ, ಸೂರ್ಯಕುಮಾರಿ, ಎಂ ಎಸ್ ಕೃಷ್ಣನ್, ಮಧುರಂ, ಮುಂತಾದವರು ಪಾತ್ರವಹಿಸಿರುವ

ಭಾಗ್ಯಲಕ್ಷ್ಮಿ (ತೆಲುಗು)

ಫೇರ್‌ಪ್ರೈಸ್ ಸೋಡ ಡಿಪೋ

ಮೈಸೂರು ದಿ ಸುಬ್ಬಯ್ಯ ರೋಡ್ (ಸಾಧ್ವಿ ಆಫೀಸಿನ ಹಿಂಭಾಗ) ೩೨೬ ನೇ ನಂಬರಿನ ಮನೆಯಲ್ಲಿ ಹೊಸದಾಗಿ ತೆರೆದಿರುವ ಫೇರ್ ಪ್ರೈಸ್ ಸೋಡ ಡಿಪೋದಲ್ಲಿ ಹಗಲು ಸೋಡ ಮಾರಲ್ಪಡುತ್ತೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ನಾಗೇಶ್ವರ್ ಅಂಡ್ ಕೋ.

ಬ್ರಾಂಚ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕೆ

೧-೫-೧೯೪೪ ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ನಡೆಸುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ

ಟಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ರಂಗೇವೇಟಿ ಮಂಡಿಯಲ್ಲೂ, [illegible] ಎಲ್ಲಾ ಮೊಹಲ್ಲಾ ದೇವರ [illegible] ಬಜಾರು ಮತ್ತು [illegible] ದೊರೆಯುತ್ತೆ.

Edited, printed and published by A R Nagarajan, at the Sadhvi Press, D. Subbiah Road, Mysore.

ಸಂಪುಟ ೩] ಗುರುವಾರ ೩-೮-೪೪ [ಸಂಚಿಕೆ ೧೧

ಜರ್ಮನಿ ತುರ್ಕಿ — ಸಂಬಂಧ ತಪ್ಪಿತು

ಹಿಂದೂಮಹಾಸಭಾಧ್ಯಕ್ಷತೆಗೆ ಡಾ|| ಶ್ಯಾ|| ಮುಖರ್ಜಿ

ಗಾಂಧೀಜಿಗೆ ೧೩೦೦ ಕಾಗದಗಳ ಅರ್ಪಣೆ

ಅಕ್ರಮಬಂಧನ ಮೊಕದ್ದಮೆ

ಮೈಸೂರು ೩

ನಿನ್ನೆ ಪ್ರ|| ನ್ಯಾ|| ಕೋರ್ಟಿನಲ್ಲಿ ಶ್ರೀ ಎಸ್. ಚನ್ನಯ್ಯನವರ ಮೇಲೆ ಹೂಡಿದ್ದ ಅಕ್ರಮಬಂಧನದ ಮೊಕದ್ದಮೆಯಲ್ಲಿ ಬಂಧಿಸಲ್ಪಟ್ಟಿರುವರೆಂದು ಹೇಳಲ್ಪಟ್ಟಿರುವ ಶ್ರೀ ಬಸವರಾಜ್‌ರವರ ವಿಚಾರಣೆ ನಡೆಯಿತು. ಆಗ ಅವರು ಕೊಟ್ಟ ಹೇಳಿಕೆಯ ಸಾರಾಂಶವಿದು :—

ಪ್ರಾಸಿಕ್ಯೂಷನ್ ಪರ

ನಾನು ಡಿ|| ಬೋ|| ಮೆಂಬರು ೧೯-೬-೪೪ನೆಯ ತಾ|| ಮೈಸೂರಿಗೆ ೧೦ ಗಂಟೆಗೆ ಬಂದೆ. ಸಂಜೆ ಶ್ರೀ ಕೆ. ಸಿ. ಸುಬ್ಬಣ್ಣನವರನ್ನು ನೋಡಲು ಕಬ್ಬಾಳ್ಳು ಹಾಸ್ಟೆಲಿಗೆ ಹೋದೆ ಅವರಿರಲಿಲ್ಲ ಮನೆಗೆ ಹೋಗೋಣವೆಂದು ಹೊರಟೆ, ಇಲವಾಲರಸ್ತೆಯಲ್ಲಿ ಶ್ರೀಗಳಾದ ಸಿದ್ದಯ್ಯ, ರಾಚಯ್ಯ ಮುಂತಾದವರು ಬಂದರು. ಶ್ರೀ ಹೆಚ್. ಎಂ. ಚನ್ನಬಸಪ್ಪನವರೂ, ಇನ್ನು ಕೆಲವರೂ ಕಾರಿನಲ್ಲಿ ಬಂದರು. ೧೦ ನಿಮಿಷ ಮಾತನಾಡಬೇಕು ಬನ್ನಿ ಎಂದು ಶ್ರೀ ಚನ್ನಪ್ಪನವರು ಹೇಳಿದರು. ಹೋದೆ. ಕಾಂ|| ಪಾರ್ಟಿ ಆಫೀಸಿಗೆ ಹೋದೆವು. ಪಾರ್ಟಿಯ ಮೀಟಿಂಗು ನಡೆಯುತ್ತಿತ್ತು. ಶ್ರೀಗಳಾದ ದಾಸಪ್ಪ ಚನ್ನಯ್ಯ ಇವರೊಂದಿಗೆ ಮಾತನಾಡಿದೆ. ಕಾಂ|| ಪರ ಓಟು ಕೊಡಬೇಕೆಂದು ಕೇಳಿದರು. ಆಗಲಿ ಎಂದೆ ಶ್ರೀ ಚಿಕ್ಕರಂಗಯ್ಯ ಬಂದು ಮನೆಗೆ ಹೋಗೋಣ ಎಂದು ಕರೆದರು. ಇವರು ಕಳುಹಿಸಿಕೊಡಲಿಲ್ಲ. ಕೆಳಕ್ಕೆ ಬಂದೆವು. ಚನ್ನಯ್ಯನವರ ಕಾರು ಇತ್ತು, ಶ್ರೀ ಇ. ಪಿ. ನಂಜಪ್ಪನವರು ಕೈ ಹಿಡಿದು ಕಾರಿನೊಳಕ್ಕೆ ಕರೆದುಕೊಂಡರು. ಶ್ರೀ ಶಿವಣ್ಣ ಹಿಂದಿನಿಂದ ತಳ್ಳಿದರು ಶ್ರೀ ರಾಚಯ್ಯನವರನ್ನು ನಾನು ಕೈಹಿಡಿದು ಕಾರಿನೊಳಕ್ಕೆ ಕರೆದುಕೊಂಡೆ ಶ್ರೀ ಚನ್ನಯ್ಯನವರ ಮನೆಗೆ ಹೋದೆವು ಅಲ್ಲಿ ಶ್ರೀ ಕೃಷ್ಣಪ್ಪಗೌಡ ಮುಂತಾದವರೂ ಅನೇಕರಿದ್ದರು. ಮನೆಗೆ ಹೋಗುತ್ತೇನೆಂದೆ, ಬಿಡಲಿಲ್ಲ ಶ್ರೀ ರಾಚಯ್ಯನವರನ್ನು ಹೊರಕ್ಕೆ ದಬ್ಬಿ ಕಳುಹಿಸಿದರು ಅವರು ಹೊರಟು ಹೋದರು. ರಾತ್ರಿ ಅಲ್ಲೇ ಊಟಮಾಡಿ ಮಲಗಿದ್ದೆ. ಬೇಗ್ಗೆ ಹೋಗುತ್ತೇನೆಂದೆ ಇರಿ, ಹೋಗೋಣ ಎಂದರು ಅಲ್ಲೇ ತಿಂಡಿ ಊಟ ಆಯಿತು ಪೇಪರ್ ಓದಿದೆ, ರುಮಾಲು ಇಲ್ಲ ಹೋಗಬೇಕು ! ಎಂದೆ. ಅವರೇ ರುಮಾಲು ಕೊಟ್ಟರು. ೩ ಗಂಟೆಗೆ ಡಿ|| ಬೋ|| ಆಫೀಸಿಗೆ ಹೋದೆ. ಅಲ್ಲಿ ಶ್ರೀ ಚನ್ನಯ್ಯನವರು ಮೇಲಕ್ಕೆ ಕರೆದುಕೊಂಡು ಹೋದರು. ಚುನಾವಣೆ ಆದ ನಂತರ ಪೊ|| ಸ|| ಇ|| ರಿಗೆ ಪೋಲೀಸ್ ಸ್ಟೇಷನ್ನಿಗೆ ಹೋಗಿ ಹೇಳಿಕೆ ಕೊಟ್ಟೆ

ಪಾಟಿ ಸವಾಲು

ಇದಕ್ಕೆ ಕೆಲದಿನಗಳ ಹಿಂದೆ ಶ್ರೀ ಇ. ಪಿ ನಂಜಪ್ಪನವರ ಮನೆಗೂ ಶ್ರೀ ಚನ್ನಯ್ಯನವರ ಮನೆಗೂ ಹೋಗಿದ್ದೆ. ನಮ್ಮೂರಿಗೂ ಶ್ರೀ ಚನ್ನಯ್ಯ ಮುಂತಾದವರು ಬಂದಿದ್ದರು, ನಾವೆಲ್ಲಾ ಕಾರಿನಲ್ಲಿ ಕೊಡಗಿನ ಶ್ರೀ ಮಾದಯ್ಯ, ಮಾಂಬಳ್ಳಿಯವರುಗಳನ್ನು ಓಟುಕೇಳಲು ಹೋಗಿದ್ದೆವು. ನಾವು ವಾಪಸು ಬಂದ ಮೇಲೆ ಶ್ರೀ ಇ ಪಿ ನಂಜಪ್ಪನವರ ಮನೆಯಲ್ಲಿದ್ದೆವು. ಶ್ರೀ ಚನ್ನಯ್ಯನವರ ಮನೆಗೆ ಶ್ರೀ ಟಿ. ರಾಮರಾಯರು ಕರೆದುಕೊಂಡು ಹೋಗಿದ್ದರು, ತಿಂಡಿ, ಕಾಫಿ ಅಲ್ಲಿ ತಿಂದಿದ್ದೆ.

ಕಾಂ|| ಆಫೀಸಿಗೆ ನಾನೇ ಹೋದೆ. ಮಾಮೂಲಿಯಾಗಿ ಹೊರಡುತ್ತೇನೆ ಎಂದಾಗ ನಿಮಗೆ ಇಲ್ಲಿ ಸ್ವಂತ ಮನೆಯಿದೆಯೇನು ? ಎಂದು ಕೇಳಿದರು. ಇಲ್ಲ ಧಾವಣನವರ ಮನೆಗೆ ಹೋಗುತ್ತೇನೆ ಎಂದೆ, ಇಲ್ಲೇ ನಮ್ಮಲ್ಲೇ ಯಾರದೂ ಮನೆಯಿಲ್ಲದಿದ್ದರೂ ಉಳಿದುಕೊಳ್ಳಬಹುದಲ್ಲಾ ಎಂದರು ನಮ್ಮ ಕಡೆಯವರು ಕರೆದಾಗ ವಿಶ್ವಾಸ ಉಳಿಸಿಕೊಳ್ಳಬೇಕು ಎಂದು ಹೇಳಿದೆ ಬಲವಂತಮಾಡಿದ್ದಾರೆ ಎಂದು ಯಾರಿಗೂ ಹೇಳಲಿಲ್ಲ. ಹೊರಟಾಗ ಕೂಗಲಿಲ್ಲ. ಹಠಮಾಡಲಿಲ್ಲ ಪೋಲೀಸರಿಗೆ ತಿಳಿಸಲಿಲ್ಲ ಶ್ರೀ ಚನ್ನಯ್ಯನವರ ಮನೆಗೆ ಹೋದೆ ಅವರ ಮನೆಯಲ್ಲಿ ಇನ್ನೂ ಅನೇಕರು ಸದಸ್ಯರುಗಳಿದ್ದರು, ರಾತ್ರಿ ನನ್ನನ್ನು ಕರೆಯಲು ಬಂದವರಿಗೆ ನಾನು ನನ್ನನ್ನು ನಿರ್ಬಂಧಿಸಿದ್ದಾರೆ ಎಂದು ಯಾರಿಗೂ ಹೇಳಲಿಲ್ಲ ಪೋಲೀಸ್ ಸ್ಟೇಷನ್ನಿನಲ್ಲಿ ಕೊಟ್ಟ ಹೇಳಿಕೆಯಲ್ಲಿ ನಾನು ಇನ್ನೊಬ್ಬರಿಗೆ ವೋಟು ಕೊಡಲು ಮಾತುಕೊಟ್ಟಿದ್ದೇನೆ ಎಂದು, ಕಾಂ|| ನವರಿಗೆ ನೀಡಿದೆ ಎಂದು ಹೇಳಲಿಲ್ಲ ಚುನಾವಣೆಗೆ ಬಂದಾಗ ಶ್ರೀ ಸುಬ್ಬಣ್ಣನವರು ಷೇಕ್ ಹ್ಯಾಂಡ್ ಮಾಡಿ ೫ ನಿಮಿಷ ಮಾತನಾಡಿದರು. ಶ್ರೀ ಚನ್ನಯ್ಯನವರು ಆ ವೇಳೆ ಬಂದರು ಪೋಲೀಸರಿಗೆ ಹೇಳಿಕೆ ಕೊಡುವಾಗ ಶ್ರೀ ರಾಜಗೋಪಾಲಯ್ಯಂಗಾರ್ಯರೂ, ಶ್ರೀ ಕೆ. ಸಿ ಸುಬ್ಬಣ್ಣನವರೂ ಇದ್ದರು ಟೀಪಾರ್ಟಿಗೆ ಹೋಗಿದ್ದೆ, ಡಿ|| ಕಾ|| ಗಳಿಗಾಗಲಿ, ಶ್ರೀ ಶೇಷಾದ್ರಿಗಳಿಗಾಗಲಿ ಈ ವಿಷಯ ಹೇಳಲಿಲ್ಲ ಶ್ರೀ ಚನ್ನಯ್ಯನವರ ಮನೆಯಲ್ಲಿದ್ದಾಗ ಶ್ರೀ ವೆಂಕಟಸ್ವಾಮಿರಾಜ ಅರಸಿನವರು ಕಾಂ|| ಗೆ ವೋಟುಕೊಡಿ ಎಂದರು.

ಅನಂತರ ಪುನರ್ವಿಚಾರಣೆಯನ್ನು ಎಳೆದುಕೊಂಡು ಹೋದಾಗ ಯಾತಕ್ಕೆ ಕೂಗಿಕೊಳ್ಳಲಿಲ್ಲ, ಹಠಮಾಡಲಿಲ್ಲ ಎಂಬುದನ್ನು ಹೇಳಿದರು. ಇಲ್ಲಿಗೆ ಇವರ ವಿಚಾರಣೆ ಮುಗಿಯಿತು.

ಕಸ್ತೂರಿ ಬಾ ನಿಧಿ

ಈ ದಿನ ಕಸ್ತೂರಿ ಬಾ ನಿಧಿಗೆ ವಸೂಲಾದ ಹಣ :— ಶ್ರೀಗಳಾದ ನ್ಯಾಷನಲ್ ಎಂಪೋರಿಯಂ ೨೫೧ ರೂ. ಆರ್. ಕೃಷ್ಣ ೫೦ ರೂ ಕಂಬಯ್ಯ ೫೦ ರೂ ರಾಮಸ್ವಾಮಿ-ಎಂಜನಿಯರ್ ವ್ಹಿಂ ಟಿ ಕೊಟ್ಟ ೮೦ ೧೧೧ ರೂ ಎಂ ಎನ್ ರಾಮಚಂದ್ರ ಶೆಟ್ಟಿ ೨೫ ರೂ.

ಕಸ್ತೂರಿ ಬಾ ಸ್ಮಾರಕ ಸಮಿತಿ

ಮೈಸೂರು ೩.

ಕಸ್ತೂರಿ ಬಾ ಸ್ಮಾರಕ ಸಮಿತಿ (ಮೈಸೂರು) ಯ ಸದಸ್ಯರ ಸಭೆ ನಿನ್ನೆ ಸಂಜೆ ಧ|| ಬನುಮಯ್ಯನವರ ಶಾಲೆಯಲ್ಲಿ ಶ್ರೀ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಂಸ್ಥಾನದ ಸಮಿತಿಯ ಕಾರ್ಯದರ್ಶಿ ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರು ಬಂದಿದ್ದರು.

ಮೈಸೂರು ಜಿಲ್ಲಾ ಸಮಿತಿಯನ್ನು ಈ ರೀತಿ ರಚಿಸಲಾಗಿದೆ—

ಅಧ್ಯಕ್ಷರು- ಶ್ರೀ ಹೆಚ್. ಸಿ. ದಾಸಪ್ಪ ಉಪಾಧ್ಯಕ್ಷರು-ಶ್ರೀ ಸಾಲಿಗ್ರಾಮ ಸೀತಾರಾಮಯ್ಯ ಶ್ರೀ ಕೆ. ಸಿ. ಸುಬ್ಬಣ್ಣ ಕಾರ್ಯದರ್ಶಿ-ಶ್ರೀ ಎಸ್. ಚನ್ನಯ್ಯ ಸಹಾಯ ಕಾರ್ಯದರ್ಶಿ-ಶ್ರೀ ಬಿ. ನಾರಾಯಣಸ್ವಾಮಿ ಸದಸ್ಯರುಗಳು-ಶ್ರೀಗಳಾದ ಟಿ ನಾರಾಯಣ, ಜಗರಂ ರಂಗಯ್ಯ, ಬಿ. ನಾಗರಾಜಶೆಟ್ಟಿ, ಜೆ ವೈದ್ಯನಾಥಯ್ಯ, ಗೋಪಾಲ ಸಿಂಗ್, ಧಾಮಮಲ್ ಮೋಟ್‌ಮಲ್, ಮೋಹನಸ್ವಾಮಿ ಮೊದಲಿಯಾರ್, ಹೆಚ್ ಕೆ. ಕುಮಾರಸ್ವಾಮಿ, ಸ್ಟೇಟ್ ಇಂಜನಿಯರಿಂಗ್ ಕಂಪೆನಿ ದಾಮೋದರ್. ಇಂದಿನಿಂದಲೇ ನಿಧಿ ಸಂಗ್ರಹ ಕಾರ್ಯವನ್ನಾರಂಭಿಸಬೇಕೆಂದು ತೀರ್ಮಾನವಾಯಿತು

ಸಿಪಾಯಿಗಳ ಭೇಟಿ

ಮೊನ್ನೆ ಇದ್ದಕ್ಕಿದ್ದಂತೆ ಪಂಚಗನಿಯಲ್ಲಿ ಮಹಾತ್ಮರ ಕ್ಯಾಂಪಿನಲ್ಲಿ ೧೫ ಜನ ಸಿಪಾಯಿಗಳು ಕಾಣಿಸಿಕೊಂಡರು. ಅವರು ಗಾಂಧೀಜಿಯವರನ್ನು ನೋಡಬೇಕೆಂದು ಬಹಳ ಆಸೆ ಪಟ್ಟರು. ನೋಡಲು ಬಿಡಲಾಯಿತು. ಕೆಲವರು ಷೇಕ್ ಹ್ಯಾಂಡ್ ಕೊಟ್ಟರು. ಕೆಲವರು ಭಾರತೀಯ ರೀತ್ಯಾ ಕೈ ಮುಗಿದು ಮರ್ಯಾದೆ ಮಾಡಿದರು ಹೊರಡುವಾಗ ನಾವು ಪ್ರಜಾತಂತ್ರಕ್ಕಾಗಿ ಹೋರಾಡುತ್ತಿದ್ದೇವೆಂದೂ, ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯ ದೊರೆಯದೆಂದೂ ಹೇಳಿ ಹೋದರು.

೧೪ ಗವರ್ನರುಗಳು ವಜಾ

ಜಪಾನ್ ಸರ್ಕಾರದ ನೂತನ ಮಂತ್ರಿಗಳು ಈಗಾಗಲೇ ಒಸಾಕಾ, ಕನಗ್ವಾ, ನಾಗಸ್ಕಿ ಮುಂತಾದ ೧೪ ಪ್ರಾಂತ್ಯಗಳಲ್ಲಿದ್ದ ಗವರ್ನರುಗಳನ್ನು ವಜಾ ಮಾಡಿ ಹೊಸಬರನ್ನು ನೇಮಿಸಿದ್ದಾರೆ ಜಪಾನಿನಲ್ಲಿ ೪೭ ಜನ ಗವರ್ನರುಗಳಿದ್ದಾರೆ

ತುರ್ಕಿಯು ಜರ್ಮನಿ ಸಂಬಂಧ ಬಿಟ್ಟಿತು

ತುರ್ಕಿಯು ಜರ್ಮನಿಯ ಸಂಬಂಧ ಬಿಡಲು ತೀರ್ಮಾನ ಮಾಡಿದೆಯೆಂದು ಗ್ರಾಂಡ್ ನ್ಯಾಷನಲ್ ಅಸೆಂಬ್ಲಿಯಲ್ಲಿ ತುರ್ಕಿ ಪ್ರಧಾನಮಂತ್ರಿಯಾದ ಮಿ|| ಸರಜೋಗ್ಲುರವರು ಹೇಳಿದರು. ಹೀಗೆಂದ ಮಾತ್ರಕ್ಕೆ ತುರ್ಕಿಯು ಯುದ್ಧಕ್ಕಿಳಿಯುವುದೆಂದು ಅರ್ಥವಲ್ಲ. ಜರ್ಮನಿಯ ಸಂಬಂಧ ಮಾತ್ರ ತ್ಯಜಿಸಿದೆ. ಜರ್ಮನಿಯ ರೀತಿಯ ಮೇಲೆ ಮುಂದಿನದೆಲ್ಲಾ ನಿಂತಿದೆ ಎಂದೂ ಸ್ಪಷ್ಟಪಡಿಸಿದರು

ಮುಂದಿನ ಹಿಂದೂ ಮಹಾ ಸಭಾಧ್ಯಕ್ಷರು

ಮುಂದಿನ ಹಿಂದೂ ಮಹಾಸಭೆಗೆ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಅಧ್ಯಕ್ಷರಾಗಬೇಕೆಂದೂ, ಅವರು ಹಿಂದೂ ಜನಾಂಗಕ್ಕಾಗಿ ಸಲ್ಲಿಸಿರುವ ಅಪಾರ ಸೇವೆಗೆ ಈ ಹೆಚ್ಚಿನ ಗೌರವವನ್ನು ಅವರಿಗೆ ಕೊಡಬೇಕೆಂದೂ ಶ್ರೀ ಸಾವರ್ಕರರು ಸೂಚಿಸಿದ್ದಾರೆ

೧೩೦೦ ಕಾಗದಗಳು

ಗಾಂಧೀಜಿ ಬಂಧನದಲ್ಲಿದ್ದಾಗ ತಡೆಯಲ್ಪಟ್ಟಿದ್ದ ೧೩೦೦ ಕಾಗದ, ಪ್ಯಾಕೆಟ್ಟುಗಳನ್ನು ಈಗ ಗಾಂಧೀಜಿಗೆ ಸರ್ಕಾರದವರು ಕಳುಹಿಸಿದರು. ಇದರಲ್ಲಿ ಕಸ್ತೂರಿ ಬಾ ರವರ ಕಾಗದಗಳೂ ಇದ್ದುವು.

ಹತ್ತು ಲಕ್ಷ ಮಾರ್ಕಿನ ಬಹುಮಾನ

"ಹಿಟ್ಲರನನ್ನು ಕೊಲ್ಲಲೆತ್ನಿಸಿದ ಕಾರ್ಲ್ ಗೊರ್ಡಲರ್ ರವರನ್ನು ಹಿಡಿದು ಕೊಡಿರಿ. ೧೦ ಲಕ್ಷ ಮಾರ್ಕುಗಳ ಬಹುಮಾನ ಕೊಡಲಾಗುತ್ತೆ" ಎಂಬುದಾಗಿ ಜರ್ಮನ್ ರೇಡಿಯೋ ಒಂದರಲ್ಲಿ ೧ನೆ ತಾ|| ರಾತ್ರಿ ಪ್ರಚಾರವಾಯಿತು.

ಆದರೆ ಈ ವಿಚಾರದಲ್ಲಿ ಒಂದು ಆಶ್ಚರ್ಯವುಂಟಾಗಿದೆ ಡಾ|| ಗೊರ್ಡಲರ್ ರವರನ್ನು ಡಾ|| ಷಾಚ್ ರವರು ಯುದ್ಧಾರಂಭಕ್ಕೆ ಮುಂಚೆಯೇ ಒಂದುವೇಳೆ ಹಿಟ್ಲರನ ಏರ್ಪಾಟುಗಳು ನಡೆಯದೆ ಹೋದರೆ ಹಿಂದಿನ ಸರ್ಕಾರ ಸ್ಥಾಪನೆಯ ಬಗ್ಗೆ ಚರ್ಚೆಮಾಡಲು ಇಂಗ್ಲೆಂಡಿಗೆ ಕಳುಹಿಸಿದ್ದರಂತೆ.

ಮಂತ್ರಿಮಂಡಲ ಸಭೆ

ಸ್ವಂ.ವ.] ಬೆಂಗಳೂರು ೩

ನಿನ್ನೆ ಮಧ್ಯಾಹ್ನ, ದಿವಾನರ ಅಧ್ಯಕ್ಷತೆಯಲ್ಲಿ ಮಂತ್ರಿಮಂಡಲ ಸಭೆ ಸೇರಿದ್ದು, ಸಂಜೆ ೫ ಘಂಟೆಯವರೆಗೂ ಸಮಾಲೋಚನೆ ನಡೆಯಿತು ಹಲವು ಡೆಪ್ಯುಟಿ ಕಮೀಷನರುಗಳ ವರ್ಗಾವರ್ಗ, ಅಮಲ್ದಾರ ಕಛೇರಿಯಲ್ಲಿ ಅಡೀಷನಲ್ ಅಸಿಸ್ಟೆಂಟ್ ಸೆಕ್ರೆಟರಿಗಳನ್ನು ನಿಯಮಿಸುವ ವಿಚಾರ, ಹಲವು ಅಸಿಸ್ಟೆಂಟ್ ಕಮೀಷನರುಗಳ ವರ್ಗಾವರ್ಗ, ಮೊದಲಾದವು ಸಮಾಲೋಚನೆಗೆ ಬಂದಿದ್ದವೆಂದು ಹೇಳಬಹುದಾಗಿದೆ.

ಮೈಸೂರಿಗೆ ಹೊಸ ಸಿಟಿ ಮ್ಯಾಜಿಸ್ಟ್ರೇಟರು

ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಮಿ|| ಮಹಮದ್ ಅಹಮದ್ ರವರನ್ನು ಮೈಸೂರು ನಗರದ ಮ್ಯಾಜಿಸ್ಟ್ರೇಟರನ್ನಾಗಿ ನೇಮಕ ಮಾಡಲಾಗಿ ತಿಳಿದುಬಂದಿದೆ

ಮಂತ್ರಿಗಳ ಪೋರ್ಟ್‌ಫೋಲಿಯೋ ಬದಲಾವಣೆ

ಮಂತ್ರಿಗಳಿಗೆ ಸಿಕ್ಕಿರುವ ಪೋರ್ಟ್‌ಫೋಲಿಯೋಗಳಲ್ಲಿ ಕೆಲಕೆಲವು ಬದಲಾವಣೆಗಳಾಗುವವೆಂದು, [illegible] ಯಲ್ಲಿ ಹೇಳಿಕೊಳ್ಳಲಾಗುತ್ತಿದೆ.

ಪೋಲೀಸಿನವನನ್ನು ಒದ್ದ

ಸ್ವಂ. ಸು.] ಬೆಂಗಳೂರು ೩

ಮುನಿಸ್ವಾಮಿ ಎಂಬ ಕಾನ್ಸ್ಟೇಬಲ್ ಗೋವಿಂದಪ್ಪ ಎಂಬ ದಫೇದಾರರನ್ನು ಒದೆದನೆಂಬ ಆಪಾದನೆ ಮೇಲೆ ಬೆಂಗಳೂರು ಎರಡನೇ ಮ್ಯಾ|| ಕೋರ್ಟಿನಲ್ಲಿ ಮೊಕದ್ದಮೆ ಬಂದಿದೆ.

ವೇಶ್ಯಾಗೃಹಕ್ಕೆ ಶಿಕ್ಷೆ

ರಾಜಮ್ಮ ತಿಪ್ಪಮ್ಮ ಎಂಬುವರು ವ್ಯಭಿಚಾರ ಗೃಹವನ್ನು ನಡೆಸುತ್ತಿದ್ದರೆಂಬ ಆಪಾದನೆ ಮೇಲೆ ಬೆಂಗಳೂರು ಚಿಕ್ಕಪೇಟೆ ಪೋಲೀಸರು ಹೂಡಿದ ಮೊಕದ್ದಮೆಯಲ್ಲಿ ಅವರಿಗೆ ತಲಾ ೨೫ ರೂ. ದಂಡ ಬಿತ್ತು.

ಸಾಹುಕಾರ ದರೋಡೆ

ಒಂಟಿ ಸಾಹುಕಾರರ ಬ್ಯಾಂಕುಗಳಿಂದ ಹಣವನ್ನು ಲೂಟಿ ಮಾಡಿಸಿದರೆಂದು ಹೇಳಲಾದ ಹಲವು ಜನಗಳನ್ನು ಬೆಂಗಳೂರು ಪೋಲೀಸಿನವರು ಒಂದು ಟ್ಯಾಕ್ಸಿಯಲ್ಲಿ ಬಹಳ ಸಾಹಸದಿಂದ ಪತ್ತೆ ಮಾಡಿದ್ದಾರೆ. ಇನ್ನೂ ಕೆಲವರು ಸಿಕ್ಕಿಲ್ಲ.

ಸಿಮೆಂಟ್ ಕಾಂಕ್ರೀಟ್ ರಸ್ತೆ

ಈ ವರ್ಷದ ಯೋಜನೆಯೊಂದರ ಪ್ರಕಾರ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಮಾಡಲು ಏರ್ಪಡಿಸುವುದಾಗಿ ದಿವಾನರು ಪ್ರಜಾಪ್ರತಿನಿಧಿ ಸಭೆಯಲ್ಲಿ ಹೇಳಿದ್ದಂತೆ ಈ ವರ್ಷ ಮೈಸೂರಿನಿಂದ ಶ್ರೀರಂಗಪಟ್ಟಣ, ಬೆಂಗಳೂರಿನಿಂದ ಹೊಸಕೋಟೆ, ಬೆಂಗಳೂರಿನಿಂದ ನೆಲಮಂಗಲದವರೆಗೆ ಸಿಮೆಂಟ್ ಕಾಂಕ್ರೀಟ್ ಹಾಕಲಾಗುವುದು.

ಸೂಚನೆ

ಉಪಾಕರ್ಮ ಪ್ರಯುಕ್ತ ನಾಳೆ 'ಸಾಧ್ವಿ' ಪತ್ರಿಕೆ ಪ್ರಕಟವಾಗುವುದಿಲ್ಲ

ಅಪೇರಾ ಟಾಕೀಸ್

ಪ್ರತಿ ದಿನ ೩ ಆಟಗಳು

ತಾ. 2 8-44 ರಿಂದ

ಫ್ಲಾಷ್‌ಬ್ಯಾಕ್

ಹಿಂದಿ ಚಿತ್ರ ಪಾತ್ರವಹಿಸಿರುವವರು:

ಸರದಾರ್ ಅಖ್ತರ್-ಚಂದ್ರಮೋಹನ್

ಸವಿತಾದೇವಿ-ಬುದ್ದು-ಅಡ್ವಾನಿ

ಕಾಂತ ಪ್ರಸಾದ್

ಪೌರಸಭಾ ಮೀಟಿಂಗು

ಸ್ವಂ ಸು.] ಚಾಮರಾಜನಗರ ೩೧

ತಾ|| ೩೦-೭-೪೪ ನೇ ಬೆಳಗ್ಗೆ ಈ ಊರಿನ ಹೊಸ ಕೌನ್ಸಿಲ್ ಸೇರಿತ್ತು. ಈ ಪೌರಸಭೆಗೆ ಉಪಾಧ್ಯಕ್ಷರು ಆವಶ್ಯಕವೆಂಬ ಸೂಚನೆಯನ್ನು ಶ್ರೀ ಸಿ. ಡಿ. ನಾರಾಯಣರಾಯರು ಸೂಚಿಸಿ, ಅನುಮೋದಿಸಲ್ಪಟ್ಟು ಆಗಸ್ಟ್ ತಿಂಗಳು ಕೊನೇ ವಾರದಲ್ಲಿ ಉಪಾಧ್ಯಕ್ಷಸ್ಥಾನಕ್ಕೆ ಚುನಾವಣೆ ನಡೆಯಬೇಕೆಂದು ತೀರ್ಮಾನಿಸಿರುವುದಾಗಿ ತಿಳಿಯಬರುತ್ತೆ.

ಈ ಪೌರಸಭೆಗೆ ಸರಕಾರಿ ಅಧ್ಯಕ್ಷರು ಬೇಕೆಂದು ಕೇಳಿರುವ ವಿಚಾರವಾಗಿ ಸ್ವಲ್ಪ ಚರ್ಚೆ ನಡೆಯಿತು. ೬ ತಿಂಗಳಾದರೂ ಸಂಬಂಧಪಟ್ಟ ರಿಕಾರ್ಡು ಸರ್ಕಾರಕ್ಕೆ ಹೋಗಿರುವುದಿಲ್ಲವೆಂದು ತಿಳಿದು ವಿಷಯದ ಮೇಲೆ ಟೀಕೆಗಳಾದುವು.

ಬಜೆಟ್ ಮಾರ್ಗದ ಕಾಲ ೧-೦೫ ನಿಮಿಷಗಳಿದ್ದುದನ್ನು ೧ ಗಂಟೆಗೆ ಹೆಚ್ಚಿಸಿರುವುದನ್ನು ರಿಕಾರ್ಡು ಮಾಡಲಾಯಿತು. ಆಫೀಸು ಮುತ್ಸದ್ದಿಗಳ ಸಂಬಳ ಹೆಚ್ಚಿಸಿದೆಯೆಂಬ ಅಂಶ ರಿಕಾರ್ಡು ಮಾಡಲಾಯಿತು. ಆದರೆ ನವರ ಸಂಬಳ ಹೆಚ್ಚಿಸಬೇಕೆಂಬ ರಿವಾಜು ಆಗಿ, ಕಳೆದ ಸಾಲಿನ ಬಡ್ಜೆಟ್ಟಿನಲ್ಲಿ ತೀರ್ಮಾನವಾಗಿತ್ತು. ಹೆಚ್ಚಿಗೆ ಸಂಬಳ ಕಳೆದ ಸಾಲಿನಿಂದ ಕೊಡಬೇಕೆ ಅಥವ ಈ ಸಾಲಿನಿಂದ ಕೊಡಬೇಕೆ-ಎಂಬ ಅಂಶ ಸರಿಯಾಗಿ ಅರ್ಥವಾಗದೆ, ಗೊಂದಲ ಗೊಂದಲವುಂಟಾಗಿದೆ.

ಆಹಾರ ಪರಿಸ್ಥಿತಿ

ಆಹಾರದ ಹಂಚಿಕೆಯು ಸಮರ್ಪಕವಾಗಿಲ್ಲ. ಸರಬರಾಜು ಸ್ವಲ್ಪ ಉತ್ತಮವಾಗಿದೆಯೆಂದು ಕೆಲವರೂ ಹಂಚಿಕೆ ಹಿಂದಿದ್ದಕ್ಕಿಂತ ಅವ್ಯವಸ್ಥಿತವಾಗಿದೆ. ಸದರಿ

MEDICINES

Take your requirements from

RAGHULAL & CO.,

1749, Sayaji Rao Road.

(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ,

1748, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು

ಗೃಹ ಕೈಗಾರಿಕೆಗಳು

ಶ್ರೀ ಬಿ. ಟಿ ಅಪ್ಪಾಜಿಗೌಡ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಗೃಹ ಕೈಗಾರಿಕೆಗಳ ಸಮಿತಿ ಸಭೆ ಸೇರಿ ಗೋಣಿ ಮತ್ತು ಮಡಿಕೆ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಪಾವಗಡ ಮತ್ತು ಇಡಗೂರುಗಳಲ್ಲಿ ಚರ್ಮ ಹದ ಕೊಡುವ ಕೈಗಾರಿಕೆಯನ್ನು ಆರಂಭಿಸುವಂತೆಯೂ ಗೊತ್ತಾಯಿತು.

ದರೋಡೆಯವರ ದಸ್ತಗಿರಿ

ಚಿತ್ರದುರ್ಗ ಜಿಲ್ಲೆಯ ಚಿಕ್ಕಪ್ಪನಹಳ್ಳಿಯಲ್ಲಿ ದರೋಡೆ ಮಾಡಿದರೆಂದು ಹೇಳಲಾದವರನ್ನು ಪೋಲೀಸಿನವರು ಪತ್ತೆ ಹಚ್ಚಿ ದಾವಣಗೆರೆ, ಹರಿಹರ ಮುಂತಾದ ಕಡೆ ಬಂಧಿಸುತ್ತಿದ್ದಾರೆ. ಅವರಲ್ಲಿ ಕೆಲವು ಪಿಸ್ತೂಲುಗಳೂ ಸಿಕ್ಕಿವೆ

ಸರ್ವಿಸ್ ಬಡ್ತಿ

ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಶ್ರೀ ಅನಂತಾಳ್ವಾರಂಗಾರರಿಗೆ ೪೪ ನೇ ಸೆಪ್ಟೆಂಬರ್ ೩ ರಿಂದ ಶ್ರೀ ಹೆಚ್. ಡಿ ಪುಟ್ಟಯ್ಯನವರಿಗೆ ಆಗಸ್ಟ್ ೫ ರಿಂದ ಒಂದು ವರ್ಷ ಸರ್ವಿಸ್ ಬಡ್ತಿಯು ದೊರೆತಿದೆ.

ವಿಚಾರವಾಗಿ ಸಂಸ್ಥಾನದ ದಿವಾನರಿಗೆ ಪೌರರ ಅಹವಾಲು ಹೋಗಿರುವುದಾಗಿ ಸಮಾಚಾರವಿದೆ.

ಇಲ್ಲಿ ಸರ್ಕಾರಿ ಡಿಪೋಗಳಲ್ಲಿ ಈ ಬ್ಲಾಕ್ ಮಾರ್ಕೆಟ್ ನಡೆಯುತ್ತಿರುವುದಾಗಿ ಗೊಂದಲವೆದ್ದಿದೆ. ಸದರಿ ವಿಚಾರವಾಗಿ ಮೋಸದಿಂದ ಸಾಗುತ್ತಿದ್ದ ೯ ಮಣ ಸಕ್ಕರೆಯನ್ನು ತಾ|| ೩೦-೭-೪೪ ರಲ್ಲಿ ಪೋಲೀಸಿನವರು ಪತ್ತೆ ಹಚ್ಚಿದ್ದರು.

ರಣಜಿತ್ ಟಾಕೀಸ್

ಪ್ರತಿ ದಿನ ಮೂರು ಆಟಗಳು

4-8-44 ರಿಂದ

ಅರ್ಮಾನ್

ಮೋತೀಲಾಲ್, ಶಮೀಂ,

ನಾಗೇಂದ್ರ ಪಾತ್ರವಹಿಸಿರುವರು.

ಉಪಾಕರ್ಮ

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಬೆಳಗ್ಗೆ ಈ ರೀತಿ ನಡೆಯುತ್ತೆ.

ಋಗುಪಾಕರ್ಮ—ವೇ|| ಬ್ರ|| ಶ್ರೀಗಣಪತಿ-ಘನ ಪಾಠಿಗಳು ಟಿ. ಕೃಷ್ಣಮಾಚಾರ್ಯರು.

ಶುಕ್ಲಯಜುರ್ವೇದ—ಬಿ. ಶ್ಯಾಮಾವಧಾನಿಗಳು

ಯಜುರುಪಾಕರ್ಮ— (ಶ್ರೀ ವೈಷ್ಣವ) ಸಂಕೇತಿಪಟ್ಟಿ ವೆಂಕಟಾಚಾರ್ಯರು.

ವೈಷ್ಣವ—ನೆರೂರು ಕೃಷ್ಣಾಚಾರ್ಯರು.

ಸ್ಮಾರ್ತ — ಬಿ. ಶ್ರೀನಿವಾಸಾವಧಾನಿಗಳು

ಬೋಧಾಯನ—ಪಿ ಶಂಕರಶಾಸ್ತ್ರಿಗಳು.

ಸಾಮೋಪಾಕರ್ಮ—ಆರ್. ನಾರಾಯಣ ದೀಕ್ಷಿತರು.

ಸಂಗೀತ ಕಛೇರಿ

ಪೂರ್ಣಿಮಾ ಪ್ರಯುಕ್ತ ೪ ನೆಯ ತಾ|| ರಾತ್ರಿ ೯ ಗಂಟೆಗೆ ಡಿ. ಸುಬ್ಬಯ್ಯರೋಡಿನಲ್ಲಿರುವ ಶ್ರೀರಾಮ ಪ್ರೆಸ್ ಮಹಡಿಯ ಮೇಲೆ ಪ್ರಿನ್ಸಿಂಗ್ ಕಾಲೇಜ್ ಡ್ರಾಯಿಂಗ್ ಉಪಾಧ್ಯಾಯರಾದ ವಿದ್ವಾನ್ ಸಿ. ರಂಗಯ್ಯನವರಿಂದ ಸಂಗೀತವು ನಡೆಯುವುದು. ಸರ್ವರಿಗೂ ಆಹ್ವಾನ ಉಂಟು

ಪ್ರಮುಖ ಕಾಂಗ್ರೆಸ್ ಕೆಲಸಗಾರರಾದ ಕೃಷ್ಣರೆಡ್ಡಿಯವರನ್ನು ಜೋಳಾರ್ಪೇಟೆಯಲ್ಲಿ ದಸ್ತಗಿರಿ ಮಾಡಲಾಗಿದೆ.

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ.

Edited, printed and published by A R. Nagarajan, at the Sadhvi Press, D. Subbiah Road, Mysore.

ಇನ್ನೊತ್ತೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು! ಕೈಗಾರಿಕೆ ಸಂಸ್ಥೆಗಳು!

ಬಾಲಿಕಾ ಶಾಲೆಗಳು! ಮಹಿಳಾ ಚಿಕಿತ್ಸಾಲಯಗಳು!

ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.

ನಮ್ಮಲ್ಲಿ ವಸೂಲಾದ ಹಣ ನಮಗಾಗಿಯೇ ವಿನಿಯೋಗ.

ಟಿ. ಗೋಪಾಲಕೃಷ್ಣ ಶೆಟ್ಟಿ, ಖಜಾಂಚಿ. ಎಸ್. ಚೆನ್ನಯ್ಯ, ಕಾರ್ಯದರ್ಶಿ. ಹಿರಳ್ಳಿ ದಾಸಪ್ಪ, ಅಧ್ಯಕ್ಷ

ಸ್ತ್ರೀಯರ ಸೌಖ್ಯಕ್ಕೆ

ತಾ|| ೧-೧-೧೯೪೩ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಹೋಟೆಲ್ಲು ದೀನ ಚಿಲ್ಲರೆ ಅಂಗಡಿಗಳಿಗೆ ಸಕ್ಕರೆ ಕೋಟಾಕ್ಕೆ ಪ್ರತಿಯಾಗಿ ಬೂರಾ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಮಹಿಳೆಯರಿಗೆ ಸೌಭಾಗ್ಯಪ್ರದವಾದ ಮತ್ತು ಕರಗಳ ಸೌಂದರ್ಯಕ್ಕೆ ಸಹಾಯಕಾರಿಯಾದ ನವನವೀನ ಬಳೆಗಳಿಗೆ

ನಿಮ್ಮ ಮೆಚ್ಚುಗೆಗೆ ಪಾತ್ರವಾದ

ಪ್ಲಾಸ್ಟಿಕ್ ತೋಲಾಬಳೆಗಳು ಕೆಮಿಕಲ್ ದಂತದ ಬಳೆಗಳು

ದೇವರಾಜ ಮಾರ್ಕೆಟ್, ಸೌಭಾಗ್ಯ ಸ್ಟೋರ್ಸಿಗೆ ಬನ್ನಿರಿ ಮೈಸೂರು.

ಸಂಪುಟ ೩] ಶನಿವಾರ ೫-೮-೪೪ [ಸಂಚಿಕೆ ೧೨

ದಿವಾನರ ಭೇಟಿಗಾಗಿ ಕಾಂ॥ ಅಧ್ಯಕ್ಷರ ಪತ್ರ

ಮಿಟಕಿನಾ ನಗರವು ಮಿತ್ರರ ವಶವಾಯಿತು

ಜರ್ಮನಿಯ ಮತ್ತೆರಡು ಹೊಸ ಅಸ್ತ್ರಗಳು

ಕಾಂ॥ ಕೆಲಸಗಾರರ ಸಭೆ

ಮೈಸೂರು, ೩

ಮೈಸೂರು ಜಿಲ್ಲೆಯ ಕಾಂ॥ ಕೆಲಸಗಾರರ ಸಭೆ ಸ್ವರಸವ್ಯ ೧೮ರ ಗ ನೆಯ ತಾ॥ ನಡೆಯುತ್ತದೆಂದು ತಿಳಿಯಬರುತ್ತದೆ.

ಇಸ್ಪೀಟ್ ಆಟ

ನಜರ್‌ಬಾದ್ ಪಾಪಣ್ಣ ಗಲ್ಲಿಯಲ್ಲಿರುವ ಗೋವಿಂದಯ್ಯ ಎಂಬುವರ ಮನೆಯಲ್ಲಿ ಇಸ್ಪೀಟ್ ಆಟದ ಜೂಜು ನಡೆಯುತ್ತಿತ್ತೆಂದು ದ್ವಿತೀಯ ನ್ಯಾಯಾಧೀಶರು ೭ ಜನಂಗೆ ತಲಾ ೨೫ ರೂ. ದಂಡವನ್ನೂ ಮನೆಯಾತನಿಗೆ ೫೦ ರೂ ದಂಡವನ್ನೂ ವಿಧಿಸಿದರು.

ರೈಲ್ವೆ ಬಸ್ಸುಗಳು

ಇತ್ತೀಚೆಗೆ ರೈಲ್ವೆ ಪ್ರಯಾಣವು ಬಹು ಕಠಿಣವಾಗಿರುವುದರಿಂದ ನಾಗರಿಕರಿಗೆ ಮತ್ತಷ್ಟು ಸೌಕರ್ಯವನ್ನು ಕಲ್ಪಿಸುವ ಸಲುವಾಗಿ ನಮ್ಮ ಸರ್ಕಾರದವರು ಸಂಸ್ಥಾನದ ಕೆಲವು ರೈಲ್ವೆ ಲೈನಿನ ಬಾಜೂ ಹಾದಿಯಲ್ಲೂ ಮತ್ತು ಒಳರಸ್ತೆಗಳಲ್ಲಿಯೂ ಸಂಚರಿಸಲು ರೈಲ್ವೆ ಬಸ್ಸುಗಳನ್ನು ಓಡಿಸತಕ್ಕ ವ್ಯವಸ್ಥೆ ಮಾಡುವರು. ರೈಲ್ವೆ ದರಗಳಂತೆ ಇದರಲ್ಲೂ ಟಿಕೆಟ್ ವ್ಯವಸ್ಥೆಯಾಗುವುದು. ಇದಕ್ಕಾಗಿ ನೂರಾರು ಮೋಟಾರು ಬಸ್ಸುಗಳನ್ನು ಕೊಳ್ಳಲು ಸರ್ಕಾರವು ಏರ್ಪಡಿಸಿದೆ. ಪ್ರಾಯಶಃ ಇದು ಬರಲಿರುವ ಜನವರಿ ತಿಂಗಳಿಂದ ಜಾರಿಗೆ ಬರುತ್ತದೆಂದು ತಿಳಿಯಬರುತ್ತದೆ. ಎಂ. ಎಸ್. ಎಂ. ರೈಲ್ವೆ ಕಂಪೆನಿಯವರೂ ಇಂಥ ನೂರಾರು ಬಸ್ಸುಗಳನ್ನು ಇದೇ ರೀತಿ ಏರ್ಪಡಿಸುವುದಾಗಿ ತಿಳಿಯಲಾಗಿದೆ.

ಕಸ್ತೂರಿಬಾಯಿ ಸ್ಮಾರಕ ನಿಧಿ

ಬೆಂಗಳೂರಿನ ನಿಧಿಗೆ ರಾಜಧಾನಿಯಲ್ಲಿ ಈಗಾಗಲೇ ಬಂದಿರತಕ್ಕ ಚಂದಾ ನಿಧಿಯ ಜೊತೆಗೆ ಕೆಳಗೆ ಕಾಣಿಸಿರುವ ಮಹನೀಯರುಗಳೂ ಸಹ ತಮ್ಮ ಸಹಾಯವನ್ನು ಸಲ್ಲಿಸಿರುವರು. ಶ್ರೀಯುತರುಗಳಾದ ೧ ಟಿ. ಚಂದ್ರಶೇಖರಗೌಡರು ೨೫೧ ೨ ಜಿ. ಆರ್. ರಾಮಯ್ಯನವರು ೨೦೧ ೩ ಬಿ. ತಿಮ್ಮಯ್ಯನವರು ೨೦೧ ೪ ಚೌಡಯ್ಯನವರು ೧೦೧ ೫ ಜಯ ಜಂತ್ ಕೋ ೧೦೧ ೬ ಸಿಂಕ್ಲೈರ್ ೨೦೦ ೭ ಪುರ.ಪೋತ್ರ ಮರಾಪ್ ನಿಕ್ಸಂ ೩೧ ೮ ಬಿ. ನಂಜಪ್ಪ ರಾವ್ ೨೫ ೯ ಎಂ. ಶೇಷಗಿರಿರಾಯರು ೨೫ ೧೦ ಉಜ್ವಲ ಸಾಹಿತ್ಯಭಂಡಾರ ೧೦ ಒಟ್ಟು ೧೧೪೦-೦-೦ ರೂ. ಈ ನಿಧಿಯ ವ್ಯವಸ್ಥೆ ಮಾಡಲು ಬಂದಿದ್ದ ಶ್ರೀ ಸಿದ್ದಮ್ಮನಹಳ್ಳಿ ಕೃಷ್ಣಶರ್ಮರವರು ಇಂದು ವಧ್ಯಾಹ್ನ ಮೇಲ್ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು. ಪುನಃ ೪-೫ ದಿನಗಳನಂತರ ಬರುವರು. ಅವರೂ ಮತ್ತು ಶ್ರೀ॥ ಹುಲ್ಲಿ ದಾಸಪ್ಪನವರೂ ಸೇರಿ ಈ ನಿಧಿಯ ಶೇಖರಣೆಗಾಗಿ ಸಂಸ್ಥಾನದಲ್ಲಿ ಸಂಚಾರಮಾಡುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆಂದು ತಿಳಿದುಬಂದಿದೆ.

ಬಾಲ್ಟಿಕ್ಕಿನಲ್ಲಿ ರಷ್ಯನರು

ಸೋವಿಯೆಟ್ ಟ್ಯಾಂಕುಪಡೆಗಳು ಕ್ರೀ ... ನಗರವನ್ನು ವಶಮಾಡಿಕೊಂಡು ಜರ್ಮನ್ ದಳಗಳನ್ನೆಲ್ಲಾ ನಾಶಮಾಡಿ ಬಾಲ್ಟಿಕ್ ಸಮುದ್ರದತ್ತ ಇದರಿಂದ ಬಾಲ್ಟಿಕ್ 'ಪ್ರದೇಶದಲ್ಲಿರುವ ಜರ್ಮನ್ ಪಡೆಗಳ ... ಪ್ರಶ್ಯ ... ಸಂಬಂಧ ... ಕಡಿದುಹೋಗಿದೆ.

ಮಿಟಕಿನಾ ಪತನ

ಅನೇಕ ತಿಂಗಳಿಂದ ಪ್ರತಿಭಟಿಸುತ್ತಿದ್ದ ಉತ್ತರ ಬರ್ಮಾದ ಜಪಾನಿ ಪ್ರಮುಖ ನೆಲೆಯಾದ ಮಿಟಕಿನವನ್ನು ಅಮೇರಿಕ ಮತ್ತು ಚೀಣಾ ಸೇನೆಗಳು ಹಿಡಿದಿವೆ. ಬಡ್ಮಾರಸ್ತೆಗೆ ೭೦ ಮೈಲಿಯಲ್ಲಿರುವ ಟೆಂಗ್‌ಚಂಗ್ ನಗರವನ್ನು ಚೀಣಾ ಹಿಡಿದಿದ್ದಾರೆ. ಉತ್ತರ ಬರ್ಮಾಕ್ಕೆ ಸಾಗಣಿಕೆ ಕೇಂದ್ರವಾದ ಮಾಂಡಲೆ ಇಂಡಾ ರೈಲ್ವೆಗೆ ಮಿತ್ರರ ಬಾಂಬುಗಳನ್ನು ಸುರಿಸಿದರು.

ಟಿನಿಯರ್ಗ್ ಅಮೆರಿಕನರ ವಶ

ಎರಡನೇ ತಾ॥ ಟಿನಿಯ ದ್ವೀಪಗಳಲ್ಲಿ ಅಮೆರಿಕದ ಬಾವುಟವನ್ನು ಹಾರಿಸಲಾಯಿತು ... ಕದನದಲ್ಲಿ ೬,೦೦೦ ಮತ್ತು ಗ್ವಾಮ್‌ನಲ್ಲಿ ೭೫೦೦ ಜಪಾನರನ್ನು ಕೊಲ್ಲಲಾಯಿತು. ಟಿನಿಯನ್ನಿನಲ್ಲಿ ೬೦೦೦ ಸಿವಿಲಿಯನ್ನರನ್ನು ಬಂಧಿಸಲಾಯಿತು. ... ಸಾಕಷ್ಟು ಎನರು ಅವರ ರಕ್ಷಣೆಯನ್ನು ಬೇಡಿದರು.

ಕೋಟ್ಯಾಧೀಶರ ಮಾಯ

ಬ್ಯಾರನ್ ರಾಥ್‌ಚೈಲ್ಡ್ ಮತ್ತು ಅವರ ಮ್ಯಾನೇಜರ್ ಇಬ್ಬರೂ ಮೂರು ದಿನಗಳಿಂದ ಪತ್ತೆಯಿಲ್ಲವಾದ್ದರಿಂದ ಅವರನ್ನು ಹುಡುಕಲು ಬೇಹುಗಾರ ಸರ್ಕಾರವು ಆಜ್ಞೆಮಾಡಿದೆ. ಇವರು ಕೋಟ್ಯಾಧೀಶರು ಜೂಜಿನ ಕುದುರೆಗಳ ಮಾಲೀಕರು.

ಹಾರ್ಡಿಂಜರ ಮರಣ

ಮಾಜಿ ವೈಸರಾಯರಾದ ಲಾರ್ಡ್ ಹಾರ್ಡಿಂಜರು ತಮ್ಮ ೮೬ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿದುಬಂದಿದೆ.

ಹಾಲಿನ ಕೆನೆ ತೆಗೆಯುವ ಯಂತ್ರಗಳು ಬರುತ್ತವೆ

ಹಿಂದೂಸ್ಥಾನದಲ್ಲಿ ಹೆಚ್ಚು ಬೆಣ್ಣೆಯನ್ನು ತಯಾರಿಸುವುದಕ್ಕಾಗಿ ಹಾಲಿನಿಂದ ಕೆನೆಯನ್ನು ತೆಗೆಯುವ ೫೦೦ ಯಂತ್ರಗಳನ್ನು ಅಮೆರಿಕದಿಂದ ಕಳಿಸಲಾಗುತ್ತವೆ. ಒರುವ ವರ್ಷ ಈ ಯಂತ್ರಗಳು ಒದಗಿಸಿ ಈ ಯಂತ್ರವನ್ನು ಹಿಂದೂಸ್ಥಾನದಲ್ಲೇ ತಯಾರಿಸಲು ಪ್ರಯತ್ನಿಸಬೇಕೆಂದೂ ಅದರಿಂದ ೩ ಸಾವಿರ ರೂ ವೆಚ್ಚದಲ್ಲಿ ಒಂದು ಯಂತ್ರವನ್ನು ಬೊಂಬಾಯಿನಲ್ಲಿ ತಯಾರಿಸಬಹುದೆಂದೂ ಗೊತ್ತಾಗಿದೆ. ಈಗ ಬರುವ ಯಂತ್ರದ ಬೆಲೆ ಕೇವಲ ೧೫೦ ರೂ.

ಕಾಂಗ್ರೆಸ್ ಅಧ್ಯಕ್ಷರು ಮತ್ತು ದಿವಾನ್‌ಸಾಹೇಬರ ಭೇಟಿ

ಸದ್ಯದಲ್ಲೇ ಆಗಬಹುದು

ಸ್ವಂ. ಸು. ತಂತಿ] ಬೆಂಗಳೂರು ೫

ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಸಂಸ್ಥಾನದ ದಿವಾನ್‌ಸಾಹೇಬರಿಗೆ ಪತ್ರವೊಂದನ್ನು ಬರೆದು ಸಂಸ್ಥಾನದ ರಾಜಕೀಯ ಸ್ಥಿತಿಗಳನ್ನು ಕುರಿತು ಚರ್ಚಿಸುವ ಸಲುವಾಗಿ ಭೇಟಿಯನ್ನು ಕೋರಿದ್ದಾರೆ. ಸದ್ಯದಲ್ಲೇ ಭೇಟಿಯು ನಡೆಯುವ ಸಂಭವವಿರುತ್ತದೆ.

ದಿವಾನರ ಸಂಚಾರ

ಸಂಸ್ಥಾನದ ದಿವಾನ್‌ಸಾಹೇಬರು, ಈ ದಿನ ಮಧ್ಯಾಹ್ನ ತುಮಕೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರವಾಸಮಾಡುವ ಸಲುವಾಗಿ ಹೊರಟರು.

ಆಯುರ್ವೇದದ ಆಸ್ಪತ್ರೆಗೆ ಡೈರೆಕ್ಟರ್

ಬೆಂಗಳೂರು. ಆಯುರ್ವೇದ ಆಸ್ಪತ್ರೆಗೆ ಡೈರೆಕ್ಟರ್ ಒಬ್ಬರನ್ನು ಆರಿಸುವ ಸಲುವಾಗಿ, ಸಂಸ್ಥಾನದ ನ್ಯಾಯಾಲಯ ಪಾತ್ರ ... ಅರ್ಜಿದಾರರಿಗಳು ... ನೇಮಕವಾಗಿದ್ದಾರೆ. ... ಸದ್ಯದಲ್ಲೇ ಮುದರುಗಳಿಗೆ ಪ್ರಯಾಣ ಬೆಳೆಸುವುದರಲ್ಲಿದ್ದಾರೆ.

ಸಂಯುಕ್ತ ಪ್ರಾಂತಕ್ಕೆ ೫ ಕೋಟಿ ರೂ. ಉಳಿತಾಯ

ಕಳೆದ ಸಾಲಿನ ಆದಾಯವ್ಯಯದ ಪಟ್ಟಿಯ ಪ್ರಕಾರ ಸಂಯುಕ್ತ ಪ್ರಾಂತ್ಯದಲ್ಲಿ ಖರ್ಚು ಕಳೆದು ಸುಮಾರು ೫ ಕೋಟಿ ರೂ ಉಳಿತಾಯವಾಗುವುದೆಂದು ತಿಳಿದು ಬಂದಿದೆ. ಆದರೂ ಈ ಹಣವನ್ನೆಲ್ಲಾ ರಿಸರ್ವ್ ಫಂಡಿಗೆ ವರ್ಗಾಯಿಸಿ ಕೇವಲ ಒಂದೆರಡು ಲಕ್ಷ ರೂ. ಮಾತ್ರ ಉಪಯೋಗಿಸಲಾಗುವುದು.

ರಾಷ್ಟ್ರೀಯ ಸಂಘ

ಶಾಹೀವಿಶ್ವಾಸಪುರದಲ್ಲಿ ರಾಜಧಾನಿಯ ಸುಪ್ರಸಿದ್ಧ ವಕೀಲರಾದ ಶ್ರೀ ಎಂ. ಎ. ದೊರೆಸ್ವಾಮಯ್ಯಂಗಾರ್‌ರವರಿಂದ ರಾಷ್ಟ್ರೀಯ ಸಂಘದ ಪ್ರಾರಂಭೋತ್ಸವ ನೆನ್ನೆ ನೆರವೇರಿಸಲ್ಪಟ್ಟಿತು. ಸಂಘದ ಏರ್ಪಾಡಿಂದ ಕಾವಲಿಗಳು ಓದಲ್ಪಟ್ಟವು. ಶ್ರೀ ನಾಡಿಗ ಕೃಷ್ಣಮೂರ್ತಿಯವರು ರಾಷ್ಟ್ರೀಯತ್ವವನ್ನು ಕುರಿತು ಭಾಷಣಮಾಡಿದರು. 'ವಂದೇ ಮಾತರಂ' ಗಾನದೊಂದಿಗೆ ಸಭೆ ಮುಕ್ತಾಯಗೊಂಡಿತು.

ಆಹಾರ ಶಾಸನದ ಪ್ರಕಾರ ಶಿಕ್ಷೆ

ಮೈಸೂರು, ೩

ಹೆಗ್ಗಡದೇವನಕೋಟೆಯಿಂದ ಸ್ಟೇಷನ್ ಲಾರಿಗೆ ೫ ಗಾಡಿ ರಾಗಿಯನ್ನು ಲೈಸೆನ್ಸ್ ಇಲ್ಲದೆ ಸಾಗಿಸಿದರೆಂದು ತಂತೇಗೌಡ ಎಂಬುವರನ್ನು, ಚಿಕ್ಕರೇಗೌಡ ಎಂಬುವರು ... ಕರಿಯ, ಕಂಪೇಗೌಡ ಮತ್ತು ಶ್ರೀನಿವಾಸಯ್ಯ ಎಂಬುವರಿಗೆ ತಲಾ ೩೦ ರೂ. ದಂಡ ತಪ್ಪಿದರೆ ೧ ತಿಂಗಳು ಶಿಕ್ಷೆಯನ್ನೂ ಕೃಷ್ಣೇಗೌಡ ಎಂಬುವರು ರಾತ್ರಿಕಾಲದಲ್ಲಿ ೧ ಗಾಡಿ ರಾಗಿ ಸಾಗಿಸುತ್ತಿದ್ದುದನ್ನು ಕೃಷ್ಣರಾಜನಗರದ ಪೋಲೀಸಿನವರು ಕಂಡು ... ತಪ್ಪಿದರೆ ೧ ತಿಂಗಳು ಶಿಕ್ಷೆಯನ್ನೂ ... ಅಸಿಸ್ಟೆಂಟ್ ಕಮಿಷನರ್‌ರವರು ವಿಧಿಸಿದರು.

ಕ್ವಿಟ್ ಇಂಡಿಯಾ ನಿರ್ಣಯ ಘನತರವಾದುದು

ಲಂಡನ್ ಡೈಲಿ ವರ್ಕರ್ ಪತ್ರಿಕೆಯ ಬಾತ್ಮೀದಾರರು ಮಹಾತ್ಮರನ್ನು ಸಂದರ್ಶಿಸಿ 'ಕ್ವಿಟ್ ಇಂಡಿಯಾ' ನಿರ್ಣಯದ ವಿಷಯವನ್ನು ಕುರಿತು ಪ್ರಶ್ನಿಸಲು, ಗಾಂಧೀಜಿಯವರು ಆ ನಿರ್ಣಯವು ಮೊದಲಿನಿಂದ ಇಲ್ಲಿಯವರೆಗೂ ಘನವಾದ ನಿರ್ಣಯವಾಗಿಯೇ ಇದೆ. 'ಕ್ವಿಟ್ ಇಂಡಿಯಾ' ಸೂತ್ರವು ... ಸತ್ಯಾಗ್ರಹದ ... ಪರಿಣಾಮ ... ಆ ನಿರ್ಣಯ ... ಆ ನಿರ್ಣಯವನ್ನು ತಿದ್ದುಪಡಿ ... ಸತ್ಯಾಗ್ರಹವನ್ನು ಆಚರಿಸಲಾರೆ' ಎಂದು ನುಡಿದಿದ್ದಾರೆ.

ಹಾರುವ ಬಾಂಬುಗಳ ಹಾವಳಿ

ಜೂನ್ ೧೫ ನೇ ತಾ॥ ನಿಂದ ಜುಲೈ ೩೧ ರವರೆಗೆ ಜರ್ಮನರ ಹಾರುವ ಬಾಂಬುಗಳು ಇಂಗ್ಲೆಂಡಿನ ಮೇಲೆ ಒಟ್ಟು ೪,೭೩೫ ಟನ್‌ಗಳು ಬಿದ್ದು, ೪,೭೦೦ ಕ್ಕೂ ಹೆಚ್ಚು ಜನರು ಸತ್ತು ... ೧೭,೦೦೦ ಜನರಿಗೆ ಗಾಯ ... ಮನೆಗಳು ನಾಶವಾದವು ... ಜನ ... ಬಿಟ್ಟು ... ತಮ್ಮ ಬುದ್ಧಿಯ ... ಕೆಲಸಮಾಡುತ್ತಿದ್ದಾರೆ ... ಹೇಳಿದರು.

ಆಹಾರ ಸ್ಥಿತಿ ಕಠಿಣ

ಹಿಂದೂಸ್ಥಾನದ ... ಭಯಂಕರವಾಗಿದೆ ... ಅದನ್ನು ... ತಿಳಿಸಿದೆ ... ಹಿಂದೂಸ್ಥಾನಕ್ಕೆ ಇಂಗ್ಲೆಂಡಿನಿಂದ ... ಕಳುಹಿಸಬೇಕೆಂದು ... ಕಾರ್ಯವನ್ನು ಕೈಗೊಂಡು ... ಕೇಳಲಾಯಿತು.

ಭಾವಸಾರ ವಿದ್ಯಾರ್ಥಿ ನಿಲಯ ಮತ್ತು ದೇವಸ್ಥಾನ

ಮೈಸೂರು ೪

ತಾ|| ೧-೮-೪೪ ನೇ ಮಂಗಳವಾರದ ದಿನ ಶ್ರೀ ಪಾಂಡುರಂಗ ದೇವಸ್ಥಾನದ ಶಂಕು ಸ್ಥಾಪನ ಮಹೋತ್ಸವದಲ್ಲಿ ಬೀದರ್, ಭಾವಸಾರ ಕ್ಷತ್ರಿಯ ಮಂಡಲಿಯವರ [illegible] ಸಭಾ ಪ್ರೆಸಿಡೆಂಟ್ ಮ|| ರಾ|| ಎಚ್. ರಾಮಚಂದ್ರರಾವ್ ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಬೀದರ್ ನ ಸಾಹುಕಾರ್ ಮ|| [illegible] ಪಲ್ಲಪ್ಪನವರು, ಮ|| [illegible] ಬಡ್ಡನವರು ಪತ್ನಿ ಸಹಿತ ಬೆಂಗಳೂರಿಗೆ ಬಂದವರು ಭಾವಸಾರ ಕ್ಷತ್ರಿಯ ವಿದ್ಯಾರ್ಥಿನಿಲಯ ಮತ್ತು ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನ ಕಟ್ಟಲು [illegible] ದಾನವಾಗಿ ಕೊಟ್ಟಿರುತ್ತಾರೆ. ಮೈಸೂರು ಬಾಂಗ್ರೆ [illegible] ನವರ ಮಕ್ಕಳು [illegible] ರೂ, [illegible] ರೂ, ಶ್ರೀ [illegible] ರಾಮಚಂದ್ರರಾವ್ [illegible] ರೂ., ಇನ್ನೂ ಇತರ ಮಹಾಶಯರುಗಳೆಲ್ಲರೂ ಸೇರಿ ಒಟ್ಟು [illegible] ರೂ. ಕೊಟ್ಟಿರುತ್ತಾರೆ

ಫಿಸಿಕಲ್ ಕಲ್ಚರ್ ಉಪಾಧ್ಯಾಯಿನಿ

ಶ್ರೀಮತಿ ಎ. ಎಲ್. ಸರೋಜಿನಿ ಮ[illegible] ಎಂಬುವರನ್ನು ಮೈಸೂರು ಮಹಾರಾಣಿ ಇಂಟರ್ ಮೀಡಿಯೆಟ್ ಕಾಲೇಜಿನ ಫಿಸಿಕಲ್ ಕಲ್ಚರ್ ಉಪಾಧ್ಯಾಯಿನಿಯನ್ನಾಗಿ ನೇಮಕವಾಡಲಾಗಿದೆ

— —

೬೨,೦೦೦ ಸಾವುಗಳ ಸೆರೆ

ಜುಲೈ ೨೭ ರಿಂದ ತಾ|| ೩ ರ ವರೆಗೆ ಒಂದು ವಾರದ ಅವಧಿಯಲ್ಲಿ ಮಿತ್ರ [illegible] ಕದನದಲ್ಲಿ ಮಿತ್ರ ಪಕ್ಷದವರು ೬೨,೦೦೦ ಜರ್ಮನರನ್ನು ಸೆರೆ ಹಿಡಿದಿದ್ದಾರೆ. ಇವರಲ್ಲಿ ಇಬ್ಬರು ಜನರಲ್, ಒಬ್ಬ ಅಡ್ಮಿರಲ್ ಸಹ ಇದ್ದಾರೆ

ರಷ್ಯಾದ ಆಸಕ್ತಿ

ಭಾರತದ ಆಹಾರ ವಿಚಾರದಲ್ಲಿ ಇತ್ತೀಚಿಗೆ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳ ವಿಚಾರವಾಗಿ ರಷ್ಯಾ ದೇಶದ ಪತ್ರಿಕೆಗಳು ಬಹಳ ಆಸಕ್ತಿ ವಹಿಸಿ ಪ್ರಕಟಿಸುತ್ತಿವೆ.

ಪರೀಕ್ಷೆಯ ಫಲಿತಾಂಶ

ವಿಶ್ವವಿದ್ಯಾನಿಲಯದ ಎಂ.ಎ., ಮತ್ತು ಎಂ ಎಸ ಸಿ, ಪರೀಕ್ಷೆಗಳ ಫಲಿತಾಂಶ:—

ಎಂ.ಎ ಡಿಗ್ರಿ ಪರೀಕ್ಷೆ

ಕನ್ನಡ — ಮೊದಲನೆ ದರ್ಜೆ : ೧.

ಸಂಸ್ಕೃತ — ಮೊದಲನೆ ದರ್ಜೆ : ಇಲ್ಲ. ಎರಡನೆ ದರ್ಜೆ : ೩, ೬, ೪.

ಇಂಗ್ಲೀಷ್ — ಮೊದಲನೆ ದರ್ಜೆ : ೫.

ಚರಿತ್ರೆ — ಮೊದಲನೆಯ ದರ್ಜೆ : ಇಲ್ಲ ಎರಡನೆ ದರ್ಜೆ : ೬, ೭.

ಎಕನಾಮಿಕ್ಸ್ — ಮೊದಲನೆ ದರ್ಜೆ : ಇಲ್ಲ ಎರಡನೇ ದರ್ಜೆ : ೮, ೧೦, ೧೧

ಫಿಲಾಸಫಿ : ಮೊದಲನೆ ದರ್ಜೆ : ೧೨, ೧೬, ೧೭

ಎಂ ಎಸ್‌ಸಿ, ಡಿಗ್ರಿ ಪರೀಕ್ಷೆ

ಸ್ಟಾಟಿಸ್ಟಿಕ್ಸ್ — ಮೊದಲನೆಯ ದರ್ಜೆ : ಇಲ್ಲ ಎರಡನೆ ದರ್ಜೆ : ೧೮.

ಗಣಿತ — ಮೊದಲನೆ ದರ್ಜೆ : ಇಲ್ಲ. ಎರಡನೆ ದರ್ಜೆ : ೧೯.

ಫಿಸಿಕ್ಸ್ — ಮೊದಲನೆ ದರ್ಜೆ : ೩೦, ೨೧, ೩೩, ೩೭, ೩೯, ೩೭, ೨೮ ಎರಡನೆ ದರ್ಜೆ : ೩೪, ೩೬

ಕೆಮಿಸ್ಟ್ರಿ — ಮೊದಲನೆ ದರ್ಜೆ : ೩೨. ಎರಡನೆ ದರ್ಜೆ : ೩೦, ೩೧, ೩೩.

ಸಸ್ಯಶಾಸ್ತ್ರ — ಮೊದಲನೆ ದರ್ಜೆ : ಇಲ್ಲ. ಎರಡನೆ ದರ್ಜೆ : ೩೪, ೩೫, ೩೬, ೩೭.

ಜೂಆಲಜಿ — ಮೊದಲನೆ ದರ್ಜೆ : ಇಲ್ಲ ಎರಡನೆ ದರ್ಜೆ : ೩೮.

ಬಾಟನಿ — ಮೊದಲನೆ ದರ್ಜೆ : ೪೧, ೪೨ ಎರಡನೆ ದರ್ಜೆ : ೪೦, ೪೩.

— —

ಪ್ರಪಂಚದ ಶಾಂತಿ ರಕ್ಷಣೆಗೆ ಚೀಣಿ ಸಂಘದ ಸಲಹೆ

ಚೀನಾ ಪ್ರಜೆಗಳ ವಿದೇಶೀ ಸಂಘದವರು ಪ್ರಪಂಚದ ಶಾಶ್ವತ ಶಾಂತಿ ರಕ್ಷಣೆಗೆ ಒಂದು ಯೋಜನೆ ಹಾಕಿರುತ್ತಾರೆ. ಅನೇಕ ಸಂಗತಿ—೫೦,೦೦೦ ಪೋಲೀಸ್ ಬಲವುಳ್ಳ ಅಂತರರಾಷ್ಟ್ರೀಯ ಸಂಸ್ಥೆಯೊಂದನ್ನು ರಚಿಸಬೇಕು. ಇದರಲ್ಲಿ ಪ್ರೊಫೆಸರ್, ಫೆಸಿಫಿಕ್ ರಾಷ್ಟ್ರಗಳಲ್ಲಿ ಇಂಗ್ಲೆಂಡು ಸೇರಬೇಕು. ಅಮೇರಿಕಾ, ರಷ್ಯಾ, ಚೈನಾ, ಕೆನಡಾ, ಆಸ್ಟ್ರೇಲಿಯಾ, ಇಂಡಿಯಾ ಇವುಗಳನ್ನೂ ಜೊತೆಗೆ ಸೇರಿಸಿಕೊಳ್ಳಬೇಕು ಎಂಬುದು

ತಮ್ಮಯ್ಯ ಶಾಸ್ತ್ರಿಗಳ ನಿಧನ

ಸ್ವಂ.ಸು.] ಚಾಮರಾಜನಗರ ೩

ಶ್ರೀ ಚಾಮರಾಜೇಶ್ವರಸ್ವಾಮಿಯವರ ದೇವಸ್ಥಾನದ ಸಂಸ್ಕೃತ ಪಾಠಶಾಲಾ ಅಧ್ಯಕ್ಷರಾಗಿ ಈಗ ಕೆಲವು ದಿನಗಳ ಕೆಳಗೆ ರಿಟೈರಾಗಿ, ನಮ್ಮ ಮಹಾರಾಜರ ಆಸ್ಥಾನ ವಿದ್ವಾಂಸರಾಗಿಯೂ ಇದ್ದ, ಕೊಳ್ಳೇಗಾಲದ ವೇ|| ತಮ್ಮಯ್ಯಶಾಸ್ತ್ರಿಗಳು ತಮ್ಮ ಗೃಹದಲ್ಲಿ ತಾ|| ೩-೮-೪೪ ರಲ್ಲಿ ಕಾಲವಾಗಿರುತ್ತಾರೆ ಕೆಲವು ದಿನದ ಕೆಳಗೆ ಚಿಕ್ಕವಯಸ್ಸಿನ ಇವರ ಮಗನು ಕಾಲವಶ್ಯತ್ವವಿಗೆ [illegible] ದರಿಂದ ವ್ಯಾಧಿಯಿಂದ ಇವರ ದೇಹವು ಕೃಶವಾಗಿ ತಮ್ಮ ೭೫ ನೇ ವಯಸ್ಸಿನಲ್ಲಿ ಪರಂಧಾಮವನ್ನೈದಿದರೆಂಬ ವರ್ತಮಾನ ಕೇಳಿ ಎಲ್ಲರಿಗೂ ಸಿಡಿಲುಬಡಿದಂತಾಗಿದೆ. ಇವರು ಪ್ರಜಾನುರಾಗಿಗಳಾಗಿದ್ದರು. ಇವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ

ನಡೆಸುವವನಿಲ್ಲದ ಟ್ಯಾಂಕು

ಹಿಟ್ಲರನು ಹೊಸ ವಿ||—ಅಸ್ತ್ರವನ್ನು ಕಂಡುಹಿಡಿದಿದ್ದಾನೆ. ನಾರ್ಮಂಡಿಯ ಕದನರಂಗದಲ್ಲಿ ಇದು ಉಪಯೋಗಿಸಿಕೊಂಡಿತು. ಇದೊಂದು ಸಣ್ಣ ಟ್ಯಾಂಕು ಒಬ್ಬ ಡ್ರೈವರನು ಇದನ್ನು ಸಾಧ್ಯವಾದಷ್ಟು ದೂರ ನಡೆಸಿಕೊಂಡು ಹೋಗುವನು ಅನಂತರ ಹೊರಕ್ಕೆ ಇಳಿದು ಮುಂದೆ ಎಲೆಕ್ಟ್ರಿಸಿಟಿಯಿಂದ ನಡೆಸುವನು. ಈ ಟ್ಯಾಂಕು ದೊಡ್ಡ ಪ್ರಮಾಣದಲ್ಲಿ ಶತ್ರುಗಳ ಮೇಲೆ ಸಿಡಿಮದ್ದುಗಳನ್ನು ಸುರಿಸಿ ನಾಶಪಡಿಸುತ್ತದೆ. ಈ ರೀತಿ ೭ ಟ್ಯಾಂಕುಗಳು ಬಂದಿದ್ದವು. ಯಾರೂ ಸಾಯಲಿಲ್ಲ. ಭಾರಿ ಆಸ್ಫೋಟನ ಮಾತ್ರ ಆಯಿತೆಂದು ಹೇಳಲಾಗಿದೆ

ರೊಮೆಲ್ಲರು ಬದುಕಿದ್ದಾರೆ

ಜುಲೈ ೧೭ ನೇ ತಾ|| ಫ್ರಾನ್ಸಿನಲ್ಲಿ ಆದ ವಿಮಾನಧಾಳಿಯೊಂದರ ಸಂದರ್ಭದಲ್ಲಿ ಜ|| ರೊಮೆಲ್ಲರಿಗೆ ಒಂದು ಮೋಟಾರು ಅಪಘಾತವು ಸಂಭವಿಸಿತು. ಗಾಯಗಳಾದವು ಅವರ ಸ್ಥಿತಿ ಈಗ ತೃಪ್ತಿಕರವಾಗಿದೆ ಜೀವಕ್ಕೆ ಅಪಾಯವಿಲ್ಲ ಎಂದು ಜರ್ಮನ್ ಸುದ್ದಿ ತಿಳಿಸುತ್ತದೆ

Edited, printed and published by A. R. Nagarajan, at the Sadhvi Press, D. Subbiah Road, Mysore

ಹಿಟ್ಲರನ ಹೊಸ ಬಾಂಬರ್ ಫೈಟರ್

ನಾರ್ಮಂಡಿಯಲ್ಲಿ ಹಿಟ್ಲರನ ಬಾಂಬರ್ ಫೈಟರ್ ಜಂಟಿ ಅಸ್ತ್ರವೊಂದನ್ನು ಹೊಡೆದುರುಳಿಸಲಾಗಿದೆ. ಅವನು ಕಂಡುಹಿಡಿದಿರುವ ಹೊಸ ವಿ—ಅಸ್ತ್ರಗಳಲ್ಲಿ ಇದೂ ಒಂದು ಇದರಲ್ಲಿ ರಾಕೆಟ್ ಬಾಂಬರ್ ಮತ್ತು ವೈಮಾನಿಕನುಳ್ಳ ಫೈಟರ್ ಎರಡೂ ಸೇರಿವೆ ಸಿಡಿಮದ್ದುಗಳು ತುಂಬಿವೆ ಜನರು ಕೂಡುವ ಸ್ಥಳಗಳಲ್ಲೆಲ್ಲಾ ಮದ್ದನ್ನು ತುಂಬಿದೆ ಅಪಾಯವೊದಗುವುದೆಂದು ತಿಳಿಯುವವರೆಗೆ ಒಬ್ಬನೇ ವೈಮಾನಿಕನು ಈ ಜಂಟಿ ಯಂತ್ರವನ್ನು ನಡೆಸುತ್ತಿರುತ್ತಾನೆ ಅಪಾಯ ಒದಗಿದಾಗ ಅದನ್ನು ಒಂದು ಕ್ಲುಪ್ತವಾದ ದಾರಿಗೆ ತಂದು ತಾನು ಸುರಕ್ಷಿತವಾಗಿ ತಪ್ಪಿಸಿಕೊಳ್ಳುತ್ತಾನೆ. ಈ ಯಂತ್ರವನ್ನು ಹೊಡೆದು ನೆಲಕ್ಕೆ ಉರುಳಿಸಿದರೆ ನೆಲದ ಮೇಲೂ ಸಿಡಿಯುವುದು.

ಚಂಡಮಾರುತ

ಅಮೇರಿಕದ ನಾರ್ತ್ ಕೆರೊಲಿನಾ ಬಳಿ ೭೦ ಮೈಲಿ ದೂರದಲ್ಲಿ ಪೂರ್ವ ಸಮುದ್ರ ತೀರದಲ್ಲಿ ಚಂಡಮಾರುತವು ಬಹಳ ಹಾವಳಿಮಾಡುತ್ತಿದೆ. ಸಮುದ್ರದಿಂದ ಪರ್ವತಾಕಾರದಲ್ಲಿ ಅಲೆಗಳು ಬಂದುದರಿಂದ ತೀರವಾಸಿಗಳಾದ ಸಾವಿರಾರು ಜನರು ಮನೆಮಠಗಳನ್ನು ಬಿಟ್ಟು ಓಡಿದ್ದಾರೆ ಗಾಳಿಯ ಹೊಡೆತವು ಬಲವಾಗಿದ್ದುದರಿಂದ ರೇಡಿಯೋ ಯಂತ್ರಗಳೂ ನಿಂತುಹೋದವು.

ಬಲ್ಗೇರಿಯಾ ಶಾಂತಿಗೆ ಸಿದ್ಧ ?

ರಷ್ಯನರೊಡನೆಯೇ ಅಲ್ಲದೆ ಟರ್ಕಿ ರಾಷ್ಟ್ರದ ಮೂಲಕ ಬ್ರಿಟನ್ ಅಮೇರಿಕ ಗಳೊಡನೆಯೂ ಬಲ್ಗೇರಿಯಾದವರು ಮಾತುಕತೆ ನಡೆಸುತ್ತಿರುವರೆಂದು ಹೇಳಲಾಗಿದೆ

[illegible]

MEDICINES

Take your requirements from

RAGHULAL & CO.,

1748, Sayaji Rao Road,

(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇಲ್ಲಿ ಕೊಂಡುಕೊಳ್ಳಿ

ರಘುಲಾಲ್ ಅಂಡ್ ಕೋ,

1748, ಸಯ್ಯಾಜೀರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು

ಇಪ್ಪೊತ್ತೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು ! ಕೈಗಾರಿಕೆ ಸಂಸ್ಥೆಗಳು !

ಬಾಲಿಕಾ ಶಾಲೆಗಳು ! ಮಹಿಳಾ ಚಿಕಿತ್ಸಾಲಯಗಳು !

ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.

ನಮ್ಮಲ್ಲಿ ವಸೂಲಾದ ಹಣ ಸಮಗ್ರವಾಗಿಯೇ ವಿನಿಯೋಗ.

ಬಿ. ಗೋಪಾಲಕೃಷ್ಣ ಶೆಟ್ಟಿ, ಎಸ್. ಚನ್ನಯ್ಯ, ಹರಳಿ ದಾಸಪ್ಪ,

ಖಜಾಂಚಿ. ಕಾರ್ಯದರ್ಶಿ. ಅಧ್ಯಕ್ಷ.

ಸ್ತ್ರೀಯರ ಸೌಕರ್ಯಕ್ಕೆ

ತಾ|| ೧-೧-೧೯೪೪ ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿವಾನಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಹೋಟಲ್ಲು ದೇವರ ಕಾರ್ಯಗಳಿಗೆ ಸಕ್ಕರೆ ಕೊಟ್ಟಾಕ್ಕೆ ಪ್ರತಿಯಾಗಿ ಬೂರಾ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಮಹಿಳೆಯರಿಗೆ ಸೌಭಾಗ್ಯಪ್ರದವಾದ ಮತ್ತು ಕರಗಳ ಸೌಂದರ್ಯಕ್ಕೆ ಸಹಾಯಕಾರಿಯಾದ ನವನವೀನ ಬಳೆಗಳಿಗೆ

ನಿಮ್ಮ ಮೆಚ್ಚುಗೆಗೆ ಪಾತ್ರವಾದ

ಸ್ಟೀಲ್ ಲೋಟಾಗಳು

ಸೌಭಾಗ್ಯ ಸ್ಟೋರ್ಸ್ ಗೆ ಬನ್ನಿರಿ

ದೇವರಾಜ ಮಾರ್ಕೆಟ್, ಮೈಸೂರು.

ಕೆಮಿಕಲ್ ದಂತದ ಬಳೆಗಳು

ಸಂಪುಟ ೩] ಭಾನುವಾರ ೬--೮--೪೪ [ಸಂಚಿಕೆ ೧೩

ಮುಖಂಡರ ಖುಲಾಸೆ ಪರಿಶೀಲನೆಯಾಗುತ್ತಿದೆ

ಯುದ್ಧವನ್ನು ಕೂಡಲೇ ನಿಲ್ಲಿಸಲು ರೋಂ ಪತ್ರಿಕಾ ಸಲಹೆ

ಪೂರ್ಣ ಯುದ್ಧ ಸಿದ್ಧತೆಗೆ ಜಪಾನಿನ ಹಂಚಿಕೆ

ಚಿರತೆ ಪರಚಿತು

ಮೈಸೂರು ೭

ಶಿಗ್ಗಡದೇವನಕೋಟೆ ತಾಲ್ಲೂಕು ಬೊಪ್ಪನ ಹಳ್ಳಿ ಬಳಿ ಚಿರತೆಯೊಂದನ್ನು ಶಿಕಾರಿ ಮಾಡಲು ಹೋದಾಗ ಅದು ಮೈಮೇಲೆ ಬಿದ್ದು ಬೊಪ್ಪನ ಹಳ್ಳಿಯ ಮಂಗೌಡನ ಬೆನ್ನು ಮೇಲೂ ಚಿಕ್ಕಣ್ಣನ ಮಂಡಿ ಮೇಲೂ ಬೋರೇಗೌಡರ ಎಡ ತೊಡೆ ಮೇಲೂ ಮತ್ತೊಬ್ಬ ಅಂತರಸಂತೆಯ ' ಜವರನ ಕಾಲ ಮೇಲೂ ಪರಚಿ ತೀವ್ರ ಗಾಯಗಳಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿತ್ತು ನಿನ್ನೆಯ ದಿನ ಬೋರೇಗೌಡನು ಮೃತನಾದನು.

ಎಳನೀರು ಕಳುವು

ಮೈಸೂರು ಪೌರಸಭಾ ಸದಸ್ಯರಾದ ಬಾಳೆಹಣ್ಣಂಗಡಿ ಶ್ರೀಮಾನ್ ಟಿ. ವೆಂಕಟರಮಣಯ್ಯನವರ ಬೊಪ್ಪನಹಳ್ಳಿ ಕೆರೆಯ ತೋಟದಲ್ಲಿ ಈ ದಿನ ಬೆಳಗಿನ ಜಾವ ಸಂಜೀವ ಎಂಬುವನು ೧೧ ಎಳನೀರು ಕದ್ದುಕೊಂಡು ಹೋಗುತ್ತಿದ್ದಾಗ ಕಾವಲುಗಾರನಾದ ಪರಾಣನೊಬ್ಬನು ಹಿಡಿದು ಲಷ್ಕರ್ ಪೋಲೀಸಿನವರಿಗೆ ಒಪ್ಪಿಸಿದನು. ತನಿಖೆ ನಡೆಯುತ್ತಿದೆ

ನ್ಯಾಷನಲ್ ವಾರ್ ಫ್ರಂಟ್

ಹಿಂದಿನ ಆಜ್ಞೆಯ ಪ್ರಕಾರ ಸಂಸ್ಥಾನದಲ್ಲಿ ನ್ಯಾಷನಲ್ ವಾರ್‌ಫ್ರಂಟ್ ಸಂಸ್ಥೆಯನ್ನು ಈ ಜೂನ್ ಅಂತ್ಯದವರೆಗೆ ಮಾತ್ರ ಮುಂದುವರಿಸಲಾಗಿತ್ತು. ಈಗ ಈ ವರ್ಷದ ಅಕ್ಟೋಬರ್ ವರೆಗೂ ಸಂಸ್ಥೆಯ ಕಾರ್ಯಗಳು ನಡೆಯತಕ್ಕದ್ದೆಂದು ಸರ್ಕಾರದಾಜ್ಞೆಯಾಗಿದೆ.

ಇಂಟರ್ ಕಾಲೇಜಿಗೆ ೧೫೦೦೦ ರೂಪಾಯಿ

ಬೆಂಗಳೂರು ಹೈಸ್ಕೂಲಿನವರು ಏರ್ಪಡಿಸಲಿರುವ ಇಂಟರ್ ಕಾಲೇಜಿಗೆ ಶ್ರೀ ಬಿ. ಎಸ್. ಗೋಪಾಲರಾಯರು ೧೫೦೦೦ ರೂ ದಾನಮಾಡಿದ್ದಾರೆ.

೧೦ ಸಾವಿರ ರೂ. ದಾನ

ಬೆಂಗಳೂರು ಗಾಂಧೀನಗರದಲ್ಲಿ ಕಟ್ಟಲಾಗುವ ಬಾಲಕಿಯರ ಮಾಧ್ಯಮಿಕ ಶಾಲೆ ಕಟ್ಟಡಕ್ಕಾಗಿ ಇದುವರೆಗೆ, ತಾವು ಕೊಟ್ಟಿರುವ ೫೦ ಸಾವಿರ ರೂ ಜೊತೆಗೆ ಇನ್ನೂ ಹತ್ತು ಸಾವಿರ ರೂ ಅನ್ನು ಸಲೆಕ್ಟ್ ಪಿಕ್ಚರ್ ಸರ್ಕ್ಯೂಟ್ ಮಾಲೀಕರಾದ ವಾಲ್ ಪಟೇಲ್ ಸೋದರರು ಕೊಟ್ಟಿರುವರು

ಪರಿಕಥೆಯಲ್ಲಿ ಹಾವು

ತುಮಕೂರು ಶ್ರೀರಾಮ ದೇವಾಲಯದಲ್ಲಿ ಕೆಲವು ದಿನಗಳ ಹಿಂದೆ ಹರಿಕಥೆಯ ಸಂದರ್ಭದಲ್ಲಿ ನಾಗಸ್ವರವನ್ನು ಬಾರಿಸುತ್ತಿದ್ದಾಗ ಒಂದು ಹಾವು ಬಂದು ಕೇಳುತ್ತಿದ್ದು ಯಾರಿಗೂ ಅಪಾಯ ಮಾಡದೆ ಹೊರಟುಹೋಯಿತೆಂದು ದೇವಸ್ಥಾನದ ಕಾರ್ಯದರ್ಶಿಗಳು ತಿಳಿಸಿದ್ದಾರೆ

ಜಪಾನಿಗೆ ಹೊಸ ಯುದ್ಧ ಮಂಡಲ

ಚಕ್ರವರ್ತಿಯವರ ಅಪ್ಪಣೆಯಂತೆ ಜಪಾನಿನಲ್ಲಿ ಒಂದು ಹೊಸ ಯುದ್ಧ ಮಂಡಲವನ್ನು ಸ್ಥಾಪಿಸಲಾಗಿದೆ. ಹಳೇ ಸಮಿತಿಯನ್ನು ರದ್ದುಮಾಡಲಾಗಿದೆ ಯುದ್ಧವನ್ನು ಮುಂದುವರಿಸುವ ನೀತಿಯನ್ನು ಇದು ಗೊತ್ತುಮಾಡುವುದು.

ಹೊಸ ನಕ್ಷತ್ರ

ಪಾಟ್ನಾ ಮತ್ತು ಸುತ್ತಮುತ್ತಿನ ಅನೇಕ ಮೈಲಿ ಸ್ಥಳಗಳಲ್ಲಿ ಕಳೆದ ೩ ನೇ ತಾ|| ರಾತ್ರಿ ಪೂರ್ವದಿಕ್ಕಿನಲ್ಲಿ ಒಂದು ನಕ್ಷತ್ರವು ಕಾಣಿಸಿಕೊಂಡಿತ್ತು. ಇದು ಒಂದು ಬಾಣದ ರೂಪವನ್ನು ಹೊಂದಿತ್ತು ಬಣ್ಣ ಸ್ವಲ್ಪ ಕೆಂಪುಮಿಶ್ರವಾಗಿತ್ತು

ರೈಲ್ವೆ ಲೂಟಿ

ಸುಮಾರು ೪೦ ಜನ ದರೋಡೆಕಾರರು ತೀಕ್ಷ್ಣವಾದ ಆಯುಧಗಳನ್ನು ಹಿಡಿದು ಪಾಟ್ನಾ ಬಳಿ ಇನ್ನೊಂದು ರೈಲ್ವೆ ಸ್ಟೇಷನ್ನಿನ ಸಮೀಪ ಒಂದು ಗೂಡ್ಸ್ ರೈಲನ್ನು ಲೂಟಿಮಾಡಿ ಒಂದು ವ್ಯಾಗನ್ನಿನಲ್ಲಿದ್ದ ಸಾಮಾನುಗಳನ್ನೆಲ್ಲಾ ಕೊಳ್ಳೆಹೊಡೆದಿರುವರು.

ಚೀನಿಗೂ ಪ್ರತಿಬಂಧಕ

ತನ್ನ ಅಪ್ಪಣೆಯಿಲ್ಲದೆ ಕಡೂರು ಜಿಲ್ಲೆಯಿಂದ ಹೊರಕ್ಕೆ ಚೀನಿ ಪದಾರ್ಥವನ್ನು ಕಳುಹಿಸಕೂಡದೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಭಾರತ ರಕ್ಷಣಾ ಶಾಸನದ ಪ್ರಕಾರ ನಿರ್ಬಂಧವಿರಿಸಿದ್ದಾರೆ ಮತ್ತು ವ್ಯವಸಾಯ ಇಲಾಖೆಗೆ ಗೊಬ್ಬರವು ಬೇಕಾಗಿರುವುದರಿಂದ ಕಡೂರು ಜಿಲ್ಲೆಯಲ್ಲಿ ಕಡಲೇಕಾಯಿಯನ್ನು ಯಾವ ರೀತಿಯಲ್ಲಿಯೂ ಸಾಗಿಸಕೂಡದು, ಮಾರಲೂ ಕೂಡದು ಎಂದು ವಿಧಾಯಕವಾಗಿದೆ

ಜಪಾನಿನಲ್ಲೂ ಪೂರ್ಣ ಸಂಗ್ರಾಮ ಸಿದ್ಧತೆ

-ಜಪಾನಿಯರನ್ನು ಯುದ್ಧ ಕಾರ್ಯಗಳಿಗೆ ಸಂಪೂರ್ಣವಾಗಿ ಸಿದ್ಧಗೊಳಿಸುವ ಯೋಜನೆಯೊಂದನ್ನು ಅಲ್ಲಿನ ಸರ್ಕಾರವು ಮೊನ್ನೆ ಪರಿಶೀಲಿಸಿತು ಮಂತ್ರಿಗಳು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು ಮಂಗಳವಾರ ಪ್ರಧಾನ ಮಂತ್ರಿಗಳು ಜಪಾನಿಗೆ ಸಂದೇಶವನ್ನು ಕೊಡುವರು.

ಯುದ್ಧ ನಿಲ್ಲಿಸಿರಿ

ಕ್ರೈಸ್ತ ಗುರುಗಳಾದ ಪೋಪರಿಗೆ ಸಂಬಂಧಪಟ್ಟ ವ್ಯಾಟಿಕನ್ ಪತ್ರಿಕೆಯಲ್ಲಿ ಬಂದಿರುವ ಒಂದು ಲೇಖನದಲ್ಲಿ ಈ ಯುದ್ಧವನ್ನು ಮುಂದುವರಿಸುವುದರಿಂದ ಯಾವ ಸಾರ್ಥಕವಾದ ಫಲವೂ ಇಲ್ಲದಿರುವುದರಿಂದ ಕೂಡಲೇ ಅದನ್ನು ನಿಲ್ಲಿಸಬೇಕೆಂದು ಲೇಖನದ ಕೊನೆಯಲ್ಲಿ ಕೇಳಲಾಗಿದೆ.

ಮುಖಂಡರ ಬಿಡುಗಡೆ ಪ್ರಶ್ನೆಯ ಪರಿಶೀಲನೆ

ದೆಹಲಿಯಲ್ಲಿಯೂ ಲಂಡನ್ನಿನಲ್ಲಿಯೂ ಕಾಂಗ್ರೆಸ್ ಮುಖಂಡರ ಬಿಡುಗಡೆ ಪ್ರಶ್ನೆಯು ಪರಿಶೀಲಿಸಲ್ಪಡುತ್ತಿದೆಯೆಂದು ಗೊತ್ತಾಗಿದೆ. ಆದರೂ ವೈಸರಾಯ್ ಮಂತ್ರಿಮಂಡಲದ ಮುಂದೆ ಬರುವನ್ನು ಈ ವಿಷಯವು ಪಕ್ವವಾಗಿಲ್ಲವೆಂದು ಹೇಳಲಾಗಿದೆ. ಬೇಗ ಇಂಡಿಯಾ ಸರ್ಕಾರವು ಈ ಬಗ್ಗೆ ಗಮನಕೊಡುವರೆಂದು ನಂಬಲಾಗಿದೆ

ಕೆಲಸಗಾರರಿಗೆ ಗಾಂಧೀಜೀ ಸಲಹೆಗಳೇ

ಶ್ರೀ ಸಿ ರಾಜಗೋಪಾಲಾಚಾರಿಯವರೊಡನೆ ಮಾತನಾಡಿ ಗಾಂಧೀಜಿಯವರು ರಾಜಕೀಯ ಸ್ಥಿತಿ ವಿಷಯವಾಗಿ ಒಂದು ಹೇಳಿಕೆಯನ್ನು ಹೊರಡಿಸಲಿದ್ದಾರೆ. ಈ ವಾರ ಕೊನೆಯಲ್ಲಿ ಬೇಕಾದರೂ ಇದು ಹೊರಬೀಳಬಹುದು. ಕಾಂ|| ಕೆಲಸಗಾರರ ಮುಂದಿನ ಕರ್ತವ್ಯಗಳ ಬಗ್ಗೆಯೂ ಅದರಲ್ಲಿ ಸೂಚನೆಗಳಿರುವುವೆಂದು ಹೇಳಲಾಗಿದೆ.

ಭಾರತೀಯರ ಸತ್ಯಾಗ್ರಹ ಅನ್ಯಾಯವೆ ?

ಜರ್ಮನಿಯ ರೀತಿಗಳಿಗೆ ಸಿಕ್ಕಿರುವ ಯೂರೋಪಿನ ರಾಷ್ಟ್ರಗಳವರು ಒಳಸಂಚು ಹೂಡಿ ಸಶಸ್ತ್ರ ಪಾಣಿಗಳಾಗಿ ನಿಷ್ಠಾಳರ ಮೇಲೆ ತಿರುಗಿಬೀಳಬೇಕೆಂದು ಬೋಧಿಸುತ್ತಿರುವವರು ಶಾಂತಾಸ್ತ್ರಧಾರಿಗಳಾದ ಭಾರತೀಯರು ಸ್ವತಂತ್ರ ಸಂಪಾದನೆಗಾಗಿ ಸತ್ಯಾಗ್ರಹವನ್ನು ಚರಿಸುತ್ತಿರುವುದನ್ನು ಕಂಡು ಕಿಡಿಕಿಡಿಯಾಗುತ್ತಿರುವುದು ಯಾವ ನ್ಯಾಯವೆಂಬುದಾಗಿ ವಿ|| ಹೊರೇಸ್ ಅಲೆಕ್ಸಾಂಡರವರು "ಇಂಡಿಯಾ ಸಿನ್ಸ್ ಕ್ರಿಪ್ಸ್" ಎಂಬ ಪುಸ್ತಕದಲ್ಲಿ ಪ್ರಶ್ನಿಸಿದ್ದಾರೆ. ಗಾಂಧೀಜಿಯವರ ಉಪವಾಸಕಾಲದಲ್ಲಿ ಅಲೆಕ್ಸಾಂಡರರು ಪೂನೆಯಲ್ಲಿದ್ದರು.

ಜರ್ಮನ್ ಸೈನ್ಯದ ನಿರ್ಮೂಲೀಕರಣ

ಹಿಟ್ಲರನು ಜರ್ಮನ್ ಸೈನ್ಯದಕ್ಷಿಣದ ಶಕ್ತಿಗಳನ್ನು ನಿಷ್ಕ್ರಿಯ ಮಾಡಬೇಕೆಂದು ನಿಶ್ಚಯಿಸಿರುವಂತೆ ತೋರುತ್ತದೆ ಜನರಲ್ ಸ್ಟಾಫಿನ ಅಧಿಕಾರಿಗಳ ವರ್ತನೆಯನ್ನು ಒಂದು ವಿಶೇಷ ಕಮಿಟಿ ಪರಿಶೀಲಿಸುವುದು. ಕೆಲವು ಅಧಿಕಾರಿಗಳನ್ನು ವಜಾಮಾಡಲಾಗಿದೆ ಕೆಲವರಿಗೆ ಶಿಕ್ಷೆಯಾಗಿದೆ

ಇಂಜನೀಯರುಗಳ ವರ್ಗಾವರ್ಗಿ

ಸ್ವಂ.ಸು.] ಬೆಂಗಳೂರು ೫

ಕೆಳಗೆ ಕಂಡಂತೆ ಪಿ|| ಎಂಜನೀಯರುಗಳ ವರ್ಗಾವರ್ಗ ಆಜ್ಞೆಯಾಗಿದೆ :- ಶ್ರೀಮಾನ್ ಎಂ. ಎ. ತಿರುಮಲಾಚಾರ್. ತುಮಕೂರಿನಿಂದ ತಿಪಟೂರಿಗೆ, ಜಿ ಕೃಷ್ಣಸ್ವಾಮಿ, ಮೈಸೂರ್ ಸರ್ಕಲ್ ಸೂಪರಿಂಟೆಂಡಿಂಗ್ ಎಂಜನೀಯರ್ ಕಚೇರಿಯಿಂದ ತುಮಕೂರು ಒಂದನೇ ಸಬ್‌ಡಿವಿಜನಿಗೆ; ಬಿ ಎನ್. ನಾರಾಯಣಸ್ವಾಮಿ ಕೋಲಾರದಿಂದ ಮೈಸೂರು ಸರ್ಕಲ್ ಸೂಪರಿಂಟೆಂಡಿಂಗ್ ಎಂಜನೀಯರ್ ಪರ್ಸನಲ್ ಅಸಿಸ್ಟೆಂಟರಾಗಿ, ವಿ. ಕೋದಂಡರಾಮಯ್ಯ ಚಿಕ್ಕಬಳ್ಳಾಪುರದ ಸಬ್‌ಡಿವಿಜನಿಗೆ.

ಮರಾಮತ್ ಸಚಿವರು

ಮರಾಮತ್ ಸಚಿವರು ೭ ನೇ ತಾರೀಖು ರಾತ್ರಿ ಭದ್ರಾವತಿಗೆ ಪ್ರಯಾಣಮಾಡಿ, ಅಲ್ಲಿ ೮ ನೇ ತಾರೀಖು ಇದ್ದು ೯ ನೇ ತಾರೀಖು ಪ್ರಾತಃಕಾಲ ಅಲ್ಲಿಂದ ಕೋಲಾರಕ್ಕೆ ಹೋಗಿ, ಆ ರಾತ್ರಿಯೇ ಕೋಲಾರದಿಂದ ಹೊರಟು, ೧೦ ನೇ ತಾರೀಖು ಬೆಂಗಳೂರಿಗೆ ವಾಪಸು ಬರುವರು.

ಬಿ. ಟಿ. ಕೇಶವಯ್ಯಂಗಾರ್

ದಿವಾನ ಸಂಸ್ಥಾನದ ಪಿಂಚಿನ್ ಮಂತ್ರಿಗಳಾದ ರಾಜಸೇವಾಸಕ್ತ ಶ್ರೀ ಬಿ. ಟಿ ಕೇಶವಯ್ಯಂಗಾರ್ಯರು ೩೦ ನೇ ತಾರೀಖು ಬೆಂಗಳೂರಿಗೆ ಬಂದು ಸುಮಾರು ೧೫ ದಿನಗಳು ಇರುವರೆಂದು ಗೊತ್ತಾಗಿದೆ.

ಬ್ರಿ|| ವಿಮಾನ ಪಡೆಯುವರ ಒತ್ತಾಯ

"ಗಾಂಧಿಯವರ ಸಲಹೆಯನ್ನು ಕಸದ ಬುಟ್ಟಿಗೆ ಹಾಕಿರುವುದನ್ನು ನೋಡಿ-ನಮಗೆ ಸಮ್ಮನೆ ಕುಳಿತುಕೊಂಡಿರುವುದಕ್ಕಾಗುವುದಿಲ್ಲ ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಿಂದ ಮಿತ್ರ ಯುದ್ಧೋದ್ಯಮಕ್ಕೆ ಅಳೆಯಲಾರದ ಸಹಾಯ ದೊರಕುತ್ತೆ. ಈಗ ಭಾರತದಲ್ಲಿ ಕ್ಷಾಮಪೀಡೆಯು ಕರಾಳ ಸ್ವರೂಪದ ಛಾಯೆ ಇನ್ನೂ ತೊಲಗಿಲ್ಲ. ಕಷ್ಟ ಪರಿಸ್ಥಿತಿಗಳನ್ನೆದುರಿಸುತ್ತಾ ದುರ್ಬಲರಾಗಿರುವ ಭಾರತೀಯರ ಕಷ್ಟ ಸುಖಗಳನ್ನು ಅರಿಯಬೇಕಾದವರನ್ನು ನೋಲಿಸಬೇಕಾದಲ್ಲಿ ರಾಷ್ಟ್ರೀಯ ಸರ್ಕಾರ ಅಗತ್ಯ ಎಂದು ಬ್ರಿಟಿಷ್ಷಿನ ವಿಮಾನಪಡೆಗೆ ಸೇರಿದ ೪೧ ಜನರು ಸಹಿ ಹಾಕಿದ ಹೇಳಿಕೆಯೊಂದು 'ಡೈಲಿ ವರ್ಕರ್' ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ಗಾಂಧೀಜೀ

ಸರಿಯಾಗಿ ಎರಡು ವರ್ಷಗಳ ನಂತರ ಮಹಾತ್ಮರು ೩ ನೇ ತಾ|| ಸೇವಾಗ್ರಾಮ ಆಶ್ರಮವನ್ನು ಸೇರಿದರು. ಬಂದೊಡನೆ ಸ್ನಾನಾಲಯದ ಕುಟೀರಕ್ಕೆ ಭೇಟಿ ಇತ್ತರು ಅಲ್ಲಿ ಆಳೆತ್ತರ ಚಿತ್ರವಿತ್ತು, ದೀಪವೊಂದು ಉರಿಯುತ್ತಿತ್ತು. ಅದನ್ನು ನೋಡಿ ಮಹಾತ್ಮರು ಮೌನಧರಿಸಿದರು. ಎರಡು ವರ್ಷದ ಹಿಂದೆ ಗುಂಡಿನಿಂದ ಒಬ್ಬ ಕಾಂಗ್ರೆಸ್ ಸೇವಕನು ಮಡಿದ 'ಸ್ಮರಣೆ' ಗಾಂಧೀಜಿ ಭೇಟಿಇತ್ತಾಗ ರಾಷ್ಟ್ರ ಸಂಘದ ವಿಷಯವನ್ನು ಪರಿಶೀಲಿಸಿದರು.

೨ ಮೈಲಿ ಓಟದ ಸ್ಪರ್ಧೆ

೮ ನಿಮಿಷ ೪೩ ಸೆಕೆಂಡುಗಳಲ್ಲಿ ಎರಡು ಮೈಲಿ ದೂರ ಓಡಿ ಸ್ವೀಡನ್ನಿನ ಗುಂಡರ್ ಹೆಗ್ ಅಮೆರಿಕದ ಪ್ರಪಂಚದ ರೆಕಾರ್ಡನ್ನು ಸ್ಥಾಪಿಸಿದ್ದಾನೆ

ಸಿಲ್ಕ್ ಫಿಲೇಚರ್‍ಸ್‌ನ ವಾರ್ಷಿಕೋತ್ಸವ

ಮೈಸೂರು ೫

ಈ ದಿನ ಮೈಸೂರು ಸಿಲ್ಕ್‌ಫಿಲೇಚರ್‍ಸ್‌ನ ಮೈಸೂರು ಶಾಖೆಯ ಪ್ರಥಮ ವಾರ್ಷಿಕೋತ್ಸವವು ರಂಜನೀವಾಸದ ಶ್ರೀಮಾನ್ ನವರತ್ನ ರಾಮರಾಯರವರ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯಿತು. ಮ್ಯಾನೇಜರವರಾದ ಶ್ರೀ ಎ. ಆರ್. ... ವರದಿಯನ್ನೋದಿ—ಈ ಕಾರ್ಖಾನೆ ಪ್ರಾರಂಭವಾದಾಗ ೪೮ ಬೇಸಿನ್‌ಗಳಿದ್ದುವು. ಈಗ ೨೦೦ ಬೇಸಿನ್‌ಗಳಿವೆ; ೬೦೦ ಜನ ಕೆಲಸಗಾರರಿದ್ದಾರೆ; ಕೆಲಸಗಾರರಿಗೆ ದಿನಸಿ ಡಿಪೋ, ಊಟದಮನೆ, ನಾಟಕ ಸಂಘ, ಸಹಕಾರ ಸಂಘ ಮುಂತಾದುವುಗಳ ಏರ್ಪಾಟು ಮಾಡಿದೆ; ಕೆಲಸಗಾರರಿಗೆ ತೋಟದಲ್ಲಿ ಬೆಳೆದ ತರಕಾರಿಯನ್ನು ಅಗ್ಗದ ಬೆಲೆಗೆ ಕೊಡಲಾಗುತ್ತೆ; ಬಂಗಾಳದ ಕ್ಷಾಮ ನಿವಾರಣಾ ನಿಧಿಗೆ ಕೆಲಸಗಾರರೆಲ್ಲಾ ಒಂದು ದಿನದ ಕೂಲಿಯನ್ನು ಕೊಟ್ಟರು: ಇಷ್ಟೇ ಅಲ್ಲದೆ ಯುದ್ಧಸೇವೆಗೆ ತುಂಬಾ ಸಹಕಾರಿಯಾಗಿದೆ-ಎಂದು ಹೇಳಿದರು.

ಅನಂತರ ಆಟಪಾಟಗಳಲ್ಲಿ ಗೆದ್ದ ಸ್ಪರ್ಧಿಗಳಿಗೆ ... ಬಹುಮಾನಗಳೂ, ಕೆಲಸಗಾರರಿಗೆ ... ಬಹುಮಾನಗಳೂ, ... ಬಹುಮಾನಗಳೂ ಪ್ರದರ್ಶನದಲ್ಲಿ ... ಬಹುಮಾನಗಳೂ ದೊರೆತುವು. ಈ ಬಹುಮಾನಗಳಿಗೆ ... ರೂ ಗೆ ... ಕಾರ್ಖಾನೆಯವರು ... ಅಧ್ಯಕ್ಷರು ಭಾಷಣ ಮಾಡಿ ... ಕೈಗಾರಿಕೆಯು ... ಸೇವೆ ಮಾಡುತ್ತಿದೆ. ಯುದ್ಧಕ್ಕಾಗಿ ... ಕಂಟ್ರೋಲ್ ದರದಲ್ಲಿ ಇದನ್ನು ಸರ್ಕಾರಕ್ಕೆ ಒದಗಿಸುವುದಕ್ಕೆ ... ಲಾಭ ಬರುತ್ತಿತ್ತು. ... ಸೇವೆಗಾಗಿ ... ಈ ಕಾರ್ಖಾನೆ ... ದೊರೆತ ... ಭಾಗ ಪರದೇಶದಿಂದ ಬರುತ್ತಿತ್ತು. ಈಗ ಇಷ್ಟೆಲ್ಲ ನಮ್ಮ ದೇಶದಲ್ಲೇ ಉತ್ಪತ್ತಿಯಾಗಿದೆ. ಇದರಲ್ಲಿ ಮೈಸೂರು ದೇಶವೇ ಪ್ರಥಮ ಸ್ಥಾನವನ್ನು ಪಡೆದಿದೆ. ಸಹಸ್ರಾರು ಜನ ಕೆಲಸಗಾರರಿಗೆ ಜೀವನ ಕಲ್ಪಿಸಿಕೊಟ್ಟಿರುವ ಈ ಕೈಗಾರಿಕೆಯು ಬ...

ರಾಷ್ಟ್ರೀಯ ಸಂಘ

ಮೈಸೂರು ೫

ಪೇಟೆಯ ... ಸಂಘದ ಪ್ರಾರಂಭೋತ್ಸವವನ್ನು ಶ್ರೀಮಾನ್ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ಯರವರು ಮೊನ್ನೆ ವಾಣೀವಿಲಾಸಪುರದಲ್ಲಿ ಸಂಘದ ಭವನದಲ್ಲಿ ನೆರವೇರಿಸಿದರು. ಪ್ರಾರ್ಥನೆಯಾದನಂತರ ಆರಂಭ ಭಾಷಣವಾಯಿತು. ನಲ್ಲರಕೆ ಮತ್ತು ಕೃಷ್ಣಮೂರ್ತಿ ಎಂಬ ಬಾಲಕರಿಂದ ಸಂಗೀತವೂ ನಡೆಸಲಾಯಿತು.

ನಂತರ ಸಂಘದ ಬಾಗಿಲನ್ನು ತೆರೆದು, ಅಧ್ಯಕ್ಷರು ಭಾಷಣಮಾಡಿದರು. "ಸಂಘಗಳು ಬಾಲಕರೂ, ವಿದ್ಯಾರ್ಥಿಗಳೂ ತಮ್ಮ ಕೆಲಸಗಳನ್ನು ನಡೆಸತಕ್ಕ ಸ್ಥಳಗಳು. ಮನೆಗಳಲ್ಲಿ ಅವರು ದೇಶೋದ್ಧಾರದ ಕೆಲಸಗಳನ್ನು ಮಾಡಲು ಆಗುವುದಿಲ್ಲ. ಶಾಲೆಗಳಲ್ಲಂತೂ ಪಾಠಪ್ರವಚನಗಳು ನಡೆಯುತ್ತವೆ. ಇಂತಹ ವಿದ್ಯಾರ್ಥಿ ಸಂಘಗಳಲ್ಲಿ ಮಾತ್ರ ಎಲ್ಲರೂ ಸೇರಿ ಕೆಲಸ ನಡೆಸಲು ಸಾಧ್ಯವಾಗುತ್ತದೆ. ಆದ್ದರಿಂದ ಸಂಘಗಳು ದೇಶದಲ್ಲಿ ಆವಶ್ಯಕ. ಸಂಘಗಳು ಎಷ್ಟು ಹುಟ್ಟಿದರೂ ಕೇಡಿಲ್ಲ. ಪ್ರತಿಯೊಂದು ಸಂಘದಲ್ಲಿಯೂ ತಮ್ಮ ತಮ್ಮ ಧ್ಯೇಯಗಳನ್ನು ಅವರು ನಡೆಸಿಕೊಂಡರೆ ಸಾಕು. ಸಂಘಗಳಲ್ಲಿ ಸ್ಪರ್ಧೆ ಇರಬಾರದು. ಒಬ್ಬರನ್ನು ಮತ್ತೊಬ್ಬರು ದ್ವೇಷಿಸುವುದು ತೊಲಗಿ ಎಲ್ಲರೂ ಸೌಹಾರ್ದದಿಂದ ಕೆಲಸ ನಡೆಸಬೇಕು. ಹುಡುಗರಿಗೆ ಕೆಲಸಕಾರ್ಯಗಳಲ್ಲಿ ಪ್ರೋತ್ಸಾಹಿಸುವವರು ಅಗತ್ಯ" ಎಂದು ಹೇಳಿದರು.

ಕಸ್ತೂರಿ ಬಾ ನಿಧಿಗೆ ೫-೧-೧ ಕ್ಕೆ ವಸೂಲಾಯಿತು. ಸಂಘದ ಬಾಲಕರಿಂದ ಹಾಸ್ಯ ... ಮುಂತಾದುವು ನಡೆದುವು. ಕಾರ್ಯದರ್ಶಿಯವರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

...ಹಳ ಮಹತ್ವ ಪೂರ್ಣವಾದುದು," ಎಂದರು.

ಶ್ರೀ ಜಯರಾಯರು ವಂದನೆಗಳನ್ನರ್ಪಿಸಿದರು. ಈ ಉತ್ಸವದ ವಿನೋದಗಳಿಗೆ ಒಹಳ ಪ್ರೋತ್ಸಾಹವಿತ್ತ ಮ್ಯಾನೇಜಿಂಗ್ ಏಜೆಂಟರಾದ ಶ್ರೀಮಾನ್ ಕೃಷ್ಣಸ್ವಾಮಿಯವರು ಈ ಸಮಾರಂಭದಲ್ಲಿ ಭಾಗವಹಿಸಿ ... ಆರಂಭೋತ್ಸವ ನಡೆಸಿದರು. ಈ ಸಮಾರಂಭದ ಫಲವಾಗಿ ... ಮಹಾಸಭೆಯ ... ರಾತ್ರಿ ಭೋಜನ ... ಕೆಲಸಗಾರರೆಲ್ಲಾ ... ಕಾಲಕ್ಷೇಪ ಮಾಡಿದ್ದಾರೆ

ಉಜ್ವಲ ಸಾಹಿತ್ಯ ಭಂಡಾರ

ಮೈಸೂರು ೬

ವಾಣೀವಿಲಾಸ ಮೊಹಲ್ಲಾದ ಉಜ್ವಲ ಸಾಹಿತ್ಯ ಭಂಡಾರದ ಆಶ್ರಯದಲ್ಲಿ ನೆನ್ನೆ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಸಾಯಂಕಾಲ ೬ ಗಂಟೆಗೆ ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ 'ಸಾಹಿತ್ಯಾಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ' ಪಾತ್ರವನ್ನು ಕುರಿತು ಭಾಷಣ ಮಾಡಿದರು.

ನೆಲ್ಲಂದ ವಿಷಯದ ಮೇಲೆ ಮಾತನಾಡುತ್ತಾ ಕೃಷ್ಣಶರ್ಮರು 'ಪ್ರಾಚೀನ ಸಾಹಿತಿಗಳು ... ಅವಮಾನುಷ ಕಥೆಗಳನ್ನು ಕಟ್ಟಿ, ಇಲ್ಲವೇ ರಾಜರನ್ನು ಹೊಗಳಿ, ಇಲ್ಲವೇ ರಾಮಾಯಣ ಮಹಾಭಾರತಗಳನ್ನು ಕುರಿತು ಸಾಹಿತ್ಯರಚನೆ ಮಾಡುತ್ತಿದ್ದರು. ಆದರೆ ಸಾಹಿತ್ಯವಿರುವುದು ಸಾಹಿತಿಯ ಆನಂದಕ್ಕಲ್ಲ. ಜನಜೀವನದ ಪ್ರತಿಬಿಂಬವದಾಗಬೇಕು. ಇಂದಿನ ಕವಿಗಳು ತಮ್ಮ ಅಮಾನುಷ ರಾಜ್ಯಗಳಲ್ಲಿ ... ಕುಂತರ ... ಇಂದಿನ ಕವಿಗಳು ತಮ್ಮ ಸಾಹಿತ್ಯದ ಮೂಲಕ ನಮಗೆ ... ದ್ದಾರೆ. ... ವಿಲಾಸ ಜೀವನದ ಕಥೆ, ಹಾಗೂ ಸಾಮಾಜಿಕ ದುರವಸ್ಥೆಗಳನ್ನು ಚಿತ್ರಿಸುತ್ತಾರೆ. ಇಂದಿನ ಭಾರತೀಯರ ನಮ್ಮ ಸಂಕಲ್ಪವಾದ ಸ್ವಾತಂತ್ರ್ಯದ ... ದೇಶಾಭಿಮಾನಗಳನ್ನವಾವು ಬಿಂಬಿಸುವ ಸಾಹಿತಿಗಳು ಇಂದಿನ ಭಾರತೀಯರ ಸಂಕಲ್ಪ, ಹಾಗೂ ದೇಶಾಭಿಮಾನಗಳನ್ನು ಬೆಳಸಿ, ಸಾಹಿತ್ಯದ ರಚನೆಮಾಡಲಿ. ವಿದ್ಯಾರ್ಥಿಗಳ ಕೃತಿ ಅವರ ಕೈಲಿಗೆ ದೊರಕ್ಕುವ ... ಅಮೂಲ್ಯ ... ಯನ್ನಿಸ ... ಕಾರಣ ಅವರು ... ಯೋಗ್ಯತೆಯನ್ನು ಬೆಳಸಿ ಸಂಪೂರ್ಣತೆಯನ್ನು ... ಸಾಹಿತ್ಯಕ್ಕಾಗಿ ದುಡಿದು ಅದನ್ನು ಬೆಳೆಸಬೇಕು.' ಎಂಬುದಾಗಿ ಕೋರಿದರು.

ಭಂಡಾರದ ಕೈಬರಹದ ಪತ್ರಿಕೆ 'ಪ್ರಿಯದರ್ಶಿನಿ'ಗೆ ಸಂದೇಶಗೊಡುತ್ತಾ ಅವರು "ಕನ್ನಡದಲ್ಲಿ ಬರೆವರಿಗೆ ಬೆಳೆಯಲಿ ಎಂದು ಆಶಿಸುವ ಸಾಹಿತಿ ಇಂತಹ ಹಸ್ತಪತ್ರಿಕೆ...

ಎಂ. ಎಸ್. ಎಸ್. ಮತ್ತು ಕಂಪೆನಿ
(ಶ್ರೀ ಲಕ್ಷ್ಮೀ ಪ್ರಾವಿಷನ್ ಸ್ಟೋರ್‍ಸ್)
ಜನರಲ್ ಮರ್ಚೆಂಟ್ಸ್, ಸ್ಟೇಷನರ್‍ಸ್ ಅಂಡ್ ಜನರಲ್ ಮರ್ಚೆಂಟ್ಸ್
3619, ವಾಣೀವಿಲಾಸಪುರಂ,
ಮೈಸೂರು.

Edited, printed and published by A. R. Nagarajan, at the Sadhvi Press, D Subbiah Road, Mysore.

ಒಂದು ವಾರದ ಅಕ್ಕಿಯೂ ಇಲ್ಲ

...ದಲ್ಲಿ ದೊರೆಯುವ ಭತ್ತವನ್ನೆಲ್ಲಾ ಕೊಂಡು ಅಧಿಕಾರಿಗಳು ಹೊರಗೆ ಸಾಗಿಸಿರುವ ಪ್ರಯುಕ್ತ ತಿರುಚನಾಪಳ್ಳಿ, ಮತ್ತು ಶ್ರೀರಂಗಗಳಲ್ಲಿ ರೇಷನ್ ಪ್ರಮಾಣದಂತೆ ಅಕ್ಕಿಯನ್ನು ಕೊಡಲು ಅಧಿಕಾರಿಗಳು ಪರದಾಡುತ್ತಿದ್ದಾರೆ. ಇಲ್ಲಿ ಒಂದು ವಾರದ ದಾಸ್ತಾನು ಕೂಡ ಇಲ್ಲ. ಮೇಲಧಿಕಾರಿಗಳಿಗೆ ವರದಿಯಿಡಲಾಗಿದೆ.

ಅಖಂಡ ಹಿಂದೂಸ್ಥಾನ ಸಮ್ಮೇಳನ

ಹಿಂದೂಸ್ಥಾನವನ್ನು ಒಡೆಯಕೂಡದೆಂದು ನಂಬುವ ರಾಜಕೀಯ ಪಂಗಡಗಳನ್ನೆಲ್ಲಾ ಒಂದುಗೂಡಿಸಲು ದಹಲಿಯಲ್ಲಿ ಹಿಂದೂಮಹಾಸಭೆಯವರು ಸಧ್ಯದಲ್ಲಿಯೇ ಅಖಂಡ ಹಿಂದೂಸ್ಥಾನ ಸಮ್ಮೇಳನವೊಂದನ್ನು ಕರೆಯಲಿರುವರು.

ರೈಲ್ವೆ ಅಭಿವೃದ್ಧಿಗೆ ೩೦೦ ಕೋಟಿ

ಯುದ್ಧಾನಂತರ ಏಳು ವರ್ಷಗಳಲ್ಲಿ ಹಿಂದೂಸ್ಥಾನದ ರೈಲುಗಳನ್ನು ಅಭಿವೃದ್ಧಿಪಡಿಸಿ ದುರಸ್ತು, ಪುನರ್ರಚನೆ ವರ್ಗಾವಣೆ, ಇಂಜಿನ್ ತಯಾರಿ ಮುಂತಾದುವುಗಳಿಗೆ ೩೦೦ ಕೋಟಿ ರೂ ನ ಒಂದು ಯೋಜನೆಯನ್ನು ತಯಾರು ಮಾಡಲಾಗಿದೆ.

...ಕೆಗಳು ಎಷ್ಟುಬಂದರೂ ಸಂತೋಷ! ಆದರೆ ನನ್ನ ಸೂಚನೆಯೊಂದೇ :—ನೀವು ಓದುವುದು ನಿಮ್ಮ ಜೀವನದ ಸತ್ವವಾಗಲಿ, ವೀರರಸಾಭಾಸಭರಿತರಾದ ಸಾಹಿತ್ಯ ವೀರರಸದ ಸಾಹಿತ್ಯನಿರ್ಮಾಣವಾಗಲಿ. ದೇಶಪ್ರೇಮಿಗಳಂದ ನಾವು ನಮ್ಮ ದೇಶಪ್ರೇಮವನ್ನು ಸ್ಫೋಟಿಸೋಣ' ಎಂದರು.

ವಂದನಾರ್ಪಣೆಯಾದ ಕಸ್ತೂರಿ ಬಾ ನಿಧಿಗೆ ಭಂಡಾರವು ತನ್ನ ಮೊದಲನೆ ಕಾಣಿಕೆಯಾದ ಹನ್ನೊಂದು ರೂ ಅನ್ನು ಅದಿಗೆ ಅರ್ಪಿಸಿ.. ಎರಡನೆಯ ಕಾಣಿಕೆಯನ್ನು ಮುಂದಿನ ತಿಂಗಳು ಕೊಡುವುದಾಗಿ ಘೋಷಿಸಿಯಿತ್ತಿತು. 'ವಂದೇ ಮಾತರಂ' ನಂತರ ಸಭೆ ಮುಕ್ತಾಯವಾಯಿತು.

'ಹೊಳಿಗೆ ಕೆಲಸದವರು ಕೂಡಲೇ ಬೇಕು.
ಮೈಸೂರು ಸರ್ಕಾರದಿಂದ ಅಂಗೀಕರಿಸಲ್ಪಟ್ಟಿರುವ
ಶ್ರೀ ರಾಜಲಕ್ಷ್ಮೀ ಹಾಲ್ ಮತ್ತು ಟೈಲರಿಂಗ್ ಇನ್ಸ್‌ಟಿಟ್ಯೂಟ್.
ಕೆ. ಎಂ. ಉತ್ತರಕರ್,
ಪ್ರೊಪ್ರೈಟರ್ ... (Hons.)
ಶ್ರೀರಾಂಪೇಟೆ, ಮೈಸೂರು.

ಇವೊತ್ತೇ ಕಸ್ತೂರಿ ಬಾ ನಿಧಿಗೆ ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು! ಕೈಗಾರಿಕೆ ಸಂಸ್ಥೆಗಳು!
ಬಾಲಿಕಾ ಶಾಲೆಗಳು! ಮಹಿಳಾ ಚಿಕಿತ್ಸಾಲಯಗಳು!
ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.
ನಿಮ್ಮಲ್ಲಿ ವಸೂಲಾದ ಹಣ ನಮಗಾಗಿಯೇ ವಿನಿಯೋಗ.
ಸಿ. ಗೋಪಾಲಯ್ಯನ ಶೆಟ್ಟಿ, ಎಸ್. ಚನ್ನಯ್ಯ, ಒರಳಿ ರಾಮಪ್ಪ,
... ... ಅಧ್ಯಕ್ಷ

ಸ್ತ್ರೀ ಯರ ಸೌ ಕರ್ಯ ಕ್ಕೆ
ಬಾಲೆ ... ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ... ವ್ಯವಸ್ಥೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಉಪಯೋಗಿಸಿ.
ಬಿ. ಪುಟ್ಟಣ್ಣ, ಡಿನಕುಮಂಡಿ, ದೇವರಾಜ ಮಾರ್ಕೆಟ್, ಮೈಸೂರು
... ಮಂಡಿಯಲ್ಲಿ, ಬಿಡಿಯಾಗಿ ಎಲ್ಲಾ ವಸ್ತುಗಳನ್ನು ... ದೊರೆಯುವುದು

WEEKLY EDITION

ಸಂಪುಟ ೯] ಸೋಮವಾರ ೭-೮-೪೪ [ಸಂಚಿಕೆ ೩

ಆಗಸ್ಟ್ ೯ ನೇ ತಾ॥ಗೆ ಗಾಂಧೀಜಿ ಸೂಚನೆ

ಮೈ॥ ಜಿ॥ ಬೋರ್ಡ್ ಉಪಾಧ್ಯಕ್ಷತೆಗೆ ಕಾಂಗ್ರೆಸ್ ವಿಜಯ

ಕರ್ಕರ್ಹಳ್ಳಿ ಸಿಪಾಯಿಗೆ ರಷ್ಯಾ ದೇಶದ ಗೌರವ

ಜಿ. ಮಲ್ಲಣ್ಣನವರು ಉಪಾಧ್ಯಕ್ಷರು

ಮೈಸೂರು ೭

ಈ ದಿವಸ ಮೈಸೂರು ಜಿಲ್ಲಾ ಬೋರ್ಡಿನ ಪುನಸ್ರಚಿತ ಸಭೆಯು ಪ್ರಥಮ ವೇಟಿಂಗು ಶ್ರೀಮಾನ್ ಕೆ. ಸಿ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ೧ ಗಂಟೆಗೆ ಸೇರಿತು.

ಪ್ರಾರಂಭದಲ್ಲಿ ಅಧ್ಯಕ್ಷರು ಸದಸ್ಯರುಗಳಿಗೆ ಸ್ವಾಗತವಿತ್ತು ನಾವೆಲ್ಲಾ ಒಂದೇ ಪಕ್ಷದವರೆಂಬ ಭಾವನೆಯಿಂದ ಸೇವೆ ಸಲ್ಲಿಸೋಣ ವೆಂಬುದಾಗಿ ಆಶಿಸಿದರು. ಬಂದಿದ್ದ ಎ॥ ಜಿ॥ ಸದಸ್ಯರಾದ ಶ್ರೀಮಾನ್ ಕೆ. ನರಸಿಂಹಯ್ಯಂಗಾರ್ಯರು ಶ್ರೀಮನ್ಮಹಾರಾಜರ ಕಾರ್ಯದರ್ಶಿಗಳಾದುದಕ್ಕೆ ಅಭಿನಂದನೆಯನ್ನೂ ಹೊಸದಾಗಿ ಆಗಮಿಸಿರುವ ಶ್ರೀಮಾನ್ ಸೂರ್ಯನಾರಾಯಣರವರಿಗೆ ಸ್ವಾಗತವನ್ನು ಬಯಸಿದರು

ಈ ಹಿಂದೆ ತಿಳಿಸಿದಂತೆ ಡಿ॥ ಬೋ॥ ಅಧ್ಯಕ್ಷರು ಪತ್ರವ್ಯವಹಾರದ ಮೂಲಕ ಬೋರ್ಡಿಗೆ ಉಪಾಧ್ಯಕ್ಷರು ಬೇಕೇ ಬೇಡವೇ ಕೇಳಿದ್ದರಲ್ಲಿ ಬೇಕು ಎಂಬುದಾಗಿ ತೀರ್ಮಾನವಾಗಿದೆ, ಎಂದರು.

ಶ್ರೀಮಾನ್ ಯು. ಎಂ. ಗುರುಮಲ್ಲಪ್ಪನವರು ಶ್ರೀಮಾನ್ ಟಿ ಬಿ. ತೋನ್ನಪ್ಪನವರನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಉಮೇದುವಾರರನ್ನಾಗಿ ಸೂಚಿಸಿದರು. ಶ್ರೀಮಾನ್ ಸಿದ್ದವೀರಪ್ಪನವರು ಅನುಮೋದಿಸಿದರು. ಕಾಂ॥ ಪಕ್ಷದ ಪರವಾಗಿ ಶ್ರೀಮಾನ್ ಶಿವಸ್ವಾಮಿಯವರು ಶ್ರೀ ಜಿ ಮಲ್ಲಣ್ಣನವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಸೂಚಿಸಿದರು. ಶ್ರೀ ಜಿ. ಕೃಷ್ಣಮೂರ್ತಿಗಳು ಅನುಮೋದಿಸಿದರು

ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಲೋಚನೆಯನ್ನು ಮಂಜೂರ್ಮಾಡಬೇಕೆಂದು ಸರಕಾರಕ್ಕೆ ಶಿಫಾರಸ್ಸು ಮಾಡಲಾಯಿತು

ಮೈಸೂರು ಜಿಲ್ಲಾ ಬೋರ್ಡಿನ ಚುನಾವಣೆಗೆ ಸಂಬಂಧಪಟ್ಟ ಪ್ರಿಂಟಿಂಗ್ ವಗೈರೆ ಖರ್ಚು ರೂ ೯೯೩-೭-೦ ನ್ನು ಅಂಗೀಕರಿಸಲಾಯಿತು.

ಫಲಿತಾಂಶವನ್ನು ಹೇಳುವುದಕ್ಕೆ ಮುಂಚೆ ಒಂದು ವೋಟಿನಲ್ಲಿ ಗುರುತುಮಾಡಿರುವುದು ಸರಿಯಾಗಿಲ್ಲವೆಂಬ ವಿಚಾರದಲ್ಲಿ ಶ್ರೀ ಚನ್ನಬಸಪ್ಪನವರು ವೋಟುದಾರರ ಉದ್ದಿಶ್ಯ ಸ್ಪಷ್ಟವಾಗಿದೆ, ಎಂದರು. ಶ್ರೀ ಚನ್ನಬಸಪ್ಪನವರಿಗೂ, ಅಧ್ಯಕ್ಷರಿಗೂ ಬಹಳ ಬಿಸಿಬಿಸಿ ಚರ್ಚೆಯಾಯಿತು ಸದರಿ ವೋಟನ್ನು ಬೆಲೆಗೆ ಬಾರದ ಓಟು, ಎಂದು ಅಧ್ಯಕ್ಷರು ತೀರ್ಮಾನವಿತ್ತರು

ಇಬ್ಬರು ಉಮೇದುವಾರರಿಗೂ ೧೩-೧೩ ವೋಟುಗಳು ಸಮನಾಗಿ ಬಂದುದ್ದರಿಂದ ಒಂದು ೫ ವರ್ಷದ ಹೆಣ್ಣು ಮಗುವನ್ನು ಕರೆಸಿ ಚೀಟಿ ಎತ್ತಲಾಯಿತು ಶ್ರೀ ಜಿ. ಮಲ್ಲಣ್ಣನವರು ಜಯಶೀಲರಾದರು. ಶ್ರೀ ಮಲ್ಲಣ್ಣನವರು ಎಲ್ಲರಿಗೂ ವಂದನೆಗಳನ್ನರ್ಪಿಸಿದರು.

ಆರಂಭ ಭಾಷಣ

ನೆನ್ನೆ ರಾಜಧಾನಿಯ ಚಿಕ್ಕಪೇಟೆಯ ಚಿಕ್ಕವೀರದೇಶಿಕೇಂದ್ರಸ್ವಾಮಿಗಳವರ ವಿದ್ಯಾರ್ಥಿನಿಲಯದ ಸಂಘದ ಆರಂಭಭಾಷಣವನ್ನು ಶ್ರೀಮಾನ್ ಯಂ ವಿ ಜಂಬುನಾಥರವರು ಮಾಡಿದರು ಸಂಘದ ಅಧ್ಯಕ್ಷರಾದ ಶ್ರೀ ಯಸ್ ಯಂ ನಂಜುಂಡಯ್ಯನವರು ಅಧ್ಯಕ್ಷತೆ ವಹಿಸಿದ್ದರು

ವಿಬುಧಾಚಾರ್ಯರ ಜಯಂತಿ

ಮೈಸೂರು ೭

ಈದೇ ತಾರಣನಾಮ ಸಂವತ್ಸರದ ಶ್ರಾವಣ ಶುದ್ಧ ಪೌರ್ಣಮಿ (ತಾ॥ ೪-೮-೪೪) ನೇ ಶುಕ್ರವಾರ ಸಂಜೆ ಪೌರಾಣಿಕರತ್ನಂ, ಧರ್ಮಾಧಿಕಾರಿ ಹೊಳವನಹಳ್ಳಿ ಶೇಷಾಚಾರ್ಯರವರ ಉಪನ್ಯಾಸವೂ, ವಿದ್ವಾನ್ ಟಿ ಕೃಷ್ಣಯ್ಯಂಗಾರ್ಯರ ಹಾಡುಗಾರಿಕೆ ವಿದ್ವಾನ್ ಶಿವರುದ್ರಪ್ಪನವರ ಪಿಟೀಲು, ವಿದ್ವಾನ್ ನೆಲ್ಲಿಕಟ್ಟೆಶರ್ಮರವರ ಮೃದಂಗ ಜೊತೆನೆ ಶ್ರೀ ವಿಬುಧಾಚಾರ್ಯರ ಜಯಂತಿಯು ಸಂಸ್ಕೃತ ಪಾಠಶಾಲೆಯಲ್ಲಿ ಮಹಾಪಾಠಶಾಲಾಧ್ಯಕ್ಷರವರ ಸಹಾಯದಿಂದಲೂ, ಸಂಘದ ಅಧ್ಯಕ್ಷರವರ ಸಹಾಯದಿಂದಲೂ, ಬಹಳ ವಿಜೃಂಭಣೆಯಿಂದ ನಡೆಯಿತು

ಕನ್ನಡದ ಟೈಪ್‌ರೈಟಿಂಗ್ ಸ್ಪರ್ಧೆ

ಬ್ರಿಟಿಷ್ ವಾಣಿಜ್ಯ ಸಂಸ್ಥೆಯ ಆಶ್ರಯದಲ್ಲಿ ಮೇಲ್ಕಂಡ ಸ್ಪರ್ಧೆಯು ೭ ನೆಯ ತಾರೀಖು ಭಾನುವಾರ ನಡೆಸಲ್ಪಟ್ಟಿತು ಶ್ರೀಗಳಾದ ಎನ್ ಶ್ರೀನಿವಾಸಮೂರ್ತಿ ಮತ್ತು ಎನ್ ನಂಜುಂಡಶಾಸ್ತ್ರಿಗಳು ಪರೀಕ್ಷಕರಾಗಿದ್ದರು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪ್ರಭಾರೆಸಿಗೆ ಮೊದಲನೆಯ ಬಹುಮಾನ ಮತ್ತು ಡಿ ವಿ. ಶ್ರೀನಿವಾಸರಂಗಾಚಾರ್ಯರಿಗೆ ಎರಡನೆಯ ಬಹುಮಾನವೂ ದೊರೆತವು

ರಿಕ್ರಿಯೇಷನ್ ಕ್ಲಬ್

ಮಹಾರಾಜಾ ಕಾಲೇಜಿನ ರಿಕ್ರಿಯೇಷನ್ ಕ್ಲಬ್ಬಿನ ಸಾಮಾನ್ಯ ಚುನಾವಣೆ ನಡೆದು ಶ್ರೀ ಯಸ್. ರಾಜರವರು ಉಪಾಧ್ಯಕ್ಷರಾಗಿಯೂ ಶ್ರೀ ಬಿ ಯಲ್ ಸೂರ್ಯನಾರಾಯಣರಾವ್ ಮತ್ತು ಶ್ರೀ ಟಿ ಯಸ್ ನಾರಾಯಣ ಇವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಆರು ಜನ ಸದಸ್ಯರನ್ನೂ ಚುನಾಯಿಸಲಾಯಿತು

'ಚರ್ಚಿಲ್ಲನ್ನು ಹತೋಟಿಯಲ್ಲಿಡಿ'

ಇಂಗ್ಲೆಂಡಿನ ನಾರ್ಥ್‌ಕ್ಲಿಫ್ ಮಹಾ ಪತ್ರಿಕೆ ಟ. ಆ ಸ್ಥಳದ ಮತದಾರರನ್ನು ತನ್ನ "ವಿನ್ಸ್‌ಟನ್ ಚರ್ಚಿಲ್" ರನ್ನು ಹತೋಟಿಯಲ್ಲಿಡಬೇಕೆಂದು ಎಚ್ಚರಿಸಿರುವರು

ಆಗಸ್ಟ್ ೯ ನೇ ದಿನಕ್ಕೆ ಗಾಂಧೀಜಿ ಸಲಹೆ

ಆಗಸ್ಟ್ ೯ ನೇ ತಾರೀಖಿನ ದಿನ ದೇಶದಾದ್ಯಂತವೂ ಹಿಂದೂ-ಮುಸ್ಲಿಂ ಸಮಸ್ಯೆ ಪರಿಹಾರಕ್ಕಾಗಿ ನಡೆಯಲಿರುವ ಗಾಂಧಿ ಜಿನ್ನಾ ಸಮಾಗಮವು ಜಯಪ್ರದವಾಗಲೆಂದು ಭಗವಂತನು ಕರುಣಿಸುವಂತೆ ದೇಶದ ಪ್ರಜೆಗಳೆಲ್ಲರೂ ಸೇರಿ ಪ್ರಾರ್ಥನೆ ನಡೆಸಬೇಕೆಂದು ಗಾಂಧೀಜಿ ಸೂಚಿಸಿದ್ದಾರೆ ಬೊಂಬಾಯಿ ಪಟ್ಟಣವೊಂದನ್ನುಳಿದು ಇತರ ಕಡೆಗಳಲ್ಲಿ ಪೋಲೀಸರ ನಿಷೇಧ ನಿರ್ಬಂಧಗಳಿಗೆ ಮನ್ನಣೆಕೊಡಬೇಕೆಂದು ತಿಳಿಸಿದ್ದಾರೆ. ಪೋಲೀಸರ ಕೈಗೆ ಸಿಕ್ಕದೆ ಅಂತರಂಗದಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ಹೊರಗೆ ಬರಬೇಕು; ಎಲ್ಲರೂ ರಚನಾತ್ಮಕ ಕಾರ್ಯದಲ್ಲಿ ತೊಡಬೇಕು; ನೂಲು ತೆಗೆಯಬೇಕು; ಸಾಧ್ಯವಾದರೆ ಆ ದಿನ ಉಪವಾಸಮಾಡಬೇಕು--ಎಂದು ಗಾಂಧಿಜಿಯವರು ತಿಳಿಸಿದ್ದಾರೆ ಬೊಂಬಾಯಿ ನಗರಕ್ಕೆ ವಿಶೇಷ ರೀತಿಯ ಕಾರ್ಯಕ್ರಮವನ್ನು ಶಾಸ್ತ್ರಿ, ಅಲ್ಲಿನ ಮೇಯರಿಗೆ ತಿಳಿಸಿದ್ದಾರೆ. ಆದರೆ ಅವನ್ನು ಬಹಿರಂಗ ಪಡಿಸಿಲ್ಲ.

ಪ್ರಪಂಚದ ಶಾಂತಿ ವ್ಯವಸ್ಥೆ

ಪ್ರಪಂಚದ ಶಾಂತಿ ಮತ್ತು ಭದ್ರತೆಗಾಗಿ ಏರ್ಪಡಬೇಕಾಗಿರುವ ಅಂತರರಾಷ್ಟ್ರೀಯ ಸಂಸ್ಥೆಯ ಸ್ವರೂಪವನ್ನು ಕುರಿತು ಚರ್ಚಿಸ ಮೊಲುವಾಗಿ ಖಾಸಗಿಯಾಗಿ ಸಂಯುಕ್ತ ಸಂಸ್ಥಾನ, ಬ್ರಿಟನ್ ಮತ್ತು ರಷ್ಯದೇಶಗಳ ಪೂರ್ವಭಾವಿ ಮಾತುಕತೆಗಳು ವಾಷಿಂಗ್‌ಟನ್ನಿನಲ್ಲಿ ಇದೇ ೧೪ ನೇ ತಾರೀಖಿನಲ್ಲಿ ಪ್ರಾರಂಭವಾಗುವುವು. ಶಾಂತಿ ಮತ್ತು ಭದ್ರತೆಗಾಗಿ ಬಲಪ್ರಯೋಗದ ವಿಷಯವನ್ನು ಕುರಿತು ಚರ್ಚೆಯಾಗುವುದು ಗೆಹಾಯೀ ಆರ್ಥಿಕ ಮಂತ್ರಾಲೋಚನಾ ಸಭೆಯೊಂದನ್ನು ನಿರ್ಮಾಣ ಮಾಡುವರೆಂದು ತಿಳಿದುಬರುತ್ತದೆ

ಕಾಲರಾ ನಿರ್ಮೂಲ

ಪ್ರಪಂಚದಿಂದಲೇ ಕಾಲರಾ ರೋಗವನ್ನು ನಿರ್ಮೂಲಮಾಡುವ ಸಲುವಾಗಿ ಸೂಕ್ತ ವ್ಯಾಕ್ಸೀನ್ ಎಂಬ ಔಷಧವೊಂದನ್ನು ಅಮೆರಿಕದ ಡಿಸ್ಟ್ರಿಕ್ಟಿನಲ್ಲಿ ಮಾಕ್ಸ್‌ವೆಲ್ ಎಂಬ ವೈದ್ಯ ನಿಪುಣ ಕಂಡುಹಿಡಿದ್ದಾರೆ.

ಮೈಸೂರು ಸೈನಿಕರಿಗೆ ರಷ್ಯಾ ಪ್ರಶಸ್ತಿ

ರಷ್ಯಾಕ್ಕೆ ಆಹಾರ ಸಾಮಗ್ರಿಗಳನ್ನು ಕೊಂಡೊಯ್ದ ಪ್ರಶಸ್ತಿಗಾಗಿ ಕರ್ನಕರ್ನಹಳ್ಳಿ ತಾ॥ ನೇರಳಹಟ್ಟಿ ಗ್ರಾಮದ ಸುಬೇದಾರ್ ನಾರಾಯಣರಾವ್ ಸಿಕ್ಕಿಂ ಎಂಬುವರಿಗೆ ಟೆಹರಾನಿನಲ್ಲಿ ನಡೆದ ಒಂದು ಸಮಾರಂಭದಲ್ಲಿ ರಷ್ಯಾದ ರಾಯಭಾರಿಗಳು 'ರೆಡ್‌ಸ್ಟಾರ್' ಪ್ರಶಸ್ತಿಯನ್ನು ಕೊಟ್ಟಿರುವರು.

ಬೆಲ್ಲ ಸಾಗಿಸಿದುದು

ಮೈಸೂರಿಂದ ಮಂಡ್ಯದ ಕಡೆಗೆ ೩ ಗಾಡಿ ಬೆಲ್ಲವನ್ನು ರಹದಾರಿಯಿಲ್ಲದೆ ಸಾಗಿಸುತ್ತಿದ್ದುದನ್ನು ದೇವರಾಜಪೋಲೀಸಿನವರು ಪತ್ತೆಮಾಡಿ ತನಿಖೆ ನಡೆಸುತ್ತಿದ್ದಾರೆ.

ಜರ್ಮನರ ಮಾಯಾ ಸೈನ್ಯ

ನಾರ್ಮಂಡಿ ಕದನದಲ್ಲಿ ಜರ್ಮನರು ಹೊಸ ಹೊಸ ಕೌಶಲ್ಯಗಳನ್ನು ಬೆಳಕಿಗೆ ತರುತ್ತಿರುವರು ಸೇನಾ ಶಕ್ತಿಯೊಂದು ಮಿತ್ರರೊಡನೆ ಸಮರನಿರತವಾಗಿದೆಯೆಂದು ತೋರುವಂತೆ ಮಾಡುವರೀತಿಯಲ್ಲಿ ಏರಡು ಬದಲಿ ಸಿಡಿಮದ್ದಿನ ಪ್ರಯೋಗ ಮಾಡುತ್ತಾರೆ. ಅವು ಬೆಂಕಿಯಾಗಿ ಸಿಡಿಯುವ ಕಾಲದಲ್ಲಿ ಒಂದೇ ಸಾಲು ಕಾಣುವುವು. ಇದರಿಂದ ಶತ್ರುಗಳು ಅಲ್ಲಿ ಸೈನ್ಯವಿರುವರೆಂದು ಭ್ರಮೆಗೊಳ್ಳಲೆಂದು ಈ ರೀತಿಯ ಮಾಯಾ ಸೇನಾ ಶಕ್ತಿಯೊಂದನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂದು ವರದಿಯಾಗಿದೆ

ಗಾಂಧೀಜೀ

ಸರಿಯಾಗಿ ಎರಡು ವರ್ಷಗಳ ನಂತರ ಮಹಾತ್ಮರು ೩ ನೇ ಆ॥ ಸೇವಾಗ್ರಾಮ ಆಶ್ರಮವನ್ನು ಸೇರಿದರು. ಬಂದೊಡನೆ ಕಸ್ತೂರಿಬಾಯಿಯವರ ಕುಟೀರಕ್ಕೆ ಭೇಟಿ ಇತ್ತರು ಅಲ್ಲಿ ಆಕೆಯ ಚಿತ್ರವಿತ್ತು, ದೀಪವೊಂದು ಉರಿಯುತ್ತಿತ್ತು. ಅವನ್ನು ನೋಡಿ ಮಹಾತ್ಮರು ಮುಗ್ಧರಾದರು. ಎರಡು ವರ್ಷದ ಹಿಂದೆ ಗುಂಡಿನಿಂದ ಒಬ್ಬ ಕಾಂಗ್ರೆಸ್ ಸೇವಕನು ಮಡಿದ ಸ್ಥಳಕ್ಕೆ ಗಾಂಧೀಜಿ ಭೇಟಿಯಿತ್ತರು ರಾಟೆ ಸಂಘದ ವಿನಯವನ್ನು ಪರಿಶೀಲಿಸಿದರು.

ಭಾರತೀಯರ ಸತ್ಯಾಗ್ರಹ ಅನ್ಯಾಯವೆ?

ಜರ್ಮನಿಯ ಕಾಲ್ಪನಿಗೆ ಸಿಕ್ಕಿರುವ ಯೂರೋಪಿನ ರಾಷ್ಟ್ರಗಳವರು ಒಳಸಂಚು ಹೂಡಿ ಸಶಸ್ತ್ರವಾಗಿ ನಿರಂಕುಶರ ಮೇಲೆ ತಿರುಗಿಬೀಳಬೇಕೆಂದು ಘೋಷಿಸುತ್ತಿರುವವರು ಪರದಾಸ್ಯಕ್ಕೊಳಗಾದ ಭಾರತೀಯರು ಸ್ವತಂತ್ರ ಸಂಪಾದನೆಗಾಗಿ ಸತ್ಯಾಗ್ರಹ ಚಳುವಳಿಯನ್ನು ಕಂಡು ಕಿಡಿಕಿಡಿಯಾಗುತ್ತಿರುವುದು ಯಾವ ನ್ಯಾಯವೆಂಬದಾಗಿ ಮಿ॥ ಪೊರೇಸ್ ಅಲೆಕ್ಸಾಂಡರ್‌ರವರು "ಇಂಡಿಯಾ ಸಿನ್ಸ್ ಕ್ರಿಪ್ಸ್" ಎಂಬ ಪುಸ್ತಕದಲ್ಲಿ ಪ್ರಶ್ನಿಸಿದ್ದಾರೆ. ಗಾಂಧಿಜಿಯವರ ಉಪವಾಸದಲ್ಲಿ ಅಲೆಕ್ಸಾಂಡರು ಭಾಗವಹಿಸಿದ್ದರು.

ನಾಸಿಕದಲ್ಲಿ ಚಿತ್ರಶಾಲೆ

[illegible]

ವಾರ ಭವಿಷ್ಯ

ತಾ|| ೬-೮-೪೪ ರಿಂದ ೧೨-೮-೪೪ರವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ — ಆರೋಗ್ಯ ಉತ್ತಮ. ಮಾನಸಿಕ ಸಾಧಾರಣ. ವ್ಯಾಪಾರ, ನೌಕರಿಗಳಲ್ಲಿ ಹೆಚ್ಚು ಲಾಭ. ಸೌಭಾಗ್ಯವತಿಯ ಪರಿಚಯ. ತಾ|| ೬-೮-೯ ಖರ್ಚು.

ವೃಷಭ — ಕೆಲಸದಲ್ಲಿ ಜಯಶೀಲವನ್ನು ಲಕ್ಷ್ಯವಿಟ್ಟರೆ, ಸ್ವಂತ ಯಶ ಖಂಡಿತ. ಆರ್ಥಿಕ, ಮಾನಸಿಕ ಉತ್ತಮ. ಆರೋಗ್ಯ ಸ್ವಲ್ಪ ಕೆಡುವುದು. ಪ್ರವಾಸ ಸಂಭವ. ತಾ|| ೯-೧೦ ೧೧ ಪ್ರಿಯ ಜನರ ಭೇಟಿ.

ಮಿಥುನ — ಆರೋಗ್ಯ, ಮಾನಸಿಕ, ಆರ್ಥಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಲಾಭ. ವಿದ್ಯಾಭ್ಯಾಸದಲ್ಲಿ ಯಶ. ತಾ|| ೧೦ ವ್ಯಕ್ತಿಗಳ ಭೋಜನ, ಶುಭ ವಾರ್ತೆ.

ಕರ್ಕ — ಆರೋಗ್ಯ ಉತ್ತಮ. ಆದಾಯಕ್ಕೆ ತಕ್ಕ ಖರ್ಚು. ವ್ಯಾಪಾರ, ನೌಕರಿಗಳ ಸ್ಥಿತಿ ಸಮರ್ಪಕವಾಗಿ ನಡೆಯುತ್ತೆ. ಅನಿರೀಕ್ಷಿತ ಪ್ರವಾಸ. ತಾ|| ೬-೮-೯ ಪ್ರಯಾಣ, ಮಿತ್ರ ಭೇಟಿ, ಲಾಭ.

ಸಿಂಹ — ಆರೋಗ್ಯ, ಮಾನಸಿಕ ಶಾಂತಿದಾಯಕ. ಕೆಲಸದಲ್ಲಿ ಆಲಸ್ಯ. ವ್ಯಾಪಾರ ನೌಕರಿಗಳಲ್ಲಿ ಶತ್ರು ಪೀಡೆ, ಮೋಸ, ತೊಂದರೆ. ಖರ್ಚು ಹೆಚ್ಚು. ತಾ|| ೬-೮-೯ ಕಲಹ, ನೆರೆಹೊರೆಯವರ ಜಗಳ.

ಕನ್ಯಾ — ಆರೋಗ್ಯ ಸ್ವಲ್ಪ ಕೆಡುವುದು. ಆರ್ಥಿಕ ಸಾಧಾರಣ. ವ್ಯಾಪಾರ, ನೌಕರಿಗಳಲ್ಲಿ ಶತ್ರು ಪೀಡೆ. ಪ್ರವಾಸ ಕೈಕೊಳ್ಳಬೇಡಿ. ತಾ|| ೧೨ ಕ್ಲೇಶ, ಹಾನಿ.

ತುಲ — ಆರೋಗ್ಯ, ಆರ್ಥಿಕ, ಮಾನಸಿಕ, ನೌಕರಿ, ಪ್ರವಾಸ, ದಾನಧರ್ಮ, ವಿದ್ಯಾಭ್ಯಾಸ, ವೈವಾಹಿಕ ಸುಖ, ಸ್ತ್ರೀಯರ ಉತ್ತೇಜನ ಸರ್ವದೃಷ್ಟಿಯಿಂದಲೂ ಯಶ. ತಾ|| ೧೦ ಸತ್ಪ್ರಗಮನ, ಸಜ್ಜನರ ಭೇಟಿ.

ವೃಶ್ಚಿಕ — ಕೆಲಸದಲ್ಲಿ ಉತ್ಸಾಹ, ಹುರುಪು. ಆರೋಗ್ಯ, ಆರ್ಥಿಕ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಯಶ. ತಾ|| ೧೦-೧೧ ಶ್ರಮ, ಖರ್ಚು.

ಧನು — ಆರೋಗ್ಯ, ಧನ ಸ್ಥಿತಿಯು ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಲಾಭ, ಪ್ರಗತಿ. ಪ್ರವಾಸ, ದಾನಧರ್ಮಗಳಲ್ಲಿ ಯಶ. ತಾ|| ೬-೧೦ ಕಿರುಕುಳ ಪ್ರವಾಸ, ಪ್ರಿಯ ವಾರ್ತೆ, ಆಪ್ತರ ಭೇಟಿ.

ಮಕರ — ಹಿರಿಯರಲ್ಲಿ ನಂಬಿಕೆ ಇಟ್ಟು ವರ್ತಿಸಿರಿ. ಆರೋಗ್ಯ ಸಾಧಾರಣ. ಅಪಜಯ ಕೃತ್ಯ ಜರುಗುವ ಸಂಭವ. ದುಷ್ಟನ ವಿಷಯದಲ್ಲಿ ಎಚ್ಚರಿಕೆ. ಪ್ರವಾಸ ನಿಲ್ಲಿಸಿ. ತಾ|| ೯-೧೦-೧೧ ಖರ್ಚು, ಕಲಹ.

ಕುಂಭ — ಶತ್ರು ಪೀಡೆ, ದುಡ್ಡಿನ ಅಡಚಣೆ, ಕ್ಲೇಶ ದೂರವಾಗುವುದು. ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಲಾಭ. ಸಮಾಜದಲ್ಲಿ ಮಾನ ಮಾನ್ಯತೆ. ತಾ|| ೮-೧೦ ಪ್ರಸನ್ನತೆ, ಲಾಭ, ಯಶ.

ಮೀನ — ಆರೋಗ್ಯ, ಮಾನಸಿಕ, ಸಾಂಪತ್ತಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಹೆಚ್ಚಿನ ದರ್ಜೆ, ವಿದ್ವಾಂಸರ ಗೌರವ ಲಭಿಸುವುದು. ತಾ|| ೬-೮ ಗಲಾಟೆ, ಖರ್ಚು, ಆಪ್ತರ ಭೇಟಿ.

ಬ್ರಿಟನಿಯಲ್ಲಿ ಓಟ

ಬ್ರಿಟನಿಯಲ್ಲಿ ಅಮೆರಿಕದ ಸೇನೆಗಳು ಮುಂದೆ ನುಗ್ಗುತ್ತಿವೆ. ರೆನ್ನಿಸ್ ರಾಜಧಾನಿಯು ವಶವಾಗಿದೆ. ಸೆಂಟ್ ನಜೇರ್ ಕಡೆ ಮುನ್ನುಗ್ಗುತ್ತಿವೆ.——

ಸಂಯುಕ್ತ ಸಂಸ್ಥಾನದ ಸರ್ಕಾರದವರು ಬೊಂಬಾಯಿನ ಆರ್ಥಿಕ ಯೋಜನೆಯಲ್ಲಿ ಪೂರ್ಣ ಆಸಕ್ತಿ ವಹಿಸಿರುವರು. ಸುಲಭ ದರದ ಬಡ್ಡಿಯಲ್ಲಿ ಮೂಲಧನವನ್ನು ಕೊಡುವುದಾಗಿಯೂ ವಾಗ್ದಾನಗಳಾಗಿವೆ.

ವಿಮಾನದಿಂದ ಬಿತ್ತು

ಸಂಯುಕ್ತ ಪ್ರಾಂತದ ರಾಯಬರೇಲಿಯ ಹತ್ತಿರ ಬಹಳ ಎತ್ತರದಲ್ಲಿ ಹಾರುತ್ತಿದ್ದ ವಿಮಾನವೊಂದರಿಂದ ಒಂದು ನಾಯಿ ಬಿದ್ದು, ಯಾವ ಗಾಯವೂ ಆಗದಂತೆ ಒಂದು ಮರದ ಕೊಂಬೆಯಲ್ಲಿ ಇಳಿಯಿತೆಂದು ಗೊತ್ತಾಗಿದೆ.

ಭಾರತವು ಕೈಬಿಟ್ಟಂತೆಯೆ ?

ಬ್ರಿಟನ್ನಿನಲ್ಲಿರುವ ಟೋರಿಗಳು ಭಾರತವನ್ನು ಕೈಬಿಟ್ಟಂತೆಯೇ ಎಂದು ಭಾವಿಸಿರುವರೆಂದು ಅಮೆರಿಕಾ ನೀಗ್ರೋ ನಾಯಕನೊಬ್ಬನು ತಿಳಿಸುತ್ತಾನೆ. ಬ್ರಿಟಿಷ್ ಸಾಮ್ರಾಜ್ಯ ಪ್ರಭುತ್ವವನ್ನು ಮನಗಾಣದಿದ್ದಲ್ಲಿ ಚೇಂಬರ್ಲೇನರಿಗಾದ ಗತಿಯೇ ಚರ್ಚಿಲರಿಗೂ ಆಗುವುದೆಂದು ಆತನ ಅಭಿಪ್ರಾಯ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಅಪೂರ್ವ ಸಮಯ !!

ಕೇರಳ ಆಯುರ್ವೇದ ಫಾರ್ಮಸಿ

ಡೋರ್ ನಂ. 1471,

ಸಂಯ್ಯಾಜಿರಾವ್ ರೋಡ್, ಮೈಸೂರು

[illegible] ಸ್ಥಳದಲ್ಲಿ

ಪ್ರಧಾನ ವೈದ್ಯರೂ, ಸುಪ್ರಸಿದ್ಧ ಕೇರಳ ದೇಶದ ವೈದ್ಯರೂ ಆದ ಜೆ. ಕೆ. ಶಂಕರವಾರಿಯರ್ ರವರು ಈಗ ಬಂದು ತಂಗಿರುವರು.

ಇದೇ ಮಾಹೆ 7, 8 ಮತ್ತು 9 ಈ ೩ ದಿನಗಳು ಮಾತ್ರ

ಎಂತಹ ರೋಗಿಗಳನ್ನಾದರೂ ಸಾವಧಾನವಾಗಿ ಪರೀಕ್ಷಿಸಿ ಔಷಧವನ್ನು ಕೊಡುವರು.

ನಿಮ್ಮ ರೋಗಗಳನ್ನು ವಾಸಿಮಾಡಿಕೊಳ್ಳಿರಿ.

ಟೈಂ — ಪ್ರಾತಃಕಾಲ 8-30 ರಿಂದ 12 ಮಧ್ಯಾಹ್ನ 4-30 ರಿಂದ 9 30

ವೈದ್ಯ ಕೆ. ಶ್ರೀಧರನ್ ನಾಯರ್.

[illegible]

ಕೇರಳ ಆಯುರ್ವೇದೀಯ ಸಮಾಜಂ.

ನಿಮಗೆ ಯಾವುದು ಬೇಕು?

ಆಹಾರ ಪದಾರ್ಥ



ಬಟ್ಟೆ ಮತ್ತು

ಸೌದೆ

ಅಥವಾ



ರೈಲ್ವೆ ಪ್ರಯಾಣ?

ಎರಡೂ ಬೇಕೆಂದರೆ, ಸಿಗಲಾರವು. ರೈಲ್ವೆಯವರು ಹಿಂದೂಸ್ಥಾನದ ಎಲ್ಲಾ ಭಾಗಗಳಿಗೂ ಜೀವನಕ್ಕೆ ಅತ್ಯವಶ್ಯಕವಾದ ಪದಾರ್ಥಗಳನ್ನು ತಪ್ಪದೆ ಒದಗಿಸಿಕೊಡುವ ಭರವಸೆಯನ್ನು ಕೊಡಲಾಗುವುದಿಲ್ಲ. ಮತ್ತು ಜನಗಳಿಗೆ ಪ್ರಯಾಣ ಮಾಡಲು ರೈಲುಗಾಡಿಗಳಲ್ಲಿ ಮಿತಿಯಿಲ್ಲದಷ್ಟು ಸ್ಥಳವನ್ನು ಒದಗಿಸಿಕೊಡುವ ಭರವಸೆಯನ್ನು ಕೊಡಲಾಗುವುದಿಲ್ಲ. ಸಾಕಾದಷ್ಟು ಎಂಜಿನ್ನುಗಳು, ಗಾಡಿಗಳು, ವ್ಯಾಗನ್ನುಗಳು ಅವರಲ್ಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಹಿಂದೂಸ್ಥಾನಕ್ಕೆ ರೈಲ್ವೆಯವರ ಕರ್ತವ್ಯವು ತಿಳಿದೇ ಇದೆ. ಆಹಾರಪದಾರ್ಥ, ಬಟ್ಟೆ ಮತ್ತು ಸೌದೆ ಇವು ಪ್ರಥಮದಲ್ಲಿ ಬರುತ್ತವೆ. ಇವು ಜೀವನಕ್ಕೆ ಅತ್ಯವಶ್ಯಕವಾದವುಗಳು. ಇವುಗಳಿಲ್ಲದಿದ್ದರೆ, ಜನರು ಸಾಯುವರು. ಈ ಕಾರಣದಿಂದಲೇ ಈಗ ಪ್ಯಾಸೆಂಜರ್ ಗಾಡಿಗಳು ಅತ್ಯಂತ ಭರ್ತಿಯಾಗಿ, ಸ್ವಲ್ಪವೂ ಸ್ಥಳವಿಲ್ಲದೆ ಬರುತ್ತವೆ. ಇದಕ್ಕಾಗಿಯೇ ನೀವುಗಳು ಮನೆಯಲ್ಲಿಯೇ ಉಳಿಯಬೇಕು, ಮತ್ತು ತಪ್ಪದೆ ನಿಮ್ಮ ಜೀವನಕ್ಕೆ ಅತ್ಯವಶ್ಯಕವಾದ ಪದಾರ್ಥಗಳು ನಿಮಗೆ ದೊರೆಯುವಂತೆ ಮಾಡಿ ನೋಡಿಕೊಳ್ಳಬೇಕು.

ರೈಲ್ವೆಯಲ್ಲಿ ಪ್ರಯಾಣಮಾಡಬೇಡಿ

ಸಂಪುಟ ೩] ಮಂಗಳವಾರ ೮--೮--೪೪ [ಸಂಚಿಕೆ ೧೪

ಮುಸೋಲಿನಿಯವರ ಪ್ರಾಣಹರಣ ಪ್ರಯತ್ನ?

ಅಮೆರಿಕಾದ ಪಾದ್ರಿಯೊಬ್ಬರಿಗೆ ಮೈಸೂರಿನಿಂದ ಗಡೀಪಾರು

ಪೂರ್ವ ಪ್ರಷ್ಯಾದಲ್ಲಿ ಜರ್ಮನರ ಪ್ರತಿಘಾಳಿಯೆ?

ದಸರಾ ಪ್ರದರ್ಶನ ಉಂಟು

ಮೈಸೂರು ೮

ದಸರಾ ಪ್ರದರ್ಶನವು ಈ ಸಲ ಇಲ್ಲವೆಂದು ಕೆಲವು ಪತ್ರಿಕೆಗಳು ಪ್ರಕಟಿಸಿರುವ ಸುದ್ದಿ ಶುದ್ಧ ಸುಳ್ಳೆಂದೂ, ಪ್ರದರ್ಶನ ಖಂಡಿತ ಉಂಟೆಂದೂ ಖಚಿತವಾಗಿ ಗೊತ್ತಾಗಿದೆ

ಬೆಲ್ಲದ ಗಾಡಿ ಪತ್ತೆ

ನಿನ್ನೆ ಕಳುವಾದ ೩ ಗಾಡಿ ಬೆಲ್ಲವನ್ನು (ಸುಮಾರು ೧೦೦೦ ರೂ ಬೆಲೆ) ಮುದ್ದಪ್ಪ ಎಂಬುವರು ಒಂಟಿಕೊಪ್ಪಲಿನಿಂದ ಬಾಡಿಗೆಗಾಡಿ ಮಾಡಿಕೊಂಡು ಇಲ್ಲಿ ಬೆಲ್ಲ ತುಂಬಿ ರಹದಾರಿಯಿಲ್ಲದೆ ಕೃಷ್ಣರಾಜ ನಗರಕ್ಕೆ ತೆಗೆದುಕೊಂಡು ಹೋಗುತ್ತಿದ್ದರೆಂದು ತನಿಖೆಯಲ್ಲಿ ಗೊತ್ತಾಗಿದೆ.

ಅಪರಾಧಿ ಸಿಕ್ಕಿದ

ಹಿಂದೆ ನಂಜನಗೂಡು ಕಡೆಯಿಂದ ಸೇಲಂ ಕಡೆಗೆ ಸುಮಾರು ರೂ ದೀಪ್ಸ ಸಾಗಿಸುತ್ತಿದ್ದುದು ಪತ್ತೆಯಾಗಿ ಅವರಲ್ಲಿ ಮೂವರನ್ನು ಬಂಧಿಸಿದ್ದು ಒಬ್ಬನು ಪುಟ್ಟಸ್ವಾಮಿ ಎಂಬುವನು ತಪ್ಪಿಸಿಕೊಂಡು ಹೋಗಿದ್ದನಷ್ಟೆ. ನಿನ್ನೆ ದಿವಸ ಅವನನ್ನು ಸಿಲ್ಕ್ ಕಂಟ್ರೋಲ್ ಸಬ್ ಇನ್ಸ್ ಶ್ರೀ ರಾಮಚಂದ್ರಯ್ಯನವರು ಮೈಸೂರು ನಗರದಲ್ಲಿಯೇ ಪತ್ತೆ ಮಾಡಿ ಹಿಡಿದಿರುತ್ತಾರೆ

ವೈಶ್ಯ ಪತ್ರಿಕೆ ಜನ್ಮೋತ್ಸವ

ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರ ಸಂಪಾದಕತ್ವದಲ್ಲಿ ನಡೆಯುತ್ತಿರುವ "ವೈಶ್ಯ ಪತ್ರಿಕೆ" ಯ ನಾಲ್ಕನೆಯ ಜನ್ಮೋತ್ಸವವು ೧೧ ನೇ ತಾರೀಖು ಶುಕ್ರವಾರ ಸಾಯಂಕಾಲ ೬॥ ಘಂಟೆಗೆ ಒನುಮಯ್ಯನವರ ಹೈಸ್ಕೂಲ್‌ನಲ್ಲಿ ನಡೆಯುವುದು ಮದರಾಸ್ ಕಾರ್ಪೋರೇಷನ್ನಿನ ಡೆಪ್ಯೂಟಿ ಮೇಯರಾದ ಶ್ರೀ ಪಿ ಯಸ್ ಭಾಷ್ಯಂರವರು ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ "ಆರ್ಯವೈಶ್ಯ" ಪತ್ರಿಕೆಯ ಸಂಪಾದಕರಾದ ಕವಿಕಿಶೋರ ಶ್ರೀ ಜೆ ಸುಬ್ಬರಾಯ ಗುಪ್ತರು ಪ್ರಾರಂಭೋತ್ಸವವನ್ನು ನೆರವೇರಿಸುವರು ಸರ್ವರಿಗೂ ಸ್ವಾಗತವಿದೆ

ಸಂಸ್ಥಾನದಿಂದ ಗಡೀಪಾರು

ಸ್ವಂ.ಸು.ಪ್ರೋ] ಬೆಂಗಳೂರು ೮

ಅನೇಕ ದಿವಸಗಳಿಂದ ಸಾಮಾಜಿಕ ಅಭಿವೃದ್ಧಿಕಾರ್ಯದಲ್ಲಿ ತೊಡಗಿದ್ದ ಅಮೆರಿಕದ ಮಿಷನರಿ ರೆ॥ ಆರ್ ಆರ್. ಕೈಟ್ನರವರು ಈ ತಿಂಗಳು ೧೭ ನೇ ತಾ॥ ಒಳಗೆ ಸಂಸ್ಥಾನವನ್ನು ಬಿಟ್ಟು ಸರಹದ್ದಿನಿಂದಾಚೆಗೆ ಹೋಗಬೇಕೆಂದು ಸರ್ಕಾರದ ಆಜ್ಞೆಯಾಗಿದೆಯೆಂದು ತಿಳಿದುಬರುತ್ತದೆ. ಕೈಟ್ನರು ಹಿಂದೂಸ್ಥಾನವನ್ನು ಬಿಡಬೇಕಾಗಿದೆಯೆಂದೂ ಸದ್ಯದಲ್ಲೇ ಅಮೆರಿಕಾಕ್ಕೆ ಪ್ರಯಾಣಮಾಡುವರೆಂದೂ ಗೊತ್ತಾಗಿದೆ. ಇವರು ಅನೇಕ ವರ್ಷಗಳ ಹಿಂದೆ ಹಿಂದೂಸ್ಥಾನಕ್ಕೆ ಬಂದರು. ದೀನಜನರ ಸೇವೆಯಲ್ಲಿ ತೊಡಗಿದ್ದರು. ಕೆಲವು ದಿನಗಳ ಹಿಂದೆ ಸುದಂಗಿನಿಸಲ್ಲಿ ರಾಷ್ಟ್ರೀಯ ವಿದ್ಯಾರ್ಥಿಗಳ ಮೆರವಣಿಗೆ ನಡೆದಾಗ ಇವರು ಮದರಾಸ್ ಪ್ರಾಂತಕ್ಕೆ ಬರಬೇಕೆಂದು ಅಲ್ಲಿನ ಸರ್ಕಾರದವರು ನಿಷೇಧಿಸಿದ್ದರು.

ರಷ್ಯಾ-ಜಪಾನ್ ಸಂಗ್ರಾಮ?

ಆಸ್ಟ್ರೇಲಿಯಾದ ಪ್ರಧಾನಿ ಮಂತ್ರಿ ಜಾನ್ ಕರ್ಟಿನ್ನರ ಅಭಿಪ್ರಾಯದಂತೆ ಪ್ರಕಾರ ರಷ್ಯಾ ಜಪಾನಿನ ಮೇಲೆ ದಂಡೆತ್ತಿ ಹೋಗುವ ಸಂಭವವಿದೆ

ಮುಸೋಲಿನಿಯು ಮೇಲೂ ಪಿತೂರಿಯೇ

ಹಿಟ್ಲರರ ಪ್ರಾಣಹರಣ ಪ್ರಯತ್ನ ನಡೆದಾಗ ಮುಸೋಲಿನಿಯ ಪ್ರಾಣವನ್ನೂ ತೆಗೆಯಬೇಕೆಂದು ಪ್ರಯತ್ನ ನಡೆದಿತ್ತೆಂದು ಇಟಲಿ ಅಧಿಕಾರಿವರ್ಗದವರು ಹೇಳಿರುವರು. ಯಾವ ಪಿತೂರಿ ವೃಂದವು ಹಿಟ್ಲರನ ಪ್ರಾಣಕ್ಕೆ ಸಂಚುಹೂಡಿತ್ತೋ ಅದೇ ವೃಂದವು ಮುಸೋಲಿನಿಯು ಇಟಲಿಯಿಂದ ಗೊತ್ತಾದ ದಿನಕ್ಕೆ ಸಂಚಿಕೆಯಾಗಿ ಜರ್ಮನಿಗೆ ಬರುವಂತೆ ಮಾಡಿಕೊಂಡಿತು. ಹಿಟ್ಲರ್-ಮುಸೋಲಿನಿ ಭೇಟಿಯನ್ನು ತಮ್ಮ ಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ಸಂಕಲ್ಪಿಸಿದ್ದರು ಎಂದು ಇಟಲಿ ಅಧಿಕಾರಿಯೊಬ್ಬರು ತಿಳಿಸಿರುವರು

ಜರ್ಮನಿಗೆ ಅರಣ್ಯಗಳೇ ರಕ್ಷಣಾ ಕೇಂದ್ರಗಳು

ಜರ್ಮನ್ ಸೈನಿಕರು ಪೂರ್ವ ಪ್ರಷ್ಯಾದಿಂದ ಧೀರ ರೂಪವಾಗಿ ಬಂದು ಒತ್ತುತ್ತಿರುವರು ಅಲ್ಲಿ ನಡೆಯುವ ನಡೆಯುತ್ತಿರುವ ಅಧ್ಯಾಪಕ ಸಂಸ್ಥೆಯನ್ನು ಕುರಿತು, ಪ್ರಷ್ಯದ ಕೃಷಿಕ ಜನಗಳು ಕೋಟೆಬಂದಿ ಮಾಡಿಗುವ್ವುದು ತ್ತಿರುವರು. ಸಿಪ್ಪಸ್ಟಿರ್ ನಗರದ ಹರಿವಿಗೂ ಧಾರಿಣಿಗೂ ನಾಮಾನು ಶೇಖರಣೆಯಾಗುವ ಡಿಪೋಗಳು ಅಲ್ಲಿನ ಅಧ್ಯಾಪಕ ಕೋಟೆಗಳೆಂದಾಗಿವೆ. ಭೂಗರ್ಭದಲ್ಲಿ ಸಿದ್ಧಪಡಿಸಿರುವ ಕೋಟೆ, ಕೋಟೆಗಳು ಮತ್ತು ಡಿಪೋಗಳಲ್ಲಿ ಆವಿಷ್ಕರಿಸಲಾಗಿದೆ. ಇವುಗಳ ಅರಣ್ಯ ಪ್ರದೇಶವೇ ಇವರ ಭೂಪ್ರದೇಶದಲ್ಲಿ ದುರ್ಗಗಳನ್ನು ನಿರ್ಮಿಸಲು ಮೊದಲುಮಾಡಿದೆ. ಅಂತಹ ಅರಣ್ಯವೊಂದು ನಾಲ್ಕು ಮೈಲಿ ಅಗಲ ಇ ಮೈಲಿ ಉದ್ದವಿರುವುದು. ಇದಕ್ಕೆ ೫೦ ಸುರಂಗ ಮಾರ್ಗಗಳಿವೆಯೆಂದು ಜರ್ಮನರನ್ನು ಹೊಗಳಿದುದೂ ಕಾಣಬರುತ್ತಿದೆ

ಯುದ್ಧ ನಿಧಿಗೆ ಗೌರ್ನರರ ತಂಬಾಭಾರ

ಮದರಾಸಿನಲ್ಲಿ ಪ್ರಕಟವಾಗಿರುವ ಒಂದು ಪತ್ರಿಕಾಹೇಳಿಕೆಯ ಪ್ರಕಾರ ಯುದ್ಧ ಸಹಾಯಕ್ಕಾಗಿ ಸಂಯುಕ್ತ ಪ್ರಾಂತ ಗವರ್ನರ್ ಸರ್ ಮಾರೀಸ್ ಹ್ಯಾಲೆಟರ ಕೂಡದಷ್ಟು ರೂಪಾಯಿಗಳನ್ನು ಕೊಡುತ್ತಿದ್ದಾರೆ ಎನ್ನುವ ಅವರ ಸಲುವಾಗಿ ಗವರ್ನರರನ್ನು ಕುರಿತು ಮಾತನಾಡುತ್ತಾ ಒಟ್ಟು ರೂಪಾಯಿಗಳನ್ನು ತೂಕಕ್ಕೆ ಹಾಕಲಾಗಿತ್ತು.

ಪೂರ್ವ ಪ್ರಷ್ಯದಲ್ಲಿ ಭೀಕರ ಕಾಳಗ

ಪೂರ್ವ ಪ್ರಷ್ಯದಲ್ಲಿ ಜರುಗುತ್ತಿರುವ ಕಾಳಗಕ್ಕೆ ಜರ್ಮನರು ಟ್ಯಾಂಕುಗಳ ಮತ್ತು ವಿಮಾನಗಳ ಬಲಗಳನ್ನು ಅತಿಯಾಗಿ ಉಪಯೋಗಿಸುತ್ತಿದ್ದಾರೆ ವಿಶ್ಟುಲಾ ನದಿಯ ಹತ್ತಿರದಿಂದ ಪೂರ್ವ ಪ್ರಷ್ಯದವರೆವಿಗೂ ಇರುವ ರಕ್ಷಣಾ ಸಾಲುಗಳನ್ನು ಶಿಥಿಲವನ್ನಾಗಿ ಮಾಡುವ ಉದ್ದೇಶದಿಂದ ಅವರು ಹೀಗೆ ಮಾಡುತ್ತಿದ್ದಾರೆ.

ಪೂರ್ವ ಪ್ರಷ್ಯದ ಕಾಳಗ ಭೀಕರತೆಯು ಪರಮಾವಧಿಯನ್ನು ಮುಟ್ಟಿದೆ ಪ್ರತಿಘಾತಿಯನ್ನೆ ಮಾಡಬೇಕೆಂಬ ಲಕ್ಷ್ಯದಲ್ಲಿ ಜರ್ಮನರು ಈ ಕಡೆಗೆ ತಮ್ಮ ಟ್ಯಾಂಕುಗಳು, ಚಲಿಸತಕ್ಕ ತೋಪುಗಳನ್ನು ಸೂಕಿದ್ದಾರೆ

ವಾರ್ಸಾ ಕದನದ ಅಸ್ಪಷ್ಟತೆ

ವಾರ್ಸಾ ಕದನವು ಅಸ್ಪಷ್ಟತೆಯಿಂದ ಕೂಡಿದೆ ಆದರೆ ಸೋವಿಯಟ್ ಪಡೆಗಳು ವಾಯುವ್ಯ, ಈಶಾನ್ಯ ದಿಕ್ಕುಗಳಿಂದ ಪಟ್ಟಣಕ್ಕೆ ಅಪಾಯವನ್ನೊಡ್ಡಿವೆ. ಪ್ರಾಕೋ ಎಂಬಲ್ಲಿ ತೀವ್ರವಾದ ಕಾಳಗವು ನಡೆಯುತ್ತಿದೆ

ಸರ್ಪಗಳ ಮತ್ಸರ; ಅನೇಕರಿಗೆ ಗಂಡಾಂತರ

ಬ್ಲಾಗಿ ಎಂಬ ಮಧ್ಯಪ್ರಾಂತ್ಯದ ಹಳ್ಳಿಯೊಂದರಲ್ಲಿ ಸರ್ಪಗಳ ಸೇಡಿನ ಕೌರ್ಯವನ್ನು ತಿಳಿಸುವ ಪ್ರಸಂಗವೊಂದು ನಡೆದಿದೆ:— ಕೇವಲ ಹತ್ತು ವರ್ಷದ ಒಬ್ಬ ಬಾಲಕನು ಕಪ್ಪೆಯೊಂದನ್ನು ಹುತ್ತದ ಬಳಿ ಇಡಲು ಅದನ್ನು ನುಂಗಲು ಬಂದ ಕ್ಷಣದಲ್ಲಿ ನಾಗರಹಾವೊಂದು ಕಾಣಿಸಿದಾಗ ಅದನ್ನು ಹುಡುಗನು ಹೊಡೆದು ಸಾಯಿಸಿದನು ಈ ಸೇಡನ್ನು ತೀರಿಸಿಕೊಳ್ಳಲು ಅಲ್ಲಿಯ ಸರ್ಪಗಳೆಲ್ಲಾ ಸೇರಿ ಆ ಹಳ್ಳಿಯ ೧೪ ಜನರನ್ನು ಇದುವರೆಗೆ ಕಡಿದು ಪ್ರಾಣ ಹರಣಮಾಡಿವೆ. ವಿಷವನ್ನು ಹೋಗಲಾಡಿಸಲು ಮಂತ್ರೋಪಚಾರಗಳನ್ನು ಮಾಡಿದಾಗ ಹಾವು ಕಡಿದವನಿಗೆ ಪ್ರಜ್ಞೆ ಇಲ್ಲದಿದ್ದರೂ ಸಹ ಬಾಲಕನು ಮಾಡಿದ ಅಪರಾಧಕ್ಕಾಗಿ ಈ ರೀತಿ ಹಾವುಗಳು ಮತ್ಸರ ಸಾಧಿಸುತ್ತಿವೆಯೆಂದೂ ಬಿಟ್ಟು ನಡಿವೆವೆಂದು ಜನರು ನಾಯುವವರೆಂದೂ ಹೇಳುತ್ತಾನೆ. ಅಲ್ಲದೆ ತನಗಾದ ನೋವಿನ ಬಗ್ಗೆ ಮಾಡಿದ ಅಪರಾಧ ಬದಲಾಗಿ ನನ್ನ ಲಾವಣ ಜನರನ್ನೂ ಹೇಳುತ್ತಾನೆ.

ಜಿಲ್ಲಾ ಬೋರ್ಡ್ ಸಮಿತಿಗಳು

ಮೈಸೂರು ೮

ನಿನ್ನೆ ನಡೆದ ಜಿಲ್ಲಾ ಬೋರ್ಡು ಮೀಟಿಂಗಿನಲ್ಲಿ ಈ ಕೆಳಗೆ ಕಂಡಂತೆ ಸಮಿತಿಗಳ ಚುನಾವಣೆ ನಡೆಯಿತು –

ಸ್ಟ್ಯಾಂಡಿಂಗ್ ಕಮಿಟಿ:–ಶ್ರೀಗಳಾದ ಜಿ. ಕೃಷ್ಣಮೂರ್ತಿ, ಎಚ್. ಎಂ. ಚನ್ನಬಸಪ್ಪ, ಎಂ. ಎಲ್. ನಂಜರಾಜ ಅರಸ್, ಎಸ್ ಶಿವಸ್ವಾಮಿ, ರಾಜಗೋಪಾಲ ಮೊದಲಿಯಾರ್, ಇವರು ಮತ್ತು ಉಪಾಧ್ಯಕ್ಷರು.

ಹೆಲ್ತ್ ಕಮಿಟಿ:–ಶ್ರೀಗಳಾದ ಟಿ ಪಿ. ಬೋರಯ್ಯ, ಜೆ. ಮಾದಪ್ಪ, ಕೆ. ಮಾದಯ್ಯ, ಗುಲಾಂ ಸಂಜಪ್ಪ, ಡಿ. ಬಿ. ಸುಬ್ಬಣ್ಣ, ಜಿ. ರಾಮಯ್ಯ, ಲಿಯಾಖತ್ ಅಲಿಖಾನ್ ಅಂಡ್ ಜಿ. ಮೊದಲಿಯಾರ್.

ಆಡಿಟ್ ಕಮಿಟಿ:–ಶ್ರೀಗಳಾದ ಎಚ್. ಎಂ ಚನ್ನಬಸಪ್ಪ ಜಿ. ಕೃಷ್ಣಮೂರ್ತಿ, ಟಿ ರಾಮಯ್ಯ

ತಕರಾರು ಅರ್ಜಿ

ನಿನ್ನೆ ನಡೆದ ಜಿಲ್ಲಾ ಬೋರ್ಡ್ ಉಪಾಧ್ಯಕ್ಷರ ಚುನಾವಣೆಯಲ್ಲಿ ಪರಾಜಿತರಾದ ಶ್ರೀಮಾನ್ ಟಿ ಸಿ ಪೊನ್ನಪ್ಪನವರು ಚುನಾವಣೆ ನಡೆದ ಕ್ರಮವು ನ್ಯಾಯಬದ್ಧವಾಗಿಲ್ಲವೆಂದು ಜಿಲ್ಲಾಧಿಕಾರಿಗಳಿಗೆ ತಕರಾರು ಅರ್ಜಿ ಸಲ್ಲಿಸಿದ್ದಾರೆ

ಕನ್ಯಾಪಹಾರ ಮೊಕದ್ದಮೆ

ಹೊನ್ನಾರು ರಾಮಯ್ಯ, ದೇವನೂರು ಪುಟ್ಟಲಿಂಗಮ್ಮ, ಕಾಳಿಂಗೆ ದೇವಯ್ಯ ಎಂಬುವರು ತಾ॥ ೧೭-೩-೪೪ ರಲ್ಲಿ ಬೆಂಡರವಾಡಿ ಕೆಂಪಮ್ಮ ಎಂಬಾಕೆಯನ್ನು ಅಪಹರಿಸಿಕೊಂಡು ಹೋದ ಮೊಕದ್ದಮೆಯು ೩॥ ನೇ ಜಡ್ಜರ ಕೋರ್ಟಿನಲ್ಲಿ ವಿಚಾರಣೆ ನಡೆದು, ಅಪರಾಧಿಗಳಿಗೆ ಬಿಡುಗಡೆಯಾಯಿತು.

ಪ್ರಾಸಿಕ್ಯೂಷನ್‌ನವರು ಅಪರಾಧವನ್ನು ಸರಿಯಾದ ರುಜುವಾತು ಕೊಟ್ಟು ಸ್ಥಿರಪಡಿಸಲಿಲ್ಲ ಎಂದು ನ್ಯಾಯಾಧಿಕಾರಿಗಳಾದ ಶ್ರೀ ರಂಗರಾಜರಾಯರವರು ಅಭಿಪ್ರಾಯಪಟ್ಟಿರುವರು

ಹಿಟ್ಲರನ ಭರವಸೆ

ನಮಗೆ ಹೊಸಾಗಿನ ಶಸ್ತ್ರಗಳ ಭಯವಿಲ್ಲ, ಅವುಗಳನ್ನು ಮುಗಿಸುತ್ತೇವೆ ಎಂದರೆ ಒಂದಾವಿಸನ್ನ ಸಂಪೂರ್ಣ ಭದ್ರತೆ ಬೇಕು ಕಳೆದ ೨೦ ನೇ ತಾ॥ ನ ಘಟನಾವಳಿಗಳಿಂದ ನನಗೆ ಹಿಂದೆಂದೂ ಇಲ್ಲದ ಭರವಸೆ ಬಂದಿದೆ. ಇದ್ದರಿಂದ ನಾನೇ ಜಯಶಾಲಿಯಾಗುವೆನೆ ಎಂದು ಹಿಟ್ಲರನು ಮತ್ತೆ ಹೇಳಿದನಂತೆ

ಬ್ರಿಟಾನಿಯಲ್ಲಿ ಜರ್ಮನರ ದುಸ್ಥಿತಿ

ಬ್ರಿಟಾನಿ ಪರ್ಯಾಯದ್ವೀಪದಿಂದ ಸಿಂಧ ಬೋರಿಯಂಟ ಎಂಬ ಬಂದರಿನವರೆಗೂ ಜರ್ಮನರು ಹಿಮ್ಮೆಟ್ಟಿ ಬರುತ್ತಿರುವ ಮಿತ್ರರ ಸೈನ್ಯ ಪ್ರತಿಸಿಕೊಳ್ಳುತ್ತಿದ್ದಾರೆ. ಉತ್ತರಕ್ಕೆ ಸೆಂಟ್ ಮಾಲೋ ಬಂದರಿನ ದಿಕ್ಕಿನ ಎಂಬ ಸ್ಥಳಗಳನ್ನು ಹಿಡಿಯುವುದಕ್ಕೆ ಅಲ್ಲಿ ಯಾಂಕಿಗಳು ನನ್ನಾಹಟ್ಟೂ ಎಂಬ ಚತ್ತ ಅಗಲ ಬಲವಾಗಿ ಪ್ರತಿಭಟಿಸುತ್ತಿದ್ದಾರೆ ಮಿತ್ರರ ಸೈನ್ಯ ನಾನಾ ಕಡೆಗೂ ಕಷ್ಟಕರವಾಗಿ ಮುನ್ನುಗ್ಗುತ್ತಿದ್ದು ಸಾಗಿವೆ

ಔಷಧೋಪಚಾರಕ್ಕೂ ಅವಕಾಶವಿಲ್ಲ

ಸ್ವಂ.ಸು.] ಬೆಂಗಳೂರು ೭

ಸಂಸ್ಥಾನದಿಂದ ಹೊರಕ್ಕೆ ಕಳುಹಿಸಲ್ಪಟ್ಟಿರುವ ಶ್ರೀ ಎಂ. ಎ. ಸರ್ವಶಂಕರನವರು ತಮ್ಮ ಕಾಲಿನ ಗಾಯವನ್ನು ಗುಣಪಡಿಸಿಕೊಳ್ಳಲು ಚಿಕಿತ್ಸೆಗಾಗಿ ಬೆಂಗಳೂರಿಗೆ ಬರಲು ಅವಕಾಶ ಕೇಳಿದುದಕ್ಕೆ ಸರ್ಕಾರದವರು ಅನುಮತಿ ಕೊಡಲಿಲ್ಲವೆಂದು ಗೊತ್ತಾಗಿದೆ

ಸಿವಿಲ್ ಸಪ್ಲೈ ಅಧಿಕಾರಿಗಳು

ಕೋಲಾರದ ಜಿಲ್ಲಾಧಿಕಾರಿಗಳಾದ ಮಿ॥ ಜಾರ್ಜ್ ಸ್ಯಾಫ್ಟೋರವರು ಸಿವಿಲ್ ಸಪ್ಲೈ ವಿಶೇಷ ಅಧಿಕಾರಿಗಳಾಗಿ ನೇಮಕವಾಗಿರುವರೆಂದು ತಿಳಿದುಬಂದಿದೆ.

ಸತ್ಯನಾರಾಯಣ ಪೂಜೆ

ಸ್ವ. ಸು.] ಚಾಮರಾಜನಗರ ೭

ಚಾಮರಾಜನಗರದಲ್ಲಿ ಶ್ರೀ ಚಾಮುಂಡೇಶ್ವರೀ ನಾಟಕ ಸಭೆಯವರು ನಿನ್ನೆ ದಿವಸ (೪-೩-೪೪) ಸತ್ಯನಾರಾಯಣ ಪೂಜೆಯನ್ನು ನೆರವೇರಿಸಿದರು. ಮಂಗಳಾರತಿ ಆದ ನಂತರ ಎಲ್ಲರಿಗೂ ಪ್ರಸಾದ ಹಂಚಲಾಯಿತು. ಆ ವೇಳೆಯಲ್ಲಿ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀಮತಿ ರಾಜಮ್ಮನವರಿಂದ ಸಂಗೀತ ಕಛೇರಿ ನಡೆಯಿತು. ಬಹುಸಂಖ್ಯಾತ ಜನರು ನೆರೆದಿದ್ದರು. ಇಂಪೀರಿಯಲ್ ಬ್ಯಾಂಕ್ ಏಜೆಂಟರಾದ ಮಿ॥ ರೇಮಂಡ್‌ರವರು ಶ್ರೀಮತಿ ರಾಜಮ್ಮನವರಿಗೆ ಬೆಳ್ಳಿಯ ಕಪ್–ಸಾಸರುಗಳನ್ನು ಬಹುಮಾನವಾಗಿ ಕೊಟ್ಟರು. ಮಂಗಳಾರತಿಯಾದ ನಂತರ ಎಲ್ಲರಿಗೂ ಪ್ರಸಾದ ಹಂಚಲಾಯಿತು.

ಯಳಂದೂರು ವರ್ತಮಾನ

ಸ್ವ.ಚಾ.] ಯಳಂದೂರು ೭

ಯಳಂದೂರು ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷಸ್ಥಾನಕ್ಕೆ ಅರ್ಜಿಗಳನ್ನು ಸ್ವೀಕರಿಸಲು ನಿಯಮಿಸಲಾಗಿದ್ದ ಕಾಲದೊಳಗಾಗಿ ಶ್ರೀ ಎ. ಶ್ರೀನಿವಾಸಚಾರ್ಯರವರ ಒಂದು ಅರ್ಜಿ ಮಾತ್ರ ಬಂದಿರುತ್ತೆ. ಕಾಲಾವಧಿಯಾದ ಮೇಲೆ ಒಂದು ಟಪಾಲಿನಲ್ಲಿ ಮತ್ತೊಂದು ಅರ್ಜಿ ಬಂದಿರುತ್ತೆ. ಇದರ ತೀರ್ಮಾನ ಬಾಕಿ ಇದೆ

ಎಂ. ಎಲ್. ಎಸ್. ಮತ್ತು ಕಂಪೆನಿ
(ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ಟೋರ್ಸ್)
ಜನರಲ್ ಮರ್ಚೆಂಟ್ಸ್, ಸ್ಟೇಷನರ್ಸ್ ಅಂಡ್ ಜನರಲ್ ಮರ್ಚೆಂಟ್ಸ್,
2619, ವಾಣೀವಿಲಾಸಪುರಂ,
ಮೈಸೂರು.

ಒಪ್ಪಂದವಾದ ತರುಣದಲ್ಲೇ ಆಡಳಿತ ಬದಲಾವಣೆಯಿಲ್ಲ

ಯಾವ ಕ್ಷಣದಲ್ಲಿ ಇಬ್ಬರು ಪಂಗಡಗಳಿಗೂ ರಾಜಿಯಾಗುವುದೋ ಆ ಘಳಿಗೆಯಲ್ಲಿಯೇ ಆಡಳಿತದಲ್ಲಿ ಬದಲಾವಣೆ ಆಗುತ್ತದೆಂದು ಯಾರಾದರೂ ಭ್ರಮಿಸಿಕೊಂಡಿದ್ದರೆ, ಅಂತಹ ಭ್ರಮೆಯನ್ನು ಹೋಗಲಾಡಿಸುವುದು ಉತ್ತಮವೆಂದು ಇಂಡಿಯಾ ಸರಕಾರದ ವಾರ್ತಾ ಶಾಖೆಯ ಮಂತ್ರಿಗಳಾದ ಸರ್ ಸುಲ್ತಾನ್ ಅಹಮದರು ಗಾಂಧಿ-ಜಿನ್ನಾ ಭೇಟಿಯ ವಿಷಯವಾಗಿ ಪ್ರಶ್ನೆಗೆ ಉತ್ತರ ತಿಳಿಸಿದರು. ಏನು ಮಾಡಬೇಕಾದರೂ ಕೂಡ ಎಷ್ಟೋ ಪಾರ್ಟಿಗಳು ಮತ್ತು ಇತರ ವಿಷಯಗಳನ್ನು ಕುರಿತು ಪರಿಶೀಲಿಸಬೇಕಾಗುತ್ತದೆ. ಕಾಲವಿಳಂಬ ಇದರಿಂದ ಆಗುವುದು.

ವೈಸ್ರಾಯರಿಗೆ ಮತ್ತೊಂದು ಪತ್ರ?

ಗಾಂಧೀಜಿಯವರು ವೈಸರಾಯರಿಗೆ ಮತ್ತೊಂದು ಪತ್ರವನ್ನು ಬರೆದು ತಮ್ಮ ಸ್ವಂತ ವೈದ್ಯ ಡಾಕ್ಟರ್ ಸುಶೀಲಾ ನಾಯರರ ಮುಖಾಂತರ ಕಳುಹಿಸಿರುವರೆಂದು ದೆಹಲಿಯಲ್ಲಿ ವರ್ತಮಾನ ಹರಡಿದೆ. ರಾಜಕೀಯ ತೊಡಕನ್ನು ಪರಿಹರಿಸುವ ಸಲುವಾಗಿ ತಾವು ಮಾಡಿರುವ ಸಲಹೆಯನ್ನು ಈ ಪತ್ರದಲ್ಲಿ ನಿರ್ದಿಷ್ಟಪಡಿಸಿರುವರೆಂದು ಹೇಳಲಾಗಿದೆ

ಜಿನ್ನರ ಬೇಡಿಕೆ

ಗಾಂಧಿ-ಜಿನ್ನಾ ಭೇಟಿಯು ನಡೆಯುವ ಪೂರ್ವಭಾವಿಯಾಗಿ ದೇಶದಲ್ಲಿ ಸ್ನೇಹಮಯ ವಾತಾವರಣವು ನೆಲಸಬೇಕೆಂದೂ, ಅದಕ್ಕಾಗಿ ಹಿಂದೂ-ಮುಸ್ಲಿಂ ಮುಖಂಡರು ಪ್ರಯತ್ನಪಡಬೇಕೆಂದು ಜಿನ್ನಾರವರು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯೊಂದರಲ್ಲಿ ಪ್ರಾರ್ಥಿಸಿರುವರು

ಕಸ್ತೂರಿ ಬಾ ಸಭೆಗೆ ಅಡಚಣೆ

ಶಿವಾಂಗಿನಲ್ಲಿ ಕಸ್ತೂರಿ ಬಾ ನಿಧಿಗೆ ಹಣ ವಸೂಲುಮಾಡಲು ಬಹಿರಂಗ ಸಭೆಯೊಂದನ್ನು ನಡೆಸಲು ಅಲ್ಲಿಯ ಡೆಪ್ಯುಟಿ ಕಮೀಷನರು ಒಪ್ಪಿಗೆ ಕೊಡಲಿಲ್ಲ

ಹೊಲಿಗೆ ಕೆಲಸದವರು ಕೂಡಲೇ ಬೇಕು.
ಮೈಸೂರು ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ
ಶ್ರೀ ರಾಜಲಕ್ಷ್ಮೀ ಹಾಲ್ ಮತ್ತು ಟೈಲರಿಂಗ್ ಇನ್ಸ್ಟಿಟ್ಯೂಟ್.
ಕೆ. ಎಂ. ಉತ್ತರಕರ್,
ಡಿಪ್ಲೊಮಾ ಅಂಡ್ ಡಿಗ್ರಿ ಹೋಲ್ಡರ್, (Hons.)
ಶ್ರೀರಾಂಪೇಟೆ, ಮೈಸೂರು.

ಜಾಡಮಾಲಿಗಳ ಮುಷ್ಕರ

ತುಮಕೂರಿನ ಜಾಡಮಾಲಿಗಳು ಪುನಃ ಮುಷ್ಕರ ಹೂಡಿದ್ದಾರೆ. ಬೆಂಗಳೂರಿನಿಂದ ಬಂದಿರುವವರು ಅವರ ಬದಲು ಕೆಲಸಮಾಡುತ್ತಿದ್ದಾರೆ.

ವಾಜಪೇಯಂ ಗೋವಿಂದಯ್ಯನವರ ನಿಧನ

ಬೆಂಗಳೂರಿನ ಸುಪ್ರಸಿದ್ಧ ಪುಸ್ತಕ ವ್ಯಾಪಾರಿಗಳೂ ಆಸ್ತಿಕ ಶಿರೋಮಣಿಗಳೂ ಆದ ಶ್ರೀ ವಾಜಪೇಯಂ ಗೋವಿಂದಯ್ಯನವರು ನೆನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ರಾಜಮ್ಮನವರಿಗೆ ಸತ್ಕಾರ

ಕರ್ನಾಟಕದ ಸುಪ್ರಸಿದ್ಧ ಸಿನಿಮಾ ನಟಿ ಮತ್ತು 'ರಾಧಾರಮಣ' ಚಿತ್ರದಲ್ಲಿ ಪ್ರಧಾನ ಪಾತ್ರವಹಿಸಿರುವ ಶ್ರೀಮತಿ ಎಂ. ವಿ. ರಾಜಮ್ಮನವರನ್ನು ಸತ್ಕರಿಸಲು ಮೊನ್ನೆ ಬೆಂಗಳೂರು ನಿಯೋ ಮೈಸೂರ ಕಫೆಯಲ್ಲಿ ಶಾಸನ ಸಭಾಧ್ಯಕ್ಷರಾದ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ದೊಡ್ಡ ಸಂತೋಷಕೂಟ ನಡೆಯಿತು. ಎಲ್ಲರಿಗೂ ಉಪಾಹಾರವಾಯಿತು. ಅಧ್ಯಕ್ಷರು ಭಾಷಣಮಾಡಿ ಕರ್ನಾಟಕದ ಚಲನಚಿತ್ರಗಳು ಹೆಚ್ಚು ಹೆಚ್ಚಾಗಿ ಅಭಿವೃದ್ಧಿಗೆ ಬರಲೆಂದು ಹಾರೈಸಿದರು. ಶ್ರೀಮತಿ ರಾಜಮ್ಮನವರು ತಮಗೆ ದೊರೆತ ಸನ್ಮಾನಕ್ಕಾಗಿ ಎಲ್ಲರನ್ನೂ ವಂದಿಸಿದರು. ಕಟಕ ಅಡ್ವರ್ಟೈಸಿಂಗ್ ಸಂಸ್ಥೆಯವರು ಈ ಸಂತೋಷಕೂಟವನ್ನು ಏರ್ಪಡಿಸಿದ್ದರು.

ವಿಚಿ ಸರ್ಕಾರಕ್ಕೆ ಸ್ಥಾನಪಲ್ಲಟ

ಫ್ರೆಂಚ್ ಸರ್ಕಾರವು ವಿಚಿಯನ್ನು ಬಿಟ್ಟು ನ್ಯಾನ್ಸಿ ಅಥವ ಎಟ್ಸೆಲಿಗೆ ಹೋಗುವಂತೆ ಜರ್ಮನರು ಒತ್ತಾಯಪಡಿಸುತ್ತಿರುವುದಾಗಿ ಗೊತ್ತಾಗಿದೆ. ಎಟ್ಸೆಲ್ಲಿಗೆ ಹೋಗಲು ಎಂ. ಲವಾಲರು ಅಪೇಕ್ಷಿಸುವಂತಿದೆ.

MEDICINES
Take your requirements from
RAGHULAL & CO.,
1748, Sayaji Rao Road.
(Upstairs, Mysore Hall). MYSORE.
ಔಷಧಗಳು
ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೋ,
1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore

ಲಂಡನ್ನಿನಲ್ಲಿ ಆಗಸ್ಟ್ ೯

'ಕ್ವಿಟ್ ಇಂಡಿಯಾ' (ಭಾರತವನ್ನು ಬಿಟ್ಟು ಹೋಗಿ) ಎಂಬ ನಿರ್ಣಯವಾದ ಎರಡನೇ ವಾರ್ಷಿಕೋತ್ಸವವನ್ನು ಲಂಡನ್ನಿನಲ್ಲಿ ಆಚರಿಸಲು ಭಾರತ ಸ್ವಾತಂತ್ರ್ಯ ಚಳುವಳಿ ಸಮಿತಿಯವರು ತಮ್ಮ ಅಧ್ಯಕ್ಷರಾದ ಮಿ॥ ಫೆನ್ನರ್ ಬ್ರಾಕ್ವೆಯವರ ನೇತೃತ್ವದಲ್ಲಿ ಟ್ರಫಾಲ್ಗರ್ ಸ್ಕ್ವೇರ್‌ನಲ್ಲಿ ಭಾರಿ ಪ್ರದರ್ಶನವೊಂದನ್ನು ನಿನ್ನೆ ಏರ್ಪಡಿಸಿದ್ದರು. ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡಬೇಕೆಂಬ ನಿರ್ಣಯವೂ ಅಲ್ಲಿ ಬಂದಿತು.

ತುರ್ಕಿಯಲ್ಲಿರುವ ಜರ್ಮನರು

ಯಹೂದ್ಯ ಪಂಗಡಕ್ಕೆ ಸೇರಿದ ಜರ್ಮನರು ತುರ್ಕಿಯಲ್ಲೇ ಉಳಿಯಲು ತುರ್ಕಿಯು ಅಪ್ಪಣೆಯಿತ್ತಿದೆ. ಹಾಗೆಯೇ ನಾಜಿಗಳಲ್ಲದ ಇತರ ತುರ್ಕಿ ಪೌರತ್ವದ ನೌಕರಿಯಲ್ಲಿರುವ ಜರ್ಮನರೂ ತುರ್ಕಿಯಲ್ಲೇ ನಿಲ್ಲಬಹುದು. ನಾಜಿಗಳು ಆ ದೇಶ ಬಿಡುತ್ತಿದ್ದಾರೆ.

ಅಪೂರ್ವ ಸಮಯ !!
ಕೇರಳ ಆಯುರ್ವೇದ ಫಾರ್ಮಸಿ
ಡೋರ್ ನಂ. 1471,
ಸಯ್ಯಾಜಿರಾವ್ ರೋಡ್, ಮೈಸೂರು
ಮೊಲ್ಪಂಡ ಸ್ಥಳದಲ್ಲಿ
ಪ್ರಧಾನ ವೈದ್ಯರೂ, ಸುಪ್ರಸಿದ್ಧ ಕೇರಳ ದೇಶದ ವೈದ್ಯರೂ ಆದ
ಜೆ. ಕೆ. ಶಂಕರನ್ ಮೂಸ್‌ರವರು
ಈಗ ಬಂದು ತಂಗಿರುವರು.
ಇದೇ ಮಾಹೆ 7, 8 ಮತ್ತು 9
ಈ ೩ ದಿನಗಳು ಮಾತ್ರ
ಎಂತಹ ರೋಗಿಗಳನ್ನಾದರೂ ಸಾವಧಾನವಾಗಿ
ಪರೀಕ್ಷಿಸಿ ಔಷಧವನ್ನು ಕೊಡುವರು.
ನಿಮ್ಮ ರೋಗಗಳನ್ನು ವಾಸಿಮಾಡಿಕೊಳ್ಳಿರಿ.
ಕಾಲ:— ಪ್ರಾತಃಕಾಲ 8-30 ರಿಂದ 12
ಮಧ್ಯಾಹ್ನ 4-30 ರಿಂದ 8-30
ವೈದ್ಯ ಕೆ. ಶ್ರೀಧರನ್ ನಾಯರ್,
ವೈದ್ಯಕಲಾನಿಧಿ,
ಕೇರಳ ಆಯುರ್ವೇದೀಯ ಸಮಾಜಂ,
ಶಾಖೆ, ಮೈಸೂರು.

ಇಪ್ರೊತ್ತೇ ಕಸ್ತೂರಿ ಬಾ ನಿಧಿಗೆ
ನಿಮ್ಮ ಕಾಣಿಕೆಯನ್ನು ಸಲ್ಲಿಸಿ
ಮಹಿಳಾ-ಶ್ರಮಗಳು ! ಕೈಗಾರಿಕೆ ಸಂಸ್ಥೆಗಳು !
ಬಾಲಿಕಾ ಶಾಲೆಗಳು ! ಮಹಿಳಾ ಚಿಕಿತ್ಸಾಲಯಗಳು !
ನಾನಾ ಸ್ಥಳಾಂತರಗಳಲ್ಲಿ ಸ್ಥಾಪಿಸಲ್ಪಡಲು ಸಹಾಯವಾಗಿ.
ನಿಮ್ಮಲ್ಲಿ ವಸೂಲಾದ ಹಣ ನಮಗಾಗಿಯೇ ಕಳುಹಿಸಿಕೊಡಿ.
... ರಾಮಕೃಷ್ಣ ಶೆಟ್ಟಿ, ಎಸ್. ಚೆನ್ನಯ್ಯ, ಹಿರಳ್ಳಿ ರಾಮಣ್ಣ,
... ಕಾರ್ಯದರ್ಶಿ ಅಧ್ಯಕ್ಷ

ಸ್ತ್ರೀಯರ ಸೌಕರ್ಯಕ್ಕೆ
೩೦ ವರ್ಷಗಳಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಉಪಯೋಗಿಸಿ.
ಡಿ. ಪುಟ್ಟಯ್ಯ, ವಿನಾಯಕ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ಇಲ್ಲಿ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ದೇವರ ಕಾರ್ಯಗಳಿಗೆ ಸಕ್ಕರೆ ಕೊಟ್ಟಿಂಕ್ಕೆ ಪ್ರತಿಯಾಗಿ ಬೆಲ್ಲ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಸಂಪುಟ ೩] ಬುಧವಾರ ೯—೮—೪೪ [ಸಂಚಿಕೆ ೧೫೫

ಬರ್ನಾರ್ಡ್ ಷಾರವರು ಬಾಂಬಿನಿಂದ ಪಾರು

ಬೊಂಬಾಯಿನಲ್ಲಿ ಆಗಸ್ಟ್ ೯ ನೇ ದಿನಾಚರಣೆ ಕಾರ್ಯಕ್ರಮ

ಮುಖಂಡರ ಬಿಡುಗಡೆಗೆ ಅಮೇರಿಕದ ಮುಖಂಡರ ಮನವಿ

ಕಾಲೇಜ್ ವಿದ್ಯಾರ್ಥಿಗಳ ಪ್ರಾರ್ಥನೆ

ಮೈಸೂರು ೯

ಈ ದಿನ ೧೧|| ಘಂಟೆಗೆ ಕಾಲೇಜು ವಿದ್ಯಾರ್ಥಿಗಳೆಲ್ಲರೂ ಕಾಲೇಜಿನ ಒಳಾಂಗಣದಲ್ಲಿ ಸಭೆ ಸೇರಿದ್ದರು. ಶ್ರೀಮಾನ್ ಬಸೀರ್ ಹುಸೇನರವರು ಜೋರಾಸ್ಟಿನ ಒಂದು ಭಾಗವನ್ನು ಓದಿದರು. ನಂತರ ಯೂನಿಯನ್ನಿನ ಕಾರ್ಯದರ್ಶಿಯವರಾದ ಶ್ರೀಮಾನ್ ಬಿ ಎಂ ಸಿದ್ದಯ್ಯನವರು ಸಭೆಯ ಮುಂದೆ "ಗಾಂಧಿ ಜಿನ್ನಾ ಭೇಟಿ ಯಶಸ್ವಿಯಾಗಿ ನೆರವೇರಿ ಭಾರತಕ್ಕೆ ಸ್ವಾತಂತ್ರ್ಯ ಬರುವಂತೆ ಆಗಲಿ; ದೇಶದ ನಾಯಕರ ಬಿಡುಗಡೆಯಾಗಲಿ" ಎಂದು ತಂದ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು. ಗಾಂಧಿ-ಜಿನ್ನಾ ಭೇಟಿ ಯಶಸ್ವಿಯಾಗಿ ನೆರವೇರಲೆಂದು ಒಂದು ತಂತಿಯನ್ನು ವಿದ್ಯಾರ್ಥಿಗಳ ಪರವಾಗಿ ಕಳುಹಿಸಬೇಕೆಂದು ತೀರ್ಮಾನವಾಯಿತು.

ಪ್ರಾರ್ಥನಾ ದಿನಾಚರಣೆ

ಕುಂಚಿಟಿಗರ ವಿದ್ಯಾರ್ಥಿನಿಲಯದಲ್ಲಿ ಈ ದಿನ ಬೆಳಿಗ್ಗೆ ರಾಷ್ಟ್ರೀಯ ಧ್ವಜವಂದನೆ, ಪೂಜ್ಯ ಬಾಪೂಜೀಯವರ ಭಾವಚಿತ್ರ ಪೂಜೆ ಮತ್ತು ಪ್ರಸಾದ ವಿನಿಯೋಗ ನಡೆಯಿತು. ನಿಲಯದ ವಿದ್ಯಾರ್ಥಿಗಳು ಮತ್ತು ಅನೇಕ ಮಾನ್ಯ ಮಹಿಳೆಯರು ಮತ್ತು ಮಹನೀಯರೂ ಪೂಜೆಯ ಸಮಯದಲ್ಲಿದ್ದು ಮಹಾತ್ಮ ಗಾಂಧೀಜಿ ಮತ್ತು ಜಿನ್ನಾರವರ ಭೇಟಿಯು ಆದಷ್ಟು ಬೇಗ ನಡೆದು ಭಾರತಕ್ಕೆ ಸ್ವಾತಂತ್ರ್ಯ ಬರಲೆಂದು ಭಗವಂತನನ್ನು ಪ್ರಾರ್ಥಿಸಿದರು.

ಟ್ರೈನಿಂಗ್ ಇನ್‌ಸ್ಟಿಟ್ಯೂಟ್

ಮೈಸೂರಿನ ಟ್ರೈನಿಂಗ್ ಇನ್‌ಸ್ಟಿಟ್ಯೂಟಿನ ೧೯ ನೆಯ ವಾರ್ಷಿಕೋತ್ಸವವು ನಿನ್ನೆ ಸಂಜೆ ಪುರಭವನದಲ್ಲಿ ನಡೆಯಿತು. ರಾಜಸೇವಾಸಕ್ತ ಶ್ರೀಮಾನ್ ನವರತ್ನ ರಾಮರಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಸತ್ಯನಾರಾಯಣರಾವ್ ಎಂಬುವರಿಂದ ಪ್ರಾರ್ಥನೆ [illegible] ವಿಚಾರದ ಮೇಲೂ, ಶ್ರೀ ವಿ. [illegible] ಅವರಿಂದ ಬಾಲಕವಾತೆ ಎಂಬ ವಿಚಾರದ ಮೇಲೂ ಇಂಗ್ಲಿಷಿನಲ್ಲಿ ಪ್ರಬಂಧ ಪಠಣ; ಕನ್ನಡ ಶೀಘ್ರಲಿಪಿ ಟೈಪಿನ ಪ್ರದರ್ಶನ; ಶ್ರೀ ಕೆ [illegible] ಅವರಿಂದ ರಂಜಾ ವರದಿ, ಕಸರತ್ತು, ವ್ಯಾಯಾಮ, ನಾಟಕ ನಡೆದುವು. ಅಧ್ಯಕ್ಷರು ಶೀಘ್ರಲಿಪಿಯ ಜನ್ಮಸ್ಥಾನ, ಅದರ ಪ್ರಯೋಜನವನ್ನು ಕುರಿತು ಭಾಷಣ ಮಾಡಿದರು. ಈ ಸಂಸ್ಥೆಯ ಕಾರ್ಯಕಲಾಪಗಳು ಪ್ರತ್ಯೇಕವಾಗಿ ಬೆಳೆಯಲೆಂದು ಹಾರೈಸಿದರು. ಈ ಸಂಸ್ಥೆಯಲ್ಲಿ ಸರಕಾರದಿಂದ ಗೊತ್ತುಪಡಿಸಿದ್ದ ವಿದ್ಯಾರ್ಥಿಗಳಿಗಲ್ಲದೆ ಇಲ್ಲಿ ಕೇವಲ ಸಾರ್ವಜನಿಕರಿಗೂ ಟೈಪ್‌ರೈಟಿಂಗ್ ಮುಂತಾದುವು ಎಲ್ಲವೂ ಶೀಘ್ರಲಿಪಿಯ ವಿಚಾರವಾಗಿಯೂ ಶಿಕ್ಷಣ ಕೊಡುವ ಏರ್ಪಾಡು ನಡೆಯುತ್ತಿದೆ.

—

ಜರ್ಮನ್ ಏಳನೇ ಸೈನ್ಯಕ್ಕೆ ವಿಪತ್ತು

ಬ್ರಿಟಿಷ್ ಸೈನ್ಯವು [illegible] ಜರ್ಮನ್ ಏಳನೇ ಸೈನ್ಯವನ್ನು [illegible] ದಲ್ಲಿ ಈ ಸೈನ್ಯವು ಬಿಡುಗಡೆಯಾಗಿ ಪರ್ಯಾಯ ಮಾರ್ಗದಲ್ಲಿ ಈ ಸೈನ್ಯವು ಬೀಳುವಂತೆ ಮಾಡಿದೆ; [illegible]

ಅಮೆರಿಕದ ಪ್ರಮುಖರ ಮನವಿ

"ಭಾರತದ ಮುಖಂಡರುಗಳನ್ನು ಬಿಡುಗಡೆ ಮಾಡುವುದು ಬ್ರಿಟನ್ನಿನ ಕರ್ತವ್ಯ. ಈ ಮುಖಂಡರ ಬಿಡುಗಡೆಯಿಂದ [illegible] ಬ್ರಿಟನ್ನು ತೋರಿಸುವ ಒಳ್ಳೆಯ ಮನೋಭಾವನೆಯನ್ನು ತೋರಿಸುವುದು [illegible] ರಾಷ್ಟ್ರಗಳಿಗೆ ಇದರಿಂದ ಪ್ರತ್ಯಕ್ಷ ಪ್ರಯೋಜನವುಂಟು" ಎಂದು ಅಮೆರಿಕದ ಸುಮಾರು ೧೧೦ ಜನ ಪ್ರಮುಖರು ಬ್ರಿಟಿಷ್ ರಾಯಭಾರಿ ಲಾರ್ಡ್ ಹ್ಯಾಲಿಫಾಕ್ಸ್‌ರನ್ನು ಪ್ರಾರ್ಥಿಸಿದ್ದಾರೆ. ಭಾರತದ ಸಮಸ್ಯೆಗೆ ಪರಿಹಾರ ಕೊಡುವುದು ಮಾತ್ರವಲ್ಲ, ಇದೇ ಸಮಾಧಾನಕರ [illegible] ಭಾರತದಲ್ಲಿ [illegible] ಯುದ್ಧ [illegible] ಪ್ರಪಂಚಕ್ಕೆ ಭೀತಕ್ಷೇತ್ರ [illegible] ಪ್ರಾರ್ಥಿಸಿದ್ದಾರೆ.

ಪ್ರಪಂಚದ ಆರು ಜನ ವ್ಯಕ್ತಿಗಳು

ಪ್ರಪಂಚದಲ್ಲಿ ಒಂದೇ ಒಂದು ರಾಷ್ಟ್ರವಾಗಿ [illegible] ಮಂತ್ರಿಮಂಡಲವೊಂದನ್ನು ರಚಿಸಬೇಕಾದ್ದೆ ಅಂತಹ ಮಂತ್ರಿಮಂಡಲದಲ್ಲಿ ಯಾರ್‍ಯಾರಿರಬೇಕೆಂದು ಪ್ರಶ್ನೆ ಕಳಿಸಿ "[illegible]" [illegible], ಸ್ಟಾಲಿನ್, ಮೇಡಂ ಚಾಂಗ್ ಕೈಶೇಕ್, ಜನರಲ್ ಮಾಂಟ್‌ಗೊಮರಿ, [illegible] ಗಾಂಧಿ ಇವರುಗಳ ಹೆಸರನ್ನು ಸೂಚಿಸಿತ್ತು.

ಮುಂದಿನೆರಡು ವಾರಗಳಲ್ಲಿ ಏನು?

[illegible] ಈ ಸಂದರ್ಭದ [illegible] ದಿನಗಳಿಂದ [illegible] ಪ್ರಾಂತಗಳಲ್ಲಿ [illegible] ಎಂದು [illegible]

ಜರ್ಮನ್ ಸರೆಯಾಳುಗಳ ಸಂಖ್ಯೆ

[illegible] ಸ್ಟ್ರೆಚ್ಚರ್ [illegible] ಜರ್ಮನರ [illegible]

ದಿವಾನರು ಪೂನಾಗೆ

ಸ್ವಂ. ಸು. ಪ್ರೋ] ಬೆಂಗಳೂರು ೯

ದಾಸ್ಯಮುಕ್ತಿಯ ಯೋಜನೆ ವಿಷಯವಾಗಿ ಪೂನಾದಲ್ಲಿ, ಮದರಾಸಿಗೂ ಮತ್ತು ಮುಂಬಯಿಗೂ ಮಾತುಕತೆಗಳು ಒಪ್ಪಂದವಾಗುತ್ತವೆಯಲ್ಲದೆ. ಮೈಸೂರಿನ ದಿವಾನರೂ ಸದ್ಯದಲ್ಲಿ ಪೂನಾಗೆ ತೆರಳಲಿರುವರು.

ದಿವಾನರೊಂದಿಗೆ ಕಾಂಗ್ರೆಸ್ ಅಧ್ಯಕ್ಷರ ಸಂಭಾಷಣೆ

ಕಾಂಗ್ರೆಸ್ ಅಧ್ಯಕ್ಷರು ದಿವಾನರೊಂದಿಗೆ ಭೇಟಿಮಾಡುವ ಸಮಯದಲ್ಲಿ ಹಲವು ನಿರ್ದಿಷ್ಟ ವಿಷಯಗಳನ್ನು ಮುಂದಿಡುತ್ತಾರೆಂದೂ, ಜನಾಂದೋಲನ ಸರಕಾರದ ಸ್ಥಿತಿಗೆ ಒಪ್ಪುವ ರೀತಿಯಿಂದೂ ಗೊತ್ತಾಗಿದೆ. ಬರಲಿರುವ ಚುನಾವಣೆಗಳಲ್ಲಿ ಹಿಂದೆ [illegible] ವರ್ಷದಲ್ಲಿ ನಡೆದಂತಹ ನಡುವಳಿಕೆಗಳು ಆಗದಂತೆ ಮಾಡಲು ಅವರು ಪ್ರಯತ್ನಿಸುವರು.

ಸ್ಟೋರ್ಸ್ ಪರ್ಚೇಸ್ ಸಮಿತಿ

[illegible] ಬಹದ್ದೂರ್ ಬಿ ಕೆ ಗರುಡಾಚಾರ್, ಶ್ರೀ [illegible] ಎಚ್ ಎಂ. ಮುಸ್ತಾಫ ಖಾನ್, [illegible] ಇವರುಗಳನ್ನು ಸ್ಟೋರ್ಸ್ ಪರ್ಚೇಸ್ ಕಮಿಟಿಯ ಸದಸ್ಯರುಗಳನ್ನಾಗಿ [illegible] ನೇಮಕ ಮಾಡಲಾಗಿದೆ.

ಮುಖ್ಯ ಮಾರ್ಕೆಟಿಂಗ್ ಅಧಿಕಾರಿಗಳು

ಸರ್ವೀಸ್ಸಿನಿಂದ ನಿವೃತ್ತರಾದ ರಾವ್ ಬಹದ್ದೂರ್ ಹೆಚ್ ಸಿ. ಜವರಯ್ಯನವರ ಸ್ಥಾನದಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಎಂ ಡಿ ವೆಂಕಟೇಶ ಅಯ್ಯರರನ್ನು [illegible] ಮುಖ್ಯ ಮಾರ್ಕೆಟಿಂಗ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಸರ್ಕಾರದ ಕಾರ್ಯದರ್ಶಿಗಳ ಸಭೆ

ನಿನ್ನೆ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಸರ್ಕಾರದ ನಾನಾ ಕಾರ್ಯದರ್ಶಿಗಳು ಸಭೆ ಸೇರಿದ್ದರು.

—

ನಾರ್ಮಂಡಿಯಲ್ಲಿ ಜರ್ಮನರ ಧಾಳಿ

[illegible] ಎಂಬ [illegible] ಇದನ್ನು ಈ [illegible] ಅದು.

ಬರ್ನಾರ್ಡ್‌ಷಾ ಬಾಂಬಿನಿಂದ ಪಾರಾದರು

ಹಾರಾಡುವ ವಿಮಾನಗಳು ಲಂಡನ್ನಿನ ಮೇಲೆ ಧಾಳಿಯಿಟ್ಟ ಸಮಯದಲ್ಲಿ ಬರ್ನಾರ್ಡ್‌ಷಾರವರು ಸಾವಿನಿಂದ ತಪ್ಪಿಸಿಕೊಂಡರು. ಹೆರಾಲ್ಡ್ ಲ್ಯಾಸ್ಕಿಯವರಿಗೆ ಅಪೂರ್ವ ಅನುಭವವಾದುದನ್ನು ಅವರೇ ತಿಳಿಸುತ್ತಾ ತಾವು ಮಲಗಿದ್ದ [illegible] ಅಂತಸ್ತಿನಿಂದ ಕೆಳಗಿನ ಕೊಠಡಿಗೆ ಮಲಗಿದ್ದ ಹಾಗೆಯೇ ಬಿದ್ದರೆಂದರು. ಅವರು ವಾಸವಾಗಿರುವ ಹೋಟಲು ನಾಶವಾಯಿತು.

ಬೊಂಬಾಯಿನಲ್ಲಿ ಆಗಸ್ಟ್ ೯ ನೇ ದಿನಾಚರಣೆ

ಕಾಂಗ್ರೆಸ್ಸಿನ ಚರಿತ್ರೆಯಲ್ಲಿ ಆಗಸ್ಟ್ ೯ ನೇ ತಾರೀಖು ಇತಿಹಾಸ ಪ್ರಸಿದ್ಧವಾದುದು. ಆಗಸ್ಟ್ ನಿರ್ಣಯವು ಅಂತರಾಷ್ಟ್ರೀಯ ದೃಷ್ಟಿಯಿಂದ ಕೂಡಿರುವುದು. ಆದ್ದರಿಂದ ಗಾಂಧೀಜಿಯವರು ಬೊಂಬಾಯಿಗೆ ಕಾರ್ಯಕ್ರಮವೊಂದನ್ನು ಈ ರೀತಿ ಹಾಕಿಕೊಟ್ಟಿದ್ದಾರೆ. ಐದು ಜನಕ್ಕೆ ಮೀರದ ಗುಂಪಿನವರು ಸೇರಿ ಬೇರೆ ಬೇರೆ ಕಡೆ ತ್ರಿವರ್ಣ ಧ್ವಜವನ್ನು ಬಹಿರಂಗವಾಗಿ ಹಾರಿಸಬೇಕು. ಅನಂತರ ಆಗಸ್ಟ್ ನಿರ್ಣಯವನ್ನು ಓದಬೇಕು. ಬೆಳಗಿನಝಾವ ೫-೩೦ ಕ್ಕೆ ಈ ಕಾಲವನ್ನು ಗೊತ್ತುಮಾಡಿರುವರು. ಆ ಹೊತ್ತಿನಲ್ಲಿಯೇ ಅಖಿಲ ಭಾರತ ಮುಖಂಡರ ದಸ್ತಗಿರಿಯಾದುದು.

ಬಹಿರಂಗ ಸಭೆ

ಮೈಸೂರು ೯

ಈ ದಿನ ಸಂಜೆ ೬-೩೦ ಗಂಟೆಗೆ ಟ್ರೈನಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಬಹಿರಂಗ ಸಭೆ ನಡೆಯುವುದು.

ರೇಷನ್ ಮೊಕದ್ದಮೆ

ಮೈಸೂರು ಅಶೋಕ ರಸ್ತೆಯಲ್ಲಿರುವ ವೈ. ಎಂ. ಎ. ಎ. ಸ್ಟೋರ್ಸ್ಸಿನ ಬಷೀರ್ ಅಹ್ಮದ್ ಖಾನ್ ಎಂಬುವರು ಶ್ರೀರಂಗಪಟ್ಟಣದಿಂದ ತಮ್ಮ ಸ್ಟೋರ್ಸ್ ಒತ್ತ ತಂದುಕೊಂಡು ಅದನ್ನು ರೇಷನ್ ಶಾಪಿಗೆ ತಿಳಿಸದೆಯೂ ಪರ್ಮಿಟ್ ಹೋಲ್ಡರ್ ಮಾಡದೆಯೂ ಮತ್ತೆ ರೇಷನ್ ಅರ್ಡರನ್ನು ಪಡೆದರೆಂಬುದಾಗಿ ಅವರ ಮೇಲೆ ಛೀ|| ದಿ|| ಕಾ|| ಪ್ರಕಾರ ಪ್ರ|| ನ್ಯಾ|| ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ.

ಠಾಕೂರರ ದಿನಾಚರಣೆ

ನಿನ್ನೆ ಸೋಮವಾರ ಸಂಜೆ ಮಕ್ಕಳ ಕೂಟದ ಆಶ್ರಯದಲ್ಲಿ ವಿಶ್ವಕವಿ ರವೀಂದ್ರನಾಥ ಠಾಕೂರ್‌ರವರ ದಿನವನ್ನು ಆಚರಿಸಲಾಯಿತು. ಶ್ರೀ ಬಿ. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮಕ್ಕಳ ಪರವಾಗಿ ಕೆ. ವಿ ಶಾಂತ, ಎಚ್ ವೈ. ರಾಜು ಮುಂತಾಗಿ ಎಂಟು ಜನ ಬಾಲಕರು ಠಾಕೂರರ ವಿಷಯವಾಗಿ ಭಾಷಣವನ್ನು ಮಾಡಿದರು. ಅನಂತರ ಶ್ರೀಮತಿ [illegible] ಯವರಿಂದ ಭಾಗವತದ ಕೆಲವು ಭಾಗಗಳು ಓದಲ್ಪಟ್ಟವು. ಶ್ರೀ [illegible] ರವರು ಮಕ್ಕಳಿಗೆ ಒಡಿಸುವ ರೀತಿಯಲ್ಲಿ ಚಿತ್ರಗಳ [illegible] ಚೆನ್ನಾಗಿ ಮಾತನಾಡಿದರು. ಅಧ್ಯಕ್ಷರ ಭಾಷಣವಾದ ನಂತರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಬಾವಿಯಲ್ಲಿ ಮಗುವಿನ ಮರಣ

ಮೈಸೂರು ಒಬ್ಬ [illegible] ಸಕ್ಲೇಷನ್ ಬಟ್ಟೆ ಪೆಡ್ಲರ್ ಶ್ರೀ [illegible] ಮನೆ ಮೊಮ್ಮಗ [illegible] ತಿಂಗಳ ಮಗು ಈ ದಿನ ಬೆಳಿಗ್ಗೆ ಬಾವಿಯಲ್ಲಿ ಪ್ರಾಣಬಿಟ್ಟಿತು. ತನಿಖೆ ನಡೆಯುತ್ತಿದೆ.

ಹಸ್ತಪತ್ರಿಕೆಗಳ ಮುದ್ರಣಕ್ಕೆ ನಿಷೇಧ

[ಸ್ವಂ.ಸು.] ಬೆಂಗಳೂರು ೮

ಮುಖ್ಯವಾಗಿ ಹಂಚಲ್ಪಡುವ ಹಸ್ತಪತ್ರಿಕೆಗಳನ್ನೂ, ಕೈ ಪುಸ್ತಕಗಳನ್ನೂ, ಸುದ್ದಿಯೋಗೊಂಡ ಪ್ರತಿಗಳನ್ನೂ ಮುದ್ರಣಕಾರರೇ ಮುಂತಾದವರು ಪ್ರಕಟಿಸಕೂಡದೆಂದು ಹೊಸ ಆಜ್ಞೆಯನ್ನು ಕಾಗದ ಕಂಟ್ರೋಲ್ ನಿಬಂಧನೆ ಪ್ರಕಾರ ಹೊರಡಿಸಲಾಗಿದೆ.

ಎಂ. ವಿ. ರಾಜಮ್ಮನಿಗೆ ಸನ್ಮಾನ

ಕನ್ನಡ ವಾಕ್ಚಿತ್ರ ಜಗತ್ತಿನಲ್ಲಿ ಪ್ರಸಿದ್ಧ 'ರಾಧಾರಮಣ' ಚಿತ್ರದ ನಿರ್ಮಾಪಕರಾದ ಶ್ರೀಮತಿ ಎಂ. ವಿ. ರಾಜಮ್ಮನವರಿಗೆ ಸನ್ಮಾನ ಪತ್ರವು ಅರ್ಪಿಸಲ್ಪಟ್ಟಿತು. ಶ್ರೀ ಶಾಸ್ತ್ರಿ ವೆಂಕಟೇಶ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಚಲನ ಚಿತ್ರಗಳನ್ನು ಜನರು ಪ್ರದರ್ಶಕರು ಅವುಗಳನ್ನು ಪ್ರೋತ್ಸಾಹಿಸಿ, ಈ ಕಲೆಗೆ ಪ್ರೋತ್ಸಾಹವನ್ನು ಕನ್ನಡಿಗರು ಕೊಡಬೇಕೆಂದು ಶ್ರೀ ರಾಜಮ್ಮನವರು ಪ್ರಾರ್ಥಿಸಿದರು.

ಬರ್ಮಾ ಯುದ್ಧ

ಮಣಿಪುರದ ರಾಜಧಾನಿಯಾದ ಇಂಫಾಲ್‌ನಿಂದ ದಕ್ಷಿಣ ದಿಕ್ಕಿನಲ್ಲಿ ಸುಮಾರು ೩೦ ಮೈಲಿಗಳ ದೂರ ಟಿಡ್ಡಿಂ ರಸ್ತೆಯಲ್ಲಿ, ಮಿತ್ರವರ್ಗದವರು ಯಾವ ಪ್ರತಿಭಟನೆಯೂ ಇಲ್ಲದೆ ಮುಂದುವರೆದಿದ್ದಾರೆ.

ಜಪಾನರ ಹೊಸ ಧಾಳಿ

ಕ್ಯಾಂಟನ್-ಹ್ಯಾಂಕೋ ರೈಲ್ವೆಯ ಪಾರ್ಶ್ವದಲ್ಲಿರುವ ಹೆಂಗ್ಯಾಂಗ್ ನಗರವನ್ನು ಜಪಾನರು ಮುತ್ತಿದ್ದಾರೆ. ಇದರಿಂದ ಅಲ್ಲಿರುವ ಇಪ್ಪತ್ತು ಸಹಸ್ರ ಚೀಣಿ ಸೈನಿಕರು ಸಿಕ್ಕಿಬಿದ್ದಿದ್ದಾರೆ.

Edited, printed and published by A. R. Nagarajan, at the Sadhvi Press, D. Subbiah Road, Mysore

ಜವಳಿ ವರ್ತಕರ ಲಾಭದಾಸೆ

[ಸ್ವ. ವ.] ಕೃಷ್ಣರಾಜನಗರ ೬

ಇಲ್ಲಿನ ಜವಳಿ ವರ್ತಕರು, ಸರಕಾರದವರು ನಿಗದಿ ಮಾಡಿರುವಂತೆ ಬಟ್ಟೆ ವ್ಯಾಪಾರವನ್ನು ಮಾಡದೆ, ಹೆಚ್ಚಿನ ಲಾಭಕ್ಕೆ ಮಾರುತ್ತಾರೆ. ನಿಯಮ ಪ್ರಕಾರ ಕೊಡಬೇಕಾಗಿರುವ ಬಿಲ್ ಕೊಡುವುದಿಲ್ಲ. ಯಾರಿಗೆ ಕೊಡುವರೊಬ್ಬರಿಬ್ಬರು ಅಧಿಕ ಬೆಲೆಗೆ ಮಾರಿ, ನಿಗದಿಯಾದ ಹಣವನ್ನು ಬಿಲ್‌ನಲ್ಲಿ ತೋರಿಸುತ್ತಾರೆ. ಬ್ಲಾಕ್ ಮಾರ್ಕೆಟ್ಟಿನಲ್ಲಿ ಸಾಮಾನು ಕೊಂಡುಕೊಂಡು ಮಾರಬೇಕಾಗಿರುವುದರಿಂದ ಹೀಗೆ ಮಾಡಲಾಗುತ್ತಿದೆಯೆಂದು ವರ್ತಕರು ಹೇಳುತ್ತಾರೆ. ಈ ಅಂಗಡಿಗಳನ್ನು ಸರ್ಕಾರದವರು ಸರಿಯಾಗಿ ಪರಿಶೀಲಿಸಿ, ತಕ್ಕ ಪರಿಹಾರೋಪಾಯವನ್ನು ಕಂಡು ಹಿಡಿಯಬೇಕೆಂದು ಕೋರಲಾಗಿದೆ.

ಕಾಗದದಿಂದ ಬಟ್ಟೆ

ಅಮೇರಿಕದಲ್ಲಿ ಯುದ್ಧ ನಿಮಿತ್ತ ಅನೇಕ ಸಂಶೋಧನೆಗಳು ನಡೆಯುತ್ತಿವೆ. ಹೊಸ ವಿಧಾನದ ಕಾಗದವೊಂದು ಕಂಡು ಹಿಡಿಯಲ್ಪಟ್ಟಿದೆ. ಇದನ್ನು ನೀರಿನಲ್ಲಿ ತೊಳೆದು ಪುನಃ ಉಪಯೋಗಿಸಬಹುದು. ಇದರಲ್ಲಿ ಡೇರೆಗಳಿಗೆ ಬೇಕಾದ ಬಟ್ಟೆ, ವಿಮಾನ ಉಪಯೋಗಿಸುವ ಅಂಗವಸ್ತ್ರಗಳೂ ತಯಾರಾದವೂ ಆಗುತ್ತವೆ. ಕ್ರೇಪ್ ಕಾಗದವು ವ್ಯಾಪಾರಕಾಲುಗಳಂತೆ ಮಾಡಲ್ಪಟ್ಟು ಸೈನಿಕರಿಗೆ ಸಾಮಗ್ರಿಗಳನ್ನೊದಗಿಸಬಹುದು. ತಂತಿಯನ್ನಿಟ್ಟರೆ ಒಡ್ಡೆಯಾಗುವುದಿಲ್ಲ. ಉಕ್ಕಿನ ಡ್ರಂಗಳ ಬದಲು ಕಾಗದದ ಡ್ರಂಗಳನ್ನು ಇಟ್ಟುಕೊಳ್ಳಬಹುದು.

ಮಿತ್ರರ 'ಭಯೋತ್ಪಾದನೆ' ಧಾಳಿ

ಮಧ್ಯ ಜರ್ಮನಿಯ ಮೇಲೆ ಮಿತ್ರ ವಿಮಾನ ಬಲಗಳು ಭಯೋತ್ಪಾದನೆ ಮಾಡುವ ರೀತಿಯಲ್ಲಿ ಧಾಳಿಮಾಡುತ್ತಿವೆಯೆಂದು ಜರ್ಮನ್ ಪ್ರಕಟಣೆಯೊಂದು ತಿಳಿಸುತ್ತದೆ.

ಅಂತರಿಕ್ಷದಲ್ಲಿ ವಿಚಿತ್ರ ಬೆಳಕು

ಬರ್ನಾನಿಂದ ಬಂದಿರುವ ಸುದ್ದಿಯೊಂದರ ಪ್ರಕಾರ ಕಳೆದ ಶನಿವಾರ ರಾತ್ರಿ ೨ ಗಂಟೆ ಸಮಯದಲ್ಲಿ ಅಂತರಿಕ್ಷದಲ್ಲಿ ಪ್ರಕಾಶಮಾನವಾದ ಬೆಳಕು ಕಾಣಿಸಿಕೊಂಡಿತು. ವಾಯುವ್ಯ ದಿಕ್ಕಿನಲ್ಲಿ ಮೊದಲು ಪ್ರಾರಂಭವಾಯಿತು. ಶುದ್ಧ ನೀಲಿ ಮತ್ತು ಕಣ್ಣು ಕೋರೈಸುವ ಪ್ರಕಾಶವುಳ್ಳ ಬಿಳುಪಿನ ಬಣ್ಣಗಳಿಂದ ಕೂಡಿತ್ತು. ಅಂತರಿಕ್ಷದಲ್ಲಿ ವಿಚಿತ್ರ ಸನ್ನಿವೇಶವೇನೋ ಆಗ ಉಂಟಾಗಿರಬೇಕೆಂದು ಊಹಿಸಲಾಗಿದೆ.

ಸ್ವಯಂವರಕ್ಕೆ ಕುಸ್ತಿ ಸವಾಲ್

ಕಾಶ್ಮೀರ ಸಂಸ್ಥಾನದ ಶ್ರೀನಗರದಲ್ಲಿರುವ ಬಿಲೂಚಿಸ್ತಾನದ ಮುಸ್ಲಿಂ ಯುವತಿ ಅಮೀನಳೆಂಬುವಳು ತನ್ನ ವಿವಾಹ ವಿಷಯದಲ್ಲಿ ಪ್ರಾಚೀನಪದ್ಧತಿಯನ್ನು ಅನುಸರಿಸುತ್ತಿರುವಂತೆ ಕಾಣಬರುತ್ತದೆ. ತನ್ನನ್ನು ಯಾವ ಯುವಕನು ಕುಸ್ತಿಯಲ್ಲಿ ಸೋಲಿಸುವನೋ ಅಂತಹವನನ್ನು ತಾನು ವರಿಸುವೆನೆಂದು ಆಕೆ ಸವಾಲು ಹಾಕಿರುವಳು.

ಬೆಳೆ ಪ್ರಮಾಣ ಕಂಡುಹಿಡಿಯುವುದು

ಬಂಗಾಳ ಪ್ರಾಂತದಲ್ಲಿ ಪ್ರತಿಯೊಂದು ಗದ್ದೆಯಲ್ಲೂ ಬೆಳೆಯು ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಕರಾರುವಾಕ್ಕಾಗಿ ನಿಗದಿಮಾಡಲು ಒಂದು ಸಾವಿರ ಜನ ಅಮೀನರನ್ನೂ ೧೨ ಸಾವಿರ ಜನ ಅರ್ಧ ಹೊತ್ತು ಕೆಲಸ ಮಾಡುವವರನ್ನೂ ಸರ್ಕಾರದವರು ನೇಮಿಸಿದ್ದಾರೆ.

ಸೇರು ಉಪ್ಪಿಗೆ ೮ ರೂ; ಸಕ್ಕರೆ ೩ ರೂ.

ಅಸ್ಸಾಮಿನಲ್ಲಿ ಬೆಲೆಗಳು ಮಿತಿಮೀರಿವೆ. ಉಪ್ಪು ಸೇರಿಗೆ ೮ ರೂ ವರೆಗೆ ಮಾರುತ್ತಿದೆ. ಸಕ್ಕರೆ ಸೇರಿಗೆ ೨ ರಿಂದ ೩ ರೂ. ಬೆಲ್ಲ ಸೇರಿಗೆ ೧ ರೂ. ಸಾಸುವೆ ಎಣ್ಣೆ ಸೇರಿಗೆ ೨ ರೂ. ಬಟ್ಟೆಯಂತೂ ನಿಶ್ಚಯವೇ ಇಲ್ಲ.

ಕಸ್ತೂರಿ ನಿಧಿಗೆ ೩೫ ಲಕ್ಷ

ಜುಲೈ ಅಖೈರಿನೊಳಗೆ ಕಸ್ತೂರಿ ಬಾ ನಿಧಿಗೆ ಸಮಗ್ರ ಭಾರತದಲ್ಲಿ ೩೫ ಲಕ್ಷಕ್ಕೆ ಮೇಲ್ಪಟ್ಟು ಹಣ ಶೇಖರಣೆಯಾಗಿದೆ.

ಅಪೇರಾ ಟಾಕೀಸ್

ಅಮೋಘ 2 ನೆಯ ವಾರ

ತಾ. 9-8-44 ರಿಂದ

ಫ್ಯಾಷನ್

ಹಿಂದಿ ಚಿತ್ರ — ಪಾತ್ರ ವಹಿಸಿರುವವರು:

ಸರದಾರ್ ಅಖ್ತರ್-ಚಂದ್ರಮೋಹನ್

ಸಬಿತಾದೇವಿ-ಬುದ್ದು-ಅಡ್ವಾನಿ

ಶಾಂತ ಪ್ರಸಾದ್

ಮುಂದಿನ ಬದಲಾವಣೆ

ಭಾಗ್ಯಲಕ್ಷ್ಮಿ

(ತೆಲುಗು ಚಿತ್ರ)

[illegible]

ಎಸ್. ಎಸ್. ... ಮುಂತಾದವರು ಪಾತ್ರವಹಿಸಿರುವರು

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಪ್ರಕಟಣೆ

ಡಿಫ್ತೀರಿಯಾ ಅನ್ನುವ ಗಂಟಲು ರೋಗ

ರಾಜಧಾನಿಯ ಕೆಲವು ಪ್ರದೇಶಗಳಲ್ಲಿ ಡಿಫ್ತೀರಿಯಾ ಅನ್ನುವ ಗಂಟಲು ರೋಗವು ಈಗ ಎರಡು ತಿಂಗಳುಗಳಿಂದ ಕಾಣಿಸಿಕೊಂಡಿರುತ್ತದೆ. ಈ ರೋಗವು ಕೇವಲ ಸಣ್ಣ ಮಕ್ಕಳಿಗೆ ಬಹು ಜಾಗ್ರತೆಯಾಗಿ ತಗಲುತ್ತದೆ. ಪ್ರಾರಂಭದಲ್ಲಿ ಗಂಟಲಿನಲ್ಲಿ ನೋವು ಉಂಟಾಗಿ ಸಾಮಾನ್ಯ ಜ್ವರ ಬರುವುದು ಮತ್ತು ಗಂಟಲಿನಲ್ಲಿ ಬಿಳಿ ಪೊರೆ ಕಾಣಿಸಿಕೊಳ್ಳುವುದು. ತಕ್ಷಣ ಸರಿಯಾದ ಚಿಕಿತ್ಸೆ ಮಾಡಿಸದಿದ್ದಲ್ಲಿ ಪ್ರಾಣಾಪಾಯಕ್ಕೆ ಕಾರಣವಾಗುತ್ತದೆ. ಇದುವರೆಗೂ ಈ ರೋಗದಿಂದ ಎಲ್ಲಾ ಮೊಹಲ್ಲಾಗಳಲ್ಲೂ ಕಳೆದ ಮೇ ತಿಂಗಳಿನಲ್ಲಿ ಒಂದು ಕೇಸು, ಜೂನ್ ತಿಂಗಳಿನಲ್ಲಿ ಹದಿನೇಳು ಕೇಸು, ಜುಲೈ ಮಾಹೆ ತಹಲ್ ವರೆಗೆ ೧೭ ಕೇಸು ಒಟ್ಟು ೩೫ ಕೇಸುಗಳು ವರದಿಯಾಗಿರುತ್ತದೆ.

ರಾಜಧಾನಿಯ ಪೌರಸಭೆಯ ಆರೋಗ್ಯ ಇಲಾಖೆಯವರು ಈ ರೋಗವನ್ನು ತಡೆಗಟ್ಟಲು ಸಕಾಲದಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ. ಇದಕ್ಕಾಗಿ 304 ಲಕ್ಷ ಯೂನಿಟ್ಟುಗಳಷ್ಟು ಡಿಫ್ತೀರಿಯಾ ಸೀರಂ ಔಷಧಿಯನ್ನು ತರಿಸಿಟ್ಟಿರುತ್ತಾರೆ. ಬಡವರಿಗೆ ಈ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ. ಅನುಕೂಲಸ್ಥರಿಗೆ ಖಾಯಿಲೆ ಮಕ್ಕಳಿಗೆ ಕೊಡುವ ಸೀರಂ ಕೇವಲ ಕಮ್ಮಿ ಬೆಲೆಗೆ ಅಂದರೆ 10,000 ಯೂನಿಟ್ಟಿನ ಟ್ಯೂಬಿಗೆ ರೂ 1-2-0 ಯಂತೆ ಕೊಡಲಾಗುತ್ತದೆ. ರೋಗಿಯ ಸಮೀಪದಲ್ಲಿರುವ ಮಕ್ಕಳ ರಕ್ಷಣೆಗೆ ಇನಾಕ್ಯುಲೇಷನ್ ಮಾಡಿಸುವುದಕ್ಕೆ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ.

ಅಲ್ಲದೆ ಇತರ ಮನೆಯಲ್ಲಿರುವ ಆರೋಗ್ಯವಾದ ಮಕ್ಕಳಿಗೂ ಇನಾಕ್ಯುಲೇಷನ್ ಮಾಡಿಸಲು ಡಿಫ್ತೀರಿಯಾ ಟಾಕ್ಸಾಯಿಡ್ ಎಂಬ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ.

ಈಗಾಗಲೇ 71 ಲಕ್ಷ ಯೂನಿಟ್‌ಗಳಷ್ಟು ಔಷಧಿಯನ್ನು ಜನಗಳ ಉಪಯೋಗಕ್ಕಾಗಿ ಹಂಚಲಾಗಿದೆ. 440 ಮಕ್ಕಳಿಗೆ ಇದುವರೆಗೂ ಇನಾಕ್ಯುಲೇಷನ್ ಮಾಡಿಸಲಾಗಿದೆ. ರೋಗಿಗಳ ಮನೆಗಳನ್ನೆಲ್ಲಾ ಡಿಸ್‌ಇನ್‌ಫೆಕ್ಟ್ ಮಾಡಿಸಲಾಗಿದೆ. ನಗರದ ಡಾಕ್ಟರುಗಳಲ್ಲಿಯೂ ಈ ವಿಷಯದಲ್ಲಿ ಸಹಕರಿಸಬೇಕಾಗಿ ಕೇಳಲಾಗಿದೆ.

ಪುರಜನರೆಲ್ಲರೂ ಈ ರೋಗವು ಕಾಣಿಸಿಕೊಂಡ ಒಡನೆಯೇ ಸಮಾಚಾರವನ್ನು ಆರೋಗ್ಯಾಧಿಕಾರಿಗಳಿಗೆ ತಿಳಿಸಿ, ಮುಂದೆ ಚಿಕಿತ್ಸೆ ಮತ್ತು ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿದೆ.

(ಸಹಿ)

ಆರ್. ರಾಮಚಂದ್ರರಾವ್ ಘಾಂಬೋರೆ

ಪ್ರೆಸಿಡೆಂಟ್,

ಮೈಸೂರು, 26-7-44 — ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಸ್ತ್ರೀಯರ ಸೌಕರ್ಯಕ್ಕೆ

ತಾ|| ೧-೮-೪೪ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ರೇಷನ್ ಕಾರ್ಡುಗಳಿಗೆ ಸಕ್ಕರೆ ಕೋಟಾಕ್ಕೆ ಪ್ರತಿಯಾಗಿ ಬೂರಾ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ

ಇವೊತ್ತೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು! ಕೈಗಾರಿಕೆ ಸಂಸ್ಥೆಗಳು!

ಬಾಲಿಕಾ ಶಾಲೆಗಳು! ಮಹಿಳಾ ಚಿಕಿತ್ಸಾಲಯಗಳು!

ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.

ನಮ್ಮಲ್ಲಿ ವಸೂಲಾದ ಹಣ ನಮಗಾಗಿಯೇ ವಿನಿಯೋಗ.

ಗೋಪಾಲಕೃಷ್ಣ ಶೆಟ್ಟಿ, ಖಜಾಂಚಿ — ಎಸ್. ಚನ್ನಯ್ಯ, ಕಾರ್ಯದರ್ಶಿ — ಹಿರಳ್ಳಿ ರಾಮಪ್ಪ, ಅಧ್ಯಕ್ಷ

ಸಂಪುಟ ೩] ಗುರುವಾರ ೧೦-೮-೪೪ [ಸಂಚಿಕೆ ೧೬

ತುರ್ಕಿಯು ಯುದ್ಧಕ್ಕೆ ಪ್ರವೇಶಿಸುವುದೇ?

ಅನಂತರಾಮರ್ರವರು ವೈಸ್-ಚಾನ್ಸಲರಾಗುವರೇ ?

ಬೊಂಬಾಯಿನಲ್ಲಿ ೨೪ ಜನರ ದಸ್ತಗಿರಿ

ಪ್ರಾರ್ಥನಾ ದಿನಾಚರಣೆ

ಮೈಸೂರು ೧೦.

ನೆನ್ನೆ ಸಂಜೆ ಕಾಂಗ್ರೆಸ್ ಆಫೀಸಿನಲ್ಲಿ ಆಗಸ್ಟ್ ೯ ನೇ ದಿನವು ಆಚರಿಸಲ್ಪಟ್ಟಿತು. ಕಾಂಗ್ರೆಸ್ ಪ್ರಮುಖರು ದಯಮಾಡಿಸಿದ್ದರು ದೇವರ ಪ್ರಾರ್ಥನೆಯಾದ ನಂತರ ಶ್ರೀ ಯಸ್. ಚನ್ನಯ್ಯನವರು ಪೀಠಿಕಾ ಭಾಷಣವನ್ನು ಮಾಡಿ, ದಿನಾಚರಣೆಯ ಉದ್ದೇಶವನ್ನು ವಿವರಿಸಿದರು. ಅನಂತರ ಶ್ರೀ ಯಸ್. ರಂಗರಾಮಯ್ಯನವರು ರಾಜಕೀಯ ಪರಿಸ್ಥಿತಿ, ಜಿನ್ನಾ-ಗಾಂಧಿ ಭೇಟಿ ವಿಷಯವಾಗಿ ಅನೋಘವಾಗಿ ಭಾಷಣ ಮಾಡಿ, ಹಿಂದೂ-ಮುಸ್ಲಿಂ ಸಮಸ್ಯೆಯು ಪರಿಹಾರವಾಗಲು ಭೇಟಿಯು ಜಯಪ್ರದವಾಗಲೆಂದು ಹಾರೈಸಿದರು. ದಿವಂಗತ ಶಾಸ್ತ್ರಿ ಬಾ ಯವರ ಸ್ಮಾರಕ ನಿಧಿಯನ್ನು ಕೂಡಿಸಲು ಪ್ರಾರ್ಥನೆ ಮಾಡಲಾಯಿತು.

ವಿದ್ಯಾರ್ಥಿ ಸಂಘದ ಸಭೆ

ಮೈಸೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನೆನ್ನೆ ಸಂಜೆ ಸುಬ್ಬರಾಯನಕೆರೆಯಲ್ಲಿ ಪ್ರಾರ್ಥನಾ ಸಭೆ ನಡೆಯಿತು. ಅನೇಕ ವಿದ್ಯಾರ್ಥಿಗಳೂ ಇತರರೂ ಸೇರಿದ್ದರು ರಾಷ್ಟ್ರೀಯ ಧ್ವಜ ಮತ್ತು ವಿದ್ಯಾರ್ಥಿ ಸಂಘದ ಧ್ವಜಗಳನ್ನು ಹಾರಿಸಲಾಗಿತ್ತು. ಸಾಮೂಹಿಕ ಪ್ರಾರ್ಥನೆಯಾದ ನಂತರ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮವನ್ನು ಅನುಮೋದಿಸುವ ಮತ್ತು ಗಾಂಧೀ-ಜಿನ್ನಾ ಭೇಟಿಯು ಸ್ವಾತಂತ್ರ್ಯ ಸಾಧನೆಗೆ ಸಹಾಯವಾಗಲೆಂದು ಹಾರೈಸುವ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿ, ಅದನ್ನು ಗಾಂಧೀ-ಜಿನ್ನಾರವರಿಗೆ ಕಳುಹಿಸಲಾಯಿತು

ದೇಶಪ್ರೇಮಿ ಸಂಘದಲ್ಲಿ

ನೆನ್ನೆ ಸಂಜೆ ಶಾರದಾವಿಲಾಸ ಹೈಸ್ಕೂಲ್ ಮೈದಾನದಲ್ಲಿ ಮೇಲ್ಕಂಡ ಸಂಘದ ಆಶ್ರಯದಲ್ಲಿ ಪ್ರಾರ್ಥನಾ ದಿನಾಚರಣೆ ನಡೆಯಿತು. ಶ್ರೀ ಎ ಸಿ. ಶ್ರೀನಿವಾಸರಾವ್ ರವರು ಅಧ್ಯಕ್ಷರಾಗಿದ್ದರು ಶ್ರೀ ಡಿ ಕೇಶವಮೂರ್ತಿಯವರು ಭಾಷಣಮಾಡಿದರು.

ಕಾಲೇಜ್ ಹಾಸ್ಟಲಿನಲ್ಲಿ

ನೆನ್ನೆ ಮಹಾರಾಜಾ ಕಾಲೇಜ್ ಹಾಸ್ಟಲಿನಲ್ಲಿ ವಿದ್ಯಾರ್ಥಿಗಳು, ಹಾಸ್ಟಲ್ ಜವಲಿಯನ್ನಿನಲ್ಲಿ ಸಭೆ ಸೇರಿ ಆಗಸ್ಟ್ ೯ ನೆಯ ದಿನಾಚರಣೆ ನಡೆಸಿದರು. ರಾಷ್ಟ್ರಗೀತೆ, ಕೊರಾನ್ ಗೀತೆ, ಬೈಬಲ್ ಪಠಣ ನಡೆದವು. ಶ್ರೀ ಜಿ ಸಿ. ಕೃಷ್ಣರಾಯರು ಭಾಷಣ ಮಾಡಿದರು ಗಾಂಧಿ ಜಿನ್ನಾ ಭೇಟಿ, ಮುಖಂಡರ ಬಿಡುಗಡೆ ವಿಷಯವಾಗಿ ಠರಾವುಗಳಾದವು

ಚಿಟ್ಟೆದಪುರದ ನಿಲಯದಲ್ಲಿ

ನೆನ್ನೆ ಬೆಳಿಗ್ಗೆ ೭ ಗಂಟೆಗೆ ಚಿಟ್ಟೆದಪುರದ ವಿದ್ಯಾರ್ಥಿನಿಲಯ ಸಂಘದ ಆಶ್ರಯದಲ್ಲಿ ಮಹಾತ್ಮರ ಮತ್ತು ಜಿನ್ನಾರವರ ಭೇಟಿಯು ಉತ್ತಮ ಪರಿಣಾಮಕಾರಿಯಾಗಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು ಟಿ. ಕೆ. ಮೃತ್ಯುಂಜಯಸ್ವಾಮಿ, ಗಂಗಣ್ಣ ಎಂಬ ಇಬ್ಬರು ಉಪವಾಸ ವ್ರತವನ್ನು ಆಚರಿಸಿದರು

ಬಾಯ್ಸ್ ಫುಟ್‌ಬಾಲ್ ಕ್ಲಬ್ಬಿನಲ್ಲಿ

ಮೈಸೂರು ಬಾಯ್ಸ್ ಫುಟ್‌ಬಾಲ್ ಕ್ಲಬ್ಬಿನ ಕಛೇರಿಯಲ್ಲಿ ನೆನ್ನೆ ಸಾಯಂಕಾಲ ಸಗಸ್ಯರುಗಳು ಪ್ರೊಫೆ. ಬಾಪೂಜಿಯವರ ಭಾವಚಿತ್ರ ಪ್ರತಿಷ್ಠಾಪನೆ ಮತ್ತು ಗಾಂಧೀಜಿ ಮತ್ತು ಜಿನ್ನಾರವರ ಭೇಟಿಯು

ಬೊಂಬಾಯಿಯಲ್ಲಿ ದಸ್ತಗಿರಿ

ಮಹಾತ್ಮಾ ಗಾಂಧಿಯವರು ಆಗಸ್ಟ್ ೯ ನೇ ತಾರೀಖಿನ ಪ್ರದರ್ಶನವೊಂದನ್ನು ನಡಸಬೇಕೆಂದು ಬೊಂಬಾಯಿ ಪಟ್ಟಣಕ್ಕೆ ವಿಶೇಷ ಕಾರ್ಯಕ್ರಮಪಟ್ಟಿಯನ್ನು ಕೊಟ್ಟಿದ್ದರಷ್ಟೆ. ಅದಕ್ಕೆ ಅನುಸಾರವಾಗಿ ಪೋಲೀಸ್ ಕಮೀಷನರಿಗೆ ಪತ್ರವೊಂದನ್ನು ಬರೆದು 'ಭಾರತವನ್ನು ಬಿಟ್ಟು ಹೊರಡಿ' ಎಂಬ ನಿರ್ಣಯವನ್ನು ಸ್ಮರಣೆಮಾಡಲೂ ಇತರ ಕಾರ್ಯಕ್ರಮಗಳನ್ನು ನಡೆಸಲೂ ಅನುಮತಿ ಕೇಳಲಾಗಿತ್ತು ಪ್ರದರ್ಶನ ನಡೆಯುವ ಜಾಗವನ್ನು ಪೋಲೀಸರ ಅವಗಾಹನೆಗೆ ಮಾತ್ರ ತರಲಾಗಿತ್ತು. ಸಾರ್ವಜನಿಕರಿಗೆ ತಿಳಿಸಲಿಲ್ಲ. ಈ ಪ್ರದರ್ಶನಕ್ಕೆ ಅಪ್ಪಣೆ ದೊರೆಯದಿದ್ದರೂ ಪ್ರದರ್ಶನವು ನಡೆಸಲು ಹೋದ ೨೪ ಮಂದಿ ಕಾಂಗ್ರೆಸ್ಸಿನವರನ್ನು ದಸ್ತಗಿರಿ ಮಾಡಲಾಯಿತು ಇವರ ಪೈಕಿ ಬೊಂಬಾಯಿ ಪ್ರಾಂತ ಕಾಂಗ್ರೆಸ್ ಕಮಿಟಿಯ ಮಾಜಿ ಕಾರ್ಯದರ್ಶಿಗಳೂ ಇದ್ದಾರೆ. ಕಾರ್ಯಕ್ರಮದಂತೆ ಐದು ಮಂದಿಯ ಗುಂಪು ಪ್ರದರ್ಶನ ಕ್ಷೇತ್ರಕ್ಕೆ ಹೋಗಿ ದಸ್ತಗಿರಿಯಾದರು ಒಟ್ಟು ಪರಿಸ್ಥಿತಿಯು ಬರಲು ಸ್ವಲ್ಪ ಸಾವಕಾಶವಾದುದರಿಂದ ಆ ಗುಂಪಿನ ನಾಲ್ವರೇ ದಸ್ತಗಿರಿಯಾಗಿದ್ದಾರೆ

ಆದಷ್ಟು ಬೇಗ ಸಡೆಯು ಭಾರತಕ್ಕೆ ಸ್ವಾತಂತ್ರ್ಯ ಬರಲೆಂದು ಭಗವಂತನನ್ನು ಪ್ರಾರ್ಥಿಸಿದರು. ಪ್ರಾರ್ಥನೆಗೆ ಶ್ರೀಗಳಾದ ಎ ರಾಮಣ್ಣ, ಎ ಶಿವಣ್ಣ ಮತ್ತು ಇನ್ನೂ ಅನೇಕ ಮಹನೀಯರುಗಳು ದಯಮಾಡಿಸಿದ್ದರು

ಚಾಮರಾಜನಗರದಲ್ಲಿ

ಇಲ್ಲಿನ ಹೈಸ್ಕೂಲ್ ವಿದ್ಯಾರ್ಥಿಗಳು ನೆನ್ನೆ ಸಾಯಂಕಾಲ ಶಾಲೆಯ ಆವರಣದಲ್ಲಿ ಶ್ರೀ ಕೋಟೆ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರಾರ್ಥನಾ ದಿನಾಚರಣೆಯನ್ನು ನಡೆಸಿದರು. ಸ್ಥಳೀಯ ಕಾಂಗ್ರೆಸ್ಸಿನವರೂ ಯುವಕ ಸಂಘದ ಸದಸ್ಯರೂ ಸಭೆ ಸೇರಿ ಮಹಾತ್ಮರ ಅಪ್ಪಣೆಯಂತೆ ಪ್ರಾರ್ಥನೆ ನಡೆಸಿದರು. ಶ್ರೀ ಕುಮಾರಸ್ವಾಮಿಯವರು ಹಿಂದೂ-ಮುಸ್ಲಿಂ ಸಂಧಾನವನ್ನು ಕುರಿತು ಮಾತನಾಡಿದರು

ಸೂಚನೆ

ನಾಳೆಯ ದಿನ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ 'ಶಕ್ತಿ' ಪತ್ರಿಕೆ ಪ್ರಕಟವಾಗುವದಿಲ್ಲ —ವ್ಯವಸ್ಥಾಪಕ

ತುರ್ಕಿಯು ರಣರಂಗಕ್ಕೆ ಇಳಿಯುವುದೇ ?

ತುರ್ಕಿಯು ಸದ್ಯದಲ್ಲಿಯೇ ರಣರಂಗಕ್ಕೆ ಇಳಿಯಬಹುದೆಂದು ಅಮೇರಿಕದ ಪತ್ರಿಕೆಯೊಂದು ತಿಳಿಸುತ್ತದೆ ಜರ್ಮನಿಯೊಂದಿಗೆ ರಾಜತಾಂತ್ರಿಕ ಸಂಬಂಧವು ಕಡಿದು ಹೋಯಿತಷ್ಟೆ. ಅದರ ಶೀಘ್ರಪರಿಣಾಮವೇ ತುರ್ಕಿಯನ್ನು ಯುದ್ಧಕ್ಕೆ ಇಳಿಯುವಂತೆ ಮಾಡುತ್ತದೆಂದು ಆ ಪತ್ರಿಕೆಯು ಊಹಿಸುತ್ತದೆ

ಸಪ್ರೂರವರು ಗಾಂಧೀಜಿ ಬಳಿಗೆ

ಸರ್ ತೇಜ್ ಬಹದ್ದೂರ್ ಸಪ್ರೂರವರು ಮಹಾತ್ಮ ಗಾಂಧಿಯವರನ್ನು ಭೇಟಿ ಮಾಡುವ ನಿಮಿತ್ತ ವರ್ಧಾಕ್ಕೆ ಹೈದರಾಬಾದಿನಿಂದ ಪ್ರಯಾಣ ಬೆಳೆಸಿದರು ಮದರಾಸಿನ ಡಾ|| ಸುಬ್ಬರಾಯನ್‌ರವರೂ ಪ್ರಯಾಣಮಾಡಿದರು

ಅರಬ್ಬರ ಒಗಟ್ಟಿಗಾಗಿ ಸಮ್ಮೇಳನ

ಸಿರಿಯಾ, ಲೆಬನಾನ್, ಪ್ಯಾಲಸ್ಟೈನ್, ಟ್ರಾನ್ಸ್ ಜೋರ್ಡಾನ್ ಈ ದೇಶಗಳನ್ನು ಒಟ್ಟುಗೂಡಿಸಿ ಒಂದೇ ರಾಜ್ಯವನ್ನಾಗಿ ಮಾಡುವ ವಿಷಯವು ಪರಿಶೀಲನೆಯಾಗಲು ಈಜಿಪ್ಟಿನಲ್ಲಿರುವ ಅಲೆಕ್ಸಾಂಡ್ರಿಯಾ ಪಟ್ಟಣದಲ್ಲಿ ಸಮ್ಮೇಳನವೊಂದು ನಡೆಯಲು ಏರ್ಪಾಡಾಗುತ್ತಿದೆ.——

ದಕ್ಷಿಣ ಫ್ರಾನ್ಸಿನ ಬೋರ್ಡೋ ಎಂಬ ಮುಖ್ಯ ರೇವು ಪಟ್ಟಣವನ್ನು ಜರ್ಮನರು ಬಿಟ್ಟುಹೋಗಿದ್ದಾರೆಂದು ವರ್ತಮಾನ

ಅನಂತರಾಮರ್ರವರು ವೈಸ್‌ಚಾನ್ಸಲರೇ ?

ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಪದವಿಗೆ ಇದುವರೆಗೆ ಯಾರೂ ನೇಮಕವಾಗಿಲ್ಲವಷ್ಟೆ. ಆ ಸ್ಥಾನಕ್ಕೆ ಬರುವ ಸೆಪ್ಟೆಂಬರ್ ಮಾಹೆ ಮಧ್ಯಭಾಗದಲ್ಲಿ ಕೆಲಸದಿಂದ ವಿರಾಮಹೊಂದಲಿರುವ ರಾಜಮಂತ್ರಿ ಪ್ರವೀಣ ಕೆ. ವಿ ಅನಂತರಾಮರ್ರವರು ಬರುವ ಸೂಚನೆಗಳು ಒಲವಾಗಿವೆಯೆಂದು ನಂಬಲರ್ಹವಾದ ಕಡೆಗಳಿಂದ ತಿಳಿದು ಬಂದಿದೆ

ಚಾನ್ಸಲರ್ ಶಕ್ರಾನಿಯವರು ವೈಸ್-ಚಾನ್ಸಲರನ್ನು ನೇಮಕಮಾಡಬೇಕೆಂದು ಅಂದಾಜಿದೆ

ಇಂಜನೀಯರುಗಳ ಸಂಘ

ಮೈಸೂರು ೧೦

ಮೈಸೂರು ಇಂಜನಿಯರುಗಳ ಸಂಘವೊಂದು ರಾಜಧಾನಿಯಲ್ಲಿ ಸ್ಥಾಪನೆಯಾಗಲಿದೆ. ಅದರ ಪ್ರಾರಂಭೋತ್ಸವವನ್ನು ಶುಕ್ರವಾರ ಮಧ್ಯಾಹ್ನ ೫|| ಘಂಟೆಗೆ ಸಹಕಾರ ಭವನದಲ್ಲಿ ನೆರವೇರಿಸಲಾಗುತ್ತದೆ ಇರಿಗೇಷನ್ ಚೀಫ್ ಇಂಜನಿಯರ್ ಶ್ರೀ ಯಂ. ನರಸಿಂಹಯ್ಯನವರು ಪ್ರಾರಂಭೋತ್ಸವ ಭಾಷಣ ಮಾಡುತ್ತಾರೆ ಅಭಿವೃದ್ಧಿ ಕಾರ್ಯಗಳ ಕಮಿಷನರ್, ಶ್ರೀ ಸಿ ಹೆಚ್ ಕೃಷ್ಣರಾಯರು ಆರ್ಥಿಕ ಬೆಳವಣಿಗೆಯಲ್ಲಿ ಇಂಜನೀಯರುಗಳ ಭಾಗ" ಎಂಬ ವಿಷಯವಾಗಿ ಭಾಷಣಮಾಡುತ್ತಾರೆ.

ಅಮೋಘ ಸಂಗೀತ

ಮೊನ್ನೆ ದಿನ ಟೌನ್‌ಹಾಲಿನಲ್ಲಿ ಬ್ರೈಟ್ ಇನ್‌ಸ್ಟಿಟ್ಯೂಟ್‌ನ ವಾರ್ಷಿಕೋತ್ಸವದಲ್ಲಿ ಶ್ರೀಮತಿ ಪುಷ್ಪ ಮಂಜರಿಯವರ ಸಂಗೀತವು ಆಸ್ಥಾನವಿದ್ವಾನ್ ವೆಂಕಟರಮಣಯ್ಯನವರ ಮತ್ತು ವಿದ್ವಾನ್ ಹೆಚ್. ವಿ. ಕೃಷ್ಣರಾಯರ ಪಿಟೀಲು ವಿದ್ವಾನ್ ಶಿವರುದ್ರಪ್ಪನವರ ಮೃದಂಗದೊಡನೆ ಅಮೋಘವಾಗಿ ನಡೆಯಿತು

ಈ ಉತ್ಸವದ ಸಂಬಂಧವಾಗಿ ನೆನ್ನೆ ರಾತ್ರಿ ಅನೇಕ ಆಹ್ವಾನಿತ ಮಹನೀಯರಿಗೆ ತಿಮ್ಮಯ್ಯಾಚಾರ್ಯರವರ ಛತ್ರದಲ್ಲಿ ಭೋಜನ ಕೂಟ ನಡೆಯಿತು.

ಶಿಕ್ಷೆ

ಮೈಸೂರು ನಗರದಲ್ಲಿ ಈಗ ೩ ತಿಂಗಳ ಹಿಂದೆ ಬಟ್ಟೆಗಳನ್ನು ಕದ್ದ, ಬಾಲಾಜಿ ಎಂಬುವನಿಗೆ ೬ ತಿಂಗಳ ಶಿಕ್ಷೆಯನ್ನು, ಚನ್ನಸ್ವಾಮಿ ಎಂಬುವನಿಗೆ ೪ ತಿಂಗಳ ಕಠಿಣ ಶಿಕ್ಷೆಯನ್ನೂ ಇದಿನ ನಗರದ ನ್ಯಾಯಾಧೀಶರು ವಿಧಿಸಿದರು.

ನೂತನ ನಗರ ನ್ಯಾಯಾಧೀಶರು

ಮೈಸೂರು ನಗರದ ನ್ಯಾಯಾಧೀಶರಾಗಿ ವರ್ಗಮಾಡಲ್ಪಟ್ಟಿರುವ ಶ್ರೀಮಾನ್ ಕೆ ಮಹಮ್ಮದ್ ಅಹ್ಮದ್‌ರವರು ಶ್ರೀಮಾನ್ ರಾಮಸ್ವಾಮಿಯವರಿಂದ ಈ ದಿನ ಛಾರ್ಜು ವಹಿಸಿಕೊಂಡರು

ಜಪಾನ್ ನೌಕೆಯು ಕದನಕ್ಕಿಳಿಯುವುದೆಂದು ?

ಜಪಾನನ್ನು ಆವರಿಸಿರುವ ಸಮುದ್ರ ಭಾಗಕ್ಕೆ ಮಿತ್ರರು ಬಂದ, ಜಪಾನ್ ದ್ವೀಪ ಸಮೂಹಗಳಿಗೆ ಅಪಾಯ ಸಂಭವಿಸಬಹುದೆಂದು ಕಂಡ ಒಂದರೆ ಆಗ ಮಾತ್ರ ಜಪಾನ್ ನೌಕೆ ಪಡೆಯು ಕದನಕ್ಕೆ ನಿಲ್ಲುವುದು ಎಂದು ಜಪಾನ್ ರೇಡಿಯೋ ಹೇಳಿದೆ. ಪೆಸಿಫಿಕ್ ಸಾಗರದಲ್ಲಿ ಅಮೇರಿಕನ್ನರು ದಕ್ಷ ಕಾರ್ಯಕ್ರಮಗಳನ್ನು ವಿವರಿಸಿ ಜಪಾನಿನ ಮೇಲೆ ವಿಮಾನದಾಳಿ ಮಾಡಲು ಪ್ರಯತ್ನ ನಡೆಸುತ್ತಿರುವ ವಿಷಯವನ್ನೆತ್ತಿ ಚೀನಾದ ಪೂರ್ವ ಮತ್ತು ದಕ್ಷಿಣ ದಿಗ್ಭಾಗಗಳಿಗೆ ಸಂಬಂಧಿಸಿದ ಸಮಾಚಾರಗಳು ಮಾರ್ಗದಲ್ಲಿ ಹಾಂಗ್‌ಕಾಂಗ್, ಸಿಂಗಪುರ ಮತ್ತು ಸುಮಾತ್ರಾಗಳಿಗೆ ಇರುವ ಸಮುದ್ರ ಮಾರ್ಗಗಳ ಮೇಲೆ ಅವರು ತಮ್ಮ ದೃಷ್ಟಿಯನ್ನಿಟ್ಟಿರುವ ನ ಸಿಜವ ಗಿದ ಜಪಾನಿಗೆ ತೊಂದರೆ ಮಾಡಬಹುದೆಂದು ರೇಡಿಯೋ ತಿಳಿಸಿದೆ.

ಚೀಫ್ ಜಡ್ಜರ ಸಂಬಳ ೩೦೦೦

ಸ್ವಂ.ವ.] ಬೆಂಗಳೂರು ೯

ಮೈಸೂರು ಚೀಫ್ ಜಡ್ಜರಾದ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಪಿ. ವೆಂಕಟರಮಣರಾಯರಿಗೆ ಆಗಸ್ಟ್ ೬ ನೇ ತಾ|| ನಿಂದ ೩,೦೦೦ ರೂ ಸಂಬಳದಿಂದ ಸಿನಿಯಾರಿಟಿ ನೀಡಲಾಗಿದೆ.

ಮಿಲಿಟೆರಿಯವನ ಅತ್ಯಾಚಾರ ಪ್ರಯತ್ನ

ನೆನ್ನೆ ದಿನ ಬೆಂಗಳೂರಿನ ಮಲ್ಲೇಶ್ವರದ ೭ ನೇ ಕ್ರಾಸ್ ರೋಡಿನಲ್ಲಿ ಹೋಗುತ್ತಿದ್ದ ತಿಪ್ಪಮ್ಮನೆಂಬ ಹೆಂಗಸೊಬ್ಬಳ ಮೇಲೆ ಮಿಲಿಟರಿ ಸಿಪಾಯಿ ಒಬ್ಬನು ಅತ್ಯಾಚಾರ ನಡೆಸಲು ಪ್ರಯತ್ನಪಟ್ಟನೆಂದೂ, ಆಕೆ ಕೂಗಿಕೊಂಡ ನಂತರ ಪೋಲೀಸರು ಸ್ಥಳಕ್ಕೆ ಬಂದು ಅವನನ್ನು ಮಿಲಿಟರಿ ಅಧಿಕಾರಿಗಳ ವಶಕ್ಕೆ ಒಪ್ಪಿಸಿದರೆಂದೂ ತಿಳಿದುಬಂದಿದೆ. ತನಿಖೆ ಕ್ರಮ ಜರುಗುತ್ತಿದೆ.

ದಿವಾಕರರು ಪೋಲೀಸ್ ವಶ

ಕರ್ನಾಟಕ ಕಾಂಗ್ರೆಸ್ ಮುಖಂಡರಾದ ಶ್ರೀ ರಂಗನಾಥ ದಿವಾಕರರು ನಿನ್ನೆ ದಿನ ಧಾರವಾಡದಲ್ಲಿ ಹಾವೇರಿಯ ಪೋಲೀಸರ ವಶವಾದರು. ಇವರು ಕಳೆದ ಆಗಸ್ಟ್ ನಿಂದ ಪೋಲೀಸರಿಗೆ ಸಿಕ್ಕಿರಲಿಲ್ಲ. ಮಹಾತ್ಮರ ಸಲಹೆಯಂತೆ ಎಲ್ಲರೂ ಹೊರಕ್ಕೆ ಬರಬೇಕೆಂದು ಹೇಳಿಕೆ ಕೊಟ್ಟುದರ ಮೇರೆಗೆ ಶ್ರೀಯುತರು ದಸ್ತಗಿರಿಯಾದುದು.

ಬೆಳ್ಳಿ ದರ ಇಳಿಯಿತು

ಹೆಚ್ಚು ಇಂಡಿಯಾ ಸರ್ಕಾರದವರು ಮಾರಾಟಕ್ಕಿಟ್ಟು ಈಗಾಗಲೇ ೧೬೫ ಗಟ್ಟಿಗಳನ್ನು ಮಾರಿದ್ದರಿಂದ ಬೆಳ್ಳಿಯ ದರವು ಇಳಿಯಿತೆಂದು ಬೊಂಬಾಯಿಯಲ್ಲಿ ವರ್ತಮಾನ. ಸರ್ಕಾರವು ದಿವಸ ಒಂದಕ್ಕೆ ಇದೇ ರೀತಿ ೩೦೦ ಗಟ್ಟಿಗಳನ್ನು ಮಾರುವ ಸಂಭವವಿದೆ.

ಪ್ರಾಂತೀಯ ಸರ್ಕಾರಗಳ ಸಾಲ

ಬರುವ ವಾರದಲ್ಲಿ ಮದರಾಸು, ಬೊಂಬಾಯಿ, ಸಂಯುಕ್ತ ಪ್ರಾಂತ, ಸಿಂಧ್, ಪಂಜಾಬ್ ಮತ್ತು ಮಧ್ಯ ಪ್ರಾಂತ ಸರಕಾರಗಳು ಒಟ್ಟು ೧೯ ಕೋಟಿ ೬೫ ಲಕ್ಷ ರೂ ಸಾಲವನ್ನು ಎತ್ತಲು ನಿರ್ಧರಿಸಿವೆ.

Edited, printed and published by A. R. Nagarajan, at the Sadhvi Press, D. Subbiah Road, Mysore

ಹಾಲೆಂಡಿನ ವಿಮಾನಗಳ ಹೊಡೆತ

ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ ಹಾಲೆಂಡಿನ ಬಾಂಬುಗಳು ವಿಶೇಷವಾಗಿ ದಕ್ಷಿಣ ಇಂಗ್ಲೆಂಡಿನ ಮೇಲೂ, ಲಂಡನ್ ಪ್ರದೇಶದ ಮೇಲೂ ಬರುತ್ತಿವೆ. ದಕ್ಷಿಣ ಇಂಗ್ಲೆಂಡಿನ ಕ್ಷೇತ್ರವೊಂದರಲ್ಲಿ ಕೆಲಸ ಮಾಡುತ್ತಿದ್ದ ಇಟಲಿ ಯುದ್ಧ ಬಂದಿಗಳು ತಮ್ಮನ್ನು ಸುರಕ್ಷಿತವಾದ ಜಾಗಕ್ಕೆ ಸಾಗಿಸದಿದ್ದಲ್ಲಿ ಮುಷ್ಕರ ಹಿಡಿಯುವುದಾಗಿ ಬೆದರಿಸಿದ್ದಾರೆ.

ಬ್ಲ್ಯಾಕ್ ಬರಿಯುವರ ಮನೆ ನಾಶ

ಇಂಗ್ಲೆಂಡಿನ ಕೂಲಿಗಾರರ ಪಾರ್ಟಿಯ ೩ ಶತಕವೂ ಯುದ್ಧವಿರೋಧಿಗಳಾಗಿದ್ದ ಪಾಬ್ಲೊ ಬ್ಲ್ಯಾಕ್ ಬರಿಯುವರ ಮನೆಯನ್ನು ಹಿಟ್ಲರನ ಹಾರುವ ಬಾಂಬು ನಾಶಮಾಡಿದೆ. ಬ್ಲ್ಯಾಕ್ ಬರಿಯುವರು ಹೇಳಿದ್ದರಾ ಲವರಲ್ಲಿ ಯುದ್ಧದಿಂದಾಗುವ ದುಷ್ಪರಿಣಾಮಗಳಿಂದ ಹಿಟ್ಲರನ್ನು ತಪ್ಪಿಸುವುದಾಗಿ ಭರವಸೆಯಿಂದ ಕೂಡಿದ್ದರು.

ಪೆಟ್ರೋಲಿಗಾಗಿ ಕೌಲು

ಇಂಗ್ಲೆಂಡಿಗೂ, ಅಮೆರಿಕಾಕ್ಕೂ ಕಡೆದ ಸಮ್ಮೇಳನದಲ್ಲಿ ಎಣ್ಣೆಯನ್ನು ತೆಗೆದು ಹಂಚುವ ವಿಷಯವು ಚರ್ಚೆಯಾಗಿ ಕೌಲುಕರಾರಾಗಿದೆಯೆಂದು ಗೊತ್ತಾಗಿದೆ. ಕೌಲಿನ ಪ್ರಕಾರ 'ಪೆಟ್ರೋಲಿಯಂ ಕೌನ್ಸಿಲ್' ಎಂಬ ಸಮಿತಿಯೊಂದು ಸ್ಥಾಪಿತವಾಗುತ್ತದೆ.

ತುರ್ಕಿ, ಹಡಗು ನೀರುಪಾಲು

ಕಪ್ಪು ಕಡಲಿನಲ್ಲಿ ಬರುತ್ತಿದ್ದ ತುರ್ಕಿಗ ಸೇರಿದ ಸಣ್ಣ ಹಡಗೊಂದು ಗೊತ್ತಿಲ್ಲದ ಸಬ್ ಮೇರಿನಿನ ಹೊಡೆತದಿಂದ ಮುಳುಗಿತು. ಇದರಲ್ಲಿ ೩೩೦ ಜನ ಯಹೂದಿ ಮಕ್ಕಳು ಮರಿಗಳು ಇದ್ದವು.

MEDICINES

Take your requirements from
RAGHULAL & CO.,
1743, Sayaji Rao Road.
(Upstairs, Mysore Hall). MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೋ.,
1743, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು

ಭಾರತ ವಿಭಜಕರಿಗೆ ಭವಿಷ್ಯದ ಶಾಪ

ಭಾರತವನ್ನು ವಿಭಜಿಸುವ ಕಾರ್ಯದಲ್ಲಿ ಮಗ್ನರಾಗುವವರನ್ನು ಭವಿಷ್ಯವು ಶಪಿಸುವುದು. ಈ ಶಾಪದಿಂದ ಮಹಾತ್ಮರೊಬ್ಬರು ಪಾರಾಗಬಹುದು. ಆದರೆ ಅವರ ಪ್ರೇರಕರು ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಮಾನ್ಯ ಕ್ರಿಶ್ಚಿಯನ್ ಪಾದ್ರಿಗಳು ಹೇಳಿದ್ದಾರೆ. ಆರಬರು ಕರನ್ನು ತೃಪ್ತಿಪಡಿಸುವ ಮನೋಗತವು ಸರಿಯಾದುದಲ್ಲ; ಚೇಂಬರ್ಲೇನ್ ರವರ ನೆನಪುಮಾಡಿಕೊಳ್ಳುವುದು ಉತ್ತಮವೆಂದು ಅವರು ತಿಳಿಸುತ್ತಾರೆ.

ಸೇನಾಧಿಕಾರಿಗಳಿಗೆ ಮರಣದಂಡನೆ

ಹಿಟ್ಲರನ್ನು ಕೊಲೆಮಾಡಲು ಉದ್ದೇಶಹೊಂದಿದವರಾಗಿ ಅದಕ್ಕಾಗಿ ಪ್ರಯತ್ನಿಸಿದ ಅಪಾದನೆಯ ಮೇಲೆ ೮ ಜನ ಜರ್ಮನ್ ಸೇನಾಧಿಕಾರಿಗಳಿಗೆ ಸ್ಪೆಷಲ್ ಕೋರ್ಟಿನಲ್ಲಿ ಮರಣದಂಡನೆ ಶಿಕ್ಷೆ ವಿಧಿಸಲಾಗಿ ಅವರುಗಳನ್ನು ಕೂಡಲೇ ಗಲ್ಲಿಗೇರಿಸಲಾಯಿತು. ಒಬ್ಬ ಪಿತೂರಿಗಾರನು ಇನ್ನೂ ಸಿಕ್ಕದ ದರಿಂದ ಅವನನ್ನು ಹಿಡಿಯುವವರಿಗೆ ೫ ಲಕ್ಷ ಪೌಂಡುಗಳ ಬಹುಮಾನವನ್ನು ಕೊಡುವುದಾಗಿ ಸಾರಲಾಗಿದೆ.

ಟಿಡ್ಡಿಂ ರಸ್ತೆಯಲ್ಲಿ ಮಿತ್ರಸೇನೆ

ಜಪಾನಿಯರನ್ನು ಎದುರಿಸುತ್ತಾ ಮಿತ್ರಸೇನೆಗಳು ಬರ್ಮಾದ ಟಿಡ್ಡಿಂ ರಸ್ತೆಯಲ್ಲಿ ಮುಂದೆ ಮುಂದೆ ಹೋಗುತ್ತಿರುವವು. ಟಾಮೂ ಊರನ್ನು ಹಿಡಿದ ಸಂಕೇತ ಕಾಬಾಕ ಣಿವೆಯಲ್ಲಿ ಈಗ ಗಸ್ತು ಓಡಾಟವು ಜಾಸ್ತಿಯಾಗಿದೆ.

ಮಹಿಳೆಯರ ಕದನ

ವಾರ್ಸಾ ಮಹಿಳೆಯರು ಪೋಲೆಂಡಿನಲ್ಲಿ ನಡೆಯುತ್ತಿರುವ ಕದನಗಳಲ್ಲಿ ಭಾಗವಹಿಸುತ್ತಿದ್ದಾರೆ.

ಗೋಕುಲಾಷ್ಟಮಿ ಪ್ರಯುಕ್ತ

ರಣಜಿತ್ ಟಾಕೀಸ್

ಪ್ರತಿ ದಿನ ೩ ಆಟಗಳು

11-8-44 ರಿಂದ

ಶಂಕರ್ ★ ಪಾರ್ವತಿ

★ ಅರುಣ
★ ಸಾಧನ ಬೋಸ್
ಮುಂತಾದವರು ಪಾತ್ರವಹಿಸಿರುವರು

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಚಿತ್ತಗತ್ತವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಒಬ್ಬ ಸ ಅನುಭವಶಾಲಿಯಿಂದ ಮಾಡಲ್ಪಡುತ್ತದೆ.

ಝುಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಇಲ್ಲಿ ಸಿಗುತ್ತವೆ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಪ್ರಕಟಣೆ

ಡಿಫ್ತೀರಿಯಾ ಅನ್ನುವ ಗಂಟಲು ರೋಗ

ರಾಜಧಾನಿಯ ಕೆಲವು ಪ್ರದೇಶಗಳಲ್ಲಿ ಡಿಫ್ತೀರಿಯಾ ಅನ್ನುವ ಗಂಟಲು ರೋಗವು ಈಗ ಎರಡು ತಿಂಗಳುಗಳಿಂದ ಕಾಣಿಸಿಕೊಂಡಿರುತ್ತದೆ. ಈ ರೋಗವು ಕೇವಲ ಸಣ್ಣ ಮಕ್ಕಳಿಗೆ ಬಹು ಜಾಗ್ರತೆಯಾಗಿ ತಗಲುತ್ತದೆ. ಪ್ರಾರಂಭದಲ್ಲಿ ಗಂಟಲಿನಲ್ಲಿ ನೋವು ಉಂಟಾಗಿ ಸಾಮಾನ್ಯವಾಗಿ ಜ್ವರ ಬರುವುದು ಮತ್ತು ಗಂಟಲಿನಲ್ಲಿ ಬಿಳಿ ಪೊರೆ ಕಾಣಿಸಿಕೊಳ್ಳುವುದು. ತಕ್ಷಣ ಸರಿಯಾದ ಚಿಕಿತ್ಸೆ ಮಾಡದಿದ್ದಲ್ಲಿ ಪ್ರಾಣಾಪಾಯಕ್ಕೆ ಕಾರಣವಾಗುತ್ತದೆ. ಇದುವರೆಗೂ ಈ ರೋಗದಿಂದ ಎಲ್ಲಾ ಮೊಹಲ್ಲಾಗಳಲ್ಲೂ ಕಳೆದ ಮೇ ತಿಂಗಳಲ್ಲಿ ಒಂದು ಕೇಸು, ಜೂನ್ ತಿಂಗಳಲ್ಲಿ ಹದಿನೇಳು ಕೇಸು ಜುಲೈ ಮೂವತ್ತರವರೆಗೆ ೧೭ ಕೇಸು ಒಟ್ಟು ೩೫ ಕೇಸುಗಳು ವರದಿಯಾಗಿರುತ್ತವೆ.

ರಾಜಧಾನಿಯ ಪೌರಸಭೆಯ ಆರೋಗ್ಯ ಶಾಖೆಯವರು ಈ ರೋಗವನ್ನು ತಡೆಗಟ್ಟಲು ಸಕಾಲದಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ. ಇದಕ್ಕಾಗಿ 304 ಲಕ್ಷ ಯೂನಿಟ್ಟುಗಳನ್ನು ಡಿಫ್ತೀರಿಯಾ ಸೀರಂ ಔಷಧಿಯನ್ನು ತರಿಸಿಟ್ಟಿರುತ್ತಾರೆ. ಬಡವರಿಗೆ ಈ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ. ಅನುಕೂಲಸ್ಥರಿಗೆ ಖಾಯಿಲೆ ಮಕ್ಕಳಿಗೆ ಕೊಡುವ ಸೀರಂ ಕೇವಲ ಕಮ್ಮಿ ಬೆಲೆಗೆ ಅಂದರೆ 10,000 ಯೂನಿಟ್ಟಿನ ಔಷಧಿಗೆ ರೂ 1-2-0 ಯಂತೆ ಕೊಡಲಾಗುತ್ತದೆ. ರೋಗಿಯ ಸಮೀಪದಲ್ಲಿರುವ ಮಕ್ಕಳ ರಕ್ಷಣೆಗೆ ಇನಾಕ್ಯುಲೇಷನ್ ಮಾಡುವಷ್ಟು ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ.

ಅಲ್ಲದೆ ಇತರ ಮನೆಯಲ್ಲಿರುವ ಆರೋಗ್ಯವಾದ ಮಕ್ಕಳಿಗೂ ಇನಾಕ್ಯುಲೇಷನ್ ಮಾಡಿಸಲು ಡಿಫ್ತೀರಿಯಾ ಟಾಕ್ಸಾಯಿಡ್ ಎಂಬ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ.

ಈಗಾಗಲೇ 71 ಲಕ್ಷದ ಯೂನಿಟ್ಟುಗಳನ್ನು ಔಷಧಿಯನ್ನು ಜನಗಳ ಉಪಯೋಗಕ್ಕಾಗಿ ಹಂಚಲಾಗಿದೆ. 440 ಮಕ್ಕಳಿಗೆ ಇರುವರಿಗೂ ಇನಾಕ್ಯುಲೇಷನ್ ಮಾಡಿಸಲಾಗಿದೆ. ರೋಗಿಗಳ ಮನೆಗಳನ್ನೆಲ್ಲಾ ಡಿಸ್‌ಇನ್‌ಫೆಕ್ಟ್ ಮಾಡಿಸಲಾಗಿದೆ. ನಗರದ ಡಾಕ್ಟರುಗಳಿಗೂ ಈ ವಿಷಯದಲ್ಲಿ ಸಹಕರಿಸಬೇಕಾಗಿ ಕೋರಲಾಗಿದೆ.

ಪುರಜನರೆಲ್ಲಾ ಈ ರೋಗವು ಕಾಣಿಸಿಕೊಂಡ ಒಡನೆಯೇ ಸಮಾಚಾರವನ್ನು ಆರೋಗ್ಯಾಧಿಕಾರಿಗಳಿಗೆ ತಿಳಿಸಿ, ಮುಂದೆ ಚಿಕಿತ್ಸೆ ಮತ್ತು ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿದೆ.

(ಸಹಿ)

ಆರ್. ರಾಮಚಂದ್ರರಾವ್ ಘಾಂಬೋರೆ
ಪ್ರೆಸಿಡೆಂಟ್,

ಮೈಸೂರು, 26-7-44 ಮೈಸೂರು ಸಿಟಿ ಮುನಿಸಿಪಾಲಿಟಿ.

ಸ್ತ್ರೀಯರ ಸೌಕರ್ಯಕ್ಕೆ

ಕೆಲಸಗಾರರಿಂದಲೇ ವೃತ್ತಿಪರವಾಗಿ ತಯಾರಿಸಿ ಕೊಡುವ ವಿಚಾರದಲ್ಲಿ ನಮ್ಮ ಕಾರ್ಖಾನೆ ಮುಂದಾಗಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ವಿಚಾರಿಸಿರಿ:

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಎಲ್ಲಾ ಹೋ. ಸಂಸ್ಥೆಗಳಿಗೆ ಮತ್ತು ವ್ಯಾಪಾರಿಗಳಿಗೆ ಎಲ್ಲಾ ಕಾಲದಲ್ಲೂ ಬೇಕಾದ ಪದಾರ್ಥಗಳನ್ನು ಸಕಾಲಕ್ಕೆ ಕೊಡುವುದಕ್ಕೆ ಸಿದ್ಧರಾಗಿ ಬಾಕಿ ಮತ್ತು ತಪ್ಪದೆ ಕೊಡಲ್ಪಡುತ್ತದೆ.

ಇಂದಿನಿಂದಲೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಸಂಪುಟ ೩] ಶನಿವಾರ ೧೨--೮--೪೪ [ಸಂಚಿಕೆ ೧೭

ಅಂತಿಮ ಯುದ್ಧಕ್ಕಾಗಿ ಹಿಟ್ಲರನ ಹವಣಿಕೆ

ಭಾರತದ ಯುದ್ಧ ಖರ್ಚು ೫೭೫ ಕೋಟಿಯಾಯಿತು
ಹೆಂಗ್ಯಾಂಗ್ ನಗರವು ಚೀಣಾರ ಕೈಬಿಟ್ಟಿತು

ಉಪನ್ಯಾಸ

ಮೈಸೂರು ೧೧

"ವಿದ್ಯಾರ್ಥಿಗಳು ಮತ್ತು ರಾಜಕೀಯ" ಎಂಬ ವಿಷಯದ ಮೇಲೆ ಮದ್ರಾಸ್ ಕಾರ್ಪೊರೇಷನ್ ಡೆಪ್ಯುಟಿ ಮೇಯರಾದ ಶ್ರೀ ಟಿ. ಎಸ್. ಭಾಷ್ಯಂರವರು ಶಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ಭಾನುವಾರ ಬೆಳಿಗ್ಗೆ ೧೦ ಗಂಟೆಗೆ ಭಾಷಣ ಮಾಡುತ್ತಾರೆ. ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ. ಸರ್ವರೂ ದಯಮಾಡಿಸಬೇಕಾಗಿ ಸಂಚಾಲಕರು ಕೋರಿದ್ದಾರೆ.

ಮಕ್ಕಳ ಶಾಲೆಗೆ ತೊಂದರೆ

ಕಿಲ್ಲೆಮೊಹಲ್ಲಾ ಭಕ್ಷಿ ಬಸವಪ್ಪಾಜಿ ತೋಟದಲ್ಲಿರುವ ಬಾಯ್ಸ್ ಸ್ಕೂಲ್ ಕಟ್ಟಡದ ಹತ್ತಿರವಿದ್ದ ಖಾಲಿ ನಿವೇಶನದ ದಕ್ಷಿಣ ಭಾಗವನ್ನು ರಾಜಧಾನಿಯ ಟ್ರಸ್ಟ್ ಬೋರ್ಡಿನವರು ಮನೆಗೆ ಕಟ್ಟಡ ಕಟ್ಟಲು ಮಾರಿರುವುದನ್ನು ಪ್ರತಿಭಟಿಸಿ ಸದರಿ ಮೊಹಲ್ಲಾದ ಅನೇಕ ಜನರು ಟ್ರಸ್ಟ್ ಬೋರ್ಡ್ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ಖಾಲಿ ಜಾಗವು ವಿದ್ಯಾರ್ಥಿಗಳ ಆಟ, ಡ್ರಿಲ್ ಮುಂತಾದ ಬಹಿರಂಗ ವ್ಯಾಯಾಮಗಳಿಗೆ ಅನುಕೂಲವಾಗಿತ್ತು. ಟ್ರಸ್ಟ್ ಬೋರ್ಡಿನವರ ಈ ಕಾರ್ಯದಿಂದ ಈ ಸೌಲಭ್ಯಗಳು ತಪ್ಪಿಹೋಗುತ್ತವೆಂದು ಸೂಚಿಸಲಾಗಿದೆ.

ಸೆಂಟ್ ಫಿಲೋಮಿನಾ ಜಾತ್ರೆ

ಸೆಂಟ್ ಫಿಲೋಮಿನಾ ಜಾತ್ರೆಯು ಕಳೆದ ೩ ನೇ ತಾರೀಖಿನಿಂದ ಪ್ರಾರಂಭವಾಗಿ ನೆನ್ನೆ ದಿನ ಮುಕ್ತಾಯವಾಯಿತು. ಪ್ರತಿದಿನವೂ ಬೆಳಿಗ್ಗೆ ಪೂಜಾದಿಕ್ರಮಗಳೂ, ಸಾಯಂಕಾಲ ಫಾದರ್ ರಾಜಮಾಣಿಕ್ಯಂರ ವ್ಯಾಸ ಪ್ರಸಂಗಗಳೂ ನಡೆದುವು. ನೆನ್ನೆ ದಿನ ಮೆರವಣಿಗೆಯು ಏರ್ಪಾಡಾಗಿತ್ತು. ಪೋಲೀಸರ ಉಸ್ತುವಾರಿ ಚೆನ್ನಾಗಿತ್ತು. ಸಿಟಿ ಮುನಿಸಿಪಲ್ ಅಧ್ಯಕ್ಷರಾದ ಶ್ರೀ ಆರ್. ರಾಮಚಂದ್ರರಾವ್ ಬಾಂಬೋರೆಯವರು ಜಾತ್ರೆಗೆ ಬಂದ ಜನಗಳಿಗಾಗಿ ಅಕ್ಕೆಯ ಸರಂಜಾಮನ್ನು ಏರ್ಪಡಿಸಿದ್ದರು.

ಗಾನಕಲಾಮಂದಿರ

ಚಾಮರಾಜರಸ್ತೆಯಲ್ಲಿರುವ ರಾವ್ ಬಹದ್ದೂರ್ ಯಂ. ರಾಮಸ್ವಾಮಿಯವರ ಗೃಹದಲ್ಲಿ 'ಗಾನಕಲಾಮಂದಿರ'ವೆಂಬ ನೂತನ ಸಭೆಯೊಂದು ನೆನ್ನೆ ಸ್ಥಾಪಿತವಾಯಿತು. ಬಾಲಿಕೆಯರಿಗೆ ಸಂಗೀತವನ್ನೂ ಮತ್ತು ಹಿಂದಿ ಭಾಷೆಯನ್ನೂ ಹೇಳಿಕೊಡಲಾಗುತ್ತದೆ. ಸಭೆಗೆ ಶ್ರೀಮತಿ ಲಲಿತಮ್ಮ ರಾಮಸ್ವಾಮಿಯವರು ಅಧ್ಯಕ್ಷರಾಗಿಯೂ ಶ್ರೀಮತಿ ಜಾನಕಮ್ಮ ಕೃಷ್ಣಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಹೊಯ್ಸಳ ಕರ್ಣಾಟಕ ಸಭೆ

ಮೈಸೂರಿನಲ್ಲಿರುವ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲ್ ಹಾಲಿನಲ್ಲಿ ಹೊಯ್ಸಳ ಕರ್ಣಾಟಕ ಮಹಾಜನಗಳ ದ್ವಿತೀಯ ಮಹಾಸಭೆ ತಾ|| ೧೩-೮-೪೪ ನೇ ಭಾನುವಾರ ಸಂಜೆ ೫ ಗಂಟೆಗೆ ನಡೆಯುತ್ತದಾಗಿ ಎಲ್ಲಾ ಹೊಯ್ಸಳ ಕರ್ಣಾಟಕ ಮಹಾಜನರೂ ದಯಮಾಡಿಸಬೇಕಾಗಿ ಅರಿಕೆ ಮಾಡಲಾಗಿದೆ.

ನಿಧನ

ಮೈಸೂರು ಯೂನಿವರ್ಸಿಟಿ ರೆಸ್ಟೋರೆಂಟ್ ಮಾಲೀಕರಾದ ಶ್ರೀ ಎ. ಕೆ. ರಾಮಯ್ಯನವರು ಈ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ನಗರ ಪರಿಶೀಲನೆ

ಮೈಸೂರು ಸಿಟಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ಸದಸ್ಯರು ಕಿಲ್ಲೆಮೊಹಲ್ಲ ಮತ್ತು ಇತರ ಭಾಗಗಳನ್ನು ಪರಿಶೀಲನೆ ಮಾಡಲು ತಾ|| ೧೩-೮-೪೪ ನೇ ಭಾನುವಾರ ಪ್ರಾತಃಕಾಲ ೯ ಘಂಟೆಯಿಂದ ಸಂಚಾರ ಮಾಡುವರು. ಮೊಹಲ್ಲ ನಿವಾಸಿಗಳು ತಮ್ಮ ಕುಂದುಕೊರತೆಗಳನ್ನು ಸದಸ್ಯರ ಗಮನಕ್ಕೆ ತಂದು ಸಹಕರಿಸಬೇಕಾಗಿ ಕೋರಿದೆ.

ಭಜನೆ ಮತ್ತು ನರ್ತನ

ಹಳೇ ಅಗ್ರಹಾರದಲ್ಲಿರುವ ಶ್ರೀನಿವಾಸ ಶ್ರೀ ರಾಘವೇಂದ್ರ ಗಾಂಧರ್ವ ವಿದ್ಯಾ ಶ್ರೀರಾಮ ಮಂದಿರದಲ್ಲಿ ಈ ದಿನ ರಾತ್ರಿ ಹೈದರಾಬಾದ್ ಸಂಸ್ಥಾನದಲ್ಲಿ ಕಾದರುಗುಂಡಿಯಿಂದ ಬಂದಿರುವ ಶ್ರೀಮತಿ ದಾಸಪ್ಪನವರಿಂದ ಭಜನೆ ಮತ್ತು ನರ್ತನ ಸೇವೆ ನಡೆಯುತ್ತದೆ.

ಫುಟ್‌ಬಾಲ್

ಅಖಿಲ ಭಾರತ ಫುಟ್‌ಬಾಲ್ ಪಂದ್ಯಗಳ ಆಶ್ರಯದಲ್ಲಿ ದೊಡ್ಡಕೆರೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೈಸೂರು ಮಾರ್ಸ್ ಕ್ಲಬ್ಬಿನವರು ರೈಲ್ವೆ ಕ್ಲಬ್ಬನ್ನು ೧ ಗೋಲಿನಿಂದಲೂ ಆರ್ಯನ್ಸ್ ಕ್ಲಬ್ಬಿನವರು ಸೋಷಿಯಲ್ಸ್ ಕ್ಲಬ್ಬನ್ನು ೫ ಗೋಲುಗಳಿಂದಲೂ ಸೋಲಿಸಿದರು.

ಜಗಳದಿಂದ ಮರಣ?

ಮೈಸೂರು ಅರಮನೆ ಮೋಟಾರ್ ಕಾರ್ಖಾನೆಯಲ್ಲಿ ಮೊನ್ನೆ ಮಹ್ಮದ್ ಪೀರ್ ಮತ್ತು ನಾಗೇಂದ್ರಚೆಟ್ಟಿ ಎಂಬುವರು ತಮಾಷೆಗಾಗಿ ಜಗಳವಾಡುತ್ತಿದ್ದಾಗ್ಗೆ ಪೀರ್‌ನಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟು ಗುಣವಾಗದೆ ನಿನ್ನೆ ಮೃತನಾದನು.

ದಿವಂಗತ ಕೋನೇರಿರಾಯರು

ಮರಿಮಲ್ಲಪ್ಪನವರ ಹೈಸ್ಕೂಲ್ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಎಲ್. ಕೋನೇರಿರಾಯರು ನಿನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಕುಟುಂಬ ೧೫ ದಿನಗಳ ಹಿಂದೆ ಮೃತರಾದರು.

ಹೆಂಗ್ಯಾಂಗ್ ಜಪಾನರ ವಶ

ಹೂನಾನ್ ಪ್ರಾಂತದ ಮುಖ್ಯ ರೈಲ್ವೆ ಮತ್ತು ರಸ್ತೆ ಜಂಕ್ಷನ್ ಸ್ಥಳವಾದ ಹೆಂಗ್ಯಾಂಗ್ ನಗರವು ಜಪಾನರ ವಶವಾಯಿತು. ಇದಕ್ಕಾಗಿ ಚೀಣೀಯರು ಎಂಟು ವಾರಗಳ ಕಾಲ ಕಾದಾಡಿದ್ದರು.

ಹಿಟ್ಲರನ ಅಂತಿಮ ಯತ್ನ

ಹಿಟ್ಲರನು ಈಗಾಗಲೇ ತನ್ನ ಕಟ್ಟಕಡೆಯ ಪ್ರಯತ್ನವನ್ನು ನಡೆಸುವುದಕ್ಕಾಗಿ ಏರ್ಪಾಡು ಮಾಡಿಕೊಳ್ಳುತ್ತಿದ್ದಾನೆಂದು ಸುದ್ದಿ. ಅದಕ್ಕಾಗಿ ನಾಜಿಸೇನೆಯಲ್ಲಿ ಆರಿಸಿಕೊಂಡವರು ಇದ್ದಾರೆ. ಹಿಟ್ಲರನು ಗಣನೀಯವಾದ ತನ್ನ ವಾಯುಬಲಗಳನ್ನು ಕಾಯ್ದಿರಿಸಿದ್ದಾನೆ. ಆತನು ತೀವ್ರವಾಗಿಯೇ ಹಾರುವ ಕಾದಾಟ ಮಾಡಲು ಶಕ್ತಿಯುಳ್ಳ ವಿಮಾನಗಳನ್ನು ತಯಾರು ಮಾಡಿದ್ದಾನೆ.

ಪಶ್ಚಿಮ ಕ್ಷೇತ್ರದ ಜರ್ಮನ್ ಸೇನೆಗಳೂ ಪೂರ್ವದಲ್ಲಿರುವ ಇತರ ಉಳಿದ ಸೇನೆಗಳೂ ಎಷ್ಟೇ ನಷ್ಟವಾದರೂ ಗಣನೆಗೆ ತಾರದೆ ಧಾಳಿಯನ್ನು ಮಾಡಬೇಕೆಂಬುದಾಗಿ ಆಜ್ಞಾಪಿಸಲಾಗಿದೆ.

ಪ್ಯಾರಿಸ್ಸಿನ ಕಡೆ ನುಗ್ಗುವಿಕೆ

ಪ್ಯಾರಿಸ್-[illegible] ನಗರಗಳ ನಡುವೆ ಮಾರ್ಗದಲ್ಲಿರುವ [illegible] ನಗರವನ್ನು ಕೆನಡಾ ಸೇನೆಯು ಬ್ರಿಟಿಷ್ ಪಡೆಯು ವಶಪಡಿಸಿದೆ. ಇದು ಪ್ಯಾರಿಸ್ಸಿಗೆ ೧೧೦ ಮೈಲಿಯಲ್ಲಿದ್ದು ಎಲ್ಲ ರಣಕ್ಷೇತ್ರಗಳಿಂದಲೂ ಅತ್ಯಂತ ಸಮೀಪ ಸ್ಥಳವಾಗಿದೆ. ಅತ್ತಲಾಗಿ [illegible]ನ್ ಎಂಬುದನ್ನು ಅಮೇರಿಕನ್ ಪಡೆಗಳು ಹಿಡಿದು ಪ್ಯಾರಿಸ್ಸಿನ ಕಡೆ ನುಗ್ಗುತ್ತಿವೆ. ವಿಮಾ ಪಟ್ಟಣವನ್ನು ಉಳಿಸಿಕೊಳ್ಳಲು ಜರ್ಮನರು ಅತ್ಯಂತ ಕಷ್ಟಪಡುತ್ತಿದ್ದಾರೆ.

ಫಿಲಿಪ್ಪೈನ್ಸ್ ಆಕ್ರಮಣವೇ?

ಹೊನಲೂಲುವಿಗೆ ಭೇಟಿ ಕೊಟ್ಟ ಅಧ್ಯಕ್ಷ ರೂಸ್‌ವೆಲ್ಟರು ಜನರಲ್ ಮೆಕಾರ್ಥರ್, ಅಡ್ಮಿರಲ್ ನಿಮಿಟ್ಸ್ ಮುಂತಾದ ಸೇನಾಧಿಕಾರಿಗಳೊಂದಿಗೆ ಚರ್ಚಿಸಿದರೆಂದು ತಿಳಿದುಬಂದಿದೆ. ಜನರಲ್ ಮೆಕಾರ್ಥರರು ಫಿಲಿಪ್ಪೈನ್ಸ್ ದ್ವೀಪಸ್ತೋಮಗಳನ್ನು ಆಕ್ರಮಣ ಮಾಡಲು ಅಧಿಕಾರ ಕೊಡಲ್ಪಟ್ಟರು ಎಂದು ವರ್ತಮಾನ.

ಅಗ್ನಿ ಉತ್ಪಾದಕ ಬಾಂಬು

ಕಳೆದ ಹಲವು ದಿನಗಳಿಂದಲೂ ದಕ್ಷಿಣ ಇಂಗ್ಲೆಂಡಿನ ಮೇಲೆ ಬಿದ್ದ ಹಾರಾಡುವ ಬಾಂಬುಗಳು ಪುಟ್ಟ ಪುಟ್ಟ ಅಗ್ನಿ ಉತ್ಪಾದಕ ಬಾಂಬುಗಳನ್ನು ಸಹ ಹೊತ್ತು ತರುತ್ತಿದ್ದುವೆಂದು ಒಳ ರಕ್ಷಣಾ ಮಂತ್ರಿ ಕಚೇರಿಯು ಪ್ರಕಟಿಸಿ ತಿಳಿಸುತ್ತದೆ. ಪ್ರತಿಯೊಂದು ವಿಮಾನವೂ ಸುಮಾರು ೨೦ ಸಣ್ಣ ಬಾಂಬುಗಳನ್ನು ತಂದಿದ್ದವು.

ಯುದ್ಧ ಖರ್ಚು ೫೭೫ ಕೋಟಿ

ಭಾರತದಲ್ಲಿ ರಕ್ಷಣಾ ಕಾರ್ಯಗಳಿಗಾಗಿ ೧೯೪೩-೪೪ ನೇ ಸಾಲಿಗೆ ೫೭೫ ಕೋಟಿ ರೂಪಾಯಿಗಳ ಖರ್ಚು ಆಗಿದೆಯೆಂದು ಗೊತ್ತಾಗಿದೆ. ಹಿಂದಿನ ಎರಡು ವರ್ಷಗಳಲ್ಲಿ ೨೪೯ ಮತ್ತು ೧೯೮ ಕೋಟಿ ರೂಪಾಯಿಗಳು ವೆಚ್ಚವಾಗಿದ್ದುವು. ೧೯೪೩-೪೪ರಲ್ಲಿ ಆದ ಖರ್ಚಿನಲ್ಲಿ ೨೫೯ ಕೋಟಿ ರೂ.ಗಳು ಭಾರತದ ಖರ್ಚಿಗೆ ಬೀಳುತ್ತದೆ. ಉಳಿದುದನ್ನು ಬ್ರಿಟಿಷ್ ಸರ್ಕಾರವು ಕೊಡಬೇಕಾಗುತ್ತದೆ.

ಭಾರತದ ವಿಭಜನೆ ಬೇಡ

ಹಿಂದೂ ಮಹಾಸಭೆಯ ಅಧ್ಯಕ್ಷ ಡಾಕ್ಟರ್ ವಿ. ಡಿ. ಸಾವರ್ಕರ್‌ರವರು ಬಂಗಾಳ ಪ್ರಾಂತದ ಹಿಂದೂ ಮಹಾಸಭೆಯ ಅಧ್ಯಕ್ಷರಿಗೆ ತಂತಿಯೊಂದನ್ನು ಕಳುಹಿಸಿ ಗಾಂಧಿ-ರಾಜಾಜಿಯವರ ಸಲಹೆಗಳನ್ನು ವಿರೋಧಿಸಿದ್ದಾರೆ. "ನಮ್ಮ ತಂದೆ ತಾತಂದಿರು ಬಂಗಾಳ ವಿಭಜನೆಯ ಯೋಜನೆಯನ್ನು ಮಣ್ಣುಗೂಡಿಸಿದರು. ನಾವು, ಅವರ ಮಕ್ಕಳು, ಭಾರತದ ಭಾವೀ ವಿಭಜನೆಯನ್ನು ಈಗಲೇ ಮುರಿಯೋಣ"ವೆಂದು ತಿಳಿಸಿದರು.

ವೃದ್ಧ ದಂಪತಿಗಳ ಏಕಕಾಲದ ಮರಣ

ಸೇಲಂ ನಗರದ ಕಿತ್ತೂಪೇಟೆಯಲ್ಲಿ ಸ[illegible]ಯ್ಯ ಆಚಾರಿ ಎಂಬುವರು ಕಳೆದ ೫ ನೇ ತಾ|| ನಿಧನರಾದರು. ಅವರು ೮೬ ವರ್ಷದ ವಯೋವೃದ್ಧರು. ಅವರ ಪತ್ನಿಯು ಕೊಂಡಮ್ಮಾಳ್ ಎಂಬುವಳು ತಮ್ಮ ಯಜಮಾನರು ಸತ್ತ ಎರಡು ಗಂಟೆಗಳಲ್ಲಿಯೇ ತಾವೂ ಪ್ರಾಣ ಬಿಟ್ಟಳು. ಆಕೆಗೆ ಎಪ್ಪತ್ತು ವರ್ಷವಾಗಿತ್ತು.

ಅಂಬಲಿಯವರ ದಸ್ತಗಿರಿ

೧೯೪೨ ನೇ ಆಗಸ್ಟ್ ತಿಂಗಳಿನಿಂದ ಪೋಲೀಸರು ಹುಡುಕುತ್ತಿದ್ದ ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಗಳಾದ ಶ್ರೀ ಚನ್ನಬಸಪ್ಪ ಅಂಬಲಿಯವರು ಬಿಜಾಪುರದಲ್ಲಿ ಈಗ ದಸ್ತಗಿರಿಯಾಗಿದ್ದಾರೆ.

ಲಂಡನ್ನಿನಿಂದ ೧೭,೦೦೦ ಹೆಂಗಸರು ಮಕ್ಕಳ ರವಾನೆ

ಹಾರಾಡುವ ಬಾಂಬುಗಳ ಹೊಡೆತಕ್ಕೆ ಸಿಲುಕದ ಕ್ಷೇತ್ರಗಳಿಗೆ ಲಂಡನ್ನಿನಿಂದ ಕಳೆದ ೮ ನೇ ತಾ|| ನ ದಿನ ಪ್ರಾರಂಭದಲ್ಲಿಯೇ ಹದಿನೇಳು ಸಹಸ್ರ ಹೆಂಗಸರು, ಮಕ್ಕಳು ಹೊರಟರು. ಇವರನ್ನು ಸಾಗಿಸುವುದಕ್ಕಾಗಿ ಇಪ್ಪತ್ತೆರಡು ಸ್ಪೆಷಲ್ ರೈಲುಗಳು ಬೇಕಾದವು. ಈ ಬಾಂಬುಗಳ ಹೊಡೆತವು ತಪ್ಪುವವರೆಗೂ ಅವರು ವಾಪಸು ಬರುವುದಿಲ್ಲ.

ಜಪಾನಿನ ಮೇಲೆ ಮತ್ತೆ ಧಾಳಿ

ಜಪಾನಿನ ಕಿಯೂಷ್ಯು ದ್ವೀಪವನ್ನು ಅಮೇರಿಕಾದ ಸೂಪರ್‌ಫೋರ್ಟ್ರೆಸ್ ವಿಮಾನಗಳು ಧಾಳಿಮಾಡಿದವು. ನಾಗಸಾಕಿ ಮುಂತಾದ ಕೈಗಾರಿಕಾ ಪಟ್ಟಣಗಳು ಹೊಡೆತಕ್ಕೆ ಸಿಕ್ಕವು.

ಸಂಸ್ಥಾನದ ಆಯವ್ಯಯ

೧೯೪೪-೪೫ ನೇ ಸಾಲಿನ ಆಯವ್ಯಯ [illegible] ಸಂಬಂಧಿಸಿದ [illegible] ರೂಪಾಯಿಗಳು. ವರಮಾನ [illegible] ಖರ್ಚು [illegible] ಗುತ ದಂಡ ತಿಳಿದುಬಂದಿದೆ.

ಇಂಜನಿಯರುಗಳ ಸಂಘ

ಮೈಸೂರು ೧೨

ಮೈಸೂರು ಸಂಸ್ಥಾನದ [illegible] ನಗರ ಶಿಲ್ಪ ಕಲೆಗಳಲ್ಲಿ ಉತ್ಕೃಷ್ಟವಾ [illegible] ಮಹಾರಾಜ ಕಾಲೇಜ್, ಸೈನ್ಸ್ ಆಫೀಸ್ [illegible] ಭವನಗಳನ್ನೂ, ಮತ್ತು ದಿನೇದಿನೇ ಬೆಳೆಯುತ್ತಿರುವ ಒಂದು [illegible] [illegible] ಮುಂತಾದ ಕಾರ್ಯಗಳನ್ನು ನಡೆಸುವ [illegible]. ಇಂಥ ಸ್ಥಳ [illegible] ಇಂಜನಿಯರುಗಳ ಸಂಘವು [illegible] ಕೆಲಸಗಳು [illegible] ಮೈಸೂರು ಇಂಜನಿಯರುಗಳ [illegible] ಶಕ್ತಿಗಳನ್ನು ತೋರಿಸ [illegible] ಇಂಜನಿ [illegible] [illegible] ಮೈಸೂರು [illegible] ವಿಚಾರದಲ್ಲಿ [illegible] ಬಗ್ಗೆ ಎಲ್ಲಾ [illegible] ನಾವೂ ನಮ್ಮ [illegible] ಅಭಿವೃದ್ಧಿಗೆ ನಮ್ಮ ಕರ್ತವ್ಯವ [illegible] ನಮ್ಮ ಶ್ರೀಮನ್ಮಹಾರಾಜ [illegible] ಎಂಬುದಾಗಿ [illegible] ಚೀಫ್ ಇಂಜನೀಯರ್, ಶ್ರೀಮಾನ್ ಎಂ. [illegible] ನಿನ್ನೆ ಮೈಸೂರಿ ನಲ್ಲಿ ನಡೆದ ಇಂಜನಿಯರುಗಳ ಸಂಘದ ಮೈಸೂರು [illegible] ವಾರ್ಷಿಕೋತ್ಸವದ ನಡವಳಿಕೆ [illegible]. ಈ ಸಮಾರಂಭಕ್ಕೆ [illegible] ಇಂಜನಿಯರುಗಳು [illegible] ಮೈಸೂರು [illegible] ಇಂಜನಿಯರ್ ಶ್ರೀಮಾನ್ ಎಂ. ವಿ. ಕೃಷ್ಣಸ್ವಾಮಿ [illegible] ಮೈಸೂರು ನಗರದಲ್ಲಿ ಈ [illegible] ಸ್ವಾಗತ [illegible] ಭಾಷಣ ಮಾಡಿದರು. [illegible] ಭವನದಲ್ಲಿ ಈ ಸಮಾರಂಭ ನಡೆಯಿತು.

ಅಧ್ಯಕ್ಷ [illegible] ಶ್ರೀ ಪಿ. ಹೆಚ್. ಕೃಷ್ಣರಾಯರು [illegible] ಮೈಸೂರು [illegible] ವಿಚಾರದಲ್ಲಿ ಇಂಜನಿಯ[illegible] [illegible] ಆರ್ಮಿ ನಾಲ್ಕು ವಿ|| ಇಂಜನಿಯರ್ ಶ್ರೀ ಎಂ. ಎಲ್. ಲಕ್ಷ್ಮಣರಾಯರು "ಸಂಯುಕ್ತ ಪ್ರಾಂತ್ಯ ಮತ್ತು ಪಂಜಾಬಿನ ನೀರಾವರಿ ಕೆಲಸಗಳ ವಿಚಾರದಲ್ಲಿ ನನ್ನ ಅಭಿಪ್ರಾಯ" ಎಂಬ ವಿಷಯವಾಗಿಯೂ, ಶ್ರೀ ಎಲ್. ಜೇ. [illegible] "[illegible]" ಎಂಬ ವಿಚಾರದಲ್ಲೂ ಭಾಷಣಮಾಡಿದರು.

ಸಂಘದ ಗೀತೆ, ವಂದನಾರ್ಪಣೆಗಳೊಡನೆ ಸಭಾ ಕಾರ್ಯ ಮುಕ್ತಾಯವಾಯಿತು

ಪಿ. ಹೆಚ್. ಕೃಷ್ಣರಾಯರ ಭಾಷಣ

ಶ್ರೀಮಾನ್ ಪಿ. ಹೆಚ್. ಕೃಷ್ಣರಾಯರು ಭಾಷಣ ಮಾಡುತ್ತ ಈ ರೀತಿ ತಿಳಿಸಿದರು:—ಕೃಷಿಯೊಬ್ಬನಿಗೂ ತಕ್ಕಷ್ಟು ಆಸ್ತಿ ಬಿಟ್ಟು ಬೇಕು. ಜೀವನದ ಮಟ್ಟ ಏರಬೇಕು. ಇದೇ ಇಂದಿನ ಮುಖ್ಯ ಸಮಸ್ಯೆ. ಇವತ್ತು ಈಗ ನಿರುದ್ಯೋಗ, ಅಲ್ಪೋದ್ಯೋಗ ಮುಂತಾದವುಗಳೇ ಮೂಲ ಕಾರಣ. ಈ ಸಮಸ್ಯೆ ಪರಿಹಾರ ಮತ್ತು ನಮ್ಮ ದೇಶದ ಆರ್ಥಿಕಾಭಿವೃದ್ಧಿಯಾಗಬೇಕಾದರೆ ಉದ್ಯೋಗಗಳು ಹೆಚ್ಚಬೇಕು. ಈಗ ನಮ್ಮಲ್ಲಿ ಇರುವ ಸಂಪತ್ತಿನ ಪ್ರಯೋಜನ ಪಡೆಯುತ್ತಿರುವುದು ಬಹು ಕಡಿಮೆ. ಇದನ್ನು ಸಂಪೂರ್ಣವಾಗಿ ಹೆಚ್ಚಿಸಬೇಕು. [illegible] ಮೂಲಕ ವಿದ್ಯುಚ್ಛಕ್ತಿ [illegible] ಬಹು ಬಳಕೆ ಬೇಕಾಗಿದೆ. ಆದರೆ ಅವಕ್ಕೆ ತಕ್ಕಂತೆ ಕೈಗಾರಿಕೆ ಯಂತ್ರಾದಿಗಳ ಸೌಕರ್ಯ ಏನೂ ಇಲ್ಲ. 'ನಾವೇ ಯಂತ್ರ ರಚನೆ ಮಾಡಿಕೊಳ್ಳುವ ವ್ಯವಸ್ಥೆ ಮಾಡಬೇಕು, ಎಂದರು

ಕೆರೆಗಳ, ಮತ್ತು ನೀರಾವರಿ ಸೌಕರ್ಯದ ಬಗ್ಗೆ ಬೇಕಾದಷ್ಟು ಕೆಲಸ ಮಾಡತಕ್ಕದ್ದಿದೆ [illegible] ಏರ್‌ಕ್ರಾಫ್ಟ್ ನಂತಹ [illegible] ಕಂಪೆನಿಗಳನ್ನು ನಾವೂ ಸ್ಥಾಪಿಸಬೇಕು. ನಮ್ಮ ಸಂಸ್ಥಾನದ ಆವಶ್ಯಕತೆಗೆ ತಕ್ಕಂತೆ ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ಇಂಜನಿಯರಿಂಗ್ ಕಾಲೇಜುಗಳು ಸ್ಥಾಪನೆಯಾಗಬೇಕು. ಯಾವ ನಿರ್ಬಂಧವೂ ಇಲ್ಲದೆ ಬೇಕಾದವರಿಗೆಲ್ಲಾ ಶಿಕ್ಷಣ ದೊರೆಯುವಂತಾಗಬೇಕು. ಮೈಸೂರಿನ ವಿದ್ಯಾರ್ಥಿಗಳೆಲ್ಲಾ ಹೆಚ್ಚು ಸಂಪಾದನೆಗಾಗಿ ಹೊರಗೆ ಹೋಗುತ್ತಿದ್ದಾರೆ. ಇದ [illegible] ಉಳಿಸಿಕೊಳ್ಳಬೇಕು—ಎಂಬುದಾಗಿ ತಿಳಿಸಿದರು

ಕೈಲ್ತಿ ಹಿಡಿದ ಮಾತನಾಡುತ್ತಾ [illegible]—ಸತ್ಯ ಮಂಗಳದ ರೈಲ್ವೆ ಮಾರ್ಗ ರಚನೆಯ ಬಗ್ಗೆ ಇಂಜನಿಯರುಗಳೆಲ್ಲಾ [illegible] ಕೆಲಸ ಮಾಡಬೇಕಾಗಿದೆ.

ವೈಶ್ಯಪತ್ರಿಕೆ ವಾರ್ಷಿಕೋತ್ಸವ

ಮೈಸೂರು ೧೨

ಮೈಸೂರು ಸಂಸ್ಥಾನದಲ್ಲಿ ಆಂಧ್ರ ಭಾಷೆಯಾಡುವ ಜನರು ೧೨ ಲಕ್ಷ ಇದ್ದಾರೆ. ಆದರೆ ಅವರಿಗೆ ಆಂಧ್ರ ಭಾಷಾಭ್ಯಾಸಕ್ಕೆ ಸ್ಕೂಲು ಕಾಲೇಜುಗಳಲ್ಲಿ ತಕ್ಕಷ್ಟು ಸೌಕರ್ಯವಿಲ್ಲ. ಇಷ್ಟು ಜನರಿಗೆ ಒಂದು ದೈನಿಕ ಪತ್ರಿಕೆಯಿಲ್ಲ. ಮೈಸೂರು ವೈಶ್ಯಪತ್ರಿಕೆಯು ಈ ವಿಚಾರದಲ್ಲಿ ಅದಷ್ಟು ಸೇವೆ ಸಲ್ಲಿಸುತ್ತಿದೆ. ವೈಶ್ಯಪತ್ರಿಕೆಯೆಂದರೆ ವೈಶ್ಯರಿಗೆ ಮಾತ್ರವೇ ಅಲ್ಲ. ವೈಶ್ಯರ ಅಂಗಡಿಯಲ್ಲಿ ವೈಶ್ಯರು ಮಾತ್ರವೇ ಸಾಮಾನು ಕೊಳ್ಳುವುದಿಲ್ಲ. ಅದರಂತೆ ವೈಶ್ಯಪತ್ರಿಕೆಯೆಂದರೆ ಸಮಸ್ತರಿಗೂ ಸಂಬಂಧಪಟ್ಟ ವಿಷಯಗಳಿರುತ್ತವೆ. ಎಲ್ಲರೂ ಇದ ಪ್ರೋತ್ಸಾಹಿಸಿ ಪ್ರಯೋಜನಪಡೆಯಬೇಕು—ಎಂದು ಮದ್ರಾಸಿನ ಡಾ|| ಮೇಯರ್ ಶ್ರೀಮಾನ್ ಪಿ. ಎಸ್. ಭಾಷ್ಯಂ[illegible] ನಿನ್ನೆ ದಿವಸ ಮೈ

ಮೈಸೂರು, ಬೆಂಗಳೂರಿಗೆ ವಿದ್ಯುಚ್ಛಕ್ತಿ [illegible] ಮತ್ತು ಅತಿ ಕಡಿಮೆ ವೆಚ್ಚದಲ್ಲಿ ರಸ್ತೆ, ವಾಸದ ಮನೆ, ಸ್ಕೂಲು ಮುಂತಾದವುಗಳನ್ನು ಉತ್ತಮ ರೀತಿಯಲ್ಲಿ, ಕಾಲಕ್ಕೆ ತಕ್ಕ ಮಾದರಿಯಲ್ಲಿ ಕಟ್ಟುವ ಮಾರ್ಗಗಳನ್ನು [illegible] ಕಂಡುಹಿಡಿದು ಅಪಾರ ಸೇವೆ ಸಲ್ಲಿಸಬೇಕಾದುದಿದೆ. ಸರ್ ಎಂ ವಿಶ್ವೇಶ್ವರಯ್ಯನವರಂತಹ ಮಹಾ ಮೇಧಾವಿಗಳ ಮೇಲ್ಪಂಕ್ತಿಯನ್ನು ನಾವೂ ಅನುಸರಿಸಬೇಕಾಗಿದೆ—ಎಂದು ಆಕ್ಷುಕರಯುಕ್ತ ಭಾಷಣಮಾಡಿದರು

ಸೂರು ವೈಶ್ಯಪತ್ರಿಕೆಯ ಚತುರ್ಥ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿದರು.

ಪ್ರಾರ್ಥನೆಯಾದ ನಂತರ ಶ್ರೀ ರಾಮಚಂದ್ರಜೀಯವರಿಂದ "ಪತ್ರಿಕಾ ಪದ್ಮಮಾಲಿಕಾ" ಪಠಣ, ಶ್ರೀಗಳಾದ ಚಿನ್ನಸ್ವಾಮಿ ಪಾರ್ಟಿಯವರ ಸಂಗೀತ ನಡೆಯಿತು. ವೈಶ್ಯಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಪಿ ಗೋಪಾಲಕೃಷ್ಣಶೆಟ್ಟರು ಸ್ವಾಗತಭಾಷಣಮಾಡಿದರು. ದರ್ಶಿ ವೈಶ್ಯಪತ್ರಿಕೆಯ ಸಂಪಾದಕರಾದ ಶ್ರೀಮಾನ್ [illegible] ಜಿ. ಸುಬ್ಬರಾಯಗುಪ್ತರು ಆಂಧ್ರ ಪತ್ರಿಕೆಗಳ ವಿಚಾರವಾಗಿ ಭಾಷಣಮಾಡಿದರು.

ಅಧ್ಯಕ್ಷರು ತಮ್ಮ ಭಾಷಣವನ್ನು ಮುಂದುವರಿಸುತ್ತಾ—ಮಹಾತ್ಮಾ ಗಾಂಧಿಯವರಿಗಿಂತ ಆದರ್ಶ ನಾಯಕರಿಲ್ಲ. ಸರ್ವರೂ ಶಿಸ್ತಿನಿಂದ ನಾಯಕರ ಮಾತಿಗೆ ಪ್ರತಿಕೇಳದೆ ನಡೆದುಕೊಂಡು ನಮ್ಮ ಧ್ಯೇಯವಾದ ಸೇವೆ ಸಲ್ಲಿಸಿ ಜನ್ಮ ಸಾರ್ಥಕಪಡಿಸಿಕೊಳ್ಳಬೇಕು. ಸರ್ವರೂ ಸ್ವದೇಶಿ ಸಾಮಾನುಗಳನ್ನೇ ಉಪಯೋಗಿಸಬೇಕು. ಖಾದಿ ಧರಿಸಬೇಕು, ಎಂಬುದಾಗಿ ಹೇಳಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

—— ——

ಗುಜರಾತ್ ಪ್ರಾಂತ್ಯದ ನವಸಾರಿಯಲ್ಲಿದ್ದ ಬೊಹ್ರಾಗುಂಪಿಗೆ ಸೇರಿದ ಇಬ್ರಾಹಿಂ ಯೂಸುಫ್ ಎಂಬುವರು ತಮ್ಮ ೧೨೧ ನೇ ವಯಸ್ಸಿನಲ್ಲಿ ಈಗ ಕಾಲವಾಗಿರುವರು. ಇವರ ಹಿರಿ ಮಗನಿಗೆ ೭೨ ವರ್ಷವಾಗಿದೆ.

ಮೈಸೂರು ಸಿಟಿ ಮುನ್ಸಿಪಾಲಿಟಿ

ಪ್ರಕಟಣೆ

ಡಿಫ್ತೀರಿಯಾ ಅನ್ನುವ ಗಂಟಲು ರೋಗ

ರಾಜಧಾನಿಯ ಕೆಲವು ಪ್ರದೇಶಗಳಲ್ಲಿ ಡಿಫ್ತೀರಿಯಾ ಅನ್ನುವ ಗಂಟಲು ರೋಗವು ಈಗ ಎರಡು ತಿಂಗಳುಗಳಿಂದ ಕಾಣಿಸಿಕೊಂಡಿರುತ್ತದೆ. ಈ ರೋಗವು ಕೇವಲ ಸಣ್ಣ ಮಕ್ಕಳಿಗೆ ಬಹು ಜಾಗ್ರತೆಯಾಗಿ ತಗಲುತ್ತದೆ. ಪ್ರಾರಂಭದಲ್ಲಿ ಗಂಟಲಿನಲ್ಲಿ ನೋವು ಉಂಟಾಗಿ ಸಣ್ಣದಾಗಿ ಜ್ವರ ಬರುವುದು ಮತ್ತು ಗಂಟಲಿನಲ್ಲಿ ಬಿಳಿ ಪೊರೆ ಕಾಣಿಸಿಕೊಳ್ಳುವುದು ತಕ್ಷಣ ಸರಿಯಾದ ಚಿಕಿತ್ಸೆ ಮಾಡದಿದ್ದಲ್ಲಿ ಪ್ರಾಣಾಪಾಯಕ್ಕೆ ಕಾರಣವಾಗುತ್ತದೆ. ಇದುವರೆಗೂ ಈ ರೋಗದಿಂದ ಎಲ್ಲಾ ಮೊಹಲ್ಲಾಗಳಲ್ಲೂ ಕಳೆದ ಮೇ ತಿಂಗಳಿನಲ್ಲಿ [illegible] ಕೇಸು, ಜೂನ್ ತಿಂಗಳಿನಲ್ಲಿ [illegible] ಕೇಸು, ಜುಲೈ ಮಾಹೆ ಕಡೆಯವರೆಗೆ [illegible] ಕೇಸು, ಒಟ್ಟು [illegible] ಕೇಸುಗಳು, ವರದಿಯಾಗಿರುತ್ತದೆ. [illegible] ಮಾತ್ರ

ರಾಜಧಾನಿಯ ಪೌರಸಭೆಯ ಆರೋಗ್ಯ ಶಾಖೆಯವರು ಈ ರೋಗವನ್ನು ತಡೆಗಟ್ಟುವ ವಿಷಯದಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ. ಇದಕ್ಕಾಗಿ 304 ಲಕ್ಷ ಯೂನಿಟ್ಟುಗಳಷ್ಟು ಡಿಫ್ತೀರಿಯಾ [illegible] ಔಷಧಿಯನ್ನು ತರಿಸಿಕೊಟ್ಟಿರುತ್ತಾರೆ. ಬಡವರಿಗೆ ಈ ಔಷಧಿಯನ್ನು ಉಚಿತವಾಗಿ ಕೊಡಲಾಗುವುದು. ಅನುಕೂಲಸ್ಥರಿಗೆ [illegible] ಮಕ್ಕಳಿಗೆ [illegible] ಬೆಲೆ ಅಂದರೆ 10,000 ಯೂನಿಟ್ಟಿನ ಔಷಧಿಗೆ ರೂ. 1-2-0 ಯಂತೆ ಕೊಡಲಾಗುತ್ತದೆ. ರೋಗಿಯ ಸಮೀಪದಲ್ಲಿರುವ ಮಕ್ಕಳ ರಕ್ಷಣೆಗೆ ಇನಾಕ್ಯುಲೇಷನ್ ಮಾಡುವುದಕ್ಕೆ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ

ಅಲ್ಲದೆ ಇತರ ಮನೆಯಲ್ಲಿರುವ ಆರೋಗ್ಯವಾದ ಮಕ್ಕಳಿಗೂ ಇನಾಕ್ಯುಲೇಷನ್ ಮಾಡಿಸಲು ಡಿಫ್ತೀರಿಯಾ ಟಾಕ್ಸಾಯಿಡ್ ಎಂಬ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ

ಈಗಾಗಲೇ 71 ಲಕ್ಷದ ಯೂನಿಟ್‌ಗಳಷ್ಟು ಔಷಧಿಯನ್ನು ಜನರ ಉಪಯೋಗಕ್ಕಾಗಿ ಹಂಚಲಾಗಿದೆ. 140 ಮಕ್ಕಳಿಗೆ ಇದುವರೆಗೂ ಇನಾಕ್ಯುಲೇಷನ್ ಮಾಡಿಸಲಾಗಿದೆ. ರೋಗಿಗಳ ಮನೆಗಳನ್ನೆಲ್ಲಾ [illegible] ಮಾಡಿಸಲಾಗಿದೆ. ನಗರದ ಡಾಕ್ಟರುಗಳೆಲ್ಲರಿಗೂ ಈ ವಿಷಯದಲ್ಲಿ ಸಹಕರಿಸಬೇಕಾಗಿ ಕೋರಲಾಗಿದೆ

ಪುರಜನರೆಲ್ಲಾ ಈ ರೋಗವು ಕಾಣಿಸಿಕೊಂಡ ಒಡನೆಯೇ ಸಮಾಚಾರವನ್ನು ಆರೋಗ್ಯಾಧಿಕಾರಿಗಳಿಗೆ ತಿಳಿಸಿ, ಮುಂದೆ ಚಿಕಿತ್ಸೆ ಮತ್ತು ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿದೆ

ಮೈಸೂರು. (ಸಹಿ) ಆರ್. ರಾಮಚಂದ್ರರಾವ್ ಭಾಂಬೋರೆ

26-7-44 ಪ್ರೆಸಿಡೆಂಟ್, ಮೈಸೂರು ಸಿಟಿ ಮುನ್ಸಿಪಾಲಿಟಿ.

ಗೋಪಾಲಸ್ವಾಮಿ ಪ್ರಯುಕ್ತ

ರಣಜಿತ್ ಟಾಕೀಸ್

ಪ್ರತಿ ದಿನ ೩ ಆಟಗಳು

11 8 44 ರಿಂದ

ಪ್ರಭಾತ್ ★

★ [illegible] ಪ್ರಕೃತಿ

★ [illegible]

ಮುಂಗಡವಾಗಿ [illegible]

MEDICINES

Take your requirements from

RAGHULAL & CO.,

1743, Sayaji Rao Road.

(Upstairs, Mysore Hall) MYSORE.

ಔಷಧಗಳು

ನಮಗೆ ಬೇಕಾಗುವುದನ್ನೆಲ್ಲಾ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ.,

1743, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು.

Edited, printed and published by A R Nagarajan, at the Sadhvi Press D Subbaiah Road, Mysore

ಸಂಪುಟ ೩]   ಭಾನುವಾರ ೧೩--೮--೪೪   [ಸಂಚಿಕೆ ೧೮

ಪೂರ್ವ ಪ್ರಷ್ಯ ಉಳಿಸಲು ಜರ್ಮನರ ಪ್ರಯತ್ನ

ಗಾಂಧೀಜಿಯವರ ಜೀವಮಾನದಲ್ಲಿ ಸ್ವಾತಂತ್ರ್ಯವಿಲ್ಲವೆ?

೧೬ ನೇ ತಾ॥ ಬುಧವಾರ ಗಾಂಧೀ-ಜಿನ್ನಾ ಭೇಟಿ

ಖಾಸಗಿ ಅಧ್ಯಕ್ಷರು ಇಲ್ಲದಿರುವುದು ಕೊರತೆ

ಮೈಸೂರು ೧೩.

ಮದರಾಸು ಡೆಪ್ಯುಟಿ ಮೇಯರಾದ ಶ್ರೀಮಾನ್ ಭಾಷ್ಯಂರವರನ್ನು ನಿನ್ನೆ ಸಂಜೆ ಮೈಸೂರು ಪೌರಸಭಾ ಕಾಂಗ್ರೆಸ್ ಪಾರ್ಟಿಯವರು ಆಹ್ವಾನಿಸಿ ಪಾರ್ಟಿ ಕಚೇರಿಯಲ್ಲಿ ಸತ್ಕರಿಸಿದರು. ಶ್ರೀಮಾನ್ ಪಿ ಸೀತಾರಾಮಯ್ಯನವರು ಸ್ವಾಗತ ಭಾಷಣಮಾಡಿ ಮೈಸೂರು ಪೌರಸಭೆಯ ಕಾರ್ಯಕಲಾಪಗಳನ್ನೆಲ್ಲಾ ವಿವರಿಸಿದರು. ಖಾಸಗಿ ಅಧ್ಯಕ್ಷರನ್ನು ಸರ್ಕಾರದವರು ಕೊಡದಿರುವ ವಿಚಾರ ತಿಳಿಸಿದರು. ಪೌರಸಭೆಗೂ ಸದಸ್ಯರಿಗೂ ಮತ್ತು ಅಧಿಕಾರಿಗಳಿಗೂ, ಇರಬೇಕಾದ ಸಂಬಂಧ, ಅಧಿಕಾರ ಕಾರ್ಯಕ್ರಮಗಳ ವಿಚಾರದಲ್ಲಿ ಮದ್ರಾಸಿನ ಅನುಭವಗಳನ್ನು ತಿಳಿಸಬೇಕೆಂದು ಶ್ರೀ ಭಾಷ್ಯಂರವರನ್ನು ಪ್ರಾರ್ಥಿಸಿಕೊಂಡರು.

ಶ್ರೀ ಭಾಷ್ಯಂರವರು ಈ ವಿಚಾರವಾಗಿ ೧॥ ಗಂಟೆಕಾಲ ಸಮಸ್ತ ಶಂಕೆಗಳಿಗೊಡನೆ ಭಾಷಣಮಾಡಿದರು. ಖಾಸಗಿ ಅಧ್ಯಕ್ಷರ ಬಗ್ಗೆ ಚಳುವಳಿ ನಡೆಸುತ್ತಿರಬೇಕು. ಎಂದಾದರೊಂದುದಿನ ದೊರೆತೇ ದೊರೆಯುತ್ತೆ, ಎಂದರು. ಮೈಸೂರು ಎಷ್ಟೋ ಹೆಸರುಪಡೆದಿದೆ ಆದರೆ ಇಲ್ಲಿನ ಪೌರಸಭೆಗೆ ಖಾಸಗಿ ಅಧ್ಯಕ್ಷರಿಲ್ಲದಿರುವುದು ಭೂಷಣವಲ್ಲ. ನಮ್ಮ ಅಂಗಡಿಯಲ್ಲಿ ಎಲ್ಲವೂ ಇದೆ ಆದರೆ ನಮ್ಮ ಆಳಿಯಂದಿರ ಹೊಟ್ಟೆಯಲ್ಲಿ ಕಸಿಯಿದೆ ಎಂಬ ಗಾದೆಯಂತಿದೆ ಇದು, ಎಂದರು. ಮದರಾಸ್ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ವಿವರಿಸಿದರು.

ವಂದನಾರ್ಪಣೆ, ವಂದೇ ಮಾತರಂನೊಡನೆ ಈ ಕೂಟ ಮುಕ್ತಾಯವಾಯಿತು.

ಸೂರ್ಯ ನಮಸ್ಕಾರ ಶಿಕ್ಷಣ

ಮೈಸೂರು ಶಾರದಾವಿಲಾಸ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಲ್ಲಿ ಶಾಸ್ತ್ರೋಕ್ತವಾಗಿ ಸೂರ್ಯನಮಸ್ಕಾರ ಶಿಕ್ಷಣಕೊಡಲು ಧಿ॥ ದೇವರಾವ್ ಶಿವರಾಂರವರು ನ್ಯಾಷನಲ್ ಫಿಸಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟಿನಿಂದ ಶ್ರೀ ಕೆ ಶ್ರೀಕಂಠಯ್ಯ ಎಂಬುವರನ್ನು ಕಳುಹಿಸಿಕೊಟ್ಟಿರುತ್ತಾರೆ. ಈಗಾಗಲೇ ನೂರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಜರ್ಮನ್ ಬಂದೀಖಾನೆಯಲ್ಲೀ ರುದ್ರಭೂಮಿ

ರಷ್ಯದ ರೆಡ್‌ಸ್ಟಾರ್ ಪತ್ರಿಕೆಯು ಜರ್ಮನರಿಂದ ಕಿತ್ತುಕೊಂಡ ಲುಬ್ಲಿನ್ ಎಂಬ ಪಟ್ಟಣದಲ್ಲಿ ಜರ್ಮನರು ಕಟ್ಟಿಸಿದ್ದ ಒಂದು ದೊಡ್ಡ ಸ್ಮಶಾನ ಭೂಮಿಯಲ್ಲಿ ನಡೆಯುತ್ತಿದ್ದ ವಿಷಯಗಳನ್ನು ತಿಳಿಸುತ್ತದೆ ದಿನವೂ ಹದಿನಾಲ್ಕು ಸಹಸ್ರ ಶವಗಳನ್ನು ಅಗ್ನಿಗೆ ಆಹುತಿಮಾಡಲಿಸುವಾದ ಸ್ಮಶಾನ ಕ್ಷೇತ್ರವೊಂದನ್ನು ನಿರ್ಮಿಸಿ, ಅದರಲ್ಲಿ ಅನೇಕ ಹೆಣಗಳ ಅಗ್ನಿಸಂಸ್ಕಾರವನ್ನು ಜರ್ಮನರು ಮಾಡಿದ್ದರು. ಸಮೀಪದಲ್ಲಿದ್ದ ಟಕ್ಕ "ಮರಣಗೋಣಿ" ಯೊಳಕ್ಕೆ ಸಾವಿರಾರು ೩೫೦ ಜನಗಳನ್ನು ನುಗ್ಗಿಸಿ ಅವರ ಮೇಲೆ ವಿಷವಾಯುವನ್ನು ಬಿಟ್ಟು ಅವರು ಸತ್ತಮೇಲೆ ನಂತರ ಶವ ಸಂಸ್ಕಾರ ಈ ರುದ್ರಭೂಮಿಯಲ್ಲಿ ನೆರವೇರುತ್ತಿತ್ತು. ಸ್ವಲ್ಪ ದಿನಗಳ ಹಿಂದೆಯೇ ಶವಗಳ ಬೂದಿ ಸಾಕಿತ್ತೆಂದು ಅಗ್ಗ ತಿಳಿಸುತ್ತದೆ

ಗಾಂಧೀಜಿ ಜೀವಮಾನದಲ್ಲಿ ಸ್ವಾತಂತ್ರ್ಯವಿಲ್ಲವೇ?

ತಮ್ಮ ಜೀವಮಾನದಲ್ಲಿಯೇ ಭಾರತವು ಸ್ವಾತಂತ್ರ್ಯವನ್ನು ಕಾಣುವುದಿಲ್ಲವೆಂಬುದಾಗಿ ಇಟ್ಟುಕೊಳ್ಳಬಹುದೆಂದು ಮಹಾತ್ಮಾ ಗಾಂಧಿಯವರು ತಮ್ಮನ್ನು ಕಾಣಲು ಬಂದ ಬಂಗಾಳಾ ಕಾಂಗ್ರೆಸ್ ಕ್ರಮ ಸಮಿತಿಗೆ ತಿಳಿಸಿದುದಾಗಿ ಗೊತ್ತಾಗಿದೆ. ಗಾಂಧಿ ಮತ್ತು ಜಿನ್ನಾರವರಿಗೆ ಒಪ್ಪಂದವಾದರೆ ಆಗ ಭಾರತ ಸ್ವಾತಂತ್ರ್ಯಕ್ಕಿರುವ ಒಂದು ದೊಡ್ಡ ಅಡಚಣೆ ತಪ್ಪಿದಂತಾಗುತ್ತದೆ. ಆದಾದ ನಂತರ ಸರಕಾರವು ಮತ್ತೆ ಎಡರುಗಳನ್ನು ತಂದೊಡ್ಡಿದರೆ ಅವುಗಳನ್ನು ಜನರೇ ಬಗೆಹರಿಸಿಕೊಳ್ಳಬೇಕೆಂದು ಗಾಂಧಿಯವರು ತಿಳಿಸಿದ್ದಾರೆಂದು ವರದಿಯಾಗಿದೆ

ಪ್ಯಾರಿಸ್ ರಕ್ಷಣೆಗಾಗಿ ಹೊಸ ಪಂಕ್ತಿ

ಪ್ಯಾರಿಸ್ ನಗರದ ಎಡರು ಭಾಗದಲ್ಲಿ ಹರಿಯುತ್ತಿರುವ ಸೀನ್ ನದಿಯ ಪಶ್ಚಿಮ ಪಾರ್ಶ್ವದಲ್ಲಿ ಹೊಸ ರಕ್ಷಣಾ ಪಂಕ್ತಿಯೊಂದನ್ನು ನಿರ್ಮಿಸಲು ಜರ್ಮನರು ಪ್ರಯತ್ನಿಸುತ್ತಿರಬಹುದೆಂಬುದನ್ನು ಜರ್ಮನರ ಭಾರಿ ರೈಲ್ ಓಡಾಟಗಳಿಂದ ಊಹಿಸಬಹುದಾಗಿದೆ.

ವಿರೆ-ಮಾರ್ಟೇನ್ ಎಂಬ ನದಿಗಳ ನಡುವೆ ಇಕ್ಕಟ್ಟಿನಲ್ಲಿ ಸಿಕ್ಕಿರುವ ಜರ್ಮನರ ಸೇನೆಯು ಅತ್ಯುಗ್ರವಾಗಿ ಕಾಳಗ ನಡೆಸುತ್ತಿರುವುದನ್ನು ನೋಡಿದರೆ ಪ್ಯಾರಿಸ್ಸಿಗೆ ಪಶ್ಚಿಮದಲ್ಲಿ ರಕ್ಷಣಾ ಸಾಲು ಕಟ್ಟಲಾಗುತ್ತಿದೆಯೆಂಬ ಅಂಶವನ್ನು ಮತ್ತಷ್ಟು ದೃಢಪಡಿಸುತ್ತದೆ. ಮಿತ್ರ ಪಡೆಗಳ ಮಧ್ಯಭಾಗದಲ್ಲಿ ತೀವ್ರ ದಾಳಿ ಮಾಡಬೇಕೆಂದು ಆ ಜರ್ಮನ್ ಸೇನೆಗಳಿಗೆ ಆಜ್ಞೆ ಕೊಡಲಾಗಿದೆಯೆಂದು ಕಾಣುತ್ತದೆ.

ಲಿವಾಲ್ ಪಟ್ಟಣವನ್ನು ಜರ್ಮನರು ಮತ್ತೆ ಕಿತ್ತುಕೊಂಡರೆಂದು ಪ್ಯಾರಿಸ್ ರೇಡಿಯೊ ವರ್ತಮಾನ. ಅಮೆರಿಕಾ ಸಂಗ್ರಾಮ ನೌಕೆಗಳು ಲೋರಿಯನ್, ಸೇಂಟ್‌ನೆಜೇರ್ ರೇವುಗಳ ಕಡೆ ಹೋಗುತ್ತಿವೆ.

ಜರ್ಮನರು ಹಿಮ್ಮೆಟ್ಟಿದರು

ಇಟಲಿಯ ಕಡೆ ಫ್ಲಾರೆನ್ಸ್ ನಗರವನ್ನು ಬಿಟ್ಟೋಡಿದ ಜರ್ಮನರು ಈಗ ಅರ್ನೊ ನದಿಯಿಂದಲೂ ಹಿಂದಕ್ಕೆ ಹೋದರೆಂದು ತಿಳಿಯಬರುತ್ತದೆ

ಬುಧವಾರ ಗಾಂಧೀ ಜಿನ್ನಾ ಭೇಟಿ

ಬೊಂಬಾಯಿ. ನಗರದಲ್ಲಿ ೧೬ನೇ ತಾರೀಖು ಬುಧವಾರದ ದಿನ ಗಾಂಧೀಜಿ ಮತ್ತು ಜಿನ್ನಾರವರ ಭೇಟಿ ನಡೆಯಲಿದೆ.

ಕರ್ಣಾಟಕದ ದಸ್ತಗಿರಿಗಳು

ಬೆಳಗಾಂವಿನಲ್ಲಿ ಅಥಣಿ ವಕೀಲರಾದ ಶ್ರೀ ಎ.ಯಸ್. ಕುಲಕರ್ಣಿ, ಅಕ್ಕೋಳದ ಶ್ರೀ ಗೋವಿಂದರಾವ್ ಕುಲಕರ್ಣಿ, ಬೋರಗಾವಿಯ ಡಾಕ್ಟರ್ ಕೋಳ್ಕರವರು ಮತ್ತು ಪಂಚೇರಿಯ ಅಣ್ಣಾಸಾಹೇಬ್ ಪಾಟೀಲರವರು ಕಳೆದ ೧೯೪೨ ನೇ ಆಗಸ್ಟ್ ಗಲಾಟೆಗಳಲ್ಲಿ ಗುಮಾನಿಯಾಗಿದ್ದು, ಸಿಕ್ಕದೆ ಇದ್ದವರು ಈಗ ದಸ್ತಗಿರಿಯಾಗಿದ್ದಾರೆ

ಚಿನ್ನವನ್ನು ತೆಗೆಯುವ ಗಿಡ

ಮನುಷ್ಯರು ಇನ್ನು ಮುಂದೆ ಚಿನ್ನ ಮತ್ತು ಇತರ ಅಮೂಲ್ಯ ಲೋಹಗಳನ್ನು ತೆಗೆಯಬೇಕಾದರೆ ಹಲವು ಜಾತಿಯ ಗಿಡಗಳನ್ನೂ, ಪ್ರಾಣಿಗಳನ್ನೂ ಉಪಯೋಗಿಸಿಕೊಳ್ಳಬಹುದೆಂದು ಅಮೆರಿಕಾ ಪ್ರೊಫೆಸರೊಬ್ಬರು ಹೇಳುತ್ತಾರೆ. ಆ ಪ್ರಾಣಿಗಳು ಮತ್ತು ಗಿಡಗಳಿಗೆ ಅಂತಹ ವಸ್ತುಗಳನ್ನು ಹೀರುವ ವಿಚಿತ್ರ ಶಕ್ತಿಯಿದೆಯಂತೆ. ಅಮೆರಿಕದ ಒಂದು ಜಾತಿಯ ಗಿಡವು ಚಿನ್ನವಿರುವ ಸಮೀಪದಲ್ಲಿ ಬೆಳೆಯುತ್ತದೆಯಂತೆ. ಅದು ಚಿನ್ನವನ್ನು ಭೂಮಿಯಿಂದ ಎಳೆಯುತ್ತದೆ

ಬಾಳೆಹಣ್ಣು ನೋಡಲು ರುಸುಂ

ಇಂಗ್ಲೆಂಡಿನ ಎಸೆಕ್ಸ್ ಪ್ರಾಂತದ ಹಳ್ಳಿಯೊಂದರಲ್ಲಿ ಒಬ್ಬ ೮ ವರ್ಷದ ಹುಡುಗಿಯು ಎರಡು ಬಾಳೆಹಣ್ಣುಗಳನ್ನು ಹಳ್ಳಿಯ ಜನರಿಗೆ ಪ್ರದರ್ಶನವಾಗಿಟ್ಟು ತಿ ನೋಡುವುದಕ್ಕೆ ರುಸುಂ ಹಾಕಿದುದರಿಂದ ೧೫ ಷಿಲಿಂಗ್ ಉತ್ಪತ್ತಿಯಾಯಿತು. ಈ ಹಣವನ್ನು ರೆಡ್‌ಕ್ರಾಸ್ ಸಂಸ್ಥೆಗೆ ಕೊಟ್ಟಳು

ನೋಟುಗಳೇ ಪಟಗಳ ಬಾಲ

ಬಾಲಿಂವ್‌ಶಹರ್ ಎಂಬ ನಗರದ ಅಧಿಕಾರಿಗಳು ಇನ್ನು ಮುಂದೆ ಪಟಹಾರಿಸುವ ಪದ್ಧತಿಯನ್ನು ನಿಷೇಧಿಸಿದ್ದಾರೆ ಕಾರಣ ಪಟಗಳ ಬಾಲಕ್ಕೆ ನೋಟುಗಳನ್ನು ಕಟ್ಟಲಾಗುತ್ತಿತ್ತು. ಈ ನೋಟುಗಳನ್ನು ಕಿತ್ತುಕೊಳ್ಳಲು ಹೋದ ಹಲವರು ಬಿದ್ದು ನೊಂದರು.

ಪೂರ್ವ ಪ್ರಷ್ಯ ಉಳಿವಿಗಾಗಿ ಪ್ರಯತ್ನ

ಪೂರ್ವ ಪ್ರಷ್ಯದ ಉಳಿವಿಗಾಗಿ ಜರ್ಮನರು ಪೂರ್ಣ ಪ್ರಯತ್ನದಲ್ಲಿ ತೊಡಗಿದ್ದಾರೆ. ರಷ್ಯದ ಕೆಂಪು ಸೇನೆಗಳನ್ನು ತಡೆದು ನಿಲ್ಲಿಸಲು ಅತ್ಯುತ್ತಮ ಮತ್ತು ಬಲಯುತರಾದ ಯೋಧರುಳ್ಳ ಸೇನೆಗಳನ್ನೂ, ಕಾರ್ಖಾನೆಗಳಿಂದ ಆಗತಾನೇ ಪರೀಕ್ಷೆಗೊಂಡು ಬಂದಿರುವ ಟ್ಯಾಂಕುಗಳನ್ನೂ, ಜರ್ಮನ್ ವಾಯುಬಲಗಳಲ್ಲಿ ಅರಿಸಿದ ವಿಮಾನಗಳನ್ನೂ ಜರ್ಮನರು ಪೂರ್ವ ರಣರಂಗಕ್ಕೆ ನೂಕುತ್ತಿದ್ದಾರೆ. ಈ ಸೇನೆಗಳು ನಾರ್ವೆ ಇಟಲಿ ಮತ್ತು ಜರ್ಮನಿಯ ಒಳಭಾಗಗಳಿಂದ ಬಂದಿವೆ. ಹೊಸ ಮಾದರಿಯ ತೋಫುಗಳ ಉಪಯೋಗ ಬಹಳ ಆಗುತ್ತಿದೆ. ವಾರ್ಸಾ ಯುದ್ಧದ ಭವಿಷ್ಯವು ಸದ್ಯದಲ್ಲೇ ತೀರ್ಮಾನವಾಗಲಿದೆ. ಯುದ್ಧ ನಿರೀಕ್ಷಕರು ವಾರ್ಸಾ ನಗರದ ಮೇಲೆ ರಷ್ಯನರು ನೇರವಾದ ಧಾಳಿ ಮಾಡುವುದಿಲ್ಲವೆಂದು ತಿಳಿಸುತ್ತಾರೆ

ಅಮೇರಿಕನ್ ಸೇನೆಯ ಮುನ್ನಡೆ

ಲಿಮಾಲ್ ಎಂಬ ಊರಿನಿಂದ ಮುಂದು ಅಮೇರಿಕ ಸೇನೆಯು ಮುನ್ನಡೆಯು ಸಾಗುತ್ತಿದೆ. ಆಂಗರ್ಸ್ ಎಂಬುದನ್ನು ಹಿಡಿದು, ಅಲ್ಲಿಂದ ಜರ್ಮನರನ್ನು ಓಡಿಸಲಾಗಿದೆ. ಉತ್ತರದಲ್ಲಿ ಬ್ರಿಟಿಷರ ಮತ್ತು ಕೆನೇಡಿಯನ್ ಪಡೆಗಳು ಫೋರ್ ಡಿಬೆಂಗ್ಲೆ ಎಂಬಲ್ಲಿ ಸಂಧಿಸಿವೆ

ಜರ್ಮನ್ ಬಂದಿಗಳ ಕೊಲೆ

ಇಟಲಿಯಲ್ಲಿ ಕೈಸೆರೆ ಸಿಕ್ಕಿದ ಜರ್ಮನ್ ಖೈದಿಗಳ ಪೈಕಿ ೩-೭ ಜನಗಳನ್ನು ಕೊಲೆ ಮಾಡಿರುವರೆಂದು ತೀವ್ರವಾದ ಆರೋಪಣೆಮಾಡಿ ಅಮೆರಿಕಕ್ಕೆ ಸ್ವಿಟ್ಜರ್‌ಲೆಂಡ್ ಮುಖಾಂತರ ಜರ್ಮನಿಯು ಪ್ರತಿಭಟನೆಯನ್ನು ಕಳುಹಿಸಿದೆ. ಈ ಸಂಗತಿ ನಿಜವಲ್ಲವೆಂದು ಅಮೆರಿಕಾದ ವಿದೇಶಾಂಗ ಉಪಮಂತ್ರಿ ತಿಳಿಸುತ್ತಾರೆ.

ಅಲ್ಯೂಷಿಯನ್ ದ್ವೀಪಗಳಿಗೆ ರೂಸ್‌ವೆಲ್ಟರು

ಅಧ್ಯಕ್ಷ ರೂಸ್ವೆಲ್ಟರು ಅಲ್ಯೂಷಿಯನ್ ದ್ವೀಪಸ್ತೋಮಗಳಿಗೆ ಭೇಟಿ ಕೊಟ್ಟರು. ಅವರ ಕಾರ್ಯಕ್ರಮದಲ್ಲಿ ಈ ಭೇಟಿಯು ವಿಷಯವಿರಲಿಲ್ಲ.

ಸೈಪಾನ್ ದ್ವೀಪದಲ್ಲಿ ಸೇನಾ ಕಛೇರಿ

ಅಮೆರಿಕಾ ನೌಕಾ ಬಲದ ಪೆಸಿಫಿಕ್ಕಿನ ಶಾಖೆಯ ಸೇನಾ ಕಛೇರಿಯನ್ನು ಇತ್ತೀಚೆಗೆ ಜಪಾನಿಂದ ಕಿತ್ತುಕೊಂಡ ಸೈಪಾನ್ ದ್ವೀಪಕ್ಕೆ ವರ್ಗಾಯಿಸಲಾಗಿದೆ.

ಇಟಲಿಯಲ್ಲಿ ಚರ್ಚಿಲರು

ಮುಖ್ಯ ಮಂತ್ರಿ ಚರ್ಚಿಲರು ಇಟಲಿಯಲ್ಲಿದ್ದಾರೆ. ಅವರು ಬಂದ ಕಾರಣವೇನೆಂಬುದು ಗೊತ್ತಿಲ್ಲ.

ವ್ಯವಸಾಯಕ್ಕೆ ಫೈರ್ ಇಂಜನ್

ಚಿರಚನಾಪಳ್ಳಿಯ ಒಂದು ಜಮೀನಿನಲ್ಲಿ ನೀರಿಲ್ಲದೆ ಪೈರು ಒಣಗಿಹೋಗುತ್ತಿದ್ದಾಗ ರೈತನು ಫೈರ್ ಇಂಜನ್ (ನೀರಿನ ಯಂತ್ರವನ್ನು) ತರಿಸಿಕೊಂಡು ಅದರ ಮೂಲಕ ೭೦೦೦೦ ಗ್ಯಾಲನ್ ನೀರನ್ನು ಜಮೀನಿಗೆ ಹಾಯಿಸಿದ ಮೇಲೆ ಪೈರು ಚೇತರಿಸಿಕೊಂಡು, ಬೆಳೆಯು ಚೆನ್ನಾಗಿ ಆಯಿತೆಂದು ವರದಿಯಾಗಿದೆ.

ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ

ಸ್ವಂ.ಸು.] ಬೆಂಗಳೂರು ೧೨

ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿಕೊಡಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು, ಆಯವ್ಯಯ ಪಟ್ಟಿಯು ತಯಾರಿಕೆಯ ಕಾಲದಲ್ಲಿ ಒಂದು ಯೋಜನೆಯಾಗಿ ಪಟ್ಟಿಗೆ ಸೇರಿಸಬೇಕೆಂದು ಬೆಂಗಳೂರು ಪೌರಸಭೆಯಲ್ಲಿ ಈ ದಿನ ತೀರ್ಮಾನವಾಯಿತು.

ಹಾಲಿನ ಸಮಸ್ಯೆ

ನಗರದಲ್ಲಿ ಹಾಲಿನ ಸಮಸ್ಯೆ ಬಗೆಹರಿಸಲು ಇಂಪೀರಿಯಲ್ ಡೈರಿ ಫಾರಂ ಅಧಿಕಾರಿಗಳ ಸಲಹೆ, ಸಹಕಾರ ತೆಗೆದುಕೊಂಡು ಒಂದು ಸ್ಕೀಂ ತಯಾರಿಸಲು ಸಮಿತಿಯೊಂದು ಏರ್ಪಾಡಾಯಿತು.

ಸೀಮೆಯೆಣ್ಣೆ ಅಭಾವ

ಸ್ವಂ ಸು] ಕೃಷ್ಣರಾಜನಗರ ೧೨

ಈ ಊರಿನ ಸುತ್ತಮುತ್ತಲಲ್ಲಿ ಸೀಮೆಯೆಣ್ಣೆಯು ಇಲ್ಲದೆ ಜನರಿಗೆ ತುಂಬಾ ತೊಂದರೆಯಾಗಿದೆ. ನಿಯಮ ಪ್ರಕಾರ ವಿದ್ಯುಚ್ಛಕ್ತಿ ಉಪಯೋಗಿಸುವವರಿಗೆ ತಿಂಗಳಿಗೆ ಅರ್ಧ ಸೀಸೆ, ಇಲ್ಲದಿರುವವರಿಗೆ ೨ ಸೀಸೆ ಎಣ್ಣೆಯನ್ನು ಕೊಡಬೇಕಾಗಿದ್ದರೂ, ಎಲ್ಲರಿಗೂ ತಿಂಗಳಿಗೆ ಅರ್ಧ ಸೀಸೆಯನ್ನೇ ಕೊಡುತ್ತಿರುವುದರಿಂದ, ಜನರು ತಿಂಗಳಿಗೆ ೩ ವಾರಗಳಲ್ಲಿ ಕತ್ತಲಲ್ಲಿ ಇರಬೇಕಾಗಿದೆ. ಸರಕಾರದವರು ಇತ್ತ ಕಡೆ ಗಮನ ಕೊಡುವರೆಂದು ನಂಬಲಾಗಿದೆ.

ಪ್ಲೇಗು

ಈ ಊರಿನ ಸುತ್ತಮುತ್ತಲ ಗ್ರಾಮಗಳಲ್ಲಿ ಪ್ಲೇಗ್ ಜಾಡ್ಯವು ತಲೆದೋರಿರುವುದರಿಂದ ನಾಟಕ ಪ್ರದರ್ಶನಗಳಿಂದ ತೊಂದರೆ ಹೆಚ್ಚಬಹುದೆಂದು ಭೀತಿಯಾಗಿದೆ.

ನಾಗಪ್ರತಿಷ್ಠೆ

ಸ್ವಂ ಸು] ತಿ. ನರಸೀಪುರ ೧೨

ಈ ದಿನ ಮೈಸೂರಿನಲ್ಲಿರುವ ಮದರಾಸ್ ಹಿಂದೂ ಪತ್ರಿಕೆಯ ಬಾತ್ಮೀದಾರರಾದ ಶ್ರೀ ಆರ್. ಗೋಪಾಲಕೃಷ್ಣರಾಯರು, ಕಾವೇರಿ ಕಪಿಲಾ ನದಿಗಳ ಸಂಗಮ ಕ್ಷೇತ್ರದಲ್ಲಿ ನಾಗಪ್ರತಿಷ್ಠೆಯನ್ನು ಮಾಡಿದರು. ಸಂತರ್ಪಣೆ ನಡೆಯಿತು.

Edited, printed and published by A. R. Nagarajan, at the Sadhvi Press, D Subbiah Road, Mysore

ವಿದ್ಯಾರ್ಥಿಗಳೂ ರಾಜಕೀಯವೂ

ಮೈಸೂರು ೧೨

ಈ ದಿನ ಬೆಳಗ್ಗೆ ಮದ್ರಾಸಿನ ಡೆಪ್ಯುಟಿ ಮೇಯರಾದ ಶ್ರೀಮಾನ್ ಪಿ. ಎಸ್. ಭಾಷ್ಯಂರವರು ಯುವಕರಿಗೆ ಕಾಂಗ್ರೆಸ್ ಕಚೇರಿಯಲ್ಲಿ ಹಿತೋಪದೇಶ ಮಾಡಿದರು. ಶ್ರೀಮಾನ್ ಪಿ. ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಭಾಷ್ಯಂರವರು ಮದ್ರಾಸ್ ಪ್ರಾಂತ್ಯದಲ್ಲಿ ಯುವಕರೂ ನಾಯಕರೂ ದೇಶದ ರಾಜಕೀಯ ಮತ್ತು ಸಾಮಾಜಿಕ ಚಳುವಳಿಗಳಲ್ಲಿ ನಡೆಸಿದ ಕಾರ್ಯಕ್ರಮಗಳನ್ನು ವಿವರಿಸಿದರು.

ವಿದ್ಯಾರ್ಥಿಗಳು ರಾಜಕೀಯದಲ್ಲಿ ಪಾತ್ರ ವಹಿಸಲೇಬೇಕೆಂದು ಶ್ರೀ ಭಾಷ್ಯಂರವರು ತಿಳಿಸಿದರು. ಪ್ರತಿಯೊಂದು ದೇಶದಲ್ಲಿಯೂ ಅಲ್ಲಿನ ತರುಣರೇ ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವರು. ಮುದುಕರಿಂದಲೂ ಸಂಸಾರಸ್ಥರಿಂದಲೂ ಇದು ಸಾಧ್ಯವಿಲ್ಲ. ತರುಣರಿಗಿರಬೇಕಾದ ಧೈರ್ಯವೂ ದಾಕ್ಷಿಣ್ಯವೂ ಅವರಿಗಿರುವುದಿಲ್ಲ. ಹಿರಿಯರ ಪ್ರೇರಣೆಯನ್ನು ಕಿರಿಯರು ಅನುಸರಿಸಬೇಕು. ಹಿರಿಯರು ಅಸ್ತಿಭಾರ. ತರುಣರು ಅದರ ಮೇಲಿನ ಸಿಮೆಂಟ್, ಸುಣ್ಣ-ಇಟ್ಟಿಗೆಗಳಂತೆ ಇಬ್ಬರೂ ಕಲೆತು ರಾಷ್ಟ್ರದ ರಚನೆಯನ್ನು ಮಾಡಬೇಕು ಎಂದರು.

ವಿದ್ಯಾರ್ಥಿಗಳು ನೇರವಾಗಿ ಚಳುವಳಿಗಳಲ್ಲಿ ಭಾಗವಹಿಸಲಾಗದಿದ್ದರೂ ಖಾದಿ ಧರಿಸುವುದು, ಖಾದಿ ಪ್ರಚಾರ ಮಾಡುವುದು, ನಗರ ನಿರ್ಮಲೀಕರಣಕಾರ್ಯ ಹರಿಜನರೇ ಮುಂತಾದ ಹಿಂದುಳಿದ ಪಂಗಡದವರಿಗೆ ವಿದ್ಯೆಯನ್ನು ಕಲಿಸುವುದು, ಸ್ವದೇಶಿ ವಸ್ತುಗಳಲ್ಲಿ ಜನರ ಅಭಿಮಾನ ಹೆಚ್ಚಿಸುವುದು. ದೇಶದ ಏಕಮಾತ್ರ ಆದರ್ಶ ಪುರುಷರಾದ ಮಹಾತ್ಮಾ ಗಾಂಧೀಜಿಯವರಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ಅವರು ತೋರಿಸುವ ಮಾರ್ಗವನ್ನು ಶಿಸ್ತಿನಿಂದ ಅಕ್ಷರಶಃ ಅನುಸರಿಸುವುದು, ದೇಶಮಾತೆ ಕಸ್ತೂರಿ ಬಾ ನಿಧಿಗೆ ಧನಸಂಗ್ರಹ ಮಾಡುವುದು ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಜಮೋಘ ಭಾಷಣ ಮಾಡಿದರು.

ಅಧ್ಯಕ್ಷರು ವಿದ್ಯಾರ್ಥಿಗಳು ಈಗಿನಿಂದ ರಾಜಕೀಯ ಮತ್ತು ಪೌರ ನೀತಿಯನು

ದ್ಯುಲೋಕ ಜ್ಯೋತಿಗಳ ಸಂಚಾರ

ಭೂಮಿಗೆ ಅತ್ಯಂತ ಸಮೀಪವಾದ ೧ ನಕ್ಷತ್ರವು ಕೇವಲ ೨೫,೫೦೦,೦೦೦,೦೦೦,೦೦೦ ಮೈಲಿಗಳ ಹತ್ತಿರವಿರುವುದು! ನಕ್ಷತ್ರಗಳು ಗ್ರಹಗಳಂತೆ ಚಲಿಸದೆ ಒಂದೇ ಕಡೆ ಸ್ತಂಭೀಭೂತವಾಗಿರುವುವೆಂದು ಹೇಳಲ್ಪಟ್ಟಿದ್ದರೂ ಇವು ೧ ಸೆಕೆಂಡಿಗೆ ೧೦ ಮೈಲಿಯಿಂದ ೧೦೦ ಮೈಲಿ ವೇಗದಲ್ಲಿ ಚಲಿಸುತ್ತಿರುವುವು. ಅಂದರೆ ೧೦ ಮೈಲಿಯ ವೇಗದ ನಕ್ಷತ್ರವು ೧ ಗಂಟೆಗೆ ೬೦೦ ಮೈಲಿಯ ವೇಗದಲ್ಲೂ, ೧೦೦ ಮೈಲಿ ಸಂಚರಿಸುವ ನಕ್ಷತ್ರವು ೧ ದಿನಕ್ಕೆ ೧,೪೦,೦೦೦ ಮೈಲಿ ವೇಗದಲ್ಲೂ ಚಲಿಸುತ್ತಿರುವುವು!! ದೃಷ್ಟಿಗೆ ಗೋಚರಿಸುವ ನಕ್ಷತ್ರಗಳ ಸಂಖ್ಯೆಯು ೩೦,೦೦೦,೦೦೦,೦೦೦!!!

ಮಡಿಸುವ ಮನೆ

ಕೆನಡಾದಲ್ಲಿ ಸೈನಿಕರ ಉಪಯೋಗಕ್ಕಾಗಿ ಸೂಟ್‌ಕೇಸ್ ಮನೆಗಳನ್ನು ತಯಾರು ಮಾಡಲಾಗುತ್ತಿದೆ. ಮಡಿಸಿದರೆ ೨೬ ಅಂಗುಲ ಅಗಲ ೮ ಅಡಿ ಉದ್ದ ಮತ್ತು ೧೬|| ಅಂಗುಲ ಆಳವಿರುವಂತಹುದಾಗುವುದು. ತೂಕ ೨೫೦೦ ಪೌಂಡು. ಬಿಚ್ಚಿದರೆ ೨೫೦ ಚದರಡಿಯಾಗುತ್ತವೆ. ಇವನ್ನು ರಣರಂಗದ ಅಡಿಗೆಮನೆ ಪ್ರಥಮ ಚಿಕಿತ್ಸಾ ಕೊಠಡಿ ಇವುಗಳಿಗೆ ಉಪಯೋಗಿಸುತ್ತಾರೆ.

ಪಾಲನೆಗಳ ವಿಚಾರದಲ್ಲಿ ಆಸಕ್ತಿ ವಹಿಸಿ ವಿಷಯ ಸಂಗ್ರಹ ಮಾಡಬೇಕು. ಇಲ್ಲವಾದರೆ ಮುಂದೆ ಅವರು ಸರಿಯಾದ ಮನುಷ್ಯರಾಗಿ ಜೀವಿಸಲಾರರು ಎಂದರು.

ಶ್ರೀಮಾನ್ ಹೆಚ್. ಕೆ. ಕುಮಾರಸ್ವಾಮಿಯವರು ವಂದನೆಗಳನ್ನರ್ಪಿಸಿ, ನಾಯಕರುಗಳು ತಮಗೆ ಇದೇ ರೀತಿ ಹಿತೋಪದೇಶ ಮಾಡಬೇಕೆಂದು ಪ್ರಾರ್ಥಿಸಿದರು. ವಂದೇ ಮಾತರಂನೊಡನೆ ಸಭೆಯು ಮುಕ್ತಾಯವಾಯಿತು.

ಗೌರೀ ಹಬ್ಬದ ಪ್ರಯುಕ್ತ

ಎನ್. ಪಿ. ರಾಮರಾವ್ ಅಂಗಡಿಯವರು

ಬೈಸಿಕಲ್ ಮೇಲೆ ತರುವ

ಹೊಲೆದು ಸಿದ್ಧಪಡಿಸಿದ

ಉಡುಪುಗಳನ್ನು ಕೊಂಡುಕೊಳ್ಳಿರಿ.

ನಂಬಿಕೆಯಿಂದ ವ್ಯಾಪಾರ ಮಾಡುತ್ತಾರೆ

ಗೋಕುಲಾಷ್ಟಮಿ ಪ್ರಯುಕ್ತ

ರಣಜಿತ್ ಟಾಕೀಸ್

ಪ್ರತಿ ದಿನ ೩ ಆಟಗಳು

11-8-44 ರಿಂದ

ಶಂಕರ್ ಪಾರ್ವತಿ

★ ಅರುಣ

★ ಸಾಧನ ಬೋಸ್

ಮುಂತಾದವರು ಪಾತ್ರವಹಿಸಿರುವರು

ಪಂಜಾಬಿನಲ್ಲಿ ಟಿಕೀಟಿಲ್ಲದ ಪ್ರಯಾಣ

ಆಗಸ್ಟ್ ೯ ನೇ ತಾ|| ನ ವರೆಗೆ ಕಳೆದ ನಾಲ್ಕು ವಾರಗಳಲ್ಲಿ ಲಾಹೋರ್ ಸ್ಪೆಷಲ್ ರೈಲ್ವೆ ಮ್ಯಾಜಿಸ್ಟ್ರೇಟರ ಮುಂದೆ ಟಿಕೀಟುಗಳಿಲ್ಲದೆ, ಮತ್ತು ಕ್ರಮ ವಿರುದ್ಧವಾದ ರೈಲ್ವೆ ಓಡಾಟಗಳ ಮೊಕದ್ದಮೆಗಳಲ್ಲಿ ೫೧೭೮ ಮಂದಿಗೆ ಶಿಕ್ಷೆ ವಿಧಿಸಲಾಗಿದೆ.

ಲಿಂಡಿ ಸಂಸ್ಥಾನದಲ್ಲಿ ಶಾಂತಿ

ಲಿಂಡಿ ಸಂಸ್ಥಾನದ ಅರಸರಿಗೂ, ತಾಲ್ಲೂಕುದಾರರಿಗೂ ಉಂಟಾಗಿದ್ದ ಬಿಕ್ಕಟ್ಟು ಪರಿಹಾರವಾಗುವ ಒಪ್ಪಂದವಾಯಿತು. ತಾಲ್ಲೂಕದಾರರ ಜಹಗೀರುಗಳನ್ನು ಲಿಂಡಿ ಸಂಸ್ಥಾನಾಧೀಶರಿಗೆ ಒಳಪಡಿಸುವ ವಿಷಯದಲ್ಲಿ ಅಲ್ಲಿ ಚಳುವಳಿ ನಡೆಯುತ್ತಿತ್ತು.

ಅಮೇರಿಕ ಖೈದಿಗಳಿಗೆ ಮರಣ ದಂಡನೆ

ಮಂಚೂರಿಯಾದಲ್ಲಿರುವ ಕಾರಾಗೃಹವೊಂದರಿಂದ ತಪ್ಪಿಸಿಕೊಂಡರೆಂದು ಹೇಳಲಾದ ಮೂವರು ಅಮೇರಿಕಾ ಯುದ್ಧಬಂದಿಗಳನ್ನು ಗಲ್ಲಿಗೇರಿಸಲಾಯಿತೆಂದು ಅಂತರ್ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆ ತಿಳಿಸುತ್ತದೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ಪ್ರಸಿದ್ಧ ಪತ್ರಿಕೆ

ಚಾಲ್ತಿ ಮಾಹೆ 16 ನೇ ತಾರೀಖು ಬುಧವಾರದ ದಿವಸ ಇರ್ವಿನ್ ರಸ್ತೆಯಲ್ಲಿರುವ ನೀರಿನ ಮೇಯಿನ್ ಲೈನ್ ರಿಪೇರಿ ಮಾಡುವ ಪ್ರಯುಕ್ತ ಆ ದಿವಸ ಬೆಳಗ್ಗೆ 6 ಗಂಟೆಯಿಂದ ಸಾಯಂಕಾಲ 6 ಗಂಟೆವರೆವಿಗೂ ಈ ಕೆಳಗೆ ನಮೂದಿರುವ ಪ್ರದೇಶಗಳಿಗೆ ನೀರು ಸರಬರಾಜು ನಿಲ್ಲಿಸಲಾಗುತ್ತೆ. ಆದರೆ 15 ನೇ ತಾರೀಖಿನ ದಿವಸ ಪೂರ್ತಾ ಮೊಹಲ್ಲಾ ನಿವಾಸಿಗಳು ನೀರು ಶೇಖರಿಸಿಕೊಳ್ಳುವ ಪ್ರಯುಕ್ತ ಬೆಳಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆವರೆವಿಗೂ ಒದಗಿಸಲಾಗುತ್ತೆ. ಆ ವೇಳೆಯಲ್ಲಿ ಎಲ್ಲರೂ ಸಾಕಾದಷ್ಟು ನೀರನ್ನು ಶೇಖರಿಸಿಕೊಳ್ಳತಕ್ಕದ್ದು. ರಿಪೇರಿ ಮುಗಿದ ನಂತರ ಮಾಮೂಲಿನಂತೆ ನೀರು ಸರಬರಾಜು ಮಾಡಲಾಗುತ್ತೆ.

೧ ಆಸ್ಪತ್ರೆಗಳ ಮತ್ತು ಅವುಗಳ ಸುತ್ತಮುತ್ತಲ ಪ್ರದೇಶ.

೨. ಕೃಷ್ಣರಾಜ ಮೊಹಲ್ಲಾ ಮುನಿಸಿಪಲ್ ಆಫೀಸ್ ಸುತ್ತಮುತ್ತಲ ಪ್ರದೇಶ.

೩. ನಜರಬಾದ್ ಮೊಹಲ್ಲಾ.

೪ ರೇಸ್ ಕೋರ್ಸ್.

೫. ಇಟ್ಟಿಗೆ ಅಗ್ರಹಾರ (ಫೋರ್ಟ್ ಮೊಹಲ್ಲಾ).

೬ ಪೂರ್ವ ದಿಕ್ಕಿನ ಬಡಾವಣೆ

(ಸಹಿ)

ಆರ್. ರಾಮಚಂದ್ರರಾವ್ ಬಾಂಭೋರೆ

11-8-44 ಪ್ರೆಸಿಡೆಂಟ್.

ಸ್ತ್ರೀಯರ ಸೌಕರ್ಯಕ್ಕೆ

ಹೆಂಗಸರುಗಳಿಗಾಗಿಯೇ ಪ್ರತ್ಯೇಕವಾಗಿ ವ್ಯಾಪಾರ ಮಾಡಿಕೊಡುವ ಏರ್ಪಾಡು ಮಾಡಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಟಿ. ಪುಟ್ಟಮ್ಮ, ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಕಲ್ಲು ಮತ್ತು ಸಂತೇಪೇಟೆ ಮಂಡಿಗಳಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ದೇವಾಲಯಗಳಿಗೆ ಪತ್ರೆ ಕೊಡುವುದಕ್ಕೆ ಪ್ರತಿದಿನವಾಗಿ ಬಾಳೆ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

★ ಮಹಿಳೆಯರಿಗೆ ಸೌಭಾಗ್ಯಪ್ರದವಾದ ಮತ್ತು ಕರಗಳ ಸೌಂದರ್ಯಕ್ಕೆ ಸಹಾಯಕಾರಿಯಾದ ನವನವೀನ ಬಳೆಗಳಿಗೆ ★

ನಿಮ್ಮ ಮೆಚ್ಚುಗೆಗೆ ಪಾತ್ರವಾದ

ಫ್ಯಾನ್ಸಿ ಬೀಲಾಕುಗಳು ಕೆಮಿಕಲ್ ದಂತದ ಬಳೆಗಳ

ಶ್ರೀ ಸೌಭಾಗ್ಯ ಸ್ಟೋರ್ಸ್‌ಗೆ ಬನ್ನಿರಿ

ದೇವರಾಜ ಮಾರ್ಕೆಟ್, ಮೈಸೂರು.

WEEKLY EDITION

ಸಂಪುಟ ೯] ಸೋಮವಾರ ೧೪--೮--೪೪ [ಸಂಚಿಕೆ ೪

ಪೋಲೆಂಡ್ ಮಂತ್ರಿಯ ಸಂಧಾನ ಮುರಿಯಿತು

ಮೆಡಿಟರೇನಿಯನ್ ಸಮುದ್ರದಲ್ಲಿ ಹೊಸ ಕಾರ್ಯಾರಂಭವೇ? ಪ್ಯಾರಿಸ್ ನಗರವನ್ನು ಅಮೆರಿಕನ್ನರು ಸಮೀಪಿಸಿದರೇ?

ಆರ್ಯ ಸಂಘ

ಮೈಸೂರು ೧೩

ಈ ದಿನ ಸಂಜೆ ಮೈಸೂರು ಆರ್ಯ ಸಂಘದ ಆರಂಭ ಭಾಷಣವನ್ನು ಜಿಲ್ಲಾ ಬೋರ್ಡ್ ಸ್ಕೂಲ್ ಹೆಡ್ ಮಾಸ್ಟರ್ ಶ್ರೀಮಾನ್ ಬಿ. ವಿ. ನಂಜುಂಡಯ್ಯನವರು ನಡೆಸಿದರು. ಶ್ರೀ ಸುಬ್ಬನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಯೋಗನರಸಿಂಹರವರಿಂದ ಪ್ರಾರ್ಥನೆಯಾದ ಮೇಲೆ ಅಧ್ಯಕ್ಷರು ಸಂಘದ ಕಾರ್ಯಕಲಾಪಗಳನ್ನು ತಿಳಿಸಿ ಸ್ವಾಗತ ಭಾಷಣ ಮಾಡಿದರು. ಶ್ರೀಮಾನ್ ನಂಜುಂಡಯ್ಯನವರು ಭಾಷಣಮಾಡುತ್ತಾ—ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ವ್ಯಾಸಂಗಮಾಡಿ ವಿದ್ಯಾರ್ಜನೆ ಮಾಡಿಕೊಳ್ಳಬೇಕು. ನಮ್ಮ ಸಮಾಜದಲ್ಲಿ ಬಡವರು ಬಹಳ ಇದ್ದರೇ ಅಲ್ಲ ಬದುಕುವ ಮಾರ್ಗ ಕಂಡುಹಿಡಿಯಬೇಕು. ನಾಯಕರನ್ನನುಸರಿಸಿ ಒಗ್ಗಟ್ಟಾಗಿ ನಡೆದುಕೊಳ್ಳಬೇಕು. ಮಾನಸಿಕ ದೈಹಿಕ ಅಭಿವೃದ್ಧಿಯ ಜೊತೆಗೆ ನೈತಿಕ ಅಭಿವೃದ್ಧಿಯನ್ನೂ ಅತ್ಯವಶ್ಯಕವಾಗಿ ಸಾಧಿಸಿಕೊಳ್ಳಬೇಕು. ಈಗಿನಿಂದ ವಿದ್ಯಾರ್ಥಿಗಳು ಒಂದಲ್ಲೊಂದು ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭ್ಯಾಸಿಸಬೇಕು. ಮಾತೃಭಾಷೆ ಮತ್ತು ರಾಷ್ಟ್ರಭಾಷೆಗಳನ್ನೆಲ್ಲಾ ಚೆನ್ನಾಗಿ ಕಲಿಯಬೇಕು—ಎಂಬುದಾಗಿ ಹಿತೋಪದೇಶ ಮಾಡಿದರು. ಶ್ರೀ ಎಂ. ಎಸ್. ರಂಗಸ್ವಾಮಿಯವರ ವಂದನಾರ್ಪಣೆ, ರಾಷ್ಟ್ರೀಯ ಗೀತೆಯೊಡನೆ ಈ ಕಾರ್ಯಕಲಾಪ ಮುಕ್ತಾಯವಾಯಿತು.

ಫುಟ್‌ಬಾಲ್

ಅಖಿಲ ಭಾರತ ಫುಟ್‌ಬಾಲ್ ಪಂದ್ಯಗಳ ಆಶ್ರಯದಲ್ಲಿ ಇದೇ ಮಾಹೆ ೧೩ ಮತ್ತು ೧೪ ನೇ ತಾರೀಖುಗಳಲ್ಲಿ ಪೊಲೀಸ್ ಮೈದಾನದಲ್ಲಿ ನಡೆದ ಪಂದ್ಯಗಳಲ್ಲಿ ಮೈಸೂರು ಮಹಾರಾಜಾ ಕಾಲೇಜಿನವರು ಬೆಂಗಳೂರು ಬಿನ್ನಿ ಮಿಲ್ಸ್ ಕ್ಲಬ್ಬನ್ನು ೩-೧ ಗೋಲುಗಳಿಂದ ಸೋಲಿಸಿದರು. ಮಹಾರಾಜಾಸ್ ಫೋರ್ಸ್‌ಗೂ ಬೆಂಗಳೂರು ಡ್ರಾಗೂನ್ಸ್ ಕ್ಲಬ್ಬಿಗೂ ನಡೆದ ಪಂದ್ಯವು ೨-೨ ಗೋಲುಗಳಿಂದ ಡ್ರಾ ಆಯಿತು.

ಕ್ರಿಕೆಟ್

ಸರ್ ಮಿರ್ಜಾ ಷೀಲ್ಡ್ ಸ್ಟೇಟ್ ಛಾಂಪಿಯನ್‌ಷಿಪ್ ಲೀಗ್ ಪಂದ್ಯಗಳ ಆಶ್ರಯದಲ್ಲಿ ಇದೇ ಮಾಹೆ ೧೩ ನೇ ತಾ|| ಕ್ರಿಕೆಟ್ ಪಂದ್ಯದಲ್ಲಿ ಮಹಾರಾಜಾ ಕಾಲೇಜಿನವರು ಬೆಂಗಳೂರಿನ ಸೆಂಟ್ ಜೋಸೆಫ್ಸ್ ಕ್ರಿಕೆಟ್ ಕ್ಲಬ್ಬನ್ನು ೪ ವಿಕೆಟ್ಟುಗಳು ಮತ್ತು ೧೧೦ ರನ್ನುಗಳಿಂದ ಸೋಲಿಸಿದರು. ಇದೇ ಕ್ಲಬ್ಬನ್ನು ಮೈಸೂರು ಜಿಂಖಾನಾ ಕ್ಲಬ್ಬಿನವರು ನೆನ್ನೆ ನಡೆದ ಪಂದ್ಯದಲ್ಲಿ ಸೋಲಿಸಿದರು.

ದುರ್ಗಾನಿವಾಸ

ದುರ್ಗಾನಿವಾಸ ಮೈಸೂರಿನವರ ಪ್ರಸ್ತುತ ಗಾರ್ಡನ್ ದುರ್ಗಾನಿವಾಸವೆಂಬ ಕಟ್ಟಡವನ್ನು ಕಟ್ಟಲು ಶಂಕುಸ್ಥಾಪನ ಮಹೋತ್ಸವವು ಇದೇ ಮಾಹೆ ೨೦ ನೇ ತಾರೀಖು ಭಾನುವಾರ ಬೆಳಗ್ಗೆ ೧೧ ಗಂಟೆಗೆ ಸಿಟಿ ಟ್ರಸ್ಟ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಆರ್. ರ. ಪುಟ್ಟಸ್ವಾಮಿ ಭಾಗವತರವರಿಂದ ನಡೆಯುವುದು.

ಸಂಘದ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಯು ಇದ್ದಾಗ ಜಾರಿಗೆ ಬಂದಿದ್ದ ಪ್ರತಿಬಂಧಕ ನಿರ್ಬಂಧ ಕಾನೂನು. ಆ ಪ್ರಾಂತದ ಕಾರ್ಯ ಕಾಂಗ್ರೆಸ್ ಸರ್ಕಾರದವರು ತೆಗೆದುಹಾಕಿದಾಗ ಗೌರ್ನರು ಶಾಸನದ ಮೂಲಕ ಉಳಿಸಿದ್ದಾರೆ.

ಪೋಲೆಂಡ್ ಮುಖ್ಯ ಮಂತ್ರಿ ರಾಯಭಾರ ಮುರಿದುಬಿತ್ತು

ಮಾಸ್ಕೋ ನಗರಕ್ಕೆ ಲಂಡನ್ನಿನಿಂದ ತೆರಳಿದ್ದ ಪೋಲಿಷ್ ಸರ್ಕಾರದ ಮುಖ್ಯ ಮಂತ್ರಿ ಮಿಕೊಲೈಜಿಕ್ ರವರು ಹಿಂತಿರುಗಿ ರಾಯಭಾರವನ್ನು ಕೆಡಿಸಿಕೊಂಡು ಹೊರಟಿದ್ದಾರಂತೆ. ಈಗ ಅವರು ಮಾಸ್ಕೋ ತೆರಳಿದ್ದಾರೆ. ಅವರು ಸಂಧಾನ ಮುರಿಯಿತೆಂದು ವರ್ತಮಾನ ಹಬ್ಬಿದೆ. ರಷ್ಯನರಿಗೂ ಪೋಲಿಷರಿಗೂ ಮೈತ್ರಿ ಸ್ಥಾಪನೆಯಾಗಿಲ್ಲ. ಲಂಡನ್ ಪೋಲಿಷರಿಗೂ, ರಷ್ಯಾ ಪೋಲಿಷರಿಗೂ ಅಭಿಪ್ರಾಯ ವ್ಯತ್ಯಾಸಗಳಿವೆ. ಲಂಡನ್ ಪೋಲಿಷರಿಗೆ ಬೆಂಬಲ ಕೊಡುವ ಪ್ರಯತ್ನ ಬಹಳ ನಡೆದಿದೆ.

ಮೆಡಿಟರೇನಿಯನ್ನಿನಲ್ಲಿ ಮುಂದೇನು?

ಸಂಯುಕ್ತ ರಾಷ್ಟ್ರಗಳ ನೌಕಾಪಡೆಯ ಉಪಸೇನಾಧಿಪತಿ ಅಡ್ಮಿರಲ್ ಕನ್ನಿಂಗ್‌ಹ್ಯಾಂ ಅವರ ಸೇನಾನಾಯಕರೊಂದಿಗೆ ಇಟಲಿಗೆ ಆಗಮಿಸಿದ್ದಾರೆ. ಅವರು ಬ್ರಿಟಿಷ್ ಮುಖ್ಯಮಂತ್ರಿ ಚರ್ಚಿಲರನ್ನು ಭೇಟಿಮಾಡಲಿದ್ದಾರೆ. ಈ ಸನ್ನಿವೇಶದಿಂದ ಮೆಡಿಟರೇನಿಯನ್ ಕ್ಷೇತ್ರದಲ್ಲಿ ಹೊಸ ದಾಳಿ ಪ್ರಾರಂಭವಾಗಬಹುದೆಂದು ಊಹಿಸಲಾಗುತ್ತಿದೆ.

ಚರ್ಚಿಲರ ನಂತರ ಯಾರು?

ಚರ್ಚಿಲರ ನಂತರ ಬ್ರಿಟಿಷ್ ಮುಖ್ಯ ಮಂತ್ರಿ ಯಾರಾಗಬಹುದೆಂದು ಊಹೆ ಎದ್ದಿದೆ. ಚರ್ಚಿಲರೇ ಆ ಸ್ಥಾನಕ್ಕೆ ಬರಬೇಕೆಂದು ಈಡನ್ನರು ಸೂಚಿಸಿದ್ದಾರಂತೆ. ಆದರೆ ಅವರಿಗೆ ಪಕ್ಷಪಾತ ಪ್ರೈವೇಟ್ ಸೆಕ್ರೆಟರಿ ಲಾರ್ಡ್ ಐ. ಆ. ಹಾರ್ಡ್. ಆದರು ಸರ್ ಜೆ. ಆಂ ಡರ್ಸ್‌ನ್.

ಪುರುಷೋತ್ತಮದಾಸ ಠಂಡನ್‌ರವರ ಸ್ಥಿತಿ ಕಳವಳ

ಸಂಯುಕ್ತ ಪ್ರಾಂತದ ಶಾಸನಸಭಾ ಮಾಜಿ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ ಠಂಡನ್‌ರವರು ಜೈಲಿನಲ್ಲಿ ಮುಂದಿದ್ದಾರೆ. ಅವರ ದೇಹಸ್ಥಿತಿಯು ಆತಂಕಕ್ಕೆ ಕಾರಣವಾಗಿದೆಯೆಂದೂ, ಕೆಲವು ಜನ ಮಿತ್ರರು ಅವರನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಬೇಡಿಕೊಂಡಿದ್ದಾರೆಂದೂ ಪ್ರಾಂತೀಯ ಸರ್ಕಾರಕ್ಕೆ ಸೂಚನೆ ಬಂದಿದೆ. ಪುರುಷೋತ್ತಮದಾಸರ ತೂಕ ಕಡಿಮೆಯಾಗಿದೆ.

ಪ್ಯಾರಿಸ್ಸಿನ ಹತ್ತಿರ ಬಂದರೇ?

ಅಮೆರಿಕನ್ ಸೇನೆಗಳು ಪ್ಯಾರಿಸ್ಸಿನ ಬಹಿರಾವರಣದ ಕಡೆಗೂ ವೇಗವಾಗಿ ನುಗ್ಗುತ್ತಾ ಬಂದವೆಂದು ಅಂತೆಕಂತೆಗಳು ಬರುತ್ತಿವೆ. ಆದರೆ ಅಧಿಕಾರಯುತವಾಗಿ ಅಮೆರಿಕನರ ಮುಂದೆ ಸಾಗುತ್ತಿರುವ ಜ|| ಪ್ಯಾಟನ್ನರ ಸೇನಾಪಂಕ್ತಿಗಳು ಎಷ್ಟು ದೂರ ಹೋಗಿವೆಯೆಂಬುದನ್ನು ಬೇರಾಗಿಯೇ ತಿಳಿಸುತ್ತಿಲ್ಲ. ಇದರಿಂದ ಜರ್ಮನರಿಗೆ ಸಹಾಯ ಮಾಡಿದಂತಾಗುತ್ತದೆ.

ಮಿತ್ರಸೇನೆಗಳ ಮಿಳನ

ಕೆನೆಡಿಯನ್ ಸೈನ್ಯವನ್ನು ದಕ್ಷಿಣದಲ್ಲಿ ಅಮೆರಿಕ ಮತ್ತು ಬ್ರಿಟಿಷ್ ಸೈನಿಕ ಸೇನೆಗಳ ಪರಿಮಾಣದಲ್ಲಿ ಮಿತ್ರ ಬಲಗಳು ಸಂಧಿಸಿವೆ. ಬ್ರಿಟಿಷ್ ಸೈನ್ಯವು ಸೇನಾ ಪ್ರದೇಶದಲ್ಲಿಯೇ ಮುಂದುವರಿದ ಸೇನೆಯು ಬಾರ್ಬನಿಯ ಮುಖಾಂತರ ಹೋಗಿ ಮೌರಿಲ್ ಊರನ್ನು ವಶಮಾಡಿಕೊಂಡಿದೆ. ಇದಲ್ಲದೆ ಮತ್ತೊಂದು ಕಡೆ ಅಲ್ಬನ್ ನದಿಯನ್ನು ದಾಟಿ ಆಕ್ರಮಿಸಿದ್ದ ರಂಗದಿಂದ ಬಾರ್ನ್‌ಹಾಲ್‌ಗೆ ಎಂಬ ವನ್ನು ಮಿತ್ರಸೇನೆಯೊಂದು ಹಿಡಿದಿದೆ.

ಪಶ್ಚಿಮದಲ್ಲಿ "ಪೂರ್ವರಂಗ" ಮಾಯಿತೇ?

ಪಶ್ಚಿಮದಲ್ಲಿಯೂ ಪೂರ್ವರಂಗದ ಕ್ಷೇತ್ರದಂತೆ ಆಗಬಹುದೆಂದು ಜನರ ಊಹೆ. ಈ ನಾರ್ಮಂಡಿ ಕದನದ ಪರಿಣಾಮ ಜರ್ಮನ್ ಜನರಲ್ ವಾನ್ ಕ್ಲೂಗ್‌ರ ಇಡೀ ಸೇನೆಗೇ ಅಪಾಯ ಒದಗಿದೆಯೆಂದು ವದಂತಿ. ವಿಮಾನ ಮತ್ತು ಇತರ ಸಹಾಯದಿಂದ ಜರ್ಮನರು ಪ್ಯಾರಿಸ್ಸಿನ ದಕ್ಷಿಣದಲ್ಲಿ ಯಾವ ರಕ್ಷಣಾ ಪ್ರದೇಶದಿಂದ ಜರ್ಮನಿಗೆ ಹಿಂದಕ್ಕೆ ಹೋಗಲೂ ಆಗುತ್ತಿಲ್ಲ.

೧೨ ಜನರ ಬಿಡುಗಡೆ

ಮೈಸೂರು ೧೪

ಮಲೆಯೂರು ತಿಂ|| ಗಣಗನೂರಿನಲ್ಲಿ ಪವಿತ್ರ ಜಾತ್ರೆಯ ಕಾಲದಲ್ಲಿ ಗಂಪಿನವರು ಶ್ರೀ ಮಂಚಿನ ರಂಗಸ್ವಾಮಿ ದೇವಸ್ಥಾನದ ಬೀಗವನ್ನು ಮುರಿದು ಸೇರಿಕೊಂಡು ಕಳ್ಳತನ ಮಾಡಿ ಕಳುವು ಮಾಡಿದರೆಂದು ಆರೋಪಿಸಲಾಗಿದ್ದು ಜಾಮೀನಿನ ಮೇಲೆ ಬಿಟ್ಟಿದ್ದ ೧೨ ಜನರ ಮೇಲಿನ ಮೊಕದ್ದಮೆಯು ಮುಗಿದು ನೆನ್ನೆ ಸಬ್‌ಡಿವಿಷನಲ್ ಮ್ಯಾಜಿಸ್ಟ್ರೇಟರವರು ಅವರನ್ನು ಆರೋಪದಿಂದ ಮುಕ್ತರನ್ನಾಗಿ ಮಾಡಿ ಎಲ್ಲರನ್ನೂ ಬಿಡುಗಡೆ ಮಾಡಿದರು.

ಗೋಪಾಲಸ್ವಾಮಿ ಅಯ್ಯರ್ ವಾಲಿಬಾಲ್ ಪಂದ್ಯ

ಮೈಸೂರು ೧೪

ದಿವಂಗತ ಆರ್. ಗೋಪಾಲಸ್ವಾಮಿ ಅಯ್ಯರ್ ಮೆಮೋರಿಯಲ್ ವಾಲಿಬಾಲ್ ಪಂದ್ಯವನ್ನು ನಡೆಸಲು ಒಂದು ಸಮಿತಿ ಏರ್ಪಾಡಾಗಿದೆ. ಶ್ರೀ ಎಫ್. ಸಿ. ದೇವರಾಜ ಅರಸರು ಅಧ್ಯಕ್ಷರಾಗಿಯೂ, ರಾವ್ ಬಹದ್ದೂರ್, ಎಂ. ರಾಮಸ್ವಾಮಯ್ಯನವರು ಉಪಾಧ್ಯಕ್ಷರಾಗಿಯೂ ಅಡ್ವೋಕೇಟ್ ಶ್ರೀ ಕೆ. ಶೇಷಾದ್ರಿಗಳು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ. ಪಂದ್ಯಗಳು ಸೆಪ್ಟೆಂಬರ್ ೩ ತಾರೀಖಿನಿಂದ ಬನುಮಯ್ಯ ಹೈಸ್ಕೂಲಿನ ಆವರಣದಲ್ಲಿ ನಡೆಯುತ್ತವೆ.

ಜೂಜಿಗೆ ಶಿಕ್ಷೆ

ಮಂಡಿಮೊಹಲ್ಲಾ ಚಾಮರಾಜಪೇಟೆಯ ಬೀದಿಯಲ್ಲಿ ರಾಗಬಸವಾಡಿ ಮಹದೇವನೆಂಬುವನ ಮನೆಯಲ್ಲಿ ನಂಜನಗೂಡು ಮುಂತಾದ ಕಡೆಗಳಿಂದ ಬಂದು ೧೦-೮-೪೪ ರಾತ್ರಿ ರಾಜೇಸಾಬು ಎಂಬ ಇಸ್ಪೀಟ್ ಆಟದ ಜೂಜು ನಡೆಸುತ್ತಿದ್ದರೆಂದು ಆರೋಪಿಸಿ, ಮಾದಯ್ಯ ಮುಂತಾಗಿ ೭ ಜನರಿಗೆ ತಲಾ ೨೫ ರೂ. ದಂಡವನ್ನೂ ವಸೂಲುಮಾಡುವುದಕ್ಕೆ ೩೦ ರೂ. ದಂಡವನ್ನೂ ದ್ವಿ|| ನ್ಯಾಯಾಧೀಶರು ಈ ದಿನ ವಿಧಿಸಿದರು.

ರೇಸ್ಕೆ ಪತ್ತೆ

ನಂಜನಗೂಡು ಬಹದ್ದೂರ್ ಛತ್ರದಲ್ಲಿ ಕೃಷ್ಣಶೆಟ್ಟಿ ಎಂಬುವರು ಠಹರಾಯಿಸಿದ್ದಾಗ ಒಂದು ರೇಸ್ಕೆ ಟ್ರಂಕ್ ಕಳುವಾಗಿದ್ದುದನ್ನು ದೇವರಾಜ ಪೋಲೀಸಿನವರು ಪತ್ತೆ ಮಾಡಿದ್ದಾರೆ.

ಮಂತ್ರಿ ಮಂಡಲದ ಸಭೆ

(ಸ್ವಂ.ಸು.ಪ್ರೋ] ಬೆಂಗಳೂರು ೧೪

ಆರೂರು ರಾಜಧಾನಿಯಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಮಂತ್ರಿಮಂಡಲವು ಸಭೆ ಸೇರಿತ್ತು. ಸುಮಾರು ಮೂರು ಗಂಟೆಗಳ ಕಾಲ ಸಮಾಲೋಚನೆ ನಡೆಯಿತು. ಮಿ|| ಮೆಕಾಲ್ಫ್ ರವರ ಸ್ಥಾನದಲ್ಲಿ ಪ್ರೈಸ್ ಕಂಟ್ರೋಲರನ್ನು ನೇಮಕ ಮಾಡುವ ವಿಚಾರ, ಮಿ|| ಜಾರ್ಜ್ ಮ್ಯಾಥ್ಯೂನ್‌ರನ್ನು ಯಾವ ಹುದ್ದೆಗೆ ನಿಯಮಿಸಬೇಕೆಂಬ ವಿಚಾರ, ನಿವೃತ್ತರಾಗಲಿರುವ ಪೂರ್ವಭಾವಿಯಾಗಿ ರಜ ಪಡೆದಿರುವ ಬೆಂಗಳೂರು ಜಿಲ್ಲಾ ಮತ್ತು ಸೆಷನ್ಸ್ ಜಡ್ಜರ ಸ್ಥಾನಕ್ಕೆ ವಕೀಲವೃಂದದಿಂದ ಒಬ್ಬರನ್ನು ನೇಮಕ ಮಾಡುವುದು, ಈ ಮುಖ್ಯ ವಿಚಾರಗಳಲ್ಲಿ ಸಮಾಲೋಚನೆ ನಡೆಯಿತೆಂದು ತಿಳಿದುಬಂದಿದೆ.

ವಿದ್ಯುಚ್ಛಕ್ತಿ ಅನಾಹುತ

ಮೊನ್ನೆ ಮಧ್ಯಾಹ್ನ ವಿಶ್ವೇಶ್ವರಪುರದ ವಿದ್ಯುಚ್ಛಕ್ತಿ ತಂತಿಯ ಮೇಲೆ ಕಾಲಿಟ್ಟು ಸರಸರಾಜು ಇಲಾಖೆಯಲ್ಲಿರುವ ಅಸಿಸ್ಟೆಂಟ್ ಕಮೀಷನರ್ ಶ್ರೀ ಪಿ. ಎ. ಕೃಷ್ಣಸ್ವಾಮಿಯವರ ಪತ್ನಿ ಅನಾಹುತಕ್ಕೆ ಈಡಾಗಿ ಮರಣ ಹೊಂದಿದರು.

ಇಂಜನ್ನುಗಳ ಬಾಯ್ಲರ್ ತಯಾರಿ

ರೈಲ್ವೆ ಇಂಜನ್ನುಗಳಿಗೆ ಬೇಕಾಗುವ ಬಾಯ್ಲರ್‌ಗಳನ್ನು ಇನ್ನು ಮುಂದೆ ಟಾಟಾ ಕಂಪೆನಿಯವರು ತಯಾರಿಸುತ್ತಾರೆ. ಇದಕ್ಕಾಗಿ ಸಂಬಂಧಪಟ್ಟವರು ಗಳೊಡನೆ ಗವರ್ನ್‌ಮೆಂಟಿನವರು ಏರ್ಪಾಡು ಮಾಡಿಕೊಂಡಿದ್ದಾರೆ. ಭಾರತ ಸರ್ಕಾರದವರು ಈ ಬಗ್ಗೆ ಕೆಲಸಗಳನ್ನು ಶೀಘ್ರವಾಗಿ ನಡೆಸುವಂತೆ ಏರ್ಪಡಿಸಿದ್ದಾರೆ.

ವಾರ ಭವಿಷ್ಯ

ತಾ|| ೧೪-೮-೪೪ ರಿಂದ ೨೦-೮-೪೪ರವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ – ಆರೋಗ್ಯ, ಆರ್ಥಿಕ, ಮಾನಸಿಕ ಉತ್ತಮ. ಕೆಟ್ಟವರಾತಿಗೆ ತಪ್ಪದೆ ನಡೆದುಕೊಳ್ಳದೆ ಕಳಂಕ ತಂದುಕೊಳ್ಳಬೇಡಿ. ವ್ಯಾಪಾರ, ನೌಕರಿ, ಪ್ರವಾಸಗಳಲ್ಲಿ ಲಾಭ. ತಾ|| ೧೫-೧೭ ಗಲಾಟೆ

ವೃಷಭ – ಆರೋಗ್ಯ ಉತ್ತಮ. ಆರ್ಥಿಕ, ಮಾನಸಿಕ ಸಾಧಾರಣ. ವ್ಯಾಪಾರ, ಉದ್ಯೋಗಗಳಲ್ಲಿ ರಸ್ತು ಹೀಡೆ. ಪ್ರವಾಸದಲ್ಲಿ [illegible] ತಾ|| ೧೪-೧೮ ಖರ್ಚು.

ಮಿಥುನ – ಆರೋಗ್ಯ ಕೆಡುವಿಕೆ. ಗೃಹ ಸೌಖ್ಯ ಅಲ್ಪ. ಮಾನಸಿಕ ಚಂಚಲ. ಹೆಚ್ಚು ಖರ್ಚು. ಪ್ರವಾಸದಲ್ಲಿ ಪ್ರತಿಕೂಲ. ತಾ|| ೧೬-೧೭ ಖರ್ಚು, ವ್ಯಸನ.

ಕರ್ಕ – ಆರೋಗ್ಯ, ಆರ್ಥಿಕ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಲಾಭ ಮತ್ತು ಹೆಚ್ಚಿನ ಪ್ರತಿಷ್ಠೆ. ಪ್ರವಾಸ ಉತ್ತಮ. ತಾ|| ೧೪-೧೫ ಮಿತ್ರಭೇಟಿ

ಸಿಂಹ – ಆರೋಗ್ಯ, ಮಾನಸಿಕ, ಆರ್ಥಿಕ ಉತ್ತಮ. ವ್ಯಾಪಾರ ನೌಕರಿಗಳಲ್ಲಿ [illegible]. ಪ್ರವಾಸ, ದಾನಧರ್ಮಗಳಲ್ಲಿ ಉತ್ಸಾಹ. ತಾ|| ೧೬-೧೭ ಲಾಭ, ಉತ್ಸಾಹ

ಕನ್ಯಾ – ಆರೋಗ್ಯ ಚೆನ್ನಾಗಿರಲಾರದು. ಆಲಸ್ಯ ತೋರಿದರೂ ಸಹಿಸಲು ಯತ್ನಿಸಿ. ಆರ್ಥಿಕ, ಮಾನಸಿಕ ಸಾಧಾರಣ. ವ್ಯಾಪಾರ, ನೌಕರಿಗಳಲ್ಲಿ ರಸ್ತು ಭಯ. ಪ್ರವಾಸದಲ್ಲಿ ನಷ್ಟ. ತಾ|| ೧೬-೧೮ ಹಾನಿ

ತುಲಾ – ಆರೋಗ್ಯ, ಮಾನಸಿಕ, ಆರ್ಥಿಕ ಸ್ಥಿತಿ ತೃಪ್ತಿದಾಯಕ. ವ್ಯಾಪಾರ, ನೌಕರಿಗಳಲ್ಲಿ ರಸ್ತು ಹೀಡೆ. ವಿದ್ಯಾಭ್ಯಾಸದಲ್ಲಿ ಆಲಸ್ಯ. ತಾ|| ೧೭-೧೮ ತ್ರಾಸು, ಹಾನಿ

ವೃಶ್ಚಿಕ – ಆರೋಗ್ಯ, ಆರ್ಥಿಕ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಹೆಚ್ಚು ಲಾಭ. ಪ್ರವಾಸದಲ್ಲಿ ಯಶ. ತಾ|| ೧೪-೧೭ ವ್ಯವಸ್ಥಿತ ಭೋಜನ.

ಧನು – ಆರೋಗ್ಯ, ಧನ, ಮಾನಸಿಕ ಸ್ಥಿತಿಯು ಉತ್ತಮ. ಪಂಡಿತ, ಸಜ್ಜನರ ಸಂದರ್ಶನ. ವ್ಯಾಪಾರ, ನೌಕರಿಗಳಲ್ಲಿ ಲಾಭ, ರಸ್ತು ನಾಶ. ತಾ|| ೧೫-೧೭ ವಿ[illegible]ತಿ, ಖರ್ಚು.

ಮಕರ – ದೇಹಸ್ಥಿತಿ ಕಡೆ ಜಾಗರೂಕತೆಯಿರಲಿ. ಬಂಧು ದುಃಖಕ್ಕೆ ತಕ್ಕ ಖರ್ಚು. ವ್ಯಾಪಾರ, ನೌಕರಿಗಳಲ್ಲಿ ಭೀತಿ. ತಾ|| ೧೭-೧೮ ಸಂತೋಷದಿಂದ ಯಾತ್ರೆ.

ಕುಂಭ – ಆರೋಗ್ಯ, ಸಾಧಾರಣ. ಉದ್ಯೋಗ, ವ್ಯಾಪಾರಗಳಲ್ಲಿ [illegible] ಮಾನಸಿಕ [illegible] ವಿದ್ಯಾಭ್ಯಾಸದಲ್ಲಿ ಪ್ರಗತಿ [illegible]

ಮೀನ – ಆರೋಗ್ಯ [illegible] ಆರ್ಥಿಕ, ಮಾನಸಿಕ [illegible] ಉದ್ಯೋಗ, ವ್ಯಾಪಾರ, ಪ್ರವಾಸಗಳಲ್ಲಿ [illegible] ವಿದ್ಯಾಭ್ಯಾಸ, [illegible]

Edited, printed and published by A. R. Nagarajan, at the Sadhvi Press, D. Subbiah Road, Mysore

ಗೊಬ್ಬರವನ್ನು ಬೀದಿಗೆ ಎಸೆಯಕೂಡದು

ಬಂಗಾಳ ಸರ್ಕಾರದವರು ಒಂದು ಆಜ್ಞೆ ಹೊರಡಿಸಿ ಬೀದಿಗಳಿಗಾಗಲೀ ಅಥವಾ ಬೀದಿಯ ತೊಟ್ಟಿಗಳಿಗಾಗಲೀ ಯಾರೂ ಗೊಬ್ಬರವನ್ನೂ ಸಿಪ್ಪೆಯನ್ನೂ ಹಾಕಕೂಡದೆಂದು ನಿಷೇಧಿಸುವವರಾಗಿದ್ದಾರೆ

೧೨ ಸಹಸ್ರ ದೋಣಿಗಳು

ಹೆಚ್ಚಾಗಿ ಬೆಳೆದ ಸ್ಥಳಗಳಿಂದ ಬೆಳೆಯಿಲ್ಲದ ಸ್ಥಳಗಳಿಗೆ ಧಾನ್ಯಗಳನ್ನು ಸಾಗಿಸಲು ಅನುಕೂಲವಾಗಲು, ಬಂಗಾಳಾ ಸರಕಾರದವರು ೧೨ ಸಹಸ್ರ ದೋಣಿಗಳನ್ನು ಕಟ್ಟಲು ಆಜ್ಞೆಯಿತ್ತಿದ್ದಾರೆ.

ಗೌರೀ ಹಬ್ಬದ ಪ್ರಯುಕ್ತ

ಎಸ್. ಪಿ. ರಾಮರಾವ್ ಅಂಗಡಿಯವರು ಸ್ಪೆಸಿಕಲ್ ಮಾಲೆ ತರುವ ಹೊಲಿದು ಸಿದ್ಧ ಪಡಿಸಿದ ಉಡುಪುಗಳನ್ನು ಕೊಂಡುಕೊಳ್ಳಿರಿ. ನಂಬಿಕೆಯಿಂದ ವ್ಯಾಪಾರ ಮಾಡುತ್ತಾರೆ

'ಬಾ'

ಈಗಾಗಲೇ ಕಸ್ತೂರಿ ಬಾ ರವರ ವಿಷಯವಾಗಿ ಹಲವು ಲೇಖಕರು ಪುಸ್ತಕಗಳನ್ನು ಬರೆದಿದ್ದಾರೆ. ಅದರಂತೆ ಮೈಸೂರು ಮಹಾಜನ ಹೈಸ್ಕೂಲ್ ಉಪಾಧ್ಯಾಯರಾದ ಶ್ರೀಮಾನ್ ನಾಡಿಗ ಕೃಷ್ಣಮೂರ್ತಿಯವರೂ ಒಂದು ಪುಸ್ತಕ ಬರೆದು ಕಾಣಿಕೆ ಅರ್ಪಿಸಿದ್ದಾರೆ. ಶ್ರೀ ಕೃಷ್ಣಮೂರ್ತಿಯವರು ಸೇವಾಗ್ರಾಮಕ್ಕೆ ಹೋಗಿ, ಬಾ ದರ್ಶನ ಪಡೆದ ಅನುಭವದ ಚಿತ್ರ, ಬಾ ರವರ ಮೊಮ್ಮಗ ಕಾಂತಿಲಾಲ್ ಗಾಂಧೀಯವರ ಹೇಳಿಕೆಗಳನ್ನು ಸಂಗ್ರಹಿಸಿ ಈ ಪುಸ್ತಕ ಬರೆದಿದ್ದಾರೆ. ಭಾಷೆ ಗಂಭೀರವಾಗಿ ಚೆನ್ನಾಗಿದೆ. ಬಾ ರವರ ಜೀವನದ ಹಲ ಕೆಲವು ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ಬೆಲೆ [illegible] ಪುಟ. ಬೆಲೆ ನಾಲ್ಕಾಣೆ. ಅವರ ಶಾಲೆಯ ಸಾಹಿತ್ಯ ಸಂಘದವರು ಪ್ರಕಟಿಸಿದ್ದಾರೆ. ಎಲ್ಲರೂ ಓದಬೇಕಾದುದು. —ಅ. ಸು.

ಗೋವಧೆಯ ನಿಷೇಧ

ಕೂಚ್ ಬಿಹಾರ್ ಸಂಸ್ಥಾನದಲ್ಲಿ ಆಕಳು, ಎತ್ತು, ಗೂಳಿ, ಕರು ಮುಂತಾಗಿ ಯಾವ ದನಕರುಗಳನ್ನೇ ಆದರೂ ಕೊಲ್ಲಲಾಗದೆಂದು ನಿಷೇಧಿಸಲಾಗಿದೆ.

ಮೈಸೂರು ರೇಷ್ಮೆ ಹತೋಟಿ ಆರ್ಡರ್ 1944

C 2 C 14–44–45 ತಾ|| 9-8-44

ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ಮತ್ತು ಸಂಬಂಧಪಟ್ಟವರಿಗೂ ತಿಳಿಯಪಡಿಸುವುದೇನೆಂದರೆ :—

ಕೈಯಿಂದ ಹುರಿ ಮಾಡುವ ಮತ್ತು ಕೈಯಿಂದ ರೇಷ್ಮೆ ಬಟ್ಟೆ ನೇಯುವ ಬಗ್ಗೆ ಲೈಸನ್ಸನ್ನು ಪಡೆಯುವ ಅವಧಿಯನ್ನು ಮತ್ತೆ ೧೫-೮-೪೪ ರಿಂದ ೩೧-೮-೪೪ ರ ವರೆಗೆ ಹೆಚ್ಚಿಸಿದೆ

(ಸಹಿ) ಹೆಚ್. ಎಸ್. ಗೋವಿಂದರಾವ್
ಸಿಲ್ಕ್ ಕಂಟ್ರೋಲರ್.

ನಿಮಗೆ ಯಾವುದು ಅವಶ್ಯಕ?

ಸುಖವಿಲ್ಲದ ಪ್ರಯಾಣವೆ, ಅಥವಾ ಸೌದೆ, ಉಡುಪು, ಆಹಾರವೆ?



ರೈಲ್ವೆಯವರಿಗೆ ಈಗ ಕೆಲಸವು ಮಿತಿಮೀರಿರುವುದರಿಂದ, ಅವರು ಜನರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು ಮತ್ತು ಯುದ್ಧಕ್ಕೆ ಪೂರ್ವದಲ್ಲಿದ್ದಹಾಗೆ ಜನರಿಗೆ ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವುದು ಎರಡರ ಭರವಸೆಯನ್ನು ಕೊಡುವುದು ಅವರಿಗೆ ಸಾಧ್ಯವಿಲ್ಲ.

ಜನರು ಇವೆರಡರೊಳಗೆ ಯಾವುದಾದರೊಂದನ್ನು ಪಡೆಯಬಹುದೇ ಹೊರತು ಎರಡನ್ನೂ ಪಡೆಯಲಾರರು. ಆದರೆ, ಆಹಾರಪದಾರ್ಥ, ಬಟ್ಟೆ, ಸೌದೆ ಮುಂತಾದ ಉಪಯುಕ್ತ ಸಾಮಗ್ರಿಗಳನ್ನು ಒದಗಿಸಿಕೊಡುವುದು, ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವುದಕ್ಕಿಂತಲೂ ಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದ ವಿಷಯವೆ. ನೀವು ಎಂದಾದರೂ ಆಹಾರ ಸಾಮಗ್ರಿಗಳ ಕೊರತೆಯಿರುವ ಪ್ರದೇಶದಲ್ಲಿ ಇದ್ದಿದ್ದರೆ, ಆ ಪ್ರದೇಶಕ್ಕೆ ಹೋದಿರುವ ಜನರಿಗಾಗಿ ಸಾಮಾನ್ಯವಾಗಿ ಅತ್ಯಾವಶ್ಯಕವಾದ ಆಹಾರಪದಾರ್ಥಗಳಿಂದ ತುಂಬಿ ಬರುತ್ತಿರುವ ರೈಲುಗಾಡಿಗಳು ಅಲ್ಲಿಯ ಜನರಿಗೆ ಉಂಟುಮಾಡತಕ್ಕ ಪರಿಣಾಮವು ಏನೆಂಬುದು ನಿಮ್ಮ ಅನುಭವಕ್ಕೆ ಬರುವುದು.

ಹೌದು! ಜನರಿಗೆ ಪ್ರಯಾಣವು ಅಷ್ಟು ಮುಖ್ಯವಾದದ್ದಲ್ಲ. ಅದರಿಂದಲೇ ಆಹಾರ ಪದಾರ್ಥಗಳಿಗಾಗಿ [illegible] ಗಾಡಿಗಳು ಕೇವಲ [illegible] ಈ ಕಾರಣದಿಂದಲೇ ಈಗಿನ ಪ್ರಯಾಣದಲ್ಲಿ ಅಷ್ಟು [illegible] ಮತ್ತು ತೊಂದರೆ. ಅದು ಕಾರಣ ನೀವು [illegible] ಯವರಿಗೆ ಮುಖ್ಯವಾದ [illegible] ದರೆ, ನೀವು ನಿಮ್ಮ ಮನೆಗಳಲ್ಲಿಯೇ [illegible]

[illegible]

AAA 652 KN

[illegible]

ಸಂಪುಟ ೩] ಮಂಗಳವಾರ ೧೫--೮--೪೪ [ಸಂಚಿಕೆ ೧೯

ಲಂಡನ್ನಿನಲ್ಲಿ ಘಂಟೆಗೆ ೭೦೦ ಮನೆಗಳ ನಾಶ

೬ ವಾರದಲ್ಲಿ ಮತ್ತೆ ಧಾಳಿಮಾಡುವುದಾಗಿ ಹಿಟ್ಲರನ ಭರವಸೆ

ಚಾಮರಾಜನಗರದ ದೊಂಬಿ ಮೊಕದ್ದಮೆಯಲ್ಲಿ ತೀರ್ಪು

ಚಾಮರಾಜನಗರದ ದೊಂಬಿ ಮೊಕದ್ದಮೆ

೩೦ ಜನ ಮುಸ್ಲಿಮರು ಸೆರ್ಷನ್‌ಗೆ ; ಉಪ್ಪಲಿಗರೆಲ್ಲರ ಬಿಡುಗಡೆ

ಮೈಸೂರು ೧೫

ಈ ದಿನ ಚಾಮರಾಜನಗರದ ದೊಂಬಿ ಮೊಕದ್ದಮೆಯ ವಿಚಾರಣೆ ಮುಗಿದು ಸ್ಪೆ॥ ಫ॥ ಮ್ಯಾಜಿಸ್ಟ್ರೇಟರಾದ ಶ್ರೀ ಸಿ.ಬಿ ಶ್ರೀನಿವಾಸರಾಯರು ೩೦ ಜನ ಮುಸ್ಲಿಮರಲ್ಲಿ ಹತ್ತು ಜನರ ಬಿಡುಗಡೆ ೨೫ ಜನ ಉಪ್ಪಲಿಗರಲ್ಲಿ ಎಲ್ಲರನ್ನೂ ಬಿಡುಗಡೆಮಾಡಿ ೩೦ ಜನ ಮುಸ್ಲಿಮರನ್ನು ಸೆರ್ಷನ್‌ಗೆ ಕಮಿಟ್ ಮಾಡಿದರು. ಅಪಾದಿತರ ಮೇಲೆ ಅಕ್ರಮಕೂಟ, ಕಲ್ಲು ಎಸೆಯುವುದು, ದೊಣ್ಣೆ, ಕತ್ತಿ, ಬಂದೂಕುಗಳನ್ನು ಹಿಡಿದುಕೊಂಡು ದೊಂಬಿ ಮಾಡುವುದು, ಮನೆಗಳಿಗೂ ಆಹಾರ ಪದಾರ್ಥಗಳಿಗೂ ಬೆಂಕಿಹಾಕುವುದ, ಮುಂತಾದ ಅಪಾದನೆ ಮಾಡಲಾಗಿತ್ತು. ಮುಸ್ಲಿಮರ ಮೇಲಿನ ಮೊಕದ್ದಮೆಯಲ್ಲಿ ೫ ಸಾಕ್ಷಿಗಳೂ, ಉಪ್ಪಲಿಗರ ಮೇಲಿನ ಮೊಕದ್ದಮೆಯಲ್ಲಿ ೨೦ ಸಾಕ್ಷಿಗಳೂ ವಿಚಾರಣೆಮಾಡಲ್ಪಟ್ಟರು.

ತಾ॥ ೨೧-೫-೪೪ರಲ್ಲಿ ಚಾಮರಾಜನಗರದಲ್ಲಿ ಉಪ್ಪಲಿಗರ ಪುಟ್ಟಸೆಟ್ಟಿ ಎಂಬುವನು ತನ್ನ ಕೋಟೆದಲ್ಲಿ ಮೇಯುತ್ತಿದ್ದ ದನವೊಂದನ್ನು ದೊಡ್ಡಿಗೆ ಹೊಡೆಯುವಾಗ ಅವನಿಗೂ ಅಬ್ದುಲ್‌ಸತ್ತಾರ್ ಎಂಬುವನಿಗೂ ಘರ್ಷಣೆಯುಂಟಾಗಿ ಕ್ರಮೇಣ ಅಂದು ರಾತ್ರಿ ಭಾರಿ ದೊಂಬಿ ನಡೆದು, ಆ ಸಂದರ್ಭದಲ್ಲಿ ೩೦೦-೪೦೦ ಮುಸ್ಲಿಮರು ಗುಂಪುಕೂಡಿ ಎಂಟು ಮನೆ ೧ ಅಂಗಡಿ ದವಸ ಧಾನ್ಯ ಸುಟ್ಟವಲ್ಲದೆ, ೧೬ ಜನ ಉಪ್ಪಲಿಗರಿಗೂ ೫ ಜನ ಮುಸ್ಲಿಮರಿಗೂ ಗಾಯವಾದುದೂ ಹಿಂದೆಯೇ ತಿಳಿಸಲ್ಪಟ್ಟಿದೆ.

ನ್ಯಾಯಾಧೀಶರು ಈ ಮೊಕದ್ದಮೆಯ ಆಜ್ಞೆಯಿಸಿಯುವಾಗ ಮೊಕದ್ದಮೆಯು ಅನಾವಶ್ಯಕವಾಗಿ ಎಳೆಯಲ್ಪಟ್ಟಿತೆಂದೂ, ಪ್ರಾ॥ ಪರ ವಿಚಾರಣೆಯು ೧೫ ದಿನಗಳು ಒಟ್ಟು॥ ಗಂಟೆಕಾಲ ನಡೆಯಿತೆಂದೂ, ಮುಸ್ಲಿಮರು ನೂರಾರು ಜನ ಗುಂಪುಕೂಡಿ ಮನೆಗಳಿಗೆ ಬೆಂಕಿಹಚ್ಚಿ ಪ್ರಾಣಕ್ಕೆ ಅಪಾಯಕರವಂಥ ದೃಶ್ಯವು ಅತಿ ಭಯಂಕರ ಮತ್ತು ತಡೆಯಲು ಸಾಧ್ಯವಿಲ್ಲದ್ದಾಗಿತ್ತೆಂದೂ, ಆ ಸಂದರ್ಭದಲ್ಲಿ ಕೇವಲ ಅಲ್ಪ ಮಂದಿ ಉಪ್ಪಲಿಗರು ಹೊಡೆದಾಡಿದ್ದರೂ ಅದರಿಂದ ಯಾವ ಅಂಥ ದುಷ್ಪರಿಣಾಮವೂ ಆಗಿಲ್ಲ, ಕೇವಲ ಆತ್ಮರಕ್ಷಣಾರ್ಥವೆಂದೂ ಆದ್ದರಿಂದ ಅವರ ಮೇಲಿನ ಅಪಾದನೆಯು ಗಮನಾರ್ಹವಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ.

ಸೆರ್ಷನ್‌ಗೆ ಕಮಿಟ್ ಆದ ಅಪಾದಿತರುಗಳನ್ನು ಕಲಂ ೧೧೦೦ ರೂ ಮುಚ್ಚಳಿಕೆ ಮತ್ತು ೧೧೦೦ ರೂ ನ ೨ ಜಾಮೀನಿನ ಮೇಲೆ ಬಿಡಲಾಗಿದೆ. ಈ ಬಗ್ಗೆಯೂ ಮತ್ತು ಸಾಕ್ಷಿಲಿಸ್ಟ್ ವಗ್ಗೆರೆಗೂ ೮ ದಿನಗಳ ಕಾಲ ಅವಕಾಶ ಕೊಡಲಾಗಿದೆ. ಅಬ್ದುಲ್ ಖಾದರ್ ಎಂ ಎ ಬಿ ಎಲ್ ರವರ ಸನ್ನು ಮಾತ್ರ ವಿಮ್ಯಾಂಡಿನಲ್ಲಿಡಲಾಗಿದೆ.

ಕಸ್ತೂರಿ ಬಾ ನಿಧಿ

ಈ ನಿಧಿಗೆ ಮಿಸ್ಟರ್ ಸಹೋದರ ಸಂಘದ ಮೂಲಕ ಮಂಗಳೂರು, ಗಣೇಶ ಬೀಡಿ ಕಾರ್ಖಾನೆಯವರಿಂದ ೭ ಂದು ನೂರು ರೂ ಚಂದಾ ಬಂದಿರುತ್ತದೆ.

ಲಂಡನ್ನಿನಲ್ಲಿ ಗಂಟೆಗೆ ೭೦೦ ಮನೆ ನಾಶ

ಗಂಟೆಯೊಂದಕ್ಕೆ ೭೦೦ ಮನೆಗಳು ಹಿಟ್ಲರನ ಸಾರಥಿ ಇಲ್ಲದ ವಿಮಾನಗಳಿಂದ ನಾಶವಾಗುತ್ತಿವೆಯೆಂದು ಬ್ರಿಟಿಷ್ ರಾಯಭಾರಿ ಲಾರ್ಡ್ ಹ್ಯಾಲಿಫಾಕ್ಸ್‌ರವರು ವಾಷಿಂಗ್‌ಟನ್ ಪಟ್ಟಣದಲ್ಲಿ ತಿಳಿಸಿದರು. ಲಂಡನ್ ನಿವಾಸಿಗಳನ್ನು ಹೊರಗಳುತ್ತಾ, ಈ ಹೊಡೆತದಿಂದ ಯಾವ ಕೆಟ್ಟ ಪ್ರಭಾವವೂ ಆಗಿಲ್ಲವೆಂದು ತಿಳಿಸುತ್ತಾರೆ.

ನಾರ್ಮಂಡಿಯಲ್ಲಿ ಜರ್ಮನರು ಹಿಮ್ಮೆಟ್ಟಿದರು

ಅಗಾಧವಾದ ಸೇನೆಯ ಸಾಮಗ್ರಿಗಳನ್ನು ಹೊತ್ತು, ಹಗಲಿನಲ್ಲೇ ಹಿಮ್ಮೆಟ್ಟಲು ಜರ್ಮನ್ ಸೇನೆಗಳ ನಾಯಕರ ವಾನ್ ಕ್ಲೂಗರು ಆಜ್ಞಾಪಿಸಿದ್ದಾರೆ. ೩೦ ಮೈಲಿಗಳಲ್ಲಿ ಆದರವಾಗಿರುವ ಸೇನೆಗಳಿಗೆ ಎರಡು ಮಾರ್ಗಗಳು ಮಾತ್ರ ಹಿಮ್ಮೆಟ್ಟಲು ಅನುಕೂಲವಾಗಿದೆ. ಮಿತ್ರ ವಿಮಾನಗಳು ಹಿತರುಗಿ ಓಡುತ್ತಿರುವ ಜರ್ಮನರನ್ನು ಮರ್ದನ ಮಾಡುತ್ತಿವೆ.

ಜರ್ಮನ್ ಸೇನೆಗಳ ಪಡೆ

ಬ್ರಿಟಿಷ್ ಮತ್ತು ಕೆನಡಾ ಸೇನೆಗಳು ಉತ್ತರದಲ್ಲೂ, ೩ನೆ ಅಮೆರಿಕನ್ ಸೇನೆ ದಕ್ಷಿಣದಲ್ಲೂ ನುಗ್ಗುತ್ತಿರುವ ವೇಗದಲ್ಲಿ ಜರ್ಮನಿಯ ಹನ್ನೆರಡು ಸೇನೆಗಳು ಇವರ ಬಾಲದಲ್ಲಿ ಸಿಕ್ಕುವ ಭೀತಿ ಇದೆ. ಈಗ ಮಿತ್ರರು ಅರ್ಜೆಂಟಾನ್ ಪಟ್ಟಣವನ್ನು ವಶಪಡಿಸಿದ್ದಾರೆ.

ಫಿನ್‌ಲೆಂಡ್ ಶಾಂತಿಭಿಕ್ಷೆಯೇ?

ಸ್ಟಾಕ್‌ಹೋಂ ಸುದ್ದಿಪ್ರಕಾರ ಫಿನ್‌ಲೆಂಡಿನಲ್ಲಿ ಮತ್ತೆ ರಾಜತಾಂತ್ರಿಕ ಚಟುವಟಿಕೆ ಜಾಸ್ತಿಯಾಗಿದೆ. ಸ್ವೀಡಿಷ್ ಪತ್ರಿಕೆ ಫಿನ್ನಿಷ್ ರಾಯಭಾರಿಯು ಫಿನ್‌ಲೆಂಡಿನ ಅಧ್ಯಕ್ಷರನ್ನು ಕಂಡಿದ್ದರು. ಆ ಸಮಯದಲ್ಲಿ ವಿದೇಶಾಂಗ ಮಂತ್ರಿಯೂ ಇದ್ದರು. ಮುಂದೆ ಇದೇ ರಾಯಭಾರಿಯು ರಷ್ಯನರೊಂದಿಗೆ ಕಲೆತು ಮಾತನಾಡುವರೆಂದು ಕೆಲವರು ನಂಬುತ್ತಾರೆ.

ಗಾಂಧಿ-ಜಿನ್ನಾ ಸಂಭಾಷಣ

ಗಾಂಧಿ-ಜಿನ್ನಾ ಸಂಭಾಷಣೆಗಳು ಬಹುಶಃ ಶನಿವಾರ ನಡೆಯುವುವು. ಅದಕ್ಕಾಗಿ ಗಾಂಧೀಜಿಯವರು ಬೊಂಬಾಯಿಗೆ ಪ್ರಯಾಣ ತೆರಳುವರು. ಸಂಭಾಷಣೆ ಎರಡು ಅಥವಾ ಮೂರು ದಿನಗಳಾಗಬಹುದು.

ಆರ್ಯ ವೈಶ್ಯ ಸಮ್ಮೇಳನಗಳು

ಮೈಸೂರು ೧೫

ಮೈಸೂರು ವೈಶ್ಯ ಪತ್ರಿಕೆಯ ನಾಲ್ಕನೆಯ ವರ್ಧಂತ್ಯುತ್ಸವದ ಸಲುವಾಗಿ ರಾಜಧಾನಿಗೆ ದಯಮಾಡಿಸಿದ್ದ ಮದರಾಸ್ ಡೆಪ್ಯುಟಿ ಮೇಯರ್ ಶ್ರೀ ಭಾಷ್ಯಂ ಮತ್ತು ದಕ್ಷಿಣ ವೈಶ್ಯ ಪತ್ರಿಕಾ ಸಂಪಾದಕರಾದ "ಕವಿ ಶಿರೋಮಣಿ" ಶ್ರೀ ಜನ್ನಾಜ ಸಬ್ಬಯ್ಯಗುಪ್ತರು ಭಾನುವಾರ ಮಧ್ಯಾಹ್ನ ಕೃಷ್ಣರಾಜ ನಗರಕ್ಕೆ ಭೇಟಿ ಇತ್ತರು. ಭೋಜನಾನಂತರ ಮೈಸೂರು ಸಂಸ್ಥಾನದ ವೈಶ್ಯ ಯುವಜನ ಮಹಾಸಭೆಯ ಕೇಂದ್ರ ಸಮಿತಿಯ ಸಭೆ ನಡೆಯಿತು. ಬರುವ ದಸರಾ ಕಾಲದಲ್ಲಿ ಮೈಸೂರಿನಲ್ಲಿ ಅಖಿಲ ಭಾರತ ಆರ್ಯ ವೈಶ್ಯ ಕವಿಪಂಡಿತ ಸಂಪಾದಕರ ಸಮ್ಮೇಳನವನ್ನೂ ಆರ್ಯವೈಶ್ಯ ಪುರೋಹಿತ ಸಮ್ಮೇಳನವನ್ನೂ ನಡೆಸಬೇಕೆಂದು ತೀರ್ಮಾನಿಸಲಾಯಿತು. ಸಂಜೆ ಸ್ಥಳೀಯ ವೈಶ್ಯ ಯುವಜನ ಮಹಾಸಭೆಯವರು ಶ್ರೀ ಲಕ್ಷ್ಮೀನರಸಿಂಹ ಸೋಮಯಾಜಿಗಳ ಜಯಂತ್ಯುತ್ಸವವನ್ನು ಏರ್ಪಡಿಸಿದರು. ನಗರದ ಪ್ರಮುಖರನೇಕರು ಸಭೆಯ ನಡೆಸಿದರು. ಉತ್ಸವವು ಯಶಸ್ವಿಯಾಗಿ ನಡೆಯಿತು.

ಮಹಾದೇವ ದೇಸಾಯಿ ದಿನಾಚರಣೆ

ನಾಳೆ ಬುಧವಾರ ಸಂಜೆ ೬-೩೦ಕ್ಕೆ ದೇಶೀಯ ವಿದ್ಯಾಶಾಲೆಯಲ್ಲಿ ದಿವಂಗತ ಮಹದೇವ ದೇಸಾಯಿಯವರ ದಿನವು ಆಚರಿಸಲ್ಪಡುತ್ತದೆ. ಶ್ರೀ ಎಂ ಎಸ್ ನರಸಿಂಹರು ಅಧ್ಯಕ್ಷತೆ ವಹಿಸುವರು. ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ, ಪಿ ಆರ್ ಬ್ರಹ್ಮಾನಂದರವರು ಭಾಷಣ ಮಾಡುತ್ತಾರೆ.

ಫುಟ್‌ಬಾಲ್

ಅಖಿಲ ಭಾರತ ಫುಟ್‌ಬಾಲ್ ಸಂಧ್ಯೆಗಳ ಆಶ್ರಯದಲ್ಲಿ ನೆನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ಬೆಂಗಳೂರು ಮುಸ್ಲಿಂ ಕ್ಲಬ್ಬಿಗೂ ಮೈಸೂರು ಮಹಾರಾಜ ಸ್ಪೋರ್ಟಿಂಗ್ ಕ್ಲಬ್ಬಿಗೂ ನಡೆದ ಪಂದ್ಯವು ಗೋಲುಗಳಾಗದೆ ಡ್ರಾ ಆಯಿತು.

ಬೈಸ್ಕಲ್ ಕಳವಿನಲ್ಲಿ ಬಂಧನ

ಏಕಾಮ್ ಸೂರ್, ರಾಜ್, ಬಸವರಾಜ್ ಎಂಬುವವರನ್ನು ಬೈಸ್ಕಲುಗಳ ಕಳವಿನ ಸಂಬಂಧದಲ್ಲಿ ದೇವರಾಜ ಪೋಲೀಸರು ಬಂಧಿಸಿದ್ದಾರೆ.

೬ ವಾರದಲ್ಲಿ ಹಿಟ್ಲರ್ ಧಾಳಿ

ಇಟಲಿಯಲ್ಲಿ ಹಿಮ್ಮೆಟ್ಟುತ್ತಿರುವ ಸೇನೆಗಳನ್ನು ಹುರಿದುಂಬಿಸಲು, ಹಿಟ್ಲರರು ಒಂದು ಘೋಷಣೆಯನ್ನು ಹೊರಡಿಸಿ, ಆರು ವಾರಗಳಲ್ಲಿಯೇ ಜರ್ಮನಿಯ ಯುದ್ಧ ಯಂತ್ರವು ಶತ್ರುಗಳ ಮೇಲೆ ಧಾಳಿಮಾಡ ಶಕ್ತವಾಗುವುದೆಂದು ಆವಾ ಭಾವನೆಯನ್ನು ಸೂಚಿಸಿದ್ದಾರೆ.

ಫಿನ್‌ಲೆಂಡನ್ನು ಬಿಡುವರೆ ?

ಜರ್ಮನ್ ಸೇನೆಗಳು ಫಿನ್‌ಲೆಂಡನ್ನು ಬಿಡುವ ಸೂಚನೆಗಳಿವೆ, ಎಂದು ಸ್ವೀಡಿಷ್ ಪತ್ರಿಕೆಯು ತಿಳಿಸುತ್ತದೆ.

ಹತ್ತು ರೂ. ಹೊಸ ನೋಟು

ಈ ಹೊಸ ಹತ್ತು ರೂಪಾಯಿನ ನೋಟುಗಳು ಚಲಾವಣೆಗೆ ಸದ್ಯದಲ್ಲಿ ಬರಲಿವೆ.

ಗಾಂಧಿ ಜಾತಕ ಫಲ

ಜುಲೈ ೨೮ನೇ ತಾರೀಖಿನಿಂದ ಮುಂದಿನ ಏಪ್ರಿಲ್ ೩ ರವರೆಗೆ ಗಾಂಧೀಜಿಯವರ ಯಶಸ್ಸು ಹೆಚ್ಚುತ್ತದೆ. ಅವರು ಯಾವ ಕಾರ್ಯಸಾಧನೆಯನ್ನು ಮಾಡಬೇಕೆಂದು ಉದ್ದೇಶಿಸಿದರೂ ಅದು ಜಯಪ್ರದವಾಗುತ್ತದೆ—ಎಂದು, ಫೈಜಾಬಾದಿನ ಜ್ಯೋತಿಷ್ಯ ಶಾಸ್ತ್ರಜ್ಞರೊಬ್ಬರು ಗಾಂಧೀಜಿಯವರ ಜಾತಕವನ್ನು ತಿಳಿಸಿದ್ದಾರೆ.

ರುಮಾಲಿನ ನಿರ್ಬಂಧ ; ಸಭಾ ಬಹಿಷ್ಕಾರ

ಜಮಖಂಡಿ ಸಂಸ್ಥಾನದ ಶಾಸನ ಸಭಾ ಸದಸ್ಯರು ಟೋಪಿಗಳನ್ನು ಹಾಕಿಕೊಳ್ಳದೆ ರುಮಾಲು ಧರಿಸಿಯೇ ಬರಬೇಕೆಂದ ನಿರ್ಬಂಧ ಆಜ್ಞೆ ಬಂದದ್ದರಿಂದ ಆ ಸಭೆಯಲ್ಲಿ ಕಳೆದ ರಾಜರು ಭಾಷಣಮಾಡುವಾಗ ೧೫ ಜನ ಚುನಾಯಿತ ಸದಸ್ಯರು ಹಾಜರಿರಲಿಲ್ಲ.

ಸಿರಿಯಾಪಟ್ಟಣದ ಅಮಲ್ದಾರ್

ಅನೇಕಲ್ ತಾ॥ ಅಮಲ್ದಾರರಾಗಿದ್ದ ಶ್ರೀಮಾನ್ ಹೆಚ್. ಡಿ ಕೃಷ್ಣಯ್ಯ ಎಂಬುವರು ನಿನ್ನೆ ಸಿರಿಯಾಪಟ್ಟಣದ ತಾ॥ ಅಮಲ್ದಾರರಾಗಿ ಛಾರ್ಜ್ ತೆಗೆದುಕೊಂಡರು.

ನಿಧನ

ನಂಜನಗೂಡಿನಲ್ಲಿ ಮುನ್ಸೀಫರಾಗಿದ್ದ ಶ್ರೀಮಾನ್ ಕೆ ವಿ ರಾಮರಾಯರು ನಿನ್ನೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

LATEST NEWS

ಖಾಸಗಿ ಮಂತ್ರಿಗಳಿಗೆ ಪೆನ್ಷನ್

ಸ್ವಂ.ಸು.ತಂತಿ] ಬೆಂಗಳೂರು ೧೫

ಖಾಸಗಿ ಮಂತ್ರಿಗಳು ನಿವೃತ್ತರಾದ ಮೇಲೆ ಅವರಿಗೆ ವಿಂಚಣಿವೇತನ ಕೊಡುವ ಅಂಶವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂದು ಗೊತ್ತಾಗಿದೆ.

ಶಾಸನ ಸಭಾ ಸದಸ್ಯರ ಭತ್ಯ

ಶಾಸನ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳಿಗೆ ಅಧಿವೇಶನದ ದಿನಗಳಲ್ಲಿ ಈಗ ಕೊಡುವ ದಿನದ ಭತ್ಯ ಮತ್ತು ಪ್ರಯಾಣದ ಭತ್ಯವನ್ನು ಕೊಡಲು ಸರ್ಕಾರದ ಆಜ್ಞೆಯಾಗಿದೆ. ಇದರಿಂದ ಒಟ್ಟು ರೂ ಹೆಚ್ಚಿನ ವೆಚ್ಚವು ಆಗಬಹುದು.

ಟ್ರೆಂಚುಗಳನ್ನು ತೆಗೆಯಲು ಅಸ್ತ್ರ

ಬ್ರಿಟಿಷರು ಸೈನ್ಯಕ್ಕಾಗಿ ಯುದ್ಧಕ್ಷೇತ್ರಗಳ ಸ್ಥಿರ ಭೂಮಿಯಲ್ಲಿ ಟ್ರೆಂಚುಗಳನ್ನು ತೆಗೆಯಲು ಸಾಧಕವಾದ ಯಂತ್ರವೊಂದನ್ನು ನಿರ್ಮಿಸಿದ್ದಾರೆ. 'ನೆಲ್ಲಿಯ' ಎಂದು ಅದಕ್ಕೆ ಹೆಸರು. ೩ ಅಡಿ ಆಳ, ೭ ಅಡಿ ಅಗಲ, ೬೦೦ ಅಡಿ ಉದ್ದವುಳ್ಳ ಟ್ರೆಂಚನ್ನು ಇದು ಒಂದೇ ಒಂದು ಘಂಟೆಯಲ್ಲಿ ತೆಗೆಯಬಲ್ಲುದು.

ಚರ್ಚಿಲರ ಪ್ರಯಾಣ ತಾತು

ಚರ್ಚಿಲರ ಉಡುಪುಗಳು ಚರ್ಮಗಳ ... ಪ್ರಯಾಣ ಹತ್ತಿರ ... ಹೋಗುತ್ತಿವೆ. ಆ ಸ್ಥಿತಿ ಎರಡು ಸಲ ... ಪರೀಕ್ಷೆ ಮಾಡಿದಾಗ ಅವುಗಳ ... ಕಾಣಿಸಿಕೊಂಡಿತು. ಆದರ ಭಾಗಕ್ಕೆ ದೊಡ್ಡ ತೇಪೆ ಯನ್ನು ಹಾಕಬೇಕಾಯಿತು.

ಸೋವಿಯೇಟರ ಇಚ್ಛೆಯಂತೆ ನಡೆದಿಲ್ಲ

ಪೋಲೆಂಡ್ ರಾಜಧಾನಿ ವಾರ್ಸಾ ಪಟ್ಟಣದಲ್ಲಿ ದಂಗೆಯಾಗಿರುವುದಕ್ಕೆ ಇದು ಲಂಡನ್ನಿನಲ್ಲಿ ... ಪ್ರೇರಿಸುತ್ತಿರುವ ಪೋಲಿಷ್ ಜನರಿಂದ ಆಯಿತೆಂದೂ ಸೋವಿಯಟ್ ಸೈನ್ಯಗಳೊಂದಿಗೆ ಸಹಕರಿಸಿ ನಡೆಯುತ್ತಿಲ್ಲವೆಂದೂ ಮಾಸ್ಕೋ ರೇಡಿಯೋ ತಿಳಿಸುತ್ತದೆ.

ಫ್ರಾನ್ಸಿನ ಮಾಜಿ ಪ್ರಧಾನಿ ಸತ್ತಿಲ್ಲ

ಫ್ರಾನ್ಸಿನ ಮಾಜಿ ಪ್ರಧಾನಮಂತ್ರಿ ಜರ್ಮನರಿಂದ ಸತ್ತ ... ಲಿಯಾನ್ ಬ್ಲೂಂ ಎಂಬುವರು ಸತ್ತರೆಂದು ಸುದ್ದಿ ಹಬ್ಬಿತ್ತು. ಇದು ನಿಜವಲ್ಲವೆಂದು ಅಲ್ಜಿಯರ್ಸ್ ನ ಸಂಸ್ಥೆ ಅಧ್ಯಕ್ಷರು ತಿಳಿಸುತ್ತಾರೆ. ಬ್ಲೂಂರವರು ಮುಖ್ಯ ಮಂತ್ರಿಗಳಾಗಿದ್ದರು.

ಸುಧಾರಣಾ ಸಮಿತಿ ರದ್ದು

ಪ್ರಜೆಗಳಿಂದ ಸಹಕಾರ ದೊರೆಯದಿದ್ದುದರಿಂದ ಕಳೆದ ವರ್ಷ ತಿಂಗಳಲ್ಲಿ ನೇಮಿಸಲ್ಪಟ್ಟಿದ್ದ ರಾಜಕೀಯ ಸುಧಾರಣಾ ಸಮಿತಿಯನ್ನು ... ಸಂಸ್ಥಾನದ ಅರಸರು ರದ್ದುಗೊಳಿಸಿದರೆಂದು ಅಲ್ಲಿನ ಗೆಜೆಟ್ ಪ್ರಕಟಿಸಿದೆ. ಅಲ್ಲಿನ ಪ್ರಜಾಮಂಡಲವು ಈ ಸಮಿತಿಗೆ ಬಹಿಷ್ಕಾರ ಹಾಕಿದ್ದರಿಂದ ಯಾರೂ ಸಮಿತಿಯ ಮುಂದೆ ಬರಲು ಇಚ್ಛೆ ಪಡಲಿಲ್ಲ.

Edited, printed and published by A. R. Nagarajan, at the Sadhvi Press, D Subbiah Road, Mysore.

ಪತ್ರ ವ್ಯವಹಾರ

ಸ್ಪೇಷಲ್ ಬಳಿ ಟಾಂಗಾ ಗಾಡಿಗಳ ಉಸ್ತುವಾರಿ

ಸ್ವಾಮಿ,

ಮುನಿಸಿಪಾಲಿಟಿಯವರು ಟಾಂಗಾಗಾಡಿಗಳ ಬಾಡಿಗೆ ದರ ನಿಗದಿಸಿರುವುದನ್ನು ಜನರಂತೆ ನೋಡಿಕೊಳ್ಳಲು ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ನೂತನವಾಗಿ ನಿಯಮಿಸಲ್ಪಟ್ಟಿರುವ ಮಿ॥ ರಾ॥ ಬಿ. ತ್ರಿನಿವಾಸಯ್ಯನವರು ಬಹಳ ಮುತುವರ್ಜಿಯಿಂದಲೂ, ಜಾಗರೂಕತೆಯಿಂದಲೂ ತಮ್ಮ ಕೆಲಸವನ್ನು ನಿರ್ವಹಿಸುತ್ತಿ, ದರಗಳನ್ನು ವಿಚಾರಿಸದೆ ವರ್ತಿಸುವವರನ್ನು ನ್ಯಾಯಾಸ್ಥಾನದ ಮುಂದೆ ತಂದು ... ಶಿಕ್ಷೆಗೆ ಒಳಪಡಿಸುತ್ತಿರುವುದು ಒಳ್ಳೆಯ ಪರಿಣಾಮವನ್ನುಂಟುಮಾಡಿದೆ. ಇದೇ ರೀತಿ ನಗರದ ಎಲ್ಲಾ ಕಡೆಗಳಲ್ಲೂ ನೇಮಕವನ್ನು ಮಾಡಿದರೆ ಜನಗಳಿಗೆ ಬಹು ಉಪಕಾರವಾಗುವುದು— ಕೆ.ಎಸ್.

ಬಿಲ್ಲೆ ಮೊಹಲ್ಲ ಮಾಡಿದ ಪಾಪವೇನು?

ಪೌರಸಭಾಧ್ಯಕ್ಷರು ರಾಜಧಾನಿಯ ವಿವಿಧ ಮೊಹಲ್ಲಾಗಳಲ್ಲಿ ಏರ್ಪಡಿಸಿರುವ ಫೇರ್ ಪ್ರೈಸ್ ಷಾಪು ಡಿಪೋಗಳ ಪಟ್ಟಿಯನ್ನು ಪ್ರಕಟಿಸಿರುವರಷ್ಟೆ. ಇದರಲ್ಲಿ ಬಿಲ್ಲೆ ಮೊಹಲ್ಲದ ಹೆಸರೇ ಇಲ್ಲ. ಈ ಹೊಸ ಪ್ರಕಾರ ರಚನೆ ಆಗದಿರುವ ವಾಣಿವಿಲಾಸ ಮೊಹಲ್ಲ ಎಂಬ ಹೊಸ ನಾಮಧೇಯವನ್ನಿಟ್ಟು ಅಲ್ಲಿಗೆ ಒಂದು ಡಿಪೋ ಕೊಟ್ಟಿದ್ದಾರೆ. ಇದು ದೇವರಾಜ ಮೊಹಲ್ಲಕ್ಕೆ ಸೇರಿದ್ದಲ್ಲವೇ? ಬಿಲ್ಲೆ ಮೊಹಲ್ಲದವರು ಮಾಡಿದ ಪಾಪವೇನು? ಇಲ್ಲಿನ ನಿವಾಸಿಗಳು ಎಲ್ಲಿ ಷಾಪು ಕೊಳ್ಳಬೇಕು? ನಜರಬಾದಿನಂಥ ಸಣ್ಣ ಮೊಹಲ್ಲಗೆ ಎರಡು ಡಿಪೋ ಕೊಟ್ಟಿರುವಾಗ ಬಿಲ್ಲೆಗೆ ಒಂದಾದರೂ ಬೇಡವೇ? ಈ ಬಗ್ಗೆ ಅಧ್ಯಕ್ಷರು ಕೂಡಲೇ ತಕ್ಕ ಏರ್ಪಾಡು ಮಾಡುವರೆ? —ಮೊಹಲ್ಲಾ ನಿವಾಸಿ.

ಹೆಂಡತಿ ಹೆಸರನ್ನೇ ಮರೆತನು

ತಮಗೂ ಮತ್ತು 'ಹೆಸರು ಮರೆತುಹೋದ ಸ್ತ್ರೀ'ಯಾದ ತನ್ನ ಹೆಂಡತಿಗೂ ಕೊಡಲ್ಪಟ್ಟಿದ್ದ ವಿವಾಹ ಸಂಬಂಧದ ಲೈಸೆನ್ಸಿನ ಅಧಿಕೃತ ನಕಲೊಂದನ್ನು ಕಳುಹಿಸಿಕೊಡಬೇಕೆಂದು ಆಸ್ಟ್ರೇಲಿಯಾದ ವ್ಯಕ್ತಿಯೊಬ್ಬನು ನ್ಯಾಯಾಸ್ಥಾನಕ್ಕೆ ಅರ್ಜಿ ಹಾಕಿಕೊಂಡಿದ್ದಾನೆ.

ಕೈಗಾರಿಕೆ ಸಂಶೋಧನಾಲಯ ಸ್ಥಾಪಿಸುವ ಸಲುವಾಗಿ ಹೈದರಾಬಾದ್ ಪ್ರಜಾ ಪ್ರತಿನಿಧಿ ಲಕ್ಷ ರೂಪಾಯಿಗಳನ್ನು ದಾನ ಮಾಡಿದ್ದಾರೆ.

ಆಯುರ್ವೇದ ಆಸ್ಪತ್ರೆ

ಸ್ವಂ. ಸು.] ಬೆಂಗಳೂರು ೧೪

ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಔಟ್ ಪೇಷೆಂಟ್ಸ್ ಚಿಕಿತ್ಸಾಲಯವು ಸರ್ವ ಕೆಲಸಕಾರ್ಯಗಳಿಂದಲೂ ಈಗ ಕೂಡಿದೆಯೆಂದೂ, ಸಾರ್ವಜನಿಕರೂ ಇದರಿಂದ ಪ್ರಯೋಜನ ಪಡೆಯಬಹುದೆಂದೂ ಅಧಿಕೃತವಾಗಿ ತಿಳಿಸಲಾಗಿದೆ.

ಮಳೆಯಿಂದ ಮರಣ

ಆಲೀಸ್ ಎಂಬ ಕ್ರೈಸ್ತ ಸ್ತ್ರೀಯು ತನ್ನ ೭ ವರ್ಷದ ಗಂಡು ಮಗು, ೭ ವರ್ಷದ ಹುಡುಗಿಯೊಂದಿಗೆ ಮೊನ್ನೆ ರಾತ್ರಿ ಸರ್ಕಸ್ ನೋಡಲು ಹೋಗಿದ್ದಳು. ತೆಗ್ಗದ್ದಿಪುರದ ಸಿಟಿ ಪೋಲೀಸ್ ಲೈನ್ಸಿನಲ್ಲಿರುವ ತನ್ನ ಮನೆಗೆ ವಾಪಸು ಬರುತ್ತಿದ್ದಾಗ ಮಳೆ ಬರುತ್ತಿದ್ದುದರಿಂದ, ದುರ್ದೈವದಿಂದ ರೇಸ್‌ಕೋರ್ಸ್ ಸ್ಟ್ರೀಟ್‌ನ ರಸ್ತೆಯೊಂದರಲ್ಲಿ ಸಿಕ್ಕಿಕೊಂಡಳು. ನೀರು ತುಂಬಿ ಹರಿಯುತ್ತಿತ್ತು. ಅದರಲ್ಲಿ ಮೂವರೂ ಕೊಚ್ಚಿಕೊಂಡು ಹೋದರು. ಬಹಳ ಹೊತ್ತಿನ ನಂತರ ಶವಗಳ ಪತ್ತೆಯಾಯಿತು.

ಎರಡು ಕಾಲಿನ ಕರು

ಸೊಂಡೂರ್ ಸಂಸ್ಥಾನದ ರಾಮಗಡ ಟ್ರೈನಿಂಗ್ ಸೆಂಟರಿಗೆ ಸೇರಿದ ಹಾಸ್ಟೆಲಿನಲ್ಲಿ ಎರಡು ಕಾಲುಗಳು ಮಾತ್ರವೇ ಉಳ್ಳ ಎತ್ತಿನ ಕರುವಿನ ಜನನವಾಯಿತು. ಇದಕ್ಕೆ ಎರಡು ಬಾಲಗಳೂ ಇದ್ದವು. ಆದರೆ ಇದು ಗರ್ಭದಲ್ಲಿಯೇ ಸತ್ತು ಹೋಗಿತ್ತು.

ಶೂದ್ರ ಸನ್ಯಾಸಿಗೆ ಆಸ್ತಿ ಹಕ್ಕು

ಅಮರಾವತಿಯ ಸಬ್ ಜಡ್ಜಿರಾದ ಶ್ರೀ ಜಿ. ದೇವ್ ಎಂಬುವರು ಒಂದು ವ್ಯವಹಾರ ಇತ್ಯರ್ಥ ಮಾಡುವ ವೇಳೆ ಶೂದ್ರನಾಗಿದ್ದರೆ ಸನ್ಯಾಸಿಯು ಆಸ್ತಿಗೆ ಭಾಗದಾರನಾಗಬಲ್ಲನೆಂದು ತೀರ್ಮಾನಮಾಡಿದ್ದಾರೆ. ಆತ ಸನ್ಯಾಸಿಯಾಗಿದ್ದರೂ ಸಂಸಾರಕ್ಕೆ ಹಿಂತಿರುಗಬಹುದೆಂದು ಜಡ್ಜರ ಅಭಿಪ್ರಾಯ.

ರಷ್ಯ ಮತ್ತು ಪೋಲೆಂಡುಗಳಿಗೆ ನಡೆದ ಸಂಭಾಷಣೆಯ ಫಲವಾಗಿ ಆ ಎರಡು ರಾಷ್ಟ್ರಗಳಿಗೂ ಒಪ್ಪಂದವಾಗಬಹುದೆಂದು ಸಂಯುಕ್ತ ಸಂಸ್ಥಾನದ ಪರದೇಶಾಂಗ ಕಚೇರಿಯ ಊಹೆ.

MEDICINES

Take your requirements from

RAGHULAL & CO.,

1748, Sayaji Rao Road,

(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ.,

1748, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು.

ಗೌರೀ ಹಬ್ಬಕ್ಕೆ ಪ್ರಯುಕ್ತ

ಎ. ಪಿ. ರಂಗಸ್ವಾಮಿ ಅಂಗಡಿಯವರು ಬ್ರೈಸಿಕಲ್ ನೀಲಿ ತರುವ ಹೊಲಿದು ಸಿದ್ಧ ಪಡಿಸಿದ ಉಡುಪುಗಳನ್ನು ಕೊಂಡುಕೊಳ್ಳಿರಿ.

ನಂಬಿಕೆಯಿಂದ ವ್ಯಾಪಾರ ಮಾಡುತ್ತಾರೆ.

ಸ್ತ್ರೀಯರ ಸೌಕರ್ಯಕ್ಕೆ

ಹೆಂಗಸರಿಗೋಸ್ಕರ ಪ್ರತ್ಯೇಕವಾಗಿ ವ್ಯಾಪಾರ ಕೊಠಡಿ ಏರ್ಪಾಡುಮಾಡಲಾಗಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

ಡಿ. ಪುಟ್ಟೇಗೌಡ್ರು, ಏಜೆಂಟ್ಸ್, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮನೆ ನಂಬರಿಗೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ಡಿಪೋಗಳಲ್ಲೂ ... ಪ್ಯಾಕೆಟ್ಟುಗಳು ದೊರೆಯುವುವು.

ಮೈಸೂರು ಸಿಟಿ — ಮುನಿಸಿಪಾಲಿಟಿ —

ಇದರಿಂದ ಫೇರ್ ಪ್ರೈಸ್ ಡಿಪೋಗಳ ಬಗ್ಗೆ ತಿಳಿಯಪಡಿಸುವುದೇನೆಂದರೆ:—

ಮೈಸೂರು ನಗರದಲ್ಲಿ ಜನಗಳ ದಿನ ಬಳಕೆಗೆ ಮುನಿಸಿಪಲ್ ಫೇರ್ ಪ್ರೈಸ್ ಷಾಪು ಡಿಪೋಗಳನ್ನು ತೆರೆದು ಸೇರುವ ತಿಂಗಳಿನವರೆಗೆ ಕಡತ, ಜನಗಳಿಗೆ ಡಿಪೋ ದವಸ ಪೂರೈಕೆ ತಿಳಿಯದೆ, ದಬಾವಣೆ ಟಿಕೆಟ್ಟು ಕೊಟ್ಟು ಷಾಪು ಕೊಳ್ಳುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿರುತ್ತೆ. ಹಾಲಿ ಗೊತ್ತುಮಾಡುವ ಡಿಪೋಗಳ ತಪಶೀಲ್‌ಪಟ್ಟಿಯನ್ನು ಈ ಕೆಳಗೆ ಜನಗಳ ತಿಳುವಳಿಕೆ ಬಗ್ಗೆ ಪ್ರಚುರ ಪಡಿಸಿರುತ್ತದೆ. ಈ ಡಿಪೋಗಳಲ್ಲಿ ಒಂದು ರೂಪಾಯಿಗೆ ನಾಲ್ಕು ವಣ ಸಣ್ಣ ಸೌದೆಯನ್ನೂ, ಒಂದು ರೂಪಾಯಿಗೆ ನಾಲ್ಕು ವಣ ಸೀಳದ ಸೌದೆಯನ್ನೂ, ಆಹಾರದ ರೇಷನ್ ಕಾರ್ಡಿನಲ್ಲಿ ನಮೂದಿಸಿರುವ ಜನಗಳ ಸಂಖ್ಯೆ ಅನುಸರಿಸಿ ಕೊಡಲಾಗುತ್ತದೆ. ಆವಶ್ಯವಿದ್ದಲ್ಲಿ ಇನ್ನೂ ಹೆಚ್ಚು ಡಿಪೋಗಳನ್ನು ತೆರೆಯಲು ಏರ್ಪಾಟುಮಾಡಲಾಗುತ್ತೆ.

ಸರ್ವರೂ ನಿಗದಿ ದರದಂತೆ ನೋಕರರೂ ಆಗಿರುವ ಡಿಪೋಗಳಲ್ಲಿ ಸಾಮಾನು ಪಡೆಯಬಹುದು.

೧ ದೇವರಾಜ ಮೊಹಲ್ಲ:—

1. ದೇವರಾಜ ಮಾರ್ಕೆಟ್ಟಿನ ಉತ್ತರ ದಿಕ್ಕಿಗೆ ಆಸ್ಪತ್ರೆ ಬಳಿ.

2. ಹಳೇ ಬೆಂಗಳೂರು ಬೀದಿಯ ಷಿಕ್ಸರ ... ಕಂಪೆನಿ.

೨ ಕೃಷ್ಣರಾಜ ಮೊಹಲ್ಲ:—

1. ದೇವಾಂಬ ಅಗ್ರಹಾರದಲ್ಲಿ ಶ್ರೀ ಕಾಶೀವಿಶ್ವನಾಥಸ್ವಾಮಿ ದೇವಸ್ಥಾನದ ಕಾಂಪೌಂಡಿನಲ್ಲಿ.

2. ಚಾಮುಂಡಿ ಪೆಂಟ್ ಟೌನ್ ನಲ್ಲಿ ಕಲಾ ಭವನದ ಹತ್ತಿರ ಡೋರ್ ನಂಬರು 2874 ಕಟ್ಟಡದಲ್ಲಿ.

೩ ವಾಣೀವಿಲಾಸ ಮೊಹಲ್ಲ:—

1. ಆದಿ ಪಂಪ ರೋಡಿನಲ್ಲಿ ಮುನಿಸಿಪಲ್ ಛತ್ರದ ಡಿಪೋವಿನಲ್ಲಿ.

೪ ಚಾಮರಾಜ ಮೊಹಲ್ಲ:—

1. ಚಾಮರಾಜಪುರಂ ಕೊ-ಆಪರೇಟಿವ್ ಸ್ಟೋರ್ಸ್ ಹಿಂಭಾಗ ನಂ. 1158 ಕಟ್ಟಡದಲ್ಲಿ.

2. ಚಾಮರಾಜ ರೋಡಿನಲ್ಲಿ ಸೊಸೈಟಿ ಆಸಿಸ್ಟೆಂಟ್ ರಿಜಿಸ್ಟ್ರಾರವರ ಆಫೀಸ್ ಪಕ್ಕದ ಕಾಂಪೌಂಡಿನಲ್ಲಿ.

3. ಕೃಷ್ಣಮೂರ್ತಿಪುರಂ ಮಾರ್ಕೆಟ್ ಬಳಿ

4. ಡೋರ್ ನಂಬರು 2771 ಕಟ್ಟಡದ ಕೆಳಭಾಗದಲ್ಲಿ.

೫ ಮಂಡೀ ಮೊಹಲ್ಲ:—

1. ಸುಲ್ತಾನ್ ಬಾಗ್‌ದಾ ಮುನಿಸಿಪಲ್ ಪಾರ್ಕಿನ ಆವರಣದಲ್ಲಿ.

2. ಇದಿಗದಲ್ಲಿ ಡೋರ್ ನಂ. 3442-2

೬ ಲಷ್ಕರ್ ಮೊಹಲ್ಲ:—

1. ಎಲೆಕ್ಟ್ರಿಕ್ ಟ್ರಾನ್ಸ್ ಫಾರ್ಮರ್ ಕಟ್ಟಡದ ಎದುರಿಗೆ ಕ್ಯಾನಾಟ್ರೆ ರಸ್ತೆಯ ಬಾಜೂನಲ್ಲಿ.

೭ ನಜರಬಾದು ಮೊಹಲ್ಲ:—

1. ಕೋಲ್ಕರ್ ಫಂಡ್ ಆಸ್ಪತ್ರೆ ಕಟ್ಟಡದ ಪಕ್ಕದಲ್ಲಿ.

2. ಮಾನ್ಸ್ ಬಂಗ್ಲೆ ರಸ್ತೆ ಡೋರ್ ನಂಬರು 936 ರ ಕಟ್ಟಡದಲ್ಲಿ.

(ಸಹಿ) R. ರಾಮಚಂದ್ರರಾವ್ ಚಾಂಭೋರೆ

11-8-44 ಪ್ರೆಸಿಡೆಂಟ್.

ಸಂಪುಟ ೪] ಬುಧವಾರ ೧೬--೮--೪೪ [ಸಂಚಿಕೆ ೩೦

ಮಾರ್ಸೇಲ್ಸಿನಲ್ಲಿ ಮಿತ್ರರು ಇಳಿಯುವರೇ

"ಜರ್ಮನಿಯನ್ನು ನಾಶಮಾಡುತ್ತೇವೆಂಬುದು ಮೂರ್ಖತನ"

ಲೀಗ್ ಅಫ್ ನೇಷನ್ಸ್ ಸಭೆಗೆ ತಿಲಾಂಜಲಿಯೋ?

ಮಹಾದೇವ ದೇಸಾಯರ ದಿನಾಚರಣೆ

ಮೈಸೂರು ೧೬

ನಿನ್ನೆ ದಿನ ಸಾಯಂಕಾಲ ಒಂಟಿಕೊಪ್ಪಲಿನ ರಾಷ್ಟ್ರೀಯ ಸಂಘದವರು ಅಂಜಾಳ್ ಮಂದಿರದಲ್ಲಿ ಶ್ರೀ ನಾಡಿಗ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ದೇಸಾಯರ ದಿನಾಚರಣೆಯನ್ನು ನೆರವೇರಿಸಿದರು. ಶ್ರೀಗಳಾದ ಟಿ. ಸಿ. ರಾಮಚಂದ್ರರಾವ್ ಮತ್ತು ಟಿ. ಯಸ್. ಸುಬ್ರಹ್ಮಣ್ಯಂರವರುಗಳು ದೇಸಾಯರ ಜೀವನದ ವಿಷಯವಾಗಿ ಭಾಷಣಮಾಡಿದರು. ನಂತರ ತಾವು ಅವರೊಂದಿಗಿದ್ದಾಗ ಬಂದ ಅನುಭವಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ವಂದೇಮಾತರಂ ನೊಡನೆ ಸಭೆ ಮುಕ್ತಾಯವಾಯಿತು.

ದೇಶಪ್ರೇಮಿ ಸಂಘ

ಈ ಸಂಘದವರು ನಿನ್ನೆ ಸಂಜೆ ಕಾರದಾ ವಿಲಾಸ ಹೈಸ್ಕೂಲ್ ಮೈದಾನದಲ್ಲಿ ಮಹಾದೇವ ದೇಸಾಯಿ ದಿನಾಚರಣೆ ನಡೆಸಿದರು. ಶ್ರೀ ಕೇಶವಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಎ. ಸಿ. ಶ್ರೀನಿವಾಸರಾಯ ಮಹದೇವ್ ದೇಸಾಯರ ಗುಣಗಾನ ಮಾಡಿದರು. ಬಳಿಕ ಸಭೆಯು ಸಂತಾಪ ಸೂಚಿಸಲು [illegible] ಮೌನ ವ್ರತ ಆಚರಿಸಬೇಕಾಯಿತು. ಪ್ರಸಾದ ವಿನಿಯೋಗವಾಯಿತು. ವಂದೇಮಾತರಂ ರಾಷ್ಟ್ರಗೀತೆ ಮತ್ತು ಘೋಷಣೆಗಳೊಡನೆ ಸಭೆ ಮುಗಿಯಿತು.

ಖದ್ದರ್ ಸಹಕಾರ ಸಂಘ

ಮದ್ರಾಸ್ ರಾವ್ ಪ್ರೊಡ್ಯೂಸನ್ನಿನ ಡೆಪ್ಯುಟಿ ಮೇನೇಜರವರಾದ ಶ್ರೀಯುತ ಪಿ. ಎಸ್. ಭುಜಂಗರವರು ಮೈಸೂರಿನ ಸಂಘಕ್ಕೆ ತಾ|| ೧೫-೮-೪೪ ನೇ ಭಾನುವಾರ ಬೆಳಿಗ್ಗೆ ಭೇಟಿಯಿತ್ತರು. ಸಂಘದ ಕಾರ್ಯಕಲಾಪವನ್ನು ನೋಡಿ ಸಂತೋಷಪಟ್ಟರು.

ಅವಧಿ ಹೆಚ್ಚಿತು

ಆಗಸ್ಟ್ ೧೬ ನೇ ತಾ|| ನೊಳಗಾಗಿ ಮೈಸೂರು ಸಂಸ್ಥಾನವನ್ನು ಬಿಟ್ಟು ಹೋಗಬೇಕೆಂದು ಶ್ರೀ ಆರ್. ಆರ್. ಪ್ರೆಶ್ರಾಂಟವರ ಮೇಲೆ ಆಜ್ಞೆ ಜಾರಿಯಾಗಿತ್ತಷ್ಟೆ. ಈಗ ಮುಂದಿನ ತಿಂಗಳು ೧ ನೇ ತಾ|| ವರೆಗೆ ಆ ಕಾಲಾವಧಿಯನ್ನು ಹೆಚ್ಚಿಸಲಾಗಿದೆ.

ಫುಟ್ ಬಾಲ್

[illegible] ಫ್ರೆಂಡ್ಸ್ ಕ್ಲಬ್ಬಿಗೂ ಮೈಸೂರು ಪಾಸಿಂಜರ್ ಫೋರ್ಸಸ್ಸಿಗೂ ಪಂದ್ಯವು ದೊಡ್ಡಕೆರೆ ಮೈದಾನದಲ್ಲಿ ನಡೆದು ಗೋಲುಗಳಿಲ್ಲದೆ ಡ್ರಾ ಆಯಿತು.

ಚಿನ್ನ-ಬೆಳ್ಳಿ ವಿಗ್ರಹ ಕಳುವು

ನ್ಯೂ ಸಯ್ಯಾಜೀರಾವ್ ರಸ್ತೆಯಲ್ಲಿರುವ ಎಸ್. ವಿ. ಸೆಟ್ಟಿ ಎಂಬುವರ ಅಂಗಡಿಯಲ್ಲಿ ಮೊನ್ನೆ ರಾತ್ರಿ ಸುಮಾರು ೩೦೦ ರೂ. ಬೆಲೆಬಾಳುವಷ್ಟು ಚಿನ್ನ-ಬೆಳ್ಳಿ ವಿಗ್ರಹಗಳ ಕಳುವಾಗಿದೆ ಯೆಂದು ದೂರು ಬಂದಿದೆ.

ಗೋಡೆ ಬಿದ್ದು ಮಗುವಿನ ಮರಣ

ನಿನ್ನೆ ಮಂಡಿಮೊಹಲ್ಲಾ ಮುದಾರ್ ಸಾಬ್ ಎಂಬುವರ ಮನೆಯಲ್ಲಿ ಮದುವೆ ಸಮಾರಂಭ ನಡೆಯುತ್ತಿದ್ದಾಗ ಕಾಂಪೌಂಡ್ ಗೋಡೆ ಬಿದ್ದು ೮ ವರ್ಷದ ಅಬ್ದುಲ್ ಖದ್ದೂಸ್ ಎಂಬ ಮಗುವು ಮೃತಪಟ್ಟಿತು.

ದಕ್ಷಿಣ ಫ್ರಾನ್ಸಿನ ಆಕ್ರಮಣ

ಮಿತ್ರಸೇನಾನಿಗಳು ಫ್ರಾನ್ಸಿನ ದಕ್ಷಿಣ ತೀರಪ್ರದೇಶದಲ್ಲಿ ನೌಕಾಪಡೆಗಳ ಸಹಾಯದಿಂದ ಬಂದಿಳಿದುವು. ಈಗ ಆ ಸೇನೆಗಳು ಒಳಭಾಗಕ್ಕೆ ನುಗ್ಗುತ್ತಿವೆ.

ಟೂಲಾನ್ ಬಳಿ ಮಿತ್ರಸೇನೆ ಇಳಿದುವು

ಭೂಮಧ್ಯಸಮುದ್ರದ ಫ್ರಾನ್ಸಿನ ಪ್ರಸಿದ್ಧ ರೇವೂ ಯುದ್ಧನೌಕಾಸ್ಥಾನವೂ ಆದ ಟೂಲಾನ್ ಪಟ್ಟಣಕ್ಕೆ ಕೇವಲ ೩೦ ಮೈಲಿ ದೂರದಲ್ಲಿರುವ ಜೋರ್ಜ್ ಎಂಬಲ್ಲಿ, ಅಮೆರಿಕ, ಬ್ರಿಟಿಷ್ ಮತ್ತು ಫ್ರೆಂಚ್ ಪಡೆಗಳು ಇಳಿದುವು. ವಿಮಾನಗಳ ರಕ್ಷಣೆ ಬೆನ್ನಾಗಿ ಸಿಡಿಮದ್ದಿನ [illegible] ಇನ್ನೇನು ಒಂದೇ ಗಂಟೆಯೊಳಗಾಗಿ [illegible] ಭಾಗವನ್ನು ಮಿತ್ರರು ವಶಪಡಿಸಿಕೊಂಡರು. ನಿನ್ನೆ ಬೆಳಿಗ್ಗೆ ೧೦ ಗಂಟೆಯೊಳಗೆ ೧೪ ಸಹಸ್ರ ಪದಾತಿ ಸೈನ್ಯ ಇಳಿದಿದೆ. ಜರ್ಮನರ ಪ್ರತಿಭಟನೆ ಅಕ್ಕಲ್ಪವಾಗಿತ್ತು.

ಪಿಟೇನರು ತೆರಳಿದರು

ಮಾರ್ಸೆಲ್ಸ್ ಪಿಟೇನರು, ಮಂತ್ರಿ ಜೋಸೆಫ್ ಡರ್ನ್ಡ್, ಮಾರ್ಸೆಲ್ಸ್ [illegible] ಮತ್ತು [illegible] ಮಂತ್ರಿಗಳೊಡನೆ [illegible]

"ನಾಜಿ ಮಿತ್ರ ಮಿತ್ರ ತತ್ವಗಳಲ್ಲಿ ವ್ಯತ್ಯಾಸವಿಲ್ಲ"

ಇನ್ನೊಬ್ಬರ ಮೇಲೆ ಅಧಿಕಾರ ಮಾಡಬೇಕೆಂಬ ಅಭಿಲಾಷೆಯು ಬ್ರಿಟಿಷ್ ಸಾಮ್ರಾಜ್ಯಕ್ಕೇನವನ್ನು ಜನ್ಮವರಾಜ್ಯಕ್ಕೂ ಇಲ್ಲ ಎಂಬುದಾಗಿ ಸುಪ್ರಸಿದ್ಧ ಲೇಖಕರಾದ ಜಾರ್ಜ್ ಬರ್ನಾರ್ಡ್ ಷಾರವರು ಹೇಳುವರು. ಜರ್ಮನಿಯನ್ನು ಶಾಶ್ವತವಾಗಿ ಮುರಿಯುವ ಆಲೋಚನೆಯು ಮೂರ್ಖತನವೆಂದು ಅವರ ಅಭಿಪ್ರಾಯ. ರಾಷ್ಟ್ರೀಯ ಸಮಾಜವಾದ ಮತ್ತು ಕಮ್ಯೂನಿಸಂಗಳಲ್ಲಿ ವ್ಯತ್ಯಾಸವಿಲ್ಲವೆ ಯಾವ ಆಧುನಿಕ ಅಧ್ಯಕ್ಷತೆ ಒಂದು ವಾಸವೂ ಜೀವಿಸಲಾರದು. ನಾಜಿ ತತ್ವಗಳಿಗೂ ಮಿತ್ರ ತತ್ವಗಳಿಗೂ ಏನೂ ವ್ಯತ್ಯಾಸವಿಲ್ಲ. ನಾವೆಲ್ಲರೂ ಹುಟ್ಟುಕಡನು ರಾಷ್ಟ್ರೀಯ ಸಮಾಜವಾದಿಗಳೇ (ನಾಜಿ) ಎಂದು ಅವರು ಹೇಳುವರು.

ಮಾರ್ಸೇಲ್ಸ್ ಬಿಡಿ

ಮಾರ್ಸೇಲ್ಸ್ ಪಟ್ಟಣವನ್ನು ತಕ್ಷಣವೇ ಖಾಲಿಮಾಡಬೇಕೆಂದು ಸಿವಿಲ್ ಪ್ರಜೆಗಳಿಗೆ ಆಜ್ಞೆಯಾಗಿದೆ.

ಜನಾಂಗ ಸಂಘದ ಸಾವು

ಸಂಗ್ರಾಮಾನಂತರ ಪ್ರಪಂಚ ವ್ಯವಸ್ಥೆಯ ಸ್ವರೂಪವನ್ನು ನಿರ್ಣಯಿಸಲು ಸೇರುವ ದೊಡ್ಡ ರಾಷ್ಟ್ರಗಳ ಸಮ್ಮೇಳನವು ನಡೆದನಂತರ ಕೊಂಚ ದಿನಗಳಲ್ಲಿಯೇ ರಾಷ್ಟ್ರಗಳ ಸಂಘ (ಲೀಗ್ ಆಫ್ ನೇಷನ್ಸ್) ವು ಪರಿಸಮಾಪ್ತಿಗೊಳ್ಳಬಹುದೆಂದು ಒಟ್ಟಾವಾದಲ್ಲಿ ಕಾಮನ್ಸ್ ಸಭೆಯಲ್ಲಿ ಕೆನಡಾ ಮುಖ್ಯಮಂತ್ರಿ ಕಿಂಗ್ ರು ತಿಳಿಸಿದ್ದಾರೆ.

ನಾರ್ಮಂಡಿಯಲ್ಲಿ ಇಕ್ಕಳ ಕೂಡಲಿಲ್ಲ!

ನಾರ್ಮಂಡಿಯಲ್ಲಿರುವ ಜರ್ಮನ್ ಸೇನಾಬಲಗಳನ್ನು ಇಕ್ಕಳದಲ್ಲಿ ಸಿಕ್ಕಿಸಿಕೊಂಡು ಕತ್ತು ಹಿಸುಕಿ ಹೊಡೆದು ಹಾಕಬೇಕೆಂದು ಮಿತ್ರರು ಮಾಡಿಕೊಂಡ ಉದ್ದೇಶವು ಇದುವರೆಗೂ ಸಫಲವಾಗಲಿಲ್ಲ. ಅರ್ಗೆಂಟಾನ್ ಎಂಬಲ್ಲಿ ಜರ್ಮನಿಯ ಹೊಸ ಸೇನೆ [illegible] ಪಟ್ಟಣದ ಕಡೆಗೆ ಮುನ್ನುಗ್ಗುತ್ತಿದ್ದ ಅಮೆರಿಕನ್ ಸೇನೆಯ ಧಾಳಿಯನ್ನಲ್ಲಿ ಹಿಮ್ಮೆಟ್ಟಿಸಿರುವ ಎಂದು ಬರ್ಲಿನ್ [illegible]

[illegible] ಯುದ್ಧಕ್ಕೆ

[illegible] ವರ್ಷ ವಯಸ್ಸಿನ ಹುಡುಗರನ್ನೂ ರಾಷ್ಟ್ರಸೇವೆಗಾಗಿ ಇಂಗ್ಲೆಂಡಿನಲ್ಲಿ ಸೇರಿಸಿಕೊಳ್ಳಲಾಗುತ್ತಿದೆ.

ಶೀಘ್ರದಲ್ಲಿ ಯುದ್ಧದ ಪರಿಸಮಾಪ್ತಿಯೇ?

ಶೀಘ್ರದಲ್ಲಿಯೇ ಯುದ್ಧವು ಪರಿಸಮಾಪ್ತಿಗೊಳ್ಳುವುದೆಂದು ಬ್ರಿಟನ್ನಿನಲ್ಲಿ ಅಭಿಪ್ರಾಯ ಬಲಿಯುತ್ತಿದೆ. ಜರ್ಮನ್ ಜೀರವು ಹಿಂದಿನ ಸರ್ಕಾರಕ್ಕಿಂತ ಮುಂಚೆ ಕುಸಿದು ಬೀಳಬಹುದೆಂದು, ಇಂಗ್ಲೆಂಡಿನಿಂದ ಹಿಂತಿರುಗಿ ಬಂದ ಭಾರತ ರಕ್ಷಣಾ ಮಂತ್ರಿ ಸರ್ ಫಿರೋಜ್ ಖಾನ್ ನೂನರು ತಿಳಿಸಿದ್ದಾರೆ. ಭಾರತ-ಬ್ರಿಟನ್ ವ್ಯವಹಾರವನ್ನು ಕುರಿತು ಭಿನ್ನಾಭಿಪ್ರಾಯವಿದ್ದರೂ ಹೊಸ ಆದರ್ಶಗಳನ್ನೊಳಗೊಂಡ ಭಾರತ-ಇಂಗ್ಲೆಂಡ ವ್ಯವಸ್ಥೆಯ ಪೇರಣಿಯು [illegible] ಶಕ್ತಿಗೊಳ್ಳುವುವೆಂದರು.

ಜಿನ್ನಾರವರೊಡನೆ ಸಂಧಾನ ನಿಷ್ಫಲವೇ?

ರಾಜಾಜಿಯವರು ಮುಸ್ಲಿಂ ಲೀಗಿನ ಮುಂದಿಟ್ಟ ಸಲಹೆಗಳ ಪ್ರಕಾರ ವಿಭಜನೆಗೆ ಒಳಗಾಗಬಹುದಾದ ಕ್ಷೇತ್ರಗಳಲ್ಲಿನ ನಿವಾಸಿಗಳ ಅಭಿಮತ ಕೋರಬೇಕೆಂಬುವ ಷರತ್ತು ಇದೆ. ಈ ಷರತ್ತಿಗೆ ಜಿನ್ನಾರವರು ವಿರೋಧವಾಗಿದ್ದಾರೆ ದೂ, ಕಾರಣ ಪಂಜಾಬ್ ಮತ್ತು ವಾಯು ವ್ಯಾಯವ ಪ್ರಾಂತಗಳಲ್ಲಿ ಜಿನ್ನಾರವರ ಪ್ರಭಾವವು ಹೆಚ್ಚಾಗಿಲ್ಲವೆಂದೂ, ತಿಳಿಯಬರುತ್ತದೆ. ದಿನದಿನ ಜಿನ್ನಾರವರ ಅಭ್ಯರ್ಥನೆಗಳಿಗೆ ಮಿತಿಯಿಲ್ಲವಾಗಿವೆಯೆಂದು ಭಾಸವಾಗುತ್ತದೆ. ಇವೆಲ್ಲವನ್ನೂ ನೋಡಿ ಗಾಂಧಿ-ಜಿನ್ನಾ ಭೇಟಿಯು ಸಫಲವಾಗುವುದಿಲ್ಲವೆಂದು ದೆಹಲಿಯಲ್ಲಿ ಆಡಿಕೊಳ್ಳಲಾಗುತ್ತಿದೆ.

ಮುಖಂಡರ ಬಿಡುಗಡೆಯೆ?

ಕಾಂಗ್ರೆಸ್ ಮುಖಂಡರನ್ನು ಒಬ್ಬೊಬ್ಬರನ್ನಾಗಿ ಬಿಡಬಹುದೆಂದು ದೆಹಲಿಯಲ್ಲಿ ತಿಳಿಯ ಬರುತ್ತದೆ. ಮೊದಲು ಪಂಡಿತ ನೆಹರೂ, ಆಜಾದ್ ಮತ್ತು ರಾಜೇಂದ್ರ ಪ್ರಸಾದರ ಬಿಡುಗಡೆಯಾಗಬಹುದು. ಕೊನೆಯಲ್ಲಿ ಸರದಾರ್ ಪಟೇಲರದಾಗಬಹುದು.

ಮಾಳವೀಯರ ಪ್ರತಿಭಟನೆ

ಪಂಡಿತ ಮಾಳವೀಯರವರು ವಾಕಿಸ್ತಾನದಿಂದ ಭಾರತ ದೇಶದ ಜನರ ಐಕ್ಯಕ್ಕೆ ಹಾನಿಯುಂಟಾಗುತ್ತದೆಯೆಂದೂ ಇದರಿಂದ ದೇಶವೇ ಹಾಳಾಗುತ್ತದೆಂದೂ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಕಾಂ|| ಅಧ್ಯಕ್ಷರ ಆಗಮನ

ಮೈಸೂರು ೧೬

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ೧೯ ನೇ ತಾ|| ಶನಿವಾರ ಮಧ್ಯಾಹ್ನ ೧೨-೩೦ ಕ್ಕೆ ರಾಜಧಾನಿಗೆ ದಯಮಾಡಿಸುವರು. ಆ ದಿನ ಸಂಜೆ ೬ ಗಂಟೆಗೆ ಬಹಿರಂಗ ಸಭೆ ಇದೆ. ೨೦ ನೇ ತಾ|| ಮಧ್ಯಾಹ್ನ ೩ ಗಂಟೆಗೆ ಕಾಂಗ್ರೆಸ್ ಕಚೇರಿಯಲ್ಲಿ ಕಾಂ|| ಕೆಲಸಗಾರರ ಸಭೆ ನಡೆಯುವುದು. ಅಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಎರಡು ದಿನ ಮುಂಚೆ ಕಳುಹಿಸಬೇಕೆಂದು ಕೋರಲಾಗಿದೆ.

ಅನೀತಿ ಆಪಾದನೆ

[illegible]

ಯುವ ಪ್ರೌಢರುನ್ನು [illegible] ನಿಂದಾ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು ತಲಾ ೧೦ ರೂ. ದಂಡ ವಿಧಿಸಲಾಯಿತು.

ಬೆಲ್ಲದ ಮೊಕದ್ದಮೆ

ಮೂಲಕ ಮುಂತಾದ ನಿಗದಿ ಪಡಿಸಿದ ಬೆಲೆಗಿಂತ ಹೆಚ್ಚು ಬೆಲೆಗೆ ಬೆಲ್ಲ ಮಾರಿದ [illegible] ಮತ್ತು ಬಸಪ್ಪ ಎಂಬುವರಿಗೆ ನಗರ ನ್ಯಾಯಾಧಿಕಾರಿಗಳಾದ ಹ|| ಕೆ. ಮಹಮ್ಮದ್ ರವರು ತಲಾ ೫೦ ರೂ. ದಂಡ ವಿಧಿಸಿದರು.

ಕಳ್ಳತನ

ಶ್ರೀನಿವಾಸ [illegible] ಶ್ರೀ ರಾಮಚಂದ್ರರಾಯ ಅಂಗಡಿಯವರ ಮನೆಯಲ್ಲಿ ೧೧ ನೇ ತಾ|| ಹಗಲು ೧೧-೧೦ ಕ್ಕೆ ಹೊತ್ತಿನಲ್ಲಿ ಬೀರು ಬಾಗಿಲು ಒಡೆದು ಸುಮಾರು ೧೧೦೦ ರೂ. ಬೆಲೆಬಾಳುವಷ್ಟು ಒಡವೆಗಳನ್ನು ಕಳ್ಳರು ಅಪಹರಿಸಿಕೊಂಡು ಹೋಗಿದ್ದಾರೆ.

ಹೊಸ ಇಂಟರ್ ಕಾಲೇಜ್ ಸ್ಥಾಪನೆಗೆ ಪ್ರಾರ್ಥನೆ

[illegible] ಇಂಟರ್ ವಿಭಾಗದ ವಿದ್ಯಾರ್ಥಿಗಳಿಗೆ [illegible] ಸ್ಥಳದ ಅಭಾವ [illegible] ಕಾಲೇಜಿನ [illegible] ಕೇಳಿಕೊಂಡಿದ್ದಾರೆ [illegible]

ಕಾಂಗ್ರೆಸ್ ಅಧ್ಯಕ್ಷರಿಗೆ ವಿವಾನರ ಪತ್ರ

[illegible] ಕಾಂಗ್ರೆಸ್ ಅಧ್ಯಕ್ಷರು ಪತ್ರ [illegible]

ಆದಾಯ ತೆರಿಗೆದಾರರು ೫ ಕೋಟಿ

[illegible] ಕೋಟಿ ಜನರಲ್ಲಿ [illegible]

ಹೊಗೆಸೊಪ್ಪಿನಲ್ಲಿ ಸಕ್ಕರೆ

[illegible] ಹೊಗೆಸೊಪ್ಪಿನ [illegible]

ಉತ್ತರ ಬರ್ಮಾ ತ್ಯಾಜ್ಯವೇ?

[illegible] ಬರ್ಮಾದಿಂದ [illegible]

ಮಹಾತ್ಮರಿಗೆ ವಾನರ ಗುರುಗಳೇ ?

[illegible] ಮಹದೇವ [illegible] ಕೊಟ್ಟಿದ್ದನಂತೆ. [illegible] ವಾನರ [illegible] ಮಹಾತ್ಮರ [illegible] ಗಾಂಧೀಜಿ [illegible]

ನಾಜಿ ಗೂಢಚಾರರ ಪ್ರಯತ್ನ

[illegible] ಗೂಢಚಾರರ [illegible] ಮಾಡಿದ್ದಾರೆ

Edited, printed and published by A. R. Nagarajan, at the Sadhvi Press, D Subbiah Road, Mysore

ಆತ್ಮಹತ್ಯೆಯ ಸರಣಿ

[illegible] ಮನೋಹರ [illegible] ಯುವಕನೊಬ್ಬನು [illegible] ಅದೇ ದಿನ [illegible] ಮನೋಹರನ [illegible]

[illegible]

ಟಿ. ಸಿ. ನಟರಾಜನ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

[illegible] ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು [illegible] ಮಾಡಲ್ಪಡುತ್ತದೆ.

[illegible]

ಬೊಂಬಾಯಿಗೂ ನ್ಯೂಯಾರ್ಕ್ ಪಟ್ಟಣಕ್ಕೂ ನೇರವಾಗಿ ರೇಡಿಯೋ-ಟೆಲಿಫೋನ್ ಸಂಬಂಧವು ನೆನ್ನೆ [illegible] ಪ್ರಾರಂಭವಾಯಿತು

ಅಪೇರಾ ಟಾಕೀಸ್

ಜಯಪ್ರದ 3 ನೆಯ ವಾರ

ತಾ. 16-8-44 ರಿಂದ

ಫ್ಯಾಷನ್

ಹಿಂದಿ ಚಿತ್ರ ಪಾತ್ರವಹಿಸಿರುವವರು

ಸರದಾರ್ ಅಖ್ತರ್-ಚಂದ್ರ ಮೋಹನ್

ಸಬಿತಾದೇವಿ-ಬುದ್ದೂ-ಅದ್ವಾನಿ

ಕಾಂತ ಪ್ರಸಾದ್

ಮುಂದಿನ ಬದಲಾವಣೆ

ಭಾಗ್ಯಲಕ್ಷ್ಮಿ

(ತೆಲುಗು ಚಿತ್ರ)

ನಾಗಯ್ಯ, ಮಾಲತಿ,

ಎಸ್. ಎಸ್. ಕೃಷ್ಣನ್, ಮಧುರಂ,

ಮುಂತಾದವರು ಪಾತ್ರವಹಿಸಿರುವರು

ಗೌರೀ ಹಬ್ಬದ ಪ್ರಯುಕ್ತ

[illegible]

ಟೈಲರ್ ಮೇಲೆ ತಯಾರಾದ

ಹೊಲೆದು ಸಿದ್ಧ ಪಡಿಸಿದ

ಉಡುಪುಗಳನ್ನು ಕೊಂಡುಕೊಳ್ಳಿರಿ.

[illegible] ಮಾಡುತ್ತಾರೆ.

ಇವೊತ್ತೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು! ಕೈಗಾರಿಕೆ ಸಂಸ್ಥೆಗಳು!

ಬಾಲಿಕಾ ಶಾಲೆಗಳು! ಮಹಿಳಾ ಚಿಕಿತ್ಸಾಲಯಗಳು!

ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.

ನಮ್ಮಲ್ಲಿ ವಸೂಲಾದ ಹಣ ನಮಗಾಗಿಯೇ ವಿನಿಯೋಗ.

ಬಿ. ಗೋಪಾಲಕೃಷ್ಣ ಶೆಟ್ಟಿ, ಖಜಾಂಚಿ — ಎಸ್. ಚನ್ನಯ್ಯ, ಕಾರ್ಯದರ್ಶಿ — ಹಿರಳ್ಳಿ ದಾಸಪ್ಪ, ಅಧ್ಯಕ್ಷ.

[illegible]

ಸ್ತ್ರೀಯರ ಸೌಂದರ್ಯಕ್ಕೆ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಶ್ಮೀರ ಪೌಡರ್

[illegible]

ಕೆ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ಸಂತೇಪೇಟೆ ಮಂಡಿಗಳಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ [illegible] ಗಳಿಗೆ [illegible] ಹೋಲ್‌ಸೇಲ್ ಮತ್ತು ರಿಟೇಲ್ ಕೊಡಲ್ಪಡುತ್ತದೆ.

[illegible]

ಪುತ್ರೋತ್ಸವ

ಈ ವರ್ಷದ ಗೌರೀಹಬ್ಬಕ್ಕೆ - "ಸಂತಾನ ಸಿಂಧೂರ"

ಮುಂದಿನ ವರ್ಷದ ಗೌರೀ ಹಬ್ಬಕ್ಕೆ 'ಸಂತಾನ'

[illegible] "ಸಂತಾನ ಸಿಂಧೂರ" [illegible] ಗಂಡು ಮಗು [illegible]

ಎ. ರಾಮಸ್ವಾಮಿ ಅಯ್ಯರ್,

ಪ್ರೊಪ್ರೈಟರ್, 'ಸಂತಾನ ಸಿಂಧೂರ' ಆಫೀಸ್,

[illegible]

ಮಹಿಳೆಯರಿಗೆ ಸೌಭಾಗ್ಯ ಪ್ರದವಾದ ಮತ್ತು ಕರಗಳ ಸೌಂದರ್ಯಕ್ಕೆ ಸಹಾಯಕಾರಿಯಾದ ನವನವೀನ ಬಳೆಗಳಿಗೆ

ನಿಮ್ಮ ಮೆಚ್ಚುಗೆಗೆ ಪಾತ್ರವಾದ

ಗ್ಲಾಸ್ ಬಳೆಗಳು — ಕೆಮಿಕಲ್ ಬಣ್ಣದ ಬಳೆಗಳು

ಸೌಭಾಗ್ಯ ಸ್ಟೋರ್ಸ್‌ಗೆ ಬನ್ನಿರಿ

ದೇವರಾಜ ಮಾರ್ಕೆಟ್, ಮೈಸೂರು.

ಸಂಪುಟ ೩] ಗುರುವಾರ ೧೭-೮—೪೪ [ಸಂಚಿಕೆ ೨೧

ಸಂಗ್ರಾಮವು ಬೇಗನೆ ಮುಗಿಯುವುದಿಲ್ಲ

ಹಾರಾಡುವ ಬಾಂಬಿಗಿಂತಲೂ ಭಯಂಕರ ಅಸ್ತ್ರಗಳಿವೆ
ಮದರಾಸಿನಿಂದ ತಮಿಳು ಪ್ರೊಫೆಸರರ ಅವುದೇ?

ಇನ್ನೂ ಭಯಂಕರವಾದ ಅಸ್ತ್ರವಿದೆಯೋ?

ನೂರಾರು ಮತ್ತು ಸಾವಿರಾರು ಮೈಲಿಗಳವರೆಗೂ ಎಸೆಯಬಲ್ಲ ಮತ್ತು ಹಾರಾಡುವ ಬಾಂಬಿಗಿಂತಲೂ ಇನ್ನೂ ಭಯಂಕರವಾದ ವಿನಾಶಕಾರಕ ಯಂತ್ರಗಳಿರಬಹುದು-ಎಂಬುದಾಗಿ ಸಂಯುಕ್ತ ಸಂಸ್ಥಾನದ ಖಜಾನೆಯ ಸೆಕ್ರೆಟರಿ ಹೆನ್ರಿ ಮಾರ್ಗೆಂಥಾರವರು ತಿಳಿಸಿರುವರು. ಇನ್ನೊಂದು ಕಷ್ಟ ಸಹಿಸುತ್ತಿರುವ ಲಂಡನ್ ನಿವಾಸಿಗಳನ್ನು ನೋಡಿದರೆ ಗಾಢವಾದ ಗೌರವವುಂಟಾಗುತ್ತದೆ. ಅಂತಹ ಗೌರವದಿಂದ ಅವರ ನಿರ್ಧಾರವು ಮತ್ತಷ್ಟು ಗಟ್ಟಿಯಾಗುವುದು-ಎಂದು ಅವರು ನುಡಿದರು.

ಹಾರಾಡುವ ಬಾಂಬಿನ ವೇಗ

ಗಂಟೆಗೆ ೩೬೦ ಮೈಲಿ ವೇಗದಲ್ಲಿ ಇಂಗ್ಲೆಂಡಿನ ಮೇಲೆ ಬೀಳುವ ಹಾರಾಡುವ ಬಾಂಬು ಹೋಗುತ್ತದೆ. ಇದು ಸಿಡಿಮದ್ದು ಸ್ಫೋಟವಲ್ಲದೇ ಮತ್ತೇನೂ ಅಲ್ಲವೆಂದು ರಕ್ಷಣಾ ಮಂತ್ರಿಗಳಾದ ಸರ್ ಫಿರೋಜ್ ಖಾನ್ ನೂನರು ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಟ್ಟು ತಿಳಿಸಿದರು. ಈಗ ಆಗಿರುವ ನಷ್ಟದ ಶೈಕಡಾ ೬೦ ರಷ್ಟು ಅಸ್ತ್ರಗಳನ್ನು ನಿರೋಧ ಮಾಡಬಹುದು. ಹಿಂದೆ "ಸಿಡಿಲಿನ ಹೊಡೆತ" ವೆಂದು ಕರೆಯಲ್ಪಡುತ್ತಿದ್ದ ಬಾಂಬಿನ ಧಾಳಿಗಳಷ್ಟು ಭೀತಿದಾಯಕವಲ್ಲ ಇದು ಎಂದಿದ್ದಾರೆ.

ಜರ್ಮನಿಯು ತುರ್ಕಿಯ ಮೇಲೆ ಬೀಳುವುದೇ?

ರಾಜತಾಂತ್ರಿಕ ಸಂಬಂಧವು ಕಡಿದ ಮೇಲೆ ತುರ್ಕಿ ರಾಜ್ಯಕ್ಕೆ ಜರ್ಮನಿಯು ತನ್ನ ಮೇಲೆ ವಿಮಾನ ಧಾಳಿಗಳೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದೆಂಬ ಶಂಕೆಯು ಮೂಡಿರುವುದರಿಂದ ಅತಿ ತ್ವರಿತವಾಗಿ ರಕ್ಷಣಾ ಕಾರ್ಯದಲ್ಲಿ ಅದು ನಿರತವಾಗಿದೆ. ಅವಶ್ಯಕವಾದರೆ ಮುಖ್ಯ ನಗರಗಳ ಸಿವಿಲ್ ಜನರನ್ನೆಲ್ಲಾ ಅಟಿಗೆ ಕಳುಹಿಸಿ ಮಿಲಿಟರಿಯ ಚಟುವಟಿಕೆ ನಡೆಸಲು ಬೇಕಾದ ಪೂರ್ವಭಾವಿ ಕೆಲಸಗಳು ನಡೆಯುತ್ತಿವೆ. ಜರ್ಮನರು ಆಂತರಿಕದಿಂದ ಇಳಿದು ಬಂದರೆ ಅವರನ್ನೆದುರಿಸಲು ಹದಿನಾರರಿಂದ ನಲವತ್ತು ವರ್ಷ ವಯಸ್ಸಿನ ಗಂಡಸರೂ, ಇಪ್ಪತ್ತರಿಂದ ನಲವತ್ತು ವಯಸ್ಸಿನ ಹೆಂಗಸರೂ ತಯಾರಾಗಿರಬೇಕೆಂಬ ಆಜ್ಞೆಯಾಗಿದೆ.

ಟಿಡ್ಡಿಂ-ಇಂಫಾಲ್ ರಸ್ತೆಯಲ್ಲಿ ಕಾದಾಟ

ಇಂಫಾಲ್-ಟಿಡ್ಡಿಂ ರಸ್ತೆಯಲ್ಲಿ ತಮ್ಮ ಮುಖ್ಯ ಬಲಗಳಿಗೆ ರಕ್ಷಣೆಯನ್ನು ಕೊಡುತ್ತಾ ಹಿಂದಕ್ಕೆ ಹೋಗುತ್ತಿರುವ ಜಪಾನಿನ ಹಿಂಭಾಗದ ಪಡೆಗಳೊಂದಿಗೆ ಮಿತ್ರರ ಸೇನೆಗಳು ಸೆಣಸಿ ಕಾದಾಡುತ್ತಾ ಮುಂದೆ ಮುಂದೆ ಹೋಗುತ್ತಿವೆ. ಪ್ರತಿಯೊಂದು ಮೈಲಿಗೂ ಕಾಳಗ ಮಾಡಬೇಕಾಗಿದೆ. ಈಗ ಬರ್ಮಾಗಡಿಯು ಐದು ಮೈಲಿ ದೂರದಲ್ಲಿ ಕದನವಾಗುತ್ತಿದೆ. ಉತ್ತರ ಬರ್ಮಾದಲ್ಲಿ ಚೀಣಾ ಸೇನೆ, ಚಾರ್ಜಿ ಗುಡ್ಡಗಾಡಿನವರಿಂದ ಆರಿಸಿದ ಜನಗಳೊಂದಿಗೆ ಸೇರಿ ಮಿಟ್ಕಿನದಕ್ಷಿಣ ಭಾಗದಲ್ಲಿರುವ ತಾಪೂ ಎಂಬ ಪ್ರದೇಶದಲ್ಲಿ ಈಗ ಹಿಡಿದಿರುವ ಪ್ರದೇಶವನ್ನು ಭದ್ರವಾಗಿಡಲು ಯತ್ನಿಸುತ್ತಿವೆ.

ಸಮರ ಮುಗಿಯುವಂತಿಲ್ಲ

ಜರ್ಮನಿಯ ಪರಿಗಣನೋ ಬಲವಾದ ತಾಡನೆಯಾಗುತ್ತಿದೆ. ಆದರೆ ಯಾರಾದರೂ ಯುದ್ಧವು ಕೇವಲ ಹಲವು ವಾರಗಳಲ್ಲಿಯೇ ಮುಕ್ತಾಯವಾಗುವುದೆಂದು ನಿರೀಕ್ಷಿಸಲು ಹೊರಟರೆ, ಅದು ಕೇವಲ ಊಹೆಯೇ ಹೊರತು ಸಕಾರಣವಾದುದಲ್ಲವೆಂದು ಮಿತ್ರ ಪ್ರಧಾನ ಸೇನಾಧಿಪತಿ ಜನರಲ್ ಐಸನ್‌ಹೋವರು ತಿಳಿಸಿದ್ದಾರೆ. ಮಿತ್ರರು ಸ್ಟೀನ್ ನದಿ ಮುಟ್ಟಬೇಕಾದರೆ ಇಂತಹ ಅನೇಕ ಆಯುಧಗಳ ಬಲಗಳು ಬೇಕು.

ಹಿಟ್ಲರನ ಭೇಟಿ

ಯೂರೋಪಿನಲ್ಲಿ ಹಿಟ್ಲರನ ಅಧಿಕಾರಕ್ಕೆ ಒಳಪಟ್ಟಿರುವ ರಾಜ್ಯಗಳ ಮುಖಂಡರಾದ ಸಿನಾರ್ ಮುಸೋಲಿನಿ, ಅಡ್ಮಿರಲ್ (ವಿಚಿ), ಫೀಲ್ಡ್ ಮಾರ್ಷಲ್ ಮ್ಯಾನರ್‌ಹೀಂ ಮುಂತಾದ ನಾಯಕರನ್ನು ಹಿಟ್ಲರು ಒಡನೆ ಭೇಟಿಯಾಗಬೇಕೆಂದು ಕರೆಸಿ ಕೂಡಲೇ ಸಂಭಾಷಣೆ ನಡೆಯಬಹುದೆಂದು ತಿಳಿಯಬರುತ್ತದೆ.

ಜರ್ಮನರ ಸ್ಟಾಲಿನ್‌ಗ್ರಾಡ್ ಯಾವುದು?

ಕೆನಡಾ ಸೇನೆಯು ಈಗ ಫೆಲಾಯಿಸ್ ನಗರದ ಬಹುಭಾಗವನ್ನು ಹಿಡಿದಿದ್ದು ಜರ್ಮನರು ಪ್ರತಿಭಟನೆ ಮಾಡುತ್ತಿದ್ದಾರೆ. ಒಂದು ಕಡೆ ಈ ನಗರವನ್ನು ಮುತ್ತಿಕೊಳ್ಳಲು ಪದಾತಿಗಳ ಸಹಾಯಕ್ಕೆ ಟ್ಯಾಂಕುಗಳನ್ನು ಕಳುಹಿಸಿದರು. ಅರ್ಜೆಂಟಾನ್ ಹತ್ತಿರ ಒಂಭತ್ತು ಮೈಲಿಯ ಅಂತರ ಸ್ಥಳದಲ್ಲಿ ಸಿಕ್ಕಿಕೊಂಡಿರುವ ಜರ್ಮನ್ ಸೈನ್ಯವು ದ್ವಿತೀಯ ಸ್ಟಾಲಿನ್‌ಗ್ರಾಡ್ ಕಡೆಗೆ ಸಿದ್ಧವಾಗುತ್ತಿದೆ.

ಖಾನ್ ಸಾಹೇಬರ ಮತ್ತು ಗೌರ್ನರರ ಭೇಟಿ

ವಾಯುವ್ಯ ಪ್ರಾಂತದ ಗೌರ್ನರರ ಆಜ್ಞಾನುಸಾರ ಮಂತ್ರಿ ಮಂಡಲದ ಪ್ರಧಾನ ಮಂತ್ರಿ ಡಾ|| ಖಾನ್ ಸಾಹೇಬರು ಗೌರ್ನರರನ್ನು ನಿನ್ನೆ ಭೇಟಿ ಮಾಡಿ, ದೀರ್ಘ ಕಾಲ ಚರ್ಚಿಸಿದರು. ರಾಜಕೀಯ ಅನಿಶ್ಚಿತತೆ ಈ ಸಂಭಾಷಣೆಗೆ ಮಹತ್ವವೀಯಲು ಕಾರಣ. ಸಂಜೆಯ ವೇಳೆಯಲ್ಲಿ ಖಾನ್ ಸಾಹೇಬರು ಗೌರ್ನರರನ್ನು ಇನ್ನೊಮ್ಮೆ ನೋಡಬೇಕಾಯಿತು.

ಮುಖ್ಯೋಪಾಧ್ಯಾಯರ ಆಮದೇ?

ಮೈಸೂರು ೧೭

ಸಂಸ್ಥಾನದಲ್ಲಿ ತಮಿಳು ಭಾಷೆಯಲ್ಲಿ ಪಾರಂಗತರಾಗಿರುವವರಾರೂ ಆ ಭಾಷೆಯ ಮುಖ್ಯೋಪಾಧ್ಯಾಯ ವೃತ್ತಿಗೆ ಸಿಗದೆ ಇರುವುದರಿಂದ ಮದರಾಸಿನಿಂದ ಒಬ್ಬ ತಮಿಳು ಬ್ರಾಹ್ಮಣೇತರ ಪ್ರೊಫೆಸರನ್ನು ಆಮದು ಮಾಡಿಕೊಳ್ಳಲು ಸರಕಾರ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಬಯಸಿದ್ದಾರೆಂದು ತಿಳಿದು ಬಂದಿದೆ.

ವಿಶ್ವವಿದ್ಯಾನಿಲಯ ಸಂಘ

ನಾಳೆ ಸಂಜೆ ೬|| ಗಂಟೆಗೆ ಮಹಾರಾಜಾ ಕಾಲೇಜಿನ ಹಾಲಿನಲ್ಲಿ ಮಹದೇವ ದೇಸಾಯಿ ಅವರ ದಿನ ಚರಣೆ ನಡೆಯುತ್ತದೆ. ಶ್ರೀ ಎಂ. ಎಚ್. ನಂಜರಾಜೇ ಅರಸರು ಅಧ್ಯಕ್ಷತೆ ವಹಿಸುತ್ತಾರೆ. ಶ್ರೀ ಹೆಚ್. ವೈ. ಶಾರದಾಪ್ರಸಾದ್, ಬಹೀರ್ ಹುಸೇನ್ ಮುಂತಾದವರು ಭಾಷಣ ಮಾಡುತ್ತಾರೆ.

ಠಾಕೂರರ ದಿನಾಚರಣೆ

ಬಾಣಿಕೊಪ್ಪಲಿನ ರಾಷ್ಟ್ರೀಯ ಸಂಘದಲ್ಲಿ ನಿನ್ನೆ ಸಂಜೆ ಶ್ರೀಮಾನ್ ಎಂ. ವಿ. ರಾಮಗೋಪಾಲ್ ರವರ ಅಧ್ಯಕ್ಷತೆಯಲ್ಲಿ ಠಾಕೂರರ ದಿನಾಚರಣೆ ನಡೆಸಲಾಯಿತು. ಶ್ರೀಮಾನ್ ಸಿ. ಎನ್. ರಂಗಸ್ವಾಮಿ ಶಾಸ್ತ್ರಿಯವರು ಠಾಕೂರರ ಮೇಲೆ ಭಾಷಣ ಮಾಡಿದರು.

ತಿಲಕ್ ಸಂಘ

ಬಂಟಿಕೊಪ್ಪಲಿನ ತಿಲಕ್ ಸಂಘದಲ್ಲಿ ನಿನ್ನೆ ದಿನ ಮಹದೇವ ದೇಸಾಯರ ದಿನಾಚರಣೆಯನ್ನು ನಡೆಸಲಾಯಿತು. ಬೆಳಗ್ಗೆ ಪ್ರಭಾತಭೇರಿ ಶ್ರೀಮಾನ್ ಎಸ್. ಪಿ. ತೀರ್ಥರವರಿಂದ ಧ್ವಜಾರೋಹಣ ನಡೆಯಿತು. ಸಾಯಂಕಾಲ ಬಾಬು ನೋವಕ್ಕೈವಾದ ಶಂಕರಲಾಲ್ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಶ್ರೀಮಾನ್ ರಾಮನಾಥ ಭಾಷಣ ಮಾಡಿದರು.

ಹರಿಕಥೆ

ದೇವಾಂಗ ಪೇಟೆಯ ಛತ್ರದಲ್ಲಿ ನಾಳೆ ರಾತ್ರಿ ಕೀರ್ತನಕಾರರಾದ ಪ್ರಖ್ಯಾತ ಶ್ರೀ ... ರವರು ... ದಲ್ಲಿ ಸಂಜೆ ೭ ಗಂಟೆಗೆ ... ರವರಿಂದ "ಭ... ಹರಿಕಥೆ" ಎಂಬ ಹರಿಕಥೆ ನಡೆಯುತ್ತದೆ.

ಮಹಾಜನ ಹೈಸ್ಕೂಲು

ಮೈಸೂರು ೧೭

ಲಕ್ಷ್ಮೀವಿಲಾಸಪುರದ ಮಹಾಜನ ಹೈಸ್ಕೂಲಿನಲ್ಲಿ ಸಾಹಿತ್ಯ ಸಂಘದಾಶ್ರಯದಲ್ಲಿ ನೆನ್ನೆ ದಿನ ಸಾಯಂಕಾಲ ಶ್ರೀಮಾನ್ ಕಂಬಳಿ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣಾಷ್ಟಮಿ ಉತ್ಸವವು ನಡೆಯಿತು. ಶ್ರೀಮಾನ್ ಎಂ. ಯಾಮುನಾಚಾರ್ಯರು "ಗೀತೆಯ ಕೃಷ್ಣ" ಎಂಬ ವಿಷಯದ ಮೇಲೆ ಭಾಷಣ ಮಾಡಿದರು.

ಫುಟ್‌ಬಾಲ್

ನೆನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಎರಡು ಡ್ರಾ ಪಂದ್ಯಗಳಲ್ಲಿ ಬೆಂಗಳೂರು ಮುಸ್ಲಿಂ ಕ್ಲಬ್ಬಿನವರು ಮಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ಬನ್ನು ೨ ಗೋಲುಗಳಿಂದಲೂ, ಮಹಾರಾಜಾ ಸ್ಪೋರ್ಟ್ಸಿನವರು ಬೆಂಗಳೂರು ಡ್ರ್ಯಾಗನ್ಸ್ ಕ್ಲಬ್ಬನ್ನು ೪ ಗೋಲುಗಳಿಂದಲೂ ಸೋಲಿಸಿದರು.

ಶಿಕ್ಷೆ

ನಂಜರಾಜ ಬಹದ್ದೂರ್ ಛತ್ರದಲ್ಲಿ ೪ ಪೌಂಡು ರೇಷ್ಮೆಯನ್ನು ರಹದಾರಿ ಇಲ್ಲದೆ ಇಟ್ಟುಕೊಂಡಿದ್ದುದರಿಂದ ಕೃಷ್ಣಶೆಟ್ಟಿ ಎಂಬುವರಿಗೆ ೫೦೦ ರೂ ಜುಲ್ಮಾನೆ, ತಪ್ಪಿದರೆ ೩ ತಿಂಗಳ ಸಜಾ ಆಗಿದೆ.

LATEST NEWS

ಡಾ|| ಸುಬ್ಬರಾಯರು ತಾತ್ಕಾಲಿಕ ವೈಸ್‌ಚಾನ್ಸಲರ್

ಸ್ವಂ.ಸು.ಪ್ರೋ] ಬೆಂಗಳೂರು ೧೭

ತಾತ್ಕಾಲಿಕವಾಗಿ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎ. ಸುಬ್ಬರಾಯರು ವೈಸ್‌ಚಾನ್ಸಲರ ಕೆಲಸಕಾರ್ಯಗಳನ್ನು ನೋಡುವ ಸಂಭವವಿದೆಯೆಂದು ಜವಾಬ್ದಾರೀ ಕಡೆಗಳಲ್ಲಿ ಹೇಳಲಾಗುತ್ತದೆ.

"ಮೆಷೀನ್ ಟೂಲ್ಸ್" ನಿಯೋಗ

ಇಂಗ್ಲೆಂಡಿನಿಂದ ಬಂದು ಭಾರತದಲ್ಲಿ ಪ್ರವಾಸ ಮಾಡುತ್ತಿರುವ "ಮೆಷೀನ್ ಟೂಲ್ಸ್" ನಿಯೋಗದವರು ರಾಜಧಾನಿಗೆ ೩೧ ನೇ ತಾ|| ಪೂನಾನಗರದಿಂದ ಬರುತ್ತಾರೆ. ಸಂಸ್ಥಾನದಲ್ಲಿ ೪ ದಿನಗಳು ಇದ್ದು, ಬೆಂಗಳೂರು, ಹಾಸನ, ಭದ್ರಾವತಿ, ಹರಿಹರ ಮೊದಲಾದ ಸ್ಥಳಗಳಿಗೆ ಭೇಟಿ ಕೊಡುವರು.

ಸಿಟಿ ಬಸ್ ಸರ್ವಿಸ್

ಮೈಸೂರು ೧೭

ಮೈಸೂರು ಸಿಟಿ ಬಸ್ ಸರ್ವೀಸನ್ನು ಮೊದಲಿನಂತೆ ಸೌಕರ್ಯಕರವಾಗಿ ನಡೆಯುವಂತೆ ಏರ್ಪಡಿಸಿಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುವ ಸಲುವಾಗಿ ಈ ದಿನ ಮೈಸೂರು ಪೌರಸಭೆಯ ವಿಶೇಷ ಸಭೆ ನಡೆಯಿತು. ಶ್ರೀ ಪಿ. ಸೀತಾರಾಮಯ್ಯನವರು ಈ ಬಗ್ಗೆ ನಿರ್ಣಯವನ್ನು ಸೂಚಿಸಿದರು. ಶ್ರೀ ಟಿ. ವೆಂಕಟರಮಣಯ್ಯನವರು ಅನುಮೋದಿಸಿದರು. ಶ್ರೀಗಳಾದ ಎಫ್. ಸಿ. ದೇವರಾಜ ಅರಸ್, ಟಿ. ಎಸ್. ಅಲೀಖಾನ್, ಟಿ. ನರಸಿಂಹಯ್ಯಂಗಾರ್ ಮುಂತಾದವರು ನಿರ್ಣಯವನ್ನು ಅನುಮೋದಿಸಿ, ಈಗಿರುವ ಅನಾನುಕೂಲತೆ, ಮತ್ತು ಮಾಡಬೇಕಾಗಿರುವ ಏರ್ಪಾಟಿನ ಬಗ್ಗೆ ಮಾತನಾಡಿದರು. ಸರ್ವಾನುಮತದಿಂದ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಲಂಡನ್ ನಗರ ಜ್ವಲಿಸುವ ಸಮುದ್ರವಾಗಿದೆಯೇ ?

ಲಂಡನ್ ನಗರವು ಈಗ ಜ್ವಾಲೆಗಳ ಸಮುದ್ರವಾಗಿಬಿಟ್ಟಿದೆಯೆಂದು ಜರ್ಮನ್ ಪ್ರಚಾರ ಮಂತ್ರಿ ಗೊಬೆಲ್ಸನು ತನ್ನ ಜನಗಳಿಗೆ ತಿಳಿಸುತ್ತಾ ಇಂಥ "ಗುಟ್ಟುಗೊಬ್ಬ" ತೃಪ್ತನಾಗಿ ...

ಇದರ ವಿವಯವಾಗಿ ... ಉತ್ಸಾಹ ...

ಇವನ್ನೆಲ್ಲಾ ಈ ಯಂತ್ರಕ್ಕೆ ವಿಚಿತ್ರ ವಿಶಾಲಗಳಿವೆ ...

Edited, printed and published by A. R. Nagarajan, at the Sadhvi Press, D. Subbiah Road, Mysore

ತಿರಸ್ಕೃತ ಮಸೂದೆ ಕಾನೂನಾಯಿತು

ಸ್ವಂ.ಸು.] ಬೆಂಗಳೂರು ೧೬.

ಪ್ರಜಾಪ್ರತಿನಿಧಿ ಮತ್ತು ಶಾಸನ ಸಭೆಗಳಲ್ಲಿ ತಿರಸ್ಕೃತವಾದ ಆಡಳಿತೆಯ ಮೇಲೆ ಸುಂಕ ವಿಧಿಸುವ ಮಸೂದೆಯನ್ನು ಸರಕಾರದವರು ವಿಶೇಷಾಧಿಕಾರದಿಂದ ಕಾನೂನು ಮಾಡಿ ಜಾರಿಗೆ ತಂದಿದ್ದಾರೆ.

ಸಚಿವರ ಸಂಚಾರ

ಫೈನಾನ್ಸ್ ಮತ್ತು ರೆವಿನ್ಯೂ ಮಂತ್ರಿ, ಶ್ರೀ ಕೆ. ವಿ. ಅನಂತರಾಮನ್‌ರವರು ಶಿವಮೊಗ್ಗ, ಶೃಂಗೇರಿ, ಚಿಕ್ಕಮಗಳೂರು, ಸಕಲೇಶಪುರ, ಹಾಸನ ಮುಂತಾದ ಕಡೆ ನಾಳೆಯಿಂದ ಪ್ರವಾಸ ಕೈಗೊಳ್ಳುವರು.

ವ್ಯವಸಾಯ ಶೋಧನಾ ನಿಧಿ

ವ್ಯವಸಾಯ ಪರಿಶೋಧನೆಯನ್ನು ನಡೆಸುವ ಸಲುವಾಗಿ ಸರ್ಕಾರಕ್ಕೆ ೨೦ ಲಕ್ಷ ರೂ.ಗಳ ಮೊದಲನೆ ಕಂತಿನ ನಿಧಿಯೊಂದನ್ನು ಸ್ಥಾಪಿಸಬೇಕೆಂದು ಸಂಸ್ಥಾನದ ಅರ್ಥ ಸಮ್ಮೇಳನದ ಅಂಗವಾದ ವ್ಯವಸಾಯ ಬೋರ್ಡಿನವರು ಸರಕಾರಕ್ಕೆ ಶಿಫಾರಸು ಮಾಡುತ್ತಾರೆಂದು ತಿಳಿದುಬಂದಿದೆ. ಈ ಸಂಶೋಧನೆಗಳನ್ನು ನಡೆಸಲು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲ್, ವಿಜ್ಞಾನ ಶಾಸ್ತ್ರದ ಮತ್ತು ವ್ಯವಸಾಯ ಶಾಖೆಯ ಹಲವು ಪ್ರವೀಣರನ್ನೊಳಗೊಂಡ ಸಮಿತಿಯೊಂದು ರಚಿತವಾಗಿದೆ.

ನನ್ನನ್ನು ಚಿಕಿತ್ಸೆಗೊಳಪಡಿಸುತ್ತವೆ ಇದನ್ನು ... ಇದು ತಾನು ಬಂದ ನೆಲೆಯಿಂದ ... ಕ್ರಿಯೆಯೇ ಗೊತ್ತಾಗುತ್ತಿಲ್ಲ.

ಗೌರೀ ಹಬ್ಬದ ಪ್ರಯುಕ್ತ

ಎಂ. ಪಿ. ರಾಮರಾವ್ ಅಂಗಡಿಯವರು ಜ್ಯೆಸಿಕಲ್ ಮೇಲೆ ತರುವ ಹೊಲಿದು ಸಿದ್ಧ ಪಡಿಸಿದ ಉಡುಪುಗಳನ್ನು ಕೊಂಡುಕೊಳ್ಳಿರಿ. ನಂಬಿಕೆಯಿಂದ ವ್ಯಾಪಾರ ಮಾಡುತ್ತಾರೆ.

ನಾಡಿನ ಸ್ವಾತಂತ್ರ್ಯಕ್ಕಾಗಿ ದುಡಿಯಿರಿ

ಯುವಕರಿಗೆ ಭಾಷ್ಯಂರ ಉಪದೇಶ

ಸ್ವಂ.ಸು.] ಕೃಷ್ಣರಾಜನಗರ ೧೪

ನಿನ್ನೆ ದಿನ ದಾಸಪ್ಪಚೆಟ್ಟರ ಛತ್ರದಲ್ಲಿ ವೈಶ್ಯಯುವಜನ ಸಂಘದ ಸಭೆಯು ನಡೆಯಿತು. ಮದರಾಸಿನ ಡೆಪ್ಯುಟಿ ಮೇಯರರಾದ ಶ್ರೀ ಪಿ. ಎಸ್. ಭಾಷ್ಯಂ ಶ್ರೇಷ್ಠಿಯವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಟಿ. ಕೆ. ವೆಂಕಟಾಚಲ ಗುಪ್ತರಿಂದ ಸಂಘದ ಭಾಷಣವಾದ ನಂತರ ಅಧ್ಯಕ್ಷರು ಮಾತನಾಡುತ್ತಾ, ದೇಶದ ಪ್ರತಿಯೊಬ್ಬ ತರುಣ ತರುಣಿಯೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವುದೂ, ರಾಜಕೀಯ ಆಂದೋಳನದಲ್ಲಿ ಭಾಗವಹಿಸಿ, ದೇಶಕ್ಕಾಗಿ ಕಷ್ಟವಹಿಸಿ ಸೇವೆ ನಡೆಸುತ್ತಿರುವುದೂ ಶ್ಲಾಘನೀಯವೆಂದರು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳು ಪ್ರತಿಯೊಬ್ಬನ ಗುರಿಯಾಗಿರಬೇಕು. ಆರ್ಥಿಕಾಭಿವೃದ್ಧಿಯನ್ನು ಕೈಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಇದಿಗೆ ಪ್ರೋತ್ಸಾಹ ಮಾಡುವುದೇ ಅದರ ಒಂದು ಮಾರ್ಗವೆಂದು ಶ್ರೀ ಭಾಷ್ಯಂರವರು ತಿಳಿಸಿದರು. ಕೊನೆಯದಾಗಿ ದಿವಂಗತ ಕಸ್ತೂರಿ ಬಾ ರವರ ಗುಣಗಳನ್ನು ಶ್ಲಾಘಿಸಿ, ಅವರ ಆದರ್ಶವನ್ನು ದೇಶದ ಸ್ತ್ರೀಯರು ಮುಂದಿಟ್ಟುಕೊಳ್ಳಬೇಕೆಂದೂ, ಸ್ಮಾರಕ ನಿಧಿಗೆ ಸಹಾಯಮಾಡಬೇಕೆಂದೂ ಪ್ರಾರ್ಥಿಸಿದರು.

ನಂತರ ಶ್ರೀ ಗೋಪಾಲಕೃಷ್ಣಶೆಟ್ಟರೂ ಮತ್ತು ಕವಿ ಕಿಶೋರ ಸುಬ್ಬರಾಯ ಗುಪ್ತರೂ ಭಾಷಣಮಾಡಿದರು.

ದನಗಳ ಕಳವು

ಈ ಊರಿನಲ್ಲಿ ದನಗಳ ಕಳವು ವಿಪರೀತವಾಗಿದೆ. ಅಧಿಕಾರಿಗಳು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವರೆಂದು ನಂಬಲಾಗಿದೆ.

MEDICINES

Take your requirements from

RAGHULAL & CO.,

1748, Sayaji Rao Road,

(Upstairs, Mysore Hall). MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲಾ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ.,

1748, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು.

ಅಮೇರಿಕಾ-ಭಾರತಗಳಲ್ಲಿ ಭೇದವಿರಲಾರದು

ನೆಹರೂ ಯುವಕ ಸಂಘದವರು ಮೊನ್ನೆ ಗಡಿಫಾರು ಅಜ್ಞೆಗೆ ಒಳಗಾಗಿರುವ ಶ್ರೀ ರೆವರೆಂಡ್ ಆರ್. ಆರ್. ಕೈತಾನರನ್ನು ಸತ್ಕರಿಸಿದರು. ಆ ಸಮಾರಂಭದಲ್ಲಿ ಭಾಷಣ ಮಾಡುತ್ತಾ, ಕೈತಾನರು ಅಮೇರಿಕ ಕ್ಕೂ ಭಾರತಕ್ಕೂ ಭೇದವಿರಲಾರದು. ಭಾರತೀಯರೂ ಅಮೇರಿಕನ್ನರೂ ಒಂದೇ ಕುಟುಂಬಕ್ಕೆ ಸೇರಿದವರು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಭಾರತಕ್ಕೆ ಅಮೇರಿಕಾ ಸಹಾಯ ನೀಡಬೇಕು. ಅದಕ್ಕಾಗಿ ತಮ್ಮ ಕೈಲಾದ ಮಟ್ಟಿಗೂ ಅಮೇರಿಕದಲ್ಲಿ ದುಡಿಯುತ್ತೇನೆಂದು ತಿಳಿಸಿದರು. ಕ್ರಿಸ್ತನ ತತ್ವವನ್ನೇ ಪ್ರತಿಪಾದಿಸುತ್ತಿರುವ ಮಹಾತ್ಮಾ ಗಾಂಧಿಜಿಯವರು ಜಗತ್ತಿನಲ್ಲಿ ಶಾಂತಿ ನೆಲೆಸಲು ಹಗಲಿರುಳೂ ದುಡಿಯುತ್ತಿದ್ದಾರೆಯೆಂದು ಹೇಳಿದರು.

ಕಳೆದ ಒಂಬತ್ತನೇ ತಾರೀಖು ಬೊಂಬಾಯಿಯಲ್ಲಿ ಮುಖಂಡರ ದಸ್ತಗಿರಿಯ ದಿನವನ್ನು ಆಚರಿಸಲು ಪ್ರಯತ್ನಪಟ್ಟಾಗ ಆ ದಿನ ಊರಿನ ಬಂದೋಬಸ್ತಿಗಾಗಿ ಐದು ಸಾವಿರ ಪೋಲೀಸರು ಶಸ್ತ್ರಸಜ್ಜಿತರಾಗಿ ಊರಲ್ಲೆಲ್ಲಾ ಗಸ್ತು ತಿರುಗುತ್ತಿದ್ದರು.

ಬಿನ್ನವತ್ತಳೆ

ಕೃಷ್ಣರಾಜನಗರದ ಹೈಸ್ಕೂಲ್ ಉಪಾಧ್ಯಾಯರಾದ ಶ್ರೀ ಕೆ. ವಿ. ಕೃಷ್ಣಪ್ಪನವರು ಚೆಂತಾಮಣಿಗೆ ವರ್ಗವಾದ ಪ್ರಯುಕ್ತ ಅವರಿಗೆ ವಿದ್ಯಾರ್ಥಿಗಳು ಬಿನ್ನವತ್ತಳೆಯೊಂದನ್ನು ಅರ್ಪಿಸಿದರು. ಉಪಹಾರವೂ ನಡೆಯಿತು.

ರಣಜಿತ್ ಟಾಕೀಸ್

ಅಮೋಘ **2** ನೆಯ ವಾರ

18-8-44 ರಿಂದ

ಶಂಕರ್ ★ ಪಾರ್ವತಿ

★ ಅರುಣ

★ ಸಾಧನ ಬೋಸ್

ಮುಂತಾದವರು ಪಾತ್ರವಹಿಸಿರುವರು

ಸ್ಥಳ ಸಿಗದೆ ನಿರಾಶರಾಗಬೇಡಿ!

ಸೀಟುಗಳನ್ನು ಮೊದಲೇ

ರಿಸರ್ವ್ ಮಾಡಿ

ಪುತ್ರೋತ್ಸವ

ಈ ವರ್ಷದ ಗೌರೀಹಬ್ಬಕ್ಕೆ - "ಸಂತಾನ ಸಿಂಧೂರ"

ಮುಂದಿನ ವರ್ಷದ ಗೌರೀ ಹಬ್ಬಕ್ಕೆ 'ಸಂತಾನ'

ಕೋಟಿಪೇಟೆ ... ಮಕ್ಕಳಿಲ್ಲ ... "ಸಂತಾನ ಸಿಂಧೂರ" ... ಗಂಡು ಮಗು ಹುಟ್ಟಿತು ... ಬೆಲೆ ರೂ. ...

ಎ. ರಾಮಸ್ವಾಮಿ ಅಯ್ಯರ್,

ಪ್ರೊಪ್ರೈಟರ್, 'ಸಂತಾನ ಸಿಂಧೂರ' ಆಫೀಸ್,

ಬಂಬಳಿ, ... ಪೋಸ್ಟ್.

ಶ್ರೀಯುತ ಸೌಕರ್ಯಕ್ಕೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರ್ಯಾಂಡ್ ಕಾಫಿಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ಸಂತೇಪೇಟೆ ಮಂಡಿಯಲ್ಲೂ, ... ಸಕ್ಕರೆ ... ಬೆಲ್ಲ ... ಕೊಡಲ್ಪಡುತ್ತದೆ.

★ ಮಹಿಳೆಯರಿಗೆ ಸೌಭಾಗ್ಯ ಪ್ರದವಾದ ಮತ್ತು ಕರಗಳ ಸೌಂದರ್ಯಕ್ಕೆ ಸಹಾಯಕಾರಿಯಾದ ನವನವೀನ ಬಳೆಗಳಿಗೆ ★

ನಿಮ್ಮ ಮೆಚ್ಚುಗೆಗೆ ಪಾತ್ರವಾದ

ಪ್ರಸಿದ್ಧ ಬೋರ್ಡುಗಳು

ದೇವರಾಜ ಮಾರ್ಕೆಟ್, **ಶ್ರೀ ಸೌಭಾಗ್ಯ ಸ್ಟೋರ್ಸ್‌ಗೆ ಬನ್ನಿರಿ** ಮೈಸೂರು.

ಕೆಮಿಕಲ್ ಮುಂತಾದ ಬಳೆಗಳ

ಮೈಸೂರು ಮುಳಕನಾಡು ಸಂಘ

ಮೈಸೂರು ೧೮

ಹಳೇ ಅಗ್ರಹಾರದ ಅಂಗಡಿ ಬೀದಿಯಲ್ಲಿ ಬ್ರಾಹ್ಮಣ ಧರ್ಮಸಹಾಯ ಸಭಾ ಕಟ್ಟಡದಲ್ಲಿರುವ ಮುಳಕನಾಡು ವಿದ್ಯಾರ್ಥಿ ನಿಲಯದಲ್ಲಿ ಮೇಲ್ಕಂಡ ಸಂಘದ ತ್ರೈಮಾಸಿಕ ಸಭೆಯು ನಿನ್ನೆ ಸಂಜೆ ರಾಜಸೇವಾಸಕ್ತ ಎಂ. ರಾಮರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಳೆದ ಮೂರು ತಿಂಗಳ ಜಮಾ ಖರ್ಚನ್ನು ಪರಿಶೀಲಿಸಿ ಒಪ್ಪಲಾಯಿತು. ಬ್ರಾಹ್ಮಣ ಧರ್ಮಸಹಾಯ ಸಭೆಯ ವಸೂಲಿ ಕೆಲಸವಮಾಡುತ್ತಿರುವ ಶ್ರೀ॥ ವೆಂಕಟಸುಬ್ಬಯ್ಯನವರಿಗೇನೆ ಈ ಸಂಘದ ಚಂದಾ ವಸೂಲಿ ಕೆಲಸವನ್ನು ವಹಿಸಿಕೊಡಬಹುದೆಂದು ಒಪ್ಪಲಾಯಿತು. ಕಾರ್ಯದರ್ಶಿಗಳಾದ ವೇ॥ ಮಹಾವಿದ್ವಾನ್ ನಂ॥ ಶ್ರೀಕಂಠಶಾಸ್ತ್ರಿಗಳವರ ಜೊತೆಗೆ ಶ್ರೀ ಬಿ. ವಿ. ನಂಜುಂಡಯ್ಯನವರನ್ನೂ ವರ್ಕಿಂಗ್ ಸೆಕ್ರೆಟರಿಗಳಾಗಿ ತೆಗೆದುಕೊಳ್ಳಲಾಯಿತು. ವಿದ್ಯಾರ್ಥಿನಿಲಯದ ದಿನಚರಿ ಆಡಳಿತದ ವ್ಯವಸ್ಥೆಯನ್ನು ಶ್ರೀಗಳಾದ ಆರ್. ಯಜ್ಞೇಶ್ವರ ಶಾಸ್ತ್ರಿಗಳೂ ಜಿ. ವೆಂಕಟಸುಬ್ಬಯ್ಯನವರೂ ಸಹಕರಿಸಿ ನೋಡಿಕೊಳ್ಳಬೇಕೆಂದೂ ಒಪ್ಪಲಾಯಿತು.

ತಿಲಕರ ದಿನಾಚರಣೆ

ನಿನ್ನೆ ಸಂಜೆ ಲೋಕಮಾನ್ಯ ಬಾಲಗಂಗಾಧರ ತಿಲಕರ ದಿನಾಚರಣೆಯನ್ನು ರಾಷ್ಟ್ರೀಯ ಸಂಘದವರು ಆಂಡಾಳ್ ಮಂದಿರದಲ್ಲಿ ನಡೆಸಿದರು. ಶ್ರೀಮಾನ್ ಅಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನಾನಂತರ ಶ್ರೀಗಳಾದ ಸಿ. ಎಸ್. ಕೃಷ್ಣಸ್ವಾಮಿ, ಕೆ. ಎಸ್. ಅನಂತರಾಮಯ್ಯ, ಸುಬ್ರಹ್ಮಣ್ಯಂ ಎಚ್. ಕೆ. ಕುಮಾರಸ್ವಾಮಿ ಮುಂತಾದವರು ತಿಲಕರ ಪವಿತ್ರ ಜೀವನ, ವೀರಚರಿತ್ರೆ, ಅದ್ಭುತ ಕಾರ್ಯಗಳ ವಿಚಾರವಾಗಿ ಭಾಷಣಮಾಡಿದರು. ಅಧ್ಯಕ್ಷರು ತಿಲಕರ ಚರಿತ್ರೆಯಿಂದ ಯುವಕರು ಅರಿಯಬೇಕಾದ ಆದರ್ಶಮಾರ್ಗಗಳನ್ನು ವಿವರಿಸಿದರು. ಮಂಗಳಾರತಿಯೊಡನೆ ಈ ಉತ್ಸವವು ಮುಕ್ತಾಯವಾಯಿತು.

ಹಿಂದೀ ಪರೀಕ್ಷೆಗಳು

ಪ್ರವೇಶಿಕಾ ಮತ್ತು ರಾಷ್ಟ್ರಭಾಷಾ ವಿಶಾರದ ಪರೀಕ್ಷೆಗಳು ಇದೇ ಮಾಹೆ ೧೯ನೇ ತಾರೀಖು ಶನಿವಾರ ೧೧ ಗಂಟೆಗೂ ಪ್ರಾಥಮಿಕ ಮಧ್ಯಮಾ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ಭಾನುವಾರ ೧೧ ಗಂಟೆಗೂ ಡಿ॥ ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುತ್ತವೆ.

ಭಾಷಣ

ತಾ॥ ೧೯ ನೇ ಶನಿವಾರ ಸಂಜೆ ೭ ಘಂಟೆಗೆ ಟೌನ್‌ಹಾಲಿನಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಇಂದಿನ ರಾಜಕೀಯ ಪರಿಸ್ಥಿತಿ, ಆಹಾರ ಸಮಸ್ಯೆ, ಚುನಾವಣೆ, ಎಂಬ ವಿಷಯವಾಗಿ ಭಾಷಣ ಮಾಡುತ್ತಾರೆ.

ಫುಟ್‌ಬಾಲ್

ನಿನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಎರಡು ಪಂದ್ಯಗಳಲ್ಲಿ ಬೆಂಗಳೂರು ಮುಸ್ಲಿಂಸ್ ಕ್ಲಬ್ಬಿನವರು ಮೈಸೂರು ಮಾರ್ಸ್ ಕ್ಲಬ್ಬನ್ನು ೩-೧ ಗೋಲುಗಳಿಂದ ಸೋಲಿಸಿ, ಛಾಲೆಂಜ್ ಟ್ರೋಫಿಯನ್ನು ಗೆದ್ದರು. ಬೆಂಗಳೂರು ರೇಂಜರ್ಸ್ ಕ್ಲಬ್ಬನ್ನು ೩-೧ ಗೋಲುಗಳಿಂದಲೂ ಸೋಲಿಸಿದರು.

ಸಂಪುಟ ೩] ಶುಕ್ರವಾರ ೧೮--೮--೪೫ [ಸಂಚಿಕೆ ೨೨

ಗಾಂಧೀ-ವೈಸರಾಯರ ಈಚಿನ ಪತ್ರವ್ಯವಹಾರ

ಅನಂತರಾಮರ ಸ್ಥಾನದಲ್ಲಿ ಬೇರೆ ಮಂತ್ರಿ ನೇಮಕವಿಲ್ಲವೇ?

ದೇವರುಗಳಿಗೂ ಮನುಷ್ಯರಷ್ಟೇ ರೇಷನ್

ಸಚಿವರ ಸ್ಥಾನ ಭರ್ತಿ ಇಲ್ಲ

ಸ್ವಂ. ಸು. ಫೋ.] ಬೆಂಗಳೂರು ೧೮

ಶ್ರೀ ಕೆ. ವಿ. ಅನಂತರಾಮರವರು ಸೆಪ್ಟೆಂಬರ್ ೧೫ಕ್ಕೆ ನಿವೃತ್ತರಾಗುವರಷ್ಟೆ. ಅವರ ಸ್ಥಾನದಲ್ಲಿ ಬೇರೊಬ್ಬ ಮಂತ್ರಿಗಳನ್ನು ನೇಮಿಸುವುದಿಲ್ಲವೆಂದು ಗೊತ್ತಾಗಿದೆ. ಏಕೆಂದರೆ ಈಗಾಗಲೇ ಒಬ್ಬ ಹೆಚ್ಚಿಗೆ ಮಂತ್ರಿಗಳಿದ್ದಾರೆ.

ದಿವಾನ್-ಕಾಂಗ್ರೆಸ್ ಅಧ್ಯಕ್ಷ ಭೇಟಿ ಅಸಂಭವ?

ಈಗಿನ ವರೆಗೂ ದಿವಾನರಿಗೂ ಕಾಂಗ್ರೆಸ್ ಅಧ್ಯಕ್ಷರಿಗೂ ನಡೆದಿರುವ ಪತ್ರವ್ಯವಹಾರದಿಂದ, ಸಧ್ಯಕ್ಕೆ ಭೇಟಿಯು ಅಸಂಭವವೆಂದು ಹೇಳಬಹುದಾಗಿದೆ. ಈಚೆಗೆ ಸರ್ಕಾರದಿಂದ ಹೋದ ಪತ್ರವು ಯಾಗ ಹೇಳಲು ಕೆಲವು ಸೂಚನೆಗಳನ್ನು ಕೊಟ್ಟಿವೆ ಸನ್ನದನ್ನು ವಾಪಸು ಕೊಡುವುದೇ ಮೊದಲಾದ ವಿಚಾರಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಡನೆ ಪ್ರಸ್ತಾಪ ಮಾಡಬಹುದೆಂದೂ, ದಿವಾನರನ್ನೇ ಭೇಟಿ ಮಾಡಿ, ಚರ್ಚಿಸಲು ಅಂಥ ರಾಜಕೀಯ ಪರಿಸ್ಥಿತಿಯು ಪ್ರಕೃತದಲ್ಲಿ ಏನೂ ಇಲ್ಲವೆಂದೂ, ಆಹಾರ ಸಮಸ್ಯೆಯನ್ನು ಚರ್ಚಿಸಬೇಕಾದರೆ, ಸಂಬಂಧಪಟ್ಟ ಸಚಿವರನ್ನು ಕಂಡು ಮಾತನಾಡಬಹುದೆಂದೂ, ಆ ಪತ್ರದಲ್ಲಿ ನಮೂದಾಗಿದೆಯೆಂದು ಕಾಂಗ್ರೆಸ್ ವೃಂದಗಳಲ್ಲಿ ಹೇಳಲಾಗಿದೆ.

ಶಿಕ್ಷಣ ಅಸಿ ಇನ್ಸ್‌ಪೆಕ್ಟರುಗಳು

ಹೆಚ್ಚುತ್ತಿರುವ ಪ್ರಾಥಮಿಕ ಶಾಲೆಗಳ ಇನ್ಸ್‌ಪೆಕ್ಷನ್ ಸರಿಯಾಗಿ ನಡೆಯುವುದಕ್ಕೋಸ್ಕರ, ಹತೋಟಿ ಚೆನ್ನಾಗಿರುವಂತೆಯೂ, ೧೫ ಮಂದಿ ಹೆಚ್ಚಿನ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳ ಹುದ್ದೆಗಳನ್ನು ಮಂಜೂರ್ ಮಾಡಿ, ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಈ ಪೈಕಿ ೧೧ ಮಂದಿ ಕನ್ನಡ ಪ್ರಾಥಮಿಕ ಶಾಲೆಗಳ ಇನ್ಸ್‌ಪೆಕ್ಟರು, ಒಬ್ಬರು ಉರ್ದು ಪ್ರಾಥಮಿಕ ಶಾಲೆಗಳ ಇನ್ಸ್‌ಪೆಕ್ಟರು.

ಸಂಸ್ಕೃತ ಕಾಲೇಜು ಸಮಿತಿ

ಮೇಲ್ಕಂಡ ಸಮಿತಿಗೆ, ದಿವಂಗತ ಧರ್ಮಶಾಸ್ತ್ರವಿಶಾರದ ಶ್ರೀ ಆರ್. ಕುಮಾರಶಾಸ್ತ್ರಿಗಳ ಸ್ಥಾನದಲ್ಲಿ ರಾಜಸೇವಾ ಪ್ರಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರನ್ನು ನಾಮಕರಣ ಮಾಡಲಾಗಿದೆ.

ಮನುಷ್ಯರಷ್ಟೇ ದೇವರುಗಳಿಗೆ ರೇಷನ್

ಮದರಾಸು ಆಹಾರಕ್ಕದ ರೇಷನ್ ಅಧಿಕಾರಿಗಳಾದ ಮಿ॥ ಗ್ರಿಫಿತ್‌ರವರು ಮುಜರಾಯಿ ದೇವಸ್ಥಾನಗಳ ದೇವರುಗಳಿಗೆ ನೈವೇದ್ಯಕ್ಕಾಗಿ ಕೊಡುವ ರೇಷನ್ ವಿಷಯವನ್ನು ವಿವರಿಸುತ್ತಾ ಹೀಗೆ ಹೇಳಿರುವರು:—ಒಂದು ದೇವರಿಗೆ ನೈವೇದ್ಯರೂಪದಲ್ಲಿ ಅರ್ಪಿಸುವ ಪದಾರ್ಥದ ಪ್ರಮಾಣವು ಒಬ್ಬ ಪುರುಷನ ಆಹಾರದಷ್ಟು ಇರಬೇಕೆಂದು ಆಗಮ ಶಾಸ್ತ್ರಗಳಲ್ಲಿ ಹೇಳಿದೆ. ಒಂದಕ್ಕಿಂತಲೂ ಹೆಚ್ಚು ದೇವರುಗಳಿರುವ ದೇವಾಲಯಗಳಲ್ಲಿ ಒಂದೊಂದು ದೇವರಿಗೂ ಒಬ್ಬೊಬ್ಬ ಮನುಷ್ಯನ ರೇಷನನ್ನು ಕೊಡಲಾಗುವುದು. ದೇವಸ್ಥಾನದ ಸೇವಕರುಗಳಿಗೇ ನೈವೇದ್ಯವನ್ನು ಕೊಟ್ಟುಬಿಡುವ ಕಡೆಗಳಲ್ಲಿ ಹೆಚ್ಚು ರೇಷನ್ ಕೊಡಲಾಗುವುದು. ಆದರೆ ಅಂಥ ಸೇವಕರ ಸ್ವಂತ ರೇಷನನ್ನು ಕಟಾಯಿಸಲಾಗುವುದು. ಉತ್ಸವಕಾಲಗಳಲ್ಲಿ ದೇವಸ್ಥಾನಗಳಿಗೆ ವಿಶೇಷ ರೇಷನ್ ಕೊಡಲಾಗುವುದು. ಬ್ರಾಹ್ಮಣರಿಗೆ ಉಚಿತ ಭೋಜನ ಹಾಕುವ ಕಡೆಗಳಿಗೆ ಸರಿಯಾದ ರೇಷನ್ ಕೊಡಲಾಗುವುದು. ಆದರೆ ಅಲ್ಲಿ ಊಟಮಾಡುವವರ ಸ್ವಂತ ರೇಷನನ್ನು ಖೋತಾ ಹಾಕಲಾಗುವುದು. ಯಾರಿಗೂ ಹೆಚ್ಚು ರೇಷನ್ ಸೇರಕೂಡದೆಂಬುದೇ ಇದರ ಉದ್ದೇಶ.

ಮಿ॥ ಜಾರ್ಜ್ ಮ್ಯಾಥನ್

ಆಹಾರ ಶಾಖೆಯ ಅಧಿಕಾರಿಗಳಾದ ಮಿ॥ ಜಾರ್ಜ್ ಮ್ಯಾಥನ್‌ರನ್ನು ಒಂದು ತಿಂಗಳ ಕಾಲ ಆಹಾರ ಸಮಸ್ಯೆಯ ಸಂಬಂಧದಲ್ಲಿ ಸ್ಪೆಷಲ್ ಅಧಿಕಾರಿಗಳನ್ನು ನೇಮಕಮಾಡಲಾಗಿದೆ.

ದಂಡಿನ ಸುದ್ದಿ

ಧರ್ಮಪ್ರಕಾಶ ಕೃಷ್ಣಸ್ವಾಮಿನಾಯ್ಡುರವರನ್ನು ಡಿಸೆಂಬರ್ ೭ ರಿಂದ (೧೯೪೪) ಎರಡು ವರ್ಷಗಳು ದಂಡಿನ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಲಾಗಿದೆ.

ಟಿ॥ ರಾಮಮನೋಹರ್ ಲೋಹಿಯಾರವರಿಂದ ಬರೆಯಲ್ಪಟ್ಟ "ಸಟ್ಯಾಜೆ ಜಾಬಿ" ಎಂಬ ಉರ್ದು ಪುಸ್ತಕಕ್ಕೆ ಮುಟ್ಟುಗೋಲು ಹಾಕಲಾಗಿದೆ.

ಹೆಚ್ಚಿ ಎಲುಬುಗಳನ್ನು ಸಂಸ್ಥಾನದಿಂದ ಹೊರಗೆ ಎಲ್ಲಿಗೂ ರಫ್ತುಮಾಡಕೂಡದೆಂದು, ಆಜ್ಞೆಯಾಗಿದೆ.

ಗಾಂಧೀ-ವೈಸ್ರಾಯ್ ಪತ್ರವ್ಯವಹಾರ

ಕಳೆದ ತಿಂಗಳಲ್ಲಿ ಗಾಂಧೀಜಿಯವರಿಗೂ ವೈಸರಾಯರಿಗೂ ಈ ಕೆಳಗೆ ಕಂಡಂತೆ ಪತ್ರವ್ಯವಹಾರ ನಡೆಯಿತು:—

ಗಾಂಧೀಜಿ ಪತ್ರ:—ಜು. ೧೫—ಮಿತ್ರರೇ, ನನ್ನ ಪ್ರಾರ್ಥನೆಗಳೆಲ್ಲ ಒಂದಾದರೂ ನೆರವೇರುವುದೆಂದು ನಂಬಿದ್ದೇನೆ.

ವೈಸ್ರಾಯರ ಉತ್ತರ—ಮಿ॥ ಗಾಂಧೀ, ನಾನು ಹಿಂದೆ ಹೇಳಿದಂತೆ ನೀವು ಒಂದು ಕಾರ್ಯಕಾರಿಯಾದ ನೀತಿಯನ್ನು, ಕಾರ್ಯಕ್ರಮವನ್ನು ತಿಳಿಸಿದರೆ ಆಲೋಚಿಸುತ್ತೇನೆ.

ಗಾಂಧೀಜಿ:—ನಿಮ್ಮ ಕಾಗದ ನೋಡಿ ಸಂತೋಷವಾಯಿತು. ಆದರೆ ಸಂತೋಷಿಯಲ್ಲೇ ನಾನೂ ಕೆಲಸಮಾಡುತ್ತೇನೆ. ಈಗಿನ ಪರಿಸ್ಥಿತಿಯನ್ನು ಗಮನಿಸಿ ನಾನು ವರ್ಕಿಂಗ್ ಕಮಿಟಿಗೆ ಆಗಸ್ಟ್ ನಿರ್ಣಯ ವಾಪಸು ತೆಗೆದುಕೊಳ್ಳುವಂತೆಯೂ ಯುದ್ಧೋದ್ಯಮಕ್ಕೆ ನೆರವಾಗುವಂತೆಯೂ ಹೇಳುತ್ತೇನೆ. ಆದರೆ ಇದಕ್ಕೆ ಮೊದಲು ತಕ್ಷಣ ಭಾರತ ಸ್ವಾತಂತ್ರ್ಯ ಘೋಷಣೆಯಾಗಬೇಕು. ಕೇಂದ್ರ ಅಸೆಂಬ್ಲಿಗೆ ಜವಾಬ್ದಾರಿಯಾದ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾಗಬೇಕು.

ವೈಸರಾಯರ ಉತ್ತರ:—

ನಿಮ್ಮ ಕಾರ್ಯಕ್ರಮವನ್ನು ಈಗಲೇ ಅನುಸರಿಸಲು ಸಾಧ್ಯವಿಲ್ಲ. ಯುದ್ಧ ಮುಗಿಯುವವರೆಗೂ ಪೂರ್ಣ ಸ್ವಾತಂತ್ರ್ಯ ಪ್ರಕ್ರಿಯಾಗಲಿ ಸರ್ಕಾರದ ಬದಲಾವಣೆಯಾಗಲಿ ಸಾಧ್ಯವೇ ಇಲ್ಲ. ಯುದ್ಧ ಮುಗಿಯುವವರೆಗೂ ಭಾರತದಲ್ಲಿ ನಮ್ಮ ಜವಾಬ್ದಾರಿ ಬಹಳ ಇದೆ. ಮೈನಾರಿಟಿ ಪ್ರಶ್ನೆ ಸಾಮಾನ್ಯವಾದುದಲ್ಲ. ಈಗಿನ ಸರ್ಕಾರದೊಡನೆ ಯೇ ಎಲ್ಲಾ ಪಂಗಡದವರೂ ಸಂಪೂರ್ಣವಾಗಿ ಸಹಕರಿಸಿ ಯುದ್ಧಾನಂತರ ರಚನೆ ಬಗ್ಗೆ ಈಗಿನಿಂದಲೇ ಸ್ವಲ್ಪವೂ ಕಾಲಹರಣ ಮಾಡದೆ ಕೆಲಸಮಾಡಬಹುದು.

ಮುಖಂಡರ ವರ್ಗ

ಬಂಧನದಲ್ಲಿರುವ ಕಾಂ॥ ಕಾರ್ಯಕಾರಿ ಮಂಡಲಿಯ ಸದಸ್ಯರನ್ನು ಅವರವರ ಪ್ರಾಂತದ ಜೈಲುಗಳಿಗೆ ವರ್ಗಾಯಿಸಲಾಗುವುದೆಂದು ವದಂತಿ ಇದೆ. ಪಂ॥ ನೆಹರೂ ಆಚಾರ್ಯ ಕೃಪಲಾನಿ, ಆಚಾರ್ಯ ನರೇಂದ್ರದೇವ್ ಮತ್ತು ಪಂ॥ ಗೋವಿಂದ ವಲ್ಲಭಪಂತರನ್ನು ನೈನಿ ಜೈಲಿಗೆ ಕಳುಹಿಸಲಾಗುವುದೆಂದು ಹೇಳಲಾಗಿದೆ.

ನ್ಯಾಯಸ್ಥಾನ

ರಹದಾರಿಯಲ್ಲಿದ್ದ ಸಿ. ಸ್ಟೇ. ರೆಸ್ಟ್ ಇನ್ಸ್‌ಪೆಕ್ಟರಿಂದ ರಂಗಯ್ಯ ಎಂಬುವನಿಗೆ ಆರು ದಂಡವೂ, ಮೊನ್ನೆ ರಾತ್ರಿ ಮಂಜ ಕೆರೆಯಲ್ಲಿ ಯಾರನ್ನು ಹಿಡಿಯುತ್ತಿದ್ದರೆಂದು ೬ ಜನ ಬೆಸ್ತರಿಗೆ ತಲಾ ಎರಡು ರೂ ದಂಡವೂ, ಸೀನಿಯರ್ ಅಸಿಸ್ಟೆಂಟ್ ನಾಗಭೂಷಣರಾಯರ ಪೈಕ್ಕಳನ್ನು ಕದ್ದ ಬಸವಣ್ಣ ಎಂಬುವನಿಗೆ ಗುಡಿನ ಕಠಿಣ ಸಜವೂ ಆಯಿತು.

ನಂ॥ ವಿದ್ಯಾರ್ಥಿ ಸಂಘ

ಈ ಸಂಘದ ಸಂಚಾಲಕರಾದ ಎ. ಸುಬ್ಬರಾವ್ ಮತ್ತು ಪ್ರಸನ್ನ ಕುಮಾರರವರು ತಿಳಿಸುವುದೇನೆಂದರೆ:—

ನಂಜನಗೂಡಿನಿಂದ ಮೈಸೂರಿಗೆ ವಿದ್ಯಾರ್ಜನೆಗಾಗಿ ರೈಲಿನಲ್ಲಿ ಬರುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘಕ್ಕೆ ಮೈಸೂರಿನಲ್ಲಿರುವ ನಂಜನಗೂಡಿನ ವಿದ್ಯಾರ್ಥಿಗಳೆಲ್ಲರ ಸಹಾಯವನ್ನು ಕೋರುತ್ತಾರೆ.

ರಾಜಧಾನಿಯ ಬಸ್ ಸರ್ವೀಸ್ ವ್ಯವಸ್ಥೆ

ಪೌರಸಭೆಯ ವಿಶೇಷ ಸಭೆಯಲ್ಲಿ ತೀರ್ಮಾನ

ಮೈಸೂರು ೧೮

ಮೈಸೂರು ಸಿಟಿ ಬಸ್ ಸರ್ವೀಸನ್ನು ನಡೆಯಲಿಸಂತೆ ನಾಗರಿಕರಿಗೆ ಸೌಕರ್ಯಪಡಿಸಿ ಕೊಡುವ ಸಲುವಾಗಿ ನಿನ್ನೆ ಸಂಜೆ ಪೌರಸಭೆಯ ವಿಶೇಷ ಸಭೆಯು ಶ್ರೀ ಆರ್. ರಾಮಚಂದ್ರರಾವ್ ಛಾಂಸ್ಫೋರೆಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಸರ್ಕಾರದವರು ಮೈಸೂರು ಸಿಟಿ ಸರ್ವೀಸ್ ಬಸ್ಸನ್ನು ನಡೆಸಲಿನಂತೆ ನಾಗರಿಕರಿಗೆ ಸೌಕರ್ಯಪಡಿಸಿಕೊಡಬೇಕೆಂದು ಕೇಳಿಕೊಳ್ಳುವ ನಿರ್ಣಯವನ್ನು ಶ್ರೀ ಸಿ. ಸೀತಾರಾಮಯ್ಯನವರು ಸೂಚಿಸಿದರು. ರಾಜಧಾನಿಯ ಸಿಟಿ ಬಸ್ ಸರ್ವೀಸಿನ ಇತಿಹಾಸವನ್ನು ಸಂಗ್ರಹವಾಗಿ ಹೇಳಿದರು. ಹಲವು ವರ್ಷಗಳ ಹಿಂದೆ ಇದೇ ಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದು ರಾಜಧಾನಿಯಲ್ಲಿ ಬಂದ ಮ್ಯುನಿಸಿಪಲ್ ಸರ್ವೀಸ್ ಅಥವಾ ಸಾರ್ವಜನಿಕ ಸಂಘವೊಂದರಿಂದ ಬಸ್ ಸರ್ವೀಸನ್ನು ಇಡಬೇಕೆಂದು ನಿರ್ಣಯ ವಾಗಿತ್ತು. ಕಡೆಗೆ ೫ ವರ್ಷಗಳ ಅವಧಿಯ ಮೇಲೆ ಶ್ರೀ ಪೆರುಮಾಳ್‌ಚೆಟ್ಟರವರಿಗೆ ಈ ಸರ್ವೀಸನ್ನು ನಡೆಸಿ, ಹಲವು ರಿಯಾಯಿತಿಗಳನ್ನು ಕೊಡಲಾಯಿತು. ಪೆಟ್ರೋಲ್, ತೆರಿಗೆ ರಿಯಾಯಿತಿ ಮುಂತಾದುವನ್ನು ಕೊಡಲಾಯಿತು. ನಿಲ್ದಾಣಗಳ(?) ಮುಂತಾದ ಸೌಕರ್ಯ ಒದಗಿಸಲಾಯಿತು. ಕೆಲ ವರ್ಷಗಳ ಬಸ್ ನಡೆಯುತ್ತಿದ್ದರೂ ಈಚೆಗೆ ಯುದ್ಧದ ದೆಸೆಯಿಂದ ಬಂದ ಅನಿವಾರ್ಯಗಳಿಂದ ಸರ್ವೀಸು ಸಮರ್ಪಕವಾಗಿ ನಡೆಯುತ್ತಿಲ್ಲ. ಈ ತಿಂಗಳು ೧ ನೇ ತಾ|| ನಿಂದ ೮ ನೇ ತಾ|| ವರೆಗೆ ಸಂಪೂರ್ಣವಾಗಿ ನಿಂತೇ ಹೋಗಿತ್ತು. ಈಗ ಕೇವಲ ೧೦ ಬಸ್ಸು ಓಡಾಡುತ್ತಿವೆ. ಇದು ಸಿಂತರಾ ಈ ನಗರಕ್ಕೆ ಸಾಲದು. ನಮ್ಮದಂ ಮೈಸೂರಿನ ರಾಜಧಾನಿಯಲ್ಲಿ ಬಸ್ ಸರ್ವೀಸ್ ಪ್ರಜೆಗಳಿಗೆ ಸೌಕರ್ಯವಾಗುವಂತೆ ಏರ್ಪಡಿಸಿ ಕೊಡಲು ನಾವು ಸರ್ಕಾರವನ್ನು ಒತ್ತಾಯಪಡಿಸಬೇಕು, ಎಂದು ಹೇಳಿದರು.

ಶ್ರೀ ಟಿ ವೆಂಕಟರಮಣಯ್ಯನವರು ನಿರ್ಣಯವನ್ನು ಅನುಮೋದಿಸಿ ಹೀಗೆ ಹೇಳಿದರು: —ಬೆಂಗಳೂರಿನ ಸಿಟಿ ಸರ್ವೀಸಿಗೆ ತಿಂಗಳಿಗೆ ೭೦೦೦ ಗ್ಯಾಲನ್ ಪೆಟ್ರೋಲ್ ಕೊಡಲಾಗುತ್ತಿದೆ. ಈ ಪ್ರಕಾರ ೧ ಬಸ್ಸಿಗೆ ದಿನಕ್ಕೆ ೩ ಗ್ಯಾಲನಂತೆ ಕೇವಲ ೧೦ ಬಸ್ಸುಗಳಿಗೆ ಕೊಡಲಾಗುತ್ತಿದೆ. ಇದು ಸಾಲದು. ಇದ್ದಲಿನಿಂದ ಬಸ್ಸುಗಳು ಬಹಳ ಕಾಲ ನಡೆಯುವುದಿಲ್ಲ. ಆದ್ದರಿಂದ ಸರ್ಕಾರದವರು ಬೆಂಗಳೂರಿನಂತೆ ಇಲ್ಲಿಯೂ ಪೆಟ್ರೋಲನ್ನು ಜಾಸ್ತಿಯಾಗಿ(?) ಒದಗಿಸಬೇಕು. ಈಗಿನ ಸರ್ವೀಸ್ ಮಾಲೀಕರಾದ ಶ್ರೀ ಪೆರುಮಾಳ್‌ಚೆಟ್ಟಿಯಾರವರ ಅಥವಾ ಇನ್ನಾರಿಂದಲೇ ಆಗಲಿ ಮಾಡಬೇಕೆಂ... ಈ ಸರ್ಕಾರದ ಉದ್ದೇಶದಲ್ಲಿ ಪ್ರಜೆ ನಿವಾಸಿಗಳಿಗೆ ಅನುಕೂಲವಾಗುವಂತೆ ಸರ್ಕಾರದವರು ಸರ್ವೀಸನ್ನು ವ್ಯವಸ್ಥೆಗೊಳಿಸಬೇಕೆಂಬುದೇ ನನ್ನ ಅಭಿಪ್ರಾಯ.

ಜಿಲ್ಲಾಧಿಕಾರಿಗಳ ಪತ್ರ

ಮೈ|| ಡೆಪ್ಯುಟಿ ಕಮೀಷನರಿಂದ ಈ ಬಗ್ಗೆ ಬಂದಿದ್ದ ಪತ್ರವನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ೧೯೩೭ ನೆಯ ಜುಲೈನಲ್ಲಿ ಪೆರುಮಾಳ್ ಚೆಟ್ಟರವರಿಗೆ ಐದು ವರ್ಷದ ಕರಾರಿನ ಮೇಲೆ ಸರ್ವೀಸನ್ನು ಕೊಡಲಾಗಿತ್ತೆಂದು ಅದರಲ್ಲಿ ನಮೂದಿಸಲಾಗಿತ್ತು. ಮತ್ತು ತೆರಿಗೆಯಲ್ಲಿ ಅರ್ಧಭಾಗ ರಿಯಾಯಿತಿ ಕೊಟ್ಟಿತ್ತು. ೧೫ ಬಸ್ಸುಗಳನ್ನು ನಡೆಸಬೇಕೆಂದು ಒಪ್ಪಂದವಾಗಿತ್ತು. ೧೦ ಬಸ್ಸುಗಳೊಡನೆ ಅವರು ಸರ್ವೀಸ್ ಆರಂಭಿಸಿದರು. ೫ ವರ್ಷಾನಂತರ ಅವರ ಸರ್ವೀಸನ್ನು ಮತ್ತೆರಡು ವರ್ಷಕಾಲ ಮುಂದುವರಿಸಲಾಯಿತು. ಮುಕ್ಕಾಲು ಭಾಗ ತೆರಿಗೆ ಕೊಡಬೇಕೆಂದು ಆಗ ವಿಧಾಯಕವಾಯಿತು. ಈ ಅವಧಿ ಈಗ ಮುಗಿದಿರುವುದರಿಂದ ಪೂರ್ತಿ ತೆರಿಗೆಯನ್ನು ಅವರು ಕೊಡಬೇಕಾಗಿದೆ. ಈಗ ಯುದ್ಧದ ದೆಸೆಯಿಂದ ಪೆಟ್ರೋಲ್ ಮತ್ತು ಮೋಟಾರ್ ಯಂತ್ರ ಭಾಗಗಳಿಗೆ ಅಭಾವವಾಗಿ ಇದ್ದಲಿಂದ ನಡೆಸಬೇಕಾಗಿರುವುದರಿಂದ ಕೇವಲ ೧೦ ಬಸ್ಸು ಗಾಡಿಗಳನ್ನು ನಡೆಸಬಹುದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಒಂದೊಂದು ಬಸ್ಸಿಗೆ ದಿನಕ್ಕೆ ೩ ಗ್ಯಾಲನ್ ಪೆಟ್ರೋಲ್ ಕೊಡಲಾಗುತ್ತಿದೆ. ಇದ್ದಲಿನ ಬಸ್ಸಿಗೆ ತಿಂಗಳಿಗೆ ೮ ಗ್ಯಾಲನ್ ಕೊಡಲಾಗುತ್ತಿದೆ. ಮೋಟಾರು ಭಾಗಗಳು ಯಾವುದನ್ನೂ ಕೊಟ್ಟಿಲ್ಲ. ಸರ್ವೀಸು ನಗರದಲ್ಲಿ ಸಮರ್ಪಕವಾಗಿ ನಡೆಯಬೇಕಾದರೆ ಕನಿಷ್ಠ ೮ ಬಸ್ಸುಗಳಾದರೂ ಬೇಕು— ಎಂದು ಮುಂತಾಗಿ ಜಿಲ್ಲಾಧಿಕಾರಿಗಳು ಸೂಚಿಸಿದ್ದರು.

ಶ್ರೀ ಪೆರುಮಾಳ್‌ಚೆಟ್ಟರ ಪತ್ರ

ಸಿಟಿ ಬಸ್ ಮಾಲೀಕರಾದ ಶ್ರೀ ಪೆರುಮಾಳ್‌ಚೆಟ್ಟರು ಮ್ಯುನಿಸಿಪಲ್ ಬೋರ್ಡ್ ಅಧ್ಯಕ್ಷರಿಗೆ ಒಂದು ಪತ್ರ ಬರೆದು ಸರ್ವೀಸನ್ನು ನಡೆಸುವುದರಲ್ಲಿ ಈಗ ತಮಗಿರುವ ತೊಂದರೆಗಳನ್ನು ನಿರೂಪಿಸಿರುವರು. ತಮಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವಂತೆ ಪೌರಸಭಾಧ್ಯಕ್ಷರು ಶಿಫಾರಸು ಮಾಡಿ, ಅದನ್ನು ಕಳಿಸಿಕೊಡಬೇಕೆಂದು ಕೇಳಿದ್ದಾರೆ. ಅವರ ಹೇಳಿಕೆಯುದೇನೆಂದರೆ—ನಗರದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ೩.೫ ಮೈಲಿ ಆಗುತ್ತೆ. ಪ್ರತಿ ಕಾಲು ಮೈಲಿಗೂ ಬಸ್ ನಿಲ್ಲಬೇಕಾಗುತ್ತೆ. ಬೆಳಗ್ಗೆ ೬ ಗಂಟೆಗೆ ಓಡಲು ಆರಂಭವಾದ ಬಸ್ಸು ರಾತ್ರಿ ೧೧ ಗಂಟೆವರೆಗೂ ನಡೆಯುತ್ತಿರುತ್ತೆ. ಇದ್ದಲಿನ ಸಹಾಯದಿಂದ ಬಂಡಿಗಳನ್ನು ನಡೆಸಿ, ಎಲ್ಲಾ ಭಾಗಗಳಲ್ಲಿ ಸವೆದು ಹೋಗಿವೆ. ಬೇರೆ ಭಾಗಗಳು ಸಿಕ್ಕುವುದಿಲ್ಲ. ಆದ್ದರಿಂದ ಇದ್ದಲಿನ ಬಸ್ಸನ್ನು ನಡೆಸುವುದು ಬಹಳ ಅಪ್ರಯೋಜಕವೆಂದು ಅನುಭವವಾಗಿದೆ. ಬೆಂಗಳೂರಿನ ಬಸ್ಸೆಲ್ಲಾ ಪೆಟ್ರೋಲಿನಿಂದಲೇ ನಡೆಯುತ್ತವೆ. ಅವಕ್ಕೆ ೭ ಸಾವಿರ ಗ್ಯಾಲನ್ ಪೆಟ್ರೋಲ್ ತಿಂಗಳಿಗೆ ಕೊಡಲಾಗುತ್ತಿದೆ. ನಮಗೆ ೧ ಬಸ್ಸಿಗೆ ದಿನಕ್ಕೆ ೫ ಗ್ಯಾಲನ್ ಆದರೂ ಕೊಟ್ಟರೆ ಸರ್ವೀಸನ್ನು ಸರಿಯಾಗಿ ನಡೆಸಬಹುದು, ಎಂದು ಬರೆದಿದ್ದಾರೆ

ಅನಂತರ ಶ್ರೀ ಬಿ ನಾರಾಯಣಸ್ವಾಮಿಯವರು ಭಾಷಣ ಮಾಡಿ, ನೀಲಗಿರಿಯಲ್ಲಿ ಈ ಸರ್ವೀಸಿನವರೇ ೧೧ ಬಸ್ಸುಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಆಗತಕ್ಕ ಸೌಲಭ್ಯವು ಇಲ್ಲಿನ ಜನರಿಗೇಕಾಗಬಾರದು, ಎಂದು ಕೇಳಿದರು.

ಶ್ರೀ ಎಫ್. ಸಿ. ದೇವರಾಜ ಅರಸಿನವರು—ಜನಗಳಿಗೆ ಬಹಳ ತೊಂದರೆಯಾಗಿದೆ ನಿಜ. ಈ ನಿರ್ಣಯವನ್ನು ಚೆನ್ನಾಗಿ ಶಿಫಾರ್ಸ್ ಮಾಡಿ ಅನುಕೂಲಪಡಿಸಿಕೊಡಬೇಕು, ಎಂದರು

ಮಿ|| ಟಿ ಎಸ್. ಅಬ್ದುಲ್ಲಾ—ಕೇಳತಕ್ಕದ್ದೇನೋ ಸರಿ. ಆದರೆ ಕೇಳುವ ಕ್ರಮದಲ್ಲಿ ಕಾರ್ಯಕಾರಿಯಾದ ಮಾರ್ಗ ಸೂಚಿಸಬೇಕು. ಜೀವನದ ಅತಿ ಮುಖ್ಯವಾದ ವಿಚಾರಗಳಿಗೇ ತೊಂದರೆ ಇರುವಾಗ ಇದು ಅಷ್ಟು ದೊಡ್ಡದಲ್ಲ. ಬ್ರಿ|| ಇಂಡಿಯಾ ಮತ್ತು ಲಂಡನ್‌ಗಳಲ್ಲೇ ಬಹಳ ತೊಂದರೆಯಾಗಿದೆ. ಹಿಂದೆ ಬಸ್ ಇಲ್ಲದಿದ್ದಾಗ ಇಲ್ಲಿ ಪೂರೈಸುತ್ತಿರಲಿಲ್ಲವೇ? ಹಾಗೇ ಈಗಲೂ ಮಾಡಿಕೊಳ್ಳಬೇಕು. ಹಠರಿಗಾಗಿ ನಿರ್ಣಯ ಮಾಡಬಾರದು ಎಂದರು.

ಹೆಂಡದ ಲಾರಿಗಳು ಮುಖ್ಯ;
ಸರ್ವೀಸ್ ಬಸ್‌ಗಳಲ್ಲವೇ?

ಶ್ರೀ ಟಿ. ನರಸಿಂಹಯ್ಯಂಗಾರ್ಯರು ಆ ಮೇಲೆ ಮಾತನಾಡಿದರು. ಮದ್ರಾಸು, ಬೊಂಬಾಯಿ ಮುಂತಾದ ಕಡೆಗಳಲ್ಲೆಲ್ಲಾ ಪೆಟ್ರೋಲ್ ಬಸ್ಸೇ ನಡೆಯುತ್ತಿದೆ. ದಸರಾ ಕಾಲ ಬೇರೆ ಬಂತು. ಬಹಳ ತೊಂದರೆಯಾಗಿದೆ. ಹೆಂಡದ ಲಾರಿಗಳು ಎಷ್ಟೆ ಸ್ಪೆಷಿಯಲ್ ಸರ್ವೀಸ್ ಎಂದು ಪೆಟ್ರೋಲ್ ಕೊಡಲಾಗುತ್ತಿದೆ. ಸರ್ವೀಸ್ ಬಸ್ ಎಸೆನ್ಷಿಯಲ್ ಅಲ್ಲವೇ? ಎಂದರು.

ಕಡೆಗೆ ಶ್ರೀ ಸೀತಾರಾಮಯ್ಯನವರು ಕೆಲವು ಸದಸ್ಯರು ಮಾಡಿದ ಪ್ರಶ್ನೆಗಳಿಗೆಲ್ಲ ಉತ್ತರ ಕೊಟ್ಟರು. ನಿರ್ಣಯವು ಮೈಸೂರು ನಾಗರೀಕರಿಗೆ ಹೇಗಾದರೂ ಸೌಕರ್ಯವಾಗಬೇಕೆಂಬುದೇ ಹೊರತು, ಯಾರ ಪರವಾಗಿಯೂ, ಬೇರೆ ಯಾವ ಉದ್ದಿಶ್ಯದಿಂದಲಾಗಲಿ, ಹೆಸರಿಗಾಗಲಿ ಅಲ್ಲ ಎಂದರು.

ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ಜಿನ್ನಾರವರ ಆಶಾಭಾವ

ಗಾಂಧೀ ಜಿನ್ನಾ ಸಂಭಾಷಣೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಶೇ|| ೯೦ ರಷ್ಟು ಜನರು ನಂಬಿರುವುದಾಗಿ ಜಿನ್ನಾರವರಿಗೆ ಹೇಳಲು ಅವರು 'ಸಾವಧಾನವಾಗಿ ಕಾದು ನೋಡಿ,' ಎಂದು ಆಶಾಭಾವನೆಯಿಂದು ಹೇಳಿದರೆಂದು ವರದಿಯಾಗಿದೆ. ಆದರೂ ಅವರು ತಮ್ಮ ಎಲ್ಲಾ ಚಟುವಟಿಕೆಯನ್ನೂ ಬಹಳ ರಹಸ್ಯವಾಗಿ ನಡೆಸುತ್ತಿದ್ದಾರೆ.

ಮಿತ್ರರಿಗೆ ತೀವ್ರ ವಿರೋಧ

ದಕ್ಷಿಣ ಫ್ರಾನ್ಸಿನಲ್ಲಿ ಮೊನ್ನೆ ಮಿತ್ರ ಸೈನ್ಯಗಳು ಇಳಿದಾಗ ಒಂದು ಕಡೆ ಅವರಿಗೆ ಶತ್ರುಗಳಿಂದ ತೀವ್ರವಾದ ಪ್ರತಿಭಟನೆಯುಂಟಾಯಿತೆಂದು ಗೊತ್ತಾಗಿದೆ. ಆದ್ದರಿಂದ ಸೈನ್ಯಗಳು ಅಲ್ಲಿ ಇಳಿಯಲಿಲ್ಲ.

ರಣಜಿತ್ ಟಾಕೀಸ್

ಅಪೋಘ 2 ನೆಯ ವಾರ

18-8-44 ರಿಂದ

ಪ್ರತಿ ದಿನ ೩ ಆಟಗಳು

ಶಂಕರ್ ★

★ ಅರುಣ ಪಾರ್ವತಿ

★ ಸಾಧನ ಬೋಸ್ ನ

ಮುಂತಾದವರು ಪಾತ್ರವಹಿಸಿರುವರು

ಸ್ಥಳ ಸಿಗದೆ ನಿರಾಶರಾಗಬೇಡಿ!

ಸೀಟುಗಳನ್ನು ಮೊದಲೇ

ರಿಸರ್ವ್ ಮಾಡಿಸಿ

Edited, printed and published by A. R. Nagarajan, at the Sadhvi Press, D. Subbiah Road, Mysore

ಮೈಸೂರು ಡಿವಿಜನ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಕೋರ್ಟಿನಲ್ಲಿ

ಕೇಸ್ ನಂ. 251—43-44

ವಾದಿ—ದಿ ಮೈಸೂರು ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಗಾಂಧಿ ಚೌಕ ಮೈಸೂರು.

ಪ್ರತಿವಾದಿ—ಹೆಚ್. ಕೆ. ನರಸಿಂಹ ಮೂರ್ತಿ, ಬಸ್ ಕಂಡಕ್ಟರ್, ಶಿವಲಿಂಗ ಬಸ್ ಸರ್ವೀಸ್, 210 ಬಂಡಿಕೇರಿ, ಮೈಸೂರು.

ಈ ಪ್ರತಿವಾದಿಯಿಂದ ಸೊಸೈಟಿಗೆ ಬರಬೇಕಾದ ಬಾಕಿಗಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾವಾ ಹಾಕಿದ್ದು 28-8-1944 ರಲ್ಲು ಅಪ್ಪೆರು ತೀರ್ಮಾನಕ್ಕಾಗಿ ಹಿಯರಿಂಗ್ ಇರುತ್ತೆ. ಪ್ರತಿವಾದಿಯು ಕೋರ್ಟಿನ ರೂಬರೂಬು ಆ ದಿವಸ 12 ಗಂಟೆಗೆ ಹಾಜರಾಗಲು ತಪ್ಪಿದಲ್ಲಿ ಅವರ ಮೇಲೆ ಏಕಪಕ್ಷ ತೀರ್ಮಾನವಾಗುತ್ತೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

(ಸಹಿ)

ಟಿ.ಎಸ್. ರಾಜಗೋಪಾಲಯ್ಯಂಗಾರ್ ಎಂ.ಎ., ಎಲ್‌ಎಲ್.ಬಿ., ಆನರರಿ ಸೆಕ್ರೆಟರಿ

ದಿ ಮೈಸೂರು ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಮೈಸೂರು,

ತಾ|| 15-8-44. ಮೈಸೂರು.

★ ಮಹಿಳೆಯರಿಗೆ ಸೌಭಾಗ್ಯ ಪ್ರದವಾದ ಮತ್ತು ಕರಗಳ ಸೌಂದರ್ಯಕ್ಕೆ ಸಹಾಯಕಾರಿಯಾದ ನವನವೀನ ಬಳೆಗಳಿಗೆ ★

ನಿಮ್ಮ ಮೆಚ್ಚುಗೆಗೆ ಪಾತ್ರವಾದ

ಗ್ಲಾಸ್ಟಿ ಬೋಗಾಣಿಗಳು

ದೇವರಾಜ ಮಾರ್ಕೆಟ್. ಸೌಭಾಗ್ಯ ಸ್ಟೋರ್ಸ್‌ಗೆ ಬನ್ನಿರಿ ಕೆಮಿಕಲ್ ದಂತದ ಬಳೆಗಳು

ಮೈಸೂರು.

ಸಂಪುಟ ೩] ಶನಿವಾರ ೧೯-೮-೪೪ [ಸಂಚಿಕೆ ೩೩

ಪ್ಯಾರಿಸ್ಸಿನಲ್ಲಿ ಮಿತ್ರರ ಫಿರಂಗಿ ಶಬ್ದ ಕೇಳಿತು

ಗಾಂಧಿ-ಜಿನ್ನಾ ಭೇಟಿಯಾಗುವಾಗ ಸಭೆ ಮೆರವಣಿಗೆಗೆ ಅಡ್ಡಿ
ಹತ್ತು ಟನ್ ತೂಕದ ಮತ್ತೊಂದು ರಾಕೆಟ್ ಬಾಂಬು

ದೇಶೀಯ ವಿದ್ಯಾಶಾಲಾ

ಮೈಸೂರು ೧೯

ಇದೇ ೨೦ ನೆಯ ಭಾನುವಾರ ಬೆಳಗ್ಗೆ ೮-೩೦ ಗಂಟೆಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಶಾಲೆಗೆ ಭೇಟಿಯಿತ್ತು ಶ್ರೀ ಕೆ.ವಿ. ಅಚ್ಯುತರಾಯರು ಬರೆದು ಕಾಣಿಕೆಯಿತ್ತಿರುವ ಲೋಕಮಾನ್ಯ ಬಾಲಗಂಗಾಧರ ತಿಲಕರ ಭಾವಚಿತ್ರದ ಅನಾವರಣೋತ್ಸವ ನೆರವೇರಿಸುವರು

ಮಹಾಜನ ಹೈಸ್ಕೂಲ್, ಮೈಸೂರು

ತಾ॥ ೨೦ ನೆಯ ಭಾನುವಾರ ಬೆಳಗ್ಗೆ ೧೦ ಗಂಟೆಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಮಹದೇವದೇಸಾಯಿ ದಿನಾಚರಣೆಯಲ್ಲಿ ಅಧ್ಯಕ್ಷತೆವಹಿಸುವರು. ಕವಿ ರವೀಂದ್ರರ ವಿಷಯವಾಗಿ ಶ್ರೀ ಎಚ್. ವೈ. ಶಾರದಾಪ್ರಸಾದರು ಭಾಷಣಮಾಡುವರು. ಸರ್ವರಿಗೂ ಆಹ್ವಾನವಿದೆ.

ಕಾಲೇಜಿಗೆ ವಿಜಯ

ಅಖಿಲ ಭಾರತ ಫುಟ್‌ಬಾಲ್ ಪಂದ್ಯಗಳ ಆಶ್ರಯದಲ್ಲಿ ನೆನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ಮೈಸೂರು ಮಹಾರಾಜಾ ಕಾಲೇಜಿನವರು, ಮಹಾರಾಜಾಸ್ ಪ್ರೋಗ್ರೆಸ್ ಕ್ಲಬ್ಬನ್ನು ೨-೧ ಗೋಲುಗಳಿಂದ ಸೋಲಿಸಿದರು. ಕೊಯಮತ್ತೂರಿನ ರೆಡ್ ಬ್ಲಡ್ಸ್ ಕ್ಲಬ್ಬಿನವರು ಮೈಸೂರು ಮುಸ್ಲಿಂಸ್ ಕ್ಲಬ್ 'ಬಿ' ಟೀಮನ್ನು ೪ ಗೋಲುಗಳಿಂದ ಸೋಲಿಸಿದರು.

ಕಾಂ॥ ಅಧ್ಯಕ್ಷರ ಆಗಮನ

ಈ ದಿನ ಬೆಳಗ್ಗೆ ಹಾಸನದಿಂದ ರೈಲಿನಲ್ಲಿ ಕಾಂ॥ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರೂ ಶ್ರೀಗಳಾದ ಎಚ್. ಸಿ. ದಾಸಪ್ಪ, ಸಿದ್ದನಹಳ್ಳಿ ಕೃಷ್ಣಶರ್ಮ, ಸೂರ್ಯನಾರಾಯಣ ಪಂಡಿತ್ ಇವರುಗಳೂ ಮೈಸೂರಿಗೆ ಬಂದರು. ಸ್ಟೇಷನ್ನಲ್ಲಿ ಪೌರಸಭಾ ಕಾಂ॥ ಸದಸ್ಯರುಗಳೂ ಶ್ರೀಗಳಾದ ಚನ್ನಯ್ಯ, ರಂಗರಾಮಯ್ಯ ಮುಂತಾದವರು ಸ್ವಾಗತಿಸಿದರು

ರಾಷ್ಟ್ರೀಯ ರಕ್ಷಣಾ ಬಲ

ವೇಲ್ಪಂಡ ಸಂಸ್ಥೆಯ ಆಶ್ರಯದಲ್ಲಿ ಮ॥ ಸಿ ಶ್ರೀಕಂಠಯ್ಯನವರು ೧೭ ನೇ ತಾ ಚಾಮರಾಜನಗರದ ಹೈಸ್ಕೂಲಿನಲ್ಲಿ "ರಾಷ್ಟ್ರೀಯ ರಕ್ಷಣಾ ಬಲದ ಪ್ರತಿಜ್ಞೆ" ಎಂಬ ವಿಚಾರವಾಗಿ ಭಾಷಣಮಾಡಿ, ಸರ್ವರೂ ಯಥಾಶಕ್ತಿ ಮಿತ್ರಪಕ್ಷದವರಿಗೆ ಸಹಾಯ ಮಾಡಿ ಶೀಘ್ರದಲ್ಲಿ ವಿಜಯ ಗಳಿಸಲು ಅನುಕೂಲಪಡಿಸಬೇಕೆಂದು ಕೋರಿದರು.

ಮೈಸೂರು ಸಿಟಿ ರೇಷನಿಂಗ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿಯಲ್ಲಿರುವ ಎಲ್ಲ ಸರ್ಕಾರಿ ಡಿಪೋಗಳೂ ಮತ್ತು ಲೈಸೆನ್ಸ್ ಚಿಲ್ಲರೆ ವರ್ತಕರ ಅಂಗಡಿಗಳೂ ಗೌರಿ ಹಬ್ಬದ ಪ್ರಯುಕ್ತ ತಾ॥ 21-8-44 ನೇ ಸೋಮವಾರ ಮಧ್ಯಾಹ್ನ 3-30 ರಿಂದ 7 30 ಗಂಟೆವರೆಗೆ ತೆರೆದಿಡಲ್ಪಟ್ಟಿರುತ್ತವೆ

ತಾ॥ 22-8-44 ನೆಯ ಮಂಗಳವಾರ ಗಣೇಶನ ಹಬ್ಬದ ಪ್ರಯುಕ್ತ ಎಲ್ಲ ಡಿಪೋಗಳಿಗೆ ಪೂರ್ಣ ರಜ ಕೊಡಲಾಗಿದೆ

(ಸಹಿ) ಟಿ. ವಿ. ರೆಡ್ಡಿ,
ರೇಷನಿಂಗ್ ಆಫೀಸರ್ ಮೈಸೂರು

ಒಗ್ಗಟ್ಟಾಗುವುದೊಂದೇ ಮೂಲ ಮಂತ್ರ

ವೈಸ್ರಾಯರ ಸರ್ಕಾರಕ್ಕೆ ಗಾಂಧೀಜಿ ಸಂದೇಶ

ನನ್ನ ಪ್ರಾರ್ಥನೆಗೆ ವೈಸರಾಯರ ಉತ್ತರ ಪತ್ರ ಇದರ ಪ್ರಕಟಣೆಯಿಂದ ಬ್ರಿಟಿಷ್ ಸರ್ಕಾರಕ್ಕೆ ಸಾರ್ವಜನಿಕ ಬೆಂಬಲವಾಗಲಿ, ೪೦ ಕೋಟಿ ಜನರನ್ನು ಮುಷ್ಟಿಯಲ್ಲಿ ಹಿಡಿದಿರುವ ಅಧಿಕಾರವನ್ನು ಬಿಟ್ಟುಕೊಡುವುದಾಗಲಿ, ಕಡೆಗೆ ಭಾರತ ಆಹಾರ ಸಮಸ್ಯೆಯನ್ನಾದರೂ ಪರಿಹರಿಸುವುದಾಗಲಿ ಖಂಡಿತ ಇಷ್ಟವಿಲ್ಲವೆಂಬುದು ಆಂಗ್ಲೇಯ ಮನೋಭಾವದಿಂದ ಸ್ಪಷ್ಟವಾಗಿದೆ. ಎಲ್ಲಾ ಪಾರ್ಟಿಗಳೂ ಒಗ್ಗಟ್ಟಾಗಿ ಸರ್ಕಾರದೊಡನೆ ಒಪ್ಪಂದಕ್ಕೆ ಬಂದ ಹೊರತು ರಾಜ್ಯಾಂಗದಲ್ಲಿ ಬದಲಾವಣೆ ಸಾಧ್ಯವಿಲ್ಲವೆಂಬುದು ಒಂದು ಯುಕ್ತಿಯೆನಿಸಬೇಕೆಂದೇನಿಲ್ಲ. ಕಾಂಗ್ರೆಸ್ಸಿಗೆ ದೇಶದಲ್ಲಿ ಪೂರ್ಣ ಬೆಂಬಲವಿದೆ. ೪೦ ಕೋಟಿ ಜನರೂ ಈಗ ಒಗ್ಗಟ್ಟಾಗಿ ನಮ್ಮ ಹಕ್ಕನ್ನು ನಾವು ಹಿಡಿದುಕೊಳ್ಳುವುದೊಂದೇ ಈಗ ಉಳಿದಿರುವ ಮಾರ್ಗ- ಎಂಬುದಾಗಿ ಗಾಂಧೀಜಿಯವರು ರಾಷ್ಟ್ರೀಯ ಸರ್ಕಾರದ ಬಗ್ಗೆ ವೈಸ್ರಾಯರು ಕೊಟ್ಟ ನಿರಾಶೋತ್ತರಕ್ಕೆ ಪ್ರತಿಯಾಗಿ ಹೇಳಿದ್ದಾರೆ.

ಜಿನ್ನಾರವರು ಈಗ ಬಾಯಿಬಿಟ್ಟು ಮಾತನಾಡದಿದ್ದರೂ ಇಂದಲ್ಲ ನಾಳೆಯಾದರೂ ನಾವು ಒಂದು ಒಪ್ಪಂದಕ್ಕೆ ಬಂದೇ ಬರುತ್ತೇವೆ. ಬ್ರಿ॥ ಸರ್ಕಾರದ ಮಧ್ಯಸ್ಥಿಕೆಯನ್ನು ಸಹಿಸುತ್ತೇವೆ. ಜಿನ್ನಾರವರಿಗೆ ಬೇಗ ಗುಣವಾಗಲೆಂದು ದೇವರಲ್ಲಿ ಪ್ರಾರ್ಥಿಸೋಣ. ದೇವರು ಖಂಡಿತ ಒಳ್ಳೆಯದನ್ನು ಮಾಡುತ್ತಾನೆ. ನಮ್ಮ ಶೀಘ್ರವಾದ [illegible] ಯಾರೂ ಲೇಶವೂ [illegible] ಬೇಕಾಗಿಲ್ಲ [illegible] ಬದಲಾವಣೆ [illegible] ಇದೆ—ಎಂದು ಭರವಸೆ ಕೊಟ್ಟಿದ್ದಾರೆ.

ಬಲ್ಗೇರಿಯಕ್ಕೆ ಯುದ್ಧ ಸಾಕು

ದೊಡ್ಡ ರಾಷ್ಟ್ರಗಳ ನಡುವೆ [illegible] ಯಾವಾ [illegible] ಸಾಧನೆಗೆ [illegible] ಸರ್ಕಾರವು [illegible] ಹೇಳಿದ್ದಾರೆ

ಪ್ಯಾರಿಸ್ಸಿನಲ್ಲಿ ಮಿತ್ರ ಫಿರಂಗಿ ಶಬ್ದ

ಸೀನ್ ನದಿ ಕಡೆ ಮಿತ್ರ ಸೇನೆಗಳ ಮುಂದೋಟವು ಮುಂದುವರಿಯುತ್ತಿರಲು ನೆನ್ನೆ ದಿನ ಪ್ಯಾರಿಸ್ ನಗರದಲ್ಲಿ ಮಿತ್ರ ಫಿರಂಗಿಗಳ ನಿನಾದವು ಕೇಳಬರುತ್ತಿತ್ತೆಂದು ಗೊತ್ತಾಗಿದೆ. ಫ್ರಾನ್ಸಿನ ರಾಜಧಾನಿಯಿಂದ ೨೦ ಮೈಲಿ ದೂರದಲ್ಲಿರುವ ಸೆಂಟ್ ಆರ್ನಾಲ್ಡ್ ಎಂಬುದನ್ನು ಅಮೆರಿಕದ ಸೇನೆಗಳು ಮುಟ್ಟಿವೆ. ಇತರ ಸೇನೆಗಳು ಪ್ಯಾರಿಸ್ಸಿನಿಂದ ೩೦ ಮೈಲಿಯಲ್ಲಿವೆ

ಇನ್ನೂ ಹೊಸ ನಾಜಿ ಅಸ್ತ್ರಗಳು

ಪಶ್ಚಿಮ ರಂಗದಲ್ಲಿ ಮಿತ್ರರು ಹಿಟ್ಲರನ ಹೊಸ ಹೊಸ ಅಸ್ತ್ರಗಳನ್ನು ಇನ್ನೂ ಇದಿರು ನೋಡಬೇಕಾಗಿದೆ ಎಂದು ಡಾ॥ ಗೊಬೆಲ್ಸ್ ಹೇಳಿದ್ದಾನೆ. ಲಂಡನ್ನಿನ ಮೇಲೆ ಪ್ರಯೋಗಿಸಲು ವಿ-೨ ಎಂಬ ಹೊಸದ ಹತ್ತು ಟನ್ ತೂಕದ ರಾಕೆಟ್ ಬಾಂಬು ಸಿದ್ಧವಾಗಿದೆಯೆಂದು ಗೊತ್ತಾಗಿದೆ

೪೮ ಗಂಟೆಯಲ್ಲಿ ಪ್ಯಾರಿಸ್ ಪ್ರವೇಶವೇ

ಪ್ಯಾರಿಸ್ ನಗರವನ್ನು ಮಿತ್ರರು ಸಮೀಪಿಸುತ್ತಿದ್ದು ಉತ್ತರ ಫ್ರಾನ್ಸಿನ ಕದನವು ಕೊನೆಗೊಳ್ಳುವುದನ್ನು ಮುಟ್ಟುತ್ತಿದೆ. ಕನಿಷ್ಠ ವಾರ ಕಾಲದಿಂದಲೇ ಮಿತ್ರರು ನಗರವನ್ನು ಹಿಡಿಯುವರೆಂದು ನಿರೀಕ್ಷಿಸಲಾಗಿದೆ. ಡಾ॥ [illegible] ಅವರು [illegible] ೪೮ ಗಂಟೆಯೊಳಗೆ ಪ್ಯಾರಿಸ್ ನಗರಕ್ಕೆ ಪ್ರವೇಶಿಸಬಹುದೆಂದು ಹೇಳಲಾಗಿದೆ

ಪೋಲೀಸರ ಮುಷ್ಕರ

ಒಬ್ಬ ಹೊಸ ಪೋಲೀಸ್ ಅಧಿಕಾರಿಯನ್ನು ನೇಮಿಸಿದುದರಿಂದ ಅಸಮಾಧಾನಗೊಂಡ ಪ್ಯಾರಿಸ್ಸಿನ ಪೋಲೀಸರೆಲ್ಲರೂ ಸಾಂಗವಾಗಿ ಮುಷ್ಕರ ಹೂಡಿರುವುದಾಗಿ ಗೊತ್ತಾಗಿದೆ. ಕೆಲವಕ್ಕೆ [illegible] ಮಾತನ್ನೂ [illegible]

ಫ್ರಾ. ಪ್ರಾಂತ್ಯದಲ್ಲಿ ರಷ್ಯನರು

[illegible] ಬಲವಾಗಿ ಪ್ರತಿಭಟಿಸುತ್ತಿದ್ದಾರೆ.

ಬೊಂಬಾಯಿನಲ್ಲಿ ಪ್ರತಿಬಂಧಕಾಜ್ಞೆ

ಗಾಂಧಿ-ಜಿನ್ನಾ ಭೇಟಿ ಕಾಲದಲ್ಲಿ ಬೊಂಬಾಯಿನಲ್ಲಿ ಯಾರೂ ಪೋಲೀಸ್ ಕಮೀಷನರ ಅಪ್ಪಣೆಯಿಲ್ಲದೆ ಮೆರವಣಿಗೆ ಅಥವಾ ಬಹಿರಂಗ ಸಭೆಗಳನ್ನು ನಡೆಸಕೂಡದೆಂದು ಆಜ್ಞೆಯಾಗಿದೆ.

ಗಾಂಧೀ-ಜಿನ್ನಾ ಭೇಟಿ ಮುಂದಕ್ಕೆ ಹೋಯಿತು

ಜಿನ್ನಾರವರಿಗೆ ಜ್ವರ ಬಂದಿದೆಯೆಂದೂ, ಗುಣವಾಗುವವರೆಗೆ ಭೇಟಿ ನಡೆಸಲು ಸಾಧ್ಯವಿಲ್ಲವೆಂದೂ ಗಾಂಧೀಜಿಯವರಿಗೆ ಬೊಂಬಾಯಿನಿಂದ ಟ್ರಂಕ್ ಟೆಲಿಫೋನ್ ಬಂದುದರಿಂದ ಗಾಂಧೀಜಿಯವರು ನಿನ್ನೆ ಬೊಂಬಾಯಿಗೆ ಹೋಗಲಿಲ್ಲ. ಇಂದು ನಡೆಯಬೇಕಾಗಿದ್ದ ಭೇಟಿಯು ಮುಂದಕ್ಕೆ ಹಾಕಲ್ಪಟ್ಟಿದೆ

೧೦೦೦ ಅಂಗಡಿ ಮುಚ್ಚಿವೆ

ಒಂದು ಸಾವಿರದ ಮೇಲ್ಪಟ್ಟ ಬಟ್ಟೆ ಅಂಗಡಿಗಳು ಕಳೆದ ೪ ದಿನಗಳಿಂದ ಡೆಲ್ಲಿಯಲ್ಲಿ ಬಾಗಿಲು ಹಾಕಿವೆ. ಡೆಲ್ಲಿ ಬಟ್ಟೆ ಕಂಟ್ರೋಲ್ ಆಜ್ಞೆಯ ಪ್ರತಿಭಟನಾರ್ಥವಾಗಿ ಕಳೆದ ೪೮ ದಿನಗಳಿಂದ ಏಜಂಟರುಗಳು ತಮ್ಮ ವ್ಯಾಪಾರ ನಿಲ್ಲಿಸಿದ್ದಾರೆ. ಇವರೊಡನೆ ಸಹಾನುಭೂತಿ ತೋರಿಸಲು ಮೇಲ್ಕಂಡ ಇತರ ಅಂಗಡಿಗಳು ಮುಚ್ಚಲ್ಪಟ್ಟಿವೆ.

ರೂಸ್ವೆಲ್ಟ್ ಚರ್ಚಿಲ್ ಭೇಟಿ

ಪೆಸಿಫಿಕ್ಕಿನಲ್ಲಿ ೧೫೦೦೦ ಮೈಲಿ ಸಂಚಾರವನ್ನು ಮುಗಿಸಿ ರೂಸ್ವೆಲ್ಟರು ವಾಷಿಂಗ್‌ಟನ್ನಿಗೆ ಬಂದಿದ್ದಾರೆ. ಸದ್ಯದಲ್ಲಿಯೇ ಅವರು ಚರ್ಚಿಲರೊಡನೆ ಭೇಟಿಮಾಡಿ ಯುದ್ಧದ ಹೊಸ ಅಧ್ಯಾಯವನ್ನು ನಿರ್ಧರಿಸುವರೆಂದು ಹೇಳಲಾಗಿದೆ. ಮಿತ್ರ ಸೈನ್ಯಗಳು ಜರ್ಮನಿ ಜಪಾನುಗಳಿಗೆ ನುಗ್ಗಿ ಅವುಗಳನ್ನು ಆಕ್ರಮಿಸುವುವು—ಎಂದು ರೂಸ್ವೆಲ್ಟರು ಹೇಳಿರುವರು.

ಬರುವ ಹತ್ತು ಕಠಿಣ ದಿನ

ಜರ್ಮನ್ ಸೇನೆಯು ಸಂಪೂರ್ಣವಾಗಿ ಅಪಜಯ ಹೊಂದಿದೆ. ಬರುವ ಹತ್ತು ದಿನಗಳು ಬಹಳ ಕಠಿಣತರವಾದುವು. ಅಷ್ಟರಲ್ಲಿ ಫ್ರಾನ್ಸಿನ ಯುದ್ಧಗತಿಯು ನಿರ್ಧರವಾಗುವುದು. ೩೦ ಮೈಲಿ ಯುದ್ಧರಂಗದಲ್ಲಿ ನಾವು ದಿನಕ್ಕೆ ಎರಡು ಮೈಲಿಯಂತೆ ಮುಂದುವರಿಯುತ್ತಿದ್ದೇವೆ-ಎಂದು ಎಂಟನೆ ಸೇನೆಯ ಸ್ಟಾಫ್ ಅಧಿಕಾರಿಯು ಹೇಳಿದ್ದಾರೆ.

ಸಹಕಾರದ ಡೆ॥ ಡೈರೆಕ್ಟರ್

ಸ್ವಂ.ಸು.ಪ್ರೋ] ಬೆಂಗಳೂರು ೧೯

ಬೆಂಗಳೂರು ಅರ್ಬನ್ ಬ್ಯಾಂಕ್ ಕಾರ್ಯದರ್ಶಿ ಕೆಲಸ ನೋಡುತ್ತಿರುವ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆದ ಶ್ರೀ ಎಸ್. ಮುನಿನಂಜಪ್ಪನವರು ಮೈಸೂರು ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿದ್ದಾರೆ

ಆಯುರ್ವೇದಾಧಿಕಾರಿ

ಬೆಂಗಳೂರು ನಗರದ ಆಯುರ್ವೇದ [illegible] ಮೆಡಿಕಲ್ ಆಫೀಸರ [illegible] ಮೈಸೂರು [illegible]

ಬೆಂಗಳೂರು ಪೌರಸಭೆ

ಆಕ್ರಮವಾಗಿ ಪೆಟ್ರೋಲ್ ಸಂಪಾದನೆ

೨ ಲಕ್ಷ ಗಜ ಬಟ್ಟೆ ವಶ

ಹಿಟ್ಲರ್ ಕೊಲೆ ಪಿತೂರಿಗಾರರ ದಸ್ತಗಿರಿ

ಅರಕ್ಷ ಪೋಷಕ ಸಭೆಗೆ ಸರ್ಕಾರದಿಂದ ಉಚಿತ ಔಷಧಿ

ಕಸ್ತೂರಿ ಬಾ ನಿಧಿ

೫೦ ರೂಪಾಯಿಗಳು

ದೇಶಾಯಿಯವರ ದಿನಾಚರಣೆ

Big Properties for Sale

1. Big upstairs Building: behind Central Police Station Mysore
2. Two Big Houses in Irvin Road, Mysore.
3. Fertile wet Lands in Kalastavadi very near to Mysore
4. Shops in Jaganmohan Palace Road, Mysore.
5. Big upstair house in Parakalmutt Street in Krishna Vilas Agrahar, Mysore.
6. House in Chamundi Extension, Mysore.
7. Big Inam Village in Mysore District
8. Big Bungallows in Shankarapura and Malleswaram Bangalore City
9. House in Geeta Road, Chamaraj-Mohalla, Mysore.

Also several other properties for sale.

Loans arranged at low rate of interest.

Enquire:—

R. GUNDU RAO,
House & Estate Agent,
Proprietor,
Mysore Business Bureau,
MYSORE BANK BUILDING,
MYSORE.

MEDICINES

Take your requirements from
RAGHULAL & CO.,
1748, Sayaji Rao Road,
(Upstairs, Mysore Hall), MYSORE.

ಔಷಧಗಳು

ರಘುಲಾಲ್ ಅಂಡ್ ಕೋ,
1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

ರಣಜಿತ್ ಟಾಕೀಸ್

ಅಪೋಘ 2 ನೆಯ ವಾರ

18-8-44 ರಿಂದ

ಪ್ರತಿ ದಿನ ೩ ಆಟಗಳು

ಶಂಕರ್ ಪಾರ್ವತಿ

ಸೀಟುಗಳನ್ನು ಮೊದಲೇ ರಿಸರ್ವ್ ಮಾಡಿಸಿ

Edited, printed and published by A. R. Nagarajan, at the Sadhvi Press, D Subbiah Road, Mysore

ಶ್ರೀ ಯರ [illegible] ಕ್ಕೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ದೇವರಾಜ ಮಾರ್ಕೆಟ್, ಮೈಸೂರು

ಬೆಲೆ ಕಡಿಮೆ! ಬಣ್ಣ ಗ್ಯಾರಂಟಿ!

ಗೌರಮ್ಮನ ಹಬ್ಬಕ್ಕಾಗಿ ಸ್ಪೆಷಲ್ ಬಳೆಗಳು!

ಗೌರಮ್ಮನ ಹಬ್ಬ — ಮಹಿಳೆಯರಿಗೆ ಮಂಗಳಪ್ರದವಾದುದು

— ಹಬ್ಬಕ್ಕಾಗಿ ತರಿಸಿರುವ — ನಾನಾಬಗೆಯ ಬಳೆಗಳು

ಮೈಸೂರು ಸಿಲ್ಕ್ ಫಿಲೇಚರಿನ ರವಿಕೆಗಳು ನಾನಾ ಬಣ್ಣದವು ಬಂದಿವೆ

ಸೌಭಾಗ್ಯ ಸ್ಟೋರ್ಸ್, ದೇವರಾಜ ಮಾರ್ಕೆಟ್, ಮೈಸೂರು

ಸಂಪುಟ ೩] ಭಾನುವಾರ ೨೦-೮-೪೪ [ಸಂಚಿಕೆ ೨೪

ದ. ಫ್ರಾನ್ಸಿನಲ್ಲಿ ೧೦೦೦ ಚ. ಮೈಲಿ ಮಿತ್ರ ವಶ

ಶಾಂತಿ ಸ್ಥಾಪನೆ ಬಗ್ಗೆ ರಷ್ಯ-ಅಮೆರಿಕ ಭಿನ್ನಾಭಿಪ್ರಾಯವಿಲ್ಲ

"ಮೈಸೂರಿನಲ್ಲಿ ಜನಪ್ರಿಯ ಸರ್ಕಾರ ಸ್ಥಾಪನೆಯಾಗಬೇಕು"

ಕಾಂಗ್ರೆಸನ್ನು ಬಲಪಡಿಸಿರಿ

ಪೌರಸಭಾ ಸದಸ್ಯರಿಗೆ ಹಿತೋಪದೇಶ

ಮೈಸೂರು ೨೦

ನಿನ್ನೆ ಸಂಜೆ ಮೈಸೂರು ರಾ|| ಅಧ್ಯಕ್ಷರಾದ ಶ್ರೀಮಾನ್ ಟಿ. ಸುಬ್ರಹ್ಮಣ್ಯಂರವರನ್ನು ಮೈಸೂರು ಪೌರಸಭಾ ಕಾಂ|| ಪಕ್ಷದ ಸದಸ್ಯರು ಆಹ್ವಾನಿಸಿ ಪಾರ್ಟಿ ಕಛೇರಿಯಲ್ಲಿ ಸತ್ಕರಿಸಿದರು.

ಉಪಾಹಾರಾನಂತರ ಶ್ರೀ ಸೀತಾರಾಮಯ್ಯನವರು ಮೈಸೂರುನಗರದ ಪೌರಸಭಾ ಕಾಂ|| ಪಕ್ಷದ ಸದಸ್ಯರು ನಡೆಸುತ್ತಿರುವ ಚಟುವಟಿಕೆಗಳನ್ನು ವಿವರಿಸಿದರು.

ಅನಂತರ ಅಧ್ಯಕ್ಷರು ಭಾಷಣ ಮಾಡುತ್ತಾ ಹೀಗೆ ಹೇಳಿದರು:—

ಮೈಸೂರು ಪೌರಸಭಾ ಕಾಂ|| ಸದಸ್ಯರ ಕೆಲಸಕ್ಕೆ ಸಂತೋಷಪಡುತ್ತೇನೆ. ಇದೇ ರೀತಿ ಇತರ ಕಡೆಗಳಲ್ಲೂ ಇದ್ದಿದ್ದರೆ ದೇಶದಲ್ಲೆಲ್ಲ ಕೀರ್ತಿ ಹಬ್ಬುವಂತೆ ಕೆಲಸವಾಗುತ್ತಿತ್ತು. ಮುಖ್ಯವಾಗಿ ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟನ್ನು ಕಾಪಾಡಬೇಕು. ಭೇದಬುದ್ಧಿಯ ಜನರ ಬಲಿಗೆ ಬಲಿಯಾದೀರಿ. ... ಸಮಾಜದ ಉಚ್ಚ ನೀಚ ... ಸ್ವಾರ್ಥಪರತೆಯನ್ನು ಮುರಿದು ಜನರ ... ಸಮತಾಭಾವನೆ ಬರುವ ... ಜವಾಬ್ದಾರಿ ತಮ್ಮ ಮೇಲಿದೆ. ಸರ್ಕಾರದ ಅಧಿಕಾರಗಳ ಬಿತ್ತರಗಳಿಗೆ ಕಿವಿಗೊಡದೆ ಅವರೆಲ್ಲರಿಗೆ ಸ್ನೇಹದಿಂದ ಕಾಂಗ್ರೆಸ್ಸನ್ನು ಬಲಗೊಳಿಸಬೇಕು. ಮೈಸೂರು ನಗರಸಭೆಯ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಸಂಪೂರ್ಣ ವಿಜಯ ಗಳಿಸಿಕೊಟ್ಟಿದ್ದಾರೆ. ಅವರನ್ನು ಸದುಪಯೋಗಪಡಿಸಿಕೊಂಡು ಮುಂದೆಯೂ ಸಹಕಾರ ಇನ್ನೂ ಹೆಚ್ಚು ವಿಶ್ವಾಸ ಗಳಿಸಬೇಕು, ಎಂದರು.

ನಾಗರಿಕ ಅಧ್ಯಕ್ಷರ ಸ್ಥಾನ ... ಶ್ರೀಮನ್ನಾರಾಯಣರವರೇ ಸ್ವತಃ ಇರುವ ಈ ನಗರಕ್ಕೆ ಖಾಸಗಿ ಅಧ್ಯಕ್ಷರಿಲ್ಲದಿರುವುದು ಶೋಭಾಯಮಾನವಲ್ಲ; ಸ್ಥಳೀಯ ಸಂಸ್ಥೆ ಸಭೆಯಲ್ಲಿ ಖಾಸಗಿ ಮಂತ್ರಿಗಳೇ ಎಲ್ಲ ಕಡೆಯೂ ಖಾಸಗಿ ಅಧ್ಯಕ್ಷರನ್ನು ಕೊಡಿಸಿ ಇಲ್ಲಿಗೆ ಮಾತ್ರ ಬೇಡವೆಂಬುವುದು ಅತಿ ವಿಚಿತ್ರ. ಇದಕ್ಕೆಲ್ಲಾ ಜನರಿಂದ ಚುನಾಯಿತ ಪ್ರಜಾ ಸರ್ಕಾರ ಸ್ಥಾಪನೆಯೊಂದೇ ಪರಿಹಾರ. ಮಂತ್ರಿ ... ಅವರ ಅಧಿಕಾರಕ್ಕಾಗಿ ನಾವು ... ಅಧಿಕಾರವನ್ನು ... ಅವರಿಗೆ ಅಧಿಕಾರದ ಆಸೆ ... ಜನರೆಲ್ಲಾ ಒಪ್ಪಿ ... ನಾವು ... ಭಗವಂತನ ... ಎಂದರು. ... ಶ್ರೀ ವೆಂಕಟರಮಣಯ್ಯನವರು ವಂದನಾರ್ಪಣೆ ಮಾಡಿದರು.

ಜಪಾನ್ ಜರ್ಮನಿಗಳನ್ನು ಆಕ್ರಮಿಸುವುದು

ಜರ್ಮನಿಯನ್ನು ಆಕ್ರಮಿಸುವ ವಿಷಯದಲ್ಲಿ ಇಂಗ್ಲೆಂಡ್, ಅಮೆರಿಕಾ ಮತ್ತು ... ಹೇಳಿದ್ದಾರೆ.

ರಷ್ಯ-ಅಮೆರಿಕಾ ಭಿನ್ನಾಭಿಪ್ರಾಯವಿಲ್ಲ

ಪ್ರಪಂಚದ ಯುದ್ಧಾನಂತರದ ಭದ್ರತೆಗಾಗಿ ಸಂಯುಕ್ತ ಸಂಸ್ಥಾನದ ವಿದೇಶಾಂಗ ಇಲಾಖೆಯ ಸೆಕ್ರೆಟರಿ ಕಾರ್ಡೆಲ್ ಹಲ್ಲರು ತಯಾರು ಮಾಡಿರುವ ಯೋಜನೆಯನ್ನು ರಷ್ಯವು ತಳ್ಳಿಹಾಕಿತೆಂದು ವಾಷಿಂಗ್‌ಟನ್ನಿನಿಂದ ವರ್ತಮಾನ ಬಂದಿದೆ. ರಷ್ಯವು ಭದ್ರತೆಯ ಪ್ರಪಂಚ ಭದ್ರತೆಯನ್ನು ಕಾಪಾಡಲು 'ದೊಡ್ಡ ನಾಲ್ಕು' ರಾಷ್ಟ್ರಗಳೇ ಅಧಿಕಾರವುಳ್ಳವರಾಗಬೇಕೆಂದು ಕೇಳಿತ್ತು. ಆದರೆ ಅಧಿಕಾರಯುತವಾಗಿ ವಿಚಾರಿಸಿದರೆ ಈ ಸುದ್ದಿ ನಿರಾಧಾರವಾದದ್ದೇ ಅಲ್ಲದೆ ಬೇಕೆಂದೇ ಕೂಡಿದುದಾಗಿದೆ.

ಅಮೆರಿಕ-ಬ್ರಿಟಿಷ್ ಸೇನೆ ಸಂಧಿಸಿವೆ

ನಾರ್ಮಂಡಿಯಲ್ಲಿ ಜರ್ಮನರ ಮೇಲೆ ಬೀಸಿದ ಬಲೆಯು ಮತ್ತಷ್ಟು ಗಟ್ಟಿಯಾಗಿ ಬಿಗಿಯುವಂತೆ ಮಾಡಲು ಫಲೈಸ್ ಬಳಿ ಅಮೆರಿಕ ಮತ್ತು ಬ್ರಿಟಿಷ್ ಸೇನೆಗಳು ಸಂಧಿಸಿವೆಯೆಂದು ಗೊತ್ತಾಗಿದೆ. ... ನದಿಯ ವರೆಗೆ ಶಕ್ತಿಯುತವಾದ ... ಕೊಂಡು ಹಿಂದಕ್ಕೆ ... ಜರ್ಮನರನ್ನು ಪೂರ್ಣವಾಗಿ ಸುತ್ತುವರಿಯಲು ಪ್ರಯತ್ನಗಳು ನಡೆಯುತ್ತಿವೆ ಎಂದು ... ವರೆಗೆ ಮಿತ್ರರು ... ದ್ದಾರೆ.

ನಾರ್ಮಂಡಿ ಕದನ ಮುಗಿಯಿತು

ನಾರ್ಮಂಡಿ ಕಾಳಗ ಮುಗಿಯಿತು ... ಜರ್ಮನ್ ಸೇನೆ ... ಹಿಮ್ಮೆಟ್ಟುತ್ತಿದೆ ... ನಗರದ ... ಪ್ಯಾರಿಸ್ ನಗರದ ... ಅಮೆರಿಕನ್ನರಿಗೆ ... ಗೆ ... ಎತ್ತರದಲ್ಲಿದೆ.

ಬಟ್ಟೆ ಬೆಲೆ ಇನ್ನೂ ಇಳಿಯುತ್ತಿದೆ

... ಬಟ್ಟೆ ಬೆಲೆ ... ಇನ್ನೂ ... ಕಡಿಮೆ ... ಮಾಡಲಾಗಿದೆ

ಸಹಸ್ರ ಚ. ಮೈಲಿ ವಶ

ದಕ್ಷಿಣ ಫ್ರಾನ್ಸಿನಲ್ಲಿ ಮಿತ್ರ ವರ್ಗದವರು ಈಗಾಗಲೇ ಒಂದು ಸಹಸ್ರ ಚದರ ಮೈಲಿಯಷ್ಟು ಭಾಗವನ್ನು ಆಕ್ರಮಿಸಿದ್ದಾರೆ. ಟೂಲಾನ್ ರೇವಿಗೆ ಕೇವಲ ಆರು ಮೈಲಿ ದೂರದಲ್ಲಿದ್ದಾರೆ.

ಜರ್ಮನರ ಜಂಗಮ ಕೋಟೆಗಳ

ಸ್ಥಿರವಾದ ಪ್ರಾಕಾರಗಳು ಕೋಟೆಗಳು ... ಜರ್ಮನರಿಗೆ ... ಈಗ ... ಒಂದು ಹೊಸ ಜರ್ಮನಿಯಿಂದ ... ಗುಪ್ತಗಳಿಗಾಗಿ ... ಜರ್ಮನಿಯಲ್ಲಿರುವ ... ನೋಡುವುದೇ ಆಗಿದೆ. ... 'ಜಂಗಮ ಕೋಟೆ'ಯನ್ನು ನಡೆಸುತ್ತಲಿರಬೇಕಾಗಿ ಬಂದಿದೆಯೆಂದು ... ಪತ್ರಿಕೆಯೊಂದರ ವರದಿ ... ಫ್ರಾನ್ಸಿನಲ್ಲಿ ಹೆಚ್ಚಿನ ಭಾಗದಿಂದ ಜರ್ಮನರು ... ಬರುವ ... ಗಳಿವೆ.

ಮುಂದಿನ ವಾರದಲ್ಲೇ ಗಾಂಧಿ-ಜಿನ್ನಾ ಭೇಟಿ

ಮುಂದಿನವಾರ ಗಾಂಧೀಜಿ ಮತ್ತು ಜಿನ್ನಾರವರಿಗೆ ಭೇಟಿಯಾಗಲಿದೆಯೆಂದು ತಿಳಿದು ಬಂದಿದೆ. ಜಿನ್ನಾರವರಿಗೆ ನೆಗಡಿ ಮತ್ತು ಜ್ವರ ಬಂದಿತ್ತು. ಈಗ ಕೊಂಚ ಉತ್ತಮ ... ಡಿಗ್ರಿ ಜ್ವರವಿದ್ದುದು ಇನ್ನೂ ಇಳಿದಿಲ್ಲ. ಒಂದು ವಾರ ಪೂರ್ಣವಾಗಿ ವಿಶ್ರಾಂತಿ ಬೇಕಾಗಿದೆಯೆಂದು ಜಿನ್ನಾರವರ ವೈದ್ಯರು ತಿಳಿಸುತ್ತಾರೆ.

ಮಂತ್ರಿಯೊಬ್ಬರ ಮೇಲೆ ಆಪಾದನೆ

... ಪತ್ರಿಕೆ ... ವರ್ ಎಂಬುವ ... ಮುನಿಸಿಪಲ್ ಅಧ್ಯಕ್ಷರಾಗಿದ್ದ ಸಮಯದ ... ವ್ಯವಹಾರಗಳ ... ದುರುಪಯೋಗಗಳಿಗಾಗಿ ಆಕ್ರಮ ... ನ್ಯಾಯಾಲಯದಿಂದ ... ಮಂತ್ರಿಗಳೇ ... ಒಪ್ಪಿ ... ಪ್ರಕಟನೆ ತಿಳಿಸುತ್ತದೆ

ಕಸ್ತೂರಿ ಬಾ ನಿಧಿ

ಮೈಸೂರು, ೨೦

ನಿನ್ನೆ ಟೌನ್‌ಹಾಲಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಸ್ತೂರಿ ಬಾ ನಿಧಿಗೆ ರೂ ೮೮ ರ ಧನಸಂಗ್ರಹವಾಯಿತು—

ಶ್ರೀಗಳು:ಡಿ ಎಸ್. ಎಲ್. ರಾಮಚಂದ್ರರಾವ್ ೧೦೦೧ ರೂ. ಎಸ್. ಚನ್ನಯ್ಯ ೧೦೧೧. ಎಂ. ಆರ್. ... ೫೦೧. ... ರಾಮಯ್ಯ ೨೫೧. ವಿ ಎಸ್. ... ದಯಾಶಕ್ತಿಯವರಿಂದ ೧೦೧. ... ಶ್ರೀನಿವಾಸಶೆಟ್ಟಿ ೧೦೧ ತಮ್ಮಯ್ಯ ೧೦೧ ಸತ್ಯನಾರಾಯಣರಾವ್ ೧೦೧ ... ೧೦೧ ಎ. ರಾಮಣ್ಣ ೫೧ ರೂ

ಮೈಸೂರು ಇತರರಿಗೆ ಆದರ್ಶಪ್ರಾಯವಾಗಿದೆ

ಸ್ವಂ.ಸು.] ಬೆಂಗಳೂರು ೧೯

ದಿವಾನರ ಅಧ್ಯಕ್ಷತೆಯಲ್ಲಿ ಈ ದಿನ ಸಂಜೆ ಲಾಲ್‌ಬಾಗಿನ ಗ್ಲಾಸ್‌ಹೌಸಿನಲ್ಲಿ ಶ್ರೀಮನ್ಮಹಾರಾಜರಿಂದ ಬಿರುದು ಪಡೆದ ಸಜ್ಜನರು, ರಾಜಧರ್ಮ ಪ್ರವೀಣ ಶ್ರೀ ಕೆ ಸುಬ್ರಹ್ಮಣ್ಯ ಅಯ್ಯರ್, ಸಂಗೀತರತ್ನ ವಿಶಾರದ ವಾಸುದೇವಾಚಾರ್, ಧರ್ಮಪ್ರಕಾಶ ... ಮೊದಲಾದವರಿಗೆ ಸತ್ಕಾರವು ನಡೆಯಿತು. ಇತರ ಸಜ್ಜನರುಗಳು, ಹೈಕೋರ್ಟ್ ಜಡ್ಜಿಗಳೇ ಆದಿಯಾಗಿ ಅನೇಕ ಮಹನೀಯರು ದಯಮಾಡಿಸಿದ್ದರು.

ಉಪಹಾರದನಂತರ ಪಿ.|| ಮಹಮದ್ ಷರೀಫರು ಬಿರುದು ದಯಪಾಲಿಸಿದುದು ಇಡೀ ಪ್ರಜಾವರ್ಗಕ್ಕೆ ಸಂತೋಷಪ್ರಾಯವಾಗಿದೆಯೆಂದು ಭಾಷಣ ಮಾಡಿದರು. ದಿ|| ಇಸ್ಮಾಯಿಲರು ಉತ್ತರ ಕೊಡುತ್ತಾ ಮೈಸೂರು ಸಂಸ್ಥಾನವು ಅನೇಕ ವಿಚಾರಗಳಲ್ಲಿ ಇತರರಿಗೆ ಆದರ್ಶಪ್ರಾಯವಾಗಿದೆಯೆಂದೂ ಇಲ್ಲಿ ಹಿಂದೂ ಮುಸ್ಲಿಂ ಐಕ್ಯತೆಯಿದೆಯೆಂದೂ ಶ್ರೀಮನ್ಮಹಾರಾಜರವರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಲು ಪ್ರತಿಯೊಬ್ಬನೂ ದುಡಿಯಬೇಕೆಂದೂ ತಿಳಿಸಿದರು. ಶ್ರೀ ಗುಂಡಪ್ಪನವರು ಭಾಷಣ ಮಾಡುತ್ತಾ ದುರ್ಲಭವಾದ ಬಿರುದು ಕೇವಲ ಮೂರುವರ್ಗಗಳಲ್ಲಿಯೇ ಬಂದಿದ್ದು ಆದೃಷ್ಟವೆಂದೂ ತಾವು ಯಾವಾಗಲೂ ಸಂಸ್ಥಾನದ ಸೇವೆಗೆ ಸಿದ್ಧರಾಗಿರುವರೆಂದೂ, ಪ್ರಜಾಬೆಂಬಲ ಬೇಕೆಂದೂ ಕೋರಿದರು.

ಅರ್ಥಾಂಗಿಗಾಗಿ ಪಠಾಣರಿಗೂ ಪೋಲೀಸರಿಗೂ ಹೊಡೆದಾಟ

ಕೇವಲ ಅರ್ಧಾಂಗಿಯ ನಿಮಿತ್ತವಾಗಿ ಒಂದು ಘಂಟೆ ಬೊಂಬಾಯಿ, ಬೊಂಬಾಯಿಯ ಪೋಲೀಸರು ... ನಡೆದು ... ಜನರು ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾರೆ. ಪೋಲೀಸರೂ ... ಹೊಡೆದರು. ... ಕಲ್ಲುಗಳನ್ನು ಯಥೇಚ್ಛವಾಗಿ ಉಪಯೋಗಿಸಿದುದು ... ಪೋಲೀಸ್ ಕಾನ್ಸ್‌ಟೇಬಲ್ ಒಬ್ಬನು ಪಠಾಣನ ... ಹೆಂಡತಿಯನ್ನು ಬಿಟ್ಟುಕೊಡಬೇಕೆಂದು ... ಕೇಳಿದ. ... ಕಾನ್ಸ್‌ಟೇಬಲ್ ... ಇದರಿಂದ ... ಪೋಲೀಸ್ ... ನಂದಿಯನ್ನು ... ವಾಡಿ ... ದೆ

ಪ್ರಜಾ ಸರ್ಕಾರ ಸ್ಥಾಪನೆಯಾಗಬೇಕು

ಬಹಿರಂಗ ಸಭೆಯಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರು ೨೦

"ಮೈಸೂರು ಕಾಂಗ್ರೆಸ್ ಮೇಲೆ ಸರ್ಕಾರದವರು ಬೇರೆ ಆಪಾದನೆಯನ್ನೂ ಮಾಡುತ್ತಲೇ ಇದ್ದಾರೆ. ಹೀಗಿದ್ದೂ ಹಿಂದೆ ಇದೇ ಸರ್ಕಾರದವರು ಕಾಂಗ್ರೆಸ್ಸನ್ನು ಅಂಗೀಕರಿಸಿಯೂ ನಿಷ್ಕಾರಣ ಈಚೆಗೆ ಆಕ್ರಮಿಸುತ್ತಿದ್ದಾರೆ. ಅವರ ಮಾತು, ನಡೆನ ಒಪ್ಪಂದ ಎಲ್ಲಾ ಮರೆತು ಮುಂದಿದ್ದಾರೆ. ಕಾಂಗ್ರೆಸ್ಸಿನ ಹೆಸರಿಲ್ಲದಂತೆ ಅವರು ಮಾಡಬೇಕೆಂದಿದ್ದಾರೆ ನಾವು ಅದನ್ನು ನಮ್ಮ ಪ್ರಾಣ ಬಲಿದಾನವಾದರೂ ಉಳಿಸಿಕೊಳ್ಳಬೇಕೆಂದಿದ್ದೇವೆ. ಈ ಪ್ರತಿಬಂಧಕಾಜ್ಞೆ ಮುಂತಾದ ವಿಚಾರವಾಗಿ ಸರ್ಕಾರದೊಡನೆ ಸತ್ಯನಿಷ್ಠಾರ ನಡೆಸಿದ್ದಾಯಿತು. ದಿವಾನರೊಡನೆ ಭೇಟಿ ಕೇಳಿದ್ದಾಯಿತು. ಆದರೆ ಈ ಸರ್ಕಾರ ಯಾವ ಮಾರ್ಗಕ್ಕೂ ಬರುವಂತಿಲ್ಲ. ನೀವೇನು ಹೇಳಬೇಕೋ ಅದನ್ನು ಆಯಾ ಮಂತ್ರಿಗಳಿಗೆ ಹೇಳಿ, ಎಂದು ಉತ್ತರ ಕೊಟ್ಟಿದ್ದಾರೆ. ಮಂತ್ರಿಗಳ ಮನಸ್ಸಂತರ ಜಿಲ್ಲಾಧಿಕಾರಿಗಳನ್ನು ಅವರಿಂದ ಕೇಳಬೇಕು, ಈರೀತಿ ನಾವು ನೋಡಬೇಕೇ? ಇದಕ್ಕೆ ಪೂರ್ಣ ಪ್ರಜಾ ಪ್ರಭುತ್ವ, ಜವಾಬ್ದಾರಿ ಮಂತ್ರಿಗಳುಳ್ಳ ಸರ್ಕಾರವೇ ಪರಮೌಷಧ. ನಮ್ಮ ಗುರಿಯತ್ತ ಭಕ್ತಿ ಬಂದಾಗ ನಾವು ಕಡ ಬಾರದ ಕಷ್ಟ ಸಹಲು ಸಿದ್ಧರಿದ್ದೇವೆ. ಪ್ರಭುಗಳು ಈ ಅಲ್ಲೋಲಕಲ್ಲೋಲ ಬೇಡ. ಬರೇ ಏನಿದೆ ಈ ಸಂಘರ್ಷ ಬೇಡ. ಸರ್ಕಾರದವರು ಕಾಂಗ್ರೆಸ್ಸಿನ ಸಹಕಾರ ಹಸ್ತವನ್ನು ಸ್ವೀಕರಿಸಲಿ" ಎಂದು ಮಾನ್ಯ ನಿನ್ನೆ ಸಂಜೆ ಮೈಸೂರು ಜಿಲ್ಲಾ ಅಧ್ಯಕ್ಷರಾದ ಶ್ರೀಮಾನ್ ಟಿ. ಸುಬ್ರಹ್ಮಣ್ಯಂರವರು ಪುರಭವನದಲ್ಲಿ ಭಾಷಣ ಮಾಡುತ್ತಾ ಹೇಳಿದರು. ಜನಗಳು ಕಿಕ್ಕಿರಿದು ತುಂಬಿದ್ದರು. ಶ್ರೀಮಾನ್ ಎಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಚನ್ನಯ್ಯನವರು ಸ್ವಾಗತ ಭಾಷಣ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣ ಮುಂದುವರಿಸಿ ಹೇಳಿದ್ದೇನೆಂದರೆ—ಆಹಾರ ಪರಿಸ್ಥಿತಿಯು ಇಂಥ ಪಟ್ಟಣಗಳಲ್ಲಿ ಚೆನ್ನಾಗಿದೆಯೆಂದು ಎಲ್ಲಾ ಕಡೆಯಲ್ಲಿಯೂ ಸೌಖ್ಯವಾಗಿದೆಯೆಂದು ತಿಳಿಯಬೇಡಿ. ತಿಪಟೂರು, ಹೊನ್ನಳ್ಳಿ ಮುಂತಾದ ಕಡೆಗಳಲ್ಲೂ, ಎಲ್ಲಾ ಹಳ್ಳಿಗಳಲ್ಲೂ ಜಮೀನ್ದಾರರ ವಿನಾ ಇತರರಿಗೆ ತಿನ್ನಲು ಮೂರು ಕಾಳು ದವಸವಿಲ್ಲ. ಕೊಳ್ಳಲು ಹಣವಿಲ್ಲ. ದವಸ ಕೊಡುವವರು ಮೊದಲೇ ಇಲ್ಲ. ಡಿಪೋಗಳಿಂದ ಲೆಸ್ಸಿಕ್ಕೆ ಮಾತ್ರ ಒಂದಿದ್ದರೆ ಒಂದಿಲ್ಲ. ಅದೂ ಪೂರ್ತಿ ಕೊಡುವುದಿಲ್ಲ. ಹಳ್ಳಿಗೆ ರೇಷನ್ ತರಲಾಗಿಲ್ಲ. ಇದನ್ನಾರು ಕೇಳುವರು? ಜನರು ಈ ಭಾರತ ರಕ್ಷಣಾ ಶಾಸನದಿಂದ ಮಾತನಾಡಲು ಬಾಯಿಲ್ಲದೆ ಮೂಕರಾಗಿ ಭಯಗ್ರಸ್ತರಾಗಿ ಹೋಗಿದ್ದಾರೆ. ನಾವೇನು ಪಾಪ ಮಾಡಿ ಹುಟ್ಟಿದೆವೋ, ನಮ್ಮ ಅನ್ನ ನಮಗಿಲ್ಲ, ಎನ್ನುತ್ತಿದ್ದಾರೆ. ಈ ಜ್ವಾಲೆಯ ಪರಿಣಾಮ ತಪ್ಪದೆ ಬಿಡುವುದಿಲ್ಲ.

ಜನರಿಂದ ಸರ್ಕಾರ ಕಾನೂನಾಗಿ ಸುಳ್ಳು ಹೇಳುತ್ತಿದೆ. ನ್ಯಾಯವಾದ ದವಸ ಪಡೆಯಲು ಸೂಲಿ ಅಧಿಕಾರಿಗಳಿಗೆ ಬೇಕಾಗಿಲ್ಲ. ಇನ್ನು ಈ ಅನ್ಯಾಯದ ಪ್ರಪಂಚವನ್ನು ನಮ್ಮ ಜನರಿಂದ ಅಳಿಸಲು ಒಂದು ಶತಮಾನವೇ ಬೇಕಾಗಬಹುದು. ನಾವು ಕೆಲಸವನ್ನು ಜನಾದರಣೆ ಪಡೆದು ಅತ್ಯುತ್ತಮವಾಗಿ ನಡೆಸುತ್ತೇವೆ, ಸಹಕರಿಸಿ, ಅಧಿಕಾರ ಕೊಡಿ ಎಂದರೆ ಸರ್ಕಾರ ಒಪ್ಪುತ್ತಿಲ್ಲ. ಸಂಬಳದ ಮಂತ್ರಿಗಳಿಂದ ಈ ಕೆಲಸವಾಗದು. ಈ ಆಹಾರ ಸಮಸ್ಯೆ ಪರಿಹಾರವಾಗಬೇಕಾದರೆ ಒಳದೇಶದ ದಿಗ್ಬಂಧನಗಳನ್ನೂ ಹಳ್ಳಿಗಾಡಿನ ಪ್ರತಿಬಂಧಕಗಳನ್ನೂ ತೆಗೆದುಬಿಡಬೇಕು. ಆಗ ಎಲ್ಲಾ ಹೊರಗೆ ಬರುತ್ತೆ. ನಮ್ಮ ದೇಶಕ್ಕೆ ಬೇಕಾದಷ್ಟು ನಮಗೆ ಬೆಳೆಯುತ್ತಿದೆ. ಬೆಳೆದ ಆಹಾರ ಎಲ್ಲಿ ಹೋಗುತ್ತೋ ಅದು ಮಾತ್ರ ದೇವರಿಗೆ ಗೊತ್ತು. ಇದಕ್ಕೆಲ್ಲಾ ಸಮಾಜದಲ್ಲಿ ಕ್ರಾಂತಿಯುತವಾದ ಬದಲಾವಣೆಯೊಂದಲ್ಲದೆ ಬೇರೆ ದಾರಿಯಿಲ್ಲ—ಎಂದರು.

ಈಗಿನ ಸರ್ಕಾರ ಪದ್ಧತಿ ವಿಚಾರ ಮಾತನಾಡುತ್ತಾ—ಇದು ಪ್ರಜಾ ಸರ್ಕಾರವಲ್ಲ, ಸರ್ವಾಧಿಕಾರ ಸರ್ಕಾರ. ಬ್ರಿಟಿಷ್ ಸರ್ಕಾರದ ಅಧೀನ ಸರ್ಕಾರ. ಪ್ರಜಾಸರ್ಕಾರವಾದರೆ ಸರ್ಕಾರ ಮಾಡಿದ ಕಾನೂನನ್ನು ಜನರು ಮುರಿಯಲು ಅವಕಾಶ ಹುಡುಕುವುದಿಲ್ಲ. ನಮ್ಮ ಭರತಖಂಡದಲ್ಲಿ ೫೬೨ ಸಂಸ್ಥಾನಗಳಿವೆ. ಒಂದೊಂದು ಒಂದೊಂದು ವಿಚಿತ್ರ. ಪ್ರಭುಗಳು ಪ್ರಜೆಗಳನ್ನು ಮರೆತು ಪ್ರಭುಗಳಾಗಿರಬಹುದೆಂದುಕೊಂಡಿದ್ದಾರೆ. ಪ್ರಭುಗಳಾದವರು ಪ್ರಜಾ ಪ್ರಭುತ್ವವುಳ್ಳ ಸರ್ಕಾರ ಸ್ಥಾಪಿಸದಿದ್ದರೆ ಪ್ರಜೆ ಮತ್ತು ಪ್ರಭುಗಳಿಗೆ ಹೋರಾಟ ತಪ್ಪಿದ್ದಲ್ಲ. ಭಾರತವೆಲ್ಲಾ ಸ್ವಾತಂತ್ರ್ಯವನ್ನು ಪಡೆಯುತ್ತಾ ಸಂಸ್ಥಾನಗಳು ಕೊಳೆಯುತ್ತಿರಲಾಗದು. ಕಾಂಗ್ರೆಸ್ಸು ಇಡೀ ದೇಶದ ಜನರ ಸಂಸ್ಥೆ. ಇದೂ ಸರ್ಕಾರವೂ ಒಂದಾಗಬೇಕು. ಕಾಂಗ್ರೆಸ್ಸು ಯಾರೊಡನೆಯೂ ದ್ವೇಷ ಸಾಧಿಸುವುದಿಲ್ಲ—ಎಂದು ಹೇಳಿದರು.

ಮುಂದಿನ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಸುತ್ತದೆ. ಜನರು ಪ್ರಾ॥ ಪ್ರಾ॥ ಸಭೆ ಮತ್ತು ನ್ಯಾ॥ ವಿ॥ ಸಭೆಯ ಎಲ್ಲಾ ಸ್ಥಾನಗಳನ್ನೂ ಕಾಂಗ್ರೆಸ್ಸಿಗೇ ಗಳಿಸಿಕೊಟ್ಟು ತಮ್ಮ ಅಭಿಪ್ರಾಯ ಸೂಚಿಸಿಕೊಳ್ಳಲಿ. ಕಾಂಗ್ರೆಸ್ಸಿನಲ್ಲಿ ಕೋಮುವಾರು ಭಾವನೆ ಲೇಶವೂ ಇಲ್ಲ. ಕೂಲಿಗಾರರು, ಆದಿಕರ್ನಾಟಕರು ಮುಂತಾಗಿ ಎಲ್ಲ ಜನರ ಹಿತವನ್ನೂ ಕಾಂಗ್ರೆಸ್ಸು ಸಾಧಿಸುವುದು—ಎಂದರು.

ಮೈಸೂರು ಪೌರರಿಗೆ ಬಾಸಗಿ ಅಧ್ಯಕ್ಷರನ್ನು ಕೊಡಿಸಿಕೊಡುವುದು ಜನರ ಮೇಲಿನ ಜವಾಬ್ದಾರಿ ಎಂದೂ ಸಹ ಹೇಳಿದರು.

ಆನಂತರ ಶ್ರೀಮಾನ್ ಎಚ್. ಸಿ. ದಾಸಪ್ಪನವರು ಭಾಷಣ ಮಾಡಿದರು.—ಮಹಾತ್ಮಗಾಂಧೀಜಿಯವರಿಂದಿಯಾಗಿ ಭಾರತದ ಸಮಸ್ತ ನಾಯಕರೂ ಮೈಸೂರು ಕಾಂಗ್ರೆಸ್ಸಿನ ಮಾರ್ಗವನ್ನು ಪ್ರಶಂಸಿಸಿದ್ದಾರೆ. ಭರತಖಂಡದ ೫೬೨ ಸಂಸ್ಥಾನಗಳ ಪ್ರಜೆಗಳಿಗೂ ಮುಕ್ತಿ ತೋರಿಸುವ ಧ್ರುವ ಮೈ...

Edited, printed and published by A. R. Nagarajan, at the Sadhvi Press, D Subbiah Road, Mysore.

ಒಂದೇ ದಿನದಲ್ಲಿ ೨ ವರ್ಷದ ಮಳೆ

ಸಿಂಧ್ ಪ್ರಾಂತದಲ್ಲಿ ವಿಪರೀತ ಮಳೆಯಾಗುತ್ತಿದೆ. ಅನೇಕ ಕಡೆ ರೈಲು ಕಂಬಿಗಳು ಕಿತ್ತುಹೋಗಿವೆ. ಕೆಲವು ಸ್ಥಳಗಳಿಗೆ ಟಿಕೇಟನ್ನೇ ಕೊಡುತ್ತಿಲ್ಲ. ಕಳೆದ ೨ ನೇ ತಾ॥ ಒಂದೇ ದಿನದಲ್ಲಿ ಕರಾಚಿಯಲ್ಲಿ ೮-೪ ಅಂಗುಲ ಮಳೆಯಾಯಿತು. ಇದು ಅಲ್ಲಿನ ಎರಡು ವರ್ಷದ ಮಳೆಗೆ ಸಮಾನವಾಗಿದೆ. ೫೦ ವರ್ಷಗಳ ಹಿಂದೆ ಇದ್ದ ಭಾರಿ ಮಳೆ ರಿಕಾರ್ಡನ್ನು ಈ ಸಾರಿ ಮಳೆಯು ೭ ಅಂಗುಲಗಳಿಂದ ಮೀರಿಸಿದೆ.

ಪೋರ್ಟ್ ಬ್ಲೇರ್ ಮೇಲೆ ಧಾಳಿ

ಹಿಂದೂಸಾಗರದ ಯುದ್ಧದಲ್ಲಿ ಈಗ ಅಮೇರಿಕದ ವಿಮಾನಗಳು ಸಿಲೋನಿನಿಂದ ಕಾರ್ಯಾಚರಣೆ ನಡೆಸುತ್ತಿವೆ. ಅಂಡಮಾನ್ ದ್ವೀಪದ ಮುಖ್ಯ ನಗರವಾದ ಪೋರ್ಟ್ ಬ್ಲೇರ್ ಮೇಲೆ ಮಿತ್ರ ವಿಮಾನಗಳು ಧಾಳಿ ನಡೆಸಿದಾಗ ಶತ್ರುವಿನ ನೆಲೆಗಳಿಂದಲೇ ಹಾರಿಹೋದುವು. ಮಳೆಗಾಲದ ಹವಾ ಇದ್ದುದರಿಂದ ಈ ವಿಮಾನಗಳು ೧೧೦೦ ಮೈಲಿ ಪ್ರಯಾಣ ಮಾಡಬೇಕಾಯಿತು.

ಇನ್ಸ್‌ಪೆಟ್ ಪ್ಯಾಕ್ ಮಾರದುದಕ್ಕೆ ೧೦ ಸಾವಿರ ರೂ. ದಂಡ

ಅಕೋಲಾ ಪಟ್ಟಣದ ಮಾರ್ವಾಡಿ ಸೇವಾ ಸದನದ ಅಂಗಡಿಯ ಮಾಲೀಕನೂ, ಅವನ ಇಬ್ಬರು ನೌಕರರೂ ಇನ್ಸ್‌ಪೆಟು ಪ್ಯಾಕುಗಳನ್ನು ಸರಿಯಾಗಿ ಮಾರಲಿಲ್ಲವಾದುದಕ್ಕಾಗಿ ನಗರದ ಮ್ಯಾಜಿಸ್ಟ್ರೇಟರು ೧೦,೦೦೦ ರೂ. ಜುಲ್ಮಾನೆ ವಿಧಿಸಿದ್ದಾರೆ. ತಪ್ಪಿದರೆ ೧೨ ತಿಂಗಳು ಸಜಾ ಅನುಭವಿಸಬೇಕಾಗಿದೆ.

ಸೂರ. ಕಾಂಗ್ರೆಸ್ಸಿಗೆ ಸೇರಿದೆ. ಪ್ರಜಾಪ್ರಭುತ್ವ ನಡೆಸಲು ಹೋರಾಡುತ್ತಿದ್ದೇವೆ, ಎನ್ನುವ ಪ್ರಭುಗಳು ಮೊದಲು ಸ್ವರಾಜ್ಯದಲ್ಲಿ ಪ್ರಜಾ ಸರ್ಕಾರ ಸ್ಥಾಪಿಸಲಿ—ಎಂದು ಹೇಳಿದರು.

ಕಸ್ತೂರಿ ಬಾ ನಿಧಿಗೆ ಸಭೆಯಲ್ಲೇ ನೂರಾರು ರೂಪಾಯಿ ವಸೂಲಾಯಿತು. ವಂದನಾರ್ಪಣೆಯೊಡನೆ ಸಭೆ ಮುಗಿಯಿತು.

ಸ್ತ್ರೀಯರ ಸೌಖ್ಯಕ್ಕೆ

೧೯೧೦-೧೧ನೇ ಇಸವಿಯಿಂದಲೇ ಪ್ರಸಿದ್ಧಿಯಾಗಿ ವ್ಯಾಪಾರ ನಡೆಸುತ್ತಿರುವ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಪಿ ಪುಡಿ

ಉಪಯೋಗಿಸಿ.

ಡಿ. ಪುಟ್ಟೆಯ್ಯ, ಏನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇದಲ್ಲದೆ ಸಂತೇಪೇಟೆ ಮಂಡಿಯಲ್ಲಿ, ಚಿಲ್ಲರೆ ಎಲ್ಲಾ ನಮೂನೆ ದಿನಸಿ ಸಾಮಾನುಗಳಿಗೆ ನಮ್ಮಲ್ಲಿ ಕೋಟಾಕ್ಕೆ ಪ್ರತಿಯಾಗಿ ಬೆಲ್ಲ ಮತ್ತು ಕಲ್ಲುಸಕ್ಕರೆ ಕೊಡಲ್ಪಡುತ್ತದೆ.

ಬೆಲೆ ಕಡಿಮೆ! ಬಣ್ಣ ಗ್ಯಾರಂಟಿ!

ಗೌರಮ್ಮನ ಹಬ್ಬಕ್ಕಾಗಿ ಸ್ಪೆಷಲ್ ಬಳೆಗಳು!

ಗೌರಮ್ಮನ ಹಬ್ಬ — ಮಹಿಳೆಯರಿಗೆ ಮಂಗಳಪ್ರದವಾದುದು

— ಹಬ್ಬಕ್ಕಾಗಿ ತರಿಸಿರುವ — ನಾನಾಬಗೆಯ ಬಳೆಗಳು —

ಬಾಳಿಕೆ, ಅಂದ, ಬಣ್ಣದಲ್ಲಿ ಪ್ರಖ್ಯಾತಿಯಾದುವು

ಮೈಸೂರು ಸಿಲ್ಕ್ ಫಿಲೇಚರಿನ ರಿಬ್ಬನ್‌ಗಳು ನಾನಾ ಬಣ್ಣದವು ಬಂದಿವೆ.

ಸೌಭಾಗ್ಯ ಸ್ಟೋರ್ಸ್, ದೇವರಾಜ ಮಾರ್ಕೆಟ್, ಮೈಸೂರು.



ಗೌರಿ ಮತ್ತು ಗಣೇಶನ ಹಬ್ಬದ ಪ್ರಯುಕ್ತ

ಸ್ಪೆಷಲ್ ಪ್ರೋಗ್ರಾಂ—ಪ್ರತಿ ದಿನ ೩ ಆಟಗಳು

ನ್ಯೂ ಒಪೇರಾ ಟಾಕೀಸ್

ತಾ. 21-8-44 ರಿಂದ

- ನಾಲುತ
- ನಾಗಯ್ಯ
- ಮಧುರಾ
- ಪುಷ್ಪ

ಭಾಗ್ಯಲಕ್ಷ್ಮಿ

ಸಂಗೀತಮಯವಾದ ತೆಲುಗು ಚಿತ್ರ ಶ್ರೀ ಚಿತ್ರ

ಸುಸಮಯ! ಗೌರಿ - ಗಣೇಶನ ಹಬ್ಬದ ಪ್ರಯುಕ್ತ

ಸಿಹಿ ಭಕ್ಷ್ಯಗಳಿಗೆ ಬಿಳೀ ಬೆಲ್ಲ ಎಲ್ಲಿ ಸಿಕ್ಕುತ್ತೆ?

ಬೆಂಗಳೂರು ಬೆಲ್ಲ, ಗೋಣಿಕೊಪ್ಪ ಬೆಲ್ಲ, ಗುಳಿಗೆ ಬೆಲ್ಲ, ಅಚ್ಚಿನ ಬೆಲ್ಲ

ದೇವರಾಜ ಮಾರ್ಕೆಟ್ ಕೆ. ಪಿ. ಚನ್ನಬಸಪ್ಪನವರ ಅಂಗಡಿಯಲ್ಲಿ

ಯಾವಾಗಲೂ ಸಿಕ್ಕುತ್ತೆ. ಸಗಟಾಗಿ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರದಲ್ಲಿಯೂ ಕೊಡುತ್ತೇವೆ. ಒಂದಾವರ್ತಿ ಪರೀಕ್ಷಿಸಿ ನೋಡಿ.

WEEKLY EDITION

ಸಂಪುಟ ೯] ಸೋಮವಾರ ೨೧-೮-೪೪ [ಸಂಚಿಕೆ ೫

ಗೋರಿಂಗನ ದಸ್ತಗಿರಿ?

ಯಾವ ಘಳಿಗೆಯಲ್ಲಾದರೂ ಪ್ಯಾರಿಸ್ ಪತನವಾಗಬಹುದು

ಬಿಸ್ಕೆ ಕೊಲ್ಲಿಯಲ್ಲಿ ಜರ್ಮನ್ ಹಡಗುಗಳ ಆತ್ಮನಾಶ

ಮೈ|| ಕಾಂಗ್ರೆಸ್ ಅಧ್ಯಕ್ಷರಲ್ಲಿ ಸಂಪೂರ್ಣ ವಿಶ್ವಾಸ

ಕೆಲಸಗಾರರ ಸಮ್ಮೇಳನದ ನಿರ್ಣಯ

ಮೈಸೂರು ೨೧

ನೆನ್ನೆ ಸಾಯಂಕಾಲ ನಗರದ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವು ಕಾಂಗ್ರೆಸ್ ಕಛೇರಿಯಲ್ಲಿ ನಡೆಯಿತು. ಟಿ ನರಸೀಪುರ, ನಂಜನಗೂಡು, ಕೃಷ್ಣರಾಜನಗರ, ಚಾಮರಾಜನಗರ ಮೊದಲಾದ ಕಡೆಗಳಿಂದ ಹಲವು ಕೆಲಸಗಾರರು ಬಂದಿದ್ದರು. ಉಪಾಹಾರಾನಂತರ ಸ್ವಾಗತ ಸಮಿತಿ ಕಾರ್ಯದರ್ಶಿಗಳಾದ ಶ್ರೀ ಟಿ ವೆಂಕಟರಮಣಯ್ಯನವರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರನ್ನು ಸ್ವಾಗತಿಸಿ ಸಭೆಯ ಉದ್ದೇಶವನ್ನು ತಿಳಿಸಿದರು.

ಸಂಸ್ಥಾನದ ಮುಂದಿರುವ ಅನೇಕ ಪ್ರಚಲಿತ ವಿಷಯಗಳು ಚರ್ಚಿಸಲ್ಪಟ್ಟವು. ಹಲವು ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವನ್ನು ಕೊಟ್ಟರು. ಬರುವ ಮುನಿಸಿಪಲ್ ಚುನಾವಣೆ, ರಚನಾತ್ಮಕ ಕಾರ್ಯಕ್ರಮ, ಕಸ್ತೂರಿ ಬಾಯಿ ನಿಧಿ ಸಂಗ್ರಹ ಇವೇ ಮುಂತಾದ ವಿಷಯಗಳು ಚರ್ಚೆಯಾದುವು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರಲ್ಲಿ ಸಂಪೂರ್ಣ ವಿಶ್ವಾಸವನ್ನು ಸೂಚಿಸಿ ಸರ್ವಾನುಮತದಿಂದ ನಿರ್ಣಯ ಮಾಡಲಾಯಿತು.

ಅಧ್ಯಕ್ಷರು ಕೆಲಸಗಾರರಿಗೆ ಹಿತೋಪದೇಶ ರೂಪವಾದ ಭಾಷಣವನ್ನು ಮಾಡಿ, ಎಲ್ಲರೂ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸಂಪೂರ್ಣ ವಿಜಯ ದೊರೆಯುವಂತೆ ಈಗಿನಿಂದಲೇ ಟೊಂಕ ಕಟ್ಟಿ ಕೆಲಸ ಮಾಡಬೇಕೆಂದೂ, ಕಾಂಗ್ರೆಸ್ಸಿನ ಶಿಸ್ತು ವ್ಯವಸ್ಥೆಗಳನ್ನು ಸಂಪೂರ್ಣವಾಗಿ ಪಾಲಿಸಬೇಕೆಂದೂ ಕಸ್ತೂರಿ ಬಾ ನಿಧಿಗೆ ಕಾಣಿಕೆಯನ್ನು ಎತ್ತಬೇಕೆಂದೂ ತಿಳಿಸಿದರು.

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎಚ್. ಚನ್ನಯ್ಯನವರು ಧನ್ಯವಾದವನ್ನು ಅರ್ಪಿಸಿದನಂತರ ವಂದೇಮಾತರಂ ಮತ್ತು ಜಯಕಾರಗಳೊಡನೆ ಸಮಾರಂಭವು ಮುಕ್ತಾಯಗೊಂಡಿತು.

ದಿನಾಚರಣೆ

ನೆನ್ನೆ ದಿನ ಮಹಾಜನ ಹೈಸ್ಕೂಲಿನ ಸಾಹಿತ್ಯ ಸಂಘದವರು ಬೆಳಗ್ಗೆ ೧೦|| ಗಂಟೆಗೆ ಠಾಕೂರರು ಮತ್ತು ದೇಸಾಯರ ದಿನಾಚರಣೆಯನ್ನು ನಡೆಸಿದರು. ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ಪರಿಚಯಾನಂತರ ಸಂಘದ ಉಪಾಧ್ಯಕ್ಷರಾದ ಶ್ರೀಮಾನ್ ಬಿ. ಆರ್. ನಾಗೇಶರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಶಾರದಾ ಪ್ರಸಾದರು ರವೀಂದ್ರರ ವಿಷಯವಾಗಿ ಮಾತನಾಡಿದರು.

ಫುಟ್ ಬಾಲ್

ದೊಡ್ಡ ಕೆರೆ ಮೈದಾನದಲ್ಲಿ ಮೊನ್ನೆ ಸಂಜೆ ನಡೆದ ಪಂದ್ಯದಲ್ಲಿ ಛಾಲೆಂಜ್ ಯೂನಿಯನ್ನವರು ಕೋಯಮತ್ತೂರಿನ ಬ್ಲೂ ಬರ್ಡ್ಸ್ ಟೀಮನ್ನು ೪ ಗೋಲುಗಳಿಂದಲೂ ನೆನ್ನೆ ಸಂಜೆ ಮೈಸೂರು ಬ್ಲಾಕ್ ಕ್ಲಬ್ಬಿನವರು ಬೆಂಗಳೂರು ಜೂನಿಯರ್ ಕ್ಲಬ್ಬನ್ನು ೪-೩ ಗೋಲುಗಳಿಂದಲೂ ಸೋಲಿಸಿದರು. ಬ್ಲಾಕ್ ಕ್ಲಬ್ಬಿನವರು ನಾಳೆಯ ದಿವಸ ಬೆಂಗಳೂರಿನಿಂದ ಬಂದಿರುವ ಕ್ಲಬ್ಬಿನ ಮೇಲೆ ಆಡುತ್ತಾರೆ.

ಜವಾಹರಲಾಲರಿಗೆ ಮೊಮ್ಮಗ

ಪಂಡಿತ ಜವಾಹರಲಾಲ್ ನೆಹರೂರವರ ಮಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ನೆನ್ನೆ ದಿನ ಬೊಂಬಾಯಿನ ಒಂದು ಆರೋಗ್ಯನಿಲಯದಲ್ಲಿ ಗಂಡುಮಗುವನ್ನು ಪ್ರಸವಿಸಿದಳು.

ಪೋರ್ಚುಗಲ್ಲಿಗೆ ಭಾರತದಿಂದ ಕಲ್ಲಿದ್ದಲು

ಪೋರ್ಚುಗಲ್ ದೇಶಕ್ಕೆ ಭಾರತದಿಂದ ೮ ಸಾವಿರ ಟನ್ನುಗಳಷ್ಟು ಕಲ್ಲಿದ್ದಲು ರವಾನೆಯಾಗಿದೆ. ಹಿಂದೆ ಇಂಗ್ಲೆಂಡಿನ ಭಾಗ, ವೇಲ್ಸಿನಿಂದ ಬರುತ್ತಿದ್ದುದು ನಿಂತುಹೋಗಿತ್ತು-ಎಂದು ವರದಿಯಾಗಿದೆ.

ಎ. ಆರ್. ಪಿ. ಗುಂಡಿಗಳು ಸಾಕು

ಕಲ್ಕತ್ತಾ ಕಾರ್ಪೋರೇಷನ್ನಿನ ಆರೋಗ್ಯ ಕಾರ್ಯ ಸಮಿತಿಯ ಸಭೆಯೊಂದು ನಿರ್ಣಯವೊಂದನ್ನು ಮಾಡಿ ಎ ಆರ್ ಪಿ ಗುಂಡಿಗಳಿಂದ ಆಗುವ ಅನಾರೋಗ್ಯದಿಂದ ನಗರವನ್ನು ಪಾರುಮಾಡಲು ಅವುಗಳನ್ನು ಮುಚ್ಚಿಸಬೇಕೆಂದು ಕೋರಿದ್ದಾರೆ.

ಗಂಡನ ದಸ್ತಗಿರಿಗೆ ಹೆಂಡತಿಯ ಅರ್ಜಿ

ಸಂಯುಕ್ತ ಸಂಸ್ಥಾನದ ರಾಜಧಾನಿ ವಾಷಿಂಗ್‌ಟನ್ನಿನ ಓರ್ವ ಸ್ತ್ರೀಯು ತನ್ನ ಗಂಡನ ದಸ್ತಗಿರಿಗಾಗಿ ಪ್ರಾರ್ಥನೆ ಮಾಡಿದ್ದಾಳೆ. ಗಂಡನು ತನ್ನನ್ನು ಸ್ನಾನದ ತೊಟ್ಟಿಯಲ್ಲಿ ಎಸದನೆಂದೂ ... ತಲೆ ಮತ್ತು ಶರೀರದ ಮೇಲೆ ಇಟ್ಟಿಗೆಯಿಂದ ಹೊಡೆದನೆಂದೂ ಆಕೆಯು ಬೀದಿಗೆ ಓಡಲು ಯತ್ನಿಸಿದಾಗ ಗುಂಡಿನಿಂದ ಹೊಡೆಯುವ ಪ್ರಯತ್ನ ಮಾಡಿದನೆಂದೂ ಫಿರ್ಯಾದು ಮಾಡಿದ್ದಾಳೆ.

ಬಚ್ಚಿ ಸಾಗಿಸುವ ಪ್ರಯತ್ನ

ಸ್ವಂ. ವ.] ಚಾಮರಾಜನಗರ ೨೦

ತಾ|| ೧೬-೮-೪೪ ನೇ ಈ ಊರಿನ ಮಿಡ್ಲ್ ಫೀಲ್ಡ್ ಎಂಬುವ ೨ ಕುಚಲು ಬಾವಿಯಾದ ೩ ಗಾಡಿಗಳಲ್ಲಿ ವ್ಯವಸಾಯ ಡಿಪೋದಿಂದ ಪಡೆದಿದ್ದ ೩೨ ಬಂಡಿ ಹಟ್ಟಿಗೆಯನ್ನು ನಜ್ಜಮಂಗಲಕ್ಕೆ ಸಾಗಿಸುತ್ತಿದ್ದುದನ್ನು ಸ್ಥಳೀಯ ಪೋಲೀಸಿನವರು ಪತ್ತೆ ಹಚ್ಚಿ ಮುಂದಿನ ತನಿಖೆಯನ್ನು ನಡೆಸುತ್ತಿದ್ದಾರೆ.

ಸೂಚನೆ

ವಿನಾಯಕ ಚತುರ್ಥಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆ ಪ್ರಕಟವಾಗುವುದಿಲ್ಲ.

ಜರ್ಮನ್ ಹಡಗುಗಳ ಆತ್ಮನಾಶ

ಬಿಸ್ಕೆ ಕೊಲ್ಲಿಯಲ್ಲಿದ್ದ ಜರ್ಮನರ ಸಮರ ಮತ್ತು ವ್ಯಾಪಾರ ನೌಕೆಗಳೆಲ್ಲವೂ ಆತ್ಮನಾಶಮಾಡಿಕೊಂಡವೆಂದು ಕಾಣಬಂತೆಂದು ತಿಳಿಯಬರುತ್ತದೆ. ಟಾರ್ಪಿಡೋ ಹಡಗು, ಸಬ್‌ಮೆರೀನುಗಳು, ಮತ್ತು ಶಸ್ತ್ರಸಂಧಾನವುಳ್ಳ ಟ್ರಾಲರ್‌ಗಳು ಮತ್ತು ತೀರಪ್ರದೇಶದಲ್ಲಿ ಓಡಾಡುವ ವ್ಯಾಪಾರ ಹಡಗುಗಳು ಭಸ್ಮವಾದುವೆಂದು ಹೇಳಲಾಗಿದೆ. ಅವುಗಳ ಅರ್ಧಕ್ಕೆ ನಾಶವಾದವೆಂಬುದಕ್ಕೆ ಆಧಾರ ಸಿಕ್ಕಿಲ್ಲ. ಈ ವರ್ತಮಾನವನ್ನು ಸಂಶಯದಿಂದ ಲಂಡನ್ನಿನಲ್ಲಿ ಕಾಣಲಾಗುತ್ತಿದೆ.

ಭೂಮಿ ನಡುಗುತ್ತಿದೆ

ಲಿತ್ವೇನಿಯಾದಲ್ಲಿ ಜರ್ಮನರು ಟ್ಯಾಂಕುಗಳ ಧಾಳಿಗಳನ್ನು ಮಾಡುತ್ತಿರುವುದರಿಂದ ಸಿಲುಯಾವ್ ಎಂಬಲ್ಲಿ ರಷ್ಯನರ ಸ್ಥಿತಿ ಕಷ್ಟವಾಗುತ್ತಿದೆಯೆಂದು ಹೇಳಲಾಗಿದೆ. ಪೂರ್ವ ಪ್ರಷ್ಯದ ಮೇಲೆ ಅತ್ಯುಗ್ರವಾಯುಮಂಡಲ ಸಮರವು ನಡೆಯುತ್ತಿದೆ. ಜರ್ಮನರು ರಷ್ಯನರಿಗಿಂತಲೂ ಬಲಶಾಲಿಗಳೆಂದು ತೋರ್ಪಡಿಸಲು ಈ ರೀತಿ ಕಾಳಗವಾಗುತ್ತಿದೆ-ಉತ್ತರಕ್ಕೆ ವಾರ್ಸಾ ಎಂಬಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಬಾಂಬುಗಳ ಶೆಲ್ಲುಗಳ ಹೊಡೆತದಿಂದ ಭೂಮಿಯು ನಡುಗುತ್ತಿದೆ.

ಚೀಣಾಕ್ಕೆ ಅಮೆರಿಕ ಸೈನಿಕ ಮಂಡಳಿ

ಡೊನಾಲ್ಡ್ ನೆಲ್ಸನ್ ಮತ್ತು ಮೇ|| ಜ|| ಪ್ಯಾಟ್ರಿಕ್‌ಹರ್ಲಿಯವರಿಂದ ಕೂಡಿದ ಆರ್ಥಿಕ ಮತ್ತು ಸೈನಿಕ ನಿಯೋಗ ಮಂಡಳಿಯನ್ನು ಚೀಣಾಕ್ಕೆ ಕಳುಹಿಸುವುದಾಗಿ ರೂಸ್‌ವೆಲ್ಟರ ಪ್ರಕಟಣೆ ತಿಳಿಸುತ್ತದೆ.

ಏಳನೇ ಸೇನೆಯ ಗತಿ

ಜರ್ಮನರ ಏಳನೇ ಸೇನೆಯು ಈಗ ಸುತ್ತುವರಿದ ಸ್ಥಿತಿ ಬಿಟ್ಟಿದೆ. ಆ ಸೇನೆಯ ಶೇಷಾಂಶಗಳು ... ಪ್ರಯತ್ನ ಮಾಡುತ್ತಿದ್ದಾರೆ. ಪ್ಯಾರಿಸ್ಸಿನಿಂದ ಜರ್ಮನ್ ರಾಯಭಾರಿ ಅಬೆಟ್ಜ್ ಎಂಬುವರು ಪಲಾಯನ ಮಾಡಿದರು.

ಲವಾಲರ ಪರಾರಿ

ಸೈನ್ ನದಿಯ ಸಮೀಪದಲ್ಲಿರುವ ಬೆಲ್‌ಫೋರ್ಟಿಗೆ ಲವಾಲರ, ಬಿಶೋ, ಮುಂತಾದವರೊಡನೆ ಪರಾರಿಯಾದರು. ಮಾರ್ಷಲ್ ಪೆಟೇನ್ ಬಂದಿಯಾಗಿದ್ದಾರೆ. ಬೆಲ್‌ಫೋರ್ಟ್ ಸ್ವಿಸ್ ಸರಹದ್ದಿಗೆ ಹೋಗಬೇಕಾಗಿತ್ತು.

ಗೋರಿಂಗರ ದಸ್ತಗಿರಿಯೋ?

ಹಿಟ್ಲರರ ಪ್ರಾಣಹರಣ ಪಿತೂರಿಗೆ ಕಾರಣರಾದ ಸೇನಾಧಿಕಾರಿಗಳ ಪ್ರಾಣವನ್ನು ಉಳಿಸಲು ಪ್ರಯತ್ನಿಸಿದರೆಂಬ ಕಾರಣಕ್ಕಾಗಿ ಜನರಲ್ ಗೋರಿಂಗ್ ಮತ್ತು ಅವರ ಪತ್ನಿಯನ್ನು ಅವರ ಮನೆಯಲ್ಲಿಯೇ ದಸ್ತಗಿರಿ ಮಾಡಿ ಬಂಧಿಸಲಾಗಿದೆಯೆಂದೂ ಹೊರಗಿನ ವ್ಯವಹಾರಗಳಿಗೆ ಅವರಿಗೆ ಅವಕಾಶ ಕೊಡಲಾಗುತ್ತಿಲ್ಲವೆಂದೂ ಒಂದು ವರದಿ ತಿಳಿಸುತ್ತದೆ. ಇದಕ್ಕೆ ಸಮರ್ಥನೆ ದೊರೆತಿಲ್ಲ.

ಪ್ಯಾರಿಸ್ ಪತನ ಸನ್ನಿಹಿತ?

ಪ್ಯಾರಿಸ್ ನಗರವು ಯಾವ ಕ್ಷಣದಲ್ಲಾದರೂ ಪತನವಾಗಬಹುದು. ಮಿತ್ರರು ಊರಿನ ಬಾಗಿಲನ್ನು ಬಡಿಯುತ್ತಿದ್ದಾರೆ. ಉಪನಗರಗಳ ಮೂಲಕ ಅಮೆರಿಕನ್ನರ ಮತ್ತು ಫ್ರೆಂಚ್ ಬಲಗಳು ಕದನ ನಡೆಸುತ್ತಾ ಮುಂದೆ ಬರುತ್ತಿವೆ. ಮಿತ್ರರು ವರ್ಸೇಲ್ಸ್ ಎಂದಿನಂತೆಯೇ ಮೌನವನ್ನವಲಂಬಿಸಿದ್ದಾರೆ. ರಾಜಧಾನಿಯಲ್ಲಿ ಭಾರಿ ಭಾರಿ ಸಿಡಿತಗಳು ಕೇಳಬರುತ್ತಿವೆಯೆಂದು ಹೇಳಲಾಗಿದೆ.

ಟೂಲಾನ್ ಪಟ್ಟಣಕ್ಕಾಗಿ ಕದನ

ಟೂಲಾನ್‌ರೇವಿನ ಉಪನಗರಗಳಲ್ಲಿ ಮಿತ್ರ ಬಲಗಳು ಕಾದಾಡುತ್ತಿವೆಯೆಂದು ನ್ಯೂಯಾರ್ಕ್ ರೇಡಿಯೋ ತಿಳಿಸುತ್ತದೆ. ಜರ್ಮನರ ಹಲವು ಟಾರ್ಪಿಡೋ ದೋಣಿಗಳು ಸೇನೆಗಳನ್ನು ತೀರಗಳಲ್ಲಿ ಇಳಿಸುವ ಸಮಯದಲ್ಲಿ ಧಾಳಿಮಾಡಲು ಬಂದಾಗ ಅವುಗಳನ್ನು ಹಿಮ್ಮೆಟ್ಟಿಸಲಾಯಿತು. ಊರಿನ ಸುತ್ತಲೂ ಮಿತ್ರಸೇನೆಗಳು ಆವರಿಸುತ್ತಿವೆ. ಅಲ್ಲಿಂದ ಮಾರ್ಸೇಲ್ಸ್ ನಗರಕ್ಕೆ ಸಂಚಾರವಿಲ್ಲ. ೩೦ ಮೈಲಿ ಒಳಪ್ರಾಂತ್ಯಕ್ಕೆ ಈಗ ಹೋಗಲಾಗಿದೆ. ೧೦ ಸಹಸ್ರ ಜನರು ಕೈಸೆರೆಯಾಗಿದ್ದಾರೆ.

ಜಪಾನ್ ಮೇಲೆ ಮತ್ತೆ ಬಾಂಬಿನ ಹೊಡೆತ

ದಕ್ಷಿಣಾಂತ್ಯ ದ್ವೀಪವಾದ ಕಿಯೂಷೂವಿನ ಮೇಲೆ ಮೂವತ್ತು ಅಮೆರಿಕನ್ ಬಾಂಬರ್‌ಗಳು ಬಂದು ನ.ಕೋಟ್, ಯವಾಟ ಮುಂತಾದ ಊರುಗಳ ಮೇಲೆ ಬಾಂಬುಗಳನ್ನು ಹಾಕಿದುವೆಂದು ಟೋಕಿಯೋ ವರ್ತಮಾನ ತಿಳಿಸುತ್ತದೆ.

ನ್ಯೂಯಾರ್ಕಿಗೆ ನಿಗ್ರೋ ಪ್ರತಿನಿಧಿ

ಅಮೆರಿಕಾದ ಕಾಂಗ್ರೆಸ್ ಸಭೆಗೆ ನೀಗ್ರೋ ಹೆಂಗಸೊಬ್ಬಳು ನ್ಯೂಯಾರ್ಕಿನಿಂದ ಪ್ರತಿನಿಧಿಯಾಗಿ ಹೋಗಲು ನಿಲ್ಲುತ್ತಿದೆ. ಆಕೆಯು ವಕೀಲವೃತ್ತಿಯಲ್ಲಿರುವಳು; ಗಂಡ ವೈದ್ಯರು; ತಂದೆ ವೃತ್ತಪತ್ರಿಕೆ ನಡೆಸುತ್ತಿರುವರು.

ಭಿಕ್ಷುಕರ ನಿವಾಸ

ಎಂಟು ಲಕ್ಷ ರೂ. ವೆಚ್ಚಮಾಡಿ ಸರ್ಕಾರದವರು ಬೆಂಗಳೂರಿನಿಂದ ೧೦ ಮೈಲಿ ದೂರದಲ್ಲಿ ಭಿಕ್ಷುಕರ ನಿವಾಸ, ಕುಷ್ಠರೋಗಿಗಳ ಆಸ್ಪತ್ರೆ ಮುಂತಾದ ಸಂಸ್ಥೆಗಳನ್ನು ಕಟ್ಟಿಸಲಿರುವರೆಂದು ಗೊತ್ತಾಗಿದೆ.

ರಾಘವೇಂದ್ರಸ್ವಾಮಿಗಳ ಆರಾಧನೆ

ಚಿಕ್ಕಪೇಟೆ ... ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆ ನಡೆಸಿ ನೆನ್ನೆಯ ದಿನ ಸಮಾರಾಧನೆ ನಡೆಸಿದರು.

ವಾರ ಭವಿಷ್ಯ

[illegible] ರಿಂದ [illegible]ರವರೆಗೆ

(ಶ್ರೀ [illegible] ಸ್ವಾಮಿಗಳಿಂದ)

ಮೇಷ — ಆರೋಗ್ಯ, ಆರ್ಥಿಕ, ಮಾನಸಿಕ [illegible] ವ್ಯಾಪಾರ, ನೌಕರಿಗಳ [illegible] [illegible] ಪ್ರಯಾಣದಲ್ಲಿ [illegible] ಶುಭ.

ವೃಷಭ — [illegible] ಮಾನಸಿಕ [illegible] [illegible], ನೌಕರಿಗಳಲ್ಲಿ [illegible]

ಮಿಥುನ — [illegible] ಆರ್ಥಿಕ [illegible] ವ್ಯಾಪಾರ, ನೌಕರಿಗಳ ಸ್ಥಿತಿ ಸಾಧಾರಣ ಪ್ರವಾಸ, [illegible] [illegible]

ಕರ್ಕ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ [illegible] ವ್ಯಾಪಾರ, ನೌಕರಿಗಳಲ್ಲಿ [illegible] ಪ್ರವಾಸ ಸುಗಮ. [illegible] ಲಾಭ, ಹರ್ಷ.

ಸಿಂಹ — ಆರೋಗ್ಯ, ಮಾನಸಿಕ, ಆರ್ಥಿಕ ತೃಪ್ತಿಕರವಾಗಿಯೂ, ವ್ಯಾಪಾರ, ನೌಕರಿಗಳು ಉತ್ತಮವಾಗಿಯೂ ಇವೆ. ಪ್ರವಾಸ, [illegible] [illegible]

ಕನ್ಯಾ — ಆರೋಗ್ಯ ಚೆನ್ನಾಗಿದೆ. ಧನ [illegible] ಮಾನಸಿಕ, ಪ್ರವಾಸಿಕ [illegible] ವ್ಯಾಪಾರ, ನೌಕರಿಗಳಲ್ಲಿ [illegible]

ತುಲಾ — ಆರೋಗ್ಯ, ಮಾನಸಿಕ, ಆರ್ಥಿಕ ಸ್ಥಿತಿ ಉತ್ತಮವಾಗಿರಲಾರದು. ಉದ್ಯೋಗ, ವ್ಯಾಪಾರಗಳಲ್ಲಿ ಶತ್ರು ಭಯ. ಪ್ರವಾಸದಲ್ಲಿ ವಿಘ್ನ. [illegible]

ವೃಶ್ಚಿಕ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತೃಪ್ತಿಕರವಾಗಿರುವುವು. ವ್ಯಾಪಾರ, ನೌಕರಿಗಳಲ್ಲಿ ಹಿಂದಿನಿಂದ [illegible] [illegible] [illegible] ಲಾಭ, ಹರ್ಷ.

ಧನು — ಆರೋಗ್ಯ, ಧನ, ಮಾನಸಿಕ ಸ್ಥಿತಿ ಉತ್ತಮವಾಗಿರುವುವು. ವ್ಯಾಪಾರ [illegible] ಶತ್ರು ನಾಶ. [illegible] ಪ್ರವಾಸಗಳಲ್ಲಿ ಪ್ರಗತಿ. [illegible]

ಮಕರ — ಆರೋಗ್ಯ, ಆರ್ಥಿಕ ಸ್ಥಿತಿ [illegible] ಮಾನಸಿಕ [illegible] ವ್ಯಾಪಾರ, ನೌಕರಿಗಳಲ್ಲಿ [illegible] ಉತ್ತಮ. [illegible]

ಕುಂಭ — ಆರೋಗ್ಯ ಸಾಧಾರಣ. [illegible] ಸ್ಥಿತಿ [illegible] ಪ್ರವಾಸ, [illegible]

ಮೀನ — ಆರೋಗ್ಯ [illegible] ಮಾನಸಿಕ [illegible] ವ್ಯಾಪಾರ [illegible]

Edited, printed and published by [illegible] Nagarajan, at the Sadhvi Press, [illegible] Road, Mysore.

ಸಿವಿಲ್ ಸಪ್ಲೈ ಡೈರೆಕ್ಟರರ ಆಗಮನ

ಸ್ವಂ. ವ.] ಚಾಮರಾಜನಗರ [illegible]

ತಾ|| [illegible] ನೇ ಸಾಯಂಕಾಲ ಸಿವಿಲ್ ಸಪ್ಲೈ ಡೈರೆಕ್ಟರ್ ಸಾಹೇಬರವರು ಮೈಸೂರು ಜಿಲ್ಲಾ ಡೆಪ್ಯೂಟಿ ಕಮಿಷನರ್ ಸಾಹೇಬರೊಡನೆ [illegible] [illegible] [illegible] [illegible] [illegible] ಈ ಆಗಮನದ ಫಲವಾಗಿ [illegible] ನಾಲ್ಕು ಕೊಟ್ಟಿಗೆಗಳಿಗೆ [illegible] [illegible] [illegible] ಬಾಗಿಲುಗಳು [illegible] ಕೆಲವು ಸ್ಥಳದ [illegible] ನಡೆಯುತ್ತಿರುವ ಬ್ಲಾಕ್ ಮಾರ್ಕೆಟ್ ವ್ಯಾಪಾರವನ್ನು [illegible] ಕೊಂಡರೆಂದು ಗೊತ್ತಾಗಿದೆ.

ಸ್ಪೆಷಲ್ ಪ್ರೋಗ್ರಾಂ — ಪ್ರತಿ ದಿನ 4 ಆಟಗಳು

ಅಪೇರಾ ಟಾಕೀಸ್‌ನಲ್ಲಿ 21-8-44 ರಿಂದ

ಭಾಗ್ಯಲಕ್ಷ್ಮಿ

ಮಾಲತಿ-ನಾಗಯ್ಯ-ಮಧುರಂ-ಕೃಷ್ಣ [illegible] ಪಾತ್ರ (ತೆಲುಗು)

ಹಿಂದೆ ಒಂದಾನೊಂದು ಕಾಲದಲ್ಲಿ



[illegible] ಹಿಂದೆ [illegible] [illegible] [illegible] ಈಗ [illegible] ಮುಂತಾದ [illegible] ಒಂದು ಕಾಲದಲ್ಲಿ ನಿಮ್ಮ [illegible] ತಡವಿಲ್ಲದೆ [illegible] [illegible] ಒಂದು ಅರ್ಧಗಂಟೆ [illegible] ಒಂದುಕಾಲದಲ್ಲಿ [illegible] ನೀವು [illegible] ಕೆಲಸವನ್ನು ಒಂದು [illegible] ಈಗ [illegible] ಒಂದುಕಾಲದಲ್ಲಿ ನೀವು [illegible]

ಈಗ [illegible] ನಿಮಗೆ [illegible] [illegible] ಗಂಟೆಗಳ [illegible] [illegible] [illegible] ಸಾಧ್ಯವಿರುವುದಿಲ್ಲ.

[illegible] ಪ್ರಯಾಣದ [illegible]



[illegible]

A 675 KN

ಸಂಪುಟ ೩] ಬುಧವಾರ ೨೩—೮—೪೪ [ಸಂಚಿಕೆ ೨೫

ಅಮೆರಿಕನ್ ಸೇನೆ ಸೀನ್ ನದಿಯನ್ನು ದಾಟಿತು

ಮತ್ತೊಂದು ಸ್ಟಾಲಿನ್‌ಗ್ರಾಡಿನ ಯುದ್ಧ ಸನ್ನಾಹ
ಸ್ಪೇನ್-ಫ್ರಾನ್ಸ್ ಗಡಿಯು ದೇಶಪ್ರೇಮಿಗಳ ವಶವಾಯಿತು

ಶ್ರೀ ವಿದ್ಯಾಗಣಪತಿ ಸಭೆ

ಮೈಸೂರು ೨೨

ಸಂಸ್ಕೃತ ಪಾಠಶಾಲೆಯಲ್ಲಿ ೩ ವಾರಗಳವರೆಗೂ ವಿದ್ಯಾಗಣಪತಿ ಸಭೆಯು ನಡೆಯಲು ಏರ್ಪಾಡಾಗಿ ಇಂದಿನಿಂದ ಪ್ರಾರಂಭವಾಗಿದೆ. ಉಪನ್ಯಾಸಗಳೂ, ಭಜನೆ ಪಠನ, ಸಂಗೀತವೇ ಆದಿಯಾಗಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ರವೀಂದ್ರರ ತತ್ವದರ್ಶನ, ವೇದಾಂತ ಸಾಧನೆಗಳ ವಿಷಯವಾಗಿ ಉಪನ್ಯಾಸಗಳಿವೆ. ಸಂಗೀತ ಶಾಸ್ತ್ರವಿಶಾರದ, ವಾಸುದೇವಾಚಾರ್ಯರ ಸಂಗೀತವೂ ವಿದ್ವಾನ್ ಚೌಡಯ್ಯನವರ ಪಿಟೀಲೂ, ಟಿ|| ವಿದ್ವಾನ್ ವೆಂಕಟೇಶದೇವರುರವರ ಪಿಟೀಲೂ ಏರ್ಪಾಡಾಗಿದೆ.

ವಿದ್ಯಾರ್ಥಿ ಪಾರಿತೋಷಕ ಸಭಾ

೨೬ ನೇ ತಾ|| ಶನಿವಾರ ಸಾಯಂಕಾಲ ೭ ಗಂಟೆಗೆ ಸರಿಯಾಗಿ ಮಹಾರಾಜಾ ಕಾಲೇಜು ಕಟ್ಟಡದಲ್ಲಿ ವಿದ್ಯಾರ್ಥಿ ಬಹುಮಾನ ಸಭೆಯು ನಡೆಯುತ್ತದೆ. ರಾಜಸೇವಾಸಕ್ತ ಮೈ. ಕೆ. ರಾಮಚಂದ್ರರಾಯರು, ಅಧ್ಯಕ್ಷತೆಯನ್ನು ವಹಿಸುವರು.

ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿ ಸಂಘ

೨೦ ನೇ ತಾರೀಖು ಭಾನುವಾರ ಸಾಯಂಕಾಲ ೬ ಘಂಟೆಗೆ ಸಂಘದ ಹದಿನೆರಡನೆಯ ವಾರ್ಷಿಕೋತ್ಸವವು ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಡೆಯುವುದು. ಹಜೂರು ಸೆಕ್ರೆಟರಿಯವರಾದ ಶ್ರೀಮಾನ್ ಟಿ. ರಾಮಯ್ಯನವರು ಅಧ್ಯಕ್ಷರಾಗಲು ಒಪ್ಪಿರುವರು.

ದೇಶಪ್ರೇಮಿ ಸಂಘ

ನಿನ್ನೆ ಸಂಜೆ ಈ ಸಂಘದವರು ಶಾರದಾ ವಿಲಾಸ ಶಾಲಾ ಮೈದಾನದಲ್ಲಿ ವಿಶ್ವಕವಿ ಠಾಕೂರರ ದಿನಾಚರಣೆ ಆಚರಿಸಿದರು. ಸಿ. ಎಸ್. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಕೇಶವಮೂರ್ತಿಯವರೂ, ಪಿ. ಶ್ರೀನಿವಾಸರಾಯರೂ, ರವೀಂದ್ರರ ಮತಗಳನ್ನು ವಿವರಿಸಿದರು. ಬಳಿಕ ಸಭೆ ಸಂತಾಪಸೂಚಕ ನಿರ್ಣಯದೊಡನೆ ಮುಕ್ತಾಯವಾಯಿತು.

ಹೆಣ್ಣಿಗಾಗಿ ಕ್ರೂರಕೃತ್ಯ

ಮಂಡಿಮೊಹಲ್ಲಾ ವಾಸಿ ಪೊಡ್ಡಂ ವೆಂಕಟೇಶ ಎಂಬುವನು ೨೦ ನೇ ತಾ|| ರಾತ್ರಿ ಹೆಣ್ಣಿಗಾಗಿ ಮೂರು ಜನರನ್ನು ಚಾಕುವಿನಿಂದ ತಿವಿದು ಗಾಯಪಡಿಸಿದ ದೂರಿನಿಂದ ಪೋಲೀಸಿಗೆ ಬಂದಿಸಿ.

ವೆಂಕಟೇಶನು ತನಗೆ ಒಬ್ಬ ಹೆಂಡತಿ ಇದ್ದಾಗ್ಯೂ ಲಕ್ಷ್ಮಮ್ಮ ಎಂಬ ಮತ್ತೊಬ್ಬ ವಿಧವೆಯನ್ನು ಮದುವೆಮಾಡಿಕೊಳ್ಳಲು ಬಹಳ ಆಶೆಪಟ್ಟುಕೊಂಡಿದ್ದನೆಂದೂ, ಆದರೆ ಆಕೆಯನ್ನು ಬೇರೊಬ್ಬನು ಮದುವೆಮಾಡಿಕೊಂಡುಬಿಟ್ಟನೆಂದೂ, ಇದನ್ನು ಕೇಳಿ ನೆನ್ನೆ ರಾತ್ರಿ ವೆಂಕಟೇಶನು ಕುಡಿದು ಬಂದು ಚಾಕು ತೆಗೆದುಕೊಂಡು ಆ ನವದಂಪತಿಗಳನ್ನೂ, ಮಧ್ಯೆ ಬಿಡಿಸಲು ಬಂದ ತನ್ನ ಭಾವಮೈದುನನಿಗೂ ಎದೆ, ಬಾಯಿ, ಬೆನ್ನು ಮುಂತಾದ ಕಡೆಗಳಲ್ಲಿ ಹೊಡೆದು ತಿವಿದು ಗಾಯಪಡಿಸಿದ್ದಾನೆಂದೂ ತಿಳಿದುಬರುತ್ತೆ. ಗಾಯಗೊಂಡವರಿಬ್ಬರು ಕೃ. ರಾ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವೆಂಕಟೇಶನು ಬಂಧಿಸಲ್ಪಟ್ಟಿದ್ದಾನೆ.

ನಾರ್ಮಂಡಿಗೆ ಈಡನ್ನರ ಭೇಟಿ

ನಾರ್ಮಂಡಿ ಪ್ರಾಂತ್ಯಕ್ಕೆ ಬ್ರಿಟಿಷ್ ವಿದೇಶಾಂಗ ಮಂತ್ರಿ ಈಡನ್ನರು ಭೇಟಿ ಕೊಟ್ಟಿದ್ದಾರೆ.

ಮೈಸೂರು ನಿಮ್ನ ವರ್ಗದ ವಿದ್ಯಾರ್ಥಿ ಸಂಘ

ಮೈಸೂರು ೨೨

ಈ ಸಂಘದ ಪ್ರಾರಂಭೋತ್ಸವವನ್ನು ತಾ|| ೨೦-೮-೪೪ ನೇ ಭಾನುವಾರ ಸಾಯಂಕಾಲ ೪-೩೦ ಘಂಟೆಗೆ ಮುಂದಿರುವಲ್ಲಿ ನೆರವೇರಿಸಲಾಯಿತು. ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಶ್ರೀಮಾನ್ ಎಂ. ಎ. ನಾರಾಯಣಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ನಗರದ ನಾನಾ ಹರಿಜನ ಹಾಸ್ಟಲಿನ ವಿದ್ಯಾರ್ಥಿಗಳೆಲ್ಲಾ ಸೇರಿದ್ದರು. ಶ್ರೀಮಾನ್ ನಾ. ಕಸ್ತೂರಿರವರು ಪ್ರಾರಂಭೋತ್ಸವ ಭಾಷಣವನ್ನು ಮಾಡುತ್ತಾ ಸರಕಾರದವರು ಕೊಟ್ಟಿರುವ ಅನುಕೂಲಗಳನ್ನು ಹರಿಜನ ವಿದ್ಯಾರ್ಥಿಗಳು ಉತ್ತಮರೀತಿಯಲ್ಲಿ ಉಪಯೋಗಿಸಿಕೊಂಡು, ತಮ್ಮ ಜನಾಂಗದ ಹಾಗೂ ನಾಡಿನ ಸೇವೆಗೆ ಸೇರಬೇಕಾಗಿದೆಯೆಂದರು. ನ್ಯಾಯ ವಿದ್ವಾಂಸರಾದ ಶ್ರೀಮಾನ್ ಎಂ. ಮಾದಯ್ಯನವರು ಹರಿಜನರ ಕರ್ತವ್ಯ ಮತ್ತು ಸಂಘಶಕ್ತಿಯ ಆವಶ್ಯಕತೆಯನ್ನು ತಿಳಿಸಿ ವಿದ್ಯಾರ್ಥಿ ಸಂಸ್ಥೆಗೆ ಎಲ್ಲಾ ಜಯವನ್ನು ಬಯಸಿದರು.

ಅಧ್ಯಕ್ಷರು ಮಾತನಾಡುತ್ತಾ ಇಂತಹ ಹರಿಜನ ವಿದ್ಯಾರ್ಥಿ ಸಂಘಗಳು ದೇಶದ ಎಲ್ಲಾ ಕಡೆಗಳಲ್ಲೂ ಏರ್ಪಾಡಾಗಬೇಕು. ಹರಿಜನ ಏಳಿಗೆಯು ಎಲ್ಲಾ ಜನರಿಗೂ ಸೇರಿದ ಕೆಲಸವಾಗಿದೆ. ಹರಿಜನ ವಿದ್ಯಾರ್ಥಿಗಳು ಉತ್ತಮ ವಿದ್ಯಾಸಂಪತ್ತನ್ನು ಪಡೆದು ತಮ್ಮ ಜನಾಂಗದ ಹಾಗೂ ಇಡೀ ಭಾರತ ಸೇವೆಗೆ ಸೇರಬೇಕಾಗಿ ಭಾರತವರ್ಷದ ಆದರ್ಶ ನಾಗರೀಕರಾಗಬೇಕೆಂದು ಹಾರೈಸಿದರು.

ಫುಟ್‌ಬಾಲ್

ತಾ|| ೨೦-೮-೪೪ ರಲ್ಲಿ ಬೆಂಗಳೂರಿನ ಮೈದಾನದಲ್ಲಿ ನಡೆದ ಅಖಿಲ ಭಾರತ ಫುಟ್‌ಬಾಲ್ ಪಂದ್ಯಗಳಲ್ಲಿ ಮೈಸೂರು ಒಲಿಂಪಿಕ್ ಕ್ಲಬ್ಬಿನವರು ಪಾಂಡಿಚೇರಿಯಿಂದ ಬಂದಿದ್ದ ಫುಟ್‌ಬಾಲ್ ಕ್ಲಬ್ಬನ್ನು ೪-೨ ಗೋಲುಗಳಿಂದ ಸೋಲಿಸಿದರು.

ದಕ್ಷಿಣ ಭಾರತ ಜೋನ್ ಸಂತೋಷ್ ಮೆಮೋರಿಯಲ್ ಇಂಟರ್ ಪ್ರಾವಿನ್ಷಿಯಲ್ ಪಂದ್ಯಗಳು ಹೈದರಾಬಾದ್ ಮತ್ತು ಮದರಾಸಿಗೆ ಇದೇ ಮಾಹೆ ೨೬ ರಿಂದ ಬೆಂಗಳೂರಿನಲ್ಲಿ ನಡೆದು, ೨೭ ನೇ ತಾ|| ಮೈಸೂರಿನವರ ನಡುವೆ ಆಗುವುದು.

ಶತ್ರುಗಳು ವಾಪಸು

ತೀರಪ್ರದೇಶಗಳಲ್ಲಿರುವ ರಕ್ಷಣಾ ಬಲಗಳನ್ನು ಬಿಟ್ಟರೆ ಶತ್ರುವು ಸಂಪೂರ್ಣವಾಗಿ ಓಡಿಬಿಟ್ಟಿದ್ದಾನೆ. ದಕ್ಷಿಣ ಫ್ರಾನ್ಸಿನಲ್ಲಿ ಶತ್ರುವಿಗೆ ಬಹಳ ಭೀಷಣ ಸೋಲಾಗಿದೆ.

ಟೌಲಾನ್ ಬಂದರಿನೊಳಗೆ ಈಗ ಮಿತ್ರರು ನುಗ್ಗಿದ್ದಾರೆ. ಫ್ರೆಂಚ್ ಪಡೆಗಳೊಂದಿಗೆ ಜರ್ಮನರು ಬಲವಾಗಿ ಕಾದಾಡುತ್ತಿದ್ದಾರೆ. ಆಕಸ್ಮಿಕವಾಗಿ ಮಾರ್ಸೇಲ್ಸ್ ನಗರವನ್ನು ಮಿತ್ರ ಪಡೆಗಳು ಸಮೀಪಿಸಿದಂತೆ ಅಲ್ಲಿ ಒಳಗೆ ಮಾಕಿ (ದೇಶಪ್ರೇಮಿ ಪಡೆ) ಸೇನೆಗಳು ದಂಗೆ ಎದ್ದು ಜರ್ಮನರಿಗೆ ತೊಂದರೆಯುಂಟುಮಾಡುತ್ತಿದ್ದಾರೆ. ಊರಿನಲ್ಲಿ ಅರಾಜಕತ್ವವೇರ್ಪಟ್ಟಿದೆ. ಇದೇ ಸೇನೆಯು ಬಲಭಾಗದಲ್ಲಿ ಟೂಲೂಸ್ ನಗರವನ್ನು ಜರ್ಮನರಿಂದ ಕಿತ್ತುಕೊಂಡಿದೆ. ದಕ್ಷಿಣದಲ್ಲಿ ಸ್ಪೇನ್, ಫ್ರಾನ್ಸಿನ ಗಡಿಯನ್ನು ಬಂಡಾಯ ಎಂಬಲ್ಲಿ ಹಿಡಿದಿದ್ದಾರೆ.

ಮತ್ತೊಂದು ಸ್ಟಾಲಿನ್‌ಗ್ರಾಡ್

ಬಾಲ್ಟಿಕ್ ರಣಕ್ಷೇತ್ರವು ಮತ್ತೊಂದು ಸ್ಟಾಲಿನ್‌ಗ್ರಾಡ್ ಆಗುವ ಸಂಭವ ತೋರಿದೆ. ಇಲ್ಲಿ ಸಿಕ್ಕಿಕೊಂಡಿರುವ ಪಡೆಗಳ ಸಂಖ್ಯೆ ಸುಮಾರು ೩|| ಲಕ್ಷ ಸೇನೆಯನ್ನು ರಷ್ಯನರು ಸುತ್ತುವರಿದಿದ್ದಾರೆ.

ಏಕ್ಸ್ ಎಂಬ ಊರು ಮಿತ್ರ ವಶ

ಮಾರ್ಸೇಲ್ಸ್ ನಗರಕ್ಕೆ ಉತ್ತರದಲ್ಲಿ ೧೭ ಮೈಲಿ ದೂರದಲ್ಲಿರುವ ಏಕ್ಸ್ ಎನ್ ಪ್ರಾವಿನ್ಸ್ ಎಂಬ ಊರು ಮಿತ್ರ ವಶವಾಯಿತು.

ಪ್ಯಾರಿಸ್ ಪಟ್ಟಣ ಉಳಿಯುವುದು

ಇನ್ನೇನು ಕೆಲವು ದಿವಸಗಳಲ್ಲಿ ಉಳಿದಂತೆ ಪ್ಯಾರಿಸ್ ನಗರವು ಉಳಿಯಲ್ಪಡುತ್ತದೆಂದು ಜರ್ಮನ್ ವಿದೇಶಾಂಗ ಕಚೇರಿಯು ಹೇಳಿಕೆ ಕೊಡುತ್ತದೆ.

ಸ್ತ್ರೀಯರ ದುರ್ಮರಣ

ಉತ್ತನಹಳ್ಳಿ ಬಳಿ ಹೆಬ್ಬಳ್ಳದಲ್ಲಿ ಸ್ನಾನಮಾಡುತ್ತಿದ್ದ ಇಬ್ಬರು ಹೆಂಗಸರು, ತನ್ನ ಮಗಳೊಂದಿಗೆ ಮಡ್ಡಿ ಪ್ರಾಣಗಳಿಂದ ಕೊಚ್ಚಿಕೊಂಡು ಹೋದರು. ವರುಣಾದಲ್ಲಿ ನೀರು ಹೆಚ್ಚಾಗಿ ಬಿದ್ದ ಮಳೆಯಿಂದ ಇವರ ಶವಗಳು ತಿಳಿದು ಬಂದಿವೆ.

ಅಮೆರಿಕನ್ ಸೇನೆಗಳು ಸೀನ್ ನದಿ ದಾಟಿದವು

ಅಮೆರಿಕನ್ ಪಡೆಗಳು ಪ್ಯಾರಿಸ್ ನಗರದ ಆಗ್ನೇಯ ಮತ್ತು ವಾಯುವ್ಯ ದಿಕ್ಕುಗಳಲ್ಲಿ ಮುಂದುವರಿಯುತ್ತಾ ಸೀನ್ ನದಿಯನ್ನು ಎರಡು ಕಡೆ ದಾಟಿದವು. ಬ್ರಿಟಿಷರೂ ಕೆನ್ ನಗರ ಪೂರ್ವದ ಬಂದರಿನಿಂದ ಅರ್ಧ ಮುಂದುವರಿದಿದ್ದಾರೆ. ಕಳೆದ ಘೋರ ಸಂಗ್ರಾಮದಲ್ಲಿ ಜರ್ಮನ್ ಸೈನ್ಯಗಳು ನಡೆದ ನೋರ್ಮ್ ಮತ್ತು ಮಾರ್ಕ್ ಕ್ಷೇತ್ರಗಳ ಶಕ್ತಿ ಇದೆ ಎಂದು ಬಂದಿದ್ದಾರೆ.

ರುಮೇನಿಯಾ ಮೇಲೆ ರಷ್ಯನರ ಧಾಳಿ ಆರಂಭ

ರುಮೇನಿಯಾ ರಂಗದ ಎಲ್ಲೆಗಳ ಮೇಲೆ ರಷ್ಯನರು ಧಾಳಿ ನಡೆಸುತ್ತಿದ್ದಾರೆ. ಸೋವಿಯಟ್ ಫಿರಂಗಿಗಳು, ಟ್ಯಾಂಕುಗಳು ಬಲವಾಗಿ ಮುಂದುವರಿಯುತ್ತಿವೆ. ಶತ್ರುವಿನ ವಾಯುಬಲವು ನಾಶವಾಗಿ ಬಂದರುಗಳ ಮೇಲೆ ಬಲವಾಗಿ ಹೊಡೆಯುತ್ತಿವೆ ಯೆಂದು ರುಮೇನಿಯಾದ ಸೇನಾಕೇಂದ್ರ ಸ್ಥಾನದಿಂದ ಬಂದ ವರದಿ ತಿಳಿಸುತ್ತದೆ.

ಒಂದು ಲಕ್ಷ ಸಾವುನೋವು

ಫಲಾಯಿಸ್ ಕಣಿವೆಯಲ್ಲಿ ಸಿಕ್ಕಿದ ಜರ್ಮನ್ ಸೈನ್ಯದ ಅರ್ಧ ಜರ್ಮನ್ ಸೈನ್ಯ ಸಿಕ್ಕಿಬಿದ್ದಿದೆ. ಶತ್ರುವಿನ ಸಂಖ್ಯೆ ಇಪ್ಪತ್ತು ಸಾವಿರವಾಗಿದೆ. ಜನರಲ್ ಪ್ಯಾಟನ್ ಸೇನೆಯೇ ೧ ಲಕ್ಷಕ್ಕೆ ಮೇಲ್ಪಟ್ಟ ಸಾವುನೋವುಗಳನ್ನುಂಟುಮಾಡಿದೆ.

ಮಂಡ್ಯ ವಿದ್ಯಾವರ್ಧಕ ಸಂಘ

ಮಂಡ್ಯದ ಪ್ರೌಢ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವ ಸಲುವಾಗಿ ನಾಳೆ ಗುರುವಾರ ಸಂಜೆ ೬|| ಗಂಟೆಗೆ ಸಹಕಾರಭವನದಲ್ಲಿ ಸಭೆಯೊಂದು ನಡೆಯುತ್ತದೆ. ವಿದ್ಯಾಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಮಿ|| ಅಲ್. ಕಸ್ತೂರಿರಂಗ ಅಧ್ಯಕ್ಷತೆ ವಹಿಸುತ್ತಾರೆ. ಪ್ರೊ|| ಟಿ. ಎ. ಪುರುಷೋತ್ತಮರವರು ಉಪನ್ಯಾಸಭಾಷಣಮಾಡುತ್ತಾರೆ. ಮಂಡ್ಯದ ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಬಯಸುವವರೆಲ್ಲರೂ ಸಭೆಗೆ ಬರಬೇಕೆಂದು ರಾವ ಸಾಹೇಬ ಕರ್ನಲ್ ಗೋಪಾಲರಾಯರು ಪ್ರಾರ್ಥಿಸುತ್ತಾರೆ.

ಹೆಂಡತಿ ಮೂಗು ಕಚ್ಚಿದ ಉಪಾಧ್ಯಾಯ

ಹೆಂಡೂರಿನ ಸ್ಕೂಲ್ ಉಪಾಧ್ಯಾಯನೊಬ್ಬನು ತನ್ನ ಹೆಂಡತಿ ಮೂಗನ್ನು ಕಚ್ಚಿ ಅದರಿಂದ ಅವನಿಗೆ ಒಂದು ವರ್ಷ ಕಠಿಣ ಸಜಾ ವಿಧಿಸಲಾಯಿತು.

ಉದ್ಯೋಗ ದುರುಪಯೋಗ

ಮೈಸೂರು ೨೨

ಮೈಸೂರು ಶ್ರೀ ಕೃಷ್ಣ ಕೋ ಆಪರೇಟಿವ್ ಸೊಸೈಟಿಯಲ್ಲಿ ಕೆಲಸದಲ್ಲಿದ್ದ ಪರಸಂಜಯ್ಯ ಮತ್ತು ಜಟ್ಟಪ್ಪ ಎಂಬುವರು ಸಂಘದ ಹಣವನ್ನು ದುರುಪಯೋಗ ಮಾಡಿದರೆಂದು ಆರೋಪಿಸಲ್ಪಟ್ಟು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆದು ಆರೋಪಿಗಳಿಗೆ ಶಿಕ್ಷೆ ವಿಧಿಸಲಾಯಿತು.

ರಾಜರುಗಳ ದಸ್ತಗಿರಿ

ಲಿಪ್ಟ್ ಸಂಸ್ಥಾನದಲ್ಲಿರುವ ತಾಲ್ಲೂಕು ದಾರರೂ ರಾಜರೂ ನಡೆಸುತ್ತಿರುವ ವಿವಾದದ ಸಂಬಂಧವಾಗಿ ಅಲ್ಲಿನ ಆಡಳಿತ ಗಾರರೊಡನೆ ಮಾತುಕತೆ ನಡೆಸುವಂತೆ ಬ್ರಿಟಿಷ್ ರೆಸಿಡೆಂಟರು ಅವರಿಗೆ ಸಲಹೆ ಕೊಟ್ಟ ಪ್ರಕಾರ ಅವರು ಅಲ್ಲಿಗೆ ಹೋಗಲು ಅವರುಗಳು ಕ್ಷಮಾಪಣೆ ಕೇಳಬೇಕೆಂದು ಲಿಪ್ಟ್ ಅಧಿಕಾರಿಗಳು ಹೇಳಿದರು. ಅವರು ಒಪ್ಪಲಿಲ್ಲ. ಅಷ್ಟರಿಂದ ನೇಪಾಲಿಯಾ ಸಂಸ್ಥಾನದ ಪೋಲೀಸಿನ ಸಿಬ್ಬಂದಿ, ಉಂಕೇರಾಣಿಯವರ ಕುಮಾರ ಶ್ರೀ ಜೋರಾವರ ಸಿಂಹಜೀ ಮತ್ತು ಇತರ ಭಾಯಾತರು ಗಳನ್ನು ದಸ್ತಗಿರಿ ಮಾಡಲಾಯಿತು. ಎಲ್ಲಾ ತಾಲ್ಲೂಕುದಾರ ಗ್ರಾಮಗಳಲ್ಲೂ ಹರತಾಳ ನಡೆಯಿತು.

ಕೃತಕ ಕೈಕಾಲು

ಕೈಕಾಲುಗಳನ್ನು ಕಳೆದುಕೊಂಡ ಯೋಧರಿಗೆ ಇನ್ನು ಮುಂದೆ ಶರೀರದ ಅವಯವ ಚ್ಛೇದನದ ಸಂಕಟವು ಕಡಿಮೆಯಾಗಲು ಸಾಧ್ಯವೆಂದು ವಿಶದವಾಗಿದೆ. ಗಾಜು ಸಿಂತೆ ಪ್ಲಾಸ್ಟಿಕ್ ಎಂಬ ವಸ್ತುವಾದ ಪದಾರ್ಥ ಇವುಗಳನ್ನು ಸೇರಿಸಿ, ಕೃತಕ ಕೈಕಾಲುಗಳನ್ನು ತಯಾರಿಸಲು ಸಂಯುಕ್ತ ಸಂಸ್ಥಾನಗಳಲ್ಲಿ ಉಪಕ್ರಮವಾಗಿದೆ. ಇವುಗಳಿಂದ ಚುಂಬಕ ದಟ್ಟ ತೊಂದರೆಗಳನ್ನು ತಪ್ಪಿಸುವ ವಿಧಾನವೂ ಕಂಡುಹಿಡಿಯಲಾಗಿದೆ. ಗಾಜಿನ ಕಾಲೊಂದನ್ನು ೧೫ ನಿಮಿಷದಲ್ಲಿ ಮಾಡಬಹುದು.

ರಕ್ತವೇ ದಂಡ

ಮಕೊಡ್ಸರ ದೇವನಾದ ಜಕೋವನ ಸಾಕ್ಷಿಯೆ, ತಾನೆಂದು ಹೇಳಿಕೊಳ್ಳುತ್ತಿದ್ದ ಕೆಸ್ಲರ್ ಸ್ಪ್ರಿಂಗರ್ ಎಂಬಾತನಿಗೆ ಲಾಸ್ ಏಂಜಲ್ಸ್ ಕೋರ್ಟಿನಲ್ಲಿ ೧ ಸಾವಿರ ಡಾಲರ್ ಮತ್ತು ೨ ಸಾವಿರ ರಕ್ತ ದಂಡವನ್ನು ವಿಧಿಸಲಾಯಿತು. ಆತನು ಕೊಟ್ಟ ಹಣ ಕೊಡದೆ ತಪ್ಪಿಸಿಕೊಳ್ಳುವ ಪದ್ಧತಿ ಅನುಸರಿಸುತ್ತಿದ್ದನು. ವಿಧಿಸಿದ ರಕ್ತದಂಡವು ರೆಡ್ ಕ್ರಾಸ್ ಸಂಸ್ಥೆಗೆ ಸೇರಲಾಗಿದೆ.

ಮನೆಯ ವಿಳಾಸ; ಮರವೇ

ಸಂಯುಕ್ತ ಸಂಸ್ಥಾನಗಳ ಸಾರ್ಜಂಟ್ ಸ್ಟೀರ್ ಎಂಬಾತ ಒಬ್ಬನು ತಾನು ಓಟ ಮಾಡಲು ಚೀಟಿ ಕೊಡಲು ಒಂದು ಮರವನ್ನು ತೋರಿಸಿ ಅದೇ ತನ್ನ ವಾಸದ ಮನೆಯೆಂದು ಹೇಳಿಕೊಳ್ಳಲು ಅನುಮತಿಯನ್ನು ಪಡೆದುಕೊಂಡಿದ್ದನು.

Edited, printed and published by A. R. Nagarajan, at the Sadhvi Press, D Subbiah Road, Mysore

ಕೋಳಿಮೊಟ್ಟೆಯಲ್ಲಿ ಮೀನು

ಕೋಳಿಮೊಟ್ಟೆಯಲ್ಲಿ ಜೀವವಿರುವ ಮೀನೊಂದು ಇದ್ದುದು ಲಿವರ್‌ಪೂಲಿನ ಹಳ್ಳಿಯೊಂದರಿಂದ ಬಂದ ವರ್ತಮಾನ. ಕೋಳಿಯ ಆಹಾರದಲ್ಲಿ ಮೀನಿನ ಅಂಶವಿದ್ದುದರಿಂದ ಮೊಟ್ಟೆಯೊಳಗೆ ಮೀನು ಉಂಟಾಗಿರಬೇಕೆಂದು ತಜ್ಞರ ಊಹೆ.

ದಕ್ಷಿಣೆಗಾಗಿ ದಾವೆ

ಯವತಮಾಲ್ಲಿನ ಸಬ್ ಜಡ್ಜರ ಮುಂದೆ ಒಂದು ಸ್ವಾರಸ್ಯವಾದ ದಾವೆ ಬಂದಿತ್ತು. ಒಬ್ಬ ಪಂಡಿತನು ಮಾರ್ವಾಡಿಯೊಬ್ಬನಿಂದ ತನಗೆ ದಕ್ಷಿಣೆ ಬರಬೇಕಿತ್ತೆಂದೂ, ಅದನ್ನು ಕೊಡಿಸಿಕೊಡಬೇಕೆಂದೂ ಕೇಳಿದ್ದನು. ಮಾರ್ವಾಡಿಯು ತಾನು ಕೊಡಬೇಕಾಗಿಲ್ಲವೆಂದು ಹೇಳಿದನು. ಪಂಡಿತನು ಗಂಗಾಜಲವನ್ನು ತೋರಿಸಿದ ಕೂಡಲೇ ಅದನ್ನು ಮುಟ್ಟಿ ಆಣೆ ಮಾಡಲು, ಕೇಸು ವಜಾ ಆಯಿತು.

ಪ್ಯಾರಿಸ್ಸಿನಲ್ಲಿ ಮಿತ್ರ ಮುಖಂಡರ ಭೇಟಿಯೇ?

ಪ್ಯಾರಿಸ್ಸಿನಲ್ಲಿಯಾಗಲಿ, ಲಂಡನ್ ನಗರದಲ್ಲಿಯಾಗಲಿ ಅಧ್ಯಕ್ಷ ರೂಸ್‌ವೆಲ್ಟರು ಚರ್ಚಿಲರೊಡನೆ ಭೇಟಿಮಾಡುತ್ತಾರೆಂಬುದು ಸುಳ್ಳು ವರ್ತಮಾನವೆಂದು ರೂಸ್‌ವೆಲ್ಟರ ವೈಯಕ್ತಿಕ ಕಾರ್ಯದರ್ಶಿ ಹೇಳುತ್ತಾರೆ.

ತಿದ್ದುಪಡಿ

ಸ್ವಂ. ವ.] ಚಾಮರಾಜನಗರ ೨೨

೨೧-೮-೪೪ ನೇ ತಾ॥ ಸಾಧ್ವಿಯಲ್ಲಿ "ಪತ್ನಿ ನೀಗಿಸುವ ಪ್ರಯತ್ನ" ಎಂಬ ಶಿರೋನಾಮೆಯಲ್ಲಿ ತಾ॥ ೧೬-೮-೪೪ ರಂದು ಖಾದರ್ ಷರೀಫ್ ಸಾಬ್ ಎಂಬುವರು ತಮ್ಮ ಹೆಂಡತಿಯನ್ನು ಚಾಕು ಹಾಕಿದ ಗಾಡಿಯಲ್ಲಿ ಬಂಡಿ ಕಟ್ಟಿ ನೀಗಿಸುತ್ತಿದ್ದರೆಂದು ಸುದ್ದಿ ಪ್ರಕಟಣೆ ಕೊಟ್ಟಿದ್ದೇನೆ. ಆದರೆ, ಈಚೆಗೆ ವಿಚಾರಿಸಿದ್ದರಲ್ಲಿ ಈ ಕೇಸಿಗೆ ಸಂಬಂಧಪಟ್ಟವರು ಮ॥ ರಾ॥ ಖಾದರ್ ಷರೀಫ್ ಸಾಬ್ ಎಂಬುವರಲ್ಲವೆಂತಲೂ, ಬೇರೆಯಾರೋ ಒಬ್ಬರೆಂತಲೂ ತಿಳಿದುಬಂದಿರುತ್ತೆ. ಈ ರೀತಿ ತಪ್ಪು ಹೆಸರನ್ನು ಕೊಟ್ಟದ್ದಕ್ಕಾಗಿ ವಿಷಾದಿಸುತ್ತೇನೆ.

ಅಪೇರಾ ಟಾಕೀಸ್
ಪ್ರತಿ ದಿನ ೩ ಆಟಗಳು
21-8-44 ರಿಂದ
ಮಾಲತಿ - ನಾಗಯ್ಯ
ಮಧುರಂ - ಕೃಷ್ಣ ಪಾತ್ರವಹಿಸಿರುವ
ಭಾಗ್ಯಲಕ್ಷ್ಮಿ
(ತೆಲುಗು) ಚಿತ್ರ

ಹೆಚ್ಚಿನ ಅಧಿಕಾರ ಕೊಡುವುದಿಲ್ಲ

ಆಸ್ಟ್ರೇಲಿಯಾ ಸರಕಾರವು ತನ್ನ ಪ್ರಜೆಗಳಿಗೆ ವಿಸಂಧಿ ಮಾಡಿಕೊಂಡು ಯುದ್ಧದ ಸಮಯದಲ್ಲಿ ತಾವು ಚಲಾಯಿಸಲು ಇನ್ನೂ ೧೪ ಹೆಚ್ಚಿನ ಕಾನೂನಿನ ಅಧಿಕಾರ ಬೇಕೆಂದು ಪ್ರಾರ್ಥಿಸಿತ್ತು. ಅದನ್ನು ಓಟರುಗಳು ತಿರಸ್ಕರಿಸಿದ್ದಾರೆ. ಯುದ್ಧ ಮುಗಿದನಂತರ ೫ ವರ್ಷ ದೇಶದಲ್ಲಿ ಆಡಳಿತ ಬರದಂತೆ ನೋಡಿಕೊಳ್ಳುವ ಉದ್ದೇಶದಿಂದ ಅಧಿಕಾರ ಕೇಳಲಾಗಿತ್ತು.

ಸಿನಿಮಾಗಳಿಗೆ ಬಿಟ್ಟಿ ಹೋಗಲು ಮಾರ್ಗ

ಹೊರಗೆ ಹೋಗುವ ಮಾರ್ಗದ ಮುಖಾಂತರ ಸಿನಿಮಾಗಳೊಳಗೆ ಪ್ರವೇಶಮಾಡುವುದು ಕಾನೂನು ವಿರೋಧವಲ್ಲವೆಂದು ಲಂಡನ್ನಿನಲ್ಲಿರುವ ಕಾನೂನುಬಲ್ಲ ಲಾಯರೊಬ್ಬನು ಹೇಳಿದ್ದಾನೆ. ಜನರು ಹೊರಕ್ಕೆ ಬರುವವೇಳೆ ಆ ಮುಖಾಂತರ ಮಂದಿರ ಪ್ರವೇಶಮಾಡುವುದು ತಪ್ಪಲ್ಲವೆಂದು ಹೇಳಿದ್ದಾನೆ.

ಜಪಾನರಿಗೆ ಗೊತ್ತೇ ಇರಲಿಲ್ಲ

ಫೆಸಿಫಿಕ್ ಸಾಗರ ದ್ವೀಪಗಳಲ್ಲೊಂದಾದ ಬೇಕರ್ ದ್ವೀಪವನ್ನು ಅಮೆರಿಕನ್ನರು ಒಂದು ವರ್ಷದ ಹಿಂದೆಯೇ ಆಕ್ರಮಿಸಿದ್ದರೂ, ಅವರ ಸಂಗತಿಯೇ ನಿತ್ಯ ಜಪಾನಿಗೆ ತಿಳಿದಿರಲಿಲ್ಲ. ಈ ಸಮಾಚಾರವನ್ನು ಅಮೆರಿಕದ ಮಿಲಿಟರಿ ಸೇನಾನಿಯೊಬ್ಬನು ಈಗ ತಿಳಿಸುತ್ತಾನೆ. ಆ ದ್ವೀಪದ ಸಮೀಪದಲ್ಲಿಯೇ ಜಪಾನರಿಗೆ ಸೇರಿದ್ದ ಗಿಲ್ಬರ್ಟ್ ದ್ವೀಪಗಳಿದ್ದುವು. ಜಪಾನಿ ವಿಮಾನಗಳು ಆ ದ್ವೀಪದ ಸಮೀಪದಲ್ಲೇ ಮತ್ತು ಆಚೆಯೆಲ್ಲಾ ಓಡಾಡುತ್ತಿದ್ದುವು. ಆದರೂ ಅಮೆರಿಕನ್ನರು ಇಲ್ಲಿ ಇಳಿದಿರುವ ಸಳವೆ ಗೊತ್ತಿರಲಿಲ್ಲ.

MEDICINES
Take your requirements from
RAGHULAL & CO.,
1748, Sayaji Rao Road,
(Upstairs, Mysore Hall), MYSORE.
ಔಷಧಗಳು
ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೋ,
1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

ಅಮೋಘ ಪ್ರಾರಂಭೋತ್ಸವ
ನಾಟಕರತ್ನ ಜಿ. ಹೆಚ್. ವೀರಣ್ಣನವರ
ಗುಬ್ಬಿ ಥಿಯೇಟ್ರಿಕಲ್ ಕಂಪೆನಿ
ಟೌನ್‌ಹಾಲ್ ಮೈದಾನದ
ಸ್ವಂತ ಧನಲಕ್ಷ್ಮೀ ಥಿಯೇಟರಿನಲ್ಲಿ
ತಾ॥ 25-8-44 ನೇ ಶುಕ್ರವಾರದಿಂದ
4 ದಿನಗಳು
ಪ್ರತಿ ರಾತ್ರಿ 10-30 ಕ್ಕೆ
ತಾ॥ 27 ನೇ ಭಾನುವಾರ ಸಂಜೆ 7 ಕ್ಕೆ
ಸಂಪೂರ್ಣ ಶ್ರೀ ಕೃಷ್ಣಲೀಲ
ಎಂಬ ನಾಟಕವನ್ನು ಅಭಿನಯಿಸುವರು.
M. C. M. Swamy,
Manager, Gubbi Co.

ಗಣಪತಿ ಮಂಗಳಾರತಿ

ಮೈಸೂರು ೨೨

ನೆನ್ನೆ ದಿನ ಬಂಡಿಕೇರಿಯಲ್ಲಿರುವ ಹೆಚ್. ಟಿ. ನರಸಿಂಹಮೂರ್ತಿಯವರ ಮನೆಯಲ್ಲಿ ಗಣಪತಿ ಮಂಗಳಾರತಿ ನಡೆಯಿತು. ಶ್ರೀ ಪ್ರಸನ್ನ ಕುಮಾರಿಯವರ ಸಂಗೀತ, ವಿದ್ವಾನ್ ರಾಜಯ್ಯಂಗಾರ್ ಪಿಟೀಲು, ಎ॥ ವಿಷ್ಣುಮೂರ್ತಿಯವರ ತಬಲದೊಡನೆ ನಡೆಯಿತು.

ಶೇಷಣ್ಣ ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಗಣಪತಿಯ ಮಂಗಳಾರತಿ ಬಹಳ ವಿಜೃಂಭಣೆಯಿಂದ ನಡೆಯಿತು.

ನಿನ್ನೆ ಸಂಜೆ ಶಿಲ್ಪ ಸಂಘದಲ್ಲಿ ಸಂಘದ ಬಾಲಕ ಬಾಲಕಿಯರು ಗಣಪತಿ ಪೂಜೆಯನ್ನು ಆಚರಿಸಿದರು. ಬಾಲಕ ಬಾಲಕಿಯರಿಂದ ನಾಟಕ, ನರ್ತನ ಮತ್ತು ಕೋಲು ಏರ್ಪಡಿಸಿತ್ತು. ಮಂಗಳಾರತಿಯಾದ ನಂತರ ವಂದೇ ಮಾತರಂ ನೊಡನೆ ಸಭೆ ಮುಕ್ತಾಯವಾಯಿತು.

ನಿಧನ

೨೧-೮-೪೪ ನೇ ಸೋಮವಾರ ಸಂಜೆ ಬೆಟ್ಟದಪುರದ ಪಾಸ್ಟಲ್ ಮ್ಯಾನೇಜರಾದ ಶ್ರೀ ಜಿ. ಪುಟ್ಟಗಂಗಪ್ಪನವರು ೭-೪೫ ಗಂಟೆಯಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ.

Big Properties for Sale

1. Big upstairs Building, behind Central Police Station Mysore.
2. Two Big Houses in Irvin Road, Mysore.
3. Fertile wet Lands in Kalastavadi very near to Mysore.
4. Shops in Jaganmohan Palace Road, Mysore.
5. Big upstair house in Parakalimutt Street in Krishna Vilas Agrahar, Mysore.
6. House in Chamundi Extension, Mysore.
7. Big Inam Village in Mysore District.
8. Big Bungallows in Shankarapura and Malleswaram Bangalore City.
9. House in Geeta Road, Chamaraj Mohalla, Mysore.

Also several other properties for sale.
Loans arranged at low rate of interest.
Enquire:—
R. GUNDU RAO,
House & Estate Agent,
Proprietor,
Mysore Business Bureau,
MYSORE BANK BUILDING,
MYSORE.

ಸ್ತ್ರೀಯರ ಶಾರೀರಿಕ ಸೌಂದರ್ಯಕ್ಕೆ
ಅನೇಕ ವರ್ಷಗಳಿಂದಲೂ ಪ್ರಖ್ಯಾತವಾಗಿ ಮಾರಾಟವಾಗುತ್ತಿರುವ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಶ್ಮೀರ ಪುಡಿ
ಉಪಯೋಗಿಸಿ
ಎಂ. ಪುಟ್ಟಯ್ಯ, ಏಜೆಂಟ್, ದೇವರಾಜ ಮಾರ್ಕೆಟ್, ಮೈಸೂರು
ಮೈಸೂರು ದೇವರಾಜ ಮಾರ್ಕೆಟ್ ಅಂಗಡಿಯಲ್ಲೂ, ಎಲ್ಲಾ ಜನರಲ್ ಸ್ಟೋರ್‌ಗಳಲ್ಲೂ ಮಾರಾಟಕ್ಕೆ ಸಿಕ್ಕುತ್ತದೆ ಏಜೆಂಟರುಗಳಿಗೆ ಕಮಿಷನ್ ಕೊಡಲ್ಪಡುವುದು.

ಸಂಪುಟ ೩] ಗುರುವಾರ ೨೪—೮—೪೪ [ಸಂಚಿಕೆ ೨೬

ಹೋರರು ಭಾರತದ ಭಾವಿ ವೈಸರಾಯರೇ?

ಮಿತ್ರ ರಾಷ್ಟ್ರಗಳಲ್ಲಿ ಭಿನ್ನಭಾವ ತಲೆದೋರಿದೆ

ಹಿಟ್ಲರರು ರಾಜೀನಾಮೆ ಕೊಡುವ ಸಂಭವ

ಭಾರತಕ್ಕೆ ಹೋರರು ವೈಸರಾಯರಾಗುವರೇ?

ಸರ್ ಸಾಮ್ಯುಯಲ್ ಹೋರರು ಭಾರತಕ್ಕೆ ವೈಸರಾಯರಾಗಿಯೂ, ಲಾರ್ಡ್ ವೇವೆಲ್ಲರು ಸಮರ ಮಂತ್ರಿಮಂಡಲಕ್ಕಾಗಲಿ, ಅಥವಾ ಯೂರೋಪಿನಲ್ಲಿ ಯಾವುದಾದರೂ ಪ್ರಧಾನ ಸೇನಾಧಿಕಾರವನ್ನು ವಹಿಸುವುದಕ್ಕಾಗಲಿ ಚರ್ಚಿಲರಿಂದ ನೇಮಕವಾಗುವರೆಂಬ ಸುದ್ದಿಯು ಹರಡಿದ್ದು ಈವರೆಗೆ ಇದಕ್ಕೆ ಯಾವ ಆಧಾರವಿಲ್ಲವೆಂದು ತಿಳಿದುಬಂದಿದೆ.

ಪಂಜಾಬಿನ ಮಾಜಿ ಮಂತ್ರಿ ಮೇಲೆ ಮೊಕದ್ದಮೆ?

ಯಾವ ಕಾರಣಕ್ಕಾಗಿ ಕೆಲಸದಿಂದ ತೆಗೆದುಹಾಕಲ್ಪಟ್ಟಿರೋ ಅದೇ ನಿಮಿತ್ತವಾಗಿ ಪಂಜಾಬಿನ ಮಾಜಿ ಮಂತ್ರಿ ಸರದಾರ್ ಶೌಕತ್ ಹಯಾತ್ ಖಾನರ ಮೇಲೆ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗುವುದೆಂದು ತಿಳಿಯಬರುತ್ತದೆ. ಅದನ್ನು ತಪ್ಪಿಸಲು ಮಾಜಿ ಮಂತ್ರಿಗಳಿಗೆ ಸಹಾಯವಾಗಿ ಅನೇಕರು ತೊಡಗಿದ್ದಾರೆ.

ರಾಷ್ಟ್ರ ಪ್ರಾರ್ಥನೆ ದಿನ

ಭಾರತವು ಇತರ ಸಾಮ್ರಾಜ್ಯ ರಾಷ್ಟ್ರಗಳೊಂದಿಗೆ ಬೆರತು ಸೆಪ್ಟಂಬರ್ ಮೂರನೇ ತಾ॥ ದಿನ ರಾಷ್ಟ್ರ ಪ್ರಾರ್ಥನಾ ದಿನವನ್ನು ಆಚರಿಸಬೇಕೆಂದು ವೈಸರಾಯರು ಮನವಿ ಮಾಡಿಕೊಂಡಿದ್ದಾರೆ. ಬ್ರಿಟನು ಯುದ್ಧ ಘೋಷಿಸಿ ಅಂದಿಗೆ ಐದನೇ ವರ್ಷ.

ಕಸ್ತೂರಿಬಾರ ಶ್ರಾದ್ಧ ದಿನ

ಕಸ್ತೂರಿಬಾರವರ ಷಾಣ್ಮಾಸಿಕ ಶ್ರಾದ್ಧವು ಸೇವಾ ಗ್ರಾಮದಲ್ಲಿ ನಡೆಯಿತು. ಗೀತಾ ಪಠಣವಾಯಿತು.

ಪ್ಯಾರಿಸ್ ನಗರದಲ್ಲಿ ದಂಗೆ

ಪ್ಯಾರಿಸ್ ಕ್ಷೇತ್ರದಲ್ಲಿ ಜನರು ಜರ್ಮನರ ವಿರೋಧವಾಗಿ ಏಳಬೇಕೆಂಬ ಆಜ್ಞೆಯಾದ ಕೂಡಲೇ ೫೦ ಸಹಸ್ರ ಸಶಸ್ತ್ರ ಫ್ರೆಂಚ್ ಸೇನೆಯೂ ಲಕ್ಷಾಂತರ ನಿಶ್ಶಸ್ತ್ರ ದೇಶಪ್ರೇಮಿಗಳೂ ಮುನ್ನುಗ್ಗಿ ಮುಖ್ಯವೊಲೀಸ್ ಠಾಣೆಯನ್ನು ವಶಪಡಿಸಿಕೊಂಡರು. ಏಜಿ ಅಧಿಕಾರಿಗಳಲ್ಲಿ ಹಲವರು ತಲೆ ತಪ್ಪಿಸಿಕೊಂಡು ಪರಾರಿಯಾದರು ಇನ್ನು ಕೆಲವರು ಕೈಸೆರೆಯಾದರು. ಹೀಗೆ ಪ್ಯಾರಿಸ್ ನಗರವು ಸ್ವತಂತ್ರ ಫ್ರೆಂಚರಿಂದ ವಿಮೋಚನೆಯನ್ನು ಪಡೆಯಿತು.

ಕೊಲೆ-ಆತ್ಮಹತ್ಯೆ

ಮೈಸೂರು ೨೪

ಮೈಸೂರು ಲಷ್ಕರ್ ಮೊಹಲ್ಲ ಕಾಳಮ್ಮನಗುಡಿ ಬೀದಿ ಬಳಿ ಒಬ್ಬ ವ್ಯಾಪಾರಿಯು ನಿನ್ನರಾತ್ರಿ ತನ್ನ ಸಹವಾಸಿಯಾಗಿದ್ದ ಸ್ತ್ರೀಯೊಬ್ಬಳನ್ನು ಕೊಲೆ ಮಾಡಿ, ತಾನೂ ಆತ್ಮಹತ್ಯೆ ಮಾಡಿಕೊಂಡು ಸತ್ತುಹೋದನು. ಲಷ್ಕರ್ ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆ.

ಅನ್ನದಾನ ಸಮಿತಿ

ಈ ದಿನ ಬೆಳಿಗ್ಗೆ ಮೈಸೂರು ಒಡೆಯರ ಅನ್ನದಾನ ಸಮಿತಿಯ ಸಭೆ ಸೇರಿತ್ತು. ದಾನಿಗಳ ನಿಧಿ ಸ್ವೀಕಾರ ಏರ್ಪಾಡು ಸಮಿತಿಯ ರಚನೆಯಾಯಿತು. ಇನ್ನೂ ಹೆಚ್ಚು ಮಂದಿ ಬಡವರಿಗೆ ಅನ್ನ ಹಾಕಬೇಕೆಂದು ತೀರ್ಮಾನಿಸಲಾಯಿತು.

ಮಿತ್ರರಲ್ಲಿ ಭಿನ್ನಾಭಿಪ್ರಾಯ?

ಸಂಗ್ರಾಮವು ಕೊನೆ ಹಂತವನ್ನು ಪ್ರವೇಶಿಸುತ್ತಿರುವ ಸೂಚನೆಗಳು ಕಂಡು ಬರುತ್ತಿರುವ ಸಮಯದಲ್ಲಿಯೇ ಮಿತ್ರರಾಷ್ಟ್ರಗಳ ಭಿನ್ನಭಾವವೂ, ಭೇದವೂ ಕಂಡು ಬರುತ್ತಿದೆ. ಒಳಗೆ ಹುದುಗಿದ್ದ ಅಭಿಪ್ರಾಯಭೇದ ಹೊರಹೊಮ್ಮುತ್ತಿದೆ. ಪೋಲೆಂಡಿನ ವಿಷಯವಾಗಿ ರಷ್ಯ ಮತ್ತು ಬ್ರಿಟನ್‌ಗಳಿಗೆ ಇರುವ ಭಿನ್ನಭಾವವು ತೀರ ವಿಷಣ್ಣವಾಗಿದೆ. ಇದಲ್ಲದೆ ಅಮೆರಿಕದ ಪ್ರಬಲ ಗುಂಪಿನವರುಗಳು ಈಗಾಗಲೆ ಜರ್ಮನಿಯಾಕ್ ಮುಂತಾದ ಅಟ್ಲಾಂಟಿಕ್ ದ್ವೀಪಗಳು ಪಶ್ಚಿಮ ಭೂಗೋಳದ ರಕ್ಷಣೆಗೂ ಬೇಕೆಂದು ಬ್ರಿಟಿಷ್ ರಾಜ್ಯಕ್ಕೆ ಒತ್ತಾಯಪಡಿಸುತ್ತಿರುವರು. ಇದಲ್ಲದೆ ಈಗ ನಡೆಯುತ್ತಿರುವ ಸಂಗ್ರಾಮದಲ್ಲಿ ಬ್ರಿಟನ್ ಮಾಡಿರುವ ತ್ಯಾಗಕ್ಕಿಂತಲೂ ತಮ್ಮದೇ ಹೆಚ್ಚಾಗಿದೆಯೆಂದು ಅಮೆರಿಕನರ ವಾದ. ಕಳೆದ ಯುದ್ಧದ ಅಭ್ಯಾಸವಿನಲ್ಲಿ ಅದಂತೆ, ಈ ಸಲವೂ ಅದಂತೆ ನೋಡಿಕೊಳ್ಳಲು ಈಗಾಗಲೇ ಯುದ್ಧಭಾಗಿತ್ವದಲ್ಲಿ ತಮ್ಮ ಸ್ವಾರಸ್ಯ ವೆಸ್ತಿದೆಯೆಂಬುದನ್ನು ತಿಳಿಸಲಾಗುತ್ತಿದೆ.

ಜರ್ಮನರಿಗಾದ ನಷ್ಟ

ನಾರ್ಮಂಡಿಯಲ್ಲಿ ಜರ್ಮನರು ೩ ಲಕ್ಷ ಸೇನೆಯನ್ನು, ನಷ್ಟಪಡಿಸಿಕೊಂಡಿದ್ದಾರೆ ಸಾವಿರಾರು ಟ್ಯಾಂಕುಗಳು, ವಿದ್ಯುತ್ ಸಂಧಾನ ಪುಷ್ಪ ಮೋಟಾರುಗಳ, ಸಾವಿರಾರು ಟನ್ನುಗಳನ್ನು ಇತರ ಸಾಮಗ್ರಿಗಳೆಲ್ಲಾ ಹಾಳಾಯಿತು. ಫೆಲೀಯಾ ನಲ್ಲಿ ಜೆ॥ ಏಲ್ ಷ್ಟೆಲ್ಪ್ ಎಂಬ ಸೇನಾನಿಯು ತನ್ನ ಅಧೀನ ದಳಗಳೊಂದಿಗೆ ಸೆರೆ ಸಿಕ್ಕನು. ಈ ನಾರ್ಮಂಡಿ ಇಕ್ಕಳದಲ್ಲಿ ಸಿಕ್ಕದೆ ತಪ್ಪಿಸಿಕೊಂಡು ಹೋದ ಬಲವಾದ ಜರ್ಮನ್ ಪಡೆಗಳು ಈಗ ಸಿನೋಟೆಯುರ್ ಎಂಬಲ್ಲಿ ಒಂದಾಗುತ್ತಿವೆ.

ಅಧಿಪತ್ಯ ಬೇಕಿಲ್ಲ

"ಟೆಹರಾನ್ ಸಮ್ಮೇಳನದಲ್ಲಿ ನಡೆದ ಮೋಸ" ಎಂಬ ಶಿರೋನಾಮೆಯಲ್ಲಿ ಬರೆಯುತ್ತಾ ಫಾರಿನ್ ಅಫೇರ್ಸ್ ಎಂಬ ಪತ್ರಿಕೆಯವರು, ಸೋವಿಯೆಟ್ ರಷ್ಯವು ಯಾವ ಪ್ರಕಾರ ರಷ್ಯಕ್ಕೆ ತನ್ನ ಅಕ್ಕಪಕ್ಕ ರಾಷ್ಟ್ರಗಳ ಮೇಲೆ ಯಾವ ಅಧಿಪತ್ಯವೂ ಇಲ್ಲವೆಂದೂ, ಟೆಹರಾನ್ ಸಮ್ಮೇಳನದ ಬಳಿಕ ಸ್ಟಾಲಿನರು ಯೂರೋಪಿನ ಮೇಲೆ ಅಧಿಪತ್ಯ ಪಡೆಯಲು ತನಗೆ ಇಚ್ಛೆಯಿಲ್ಲವೆಂದೂ ಸ್ಪಷ್ಟವಾಗಿ ತಿಳಿಸಿದರು.

ಹಿಟ್ಲರನು ರಾಜೀನಾಮೆ ಯೀಯುವನೇ?

ಯಾವ ಕ್ಷಣದಲ್ಲಾದರೂ ಏನಾದರೂ ನಡೆಯಬಹುದು. ಹಿಮ್ಲರ್, ಗೋಬೆಲ್ಸ್ ಮತ್ತು ಗೋರಿಂಗ್ ಇವರುಗಳು ಹಿಟ್ಲರನ್ನು ವಿರೋಧಿಸುತ್ತಿರುವುದರಿಂದ ನಾಜಿಗಳ ಗುಂಪಿನಲ್ಲಿ ಬಿರುಕಾದ ಒಡಕುಂಟಾಗಿದೆ. ಇದರಿಂದ ಹಿಟ್ಲರನು ರಾಜೀನಾಮೆಯನ್ನು ಕೊಡಬಹುದೆಂದು ಕೊರಿಯರ್ ಡಿ ಜನಿವಾ ಎಂಬ ಪತ್ರಿಕೆ ತಿಳಿಸುತ್ತದೆ.

ಅವಿನಾನ್ ಸಮೀಪಿಸಿದರು

ಏಕ್ಸ್ ಎಂಬ ಊರಿನಿಂದ ಪಶ್ಚಿಮಕ್ಕೆ ಹೊರಟ ಅಮೆರಿಕನರ ಸೇನೆಯು ಈಗ ೮ ಮೈಲಿ ಮುಂದೆ ಹೋಗಿದೆ. ಅವಿನಾನ್ ಎಂಬ ಸ್ಥಾನವನ್ನು ಶುತ್ರುತರಣ ಪಡೆಗಳು ಸಮೀಪಿಸುತ್ತಿವೆ. ಪೂರ್ವಕ್ಕೆ ಇಟಲಿ ಗಡಿಗೆ ಮಿತ್ರಸೇನೆಗಳು ೧೧ ಮೈಲಿ ದೂರದಲ್ಲಿ ಮಾತ್ರ ಇವೆ. ಇನ್ನೂ ಪಶ್ಚಿಮಕ್ಕೆ ಬೋರ್ಡೋ ರೇವಿನ ಮೇಲೆ ಫ್ರೆಂಚ್ ಮತ್ತು ಅಮೆರಿಕನ್ ಸೇನೆಗಳು ಧಾಳಿ ಮಾಡಲು ಪಕ್ರಮಿಸಿವೆ. ಸ್ಪೇನ್ ಗಡಿ ಹಿಡಿಯಲು ಅಮೆರಿಕನರ ದಾಳಿ ಸ್ಪೇನ್ ಗಡಿಯ ಕಡೆಗೆ ನುಗ್ಗುತ್ತಿದೆ.

ಬೆಂಡರ್ ಕ್ಷೇತ್ರದಲ್ಲಿ ಹೊಸ ಧಾಳಿ

ರುಮೇನಿಯಾದಲ್ಲಿ ಬೆಂಡರ್ ಕ್ಷೇತ್ರದಲ್ಲಿ ಹೊಸ ಧಾಳಿ ಪ್ರಾರಂಭವಾಯಿತು. ರಷ್ಯನರು ಉಭಯ ಪಾರ್ಶ್ವಗಳಲ್ಲಿ ೬೦ ಮೈಲು ನುಗ್ಗಲು ಹೊರಟಿರುವುದರಿಂದ ಜಾಸಿ ನಗರವನ್ನು ಜರ್ಮನರು ತ್ಯಜಿಸಬೇಕಾಯಿತೆಂದು ಜರ್ಮನ್ ಟೀಕಾಕಾರರ ಹೇಳಿಕೆ. ಖುತ್ರುಗಳನ್ನು ಪೂರ್ವ ಪ್ರಷ್ಯದೊಳಗೆ ರಷ್ಯನರ ಪ್ರಹರಿಗಳು ಓಡಿಸುತ್ತಿದ್ದಾರೆ. ಇನ್ನೂ ಮೇಲೆ ರಷ್ಯನರು ಎಸ್ಟೋನಿಯದ ಪ್ರದೇಶದಲ್ಲಿ ಸಿಕ್ಕಿಕೊಂಡ ಬಾಲ್ಟಿಕ್ ಸೇನೆಯನ್ನು ಊಳಸಲು ಬಹಳ ಪ್ರಯತ್ನ ಮಾಡುತ್ತಿವೆ. ಟಾರ್ಟ್ಯು ಮಾಲ್ವಿ ಕ್ಷೇತ್ರ ಕಾದಾಟವಾಗಿದೆ.

ಗಾಂಧಿ-ಜಿನ್ನಾ ಭೇಟಿ ಈವಾರವಿಲ್ಲ

ಗಾಂಧಿ ಮತ್ತು ಜಿನ್ನಾರವರು ಈ ವಾರದಲ್ಲಿ ಭೇಟಿಯಾಗಲಿದ್ದಾರೆಂದು ನಿರೀಕ್ಷಿಸುತ್ತಿದ್ದ ಜಿನ್ನಾರವರು ಇನ್ನೂ ಸಿದ್ಧರಾಗಿಲ್ಲವಾದ್ದರಿಂದ ಈ ವಾರ ಗಾಂಧೀಜಿಯವರು ಅವರನ್ನು ಭೇಟಿಮಾಡುವುದಿಲ್ಲ.

ಸಂತಾಪ ಸೂಚಕ ಸಭೆ

ಮೈಸೂರು ೨೪

ಈ ದಿನ ಬೆಳಿಗ್ಗೆ ೧೧ ಘಂಟೆಯಲ್ಲಿ ಪಿಟ್ಟಿದಿರುವ ಹಾಸ್ಟಲ್ ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ಶ್ರೀಮಾನ್ ಎಸ್. ಎಂ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಈ ನಿಲಯದ ಮ್ಯಾನೇಜರಾದ ಶ್ರೀ ಜಿ. ಪುಟ್ಟೆಗಂಗಪ್ಪನವರ ಅಕಾಲ ಮರಣಕ್ಕಾಗಿ ಸಂತಾಪಸೂಚಕ ಸಭೆ ಸೇರಿತ್ತು. ಶ್ರೀಯುತರಾದ ವಿದ್ವಾನ್ ಮರುಳಸಿದ್ದಯ್ಯ, ಸಿ. ಮಹದೇವಪ್ಪ ಮತ್ತು ಡಿ. ಸದಾಶಿವಮೂರ್ತಿ ಯವರುಗಳೂ, ಅಧ್ಯಕ್ಷರೂ ಅವರ ವಿಷಯದಲ್ಲಿ ಭಾಷಣಮಾಡಿದರು. ಅನಂತರ ಸಂತಾಪಸೂಚಕ ನಿರ್ಣಯವನ್ನು ಅಂಗೀಕರಿಸಲಾಯಿತು.

೪ ತಿಂಗಳ ಶಿಕ್ಷೆ

ಅಪರಾಧಿ ಇನ್ನೂ ಚಿಕ್ಕವಯಸ್ಸಿನವನು; ಸಹವಾಸ ದೋಷದಿಂದ ಕಳ್ಳತನಕ್ಕೆ ಬಿದ್ದು ಕಟ್ಟಕೋಗಿದ್ದಾನೆ ಮತ್ತು ಈಗಾಗಲೇ ಏಳು ಸಲ ಶಿಕ್ಷೆಯಾಗಿದೆ ಎಂದು ನಗರ ನ್ಯಾಯಾಧಿಕಾರಿಗಳಾದ ಶ್ರೀ ಮಹಮದ್ ಅತ್ತಾರವರು ಅಭಿಪ್ರಾಯಪಟ್ಟು ಗಾಸ್ ಸ್ಟೇಷನ್ ಎಂಬುವನಿಗೆ ಟಪ್ಪೆಬರಿಗಳನ್ನು ಕದ್ದ ಅಪರಾಧಕ್ಕಾಗಿ ಮತ್ತೆ ೪ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ಮಂತ್ರಿ ಮಂಡಲದ ಸಭೆ

ಸ್ವಂ. ಸು.] ಬೆಂಗಳೂರು ೨೪

ಈ ದಿನ ಮಧ್ಯಾಹ್ನ ದಿವಾನರ ಅಧ್ಯಕ್ಷತೆಯಲ್ಲಿ ಅಠಾರಾ ಕಚೇರಿಯಲ್ಲಿ ಮಂತ್ರಿಮಂಡಲದ ಸಭೆ ನಡೆಯಿತು. ಸಭೆ ಮಧ್ಯಾಹ್ನ ೩ ಗಂಟೆಗೆ ಪ್ರಾರಂಭವಾದದ್ದು ಸಂಜೆ ೫.೩೦ ರವರೆಗೂ ನಡೆಯಿತು.

ಕರ್ನಲ್ ಮೈಸರ್ಸ್‌ರು ನಿವೃತ್ತರಾಗುವರು

ಸಂಸ್ಥಾನದ ಸ್ವಸ್ಥ ದಳಗಳ ಚೀಫ್ ಆಫ್ ಸ್ಟಾಫ್ ಆದಂತಹ ಕರ್ನಲ್ ಮೈಸರ್ಸ್‌ರವರಿಗೆ ಕಾಂಟ್ರಾಕ್ಟ್ ಸರ್ವಿಸ್ ಅವಧಿಯು ಈ ನವಂಬರ್ ೩ ನೇ ತಾ॥ ಗೆ ಮುಗಿಯುವುದು. ಅಲ್ಲಿಂದಾಚೆಗೆ ಅವರು ಅಧಿಕಾರದಿಂದ ನಿವೃತ್ತರಾಗುವರೆಂದು ನಿಖರವಾಗಿ ಗೊತ್ತಾಗಿದೆ.

ಪಬ್ಲಿಕ್ ವರ್ಕ್ಸ್ ಸಚಿವರ ಪ್ರವಾಸ

ಪಬ್ಲಿಕ್ ವರ್ಕ್ಸ್ ಸಚಿವರಾದ ಮಿ॥ ಮಹಮದ್ ಇಮಾಮರವರು ಮುಂದಿನ ತಿಂಗಳು ೫ ನೇ ತಾರೀಖಿನಿಂದ ೧೩ ನೇ ತಾರೀಖಿನ ವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.

ಕನ್ನಡ ಟ್ರಾನ್ಸ್‌ಲೇಟರ್ ಸಂಬಳ ಹೆಚ್ಚಿತು

ಸರ್ಕಾರದ ಕನ್ನಡ ಟ್ರಾನ್ಸ್‌ಲೇಟರಾದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರ ಸಂಬಳವನ್ನು ೬೦೦ ರಿಂದ ೬೨೦ ರಿಂದ ೭೦೦ ರೂ. ಗೆ ಹೆಚ್ಚಿಸಲಾಗಿದೆ.

ಕಾಂಗ್ರೆಸ್ಸಿನ ಪತ್ರವಲ್ಲ

ನಾವು ಕಾಂಗ್ರೆಸ್ಸಿನ ಪತ್ರಗಳಲ್ಲ ಹಲವು ವಿಷಯಗಳಲ್ಲಿ ಮುಖ್ಯ ನೀತಿ ಭಿನ್ನಭಾವ ವುಳ್ಳವರಾಗಿದ್ದೇವೆಯೆಂದು ಜನ್ನಾರವರು ಹೇಳಿದ್ದಾರೆ. ನವಾಬ್ ಸ್ಪಷ್ಟೀಕರಣ ರಾಜ್ಯವನ್ನು ಕೇಳಿದ ಪತ್ರಿಕೆಗಳಿಗೆ ನನ್ನಿಂದ ಉಂಟಾಗಿರುವ ಯಾವ ಸಂದರ್ಭವೂ ಬೇಡವೆಂದಲ್ಲ ಎಂದು ತಿಳಿಸಿದೆ. ಇನ್ನೂ [illegible]

ಈ ದಿನದ ಪತ್ರಿಕೆಯ ಸಂಪಾದಕರು [illegible] ರೂ. ದಂಡವನ್ನು ಕೊಟ್ಟಿದ್ದಾರೆ.

ಮುನ್ಸಿಪಲ್ ಮಹೋತ್ಸವ

ಬೆಂಗಳೂರು ೨೩

ಸರ್ಕಾರದ ಸಿವಿಲ್ ಸಪ್ಲೈಸ್ ಇಲಾಖೆಯವರು ನಡೆಸುತ್ತಿರುವ ಕಾರ್ಯಗಳ ಪ್ರಗತಿಯನ್ನು ಮತ್ತು ... ಪ್ರಾಂತದ ... ನಾಡಿನ ... ಕಮಿಟಿಯ ... ವಿವರಗಳನ್ನು ... ಕೊಟ್ಟಿರುವ ... ಮಾಡುವ ... ಪ್ರೆಸ್ ಪ್ರಕಟಿಸಿದೆ.

ಅಧಿಕಾರಿ ನೇಮಕಗಳು

ಬೆಂಗಳೂರಿನ ... ಬ್ಯಾಂಕಿನ ... ಎಸ್ ... ಸಂಸ್ಥೆಗಳ ಡೆಪ್ಯುಟಿ ಡೈರೆಕ್ಟರ್ ಆಗಿ ನೇಮಕವಾಗಿದೆ.

ಸೆಕ್ರೆಟರಿಯೇಟಿನ ಜಿ. ಎಲ್. ಎಸ್ ... ಎಂ. ಎ. ಆನಂದಾಚಾರ್ ... ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯಮಿಸಲ್ಪಟ್ಟಿದೆ.

ತುಂಗಾ, ಭದ್ರಾಗಳಿಗೆ ಅಣೆಕಟ್ಟುಗಳು

ಸಕ್ರೆಬೈಲಿನ ಹತ್ತಿರ ತುಂಗಾನದಿಗೂ, ... ಭದ್ರಾನದಿಗೂ ಅಣೆಕಟ್ಟುಗಳನ್ನು ... ಯೋಜನೆ ... ಪ್ರಕೃತ ... ಸರ್ಕಾರದ ... ಭದ್ರಾವತಿ ... ನಡೆಸುತ್ತಿದ್ದಾರೆ.

ಭದ್ರಾವತಿಯ ವೈಸ್-ಪ್ರೆಸಿಡೆಂಟ್ ಚುನಾವಣೆ

ಭದ್ರಾವತಿ ಪೌರಸಭೆಗೆ ಶ್ರೀ ಆರ್. ಎ ... ಎಂ.ಎ. ವೈಸ್ ಪ್ರೆಸಿಡೆಂಟರಾಗಿ ... ಇವರಿಗೆ ಪ್ರತಿ ಸ್ಪರ್ಧಿ ಇರಲಿಲ್ಲ

Edited, printed and published by A. R. Nagarajan, at the Sadhvi Press, D Subbiah Road, Mysore.

ಬಾಬು ತಂಡನ್ನರ ಬಿಡುಗಡೆ

ಸಂಯುಕ್ತ ಪ್ರಾಂತದ ಅಸೆಂಬ್ಲಿ ಸ್ಪೀಕರರಾದ ಬಾಬು ಪುರುಷೋತ್ತಮದಾಸ ತಂಡನ್ನರು ಜೈಲಿನಲ್ಲಿ ತುಂಬಾ ಖಾಯಿಲೆಯಿಂದ ನರಳುತ್ತಿದ್ದರಷ್ಟೆ. ಈಗ ಅವರ ಬಿಡುಗಡೆಯಾಗಿದೆ. ಪಂಜಾಬಿನ ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಡಾ. ... ಕಿಚಲೂ ... ಖಾಯಿಲೆ ನಿಮಿತ್ತ ಪೆರೋಲ್ ಮೇಲೆ ಬಿಡುಗಡೆಯಾಗಿರುವರು.

ಸಾರ್ವಜನಿಕ ಹಣದ ದುರುಪಯೋಗ

ಪ್ರಸ್ತುತ ಯುದ್ಧ ಪರಿಸ್ಥಿತಿ ಸಾರ್ವಜನಿಕ ಹಣವನ್ನು ದುರುಪಯೋಗ ಪಡಿಸಿಕೊಳ್ಳುವವರಿಗೆ ... ಅನೇಕ ... ಇಂತಹ ಮೋಸವನ್ನು ತಪ್ಪಿಸಲು ಭಾರತ ಸರ್ಕಾರವು ... ಮಾಡಿ, ... ಮೋಸಮಾಡುವವರು ... ಪ್ರಸಂಗವಿದ್ದರೂ, ಯಾವ ರೂಪದಲ್ಲಿ ಆ ಹಣ ಇದ್ದು ... ಅವನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ನೌಕರರಿಗೆ ಕೊಟ್ಟಿದ್ದಾರೆ.

ರಾಜ್ಯಾಂಗ ಸ್ವರೂಪ ನಿರ್ಮಾಣಕ್ಕಾಗಿ ಕಾತರವೇ?

ಸಂಗ್ರಾಮ ಮುಕ್ತಾಯವಾದನಂತರ ಭಾರತದ ಭಾವೀ ರಾಜ್ಯಾಂಗ ಸ್ವರೂಪವನ್ನು ನಿರ್ಮಾಣ ಮಾಡಲು ... ವೈಸರಾಯರು ... ಸಂಬಂಧವಾಗಿ ... ಪ್ರತೀತಿ ಇದೆ. ... ಕಾಂಗ್ರೆಸ್ ಮತ್ತು ಲೀಗ್ ... ಸಂಧಾನಕ್ಕೆ ... ಭಾರತ ಸ್ವಾತಂತ್ರ್ಯಕ್ಕಾಗಿ ... ತಲು ... ದಂತಾಗುತ್ತದೆ.

ಹಂಗೇರಿ ರಾಜ್ಯದ ... ಪಟ್ಟಣ ... ಮೇಲೆ ಮಿತ್ರ ವಾಯುಬಲ ... ಬಾಂಬುಗಳನ್ನು ಹಾಕಿದುವೆಂದು ಜರ್ಮನರ ವರದಿ

ಬಂಗಾಳದಲ್ಲಿ ಮಲೇರಿಯಾ

ಬಂಗಾಳ ಪ್ರಾಂತ್ಯದಲ್ಲಿ ೪ ಕೋಟಿ ಜನರು ಮಲೇರಿಯಾದಿಂದ ಕಷ್ಟಪಡುತ್ತಿದ್ದಾರೆ. ಇವರ ಪೈಕಿ ೩ ಕೋಟಿಗಿಂತ ಹೆಚ್ಚಿನ ಜನರು ಮಲೇರಿಯಾಕ್ಕೆ ಚಿಕಿತ್ಸೆ ... ಗ್ರಾಮಾಂತರದಲ್ಲಿ ವೈದ್ಯ ಸಹಾಯವಿಲ್ಲವಾಗಿದೆಯೆಂದು ತಿಳಿದುಬಂದಿದೆ.

ಅಮೇರಿಕನ್ನರ ಸಹಾಯವಿಲ್ಲ

ಭಾರತ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಅಮೇರಿಕನ್ನರು ಮಧ್ಯೆ ಪ್ರವೇಶ ಮಾಡುವರೆಂದು ನಂಬುವುದು ... ನಿರಾಶೆ ... ಆರ್ಥಿಕ ... ಪ್ರತಿನಿಧಿ ... ಹೇಳುತ್ತಾರೆ.

ಬರ್ಮಾದೊಳಗೆ ಯುದ್ಧ

ಭಾರತವನ್ನು ಬಿಟ್ಟು ಈಗ ಯುದ್ಧ ಕ್ಷೇತ್ರವು ಬರ್ಮಾದಲ್ಲೇ ನಡೆಯುತ್ತಿದೆ. ಮಳೆಯ ಹೊಡೆತವು ಜಾಸ್ತಿಯಾಗಿರುವುದರಿಂದ ಪದಾತಿಗಳ ಕಾರ್ಯಗಳು ನಡೆಯಲು ತೊಂದರೆಯಾಗಿದೆ. ಅರಕಾನ್ ಕಡೆಯಲ್ಲೂ ಕೊಂಚ ಬಿಸಿಯಾಗಿದೆ

ಬಾಲಕಿಯರಿಗೂ ಯುದ್ಧೋದ್ಯೋಗ

ಜಪಾನಿನಲ್ಲಿ ಯುದ್ಧದ ನಿಮಿತ್ತ ಮಹಿಳೆಯರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಹೊಸ ರೀತಿಯೊಂದು ಜಾರಿಗಾಗಿ ... ೧೪ ವರ್ಷ ವಯಸ್ಸಿನ ಬಾಲಕಿಯರಿಂದ ಮೊದಲಾಗಿ ೪೦ ವರ್ಷದ ಪ್ರೌಢೆಯರ ವರೆಗೂ ಎಲ್ಲಾ ಸ್ತ್ರೀಯರನ್ನು ... ಕೊಳ್ಳಲಾಗುವುದು.

ಜಪಾನ್ ವಿಮಾನ ಬಲವೆಲ್ಲಿ?

ಕಳೆದ ಒಂದು ವಾರದಿಂದಲೂ ಜಪಾನಿನ ವಿಮಾನ ಬಲವೇ ಕಾಣಬರುತ್ತಿಲ್ಲ. ದಕ್ಷಿಣ ಪೆಸಿಫಿಕ್ ಸಾಗರದ ದ್ವೀಪಗಳ ಮೇಲೆಲ್ಲಾ ಅಮೇರಿಕ ವಿಮಾನಗಳು ನಿರಾತಂಕವಾಗಿ ಹಾರಾಡುತ್ತಿದ್ದುವು.

ಮ್ಯೂನಿಕ್ ಕೌಲು "ನಾಸ್ತಿ"

೧೯೩೮ರಲ್ಲಿ ಹಿಟ್ಲರರೊಡನೆ ಚೇಂಬರ್ಲೇನ್, ಡಲಾಡಿಯರವರು ಮ್ಯೂನಿಕ್ ನಗರದಲ್ಲಿ ಒಪ್ಪಂದವನ್ನು ಮಾಡಿಕೊಂಡು ಜೆಕೊಸ್ಲೊವೇಕಿಯಾದಿಂದ ಸುಡೆಟನ್ ಭೂಮಿಯನ್ನು ಜರ್ಮನರಿಗೆ ಕೊಡಿಸಿದ್ದರಷ್ಟೆ. ಈಗ ಆ ಕೌಲನ್ನು ಇಂಗ್ಲೆಂಡಿನಲ್ಲಿರುವ ಜೆಕೋಸ್ಲೊವೇಕಿಯಾ ಸರಕಾರವೂ ಫ್ರಾನ್ಸಿನ ರಾಷ್ಟ್ರೀಯ ಸಮಿತಿಯೂ ನಿರಾಕರಿಸಿವೆ.

ಮಾರ್ಷಲ್ ಪಿಟೇನರ ಸೆರೆ

ಪದಚ್ಯುತ ಫ್ರಾನ್ಸಿನ ಮುಖಂಡರಾದ ಮಾರ್ಷಲ್ ಪಿಟೇನರು ಜರ್ಮನ್ ಗೆಸ್ಟಪೊ ದಳದವರಿಂದ ಬಂಧಿಸಲ್ಪಟ್ಟು ಗೊತ್ತುಗುರಿಯಿಲ್ಲದ ಸ್ಥಳಕ್ಕೆ ಒಯ್ಯಲ್ಪಟ್ಟಿದ್ದಾರೆ. ಲವಾಲ್ ಮಂತ್ರಿಯವರು ಸ್ವಿಟ್ಜರ್ಲೆಂಡ್ ಸೀಮೆಯ ಹತ್ತಿರ ಬೆಲ್‌ಫೋರ್ಟ್ ಎಂಬಲ್ಲಿದ್ದಾರೆ

ಜರ್ಮನಿಗೆ ಕಬ್ಬಿಣದ ಅಭಾವ

ಜರ್ಮನಿಗೆ ಒಪ್ಪಲು ಸ್ವೀಡನ್ ರಾಷ್ಟ್ರವು ಆ ದೇಶಕ್ಕೆ ಸೇರಿದ ಹಡಗುಗಳಲ್ಲಿ ಕಬ್ಬಿಣ ತೇದು ಬಾಲ್ಟಿಕ್ ರೇವುಗಳಲ್ಲಿ ಇಳಿಸುತ್ತಿದ್ದುದು, ಈಗ ಇಂಗ್ಲೀಷರು ಸಮುದ್ರದಲ್ಲಿ ಹಡಗುಗಳನ್ನು ಹಾರಿಸಿ ... ನಿಲ್ಲಿಸಲಾಗಿದೆ.

ಬಲ್ಗೇರಿಯಾ ಚಟುವಟಿಕೆ

ರಷ್ಯ ಮತ್ತು ತುರ್ಕಿ ರಾಜ್ಯಗಳೊಂದಿಗೆ ಸಖ್ಯ ಬೆಳೆಸಲು ಬಲ್ಗೇರಿಯಾ ಸರಕಾರವು ಆತುರಪಡುತ್ತಿದೆಯೆಂದು ಆ ದೇಶದ ವಿದೇಶಾಂಗ ಮಂತ್ರಿಯು ಹೇಳಿದೆ.

ಲೆಬನಾನ್ ಸ್ವಾತಂತ್ರ್ಯ

ರಷ್ಯ ಸರಕಾರವು ಲೆಬನಾನ್ ಸ್ವಾತಂತ್ರ್ಯವನ್ನೊಪ್ಪಿ ಅಲ್ಲಿನ ಸರಕಾರಕ್ಕೆ ತಮ್ಮ ರಾಯಭಾರಿಯನ್ನು ಕಳುಹಿಸಿದೆ.

ಪ್ಯಾರಿಸ್ ಟೌಲಾನ್ ಪತನ

ಪ್ಯಾರಿಸ್‌ನಗರವೂ ದಕ್ಷಿಣದಲ್ಲಿರುವ ಟೌಲಾನ್ ರೇವೂ ಮಿತ್ರರ ಹಸ್ತಗತವಾದುವು.

ಬೆಲೆ ಕಡಿಮೆ ! ಬಣ್ಣ ಗ್ಯಾರಂಟಿ !

— ಮಹಿಳೆಯರಿಗೆ ಮಂಗಳಪ್ರದವಾದುದು —

— ಹೊಸದಾಗಿ ತರಿಸಿರುವ ನಾನಾಬಗೆಯ ಬಳೆಗಳು —

ಬಾಳಿಕೆ, ಅಂದ, ಬಣ್ಣದಲ್ಲಿ ಪ್ರಖ್ಯಾತಿಯಾದುವು

ಮೈಸೂರು ಸಿಲ್ಕ್ ಫಿಲೇಚರಿನ ರವಿಕೆಗಳು ನಾನಾ ಬಣ್ಣದವು ಬಂದಿವೆ

ಸೌಭಾಗ್ಯ ಸ್ಟೋರ್ಸ್, ದೇವರಾಜ ಮಾರ್ಕೆಟ್, ಮೈಸೂರು.

(Firm approved by the Govt. of Mysore)

How trim you look with well tailored suit. It is good tailoring that Counts.

To give you full satisfaction in fit and cut and finish Here we are

B. VITTAL BROS.,

(Blouse specialists)

Certified tailors & contractors

Srirampet MYSORE

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಧನ್ವಂತರಿಯ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ.

ಇನ್ನೊತ್ತೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು ! ಶೈಗಾರಿಕೆ ಸಂಸ್ಥೆಗಳು !

ಬಾಲಿಕಾ ಶಾಲೆಗಳು ! ಮಹಿಳಾ ಚಿಕಿತ್ಸಾಲಯಗಳು !

ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.

ನಿಮ್ಮಲ್ಲಿ ವಸೂಲಾದ ಹಣ ಮನುಗಾಗಿಯೇ ವಿನಿಯೋಗ.

... ಗೋಪಾಲಸ್ವಾಮಿ ... ಎಸ್. ಚನ್ನಯ್ಯ, ಹಿರಳ್ಳಿ ದಾಸಪ್ಪ,

... ಕಾರ್ಯದರ್ಶಿ ಅಧ್ಯಕ್ಷ

ಸ್ತ್ರೀಯರ ಸೌಂದರ್ಯರಕ್ಷೆ

ಕಳೆದ ... ವರ್ಷಗಳಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಚ್ ಕಾಫಿ ಪುಡಿ

ಇಂತಿ ಯವರು,

ಡಿ. ಪುಟ್ಟಯ್ಯ, ದಿನಸಿ ಅಂಗಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಹೋಟೆಲ್ಲು ದಿನಸಿ ಅಂಗಡಿಗಳಿಗೆ ಸಗಟು ಕೋಟಾಕ್ಕೆ ಸ್ಟಾಕಾಗಿ ಬೇಕಾದ ಮಟ್ಟಿಗೆ ಕಳುಹಿಸಿ ಕೊಡಲ್ಪಡುತ್ತದೆ.

ಅರಮನೆ ಬ್ಯಾಂಡ್ ವಾದ್ಯ ಪ್ರದರ್ಶನ

ಮೈಸೂರು ೨೫

ರಾಜಧಾನಿಯ ಪ್ರಾಣಿ ಸಂಗ್ರಹಾಲಯದಲ್ಲಿ ಅರಮನೆಯ ಬ್ಯಾಂಡಿನವರು ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ದಿನದ ನಾಳೆಯಿಂದ ಮೊದಲ್ಗೊಂಡು ಪ್ರತಿ ಶನಿವಾರವೂ ಸಂಜೆ ೬ ರಿಂದ ೭ ರ ವರೆಗೆ ಬ್ಯಾಂಡ್ ಬಾರಿಸುವ ಏರ್ಪಾಡು ಮಾಡಲಾಗಿದೆ.

ರಾಜೀನಾಮೆ

ಮಹಾಜನ ಹೈಸ್ಕೂಲು ಸಾಹಿತ್ಯ ಸಂಘದ ಅಧ್ಯಕ್ಷರಾಗಿದ್ದ ಶ್ರೀಮಾನ್ ನಾಡಿಗ ಕೃಷ್ಣಮೂರ್ತಿಯವರು ಅಧ್ಯಕ್ಷಪದಕ್ಕೆ ರಾಜೀನಾಮೆಯಿತ್ತಿದ್ದಾರೆಂದು ತಿಳಿದುಬಂದಿದೆ. ಅವರ ಜಾಗಕ್ಕೆ ಶ್ರೀ ಎಚ್. ಅನಂತರಾವ್ ರವರನ್ನು ನಾಮಕರಣ ಮಾಡಲಾಗಿದೆಯೆಂದು ಗೊತ್ತಾಗಿದೆ

ಸಂಪೂರ್ಣ ಶ್ರೀ ಕೃಷ್ಣಲೀಲಾ

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಥಿಯೇಟ್ರಿಕಲ್ ಕಂ (ರಜಿಸ್ಟರ್ಡ್) ಮೈಸೂರು ಇವರು ಟೌನ್‌ಹಾಲಿನ ಮೈದಾನದಲ್ಲಿ ನಿರ್ಮಿತವಾಗಿರುವ ಧನಲಕ್ಷ್ಮಿ ಥಿಯೇಟರಿನಲ್ಲಿ ಮೈಸೂರಿನಲ್ಲಿ ತಮ್ಮ ಪ್ರದರ್ಶನಗಳ ಪ್ರಾರಂಭದಲ್ಲಿ ಸಂಪೂರ್ಣ ಶ್ರೀ ಕೃಷ್ಣಲೀಲಾ ನಾಟಕವನ್ನು ಸಿಟಿ ಮುನಿಸಿಪಲ್ ಪ್ರೆಸಿಡೆಂಟರಾದ ಮಿ|| ಆರ್ ರಾಮಚಂದ್ರರಾವ್ ಥಾಂಬೋರೆಯವರ ಅಧ್ಯಕ್ಷತೆಯಲ್ಲಿ ಅಭಿನಯಿಸುತ್ತಾರೆ

ನಿ ಧ ನ

ಲೇಟ್ ಧರ್ಮಪ್ರಕಾಶ' ಸಾಹುಕಾರ್ ಡಿ. ಬನುಮಯ್ಯನವರ ತಮ್ಮಂದಿರಾದ ಶ್ರೀ ಸಾಹುಕಾರ್ ಚೌಡಯ್ಯನವರು ನೆನ್ನೆ ಸಂಜೆ ಶ್ರೀ ಡಿ ಟಿ. ಕೃಷ್ಣಪ್ಪನವರ ಮನೆಯಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಗಳನ್ನು ಈ ದಿನ ಶ್ರೀ ಡಿ ಟಿ. ಕೃಷ್ಣಪ್ಪನವರು ನೆರವೇರಿಸಿದರು

ಮೈಸೂರು ವಿದ್ಯಾರ್ಥಿ ಸಂಘ

ಈ ಸಂಘದ ಆಶ್ರಯದಲ್ಲಿ ೨೬ ನೇ ತಾರೀಖು ಭಾನುವಾರ ಸಂಜೆ ೬ ಘಂಟೆಗೆ ಶ್ರೀ ಮೈತ್ರೀ ದಂಪತಿಗಳಿಗೆ ಮೈಸೂರು ನಗರದ ವಿದ್ಯಾರ್ಥಿಗಳ ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಲಾಗುವುದು

ಅಡಿಷನಲ್ ಸ್ಕೂಲ್ ಇನ್ಸ್‌ಪೆಕ್ಟರುಗಳ ನೇಮಕ

ಸ್ವಂ.ಸು.] ಬೆಂಗಳೂರು ೨೪

ಪ್ರಾಥಮಿಕ ವಿದ್ಯಾಭ್ಯಾಸ ಸಮಿತಿಯವರು ತಮ್ಮ ವರದಿಯ ಕೊನೆಯಲ್ಲಿ ೧೫೦ ರಿಂದ ೧೮೦ ಶಾಲೆಗಳನ್ನು ಪರಿಶೀಲನೆಮಾಡುವ ಭಾರವು ಸ್ಕೂಲ್ ಇನ್ಸ್‌ಪೆಕ್ಟರುಗಳ ಮೇಲೆ ಬೀಳುವುದರಿಂದ ಹೆಚ್ಚಿಗೆ ಮುತುವರ್ಜಿ ವಹಿಸಲು ಸಾಧ್ಯವಿಲ್ಲವೆಂದು ತಿಳಿಸಿದುದರ ಮೇಲೆ ಸರ್ಕಾರದವರು ವಿದ್ಯಾ ಇಲಾಖೆಯ ಡೈರೆಕ್ಟರರ ಸಲಹೆಯಂತೆ ಸಂಸ್ಥಾನದಲ್ಲಿ ಇನ್ನೂ ೧೨ ಮಂದಿ ಸ್ಕೂಲ್ ಇನ್ಸ್‌ಪೆಕ್ಟರರುಗಳನ್ನು ನೇಮಕಮಾಡಿದ್ದಾರೆ. ಅವರಲ್ಲಿ ೧೦ ಮಂದಿ ಕನ್ನಡಕ್ಕೂ ಇಬ್ಬರ ಉರ್ದುವಿಗೂ ನೇಮಕವಾಗುತ್ತಾರೆ ಇವರಿಂದ ಸರ್ಕಾರಕ್ಕೆ ವರ್ಷ ೩೦ ಸಾವಿರ ರೂ. ಹೆಚ್ಚು ಖರ್ಚಾಗುವುದು.

ಸಂಪುಟ ೩] ಶುಕ್ರವಾರ ೨೫-೮-೪೪ [ಸಂಚಿಕೆ ೨೭

ಜಪಾನ್ ಸಾಮ್ರಾಜ್ಯ ಭದ್ರತೆಗಾಗಿ ಕಳವಳ

ಜರ್ಮನ್ ಗಡಿಗೂ ಮಿತ್ರಸೇನೆಗೂ ೧೭೦ ಮೈಲಿ ಅಂತರ

ನ್ಯೂಯಾರ್ಕಿನಲ್ಲಿ ಬಿಸಿಲ್ಗಾಳಿ ಅನಾಹುತ

ಜಪಾನ್ ದ್ವೀಪಗಳಿಗೆ ವಿಪತ್ತೆ?

ಜಪಾನ್ ದೇಶದ ಮುಖ್ಯ ಮಂತ್ರಿ, ಕೊಯಿಸೊರು ತಮ್ಮ ದೇಶಕ್ಕೆ ಪ್ರಾರ್ಥನೆಯನ್ನು ಮಾಡಿಕೊಂಡು ಹಿಂದೆಂದೂ ಸಂಭವಿಸದಿದ್ದ ರಾಷ್ಟ್ರ ವಿಪತ್ತಿನಿಂದ ದೇಶವು ಪಾರಾಗುವಂತೆ ಮಾಡಲು ಯತ್ನಿಸಬೇಕೆಂದು ನೆರೆಯುಟ್ಟಿದ್ದಾರೆ ಜಪಾನ್ ದ್ವೀಪಗಳ ಮೇಲೆ ಶತ್ರುವು ಆಕ್ರಮಣ ಮಾಡಲು ಸಮಯ ನಿರೀಕ್ಷಣೆ ಮಾಡುತ್ತಿರುವನೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಜಪಾನ್ ಚಕ್ರಾಧಿಪತ್ಯದ ಅಳಿವು ಉಳಿವಿನಕಾಲ ಸನ್ನಿಹಿತವಾಗಿದೆ

ಮಂತ್ರಿಮಂಡಲವೊಡನೆ ಸಮ್ಮೇಳನ ನಡೆದನಂತರ ಜಪಾನ್ ಸಾರ್ವಭೌಮರು ಘೋಷಣೆಯೊಂದನ್ನು ಹೊರಡಿಸಿದ್ದಾರೆ " ನಮ್ಮ ಚಕ್ರಾಧಿಪತ್ಯದ ಅಳಿವು ಅಥವಾ ಉಳಿವು ಇದನ್ನು ನಿರ್ದಿಷ್ಟಪಡಿಸುವಂತಹ ಸನ್ನಿವೇಶವು ಈಗ ಒದಗಿದೆ ಯೆಂದು ಅವರು ತಿಳಿಯಪಡಿಸಿದ್ದಾರೆ 'ಈ ಅಂಶವನ್ನು ಟೋಕಿಯೋ ರೇಡಿಯೋ ತಿಳಿಸಿದೆ.

ಬಿಸಿಲ್ಗಾಳಿಯಿಂದ ಅನೇಕರ ಸಾವು

ನ್ಯೂಯಾರ್ಕ್ ಪಟ್ಟಣದಲ್ಲಿ ಚರಿತ್ರೆಯಲ್ಲಿ ಹಿಂದೆಂದೂ ಕಾಣದಿದ್ದ ಘಟನೆಯು ಈಗ ನಡೆದಿದೆ. ಬಹಳ ಹೊತ್ತಿನವರೆಗೆ ಬಿಸಿಲ್ಗಾಳಿಯು ಬೀಸಿದುದರಿಂದ ಅನೇಕ ಪಟ್ಟಣಿಗರು ಮೂರ್ಛೆಹೋಗಿ ಬಿದ್ದರು ಅನೇಕರ ಹೃಚ್ಛಲನೆಯು ನಿಂತುದರಿಂದ ರಸ್ತೆಗಳಲ್ಲೇ ಮರಣಹೊಂದಿದರು ಹಲವರಿಗೆ ಹುಚ್ಚುಹಿಡಿದಂತಾಗಿ, ಉನ್ನತ ಸೌಧಗಳನ್ನೇರಿ ಅಲ್ಲಿಂದ ಧುಮುಕುವ ಮನಸ್ಸುಳ್ಳವರಾಗಿದ್ದರು.

ಬಂಗಾಳ ಅನಾಥರ ಗತಿ

ಕಲ್ಕತ್ತಾ ನಗರದ ವಿವಿಧ ಆಸ್ಪತ್ರೆಗಳಿಗೆ ಹೊಟ್ಟೆಗಿಲ್ಲದೆ ನರಳುತ್ತಿದ್ದ ೬೩ ಜನ ಅನಾಥರನ್ನು ಕಳುಹಿಸಲಾಯಿತು ೧೪ ಜನರು ಮೃತರಾದರು, ಇಬ್ಬರು ಗುಣಹೊಂದಿದರು

ಬಹಿರಂಗ ಸಭೆಗೆ ಅಡ್ಡಿ

ಆಕ್ಷೇಪಣೆಗೆ ಗುರಿಯಾಗುವ ಬಹಿರಂಗ ಸಭೆಗಳಾಗಲಿ, ಮೆರವಣಿಗೆಗಳಾಗಲಿ, ನಡೆಯಕೂಡದೆಂದು [illegible]

'ಜರ್ಮನ್' ಗಡಿಗೆ ಕೇವಲ ೧೭೦ ಮೈಲಿ ಮಾತ್ರ ಇದೆ

ವಿಮೋಚನೆಯನ್ನು ಹೊಂದಿದ ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್ಸಿನಿಂದ ಮುಂದಕ್ಕೆ ಐವತ್ತು ಮೈಲಿಯಷ್ಟು ದೂರ ಅಮೇರಿಕ ಸೇನೆಯು ಶೂಲದ ಮೊನೆಯೋಪಾದಿಯಲ್ಲಿ ನುಗ್ಗಿದೆ ಸೀನ್ ನದಿಯ ಮೇಲಿರುವ ಟ್ರಾಯ್ ಎಂಬ ಊರಿಗೆ ಅಲ್ಲಿಂದ ಕೇವಲ ಇಪ್ಪತ್ತು ಮೈಲಿ ಮಾತ್ರವಿದೆ. ಈ ಊರು ಜರ್ಮನರ ಗಡಿಗೆ ಸುಮಾರು ೧೫೦ ಮೈಲಿಗಳಷ್ಟು ದೂರ ಮಾತ್ರ ಇದೆ. ಈ ರಥವನ್ನು ಮತ್ತಷ್ಟು ಬಲಪಡಿಸಲು ಅಮೇರಿಕನ್ನರು ಐವತ್ತು ಮೈಲಿ ಫಾಸಲೆಯ ಕ್ಷೇತ್ರದಲ್ಲಿ ಸುಗ್ಗತ್ತಿ ಗಾರ್ಬಿನ್, ಮಿಲಾನ್ ಮತ್ತು ಮಾಂಟಾರ್ಗಿ ಎಂಬ ಸ್ಥಳಗಳನ್ನು ಹಿಡಿದಿದ್ದಾರೆ. ಅತ್ತಲಾಗಿ ಜರ್ಮನ್ ಏಳನೇಯ ಸೇನೆ ಅಂತ್ಯವು ಸಮೀಪಿಸುತ್ತಿದೆ ಆ ಸೇನೆಯು ರೌಯಲ್ ಮತ್ತು ಸೀನ್ ನದಿಯ ಮಧ್ಯಭಾಗಕ್ಕೆ ಒತ್ತಲ್ಪಡುತ್ತಿದೆ ಪ್ಯಾರಿಸ್ ನಗರವನ್ನು ಫ್ರೆಂಚ್ ಮತ್ತು ಅಮೇರಿಕ ಸೇನೆಗಳು ಪ್ರವೇಶಿಸಿರುವೆಂಬುದಕ್ಕೆ ಆಧಾರವಿಲ್ಲ.

ರುಮೇನಿಯಾ-ಮಿತ್ರರ ಶಾಂತಿ

(ಮೈತ್ರಿ ಕೊಟ್ಟ ಶಾಂತಿ ಷರತ್ತುಗಳನ್ನೊಪ್ಪಿದ ರುಮೇನಿಯಾ) ಬ್ರಿಟನ್, ಅಮೆರಿಕ ಮತ್ತು ರಷ್ಯಗಳ ಮೇಲೆ ಹೂಡಲಾಗಿದ್ದ ಯುದ್ಧ ನಿಲ್ಲಿಸಿದೆ ಹೊಸ ಸರಕಾರವೊಂದು ಸ್ಥಾಪನೆಯಾಗಿದೆ ಸರ್ವಾಧಿಕಾರತ್ವವು ಮಾಯವಾಗಿದೆ. ಹೊಸ ಸರಕಾರದಲ್ಲಿ ಉದಾರವಾದಿ ಬ್ರಟಿಯಾನಿಯೂ ಮತ್ತು ರೈತರ ಪ್ರತಿನಿಧಿ ಮ್ಯಾನಿಯೂ ಇದ್ದಾರೆ ಜನರಲ್ ಸಾನ್ಟೆಸ್ಕೋ ಸೆನೆಟಸ್ಕೂರವರು ಮುಖ್ಯ ಮಂತ್ರಿಯಾಗಿದ್ದಾರೆ. ಇನ್ನು ಮುಂದೆ ರುಮೇನಿಯಾವು ಬಹು ಬಲವಂತವಾಗಿ ಹಂಗೆರಿ ರಾಜ್ಯಕ್ಕೆ ಕೊಡಿಸಿಕೊಟ್ಟ ಟ್ರಾನ್ಸಿಲ್ವೇನಿಯಾ ದೇಶವನ್ನು ಕಿತ್ತುಕೊಳ್ಳುವ ಉದ್ಯಮದಲ್ಲಿ ತೊಡಗುತ್ತಿದೆ

ಜರ್ಮನರ ನಷ್ಟ

ಸೀನ್ ನದಿಯ [illegible] ಹಿಂದಕ್ಕೆ ಹೋಗುತ್ತಿರುವ ಜರ್ಮನ್ ಸೇನೆಗಳು [illegible] ತಮ್ಮ ಸ್ಥಳಗಳನ್ನು ರಕ್ಷಿಸಿಕೊಳ್ಳಬೇಕಾಗಿ [illegible] [illegible]

ಗಾಂಧಿ-ಜಿನ್ನಾ ಭೇಟಿಯುಂಟೆ?

ಮುಂದಿನ ವಾರದ ಮೊದಲನೆ ದಿನಗಳಲ್ಲೇ ಗಾಂಧಿ-ಜಿನ್ನಾರ ಸಂಭಾಷಣೆ ನಡೆಯುತ್ತದೆಂದು ಗೊತ್ತಾಗುತ್ತದೆ ಗಾಂಧಿಯವರು ಜಿನ್ನಾರವರನ್ನು ನೋಡಿ ಹೋದರೆಂದೂ, ಅದಕ್ಕೆ ವಿಘ್ನ ತರಲಾಗುವುದೆಂದೂ ವದಂತಿ ಹರಡುತ್ತಿದೆ. ೪ ಸಾವಿರ ಖಾಕ್ಸಾರರು ಬೊಂಬಾಯಿಗೆ ಬಂದು ಪ್ರಾಂತದ ಮುಸ್ಲಿಮರ ಮಸೀದಿಗಳಲ್ಲೆಲ್ಲಾ ಧ್ಯಾನ ಮಾಡಿ ಗಾಂಧಿ-ಜಿನ್ನಾರವರ ಸಂಭಾಷಣೆಯು ಜಯಪ್ರದವಾಗುವಂತೆ ಎಲ್ಲರೂ ಪ್ರಯತ್ನ ಪಡಬೇಕೆಂದು ಕೋರುತ್ತಿದ್ದಾರೆ

ಉನ್ನತ ಐ.ಸಿ.ಎಸ್ ರ ಮನೆ ಶೋಧನೆ

ಕಲ್ಕತ್ತೆಯ ಪೋಲೀಸರು ಓರ್ವ ಉನ್ನತ ಐ ಸಿ ಎಸ್. ಅಧಿಕಾರಿಯ ಮನೆಯನ್ನು ಕೆಲವುದಿನಗಳ ಹಿಂದೆಯೇ ಶೋಧಿಸಿದರೆಂದೂ ತತ್ಪರಿಣಾಮವಾಗಿ ಭ್ರಷ್ಟಚಾರವಾದ ಸಂಗತಿಗಳು ಹೊರಬೀಳುವುವೆಂದೂ ಮಾರ್ನಿಂಗ್ ನ್ಯೂಸ್ ಪತ್ರಿಕೆಯು ತಿಳಿಸುತ್ತದೆ

ಲಿಯಾನ್ಸ್ ಕಡೆಗೆ ದೃಷ್ಟಿ

ಅಮೇರಿಕ ಸೇನೆಯು ಗ್ರಿನೋಬಲ್ ನಗರವನ್ನು ಹಿಡಿದು ಈಗ ರೋನ್ ನದಿಯ ಕಣಿವೆಯಲ್ಲಿರುವ ಕಾರ್ಖಾನೆಗಳಿಂದ ನಿಬಿಡವಾದ ಲಿಯಾನ್ಸ್ ನಗರದ ಕಡೆ ದೃಷ್ಟಿಯಿಟ್ಟಿದೆ ದಕ್ಷಿಣದಲ್ಲಿ ಮಾರ್ಸೇಲ್ಸ್ ರೇವನ್ನು ಮಿತ್ರರು ಪ್ರವೇಶಿಸಿದ್ದಾರೆ ಪ್ರತಿಭಟನೆಯೇ ಅಲ್ಲಿ ಕಂಡುಬರುತ್ತಿಲ್ಲ ಒಳಗಿದ್ದ ಜರ್ಮನ್ ಬಲವು ಮಿತ್ರರೊಡ್ಡಿದ ಜಾಲದಲ್ಲಿ ಸಿಕ್ಕಿಬಿದ್ದಿತು. ಮಾರ್ಸೇಲ್ಸ್ ನಗರವು ಪ್ಯಾರಿಸ್ ನಗರವನ್ನು ಬಿಟ್ಟರೆ ಅತ್ಯಂತ ಮುಖ್ಯ ಪಟ್ಟಣ.

ಕೊಲೆ ಮತ್ತು ಆತ್ಮಹತ್ಯೆ

ಮೈಸೂರು ೨೫

ನಿನ್ನೆ ತಿಳಿಸಿದ ಕೊಲೆ ಮತ್ತು ಆತ್ಮಹತ್ಯೆ ಪ್ರಸಂಗದ ವಿವರವೀಗ ತಿಳಿದುಬಂದಿದೆ ಸ್ಯಾಮ್ಯುಯಲ್ ಎಂಬ ಮಾಷ್ಟರಿಯು ಲಕ್ಷ್ಮಮ್ಮ ಎಂಬುವಳೊಡನೆ ೩ ವರ್ಷದಿಂದ ವಾಸಿಸುತ್ತಿದ್ದನು ಮೊನ್ನೆ ರಾತ್ರಿ ೮ ಘಂಟೆಯ ಸಮಯದಲ್ಲಿ ಮನೆಯೊಳಗೆ ಜಗಳದ ಕೂಗು ಪಕ್ಕದವರಿಗೆ ಕೇಳಿಸಿತಂತೆ ನೋಡಲು ಹೋಗಲಾಗಿ ಬಾಗಿಲು ಹಾಕಿಬಿಟ್ಟಿತ್ತು. ಸ್ವಲ್ಪ ಹೊತ್ತಿನೊಳಗಾಗಿಯೇ ಅಯ್ಯೋ! ಸತ್ತೆ! ನೀರು ಕೊಡಿ ಎಂದು ಕೇಳಿಬಂತಂತೆ ಅನಂತರ ಬಹಳ ಹೊತ್ತಿನವರೆಗೂ ನಿಶ್ಯಬ್ದವಾಗಿತ್ತಂತೆ ವಿಚಾರ ತಿಳಿದ ಪೋಲೀಸಿನವರು ಬಂದು ಬಾಗಿಲು ಕಿತ್ತು ಒಳಗೆ ಹೋಗಿ ನೋಡಲಾಗಿ ಇಬ್ಬರೂ ಸತ್ತುಬಿದ್ದಿದ್ದರು ಲಕ್ಷ್ಮಮ್ಮನಿಗೆ ಎದೆಯ ಮೇಲೆ ಗಾಯವಾಗಿತ್ತು. ಮಾಷ್ಟರಿಗೆ ಕತ್ತಿನ ಮೇಲೆ ಗಾಯವಾಗಿತ್ತು. ರಕ್ತದ ಕ್ಷಿ ಚೂರಿಯಿತ್ತು, ಪಂಚಾಯಿತರು ನೋಡಿ ನಿನ್ನೆ ತಿಳಿಸಿದಂತೆ ಮಾಷ್ಟರಿಯು ಲಕ್ಷ್ಮಮ್ಮನನ್ನು ಕೊಂದು ಅನಂತರ ತಾನು ಆತ್ಮಹತ್ಯೆ ಮಾಡಿಕೊಂಡಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ ಮೃತರಿಗೆ [illegible] [illegible]

ಗೋಧಿ, ಬಾರ್ಲಿ ಬೆಳೆಯಲು ನಿಷೇಧ

ಸ್ವಂ.ಸು.] ಬೆಂಗಳೂರು ೨೪

ಕ್ರಿಮಿಕೀಟಗಳ ನಾಶದ ಬಗ್ಗೆ ರಾಜ್ಯ ಸರ್ಕಾರ ಸಂಕಲ್ಪಿಸಿದೆ. ಮುಂದಿನ ಎರಡು ವರ್ಷಗಳಲ್ಲಿ ಸಂಸ್ಥಾನದಲ್ಲೆಲ್ಲೂ ಗೋಧಿ ಮತ್ತು ಬಾರ್ಲಿಯನ್ನು ಬೆಳೆಯ ಬಾರದೆಂದು ನಿಷೇಧಿಸಿದ್ದಾರೆ. ಆದರೆ ಪೂರ್ಣವಾಗಿ ನಿಷೇಧ ಮಾಡಿಲ್ಲವೆಂದೂ, ಏಪ್ರಿಲ್ ೧ರಿಂದ ಸಪ್ಟೆಂಬರ್ ತಿಂಗಳು ೩೦ರ ವರೆಗೆ ಬೆಳೆಯುವ ಧಾನ್ಯಗಳಿಗೆ ಈ ಆಜ್ಞೆ ಅನ್ವಯಿಸುತ್ತದೆಂದೂ ಅಕ್ಟೋಬರ್ ... ವರೆಗೆ ... ಸರ್ಕಾರದ ಅಪ್ಪಣೆ ... ಬೇಕಾಗಿಲ್ಲವೆಂದೂ ... ತಿಳಿಸಲಾಗಿದೆ

ಕಚ್ಚಾ ಕಬ್ಬಿಣದ ವ್ಯಾಪಾರ

ಕಬ್ಬಿಣದ ಹತೋಟಿಯ ರಾಜ್ಯಾಜ್ಞೆಯ ಪ್ರಕಾರ ಇನ್ನು ಮುಂದೆ ಸಂಸ್ಥಾನದಲ್ಲಿ ಕಚ್ಚಾ ಕಬ್ಬಿಣವನ್ನು ಕೊಂಡು ... ತಯಾರಾಗಲಿ, ವ್ಯಾಪಾರ ... ಅವಕಾಶವಿಲ್ಲವೆಂದು ನಿಷೇಧಿಸಲಾಗಿದೆ

ಸಂಗ್ರಾಮ ವಿರೋಧಕ್ಕಾಗಿ ಬಂಧನ

ಸಂಜೀವಪ್ಪನೆಂಬುವನು ೩೭೭ ರೈಲ್ವೆ ... ನಲ್ಲಿ ಸಂಗ್ರಾಮ ವಿರೋಧ ಪ್ರಚಾರದಲ್ಲಿ ನಿರತನಾಗಿದ್ದನೆಂಬ ದೂರಿನ ಮೇಲೆ ಬಂಧಿಸಲ್ಪಟ್ಟನು.

ಪೋಲೀಸರಿಗೆ ಮೋಸ ಮಾಡಲು ಯತ್ನ

ಸಿ. ಐ. ಡಿ. ಪೋ॥ ಸಬ್ ಇನ್‌ಸ್ಪೆಕ್ಟರ್ ಶ್ರೀ ... ಹತ್ತಿರ ... ಜಿಲ್ಲೆಯ ... ಬಂದು ... ಜೊತೆಯನ್ನು ... ತೋರಿಸಿ ... ತಿಳಿಸಲು, ... ಅವನನ್ನು ಸ್ಟೇಷನ್ನಿಗೆ ಕರೆದೊಯ್ದು ಪೋಲೀಸರ ವಶಪಡಿಸಿದರು

ದೆಹಲಿಗೆ ದಿವಾನರ ಪ್ರಯಾಣ

ದಿವಾನರು ಮುಂದಿನ ತಿಂಗಳು ದ್ವಿತೀಯ ವಾರದಲ್ಲಿ ದೆಹಲಿಗೆ ಹೋಗುವ ನಿರೀಕ್ಷೆಯಿದೆ.

ಪ್ರಭುಗಳ ಅನುತಾಪ

ಶ್ರೀಮನ್ ಮಹಾರಾಜರು ಹಿಂದೆ ಭಾರತದ ವೈಸರಾಯರಾಗಿದ್ದ ... ಅವರು ವ್ಯಾಧಿಪೀಡಿತರಾಗಿ ... ದಿವಂಗತರ ಪುತ್ರ ಸರ್ ... ಗೆ ಸಂತಾಪ ... ಕಳುಹಿಸಿದ್ದಾರೆ

ಉಪಾಧ್ಯಾಯರಿಗೆ ಶಿಕ್ಷಣ

ಸ್ವಂ.ಸು.] ಮಂಡ್ಯ ೨೪

ಇದೇ ವಾರ ೨೬ ಮತ್ತು ೨೭ ನೇ ತಾರೀಖುಗಳಲ್ಲಿ ಮದ್ದೂರು ತಾಲ್ಲೂಕಿನ ವಯಸ್ಕರ ರಾತ್ರಿಶಾಲೆಗಳಲ್ಲಿ ಉಪಾಧ್ಯಾಯರುಗಳಿಗೆ ವಯಸ್ಕರ ಶಿಕ್ಷಣದ ಬಗ್ಗೆ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಪಿ. ಎಸ್. ಜವರಪ್ಪಗೌಡರ ನೇತೃತ್ವದಲ್ಲಿ ಶಿಕ್ಷಣ ಕೊಡಲಾಗುವುದು

ಪ್ಲೇಗ್ ಜಾಡ್ಯ

ಮಂಡ್ಯದಲ್ಲಿ ಪ್ಲೇಗು ಜಾಡ್ಯವು ತಲೆದೋರಿರುವುದರಿಂದ ಊರಿನ ಕೋರ್ಟುಗಳೂ, ಶಾಲೆಗಳೂ ಮುಚ್ಚಲ್ಪಟ್ಟಿವೆ. ಇನಾಕ್ಯುಲೇಷನ್ ಮತ್ತು ಸೈನೋಗ್ಯಾಸ್ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಮಂಡ್ಯದ ಖಾಸಗೀ ಡಾಕ್ಟರುಗಳು ಇನಾಕ್ಯುಲೇಷನ್ ಕಾರ್ಯಕ್ರಮದಲ್ಲಿ ಪುರಸಭೆಯಿಂದ ಸಹಾಯ ಮಾಡಿದ್ದು ಅಭಿನಂದನೀಯವಾದದ್ದು

ಆಟಗಾರರೊಬ್ಬರ ನಿಧನ

ಮಂಡ್ಯ ಸಕ್ಕರೆ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಖ್ಯಾತಿಸಿದ್ಧ ಆಟಗಾರರಾಗಿದ್ದ ಶ್ರೀ ಎಂ. ಡಿ ಶ್ಯಾಮಣ್ಣನೆಂಬುವರು ಚಿಕ್ಕ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಗಣಪತಿ ಪೂಜೆ

ಲಕ್ಷ್ಮೀ ಜನಾರ್ಧನ ಸ್ಟೋರ್‍ಸ್ ಮಾಲೀಕರಾದ ಶ್ರೀ ಎ ಶ್ರೀನಿವಾಸಯ್ಯನವರು ನೆನ್ನೆ ದಿನ ಗಣಪತಿ ಪೂಜೆಯನ್ನು ಆಚರಿಸಿದರು ಮಂಗಳಾರತಿಗೆ ಊರಿನ ಪ್ರಮುಖರೂ, ಪತ್ರಿಕೋದ್ಯೋಗಿಗಳೂ ಆಹ್ವಾನಿತರಾಗಿದ್ದರು

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವು ಸೆಪ್ಟೆಂಬರ್ ಮೊದಲನೇ ವಾರದಲ್ಲಿ ನಡೆಯುವುದು. ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸುಬ್ರಹ್ಮಣ್ಯಂರವರು ಅಗ್ರಾಸನವನ್ನು ವಹಿಸುವರು.

ಗಾಂಧೀ ನೀತಿಗೆ ಬೆಂಬಲ

ಮಹಾತ್ಮ ಗಾಂಧಿಯವರು ಕೈಗೊಂಡಿರುವ ಕಾರ್ಯನೀತಿಯನ್ನು ಪುರಸ್ಕರಿಸಿ ಬೆಂಬಲಿಸಬೇಕೆಂದು ... ಇಂಗ್ಲೆಂಡಿನಲ್ಲಿರುವ ಭಾರತೀಯರೆಲ್ಲರೂ ... ವರು.

Edited, printed and published by A. R. Nagarajan, at the Sadhvi Press, D Subbiah Road, Mysore

ಇಟಲಿಯಲ್ಲಿ ಜರ್ಮನ್ ಸೇನೆ

ಉತ್ತರ ಇಟಲಿಯಲ್ಲಿ ಜರ್ಮನ್ ಸೇನೆಗಳ ಚಲನವು ಚುರುಕಾಗಿದೆಯೆಂದು ಮಿತ್ರ ಸೇನಾನಿ ಅಲೆಕ್ಸಾಂಡರರು ತಿಳಿಸಿದ್ದಾರೆ.

ಜರ್ಮನ್ - ರುಮೇನಿಯನ್ ಸೇನೆಗಳ ಕಾದಾಟ

ಶಾಂತಿಯನ್ನೊಪ್ಪಿರೊಂಡ ರುಮೇನಿಯಾ ದೇಶದ ಸೇನೆಗಳು ವಾಪಸು ಬರುತ್ತಿರುವ ವೇಳೆ ಅವುಗಳಿಗೂ ಜರ್ಮನ್ ಸೇನೆಗಳಿಗೂ ಕಾಳಗಗಳು ನಡೆಯುತ್ತಿವೆಯೆಂದು ಮಾಸ್ಕೋ ರೇಡಿಯೋ ತಿಳಿಸುತ್ತದೆ

ಆಂಟೊನೆಸ್ಕೊ ಎಲ್ಲಿ?

ಜನರಲ್ ಆಂಟೊನೆಸ್ಕೋರವರು ಈಗ ಎಲ್ಲಿದ್ದಾರೆಂಬುದು ಗೊತ್ತಿಲ್ಲ. ಯುದ್ಧಾರಂಭದಿಂದಲೂ ಅವರು ರುಮೇನಿಯಾದ ಸರ್ವಾಧಿಕಾರಿಯಾಗಿದ್ದರು.

ಶಾಂತಿ ಪ್ರಯತ್ನವೇ?

ನಾಜಿ ಮುಖಂಡರು ಹಿಟ್ಲರನ ಮೇಲೆ ತಿರುಗಿಬಿದ್ದಿರುವ ಸೂಚನೆ ಕಂಡುಬಂದಂತೆಲ್ಲಾ ಶಾಂತಿಗೂ ನಾಜಿಗಳು ಪ್ರಾತೋರೆಯುತ್ತಿರುವ ಅಂಶ ಹೊರಕ್ಕೆ ಬರುತ್ತಿದೆ. ದೇಶದಲ್ಲಿ ಮೊದಲಿದ್ದ ರಣೋತ್ಸಾಹವು ಈಗ ಹುಟ್ಟಿಗೆ ಕಾಣಬರುತ್ತಿಲ್ಲವೆಂದು ನಾಜಿ ಪತ್ರಿಕೆಯೊಂದು ಹೇಳುತ್ತದೆ.

ಮಾರ್ಷಲ್ ಪಿಟೇನರೊಂದಿಗೆ ಸಂಬಂಧ ಹೊಂದಲು ಸಾಧ್ಯವಿಲ್ಲದ ಪ್ರಯುಕ್ತ ಸ್ವಿಟ್ಜರ್‌ಲೆಂಡಿನ ರಾಯಭಾರಿಯು ತನ್ನ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾನೆ. ರಾಯಭಾರಿಯನ್ನು ? ಂದಕ್ಕೆ ಕರೆಯಲು ಸ್ವಿಸ್ ಸರ್ಕಾರವು ನಿರ್ಧರಿಸಿದೆ.

MEDICINES

Take your requirements from

RAGHULAL & CO.,

1748, Sayaji Rao Road,

(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ,

1748, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು

ಕಲ್ಲಿದ್ದಲಿನಿಂದ ಕ್ವಿನೈನ್

ಕ್ವಿನೈನ್ ಎಂಬ ಜ್ವರಹಾರಿಯ ಬದಲು ಉಪಯೋಗವಾಗುವ ಸಲ್‌ಫಾಸ್ ಎಂಬ ವಸ್ತುವೊಂದೂ, ವಿಟಾಮಿನ್. ಕೆ ಎಂಬುದೂ ಕಲ್ಲಿದ್ದಲಿನಿಂದ ತೆಗೆಯಬಹುದೆಂಬುದು ವೈಜ್ಞಾನಿಕರ ಸಂಶೋಧನೆಯಿಂದ ಗೊತ್ತಾಗುತ್ತದೆ. ವಿಟಮಿನ್. ಕೆ. ಎಂಬುದನ್ನು ರಕ್ತಸ್ರಾವ ನಿಲ್ಲಿಸಲು ಉಪಯೋಗಿಸುವ ವಾಡಿಕೆ.

' ಎಲ್‌ಗಾಟ್ ' ಸಂಶೋಧನೆ

ಸಂಗ್ರಾಮಕ್ಕೆ ಪೂರ್ವದಲ್ಲಿ ರಷ್ಯ ಮತ್ತು ಸ್ಪೇನ್ ರಾಜ್ಯಗಳಲ್ಲಿ ಕಂಡು ಹಿಡಿಯಲ್ಪಟ್ಟು ಕಲ್ಲಿಂದ ಆಮದಾಗುತ್ತಿದ್ದ ' ಎಲ್‌ಗಾಟ್ ' ಎಂಬ ಸಸ್ಯವೊಂದು ಈಗ ಸಂಶೋಧಿಸಲಾಗಿದೆ. ಸೆಂಟ್ರಲ್ ಕಾಲೇಜಿನ ಡಾ॥ ಎಂ ಜೆ ತಿರುಮಲಾಚಾರ್ಯರು ಇದನ್ನು ಕಂಡು ಹಿಡಿದು, ಇದನ್ನು ಕಬ್ಬಿನ ಹೂವಿನ ಮೇಲೆ ಬೆಳೆಸಬಹುದೆಂದು ತಿಳಿಸಿದ್ದಾರೆ

ಯೂರೋಪ್ ರಣರಂಗದ ಮೇಲೆ ೩ ಲಕ್ಷಕ್ಕೆ ಮೇಲ್ಪಟ್ಟು ಅಮೆರಿಕ ವಿಮಾನ ಯಾನವಾಯಿತು ೩ ಲಕ್ಷ ಟನ್ನುಗಳಷ್ಟು ಬಾಂಬುಗಳು ಶತ್ರುವಿನ ಪ್ರದೇಶಗಳ ಮೇಲೆ ಹಾಕಲ್ಪಟ್ಟಿವೆ. ೮೫೦೦ ಶತ್ರುವಿಮಾನಗಳು ನಾಶವಾದವು. ಇವು ಈಗ ಎರಡು ವರ್ಷಗಳಲ್ಲಿ ನಡೆದ ಕಾರ್ಯಕ್ರಮದ ಪಟ್ಟಿ

ಅಮೋಘ ಪ್ರಾರಂಭೋತ್ಸವ

ನಾಟಕ ರತ್ನ ಜಿ. ಹೆಚ್. ವೀರಣ್ಣನವರ

ಗುಬ್ಬಿ ಥಿಯೇಟ್ರಿಕಲ್ ಕಂಪೆನಿ

ಟೌನ್‌ಹಾಲ್ ಮೈದಾನದ

ಸ್ವಂತ ಧನಲಕ್ಷ್ಮೀ ಥಿಯೇಟರಿನಲ್ಲಿ

ತಾ॥ 25-8-44 ನೇ ಶುಕ್ರವಾರದಿಂದ

4 ದಿನಗಳು

ಪ್ರತಿ ರಾತ್ರಿ 10-30 ಕ್ಕೆ

ತಾ॥ 27 ನೇ ಭಾನುವಾರ ಸಂಜೆ 7 ಕ್ಕೆ

ಸಂಪೂರ್ಣ **ಶ್ರೀ ಕೃಷ್ಣಲೀಲ**

ಎಂಬ ನಾಟಕವನ್ನು ಅಭಿನಯಿಸುವರು.

M. C M. Swamy,

Manager, Gubbi Co.,

ಬೆಲೆ ಕಡಿಮೆ ! **ಬಣ್ಣ ಗ್ಯಾರಂಟಿ !**

— ಮಹಿಳೆಯರಿಗೆ ಮಂಗಳಪ್ರದವಾದುದು —

— ಹೊಸದಾಗಿ ತರಿಸಿರುವ ನಾನಾಬಗೆಯ ಬಳೆಗಳು —

** ಬಾಳಿಕೆ, ಅಂದ, ಬಣ್ಣದಲ್ಲಿ ಪ್ರಖ್ಯಾತಿಯಾದುವು **

ಮೈಸೂರು ಸಿಲ್ಕ್ ಫ್ಯಾಕ್ಟರಿನ ರವಿಕೆಗಳು ನಾನಾ ಬಣ್ಣದವು ಬಂದಿವೆ

ಸೌಭಾಗ್ಯ ಸ್ಟೋರ್ಸ್, ದೇವರಾಜ ಮಾರ್ಕೆಟ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕೆ

... ಸುಸ್ಪಷ್ಟವಾಗಿ ... ಕೊಡುವ ಏರ್ಪಾಡು ಮಾಡಿದ್ದೇವೆ,

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಪ್ರಿನ್ಸ್ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

... ದೇವರಾಜ ಮಾರ್ಕೆಟ್, ಮೈಸೂರು.

... ಪೇಟೆ ಮಂಡಿಯಲ್ಲೂ, ... ಗಳಲ್ಲೂ ದೊರೆಯುವುದು ...

ಇವೊತ್ತೇ ಕಸ್ತೂರಿ ಬಾ ನಿಧಿಗೆ

ನಿಮ್ಮ ಕಾಣಿಕೆಯನ್ನು ಸಲ್ಲಿಸಿ

ಮಹಿಳಾಶ್ರಮಗಳು ! ಕೈಗಾರಿಕೆ ಸಂಸ್ಥೆಗಳು !

ಬಾಲಿಕಾ ಶಾಲೆಗಳು ! ಮಹಿಳಾ ಚಿಕಿತ್ಸಾಲಯಗಳು !

ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗಲು ಸಹಾಯವಾಗಿ.

ನಮ್ಮಲ್ಲಿ ವಸೂಲಾದ ಹಣ ನಮಗಾಗಿಯೇ ವಿನಿಯೋಗ.

ತಿ. ಗೋಪಾಲಕೃಷ್ಣ ಶೆಟ್ಟಿ, ಖಜಾಂಚಿ — ಎಸ್. ಚನ್ನಯ್ಯ, ಕಾರ್ಯದರ್ಶಿ — ಹಿರಳ್ಳಿ ದಾಸಪ್ಪ, ಅಧ್ಯಕ್ಷ

ಸಂಪುಟ ೩] ಭಾನುವಾರ ೨೭--೮--೪೪ [ಸಂಚಿಕೆ ೨೯

ಯುದ್ಧ ಮುಕ್ತಾಯದ ದಿನ ಅಕ್ಟೋಬರ್ ೨೪

ಫಿನ್‌ಲೆಂಡಿನವು ಮಿತ್ರರಿಗೆ ತಲೆಬಾಗಿಸುವಂತಿಲ್ಲ

ಡಾನ್ಯೂಬ್ ನದಿ ಹತ್ತಿರ ರಷ್ಯನರ ಪರಾಜಯ

ರಾಜಾ ಪ್ರತ್ಯಕ್ಷ ದೇವತಾ

ಮೈಸೂರು ೨೭

"ರಾಜಾ ಪ್ರತ್ಯಕ್ಷ ದೇವತಾ" ಎಂಬಂತೆ ನಮ್ಮ ಪ್ರಭುಗಳೇ ನಮಗೆ ಪ್ರತ್ಯಕ್ಷ ದೇವರು. ಅವರಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಭಯಭಕ್ತಿಗಳಿಂದ ಸೇವೆ ಸಲ್ಲಿಸುವುದೊಂದೇ ನಮಗೆ ಇಹಪರಕ್ಕೆ ಸಾಧನ ಮಾರ್ಗ. ಇದಕ್ಕೆ ವಿರೋಧವಾಗಿ ಹೋದರೆ ನಾವು ಮಹಾ ಪಾಪಿಗಳಾಗುವೆವು ಇದು ಸಂಸ್ಥಾನದ ಪ್ರಜೆಗಳಿಗೆಲ್ಲಾ ಅನ್ವಯಿಸುವುದಲ್ಲದೆ, ಎಲ್ಲರಿಂದ ಹೆಚ್ಚಾಗಿ ಪ್ರಭುಗಳ ಸ್ವಹಸ್ತಕ್ಕೆ ಸಾಧಿಸುವಂತಾದ ನಮಗೆ ಹೆಚ್ಚಾಗಿ ಅನ್ವಯಿಸುವುದು. ಆದ್ದರಿಂದ ನಾವುಗಳು ನಮ್ಮ ನಮ್ಮ ಸೇವೆಯನ್ನು ಹೆಚ್ಚು ಹೆಚ್ಚು ದಕ್ಷತೆಯಿಂದ ಮಹಾಸ್ವಾಮಿಗಳಿಗೆ ಸಲ್ಲಿಸಬೇಕು. ಮಹಾಸ್ವಾಮಿಯವರು ೬೦ ರೂ. ಒಳಗಿರತಕ್ಕ ನೌಕರರಿಗೆಲ್ಲಾ ಟೈಂ ಸ್ಕೇಲನ್ನು ಕೃಪೆ ಮಾಡಿರುತ್ತಾರೆಂದು ತಿಳಿಸಲು ಈ ಸಮಾರಂಭದಲ್ಲಿ ತುಂಬಾ ಸಂತೋಷಿಸುತ್ತೇನೆ" ಎಂಬುದಾಗಿ ನಿನ್ನೆ ಚಾಮರಾಜೇಂದ್ರ ಜಯಂತಿಯಲ್ಲಿ ಹುಜೂರು ಸೆಕ್ರೆಟರಿಗಳಾದ ಶ್ರೀಮಾನ್ ಟಿ. ರಾಮಯ್ಯನವರು ಪ್ರಭುಗಳ ಪಟ್ಟಾಭಿಷೇಕ ಮಹೋತ್ಸವದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿದರು. ಅನಂತರ ಪ್ರಭುಗಳಲ್ಲಿ ರಾಜಭಕ್ತಿ ನಿರ್ಣಯವನ್ನು ಅಂಗೀಕರಿಸಿ ಪ್ರಭುಗಳಿಗೆ ಕಳುಹಿಸಿ ಕೊಡಲಾಯಿತು.

ಸಿಟಿ ಸ್ಕೌಟ್ ಕೌನ್ಸಿಲ್

ಮೈಸೂರು ಸಿಟಿ ಸ್ಕೌಟ್ ಕೌನ್ಸಿಲ್ ಮೀಟಿಂಗ್ ಮೊನ್ನೆ ನಡೆದಾಗ ಕುಕ್ಕರಹಳ್ಳಿ ಬಳಿ ಇರುವ ನಿವೇಶನವನ್ನು ಈ ಕೌನ್ಸಿಲ್ಲಿಗೇ ಖಾಯಂ ಆಗಿ ಕೊಡಬೇಕೆಂದೂ, ಸರ್ಕಾರವನ್ನು ಕೇಳಿಕೊಳ್ಳಬೇಕೆಂದೂ, ಸಮಾಜ ಸೇವೆ ಎಂಬ ಪುಸ್ತಕವನ್ನು ಸ್ಕೌಟ್ ಟ್ರೂಪುಗಳಿಗೆ ಹಂಚಬೇಕೆಂದೂ, ದಸರಾದಲ್ಲಿ ಮೈಸೂರಿಗೆ ಬರುವ ಸ್ಕೌಟುಗಳಿಗೆ ಶ್ರೀ ಕೃಷ್ಣರಾಜೇಂದ್ರ ಧರ್ಮಶಾಲೆಯಲ್ಲಿ ವ್ಯವಸ್ಥೆ ಮಾಡಬೇಕೆಂದೂ ತೀರ್ಮಾನವಾಯಿತು.

ದಸರಾ ಕಳೆದನಂತರ ಪ್ರತಿ ತಿಂಗಳೂ ಒಂದೊಂದು ಶಾಲೆಯಲ್ಲಿ ನಗರದ ಸ್ಕೌಟು ರ್‍ಯಾಲಿ ನಡೆಸಬೇಕೆಂದು ಕಳೆದ ಸ್ಕೌಟು ಮಾಸ್ಟರ ಸಂಘದ ಮೀಟಿಂಗಿನಲ್ಲಿ ತೀರ್ಮಾನವಾಯಿತು.

ಜಾಮೀನು ಮೇಲೆ ಬಿಡುಗಡೆ

ಉದ್ಯೋಗ ದುರುಪಯೋಗದ ಆಪಾದನೆ ಮೇಲೆ ಶ್ರೀ ಹಳ್ಳದ ವೆಂಕಟಾಚಲ ಪಂಡಿತರ ಔಷಧಾಲಯದಲ್ಲಿ ಕೆಲಸದಲ್ಲಿದ್ದ ನರಸಿಂಹಯ್ಯ ಮತ್ತು ಪಟ್ಟಸ್ವಾ ಎಂಬುವರನ್ನು ಬಂಧಿಸಲಾಗಿತ್ತಷ್ಟೆ. ಇದೀಗ ಇವರನ್ನು ಜಾಮೀನು ಮೇಲೆ ಬಿಟ್ಟಿರುವುದಾಗಿ ಗೊತ್ತಾಗಿದೆ.

ಪದಾರ್ಥ ಸಿಕ್ಕಿದೆ

ಮೊನ್ನೆ (೨೪-೮-೪೪) ಸಾಯಂಕಾಲ ೬ ಗಂಟೆ ೪೫ ನಿಮಿಷದಲ್ಲಿ ಜಯಚಾಮರಾಜೇಂದ್ರ ಆರಕು ಬೋರ್ಡಿಂಗ್ ಸ್ಕೂಲು ಕಾಂಪೌಂಡಿನ ಕಂಬದಬಳಿ ೬ ಬೀಗದಕೈ, ೧ ಗೊಂಬೆ, ಕದ್ದ ವಸ್ತು, ೧ ಚೈನು ಇರುವ ಒಂದು ಗೊಂಚಲು ಸಿಕ್ಕಿರುತ್ತೆ. ಇದರ ವಾರಸ್ದಾರರು ಡಿ. ಸುಬ್ಬಯ್ಯ ರೋಡಿನಲ್ಲಿ ೩೬ನೇ ನಂಬರ್ ಮನೆಯ ಒಂದನೆಯ ರೂಮು ಪ್ರೂಫ ಮಾಡಿಕೊಂಡ ಬಿ ಎಲ್ ವೈದ್ಯನಾರ್ಥರವರ ಹತ್ತಿರ ಪಡೆಯಬಹುದು.

ಯುದ್ಧದ ಮುಕ್ತಾಯ ಅಕ್ಟೋಬರ್ ೨೪

ಕಲ್ಕತ್ತೆಯಲ್ಲಿ ಟ್ರಾಂಗಡಿಯೊಳಗೆ ಒಬ್ಬ ಸರಳವಾದ ಉಡುಪನ್ನು ಧರಿಸಿದ ತಿಟ್ಟನ ಗುರುಪೊಟ್ಟನು ಹತ್ತಿ ಯಾವ ಸಂಕೋಚವೂ ಇಲ್ಲದೆ ಒಬ್ಬ ಸ್ತ್ರೀಯ ಪಕ್ಕದಲ್ಲಿ ಕುಳಿತುಕೊಂಡನು. ಅಲ್ಲಿದ್ದವರ ಗಮನ ಈತನ ಧೂರ್ತತೆ ಕಡೆಗೆ ಸೆಳೆಯಿತು. ಆದರೂ ಏನೊಂದು ಯಾರೂ ಮಾತನಾಡದೆ ಲೊಲ್ಲರು. ಅವರಲ್ಲೊಬ್ಬ ಮಾತ್ರ ಧೈರ್ಯ ಮಾಡಿ ಆತನ ಹತ್ತಿರ ನಿಂತನು. ಅವನನ್ನು ಕಂಡ ಕೂಡಲೇ ಆತನನ್ನು ಕುರಿತು ಆ ಗುರುವು ಇದಕ್ಕೆ ಹಿಂದಿನ ದಿನ ಆಗಂತುಕನ ಮಗನ. ಸರಿಯಲ್ಲವೇ? ಎಂದು ಪ್ರಶ್ನೆ ಮಾಡಿದನು. ಆ ಗಂತುಕನು ಆಶ್ಚರ್ಯಪಟ್ಟನು. ಅನಂತರ ಮಾತ್ತಿಗೆ ದುಡ್ಡು ವಸೂಲ್ಮಾಡುವವನು ಬರಲು ಆ ಗುರುವು ತನಗೂ ತನ್ನ ಪಕ್ಕದಲ್ಲಿದ್ದ ಅಪರಿಚಿತ ಸ್ತ್ರೀ ವ್ಯಕ್ತಿಗೂ ಎಂದು ಟಿಕೆಟ್ಟುಗಳನ್ನು ತೆಗೆದುಕೊಂಡನು. ಆ ಸ್ತ್ರೀಯು ಇದನ್ನು ಕಂಡು ಕೋಪಿಸಿಕೊಂಡಳು. ತಾಳ್ಮೆಯಿಂದ ಗುರುವು ಆಕೆಯು ಮಕ್ಕಳ ಪಾಠಗಳನ್ನಾದುತ್ತಿದ್ದರೂ ಆಕೆಯ ಹತ್ತಿರ ದುಡ್ಡಿನ ಚೀಲವಿಲ್ಲವೆಂದು ತಿಳಿಸಿದನು. ಪರೀಕ್ಷಿಸಲಾಗಿ ಆಕೆಯ ಚೀಲವಿಲ್ಲ. ಇದರಿಂದ ಕುತೂಹಲ ಹುಟ್ಟಿ ಎಲ್ಲರೂ ಪ್ರಶ್ನೆ ಮಾಡಲಾರಂಭಿಸಿದರು. ಹೌಸನವನ್ನು ಅವಲಂಬಿಸಿದ್ದ ಗುರುವು ಕಡೆಗೆ ಈ ಯುದ್ಧವು ಈ ಅಕ್ಟೋಬರ್ ೨೪ ನೇ ತಾ॥ ದಿನ ಮುಕ್ತಾಯವೆಂದು ಹೇಳಿ ಇಳಿದು ಹೊರಟು ಹೋದನು.

ಬಾಲ್ಕನ್ ಕ್ಷೇತ್ರ ಕೈತಪ್ಪುವುದು!

ಯೂರೋಪಿನ ಆಗ್ನೇಯ ಭಾಗವನ್ನು ಜರ್ಮನರು ಬಿಟ್ಟುಬಿಡಲು ನಿರ್ಧರಿಸಿರುವರೆಂದು ಪ್ರವೀಣರು ನಂಬಿದ್ದಾರೆ. ಬಾಲ್ಕನ್ ಪ್ರದೇಶಗಳಲ್ಲೆಲ್ಲಾ ಕೇವಲ ೩೫ ಡಿವಿಜನ್ ಸೇನೆಗಳಿದ್ದರೂ ಸನ್ನಿವೇಶಕ್ಕೆ ಸಾಲದು ದಾಗಿದೆ.

ಡಾನ್ಯೂಬ್ ನದಿ ಹತ್ತಿರ ರಷ್ಯನರ ಪರಾಜಯ

ಡಾನ್ಯೂಬ ನದಿ ಮುಖಜ ಭೂಮಿ ಯವರೆಗೆ ಧಾವಿಸಿ ಬಂದಿದ್ದ ರಷ್ಯನ್ ದಳವೂ ದಕ್ಷಿಣ ಮೂಲೆಗೆ ಒತ್ತಲ್ಪಟ್ಟಿತು. ಇವು ಕೆ ಅನಂತರ ಹೋರಾಟಗಳ ನಡೆಯಲಾಯಿತು ಎಂದು ಜರ್ಮನ್ ವಾರ್ತಾ ಸಂಸ್ಥೆ ಹೇಳುತ್ತದೆ.

ಫಿನ್‌ಲೆಂಡು ತಲೆ ಬಾಗುವ ಸೂಚನೆಯಿಲ್ಲ

ಫಿನ್‌ಲೆಂಡು ತಲೆ ಬಾಗಿಸುವ ಸೂಚನೆ ಕಂಡು ಬರುವುದಿಲ್ಲ. ವ್ಯಾಪಕವಾಗಿ ಆ ರಾಜ್ಯವು ಆಕ್ಸಿಸ್ ಗುಂಪಿಗೆ ಸೇರಿದವರಲ್ಲಿ ಹಾಗೆ ತಲೆ ಬಾಗಲು ಕಡೆಯದಾಗಿರಬಹುದು.

ಸ್ಲೊವೇಕಿಯಾದಲ್ಲಿ ರಷ್ಯನರು

ರಷ್ಯನ್ ರಾಜಕೀಯ ಸಂಗಡಿಗರು ಸ್ಲೊವೇಕಿಯಾ ರಾಜ್ಯದೊಳಗೆ ನುಗ್ಗಿಕೊಂಡು ಹೋಗಿದ್ದಾರೆ. ಆ ರಾಜ್ಯದಲ್ಲಿ ಈಗ ಯುದ್ಧ ಶಾಸನವು ಜಾರಿಗೆ ಬಂದಿರುತ್ತೆ.

ರುಮೇನಿಯಾ-ಹಂಗೆರಿ ಹೊಡೆದಾಟ

ರುಮೇನಿಯಾ ಸೇನೆಗಳು ಟ್ರಾನ್ಸಿಲ್ವೇನಿಯಾದೊಳಗೆ ನುಗ್ಗಿವೆ. ಹಂಗೆರಿ ಸೇನೆಗಳಿಗೂ ರುಮೇನಿಯಾ ಪ್ರಜೆಗಳಿಗೂ ಹೊಡೆದಾಟ ನಡೆಯುತ್ತಿದೆ.

ಮುನಿಸಿಪಲ್ ಚುನಾವಣೆ

ಸ್ವಂ. ಸು. ಕೃಷ್ಣರಾಜನಗರ ೨೫

ಈ ಊರಿನ್ನ ನೂತನವಾಗಿ ಆದ ಮೊದಲ ಮುನಿಸಿಪಾಲಿಟಿಗೆ ಸೆಪ್ಟೆಂಬರ್ ೧೧ನೇ ತಾರೀಖಿನ ದಿನ ಚುನಾವಣೆ ನಡೆಯಲಿದೆ. ೩೦ ಜನ ಉಮೇದುವಾರರು ಶ್ರೀ॥ ಎಫ್. ಎಲ್. ಡಿಸೋಜಾರವರ ಪಕ್ಷದಲ್ಲಿ ಇರುವ ಪಟ್ಟಿಸಿದ್ದಾರೆ.

ಯಂತ್ರ ಸಲಕರಣೆಗಳ ನಿಯೋಗ

ಸ್ವಂ.ಸು.] ಬೆಂಗಳೂರು ೨೬

ದಕ್ಷಿಣ ಭಾರತಕ್ಕೆ ಪ್ರವಾಸಮಾಡುತ್ತಿರುವ ಬ್ರಿಟನ್ನಿನ ಯಂತ್ರ ಸಲಕರಣೆಗಳ ನಿಯೋಗದವರು ಬೆಂಗಳೂರಿಗೆ ಸೆಪ್ಟೆಂಬರ್ ೩ ನೇ ತಾ॥ ಬಂದು ೬ ನೇ ತಾ॥ ವರೆಗೂ ಇರುವರು.

ಸಚಿವರ ಕಾರ್ಯಕ್ರಮ

ದಿವಾನ್ ಸಚಿವರು ಈ ದಿನ ಪ್ರಾತಃಕಾಲ ಚನ್ನಪಟ್ಟಣಕ್ಕೆ ಹೋಗಿ ಅಲ್ಲಿ ಫಿಲ್ಟರ್ ಬೆಡ್ ಕೇಂದ್ರವನ್ನು ಪರೀಕ್ಷಿಸಿ ಸಂಜೆ ವಾಪಸು ಬಂದರು. ನಾಳೆ ರಾತ್ರಿ ಮೈಸೂರಿಗೆ ಹೊರಡುವರು. ೨೮ ನೇ ತಾ॥ ಸಬ್‌ಕಮಿಟಿ, ಬಿ ಸಮಿತಿಯವರಲ್ಲೂ ಭೇಟಿ ಕೊಡುತ್ತಾರೆ. ೩೦ ನೇ ತಾ॥ ಬೆಂಗಳೂರಿಗೆ ವಾಪಸು ಬರುತ್ತಾರೆ.

ಸಂಗೀತ ಕಛೇರಿ

ಮೈಸೂರು ೨೭

ಗಾನ ವಿಹಾರದ ಆಧಾರದ ಶ್ರೀ ಕೃಷ್ಣನವರ ರಾಮ ಮಂದಿರದಲ್ಲಿ ೩೦-೮-೪೪ ನೇ ಬುಧವಾರ ಸಂಜೆ ೬-೩೦ ಗಂಟೆಗೆ ಸಂಗೀತ ವಿದ್ವಾನ್ ಶಾಸ್ತ್ರಿ ಎ. ಜಿ. ಸುಬ್ರಹ್ಮಣ್ಯಂರವರ ಹಾಡುಗಾರಿಕೆ, ಮದರಾಸ್ ರೇಡಿಯೋ ವಿದ್ವಾನ್ ಆರ್. ಕೆ ವೆಂಕಟರಾಮ ಶಾಸ್ತ್ರಿಗಳ ಪಿಟೀಲು, ವಿದ್ವಾನ್ ಟಿ. ಎಂ. ಪುಟ್ಟಸ್ವಾಮಯ್ಯನವರ ಮೃದಂಗ ಸಹ ನಡೆಯುತ್ತದೆ.

ಶಾಸನ ಸಭೆಗಳ ವ್ಯಾಪ್ತಿ

ಇಂಗ್ಲಿಷ್ ನ್ಯಾಯಶಾಸ್ತ್ರದಂತೆ ಭಾರತದಲ್ಲಿಯೂ ಸಹ ಆರ್ಡಿನೆನ್ಸ್‌ನಲ್ಲಿ ಎಕ್ಸಿಕ್ಯೂಟಿವರ ನಿಯಂತ್ರಣ ಶಾಸನ ಮಾಡಲು ಕೇಂದ್ರ ಶಾಸನ ಸಭೆಗಳ ಅಧಿಕಾರವ್ಯಾಪ್ತಿ ಇಲ್ಲವೆಂದು ಫೆಡರಲ್ ಕೋರ್ಟಿನವರು ಬಹುಮತದಿಂದ ತೀರ್ಮಾನಕ್ಕೆ ಬಂದಿದ್ದಾರೆ. ಸರ್ ಜಫರುಲ್ಲಾಖಾನರು ಈ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಹೇಳಲು ಆಕ್ಷೇಪಿಸಿದರು. ಆದುದರಿಂದ ಗವರ್ನರ್ ಜನರಲ್ಲರಿಗೆ ಈ ಅಭಿಪ್ರಾಯವನ್ನು ಕಳುಹಿಸಲಾಗಿದೆ.

ವೈಸರಾಯ್-ಗವರ್ನರರುಗಳ ಭೇಟಿ

ನಾಳೆ ದೆಹಲಿಯಲ್ಲಿ ಗವರ್ನರರುಗಳ ಸಮ್ಮೇಳನವೊಂದು ನಡೆಯುತ್ತದೆ. ಈ ಸಮ್ಮೇಳನಕ್ಕೆ ವೈಸರಾಯರೇ ಅಧ್ಯಕ್ಷರಾಗಿದ್ದಾರೆ. ಸೆಕ್ಷನ್ ೯೩ ನೇ ಅಧಿಕಾರ ಪ್ರಾಪ್ತವಾಗಿ ಐದು ವರ್ಷಗಳಾಯಿತು. ಪರಿಸ್ಥಿತಿಯನ್ನು ನಿರ್ವಹಿಸಲು ವೈಸರಾಯರಿಗೆ ಅವಕಾಶವನ್ನು ಕಲ್ಪಿಸಿಕೊಡಲು ಬ್ರಿಟಿಷ್ ಸರಕಾರಕ್ಕೆ ಆದರೂ ಈ ಸಮ್ಮೇಳನದಿಂದ ಶಿಫಾರಸು ಹೋಗುವುದೋ ಇಲ್ಲವೋ ಎಂಬುದನ್ನು ಊಹಿಸಬೇಕಾಗಿದೆ. ಅಲ್ಲದೇ ದೇಶದಲ್ಲಿರುವ ಆಹಾರ ಸ್ಥಿತಿಯೂ ಪರಿಶೀಲನೆಯಾಗುತ್ತದೆ. ಅದನ್ನು ನಿರ್ವಹಿಸಲು ಮನೋವೃತ್ತಿಯ ಬದಲಾವಣೆಯಾಗಬೇಕು. ಅದು ಆಗಲು ಜನಪ್ರಿಯ ಮಂತ್ರಿಮಂಡಲಗಳಿದ್ದರೆ ಸಾಧ್ಯವೆಂಬ ಭಾವನೆಯು ಉಂಟಾಗಿದೆ.

ಆಂಟ್ವೆರ್ಪ್ಸ್ ಪತನ

ದಕ್ಷಿಣದಿಂದ ಉತ್ತರಕ್ಕೆ ಬರುತ್ತಿರುವ ಮಿತ್ರ ಸೇನೆಗಳು ದಕ್ಷಿಣ ಫ್ರಾನ್ಸಿನ ಆಂಟ್ವೆರ್ಪ್ಸ್ ನಗರವನ್ನು ಹಿಡಿದಿವೆ. ಇದುವರೆಗೆ ೨೦ ಸಾವಿರ ಜನರ ಸೆರೆಯಾಗಿದೆ. ಮಾರ್ಸೇಲ್ಸ್ ಮತ್ತು ಟೌಲೋನ್‌ಗಳಲ್ಲಿ ಇನ್ನೂ ಭಯಂಕರ ಕದನವು ನಡೆಯುತ್ತಲಿದೆ. ರೋನ್ ನದಿಯ ಮೈದಾನದಲ್ಲಿ ತಪ್ಪಿಸಿಕೊಳ್ಳುವ ಜರ್ಮನ್ ಸೇನೆಯನ್ನು ತಪ್ಪಿಸಲು ಬಂದ ಮಿತ್ರವರ್ಗದ ಸೇನೆಗಳನ್ನು ಎದುರಿಸಲಾಗುತ್ತಿದೆ ಎಂದು ಬರ್ಲಿನ್ ವರದಿ.

ಪ್ಯಾರಿಸ್ ಕದನ ಮುಗಿಯಿತು

ಪ್ಯಾರಿಸಿನಾಗಿನ ಕದನ ಕದನವು ಮುಗಿದಂತಾಯಿತು. ಅಲ್ಲಿನ ಜರ್ಮನ್ ರಕ್ಷಣಾದಳದ ಪಟ್ಟು ಸೇನೆಗೆ ಆ ಯುದ್ಧ ಕೆಲಗೆ ಶರಣಾಗತಿ ಆಜ್ಞೆ ಮಾಡಲಾಗಿದ್ದಾರೆ.

ತೈಲದ ಉತ್ಪತ್ತಿ ಇಳಿಯಿತು

ಯುದ್ಧ ಕ್ಷೇತ್ರಗಳಲ್ಲಿ ಜರ್ಮನಿಯ ತೈಲ ಕೇಂದ್ರಗಳ ನಷ್ಟದಿಂದಾಗಿ ಉತ್ಪತ್ತಿ ಅರ್ಧದಷ್ಟು ಇಳಿಯಿತೆಂದು ಇವನ ಜರ್ಮನಿಯ ತೈಲದ ಉತ್ಪತ್ತಿಯ ಅರ್ಧವನ್ನು ಇಳಿದಿದೆ.

ಮಲೇರಿಯ ನಿವಾರಣೆಗೆ ಆಯುರ್ವೇದ ಔಷಧಿ

ಮೈಸೂರು ಪೌರಸಭೆಯಲ್ಲಿ ಚರ್ಚೆ

ಮೈಸೂರು ೨೬

ಈ ದಿವಸ ಮೈಸೂರು ಪೌರಸಭೆಯ ತಿಂಗಳ ಮೀಟಿಂಗು ಶ್ರೀ ಆರ್. ರಾಮಚಂದ್ರರಾವ್ ಪಾಂಧೋರೆಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಹಿಂದೆ ಜುಲೈ ತಿಂಗಳ ಮೀಟಿಂಗಿನಲ್ಲಿ ಕಲರಾ ಸ್ಥಿತಿಗತಿ ವಿಷಯವಾಗಿ ನಡೆದ ಪ್ರಸಂಗವನ್ನು [illegible] ವಿಷಯವು ಕೆಲಭಾಗ [illegible] ಅದನ್ನು ಸರಿಪಡಿಸುವವರೆಗೆ ಈ ವಿಷಯವನ್ನು ಮತ್ತೆ ಮುಂದೆ [illegible] ಬೇಕೆಂದೂ ಶ್ರೀ ಪಿ ಸೀತಾರಾಮ[illegible] ಸೂಚಿಸಿದರು. ಶ್ರೀ ಟಿ ಸಿ [illegible] ಅನುಮೋದಿಸಿದರು.

ಶ್ರೀಗಳಾದ ಟಿ. ಎಸ್ [illegible], ಎಸ್. ಸಿ [illegible] ಅರಸಿನವರು, ಮತ್ತೆ [illegible] ಆವಶ್ಯಕತೆ ಇಲ್ಲವೆಂದರು. ಬಹಳ ಚರ್ಚೆಯಾಗಿ ಮತ್ತೆ ದಫೇ ಮಾಡಲಾಯಿತು.

[illegible] ಸ್ಟೇಟ್‌ಮೆಂಟ್ ರಿಪೋರ್ಟು ಮಾಡುವಾಗ ಶ್ರೀ ಇ ಪಿ ನಂಜಪ್ಪನವರು —[illegible] ಪೌರರುಗಳಿಗೆ [illegible] ಬಹಳ ತೊಂದರೆಯಾಗಿದೆ ಎಂದರು. [illegible] ಸಂಬಂಧಿಸಿದೆ. [illegible] ದೂರ. ಕೇಳಬೇಕು ನಾವು [illegible] —ಎಂದು [illegible].

ಫ್ಲಷಿಂಗ್ ಕಕ್ಕಸುಗಳನ್ನು [illegible] ಮಾಡುವುದು [illegible] ವರ್ಷವಾದರೂ ಮಾಡುತ್ತಿಲ್ಲ—ಎಂದು ಶ್ರೀ ಎ ಎನ್ [illegible] ಹೇಳಿದರು. ಅನೇಕ ಸದಸ್ಯರು ಈ ಬಗ್ಗೆ ವಿವರವಾಗಿ ಮಾತನಾಡಿದರು. ಶ್ರೀ [illegible] ಫ್ಲಷಿಂಗ್ ಸಿಸ್ಟಂ ಇರುವ ಕಡೆ [illegible]. ಸಾಧಾರಣ ಕಕ್ಕಸುಗಳ [illegible] ಬಗ್ಗೆ ಕುಂಬ ಗಮನಕೊಡಬೇಕು, ಬಹಳ ತೊಂದರೆಯಾಗಿದೆ ಎಂದರು.

[illegible] ಮಲೇರಿಯಾ ಜಾಸ್ತಿಯಾಗಿದೆ. ಔಷಧ [illegible] ಬರಲಿಲ್ಲ [illegible] ಮಾಡಬೇಕು—ಎಂದು ಶ್ರೀ ಎ ಕೃಷ್ಣ ಮೂರ್ತಿಯವರೆಂದರು.

ಅತ್ಯುತ್ತಮ ಆಯುರ್ವೇದ ಔಷಧಗಳು ಬಂದಿವೆ [illegible] ಮೈಸೂರಿನ [illegible] ರಾಯಣ ಪಂಡಿತರು ಅಭಯ ಆಯುರ್ವೇದಾಲಯದಲ್ಲಿ ಬಹಳ ಪರಿಶೋಧನೆ ನಡೆಸಿದ್ದಾರೆ ಅವರ ಸಲಹೆಯನ್ನಾದರೂ ಕೇಳಬೇಕು ಎಂದು ಶ್ರೀ ಪಿ ಸೀತಾರಾಮಯ್ಯನವರೆಂದರು. ಅಧ್ಯಕ್ಷರು ವಿಚಾರಿಸುವುದಾಗಿ ತಿಳಿಸಿದರು.

ಡಾ|| ಎ. ಡಿ ರಾಜಾರಾಂ ಆಸ್ಪತ್ರೆಯನ್ನು ಬಾಡಿಗೆ [illegible] ಯೋಜನೆ [illegible] ಶ್ರೀ ಎ ಕೃಷ್ಣ ಮೂರ್ತಿಯವರು [illegible] ಕಾರಣವೇನು? ಬಡವರ [illegible] ಶ್ರೀ ಡಾ|| ರಾಜಾರಾಂರವರ ಉದ್ದೇಶಕ್ಕೂ ವಿರೋಧವಿಲ್ಲವೇ ಎಂದೂ ಪ್ರಶ್ನೆಗಳನ್ನು ಕೇಳಿದರು. ಅಧ್ಯಕ್ಷರು ಉತ್ತರ ಕೊಡುತ್ತಾ ಈ ವಿಚಾರ ಸ್ಟ್ಯಾಂಡಿಂಗ್ ಕಮಿಟಿಗೆ ಒಪ್ಪಿಸಲ್ಪಟ್ಟಿದೆ [illegible] ವಿವರ ಮುಂದೆ ತಿಳಿಸಲಾಗುತ್ತೆ [illegible] ನವೆಂಬರ್ ತಿಂಗಳಲ್ಲಿ [illegible] ಎಂದರು.

ಹಳ್ಳ ಮತ್ತು ಬಡಾವಣೆಗಳ ಕಡೆ ಮೈಸೂರು ನಗರದ ಗಡಿಯನ್ನು ನಿಶ್ಚಯಿಸಿ, ಕಟ್ಟಡ ಕಟ್ಟುವುದನ್ನು ಹದ್ದುಬಸ್ತಿನಲ್ಲಿಡುವುದಕ್ಕಾಗಿ ಪುನಃ ಸರ್ವೆ ಮಾಡಿಸಲು ವಿಶೇಷ ಸಿಬ್ಬಂದಿ ಇರುವ ವಿಚಾರವಾಗಿ ಶ್ರೀ ಪಿ ಸೀತಾರಾಮಯ್ಯನವರು ಇದಕ್ಕಾಗಿ ವಿಶೇಷ ಸಿಬ್ಬಂದಿ [illegible] ಕೊಂಡು ಸುಲಭವಾಗಿ ಗಡಿ ನಿಶ್ಚಯಿಸಿ, ಹದ್ದುಬಸ್ತು ಮಾಡಬಹುದು ಎಂದು ಶ್ರೀ ಪಿ ಸೀತಾರಾಮಯ್ಯನವರು [illegible] ಅಧ್ಯಕ್ಷರು ಸರ್ವೆ ಮಾಡಿಸಲೇ ಬೇಕಾಗುತ್ತೆ ಎಂದರು. [illegible] ಕಟ್ಟಡ ಕಟ್ಟುವ ಬಗ್ಗೆ ಹದ್ದುಬಸ್ತು ಮಾಡುವ ವಿಚಾರವಾಗಿ ಸರ್ಕಾರವು ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುವ ನಿರ್ಣಯವಾಯಿತು.

ಕಂದಾಯ ಪುನರ್ವಿಮರ್ಶೆಯ ಬಗ್ಗೆ ನಗರಸಭೆಯಾಧಿಕಾರವನ್ನು ನಾಲ್ಕು ತಿಂಗಳ ಕಾಲ ತಿಂಗಳಿಗೆ ೧೦೦ ರೂ ಅಲೋಯನ್ಸ್ ಮೇಲೆ ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಬೇಕೆಂದ ಅಧ್ಯಕ್ಷರು ತಂದಿದ್ದ ವಿಚಾರದಲ್ಲಿ ಬಹಳ ಚರ್ಚೆಯಾಯಿತು '[illegible]' ಸ್ಟ್ಯಾಂಡಿಂಗ್ ಕಮಿಟಿಯ ಸದಸ್ಯರಿಂದ [illegible] ನಗರಸಭೆಯಾಧಿಕಾರಿಗೆ ಕೊಡಲಾಗುತ್ತಿದೆಯೆಂದೂ ಈ ಬಗ್ಗೆ ಅಧ್ಯಕ್ಷರು, ಉಪಾಧ್ಯಕ್ಷರು, ಶ್ರೀ

Edited, printed and published by A. R. Nagarajan, at the Sadhvi Press, D Subbiah Road, Mysore

ರೂಸ್‌ವೆಲ್ಟರಿಗೆ ವಿಲ್ಕಿಯವರ ಬೆಂಬಲ

ಮುಂದಿನ ನವೆಂಬರ್‌ನಲ್ಲಿ ನಡೆಯುವ ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ರಿಪಬ್ಲಿಕನ್ ಪಾರ್ಟಿಯಲ್ಲಿದ್ದ ವೆಂಡೆಲ್ ವಿಲ್ಕಿಯವರು, ಆ ಪಕ್ಷದ ಉಮೇದುವಾರರ ವಿದೇಶಾಂಗ ನೀತಿಯನ್ನು ಒಪ್ಪುತ್ತಿಲ್ಲ. ರೂಸ್‌ವೆಲ್ಟರು ನಾಲ್ಕನೇ ಸಲ ಅಧ್ಯಕ್ಷರಾಗಲು ಅವರಿಗೆ ಬೆಂಬಲವೀಯಬಹುದು

ಯುದ್ಧ ಸಾಮಗ್ರಿ ಬೋರ್ಡಿನ ಭಿನ್ನಾಭಿಪ್ರಾಯ

ಯುದ್ಧ ಸಾಮಗ್ರಿಗಳನ್ನು ಸರಬರಾಜು ಮಾಡುವ [illegible] ಬೋರ್ಡಿನ ಅಧ್ಯಕ್ಷರಿಂದ ಮಿ. ನೆಲ್ಸನ್ನರು, ಕೃಷಿಕರನ್ನು [illegible] ಭಿನ್ನಾಭಿಪ್ರಾಯ [illegible] ರಾಜೀನಾಮೆಯಿತ್ತಿದ್ದಾರೆ.

೭೨೫೦ ಹಾರುವ ಬಾಂಬು ಇಂಗ್ಲೆಂಡಿನ ಮೇಲೆ ಬಿತ್ತು

ಜರ್ಮನರು ಇದುವರೆಗೆ ಹತ್ತಿರ ಹತ್ತಿರ ೭೨೫೦ ಹಾರುವ ಬಾಂಬುಗಳನ್ನು ಇಂಗ್ಲೆಂಡಿನ ಮೇಲೆ ಕಳುಹಿಸಿತು. ಈ ತಿಂಗಳ ಮೂರನೇ ವಾರದ ವರೆಗೆ [illegible] ಹಾಕಲಾಗಿದೆ.

ಗಳಾದ ಪಿ. ಸೀತಾರಾಮಯ್ಯ, ಟಿ. ಮರಿಯಪ್ಪ, ರವರು ಅಧಿಕಾರಿಗಳನ್ನೊಳಗೊಂಡ ವಿಶೇಷ ಸಮಿತಿ ರಚಿಸಿ ಸಮಿತಿಯೇ ಈ ಕೆಲಸ ನಿರ್ವಹಿಸಬೇಕೆಂದೂ ಶ್ರೀ ಇ. ಪಿ. ನಂಜಪ್ಪನವರು ನಿರ್ಣಯ ತಂದರು. ಅದರಂತೆ ಅಂಗೀಕೃತವಾಯಿತು.

ಮುಂದಿನ ಧಾರಣೆಯ [illegible] ವರೆಗೂ ಏರುವುದರಿಂದ ಇದಕ್ಕೆ ಹತೋಟಿ ತರಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಶ್ರೀ ಕೆ. ಸಿದ್ದಯ್ಯನವರು ತಂದರು. ಇದೂ ಅಂಗೀಕಾರವಾಯಿತು.

ರಾಜಧಾನಿಯ ನೀರು ಸರಬರಾಜು ಸಮಿತಿಗೆ ಪೌರಸಭೆಯಿಂದ ಶ್ರೀಗಳಾದ ಪಿ. ಸೀತಾರಾಮಯ್ಯ, ಟಿ. ಮರಿಯಪ್ಪ, ಎ. ಕೃಷ್ಣಮೂರ್ತಿಯವರನ್ನು ಚುನಾಯಿಸಲಾಯಿತು.

MEDICINES

Take your requirements from

RAGHULAL & CO.,

1748, Sayaji Rao Road,

(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇಲ್ಲಿ ಕೊಂಡುಕೊಳ್ಳಿ:

ರಘುಲಾಲ್ ಅಂಡ್ ಕೋ,

1748, ಸಯ್ಯಾಜಿರಾವ್ ರೋಡ್,

(ಮೈಸೂರು ಹಾಲ್ ಮಹಡಿ), ಮೈಸೂರು.

ಒಪೇರಾ ಟಾಕೀಸ್

ಅಮೋಘ 2 ನೆಯ ವಾರ

28 - 8 - 44 ರಿಂದ

ಮಾಲತಿ - ನಾಗಯ್ಯ

ಮಧುರಂ - ಕೃಷ್ಣ ಪಾತ್ರವಹಿಸಿರುವ

ಭಾಗ್ಯಲಕ್ಷ್ಮಿ

(ತೆಲುಗು) ಚಿತ್ರ

ಹೊಸ ಸಂಸ್ಥೆ ಸ್ಥಾಪನೆ

ಮೈಸೂರು ೨೬

ತಾ|| ೨೬-೮-೪೪ ರಲ್ಲಿ ನಾಜೆರ್‌ಬಾದ ಪುರದಲ್ಲಿ ಅರಸು ಯುವಜನರು ಸೇರಿ "ಅರಸು ಯುವಕ ಸಂಘ" ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಘಕ್ಕೆ ಮ|| ಬಿ ಚೆಲುವೇ ಅರಸಿನವರನ್ನು ಅಧ್ಯಕ್ಷರನ್ನಾಗಿಯೂ ಮ|| ಕೆ. ಚಕ್ಕ ಅರಸಿನವರನ್ನು ಕಾರ್ಯದರ್ಶಿಗಳಾಗಿಯೂ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನೂ ನಾಮಕರಣ ಮಾಡಲಾಯಿತು. ಅಧ್ಯಕ್ಷರು ತಮ್ಮ ಪ್ರಾರಂಭ ಭಾಷಣಕ್ಕೆ ಮುನ್ನ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದಿನ ಪ್ರಯುಕ್ತ ಮಹಾಪ್ರಭುಗಳಿಗೆ ರಾಜಭಕ್ತಿ ಪೂರ್ವಕವಾದ ಸಂದೇಶವನ್ನು ಕಳುಹಿಸಬೇಕೆಂದು ಸೂಚಿಸಿದರು. ಸಭೆಯು ಅದನ್ನು ಸರ್ವಾನುಮತದಿಂದ ಅಂಗೀಕರಿಸಿತು. ನಂತರ ಅಧ್ಯಕ್ಷರು ಸಂಘದ ಗುರಿ ಮತ್ತು ಧ್ಯೇಯಗಳನ್ನು ಸಭೆಗೆ ತಿಳಿಸಿದರು. ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ನಂತರ ಸಭೆಯು ಮುಕ್ತಾಯವಾಯಿತು.

ಮೈಸೂರು ಆಟಗಾರರು

ಇದೇ ಮಾಹೆ ೩೦ ನೇ ತಾ|| ಬೆಂಗಳೂರಿನಲ್ಲಿ ನಡೆಯುವ ಸಂತೋಷ್ ಮೆಮೋರಿಯಲ್ ಇಂಟರ್ ಪ್ರಾವಿನ್ಷಿಯಲ್ ಟೂರ್ನಿಗೆ ಈ ಕೆಳಗೆ ಕಂಡ ಆಟಗಾರರನ್ನು ಮೈಸೂರಿನ ಪರವಾಗಿ ಚುನಾಯಿಸಲಾಗಿದೆ:—[illegible], ಸ್ಟೆಯಿಡ್ [illegible], [illegible] (ಕ್ಯಾಪ್ಟನ್) ಅಂಥೋನಿ, ಮಣ್ಣಾಗಂ, ರಾಮನ್, ಡೇವಿಡ್, ನಂಜುಂಡ, ಟಾಮ್ಸನ್, [illegible], ಎ[illegible], ಥರ್ಮ, ಬದಮನ್.

ಕನ್ನಡ ಸಾಹಿತ್ಯೋತ್ಸವ

ನಿನ್ನೆ ಸಂಜೆ ಶಾರದಾವಿಲಾಸ ಹೈಸ್ಕೂಲಿನಲ್ಲಿ ಕನ್ನಡ ಸಾಹಿತ್ಯೋತ್ಸವವು ಬಹಳ ವೈಭವದಿಂದ ನಡೆಯಿತು. ಜಿಲ್ಲಾ ಸಭಾಧ್ಯಕ್ಷರಾದ ಶ್ರೀಮಾನ್ ಕೆ. ಸಿ. ಸುಬ್ಬಣ್ಣನವರು ಅಧ್ಯಕ್ಷತೆ ವಹಿಸಿದ್ದರು.

ಬೇಕಾಗಿದೆ

ವೀರಶೈವ ಲಿಂಗಾಯತರು, ಸ್ಥಳದವರು ಮತ್ತು [illegible] ಗೋತ್ರದ ಅನುಕೂಲಸ್ಥರಿಗೆ, 14-15 ವರ್ಷದ ಕನ್ಯಾ [illegible] ಬೇಕಾಗಿದೆ. ವಿವರ ಸಾಧ್ವಿ ಆಫೀಸಿನಲ್ಲಿ ತಿಳಿಯಬಹುದು

MAHARAJA'S HIGH SCHOOL,
MYSORE,

Date 25-8-44

NOTICE

"The Public are hereby informed that old books, Magazines, Newspapers and some articles of furniture of the school will be sold by auction on Saturday the 2nd September 1944 at 3 p.m., in the school Premises".

Details, on the School Notice Board.

Sd. M. V. Sundaresan,
HEAD MASTER

ಸ್ತ್ರೀಯರ ಸೌಕರ್ಯಕ್ಕೆ

ತಾ|| ೧-೧-೧೯೪೪ರಿಂದಲೇ ಸ್ತ್ರೀಯರಿಗಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಫ್ಲೇಕ್ ಬ್ರಾಂಡ್ ಕಾಫಿ ಪುಡಿ

ಬಳಸಿರಿ

ಪಿ. ಕೃಷ್ಣಯ್ಯ, ಏಜನ್ಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible]

WEEKLY EDITION

ಸಂಪುಟ ೯] ಸೋಮವಾರ ೨೮—೮—೪೪ [ಸಂಚಿಕೆ ೬

ಪ್ಯಾರಿಸ್ ನಗರದ ಮೇಲೆ ಉಗ್ರ ವಿಮಾನ ಧಾಳಿ

ಜಪಾನ್ ಸಾಮ್ರಾಜ್ಯಕ್ಕೆ ಇಂಡೋ-ಚೀಣಾವೂ ಸೇರಿತು

ಗಾಂಧೀಜಿ ಮತ್ತೆ ಜೈಲಿಗೆ ಒಯ್ಯಲ್ಪಡುವರೇ ?

ಗಣಪತಿ ಮಂಗಳಾರತಿ

ಮೈಸೂರು ೨೮

ನಿನ್ನೆ ದಿನ ರಾತ್ರಿ ೮ ಗಂಟೆಯಲ್ಲಿ ಮೈಸೂರು ಬಾಯ್ಸ್ ಫುಟ್‌ಬಾಲ್ ಕ್ಲಬ್ಬಿನಲ್ಲಿ ಗಣಪತಿ ಮಂಗಳಾರತಿಯನ್ನು ನಡೆಸಲಾಯಿತು. ಅನೇಕ ಮಹನೀಯರುಗಳು ಆಗಮಿಸಿದ್ದರು.

ಒಂಟಿಕೊಪ್ಪಲಿನಲ್ಲಿ ನಿನ್ನೆ ಗಂಜೆ ಮಹಾಗಣಪತಿ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ತಿಂಡಿ‌ಹಿಂಡಿಯರೆಲ್ಲರೂ ಸಹಕರಿಸಿ ಉತ್ಸವವನ್ನು ಯಶಸ್ವಿಯಾಗಿ ಮಾಡಿದರು. ರಾತ್ರಿ ಕುಕ್ಕರಹಳ್ಳಿ ಕೆರೆಯ ಬಳಿ ಮಹಾ ಮಹಾ ಮಂಗಳಾರತಿ ನಡೆದು ಪ್ರಸಾದ ವಿನಿಯೋಗವಾದನಂತರ ಉತ್ಸವವು ಮುಗಿಯಿತು.

ಕಸ್ತೂರಿ ಬಾ ನಿಧಿ ಮೈಸೂರು ಸಮಿತಿ

ಕಸ್ತೂರಿ ಬಾ ನಿಧಿಯ ಮೈಸೂರು ನಗರ ಸಮಿತಿಯ ಪರವಾಗಿ ಅಧಿಕಾರ ಹೊಂದಿದ ವಿದ್ಯಾರ್ಥಿ ಸ್ವಯಂ ಸೇವಕರು ಶಾಲೆ, ಕಾಲೇಜು, ಹಾಸ್ಟೆಲು ಮತ್ತು ಮನೆ ಮನೆಗೂ ಇದೇ ಆಗಸ್ಟ್ ೩೯ ನೆಯ ಮಂಗಳವಾರದಿಂದ ಸೆಪ್ಟೆಂಬರ್ ೧೫ ರ ವರೆಗೆ ಧನ ಸಂಗ್ರಹಕ್ಕೆ ಬರುತ್ತಾರೆ. ದಯವಿಟ್ಟು ತಮ್ಮ ಕಾಣಿಕೆಯನ್ನು ಅವರೊಂದಿಗೆ ಪಾವತಿ ಮಾಡಬೇಕೆಂದು ಕಾರ್ಯದರ್ಶಿಯವರಾದ ಶ್ರೀ ಎಸ್. ಚನ್ನಯ್ಯನವರು ಪ್ರಾರ್ಥಿಸುತ್ತಾರೆ.

ವಿದ್ಯಾ ಇಲಾಖೆ ಪುನರ್ವ್ಯವಸ್ಥೆ

ವಿದ್ಯಾ ಇಲಾಖೆಯ ಪುನರ್ವ್ಯವಸ್ಥೆಯು ನವರಾತ್ರಿಯಾದನಂತರ ಜಾರಿಗೆ ಬರುವುದೆಂದು ನಿರೀಕ್ಷಿಸಲಾಗಿದೆ. ಈಗ ಗೊತ್ತಿರುವ ಪ್ರಕಾರ ಇನ್ನು ಮುಂದೆ ಜಿಲ್ಲೆಗಳಲ್ಲಿರುವ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲುಗಳನ್ನೆಲ್ಲಾ ಜಿಲ್ಲಾ ವಿದ್ಯಾಧಿಕಾರಿಗಳ ಅಧಿಕಾರಕ್ಕೊಳಪಡಿಸುವರೆಂದೂ, ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರುಗಳು ಸಂಸ್ಥಾನದ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲುಗಳನ್ನು ಪ್ರತ್ಯೇಕವಾಗಿ ನೋಡಿಕೊಳ್ಳುವಂತೆಯೂ, ಈಗ ಆ ಸ್ಥಾನಗಳಲ್ಲಿರುವವರು ವಿದ್ಯಾಶಾಖೆಯನಂತರ ಆ ಸ್ಥಾನಗಳನ್ನು ತೆಗೆದುಹಾಕಲಾಗುವುದೆಂದೂ ತಿಳಿಯಬರುತ್ತದೆ.

ವನಸ್ಪತಿ ತುಪ್ಪದ ಬೆಲೆ

ಡಾಲ್ಡಾ ವನಸ್ಪತಿ ತುಪ್ಪದ ಬೆಲೆ ನಿಗದಿಯಾಗಿದೆ. ೫ ಪೌಂಡಿನ ಡಬ್ಬಕ್ಕೆ ೪ ರೂ. ಗಳು ೨ ಪೌಂಡಿನದಕ್ಕೆ ೧-೧೦-೬ ಕೊಂಡ ೫ ಪೌಂಡಿಗೆ ರೂ. ೬-೮-೦

ಪ್ರಣಯಿಗಳ ಪತ್ತೆಯಿಲ್ಲ

ಡೆಹಲಿಯ ಇಂಪೀರಿಯಲ್ ಸೆಕ್ರೆಟೇರಿಯಟ್ಟಿನಲ್ಲಿ ಗುಮಾಸ್ತೆ ಕೆಲಸದಲ್ಲಿದ್ದ ತರುಣಿಯೋರ್ವಳು ಮತ್ತೊಬ್ಬ ಗುಮಾಸ್ತೆ ಯುವಕನೊಡನೆ ಓರ್ವ ಪುರೋಹಿತರ ಹತ್ತಿರ ಹೋಗಿ ತಮ್ಮಿಬ್ಬರ ವಿವಾಹ ನೆರವೇರಿಸಬೇಕೆಂದು ಪ್ರಾರ್ಥಿಸಲು, ಅವನು ಒಪ್ಪದೆ ಆಕೆಯ ತಂದೆಗೆ ಸಮಾಚಾರ ಕಳುಹಿಸಿದನು. ಪ್ರಣಯಿಗಳ ಅನ್ವೇಷಣಕ್ಕಾಗಿ ತಂದೆ ಪೋಲೀಸ್ ಆಫೀಸಿನಲ್ಲಿ ದೂರಿತ್ತಿಲ್ಲ. ಈಗ ಆ ಇಬ್ಬರು ಪ್ರಣಯಿಗಳಿರುವಿಕೆಯು ಪತ್ತೆಯಿಲ್ಲ

ಇದು ಗೊತ್ತೆ ?

ಒಂದು ತಂಗುಳ ಮಳೆಯಾಳಿ ತೆಂಗಿನ ಹತ್ತು ಪಂಜಾಗಿಪ್ಪತ್ತು [illegible]

ಪುನಃ ಜೈಲು ಯಾತ್ರೆ

ದೆಹಲಿ ಮತ್ತು ವೈಟ್ ಹಾಲ್ (ಬ್ರಿಟಿಷರ ಸರಕಾರಿ ಭವನ) ಗಳಿಂದ ಬರುತ್ತಿರುವ ವರ್ತಮಾನಗಳಿಂದ ನಿರಾಶಾ ಭಾವನೆಯು ಸೇವಾಗ್ರಾಮದಲ್ಲಿ ಮೂಡಿದೆ. ಹಿಂದೆ ಮಹಾತ್ಮರು ರಾಜಿ ಸಂಧಾನಗಳ ವಿಷಯದಲ್ಲಿ ತಮ್ಮ ಪ್ರಯತ್ನಕ್ಕೆ ಸರಕಾರದ ಅಡ್ಡಿ ಬಂದರೆ, ತಾವು ಪುನಃ ಜೈಲಿನಲ್ಲಿರಬೇಕಾಗುವುದೆಂದು ನುಡಿದಿದ್ದರು. ಈಗ ಒಬ್ಬ ಪ್ರಮುಖ ಅನುಯಾಯಿಯ ಹತ್ತಿರ ಮಾತನಾಡುತ್ತಾ ತಮ್ಮನ್ನು ಹೆಚ್ಚುಕಾಲ ಜನಗಳ ಮಧ್ಯದಲ್ಲಿ ಬಿಟ್ಟಿರುವ ಸೂಚನೆ ಇಲ್ಲವೆಂದು ಹೇಳಿದರೆಂದು ತಿಳಿದುಬಂದಿದೆ.

ಗಾಂಧಿ-ಜಿನ್ನಾ ಭೇಟಿ

ಮುಂದಿನ ತಿಂಗಳು ಮೊದಲನೇ ವಾರದಲ್ಲಿ ಗಾಂಧಿ ಜಿನ್ನಾ ರವರ ಭೇಟಿಯಾಗಬಹುದು. ಜಿನ್ನಾರವರು ಮಹಾತ್ಮರಿಗೆ ಪತ್ರ ಬರೆದು ತಮ್ಮ ದೇಹಸ್ಥಿತಿ ಬಗ್ಗೆ ತಿಳಿಯಪಡಿಸಿದ್ದಾರೆ.

ಹತ್ತಿ ಬೆಲೆ ಇಳಿಯಿತು

ಬೊಂಬಾಯಿನ ಹತ್ತಿ ಮಾರ್ಕೆಟ್ಟಿನಲ್ಲಿ ಜಾರಿಲ್ಲಾ ಹತ್ತಿಯು ನಾನೂರು ರೂ. ಗಳಿಗೆ ಇಳಿದುಹೋಯಿತು. ವ್ಯಾಪಾರವೇ ಇಲ್ಲ. ಬಾಗಿಲು ಮುಚ್ಚುವಾಗ ಅನೇಕ ಖರೀದಿ ಇತ್ತು.

ಸಿಡಿಲಿನಿಂದ ೬ ಸಾವು

ಬಂಗಾಳ ಪ್ರಾಂತದ ಹಳ್ಳಿಯೊಂದರಲ್ಲಿ ೬ ಜನರಿಗೆ ಸಿಡಿಲು ಬಡಿದು, ಅವರೆಲ್ಲರೂ ಮೃತರಾದರೆಂದು ತಿಳಿದು ಬಂದಿದೆ.

ಪರ್ಜನ್ಯನಿಗೆ ಪುತ್ರ ಬಲಿ

ದಕ್ಷಿಣ ಆಫ್ರಿಕಾ ಖಂಡದಲ್ಲಿ ನರಬಲಿ ಇನ್ನೂ ಇದೆಯೆಂಬ ವಿದರ್ಶನ ಗೊತ್ತಾಗಿದೆ. ಜೊಹಾನ್ಸ್‌ಬರ್ಗಿನ ಸಮೀಪ ಪರ್ವತ ಪ್ರದೇಶಗಳ ವಾಸಿಸುವ ಒಬ್ಬ ೮೦ ವಯಸ್ಸಿನ ವಯೋವೃದ್ಧ ವೈದ್ಯನು ಮಳೆ ಬಾರದ ಪ್ರಯುಕ್ತ ಪರ್ಜನ್ಯ ದೇವತೆಯ ಸಂತೃಪ್ತ್ಯರ್ಥವಾಗಿ ತನ್ನ ೪ ವರ್ಷದ ಮಗನ ಕುತ್ತಿಗೆ ಕೊಯ್ದು, ಹೊರ ಹಾಸಿದ ರಕ್ತವನ್ನು ಪಡಗ ತೊಂಬಿನಲ್ಲಿ ತುಂಬಿ ಆ ದೇವತೆಗೆ ಅರ್ಪಿಸಿದನು. ಬಿಳಿಯರ ರಾಜ್ಯ ನ್ಯಾಯಾಲಯದ ನ್ಯಾಯಾಧೀಶನು ತನಗೆ ಫಾಸಿ ಶಿಕ್ಷೆ ವಿಧಿಸಿದಾಗ " ನನ್ನ ಹತ್ತಿರ ದೇವರೆಂಬ ವರವಿದೆ, ನನ್ನ ಉಪದ್ರವಕ್ಕೆ ಒಳಬಿ ಬಿಟ್ಟಲ್ಲಿ ತೆಗೆದು ಕೊಳ್ಳಿ " ಎಂದನಂತೆ

ಪ್ಯಾರಿಸ್ಸಿಗೆ ಬಾಂಬಿನ ಪೆಟ್ಟು

ಮೊನ್ನೆ ರಾತ್ರಿ ಪ್ಯಾರಿಸ್ ನಗರದ ಮೇಲೆ ಬಲವಾದ ವಿಮಾನಗಳ ಪೆಟ್ಟು ಬಿದ್ದಿತು. ನಗರದ ಅನೇಕ ಭಾಗಗಳಿಗೆ ಬಲವಾಗಿ ಹೊಡೆಯಲಾಯಿತು. ಸುಮಾರು ೨ ಗಂಟೆಯ ನಂತರ "ವಿಮಾನ ಪಾರಾಯ" ಸೂಚನೆಯ ಶಿಳ್ಳು ಕೇಳಿಸಿತು. ಭಾರಿ ಭಾರಿ ಸಿಡಿಯುವ ಮತ್ತು ಬೆಂಕಿಯನ್ನುಂಟು ಮಾಡುವ ಬಾಂಬುಗಳನ್ನು ಹಾಕಲಾಯಿತೆಂದು ಫ್ರೆಂಚರ ಹೇಳಿಕೆ.

ಹಿಂದಿನ ಗವರ್ನರ್-ಜನರಲ್ಲುಗಳ ಜೀವನ

ಭಾರತವು ಬ್ರಿಟಿಷ್ ಸಾಮ್ರಾಜ್ಯದೊಳಗೆ ಸೇರುವುದಕ್ಕಿಂತಲೂ ಪೂರ್ವ ಭಾವಿಯಾಗಿ ಕಂಪನಿ ರಾಜ್ಯವಿದ್ದಾಗ ಆಗಿನ ಗವರ್ನರ್ ಜನರಲ್ಲುಗಳ ಪೈಕಿ ಇಬ್ಬರು ಯಾವ ರೀತಿ ಇಂಗ್ಲೆಂಡಿನಲ್ಲಿ ಜೀವನ ಯಾತ್ರೆ ಸಾಗಿಸಿದರೆಂಬುದು ಕೌತುಕವಾಗಿದೆ. ಎಲ್ಲೆನ್‌ಬರೊ ಎಂಬ ಪ್ರಭುವು (ಆತ ಆಳಿದುದು ಕೆಲವೇ ದಿನಗಳು ಮಾತ್ರ) ವಿಲಾಸಿ ಗುಣವುಳ್ಳ ವಿ.ಡಿಗ್ಬಿ ಎಂಬ ಸ್ತ್ರೀಯನ್ನು ವಿವಾಹ ಮಾಡಿಕೊಂಡರು. ಅನಂತರ ದಾಂಪತ್ಯ ವಿಚ್ಛೇದನವಾಯಿತು. ಆಕೆಯು ಅಚ್ಚರಿಪಡಬಹುದಾದ ಹಲವು ಸಾಹಸ ಕಾರ್ಯ ನಡೆಸಿದಳು. ಇದಾದ ನಂತರ ಸಿರಿಯಾ ದೇಶಕ್ಕೆ ಪಯಣ ಬೆಳೆಸಿದಳು. ಅಲ್ಲೊಬ್ಬ ಅರಬ್ಬ ಶೇಖನ ಸಖ್ಯ ದೊರೆಯಿತು. ಆಕೆಗೆ ಆತನ ಸೇವಕಿಯಾಗಿಬಿಟ್ಟಳು.

ಮತ್ತೊಬ್ಬ ಗವರ್ನರ್ ಜನರಲ್ ಲಾರ್ಡ್ ಮಾರ್ನಿಂಗ್ಟನ್ ಎಂಬುವರು. ಇವರನ್ನು ಮಾರ್ಕೀಸ್ ಆಫ್ ವೆಲ್ಲೆಸ್ಲಿಯೆಂದೂ ಕರೆಯುತ್ತಾರೆ. ನೆಪೋಲಿಯನ್ ಚಕ್ರವರ್ತಿಯನ್ನು ವಾಟರ್ಲೂನಲ್ಲಿ ಸೋಲಿಸಿದ ಸಹಾಯ ಕೂಡ ಮತ್ತು ವಿನ್ನ ಪರ್ ಎಂದು ಕರೆಯಲ್ಪಡುತ್ತಿದ್ದ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ನನ ಅಣ್ಣ ಈ ಗವರ್ನರ್ ಜನರಲ್ಲರು. ಇವರ ಅಧಿಕಾರ ಅವಧಿಯು ಮುಗಿದನಂತರ ಇಂಗ್ಲೆಂಡಿಗೆ ಹೋದ ಮೇಲೆ ಅನೇಕ ನೌಕರಿಗಳಲ್ಲಿ ನೇಮಿಸಿದರು. ಅವರ ಪತ್ನಿ ವಿಲಾಸಿ. ಇವನು ಮರಣ ಹೊಂದುವ ಕಾಲದಲ್ಲಿ ಇವರ ಕಡೆಯ ದಿನ ಕಳೆದ ಸಹಾಯ ಜೀವನದ ಹಣವೂ ಇವರ ಹತ್ತಿರ ಇಲ್ಲ. ಇವರ ಕಾಲ ಕಷ್ಟದಿಂದ ಕಳೆಯಬೇಕಾಯಿತು.

ಇಂಡೋ ಚೀಣಾ ಜಪಾನ್ ಸಾಮ್ರಾಜ್ಯಕ್ಕೆ ಸೇರಿತು

ಜಪಾನ್ ಸಾಮ್ರಾಜ್ಯದ "ಸ್ವತಂತ್ರ ಪ್ರಾಂತ" ವಾಗಿ ಇಂಡೋ-ಚೀಣಾವು ಪರಿವರ್ತಿಸಿದೆಯೆಂದು ಜಪಾನ್ ಸರಕಾರವು ಘೋಷಿಸಿದೆ. ವಿಚಿ ಸರಕಾರದ ಇಂಡೋ-ಚೀಣಾ ಗವರ್ನರ್ ಇದು ಊರ್ಜಿತವಲ್ಲವೆಂದು ಸಾರಿದೆ.

ಸುದ್ದಿ ಸುಳ್ಳೆಂದು ಜರ್ಮನರು

ಜರ್ಮನ್ ಸೇನಾನಿಯು ಪ್ಯಾರಿಸ್ಸಿನಲ್ಲಿ ಶರಣಾಗತನಾದನೆಂಬ ಸುದ್ದಿಯು ಮಿತ್ರರಿಂದ ಪ್ರಕಟಿಸಲ್ಪಟ್ಟದ್ದೇ ತಪ್ಪು, ಮಿತ್ರರ ಪರಿಪಾಠ ಹೊಂದುವ ಸುಳ್ಳು ಸುದ್ದಿ, ಆ ಸೇನಾನಿಯು ತಿರಸ್ಕರಿಸಿದನೆಂದೂ ಜರ್ಮನ್ ವಾರ್ತೆ

ಅಂಟೊನೆಸ್ಕುರ ಕೈಸೆರೆ

ರುಮೇನಿಯಾ ಸರ್ವಾಧಿಕಾರಿ ಅಂಟೊನೆಸ್ಕುರವರನ್ನು ಕೈಸೆರೆ ಹಿಡಿಯಲಾಗಿದೆಯೆಂದು ಮಾಸ್ಕೋವಿನ ಅಧಿಕೃತ ಹೇಳಿಕೆ ತಿಳಿಸುತ್ತದೆ. ಅವರು ರುಮೇನಿಯಾ ಶಾಂತಿಯನ್ನು ಒಪ್ಪಲಿಲ್ಲ. ಅಲ್ಲದೆ ವಿಷಯನ್ನು ತಿಳಿಸುವುದನ್ನೂ ಕೂಡ ಒಪ್ಪಲಿಲ್ಲ

ಜೆಟಿನ್ಸ್ಕಿ ತೇರ್ಗಡೆ

ಇಂಗ್ಲೆಂಡಿನ ರಾಯಲ್ ಏರೊ ಕ್ಲಬ್ಬಿನ ಸೂಪರಿಂಟೆಂಡೆಂಟರವರ ಸಹಾಯದಿಂದ ಪ್ರೊ. ಎಸ್. ಎ. ಜೆಟಿನ್ಸ್ಕಿ ಎಂಬುವರು ಜೈಲಿನಿಂದಲೇ ಹಾರಲು ಅನುಮತಿ ಪಡೆದು, ಪರೀಕ್ಷೆ ತೇರ್ಗಡೆ ಹೊಂದಿದರು.

ಪ್ಯಾರಿಸ್ಸಿನಲ್ಲಿ ಒಂದು ಕಡೆ ಪ್ರತಿಭಟನೆ

ಪ್ಯಾರಿಸ್ಸಿನಲ್ಲಿ ಒಂದು ಕಡೆ ಶತ್ರುವಿನ ಬಲವಾದ ಪ್ರತಿಭಟನೆ ಸ್ತಬ್ಧವಾದ ನಗರದ ಮಧ್ಯ ಭಾಗ ಮತ್ತು ಇತರ ದಿಕ್ಕುಗಳಲ್ಲಿ ಕೊಂಚವಿದೆ. ನಗರದೊಳಗೆ ಕಂಯಾವ ಪ್ರತಿಭಟನೆ ಇಲ್ಲದಿದ್ದರೂ ಇನ್ನೂ ತೆರವುಗೊಳಿಸಬೇಕಾಗಿದೆ. ಜರ್ಮನ್ ಸೇನಾನಿ ಸಹ [illegible] ಇವರೆಗೆ ಹತ್ತು ಸಾವಿರ ಸೇನೆ ಕೈಸೆರೆಯಾಗಿದೆ.

ಸ್ಪೇನ್ ಗಡಿಯಲ್ಲಿ ಜರ್ಮನರ ದುಸ್ಥಿತಿ

ಫ್ರಾನ್ಸ್-ಸ್ಪೇನ್ ಗಡಿಯಲ್ಲಿ ಸುಮಾರು ೧೦ ಸಾವಿರ ಜರ್ಮನ್ ಸೇನೆಗಳು ಘೇರಾಯಿಸಲ್ಪಟ್ಟಿವೆ. ವಿಶೇಷ ಕ್ಷೇತ್ರ ಇನ್ನೂ ಮರೆತಿ ಸಾವಿರ ಅಮೆರಿಕನ್ನರು ತೋಲೋಸ್ ನಗರದಲ್ಲಿ ಪ್ರತಿಭಟನೆ ನಿಂತಿದೆ. ಇಟಲಿಯಲ್ಲಿ ಬ್ರಿಟಿಷ್ ಮತ್ತು ಭಾರತೀಯ ಪಡೆಗಳು ಗಾಥಿಕ್ ಪಂಕ್ತಿ ಹತ್ತಿರ ಹೋಗುತ್ತಿದ್ದಾರೆ.

ಬಲ್ಗೇರಿಯಾ ಶಾಂತಿಗೆ ಕಾತರ ಪಡುತ್ತಿದೆ

ಬಲ್ಗೇರಿಯಾ ರಾಜ್ಯವು ಅಮೆರಿಕಾ ಮತ್ತು ಬ್ರಿಟನ್‌ಗಳನ್ನು ಶಾಂತಿಯ ಷರತ್ತುಗಳೇನೆಂದು ಕೇಳಿದೆ. ಈ ಯುದ್ಧದಿಂದ ಬೇರೆಯಾಗುವ ಬಗ್ಗೆ ಅದು ತೀರ್ಮಾನಿಸಿದೆಯೆಂದು [illegible]

[illegible]

ವಾರ ಭವಿಷ್ಯ

ತಾ॥ ೨೭-೮-೪೪ ರಿಂದ ೨-೯-೪೪ ರವರೆಗೆ

(ಶ್ರೀ ಸುಬ್ಬರಾವ್ ಸ್ವಾಮಿಗಳಿಂದ)

ಮೇಷ — ಆರೋಗ್ಯ, ಆರ್ಥಿಕ, ಮಾನಸಿಕಗಳಲ್ಲಿ ಉತ್ತಮ. ಎಲ್ಲ ಗ್ರಹಗಳು ಅನುಕೂಲವಾಗಿವೆ. ವ್ಯಾಪಾರ, ನೌಕರಿಗಳಲ್ಲಿ ಲಾಭ. ಪ್ರವಾಸದಲ್ಲಿ ಯಶ. ತಾ॥ ೨೮ ಖರ್ಚು, ಅವಿಶ್ರಾಂತಿ.

ವೃಷಭ — ಆರೋಗ್ಯ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಯಶ. ಕಲಹ, ಲೇಖಕರ ಲೇಖನಗಳಿಗೆ ವಿಘ್ನ. ತಾ॥ ೨೮-೨೯ ಖರ್ಚು, ಅಸ್ವಸ್ಥತೆ.

ಮಿಥುನ — ಆರ್ಥಿಕ, ಮಾನಸಿಕಗಳ ಸ್ಥಿತಿ ಮಧ್ಯಮ. ಪ್ರವಾಸದಲ್ಲಿ ಮಾತಿನ ಜಗಳ. ಅಲ್ಪ ಕಾರಣಗಳಿಗಾಗಿ ಕಲಹ. ವ್ಯಾಪಾರ, ನೌಕರಿಗಳಲ್ಲಿ ಅಸಮಾಧಾನ. ತಾ॥ ೩೦-೩೧ ಕ್ಲೇಶ, ಖರ್ಚು.

ಕರ್ಕ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮ. ಪ್ರವಾಸದಲ್ಲಿ ಯಶ. ವ್ಯಾಪಾರ, ನೌಕರಿಗಳಲ್ಲಿ ಲಾಭ. ತಾ॥ ೩೦-೩೧ ಶುಭವಾರ್ತೆ, ಮಿತ್ರ ಭೇಟಿ.

ಸಿಂಹ — ಬೇರೆಯವರು ತೊಂದರೆಕೊಟ್ಟರೂ ವಿಘ್ನ ಸೇನು ಕಂಪನಿಸಲಾರದು. ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ. ನೌಕರಿ, ವ್ಯಾಪಾರಗಳಲ್ಲಿ ಲಾಭ. ಪ್ರವಾಸದಲ್ಲಿ ಗಲಾಟೆ. ತಾ॥ ೩೧ ಜಾಗರೂಕ.

ಕನ್ಯಾ — ಆರೋಗ್ಯ ಆರ್ಥಿಕ ಸ್ಥಿತಿ ಸಾಧಾರಣ. ಉದ್ಯೋಗ, ವ್ಯಾಪಾರಗಳಲ್ಲಿ ಅಸಮಾಧಾನ. ಪ್ರವಾಸದಲ್ಲಿ ವಿಘ್ನ. ತಾ॥ ೨೮-೨೯-೩೦ ಪ್ರತ್ಯಯಾಸ, ಭಯ.

ತುಲಾ — ಆರೋಗ್ಯ ಸ್ವಲ್ಪ ಕೆಡುವಿಕೆ. ಆರ್ಥಿಕ, ಮಾನಸಿಕ ಸ್ಥಿತಿ ಸಾಧಾರಣ. ಪಟ್ಟಿ, ರೇಸ್, ಲಾಟರಿಗಳಿಗೆ ಕೈಹಾಕಬೇಡಿ. ಪ್ರವಾಸ, ದಾನಧರ್ಮಗಳಲ್ಲಿ ವಿಘ್ನ. ತಾ॥ ೩೦-೩೧ ಕಾಲಿಗೆ ಗಾಯ, ಕಲಹ.

ವೃಶ್ಚಿಕ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಚೆನ್ನಾಗಿದೆ. ವ್ಯಾಪಾರ, ನೌಕರಿಗಳಲ್ಲಿಷ್ಟ ಸಮಸ್ಯೆಗಳು ಕೈಗೂಡುವುವು. ತಾ॥ ೨೯-೩೦-೩೧ ಲಾಭ, ಸನ್ಮಾನ.

ಧನು — ಆರೋಗ್ಯ, ಧನ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿಗಳಲ್ಲಿ ಕಷ್ಟಸಾಧ್ಯ ಲಾಭ. ಪ್ರವಾಸ, ವಿದ್ಯಾಭ್ಯಾಸದಲ್ಲಿ ಪ್ರಗತಿ. ತಾ॥ ೨೮ ಅಲ್ಪ ಚಿಂತೆ. ಆಪ್ತರ ಆಗಮನ.

ಮಕರ — ಆರೋಗ್ಯ ಸಾಧಾರಣವಾದರೂ ಮಾನಸಿಕ, ಆರ್ಥಿಕ ಸಾಧಾರಣ. ವ್ಯಾಪಾರ, ನೌಕರಿಗಳಲ್ಲಿ ಸಹನೆಯಿಂದ ವರ್ತಿಸಿ. ತಾ॥ ೨೮-೨೯-೩೦ ಅವಿಶ್ರಾಂತಿ, ಖರ್ಚು.

ಕುಂಭ — ದೇಹಸ್ಥಿತಿ ಕಡೆ ಜಾಗರೂಕರಾಗಿರಿ. ದ್ರವ್ಯದ ಸ್ಥಿತಿ, ಮಾನಸಿಕ ಸಾಧಾರಣ. ವ್ಯಾಪಾರ ನೌಕರಿಗಳಲ್ಲಿ ಎಚ್ಚರಿಕೆ. ಪ್ರವಾಸ ವ್ಯರ್ಥ. ತಾ॥ ೩೦-೩೧ ಧನಮಾನಗಳಿಂದ ಅನುಕೂಲ.

ಮೀನ — ಆರೋಗ್ಯ ಮಾನಸಿಕ ಆರ್ಥಿಕ ಸಾಧಾರಣ. ಪತ್ನಿ ಆರೋಗ್ಯ ಕೆಡುವುದು. ವ್ಯಾಪಾರ, ನೌಕರಿಗಳಲ್ಲಿ ಕಲಹ. ತಾ॥ ೩೧ ಅನಿರೀಕ್ಷಿತ ಸಂಭವ

Edited printed and published by A. P. Nagarajan, at the Sadhvi Press, D. Subbiah Road, Mysore.

ಚರ್ಚಿಲರೂ ಗುಂಡು ಹಾರಿಸಿದರು

ಇಟಲಿ ರಣಕ್ಷೇತ್ರ ಸಂಚಾರಕ್ಕಾಗಿ ಹೋಗಿದ್ದ ಚರ್ಚಿಲರು ಶತ್ರುವಿನ ಕೋಟೆ ಇರುವ ಸ್ಥಳದ ಮೇಲೆ ಬಂದೂಕ ಹಾರಿಸಲು ಅದು ಗುರಿ ತಪ್ಪಿತು. ಅನಂತರ ಸೇನಾಧಿಕಾರಿಯೊಬ್ಬನು ಅವರು ಹಿಡಿದಿದ್ದ ಬಂದೂಕದ ಮುಖಭಾಗವನ್ನು ಎತ್ತಿದ ಮೇಲೆ, ಗುಂಡು ಹಾರಿಸಲಾಗಿ ಶತ್ರು ಸ್ಥಾನವು ನಾಶವಾಯಿತು.

ಹೆಸ್‌ದಂಪತಿಗಳ ದಾಂಪತ್ಯ

ಹಿಂದೆ ಹಿಟ್ಲರರ ಸೆಕ್ರೆಟರಿಯಾಗಿದ್ದ ರೂಡಾಲ್ಫ್ ಹೆಸ್ಸನ ಸ್ತ್ರೀಯು ಈಗ ಇಂಗ್ಲೆಂಡಿನಲ್ಲಿ ಸೆರೆಯಲ್ಲಿರುವ ತನ್ನ ಗಂಡನೊಡನೆ ತನಗೂ ಆದ ವಿವಾಹವನ್ನು ರದ್ದುಮಾಡಿಸಿಕೊಳ್ಳಲು ಅರ್ಜಿ ಹಾಕಿದ್ದಳು. ಕಾರಣವೇನೆಂದರೆ ಗಂಡನು ಹೆಂಡತಿಯನ್ನು ಬಿಟ್ಟಿರುವುದು ಮತ್ತು ಬುದ್ಧಿ ಭ್ರಮಣೆಯಾಗಿರುವುದೇ ಆಗಿದೆ.

ಜಪಾನ್ ನೌಕೆಗೆ ಭಯ

ಪೆಸಿಫಿಕ್ ಸಾಗರದಲ್ಲಿರುವಂತೆಯೇ ಹಿಂದೂ ಸಾಗರದಲ್ಲಾಗಲಿ, ಬಂಗಾಳಾ ಕೊಲ್ಲಿಯಲ್ಲಾಗಲಿ ನೌಕಾ ಯುದ್ಧಕ್ಕೆ ಕರೆದರೆ ಬರದೇ ಜಪಾನ್ ನೌಕೆಯು ಭಯಪಟ್ಟುಕೊಂಡಿದೆಯೆಂದು ಇಂಗ್ಲೆಂಡಿನಿಂದ ಹಿಂತಿರುಗಿದ ಮೌಂಟ್‌ಬ್ಯಾಟನ್ನರು ತಿಳಿಸಿದರು. ಭಾರತ-ಬರ್ಮಾ ಗಡಿಯಲ್ಲಿ ನಡೆದ ಯುದ್ಧದಲ್ಲಿ ೧೪ ನೇ ಸೇನೆಯು ಪ್ರಖ್ಯಾತವಾಯಿತು. ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಭಾರತೀಯರೇ ಇದ್ದರು ಎಂದು ಹೇಳಿದರು. ಗೆಲ್ಲಲು ಇನ್ನೂ ಬಹುದೂರ ಆಗ್ನೇಯ ಏಷ್ಯಾ ಸೇನಾಧಿಪತ್ಯ ಹೋಗಬೇಕಾಗಿದೆಯೆಂದೂ ಮೌಂಟ್‌ಬ್ಯಾಟನ್ನರ ಅಭಿಪ್ರಾಯ.

ಬೇಕಾಗಿದೆ

ವೀರಶೈವ ಲಿಂಗಾಯತರು, ಸ್ಥಳದವರು ಮತ್ತು ರೇಣುಕಾಚಾರ್ಯರ ಗೋತ್ರದ ಅನುಕೂಲಸ್ಥರಿಗೆ, 14-16 ವರ್ಷದ ಕನ್ಯಾರತ್ನವು ಬೇಕಾಗಿದೆ. ವಿವರ ಸಾಧ್ವಿ ಆಫೀಸಿನಲ್ಲಿ ತಿಳಿಯಬಹುದು

ಘನವಾದ ಸಂಗೀತ ಕಛೇರಿ

ಮೈಸೂರಿನಲ್ಲಿರುವ ಗಾನ ವಿಶಾರದ
ಬಿಡಾರಂ ಕೃಷ್ಣಪ್ಪನವರ
ಪ್ರಸನ್ನ ಸೀತಾರಾಮ ಮಂದಿರದಲ್ಲಿ
30-8-44 ನೇ ಬುಧವಾರ
ಸಾಯಂಕಾಲ 6-30 ಘಂಟೆಗೆ
ಸಂಗೀತ ವಿದ್ವಾನ್
ಸಾತ್ತೂರು ಎ. ಜಿ. ಸುಬ್ರಹ್ಮಣ್ಯಂರವರ
ಹಾಡುಗಾರಿಕೆ
ಮದರಾಸ್ ರೇಡಿಯೋ ವಿದ್ವಾನ್
ಆರ್. ಕೆ. ವೆಂಕಟರಾಮಾಶಾಸ್ತ್ರಿಗಳ
ಪಿಟೀಲು
ವಿದ್ವಾನ್
ಟಿ. ಎಂ. ಪುಟ್ಟುಸ್ವಾಮಯ್ಯನವರ
ಮೃದಂಗ ಸಹ ಏರ್ಪಡಿಸಿದೆ.
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ
ಪ್ರವೇಶ, ದರಗಳು:
ಗಂಡಸರಿಗೆ 1-0-0, ಹೆಂಗಸರಿಗೆ 0-8-0
ಹುಡುಗರಿಗೆ 0-4-0

ಈ ನಿಯಮವನ್ನು ಮೀರಿದರೆ, ನಿಮ್ಮ ಪ್ರಾಣಹಾನಿಯಾಗಬಹುದು. ರೈಲುಗಾಡಿಗಳು ವಿಶೇಷವಾಗಿ ಭರ್ತಿಯಾಗಿರುವಂಥ ಸಮಯಗಳಲ್ಲಿ ಒಳಗೆ ಪ್ರವೇಶಮಾಡಲು ಸರಿಯಾದ ಸ್ಥಳವಿರುವುದಿಲ್ಲ. ಆದರೆ, ಹೊರಗಡೆ ಬಾಗಿಲ ಮೆಟ್ಟಿಲ ಮೇಲೆ ನಿಂತು ಪ್ರಯಾಣ ಮಾಡುವ ಅಭ್ಯಾಸಕ್ಕೆ ಮಣಿಯಬೇಡಿ. ಅದರಿಂದ ಘೋರವಾದ ಅಪಘಾತವಾಗಲಿ, ಪ್ರಾಣಹಾನಿಯಾಗಲಿ ಸಂಭವಿಸಬಹುದು.

ಗಾಡಿಗಳ ಒಂದು ಪಕ್ಕದಲ್ಲಿ ರೈಲುಮಾರ್ಗದಲ್ಲಿ ಸಿಕ್ಕುವ ಸುರಂಗಮಾರ್ಗಗಳ ಗೋಡೆಗಳೂ ಅಥವಾ ಕಂಬಗಳೂ ಬಹಳ ಅಂತರವು ಇರುವುದಿಲ್ಲ. ರೈಲು ಗಾಡಿಯು ವೇಗದಿಂದ ಹೋಗುತ್ತಿರುವಾಗ ನಿಮ್ಮ ದೇಹವು ಯಾವುದಾದರೂ ಬಡಿದುಬಿಟ್ಟರೆ, ಅದೇ ನಿಮ್ಮ ಕಟ್ಟಕಡೆಯ ಪ್ರಯಾಣವಾಗುವದು.

ವಿವೇಕಿಗಳು ಗಾಡಿಯಲ್ಲಿ ಸ್ಥಳವಿಲ್ಲದಿದ್ದರೆ, ಸ್ಟೇಷನ್ನಿನಲ್ಲಿಯೇ ಉಳಿಯುವರು. ಅನಾವಶ್ಯಕವಾಗಿ ಬೇಡಿ, ನಿಮಗೆ ಪ್ರಯಾಣಮಾಡಲು ಸಾಧ್ಯವಿಲ್ಲದಿದ್ದರೆ, ಇದನ್ನು ನೆನಪಿನಲ್ಲಿಡಿ—ಪ್ರಯಾಣಿಕರ ಮುನ್ನೆಚ್ಚರಿಕೆ ಎಲ್ಲಾ ಭಾಗಗಳಿಗೂ ಆರಾಮ ಬಿಟ್ಟು ಕೊಡುವದು.

ಅಪಾಯಕರವಾದ ಪ್ರಯಾಣ ಮಾಡಬೇಡಿ

AAA ... ಮತ್ತು ಅನಾವಶ್ಯಕವಾದ ರೀತಿಯಲ್ಲಿ ಎಂದಿಗೂ ಪ್ರಯಾಣಮಾಡಬೇಡಿ.

ಸಂಪುಟ ೬] ಮಂಗಳವಾರ ೨೯—೮—೪೪ [ಸಂಚಿಕೆ ೩೦

ಬ್ರಿ॥ ಕಾಮನ್‌ವೆಲ್ತಿಗೆ ಈವರೆಗೆ ೧೦ ಲಕ್ಷ ನಷ್ಟ

ಜಪಾನರು ಮ್ಯಾನಿಲಾ ನಗರ ಖಾಲಿಮಾಡುತ್ತಿದ್ದಾರೆ

ಜರ್ಮನಿಯಲ್ಲಿ ಒಳದಂಗೆಯಾಗುವ ಸಂಭವವಿಲ್ಲ

ಕಸ್ತೂರಿ ಬಾ ನಿಧಿ

ಮೈಸೂರು ೨೮

ಕಸ್ತೂರಿ ಬಾ ನಿಧಿಗೆ ೧೫೦ ರೂ. ಗಳನ್ನು ಗ್ರಾಜುಯೇಟ್ಸ್ ಸಹಕಾರ ಸಂಘದವರು ಕೊಟ್ಟಿರುತ್ತಾರೆ

ಧನ ಸಂಗ್ರಹ ಕಾರ್ಯಕ್ಕಾಗಿ ಮೈಸೂರು ನಗರ ಮತ್ತು ಜಿಲ್ಲಾ ಕಸ್ತೂರಿ ಬಾ ನಿಧಿಯ ಸಮಿತಿಯಿಂದ ಅಧಿಕಾರ ಹೊಂದಿದ ಈ ಕೆಳಗಿನ ವಿದ್ಯಾರ್ಥಿ ಸ್ವಯಂ ಸೇವಕರ ಉಪಸಮಿತಿ ರಚಿತವಾಗಿದೆ.—

ಎಚ್. ವೈ. ಶಾರದಾ ಪ್ರಸಾದ್, ಎಚ್. ಕೆ. ಕುಮಾರಸ್ವಾಮಿ, ಎ. ಶ್ರೀಕಂಠಯ್ಯ, ಸಿ. ಆರ್. ಬ್ರಹ್ಮಾನಂದ, ಕೆ. ರಾಮಯ್ಯ, ವೈ. ಕೈಲಾಸಂ, ಬೆಂಜಮಿನ್ ಸಿಕ್ವೆರಾ, ಶ್ರೀ ಶಾರದಾಪ್ರಸಾದರ ಸಂಚಾಲಕರು. ವಿದ್ಯಾರ್ಥಿ ಸ್ವಯಂಸೇವಕರು ಇದೇ ೨೯-೮-೪೪ ನೆಯ ಮಂಗಳವಾರದಿಂದ ಸಂಗ್ರಹಕ್ಕೆ ಆರಂಭಿಸುತ್ತಾರೆ. ಮಹಾಜನರು ಸರ್ವ ಸಹಾಯವನ್ನು ಸಲ್ಲಿಸಬೇಕಾಗಿ ಕೋರಲಾಗಿದೆ.

ಮಕ್ಕಳ ಕೂಟ ಮೈಸೂರು

ತಾ॥ ೨೭-೮-೧೯೪೪ ನೆಯ ಭಾನುವಾರ ಸಂಜೆ ಮಕ್ಕಳ ಕೂಟದಲ್ಲಿ ಬಾಲಗಣಪತಿಯ ಮಹಾ ಮಂಗಳಾರತಿಯನ್ನೂ, ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕ ಮಹೋತ್ಸವದ ನಾಲ್ಕನೆಯ ವಾರ್ಷಿಕೋತ್ಸವವನ್ನೂ ಆಚರಿಸಲಾಯಿತು. ಸಭೆಗೆ ಮಕ್ಕಳೂ, ಹಿರಿಯರೂ ದಯಮಾಡಿಸಿದ್ದರು. ಮಕ್ಕಳು ಪದ್ಯಗಳನ್ನೂ, ಹಾಡುಗಳನ್ನೂ ಹೇಳಿದರು. ಮಕ್ಕಳಿಗೆಲ್ಲಾ ಹುಳಿಯನ್ನ, ಕೇಸರಿಭಾತ್ ಹಂಚಲಾಯಿತು. ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ವೀರಶೈವ ವಿದ್ಯಾರ್ಥಿ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಖ್ಯಾತ ಸಾಹಿತಿಗಳಾದ ಶಿವರಾಮಕಾರಂತರವರು, ಬನುಮಯ್ಯನವರ ಹೈಸ್ಕೂಲಿನಲ್ಲಿ ನಾಳೆ ಬುಧವಾರ ಸಂಜೆ ೬-೩೦ ಗಂಟೆಗೆ ಆರಂಭ ಭಾಷಣವನ್ನು ನೆರವೇರಿಸುತ್ತಾರೆ. ಸಂಘದ ಅಧ್ಯಕ್ಷರಾದ ಸರದಾರ್ ಕೆ. ಬಸವರಾಜ ಅರಸ್‌ರವರು ಅಧ್ಯಕ್ಷತೆ ವಹಿಸುತ್ತಾರೆ. ಸರ್ವರೂ ದಯಮಾಡಿಸಬೇಕು.

ಸಂತಾಪ ಸಭೆ

ಮೊನ್ನೆ ಸ್ವರ್ಗಸ್ಥರಾದ ಶ್ರೀ [illegible] ಬನುಮಯ್ಯನವರ ಹೈಸ್ಕೂಲ್ ವಿದ್ಯಾರ್ಥಿ ಶ್ರೀ ಹೆಚ್. ಎಸ್. ಬಸಪ್ಪನವರ ಸ್ಮರಣಾರ್ಥವಾಗಿ ನಿನ್ನೆ ದಿನ ಇದೇ ಶಾಲೆಯ ಹೆಡ್ ಮಾಸ್ಟರರವರ ಅಧ್ಯಕ್ಷತೆಯಲ್ಲಿ ಒಂದು ಸಂತಾಪ ಸಭೆ ಸೇರಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಕಾಂಚಿಟಿಗರ ರಾಮಮಂದಿರ

ಶ್ರೀ ಗಣಪತಿಯ ಮಂಗಳಾರತಿ ಪ್ರಯುಕ್ತ ೩೦ ನೇ ತಾ॥ ಬುಧವಾರ ರಾತ್ರಿ ೯ ಗಂಟೆಗೆ ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪನವರ ಸಂಗೀತ ಕಛೇರಿಯು ವಿದ್ವಾನ್ ಆರ್. ಆರ್. ಕೇಶವಮೂರ್ತಿಗಳ ಪಿಟೀಲು, ವಿದ್ವಾನ್ [illegible] ರವರ ತಬಲ ವಾದ್ಯಗಳೊಡನೆ ನಡೆಯುತ್ತೆ. ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ.

ಬ್ರಿಟಿಷ್ ಬೋರಿಗಳ ನ-ಎಸಿ ಗ್ರ್ಯಾಜುಯೇಟ್ ಡಚ್ಚೆಸ್ಸರು ಗಂಡು ಮಗು ಪ್ರಸವಿಸಿರುವ ಸಂತೋಷಕ್ಕೆ [illegible] ಶಾಂತಿ ದಾನವಾಗಿದೆ.

ಜರ್ಮನಿ ಒಳದಂಗೆ ಸುಳ್ಳು

ಒಳದಂಗೆಯ ಅವಕಾಶಗಳಿಂದ, ಸಡಿಲವಾಗಲಿ ಜರ್ಮನಿಯು ಕುಸಿದು ಬೀಳಲಾರದೆಂದು ಅನೇಕದ ವರ್ತಮಾನ ಸಂಸ್ಥೆ ಪ್ರತಿನಿಧಿಯೊಬ್ಬರು ತಿಳಿಸುತ್ತಾರೆ.

ಹಂಗೆರಿ ಗತಿಯೇನು?

ಬಲ್ಗೇರಿಯಾ, ರುಮೇನಿಯಾ ನಿರ್ಧಾರವನ್ನು ಅನುಸರಿಸಿ ಹಂಗೇರಿಯೂ ಶರಣು ಹೋಗಲು ಮುಂದೆ ಬರುವುದೆಂದು ಅಂಕಾರ ರೇಡಿಯೋ ಹೇಳಿತು.

ವಾನ್ ಕ್ಲೂಗರ ಉಚ್ಚಾಟನೆ

ಪಶ್ಚಿಮ ಸ್ಥಾನದಲ್ಲಿ ಫ್ರಾನ್ಸಿನಲ್ಲಿ ಮಿತ್ರರಿಗೆ ಸೋಲು ಸಿಗುವಂತಾದ್ದ ವಾನ್ ಕ್ಲೂಗ್ ಎಂಬ ಟ್ಯಾಂಕು ಯುದ್ಧ ಪ್ರವೀಣರನ್ನು ಹಿಟ್ಲರರು ಉಚ್ಚಾಟಿಸಿದರೆಂದು ಸ್ವೀಡಿಷ್ ಪತ್ರಿಕೆ [illegible] ಹೇಳುತ್ತದೆ.

ಹುಟ್ಟುವಾಗಲೇ ಆರ್ಭಟೆ!

"ಇಂತಹ ಭೂಮಿ ನಡುಗುವ ಶಬ್ದ ಮಾಡುವ ಶಿಶುವನ್ನು ನಾನೆಂದೂ ಕೇಳಿದ್ದಿಲ್ಲ" ವೆಂದು ಮಾರ್ಲ್‌ಬರೋವಿನ ಡಚ್ಚೆಸ್ಸರು ರಾಂಡಾಲ್ಫ್ ಚರ್ಚಿಲರಿಗೆ ಪುತ್ರ ಸಂತಾನವಾದಾಗ ಅಂದರಂತೆ. ಆ ಶಿಶುವೇ ಇಂದು ಪ್ರಚಂಡ ವ್ಯಕ್ತಿಯಾದ ಚರ್ಚಿಲ್.

ಉಪಾಧ್ಯಾಯರಿಗೆ ವಿದ್ಯಾರ್ಥಿಗಳ ಹೊಡೆತ

ಕಾಗದದ ಅಭಾವದಿಂದ ಫ್ರಾನ್ಸಿನ [illegible] ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ಗುಂಪೊಂದು ಪುಸ್ತಕ [illegible] ಶಾಲೆ ಬಿಟ್ಟು ಹೋಗಲು ಯತ್ನಿಸಿದ ಹಲವು ವಿದ್ಯಾರ್ಥಿಗಳನ್ನು [illegible] ಶಾಲೆಯ ಉಪಾಧ್ಯಾಯರುಗಳೂ ತಪ್ಪಿಸಲು ಬಂದಾಗ [illegible] ಮುಂತಾದುವುಗಳನ್ನು ಹೊಡೆದುದರ ಪರಿಣಾಮವಾಗಿ ಒಬ್ಬ ಉಪಾಧ್ಯಾಯರ ತಲೆಗೆ ಏಟುಬಿದ್ದು ಪ್ರಜ್ಞೆ ತಪ್ಪಿತು. ಇದಕ್ಕೆ ಕಾರಣ [illegible] ಲಕ್ಷ್ಯ ಇರಲಿಲ್ಲ. ಕಾಗದವಿಲ್ಲವೆಂದು ಹೇಳಿದಾಗ ಮಾನಸಿಗಿದವಾದರೂ [illegible] ಬಹುದಂತೆ. [illegible] ಹೇಳಿದರು ಹೊಸ ವಿದ್ಯಾರ್ಥಿಗಳು ಶಾಲೆಯವರೇ ಕಾಗದ ಒದಗಿಸಬೇಕೆಂದೂ, ಅದಿಲ್ಲದಿದ್ದರೆ ಪುಸ್ತಕ ಹಿಡಿಸಬೇಕೆಂದೂ [illegible] ಬಿದ್ದ [illegible] ದಿದ್ದಾರೆ.

ಪ್ರಾಂತಿಕ ಸಭೆಗಳಿಗೆ ಚುನಾವಣೆ

ಕಾಂಗ್ರೆಸ್ ಮುಖಂಡರನ್ನು ಬಂಧವಿಮುಕ್ತರನ್ನಾಗಿ ಮಾಡಲು ಮಿಲಿಟರಿ ಪರಿಸ್ಥಿತಿಯು ಅನುಕೂಲವಾದೊಡನೆಯೇ, ಪ್ರಾಸಕ್ತವಾಗಿ ಭಾರತದ ಪ್ರಾಂತಿಕ ಶಾಸನ ಸಭೆಗಳಿಗೆ ಚುನಾವಣೆ ನಡೆಸಬಹುದೆಂದು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಸೂಚಿಸಿದೆ.

೪೩ ರ ಮಗು ೬೩ ರ ಯೋಧ

ಇಂದಿನ ಯೋಧರ ಮಕ್ಕಳು ಮುಂದೆ ನಡೆಯುವ ಸಂಗ್ರಾಮದ ಜಯಶಾಲಿಗಳಾಗುತ್ತಾರೆ. ಈಗಿನ ಯುದ್ಧದಲ್ಲಿ ಸೋಲುಂಟಾದರೂ ಚಿಂತೆಯಿಲ್ಲ. ೧೯೪೩ ನೇ ಇಸ್ವಿಯಲ್ಲಿ ಹುಟ್ಟುವ ಮಗು ೧೯೬೩ ರಲ್ಲಿ ಯೋಧನಾಗಬಲ್ಲನು. ಹೀಗೆಂದು ಪ್ಯಾರಿಸ್ ಸೋಯಿರ್ ಎಂಬ ಜರ್ಮನರ ಪತ್ರಿಕೆಯು ಯುವಕರು ಯುದ್ಧಕ್ಕೆ ಹೋಗುವ ಮುಂಚೆ ವಿವಾಹವಾಗಿ ಪುತ್ರ ಸಂತಾನಕ್ಕೆ ಅಣಿ ಮಾಡಬೇಕೆಂದು ಪ್ರೇರೇಪಿಸಿದೆ.

"ಯು. ಎಸ್. ನೌಕೆ ಧ್ವಂಸ ಮಾಡುತ್ತೇವೆ"

ಪ್ರತಿದಿನ ಕ್ಷೀಣವಾಗುತ್ತಿರುವ ಜಪಾನರ ಉತ್ಸಾಹವನ್ನು ಮತ್ತೆ ಕೆರಳಿಸುವ ಸಲುವಾಗಿ ಜಪಾನಿನ ಬ್ರಾಡ್‌ಕಾಸ್ಟ್ ಕೇಂದ್ರವು ಜನರಿಗೆ ಹಳೆಯ ಸಮಾಚಾರವನ್ನು ತಂದು ಕೊಡುತ್ತಿದೆ. [illegible] ದಿನದ ನೌಕೆಯು ಮೇಲೆ ಬಿದ್ದು, [illegible] ಜಯವನ್ನು ಪಡೆದ ಸಮಾಚಾರವನ್ನು ವರ್ಣಿಸುತ್ತ ಜನರ ಮನೋವೃತ್ತಿಯ [illegible] ಕೆರಳಿಸಿತು. "ಅಮೆರಿಕದೊಡನೆ ಜಪಾನ್ ಯುದ್ಧವು ನಡೆಯುತ್ತಿದ್ದಾಗ ಅಡ್ಮಿರಲ್ ಟೋಗೋರವರ ನೇತೃತ್ವದಲ್ಲಿದ್ದ [illegible] ನೌಕಾಬಲವು ಒಂದೇ ಹೊಡೆತದಲ್ಲಿ ಧ್ವಂಸ ಮಾಡಲು ದಿನ [illegible] ಅದೇ ಜಪಾನಿನ [illegible] ನಿರ್ಣಾಯಕವಾಗಿ ಪರಾಜಿತವಾದ [illegible] ನೌಕಾಬಲವು [illegible] ಹೋರಾಟವನ್ನು ಮಾಡಿಕೊಂಡಿದೆ. [illegible] ಸಂಸ್ಥಾನಗಳ ನೌಕಾಬಲವನ್ನು ಧ್ವಂಸ ಮಾಡುವ ದಿನ ಹತ್ತಿರದಲ್ಲಿದೆ [illegible] ರೇಡಿಯೋ [illegible] ಶಕ್ತಿಯ ಕಾರಣವನ್ನು ಹೇಳಿಕೊಂಡಿತ್ತು.

ಬ್ರಿಟಿಷ್ ಕಾಮನ್‌ವೆಲ್ತಿನ ನಷ್ಟವೆಷ್ಟು?

ಯುದ್ಧದ ಮೊದಲನೆಯ ನಾಲ್ಕು ವರ್ಷಗಳಲ್ಲಿ ಮಿಲಿಟರಿ ಮತ್ತು ಸಿವಿಲ್ ಜನರೂ ಸೇರಿ ಬ್ರಿಟಿಷ್ ಕಾಮನ್‌ವೆಲ್ತಿನ ೮ ಲಕ್ಷ ಜನರು ಮಡಿದಿದ್ದಾರೆ. ಈಗ ಆ ಸಂಖ್ಯೆಯು ೧೦ ಲಕ್ಷದ ವರೆಗೆ ಬರುತ್ತದೆ. ಆದರೂ ಸಹ ಲಂಡನ್ ನಗರವೂ ಮತ್ತು ಚರ್ಚಿಲರು ನಾಮಾಂಕಿತ ಮಾಡಿರುವ 'ಚಾಂಚಿನ ಭಾಟಾವಾಗ' ವಾದ ಪ್ರದೇಶವು ಹಿಟ್ಲರನ ಇತ್ತೀಚಿನ ಆಯುಧಕ್ಕೆ ಎದೆಗೊಡುತ್ತಿದೆ. ಧೈರ್ಯದಿಂದಿದ್ದರೆಂದು ಬ್ಯೂರ್ [illegible] ರ ಹೇಳಿಕೆ.

ಮ್ಯಾನಿಲಾಕ್ಕೆ ಭೀತಿಯೇ?

ಫಿಲಿಪೈನ್ ದ್ವೀಪಗಳ ರಾಜಧಾನಿ ಮ್ಯಾನಿಲಾ ನಗರವನ್ನು ಜನಶೂನ್ಯ ಮಾಡುವ ಉದ್ಯಮ ನಡೆಯುತ್ತಿದೆ. ಜನರ ಊಟವು ಬಹಳ ಕಡಮೆ ಮಾಡಲ್ಪಟ್ಟಿದೆ. ವಿಶೇಷ ಅಪ್ಪಣೆ ಪಡೆದವರು ಮಾತ್ರ ಊರೊಳಗೆ ಬರಬಹುದಾಗಿದೆ. ತಪ್ಪಿದರೆ ಭಾರಿ ಜಪಾನ್ ಶಿಕ್ಷೆ ವಿಧಿಸಲ್ಪಡುತ್ತದೆ.

ಭಾರತ ಖಿಲವಾಗಕೂಡದು

ನಾವು ನಮ್ಮ ಮಾತೃಭೂಮಿಯ ಅಖಂಡತ್ವಕ್ಕೆ ಹೋರಾಡಬೇಕು. ಪ್ರಾಣವಿರುವವರೆಗೂ ಒಂದೇ ಮನಸ್ಸಿನಿಂದ ರಕ್ಷಿಸಿಕೊಳ್ಳಬೇಕು ಎಂದು ಸಾವರ್ಕರರು ಅಖಿಲ ಭಾರತ ಹಿಂದೂ ವಿದ್ಯಾರ್ಥಿ ಸಮ್ಮೇಳನಕ್ಕೆ ತಿಳಿಸಿದ್ದಾರೆ.

ರೆಸಿಡೆಂಟರಿಗೆ ಸತ್ಕಾರ

ಸ್ವಂ. ಸು.] ಬೆಂಗಳೂರು ೨೮

ದಿವಾನರು ಸೆಪ್ಟೆಂಬರ್ ೧೨ ನೇ ತಾ॥ ಸಂಜೆ ಕುಮಾರಕೃಪ ಭವನದಲ್ಲಿ, ನಿವೃತ್ತರಾಗಲಿರುವ ರೆಸಿಡೆಂಟರಾದ ಕರ್ನಲ್ ಫ್ರೇಸರ್‌ರವರ ಗೌರವಾರ್ಥವಾಗಿ ಸತ್ಕಾರವನ್ನೇರ್ಪಡಿಸಿದ್ದಾರೆ.

ಹಣಕಾಸಿನ ಪರಿಶೀಲನೆ

ಬೆಂಗಳೂರು ಕಾರ್ಪೊರೇಷನ್ನಿನ ಹಣಕಾಸಿನ ಸ್ಥಿತಿಯನ್ನು ಪರಿಶೀಲಿಸಲು ಸರ್ಕಾರದವರು ಓವರ್ ಅಸಿಸ್ಟೆಂಟ್ ಕಂಟ್ರೋಲರ್ ಪದವಿಯ ಅಧಿಕಾರಿಯನ್ನು ನೇಮಿಸಿರೋಣವನ್ನು ಮಂಜೂರು ಮಾಡಿದ್ದಾರೆ. ಸಧ್ಯದಲ್ಲೇ ಒಬ್ಬರನ್ನು ನೇಮಕ ಮಾಡಲಾಗುವುದು.

ಅಂತರ ಪ್ರಾಂತೀಯ ಫುಟ್‌ಬಾಲ್

ಈ ಸಂಜೆ ಬೆಂಗಳೂರಿನಲ್ಲಿ ಅಂತರ ಪ್ರಾಂತೀಯ ದಕ್ಷಿಣ ವಲಯದ ಫುಟ್‌ಬಾಲ್ ಸೆಮಿ ಫೈನಲ್ ಪಂದ್ಯವು ಹೈದರಾಬಾದಿನ ಟೀಮೂ ಮದರಾಸಿನ ಟೀಮೂ ನಡೆದು, ಹೈದರಾಬಾದು ಟೀಮು ಸೆರ[illegible] ಗೋಲುಗಳಿಂದ ಗೆದ್ದಿತು. [illegible] ಹೈದರಾಬಾದು ಟೀಮು ನಾಲ್ಕು ಗೋಲುಗಳನ್ನೂ, ಮದರಾಸ್ ಟೀಮು [illegible] ಗೋಲುಗಳನ್ನು ಮಾಡಿತು.

ಫೈನಲ್ ಪಂದ್ಯವು ಹೈದರಾಬಾದ್ ಟೀಮು ನವರಿಗೂ ಮೈಸೂರು ಸಂಸ್ಥಾನದ ಟೀಮಿನವರಿಗೂ ಬುಧವಾರ ಸಂಜೆ ನಡೆಯುವುದು.

ಗಾಂಧೀಜಿಯ ಪ್ರಿನ್ಸಿಪಾಲ್

[illegible]

ಭಾರತೀಯ ವೈಮಾನಿಕರಿಗೆ ಸತ್ಕಾರ

ಸ್ವಂ.ಸು.] ಬೆಂಗಳೂರು ೨೮

ಬಾಲಬ್ರೂಯಿ ಬಂಗಲೆಯಲ್ಲಿ ಭಾರತ ವೈಮಾನಿಕ ದಳಕ್ಕೆ ಸೇರಿದ ೩೦೦ ಮಂದಿ ಯನ್ನು ಸಿವಿಲಿಯನ್ ವೆಲ್‌ಫೇರ್ ಕಮಿಟಿಯ ವರು ಸತ್ಕರಿಸಿದರು. ಸಮಾರಂಭಕ್ಕೆ ರಾ ಜಕುಮಾರಿ ದೇವರಾಜ ಅರಸ್, ಪ್ರಧಾ ನ ಶಿರೋಮಣಿ ಎನ್ ಮಾಧವರಾಯರೂ, ಮಂತ್ರಿಗಳೂ, ಇತರರೂ ಬಂದಿದ್ದರು.

ಲಾರಿ ದುರುಪಯೋಗಕ್ಕೆ ಲಂಚ

ನೌಕರರನ್ನು ಬೆಂಗಳೂರಿಗೆ ಕೋಲಾರ ದಿಂದ ಸಾಗಿಸಲು ಸರಕಾರಿ ಲಾರಿಯ ನ್ನು ದುರುಪಯೋಗಪಡಿಸಲು ೧೦ ರೂ ಅನ್ನು ಪ್ಲಟೂನ್ ಕ್ಯಾಪ್ಟನ್ ಇಲಾಖೆಯ ಎ ಎಸ್ ಐ. ಗೆ ಲಂಚ ಕೊಡಲು ಮುಂದೆ ಬಂದ ಸೈದ್ ಮೊಹದೀ ಪಾಷಾ ಎಂಬಾತ ನಿಗೆ ೩ ವಾರ ಸಜಾ ೫೦ ರೂ. ಜುಲ್ಮಾನೆ ವಿಧಿಸಲಾಯಿತು.

ಆಹಾರ ಇಲಾಖೆ ಡೈರೆಕ್ಟರ್ ಜನರಲ್

ಭಾರತ ಸರ್ಕಾರದ ಆಹಾರ ಇಲಾಖಾ ಡೈರೆಕ್ಟರ್ ಜನರಲ್ ಆದ ಡಾ|| ಬಿ ಆರ್. ಸೇನ್ ರವರು ಕೋಚಿನ್ ಸಂಸ್ಥಾನದಿಂದ ಬೆಂ ಗಳೂರಿಗೆ ೬ ದಿವಸ ಆಕಾಶ ಮಾರ್ಗವಾಗಿ ಬಂದರು.

ಗ್ರಾಮ ಕೈಗಾರಿಕೆ ಅ|| ಡೈರೆಕ್ಟರ್

ಭದ್ರಾವತಿಯ ಶ್ರೀ ಕೆ. ಎಲ್ ನಂಜಪ್ಪ ನವರನ್ನು ಗ್ರಾಮ ಕೈಗಾರಿಕಾ ಅಸಿಸ್ಟೆಂಟ್ ಡೈರೆಕ್ಟರನ್ನಾಗಿ ಮಾಡಲಾಗಿದೆ.

ವಾರ್ಷಿಕೋತ್ಸವ

ಸ್ವಂ ಸು] ತಿಪಟೂರು ೨೭

ತಿಪಟೂರು ಟೌನ್ ಹೋಟೆಲುಗಳಲ್ಲೆ ಲ್ಲಾ ಪ್ರಸಿದ್ಧವಾದ ಮದ್ರಾಸ್ ಹೋಟೆ ಲಿನವರು ತಾ|| ೨೭-೮-೪೪ ನೇ ಶನಿವಾರ ವಾರ್ಷಿಕೋತ್ಸವವನ್ನು ಬಹು ವಿಜೃಂಭಣೆ ಯಿಂದ ನಡೆಸಿದರು. ಪ್ರಾತಃಕಾಲದಿಂದ ರಾತ್ರಿ ೧೦ರವರೆಗೂ ಬಂದ ಜನರಿಗೆಲ್ಲ ಜಲೇ ಬಿಯನ್ನು ಕೊಟ್ಟು, ಗಂಧ, ಪುಷ್ಪ, ತಾಂ ಬೂಲಾದಿಗಳಿಂದ ಉಪಚರಿಸಿದರು. ಇಲ್ಲದೆ ಅಲ್ಲಿ ಬಾಲಿಕಾ ಪಾಠಶಾಲೆಯಲ್ಲಿ ೨೦೦-೩೦೦ ಮಂದಿ ಮಕ್ಕಳಿಗೆ ಕೇಸರೀಭಾತನ್ನು ಹಂಚಿದರು.

ತಿದ್ದುಪಡಿ

ಸ್ವಂ.ಸು] ಕೃಷ್ಣರಾಜನಗರ ೨೮

೨೭ ತಾ|| ಪತ್ರಿಕೆಯಲ್ಲಿ ಮುನಿಸಿಪಲ್ ಚುನಾವಣೆಗೆ ೬೦ ಜನ ನಿಂತಿದ್ದಾರೆಂದು ಪ್ರಕಟವಾಗಿದೆ. ನಿಂತಿರುವ ಉಮೇದು ವಾರರು ೬೦ ಅಲ್ಲ ೩೦ ಜನ ಮಾತ್ರ ನಿಂತಿ ದ್ದಾರೆ.

ಮೆಥೋಡಿಸ್ಟ್ ಮಿಷನ್ ಸ್ಕೂಲ್ ಡೇ

ಮೈಸೂರು ೨೮

ವೆಸ್ಲೆಯಂಡ ಹೈಸ್ಕೂಲಿನ ಪ್ರಿನ್ಸಿಪಾಲರ ಮತ್ತು ಮಿ|| ಎಂ. ರಾಮಶೇಷಯ್ಯಂಗಾರ್ಯ ರೆಂಬುವರ ಲೇಖನಗಳನ್ನು ಪಡೆದ ಒಂದು ಪ್ರಕಟಣೆಯು ಆಂಗ್ಲ ಭಾಷೆಯಲ್ಲಿ ಪ್ರಕ ಟಿಸಲ್ಪಟ್ಟ ದಿನವಿಯಲ್ಲಿ ಹೈಸ್ಕೂಲ್ ಡೇ ಆ ಚರಣೆ ಮಾಡುವ ಒಂದು ಕಾರಣವನ್ನು ಪ್ರಧಾನವಾಗಿಟ್ಟುಕೊಂಡಿರುತ್ತಾರೆ. ಒಂ ದೇ ಶಾಲೆಯ ಉಪಾಧ್ಯಾಯರಾಗಿದ್ದ ಇನ್ನೂ ಹುದ್ದೆಗಳಲ್ಲಿರುವ ಮೂರು ಜನರ ಭಾವಚಿ ತ್ರಗಳನ್ನು ಅನಾವರಣಮಾಡಬೇಕೆಂದೂ, ಈ ಸಂಬಂಧವಾಗಿ ಧನ ಸಂಗ್ರಹಕ್ಕೆ ಪ್ರ ಯತ್ನವೂ ನಡೆದಿರುತ್ತದೆ. ಇದಕ್ಕಾಗಿ ೩ ಅಥವಾ ೪ ಸಾವಿರ ರೂ. ಗಳನ್ನು ಸಂಗ್ರಹಿ ಸುವ ಚಟುವಟಿಕೆಗಳು ಕಂಡುಬರುತ್ತವೆ.

ಕೇವಲ ಒಂದು ಶಾಲಾ ದಿನಾಚರಣೆಯ ನ್ನು ಮಾಡಲು ಈ ಬಗೆಯ ಧನ ಸಂಗ್ರಹ ಪ್ರಯತ್ನವು ಸಮರ್ಥನೀಯವೂ ಪ್ರೋತ್ಸಾಹನೀಯವೂ ಆಗದು. ಈ ಶಾಲೆಯ ಲ್ಲಿ ಸ್ಪೋರ್ಟ್ಸ್ ಮತ್ತು ಲೈಬ್ರರೀ ಫೀಜು ವ ಸೂಲು ಮಾಡಲಾಗುತ್ತದೆ. ಈ ಕಾಲ ಕ ಷ್ಟಕಾಲ. ಜನರು ಅನ್ನ-ಬಟ್ಟೆಗೇ ಕಷ್ಟ ಪಡುತ್ತಿರುತ್ತಾರೆ. ಶಾಲಾ ವಾರ ಪ್ರವಚ ನಗಳಿಗೆ ಈ ಕಾಲದ ಸ್ಕೂಲ್ ಡೇ ಆಚ ರಣೆಯಿಂದ ತುಂಬಾ ತೊಂದರೆ. ಶಾಲಾ ಕಾರ್ಯಗಳು ವರ್ಷಾಂತ್ಯಕ್ಕೆ ಮುಗಿಸಲ್ಪಡು ವವೇ ಹೊರತು ಈಗ ಪೂರ್ತಿಯಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಈಗ ಮತ್ತು ಮುಂದಿನ ಮೂರು ತಿಂಗಳುಗಳು ಅಮೂಲ್ಯವಾಗಿರು ತ್ತವೆ! ಸ್ಕೂಲ್ ಡೇ ಆಚರಣೆಯು ನಡ ದಲ್ಲಿ ಸಾವಿರಾರು ರೂಪಾಯಿಗಳನ್ನು ಜನ ರಿಂದ ವಸೂಲ್ಮಾಡುವ ಅಥವ ಖರ್ಚು ಮಾಡುವ ಕಾರ್ಯಗಳು ಖಂಡನೀಯಗ ಳಾಗಿವೆ. ಈಗ ಯಾರ ಭಾವಚಿತ್ರಗಳ ಅ ನಾವರಣ ನಡೆಯಬೇಕೆಂದಿರುತ್ತದೋ ಅ ವರ ವಿಚಾರದಲ್ಲಿ ತುಂಬ ಭಿನ್ನಾಭಿಪ್ರಾಯ ಗಳುಂಟು. ಈ ಎಲ್ಲಾ ಕಾರಣಗಳಿಂದಲೂ ಸ್ವಾರ್ಥ ಸಾಧನೆಯ ಭಾರೀ ಪ್ರದರ್ಶನದ ಈ ಬಗೆಯ ಸ್ಕೂಲ್ ಡೇ ಆಚರಣೆಯನ್ನು ತಡೆಯಬೇಕಾಗಿರುತ್ತದೆ-ಚ ಸ್ಕೂಲ್‌ಬಾಯ್

ಪೌರಸಭೆಗೆ ಉಪಾಧ್ಯಕ್ಷರು

ಸ್ವಂ ಸು] ಹೊಳೇನರಸೀಪುರ ೨೮

ಹೊಳೇನರಸೀಪುರದ ಪುರಸಭೆಯ ಉ ಪಾಧ್ಯಕ್ಷ ಚುನಾವಣೆಯು ನಿನ್ನೆ ನಡೆದು ಕಾಂಗ್ರೆಸ್ ಪಕ್ಷದ ಶ್ರೀ ಕೆ. ಮುತ್ತಣ್ಣನವ ರು ಚುನಾಯಿತರಾದರು. ಶ್ರೀ ಜ. ವಿ. ರುದ್ರಪ್ಪಸ್ವಾಮಿ, ಜೆ ಪಿ ಪುಂಡರೀಕಶೆಟ್ಟಿ ಮತ್ತು ಮಿ|| ಮಹಮದಲ್ಲಿ ಬೇಗ್‌ರೂ ಸ್ಪ ರ್ಧಿಸಿದ್ದರು.

ಇನ್ನೆಷ್ಟು ಬಾರಿಗಳಿವೆ; ನೀವೇ ನೋಡಿ

ಬೊಂಬಾಯಿಯಲ್ಲಿ ಸಂಗತಿಯೊಂದು ಹೊರಕ್ಕೆ ಬಂದಿದೆ. ಬಿಳಿಯ ಮನುಷ್ಯ ನೊಬ್ಬನು ಗಾಲ್ಫ್ ಆಟವನ್ನು ಪೂರೈಸಿ ಕೊಂಡು ಕಾರಿನಲ್ಲಿ ವಾಪಸು ಬರುತ್ತಾ ಇ ದ್ದನು. ದಾರಿಯಲ್ಲಿ ಉತ್ತಮವಾದ ಉ ಡುಪು ಧರಿಸಿದ ಭಾರತೀಯನು ಕೇಳಿಕೊಂ ಡುದುದರ ಮೇಲೆ ಕಾರಿನಲ್ಲಿ ಕೂಡಿಸಿಕೊಂ ಡನು. ಇಳಿಯುವ ಸಮಯದಲ್ಲಿ ಆತನು ಕಾರಿನ ಯಜಮಾನನನ್ನು ವಂದಿಸಿ, ಕೃತ ಜ್ಞತೆಗಾಗಿ ಆತನಿಗೆ ಏದು ವಿಷಯಗಳ ನ್ನು ತಿಳಿಸುತ್ತೇನೆಂದ. ಮೊದಲನೇ ಆತ ನ ಕಾರು ಕೊಂಚ ಕಾಲದಲ್ಲಿಯೇ ಒಂದು ರ ವನನ್ನು ಸಾಗಿಸಬೇಕಾದ ಪ್ರಸಂಗ ಒದಗುತ್ತದೆ. ಇದು ಸಂಭವಿಸಿದ ಆ ವಾರಗಳಲ್ಲಿ ಸರಿಯಾಗಿ ಯುದ್ಧವು ಮುಕ್ತಾ ಯವಾಗುತ್ತದೆ, ಹೀಗೆಂದು ಹೇಳಿ ಆತನು ಹೊರಟು ಹೋದನು. ಕಳೆದ ತಿಂಗಳು ೬೦ ರಲ್ಲಿ ಅದೇ ಬಿಳಿಯ ಮನುಷ್ಯನು ತನ್ನ ಕಾರಿನಲ್ಲಿ ಅದೇ ರಸ್ತೆಯಲ್ಲಿ ಬರುತ್ತಿದ್ದಾಗ, ದಾರಿಯಲ್ಲಿ ಆತನ ಕಾರಿನ ಸಹಾಯ ಕೇಳ ಲಾಯಿತು. ಆಸ್ಪತ್ರೆಗೆ ಒಂದು ಶವವನ್ನು ತ ದ ಕೇಳಿಕೊಂಡು ಕಳ ಹಿಸಬೇಕಾಗಿತ್ತೆಂದು ಕಾರು ತೆಗೆದುಕೊಳ್ಳಲ್ಪಟ್ಟಿತು. ದಾರಿಯ ಲ್ಲೇ ಮನುಷ್ಯನಿಗೆ ಮೃತ್ಯು ಸಂಭವಿಸಿತು. ಇದು ನಿಜವಾಯಿತು. ಇನ್ನು ಅದು ಹೇಗೆ?

ದೋಣಿ ಮುಳುಗಿ ಅನಾಹುತ

೨೫ರ ದ್ವಿತೀಯ ಬಾಲುಮೆಯಲ್ಲಿ ಹೋಗುತ್ತಿ ದ್ದ ದೋಣಿಯೊಂದು ಮುಳುಗಿ ೧೧೯ ಜ ನರು ಪತ್ತೆಯಿಲ್ಲವಾಗಿದ್ದಾರೆ. ದೋಣಿ ಯಲ್ಲಿ ೧೩೦ ಮಂದಿ ಕುಳಿತಿದ್ದರು. ಹ ಲವರು ಮಾತ್ರ ಈಜಿಕೊಂಡು ತಪ್ಪಿಸಿ ಕೊಂಡರು. ಉಳಿದವರ ಗತಿಯೇನಾಯಿ ತೊ ತಿಳಿದಿಲ್ಲ.

MEDICINES

Take your requirements from

RAGHULAL & CO.,

1748, Sayaji Rao Road,

(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ,

1748, ಸಯ್ಯಾಜೀರಾವ್ ರೋಡ್, (ಮೈಸೂರು ಹಾಲ್ ಮಹಡಿ), ಮೈಸೂರು.

ಒಪೇರಾ ಟಾಕೀಸ್

ಅಮೋಘ **2** ನೆಯ ವಾರ

28-8-44 ರಿಂದ

ಮಾಲತಿ : ನಾಗಯ್ಯ

ಮಧುರಂ - ಕೃಷ್ಣನ್ ಪಾತ್ರವಹಿಸಿರುವ

ಭಾಗ್ಯಲಕ್ಷ್ಮಿ

(ತೆಲುಗು) ಶ್ರೀ ಚಿತ್ರ

Edited, printed and published by A. R. Nagarajan, at the Sadhvi Press, D. Subbiah Road, Mysore.

೧೫ ಜನ ಗಂಡಂದಿರು

ಹದಿನೈದು ಜನ ಪತಿಗಳನ್ನು ಹೊಂದುವ ಸೌಭಾಗ್ಯ ಯಾರಿಗೆ ಉಂಟು? ಯಾವ ಗಂಡನೊಡನೆಯೂ ವಿವಾಹ ವಿಚ್ಛೇದನವಿಲ್ಲ. ಅವರಲ್ಲಿ ಹಲವರ ಯುದ್ಧ ಭಕ್ತನಾಗಿ ಹೋರಾಟ ನಡೆಸುವಳು. ಇಂತಹ ವ್ಯಕ್ತಿಯೊಂದನ್ನು ಸಂಯುಕ್ತ ಸಂಸ್ಥಾನದ ಪೋಲೀಸರು ಹಿಡಿದಿದ್ದಾರೆ. ೧೯೩೨ ರಿಂದಲೂ ಆಕೆಗೆ ಇದೇ ಕೆಲಸ ಈಗ ಆಕೆಗೆ ೩೫ ವರ್ಷ. ಕೋರ್ಟಿನಲ್ಲಿ ಆಕೆಯು ತನ್ನ ಗಂಡಂದಿರೆಲ್ಲರೂ ತನ್ನನ್ನೇ ಪ್ರೀತಿಸುತ್ತಾರೆಂದು ಹೇಳಿಕೊಳ್ಳುತ್ತಾಳೆ. ಆಕೆ ಕಡೆಯ ಗಂಡ ತಾನು ಕಂಡಿರುವ ಸ್ತ್ರೀಯರಿಗಿಂತಲೂ ಇವಳೇ ಉತ್ತಮಳೆನ್ನುತ್ತಾನೆ.

ಮೂತ್ರದಲ್ಲಿ ಸಕ್ಕರೆ ರೋಗಕ್ಕೆ ಔಷಧಿ

ಡಯಾಬೆಟಿಸ್ ಎಂಬ ಮೂತ್ರದಲ್ಲಿ ಸಕ್ಕರೆ ಹೋಗುವ ರೋಗವು ನಿವಾರಣೆಯಾಗುವ ಇನ್ಸುಲಿನ್ ಎಂಬ ಔಷಧವನ್ನು ಭಾರತದಲ್ಲಿ ಇದೇ ಪ್ರಥಮತಃ ಮಾಡಲಾಗುವುದು. ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಬಯೋ-ರಸಾಯನ ಶಾಸ್ತ್ರಜ್ಞರು ಪರಿಶೋಧನೆ ನಡೆಸಿ ಇದನ್ನು ಕಂಡು ಹಿಡಿದಿದ್ದಾರೆ.

ಒಂದು ನಿಮಿಷ ಮಾತ್ರ ಶಿಕ್ಷೆ

ಕಾನೂನು, ಉದ್ಯೋಗ ಹುಡುಕಿಕೊಂಡು ಹೋಗುವವರನ್ನೂ ಬಿಡುವುದಿಲ್ಲ. ಕೆನಡಾ ರಾಜ್ಯದ ನೈಸರ್ಗಿಕನೊಬ್ಬನ ಸ್ತ್ರೀಯು ಸಂಯುಕ್ತ ಸಂಸ್ಥಾನದಲ್ಲಿ ಉದ್ಯೋಗವನ್ನು ಹುಡುಕಲು ಆ ದೇಶಕ್ಕೆ ಹೋಗಲು ಆಕೆಯನ್ನು ಫೆಡರಲ್ ನ್ಯಾಯಾಸ್ಥಾನದ ವಿಚಾರಣೆಯಲ್ಲಿ ಹಾಜರ್ಮಾಡಿದಾಗ ಆಕೆಗೆ ೬೦ ಸೆಕೆಂಡುಗಳ ಜೈಲು ಶಿಕ್ಷೆ ವಿಧಿಸಲ್ಪಟ್ಟಿತು.

ಯು. ಪಿ. ಯಲ್ಲಿ ಕಾಲರಾ

ಸಂಯುಕ್ತ ಪ್ರಾಂತದಲ್ಲಿ ಕಾಲರಾ ಉಪದ್ರವದಿಂದ ೧೯ ನೇ ತಾ|| ನ ವರೆಗೆ ೧೧೦೦೦ ಜನಕ್ಕೆ ರೋಗ ತಗುಲಿ ೬೫೨ ಜನರು ಮರಣ ಹೊಂದಿದರು. ಬಿಹಾರಿನಲ್ಲಿ ಅಂಟು ಜಾಡ್ಯ ಪರಿಹಾರವನ್ನು ಕುರಿತು ಗವರ್ನರ್ ರೊಂದಿಗೆ ಬಾಬು ಅನುಗ್ರಹ ನಾರಾಯಣ ಸಿಂಹರು ಭೇಟಿ ನಡೆಸಿದರು.

ನಾಟಕರತ್ನ ಜಿ. ಹೆಚ್. ವೀರಣ್ಣನವರ

ಗುಬ್ಬಿ ಥಿಯೇಟ್ರಿಕಲ್ ಕಂಪೆನಿ

ಟೌನ್‌ಹಾಲ್ ಮೈದಾನದ

ಸ್ವಂತ ಧನಲಕ್ಷ್ಮೀ ಥಿಯೇಟರಿನಲ್ಲಿ

ತಾ|| 29-8-44 ಮಂಗಳವಾರ ಮತ್ತು

ತಾ|| 30-8-44 ಬುಧವಾರ

ರಾತ್ರಿ 10-30 ಕ್ಕೆ

ಸಂಪೂರ್ಣ **ಶ್ರೀ ಕೃಷ್ಣಲೀಲ**

ಎಂಬ ನಾಟಕವನ್ನು ಅಭಿನಯಿಸುವರು.

M. C. M. Swamy,

Manager, Gubbi Co.,

ಬೇಕಾಗಿದೆ

ವೀರಶೈವ ಲಿಂಗಾಯಿತರು, ಸ್ಥಳವವರ, ಮತ್ತು ರೇಣುಕಾಚಾರ್ಯರ ಗೋತ್ರದ ಅನು ಕೂಲಸ್ಥರಿಗೆ, 14-16 ವರ್ಷದ ಕನ್ಯಾ ರತ್ನವು ಬೇಕಾಗಿದೆ. ವಿವರ ಸಾಧ್ವಿ ಆಫೀ ಸಿನಲ್ಲಿ ತಿಳಿಯಬಹುದು.

ಸ್ತ್ರೀಯರ ಸೌಕರ್ಯಕ್ಕೆ

ಇಲ್ಲಿ ೧-೧-೧೯೪೪ ರಿಂದಲೇ ಪ್ರತ್ಯೇಕವಾಗಿ ಸ್ತ್ರೀಯರಿಗೆ ಕೊಡುವ ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಪುಟ್ಟಪ್ಪ, ದಿವಾನ್‌ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ನವ ಶಂಕರರ್ಸೆಟ್ ಮೊದಲುಗೊಂಡು, ಎಲ್ಲಾ ಕಡೆ ಎಲ್ಲಾ ಮೊದಲಾದ ಸ್ಥಳ ಗಳಲ್ಲಿ ನಾವು ಪ್ರಯಾಣಿಗರ ಉಪಯೋಗಕ್ಕಾಗಿ ಇಟ್ಟು ಮತ್ತು ಕಪ್ಪಿನಲ್ಲಿ ಕೊಡುತ್ತೇವೆ.

ಸಂಪುಟ ೩] ಬುಧವಾರ ೩೦-೮-೪೪ [ಸಂಚಿಕೆ ೩೧

ಪಿಟೇನರು ಡಿಗಾಲರಿಗೆ ರಾಜ್ಯಭಾರ ವಹಿಸಿದರೇ

ಅಮೆರಿಕನ್ ಸೇನೆಗಳ ಮೇಲೆ ಜರ್ಮನ್ ಆರೋಪಣೆ

ಜಪಾನ್-ಜರ್ಮನಿಗಳ ಸಮಾಲೋಚನೆ

ಮೈಸೂರು ಜಿಲ್ಲಾ ರಾಷ್ಟ್ರೀಯ ರಕ್ಷಣಾಬ್ದಲ

ಮೈಸೂರು ೩೦

ಎ.ಜಿ ೦.೫ ಸಿ ಶ್ರೀ ಕಂಠಯ್ಯನವರು ಇದೇ ಮಾಸ ೨೫, ೨೬, ೨೭ ನೇ ತಾ॥ ಗಳಲ್ಲಿ ಟಿ ನರಸೀಪುರದ ತಾಲ್ಲೋಕಿನಲ್ಲಿ ಸಂಚರಿಸಿ ಕೃಷ್ಣಾಪುರ, ಮಾದಿಕಶೋರಿಪಿಟ್ಟ ದಹಳ್ಳಿ ತಲಕಾಡು ಮುಂತಾದ ಗ್ರಾಮಗಳಿಗೆ ಭೇಟಿಯಿತ್ತು ಪ್ರಚಾರ ಕಾರ್ಯವನ್ನು ನಡೆಸಿದರು. ಕೃಷ್ಣಾಪುರ ಮತ್ತು ಮಾದಿಕಶೋರಿ ಬೆಟ್ಟದ ಹಳ್ಳಿಯಲ್ಲಿ ಸದರೀ ಗ್ರಾಮಗಳಲ್ಲಿ ಸರ್ಕಾರ ಡಿಪೋವನ್ನು ಕೊಡಿಸಬೇಕೆಂದು ಸರ್ಕಾರದವರನ್ನು ಕೋರುವ ನಿರ್ಣಯಗಳಾದವು

ಸಂತಾಪ ಸೂಚಕ ಸಭೆ

ವಿಶ್ವವಿದ್ಯಾನಿಲಯ ಸಂಘದ ಆಡಳಿತ ಮಂಡಳಿ ಸದಸ್ಯರೂ, ವಿದ್ಯಾರ್ಥಿ ಮುಖಂಡರೂ ಆದ ಶ್ರೀ ಎ ರಾಮಭಟ್ಟರ ನಿಧನದ ಬಗ್ಗೆ ಸಂತಾಪ ಸೂಚಿಸಲು ಮಹಾರಾಜಾ ಕಾಲೇಜಿನ ಒಳ ಆವರಣದಲ್ಲಿ ವಿದ್ಯಾರ್ಥಿಗಳ ಸಭೆ ಸೇರಿದ್ದಿತು

ಶ್ರೀ ಬ್ರಹ್ಮಾನಂದರು ಶ್ರೀ ರಾಮಭಟ್ಟರ ನಿಧನದ ಸುದ್ದಿಯನ್ನು ತಿಳಿಸಿದರು. ವಿ॥ ಸಂಘದ ಕಾರ್ಯದರ್ಶಿಗಳಾದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ದಿವಂಗತರ ಗುಣಗಾನ ಮಾಡಿ, ಅವರ ಸೇವೆಯನ್ನು ಸಭೆ ಗಮನಕ್ಕೆ ತಂದೂ ಸಂತಾಪ ಸೂಚಕ ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದರು ಸಭಿಕರು ೨ ನಿಮಿಷಗಳ ಕಾಲ ಮೌನವಾಗಿನ್ನು ಮುಕ್ತಾಯವಾಯಿತು

ಕಾಲೇಜು ೧ ಘಂಟೆ ಮುಚ್ಚಲ್ಪಟ್ಟಿತ್ತು

ಮಹಾರಾಜಾ ಮತ್ತು ಇಂಟರ್ ಕಾಲೇಜುಗಳು ಈ ದಿನ ಕೊನೆ ೧ ಗಂಟೆ ಕಾಲ ಶ್ರೀ ರಾಮಭಟ್ಟರ ನಿಧನದ ಪ್ರಯುಕ್ತ ಮುಚ್ಚಲ್ಪಟ್ಟಿದ್ದವು

ಪೌರಸಭೆ ಉಮೇದುವಾರರು

ಸ್ವಂ ಸು] ಕೃಷ್ಣರಾಜನಗರ ೩೦

ಈ ಊರಿನ ಮುನಿಸಿಪಲ್ ಚುನಾವಣೆಗೆ ಕೆಳಗೆ ಕಂಡ ಮಹನೀಯರು ಉಮೇದುವಾರರಾಗಿ ನಿಂತಿರುವರು.—

ಶ್ರೀಗಳಾದ ಆರ್ ಬಿ ಪುಟ್ಟಬಸಪ್ಪ, ಟಿ ವೆಂಕಟೇಶಯ್ಯಂಗಾರ್, ವೈ. ಎಸ್ ನಂಜಪ್ಪ, ವೈ ಎನ್ ಶ್ರೀನಿವಾಸರಾವ್, ಬಿ ವಿ ಅಶ್ವತ್ಥನಾರಾಯಣಶೆಟ್ಟರು, ಬಿ ವೈ. ವಿಶ್ವಲಿಂಗಶೆಟ್ಟಿ ವಿ, ಆರ್ ನಾರಾಯಣರಾವ್, ಪಟೇಲ್ ರುದ್ರಪ್ಪನವರು, ಗೋಪಾಲಾಚಾರ್, ವೈ ಎಸ್ ಸೀತಾರಾಮಯ್ಯನವರು, ಪಟೇಲ್ ನಂಜುಂಡಶೆಟ್ಟಿ ಎಸ್ ವಿ ಕಾರ್ ತಮ್ಮಯ್ಯ, ನಟ್ಟಿಗಾರ್ ಚನ್ನಮಲ್ಲಶೆಟ್ಟಿ, ಹೆಚ್. ಬಿ ನಂಜುಂಡಯ್ಯನವರು, ಬಿ ಬಸವರಾಜಪ್ಪನವರು, ಬಿ ಎಸ್. ಮಾದಪ್ಪನವರು, ಎ. ಟಿ. ರಾಮಯ್ಯನವರು, ವೈ ಆನಂದಶೆಟ್ಟಿ, ಕೆ ಸಿ ರಾಮಶೆಟ್ಟಿ.

ಗಾಂಧಿ-ಜಿನ್ನಾ ಭೇಟಿ

ಗಾಂಧಿ ಜಿನ್ನಾ ರವರ ಭೇಟಿಯು ಸೆಪ್ಟಂಬರ್ ೭ ನೇ ತಾರೀಖಿನ ದಿನ ನಡೆಯಬಹುದು ಶ್ರೀ॥ ರಾಜಗೋಪಾಲಾಚಾರಿ, ಸಪ್ರೂ ಮೊದಲಾದ ನಾಯಕರು ಶ್ರೀ ಗಾಂಧಿ ಜಿನ್ನಾ ರಾಜಕೀಯ ಪರಿಸ್ಥಿತಿ ಬಗ್ಗೆ ಸಮಾಲೋಚನೆ ನಡೆಸುವರು

ಫ್ರಾನ್ಸಿನ ರಾಜ್ಯಭಾರ ಡಿಗಾಲರಿಗೆ ಒಪ್ಪಿಸಲಾಯಿತು

ಡಿಗಾಲರು ಪ್ಯಾರಿಸ್ ನಗರ ಪ್ರವೇಶ ಮಾಡಿದನಂತರ ಚರ ತ್ರೀಯವಾದ ಸಮಾಚಾರಗಳು ನಡೆಯುತ್ತಿವೆ. ಮಾರ್ಷಲ್ ಪಿಟೇನರು ಫ್ರಾನ್ಸಿನ ರಾಜ್ಯಭಾರವನ್ನು ಡಿಗಾಲರಿಗೆ ಕ್ರಮ ಪ್ರಕಾರ ಒಪ್ಪಿಸುವ ಹಕ್ಕನ್ನು ಒಬ್ಬ ಮಾತ್ರ ಹೊಂದಿರುವ ಫ್ರೇಮ ರ ಅನುವರ್ತಿಯೊಬ್ಬರ ವಶಕ್ಕೆ ಒಪ್ಪಿಸಿದುದನ್ನು ಈಗ ಬಹಿರಂಗ ಪಡಿಸುವರೆಂದು ತಿಳಿಯಬರುತ್ತದೆ ವಿಚಿಲರು ಫ್ರೇಮರನ್ನು ಸಂದರ್ಶಿಸಿದುದು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆಯೆಂದೂ, ಡಿಗಾಲರ ತಾತ್ಕಾಲಿಕ ಸರಕಾರವನ್ನು ಮಿತ್ರರಾಷ್ಟ್ರದ ಸರಕಾರವೆಂದು ಕರೆಯಲು ಯಾವ ಅಭ್ಯಂತರವೂ ಇಲ್ಲವೆಂದೂ ಇನ್ನು ಮುಂದೆ ಮಿತ್ರರಾಷ್ಟ್ರಗಳೊಂದಿಗೆ ಬೆರೆತು ಫ್ರಾನ್ಸ್ ತನ್ನ ಹಿಂದಿನ ಘನತೆಯನ್ನು ಪಡೆಯುವುದೆಂದು ಹೇಳುತ್ತಿದ್ದ.

ಟ್ರಾನ್ಸಿಲ್ವೇನಿಯಾ ಕೊಡಿಸುವರೆ?

ರುಮೇನಿಯಾ ರಾಜ್ಯವು ಮಿತ್ರ ಪಕ್ಷಕ್ಕೆ ಸೇರಿರುವುದೆಂಬುದನ್ನು ಮಿತ್ರ ರಾಜ್ಯಗಳು ಒಪ್ಪುವುವೆಂದೂ, ಟ್ರಾನ್ಸಿಲ್ವೇನಿಯಾ ದೇಶವನ್ನು ಹಂಗೇರಿಯಿಂದ ಪತ್ತು ಪುನಃ ವಾಪಸು ಕೊಡಿಸುವರೆಂದೂ ತಿಳಿಯಬರುತ್ತದೆ

ಬಲ್ಗೇರಿಯಾ ವಿಷಯವಾಗಿ ಮಿತ್ರರು ಸ್ವಲ್ಪ ಕಠಿಣವಾಗಿಯೇ ನಡೆದುಕೊಳ್ಳುವರು ಕಾರಣ, ಬಲ್ಗೇರಿಯಾವು ಜರ್ಮನಿ ಜೊತೆ ಸೇರಿಕೊಂಡಿತ್ತು

ಕಾರ್ಪೆಥಿಯನ್ ಬುಡಕಟ್ಟಿನಲ್ಲಿ ರಷ್ಯನರು

ಕಾರ್ಪೆಥಿಯನ್ ಪರ್ವತ ಶ್ರೇಣಿಗಳ ಬುಡಕಟ್ಟಿನಲ್ಲಿ ರಷ್ಯನರು ಗಾಲಿಟ್ಜಿಯ ದ ಕೈವಶ ಪಡಿಸಿದ್ದಾರೆ ಟ್ರಾನ್ಸಿಲ್ವೇನಿಯಾದ ಕಡೆಗೆ ಸೇನೆಗಳನ್ನು ನುಗ್ಗಿಸುವ ರಷ್ಯನರ ಮೇಲೆ ಜರ್ಮನರು ಪ್ರತಿ ಧಾಳಿ ಮಾಡಿದರು ಈ ಪ್ರತಿ ಧಾಳಿಗಳು ಫಲಿಸದೆ ಹಿಮ್ಮೆಟ್ಟಿದವು ... ಜರ್ಮನ್ ಪ್ರಕಟಣೆ ತಿಳಿಸುತ್ತದೆ

ಜಪಾನ್ ಮೇಲೆ ಮತ್ತೆ ಧಾಳಿ

ಜಪಾನ್ ದ್ವೀಪಗಳ ಮೇಲೆ ವಿಮಾನಗಳಿಂದ ಬಾಂಬುಗಳನ್ನು ... ಹಾಕಿದವು.

ಅಮೆರಿಕನ್ನರ ಮೇಲೆ ಜರ್ಮನ್ ಆರೋಪಣೆ

ಸೇಂಟ್ ಮಾಲೊ ಕೋಟೆಯನ್ನು ಮುತ್ತಲು ಹೋದ ಅಮೆರಿಕನ್ ಟ್ಯಾಂಕುಗಳು ಜರ್ಮನ್ ಯುದ್ಧ ಬಂದಿಗಳನ್ನು ಗುರಾಣಿಗಳಂತೆ ಮಾಡಿಕೊಂಡು ಧಾಳಿ ಮಾಡಿದರೆಂದು ಜರ್ಮನ್ ಸರಕಾರವು ಆರೋಪಿಸಿ ಸಂಯುಕ್ತ ಸಂಸ್ಥಾನಕ್ಕೆ ತೀವ್ರ ಪ್ರತಿಭಟನೆ ಕಳುಹಿಸಿದೆ.

ಹಿಂದಿನ ಯುದ್ಧಕ್ಷೇತ್ರವೇ ಈಗಲೂ ರಣಭೂಮಿ

೧೯೧೪-೧೮ರಲ್ಲಿ ನಡೆದ ಮಹಾ ಯುದ್ಧದ ಕ್ಷೇತ್ರಗಳಲ್ಲಿ ಈಗ ಸಂಗ್ರಾಮ ಜರುಗುತ್ತಿದೆ ಮಾರ್ನ್ ನದಿಯ ಮೇಲೆ ಸಾಗುವ ಚಾಟು ... ಅಮೆರಿಕಾ ಮೂರನೇ ಸೇನೆ ... ತಲುಪಿದೆ

ಫಿನ್ಲೆಂಡಿನ ಶಾಂತಿ ಒಡಂಬಡಿಕೆ?

ಸ್ಟಾಕ್‌ಹೋಂ ದಿಂದ ಬರುತ್ತಿರುವ ವರದಿಗಳ ಪ್ರಕಾರ ಫಿನ್ಲೆಂಡ್ ರಷ್ಯದೊಡನೆ ಶಾಂತಿ ಮಾಡಿಕೊಳ್ಳುವ ಸಲುವಾಗಿ ಒಡಂಬಡಿಕೆ ... ಚಿಹ್ನೆಗಳು ಕಂಡುಬರುತ್ತಿವೆ

ಇನ್ನೂ ಭೀಕರ ಕದನವಾಗಬೇಕೇ?

ಯೂರೋಪಿನ ಯುದ್ಧವು ಅತಿ ದಾರುಣವಾಗಿದ್ದೂ, ಇನ್ನೂ ಭೀಕರ ಕದನಗಳು ನಡೆಯಬೇಕಾಗಿವೆಯೆಂದು ದಕ್ಷಿಣ ಆಫ್ರಿಕಾದ ಪ್ರಧಾನಿ ಸ್ಮಟ್ಸರು ಹೇಳಿದ್ದಾರೆ

ಚೀಣರ ಜಯ

ಕ್ವಾಂಟಂಗ್-ಹಾಂಕಾಂಗ್ ರೈಲ್ವೆ ಪಂಕ್ತಿಯನ್ನು ಚೀಣರು ಹೆಂಗ್ಯಾಂಗ್ ಎಂಬ ಸ್ಥಳದಿಂದ ಉತ್ತರಕ್ಕೆ ... ಸ್ವಾಧೀನಪಡಿಸಿಕೊಂಡಿದ್ದಾರೆ

ಮಿ॥ ಫಿಲಿಪ್ಸರು

ವೈಸರಾಯರ ಕಾರಣಗಳಿಗಾಗಿ ಮಿ॥ ವಿಲಿಯಂ ಫಿಲಿಪ್ಸರು ಸ್ವದೇಶಕ್ಕೆ ಹಿಂತಿರುಗಿದ್ದಾರೆಂದು ಸಂಯುಕ್ತ ಸಂಸ್ಥಾನದ ವಿದೇಶಾಂಗ ಇಲಾಖೆಯು ಹೇಳಿದೆ ಅವರು ಇದುವರೆಗೂ ಜನರಲ್ ಐಸನ್‌ಹೋವರ್ ರೊಂದಿಗೆ ಸಲಹೆಗಾರರಾಗಿದ್ದರು. ಮಿ॥ ಫಿಲಿಪ್ಸ್ ಹಿಂದೆ ಭಾರತದಲ್ಲಿ ಅಮೆರಿಕಾ ರಾಯಭಾರಿಯಾಗಿದ್ದರು. ನವದಹಲಿ ... ಕಳುಹಿಸಿದ ಪತ್ರ ... ಮಾಡಿರುವ ... ಎಂದು ... ತಿಳಿಸಿದ್ದಾರೆ.

ಜಪಾನ್-ಜರ್ಮನ್ ಸಂಭಾಷಣೆ

ಯೂರೋಪಿನ ಇತ್ತೀಚಿನ ಬೆಳವಣಿಗೆಗಳನ್ನು ಕುರಿತು ಟೋಕಿಯೋದಲ್ಲಿರುವ ಜರ್ಮನ್ ರಾಯಭಾರಿ ಹೆರ್ ಸ್ಟಾಮರ್ ರವರು ಜಪಾನ್ ವಿದೇಶಾಂಗ ಮಂತ್ರಿ ಮಿ॥ ಮಮೊರು ಶಿಗೆಮಿಟ್ಸುರವರೊಂದಿಗೆ ಸಂಭಾಷಿಸಿದರೆಂದು ತಿಳಿಯಬಂದಿದೆ

ಫ್ರೆಂಚ್ ಯುದ್ಧ ನೌಕೆಗೆ ಪೆಟ್ಟು

ತಯಾರಾಗುತ್ತಿದ್ದ ಕ್ಲೆಮೆಂಕೊ ಎಂಬ ಫ್ರೆಂಚ್ ಯುದ್ಧ ನೌಕೆಗೆ ಮಿತ್ರ ವಿಮಾನಗಳು ಬಾಂಬಿನಿಂದ ಹೊಡೆದು ನಷ್ಟಪಡಿಸಿವೆ. ಇದು ಪೂರ್ತಿಸಿದ್ದರೆ ೩೫ ಸಾವಿರ ಟನ್ನಿನ ನೌಕೆಯಾಗುತ್ತಿತ್ತು.

ವರದಕ್ಷಿಣೆ ವಿರೋಧ ಚಳುವಳಿ

ಸಿಂಧ್ ಪ್ರಾಂತದಲ್ಲಿ ವರದಕ್ಷಿಣೆ ತೆಗೆದುಕೊಳ್ಳಕೂಡದೆಂಬ ಚಳುವಳಿ ಪ್ರಾರಂಭವಾಗಿದೆ. ಇದಕ್ಕೆ ಸಿಂಧ್ ಮಂತ್ರಿ ಮಂಡಲದ ಮಂತ್ರಿಯೊಬ್ಬರು ಮುಂದಾಗಿ ನಿಂತು ಕೆಲಸ ಮಾಡುತ್ತಿದ್ದಾರೆ ಅವಿವಾಹಿತ ಹಿಂದೂ ಕನ್ಯೆಯರು ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ

ರಾಜಧಾನಿಗೆ ದಿವಾನರು

ಸ್ವಂ.ಸು.] ಬೆಂಗಳೂರು ೩೦

ದಿವಾನರು ಈ ಪ್ರಾತಃಕಾಲ ಮೋಟಾರಿನಲ್ಲಿ ರಾಜಧಾನಿಗೆ ಪ್ರಯಾಣ ಮಾಡಿದರು. ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡುವುದಕ್ಕಾಗಿ ಹೋಗಿರುವುದಾಗಿ ತಿಳಿದು ಬಂದಿದೆ ಸೆಪ್ಟಂಬರ್ ೧ ನೇ ತಾರೀಖು ವಾಪಸು ಬರುವರು.

ರೆವಿನ್ಯೂ ಸಚಿವರ ಪ್ರವಾಸ

ರೆವಿನ್ಯೂ ಮತ್ತು ಲೋ ಸಚಿವರು ಕೆಳಗಿನ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಬೇಕಾಗಿದ್ದುದು ರದ್ದಾಗಿ ಅದೇ ಕಾರ್ಯಕ್ರಮವನ್ನು ಈಗ ಅವರು ಸೆಪ್ಟಂಬರ್ ೧ ರಿಂದ ೫ ರವರೆಗೆ ಹಾಕಿಕೊಂಡಿದ್ದಾರೆ

ಸೆಪ್ಟಂಬರ್ ೧ ರ ಮಧ್ಯಾಹ್ನ ರೈಲಿನಲ್ಲಿ ಮೈಸೂರಿಗೆ ಹೊರಡುವರು ೨ ನೇ ತಾರೀಕು ಮೈಸೂರಿನಲ್ಲಿ ಫಿರ್ಯಾದುದಾರರ ದರ್ಶನ ಮತ್ತು ಇನ್ಸ್‌ಪೆಕ್ಷನ್ ನಡೆಸುವರು. ೩ ನೇ ತಾರೀಕು ಟಿ. ನರಸೀಪುರ, ತೊಳ್ಳೆಗಾಲ, ಮಾಂಬಳ್ಳಿ, ಈ ಸ್ಥಳಗಳಿಗೆ ಭೇಟಿ ಕೊಟ್ಟು ಅದೇ ಸಂಜೆ ವಾಪಸು ಬರುವರು ೪ ನೇ ತಾರೀಕು ಮೈಸೂರಿನಲ್ಲಿರುವರು ೫ ನೇ ತಾರೀಕು ಬೆಂಗಳೂರಿಗೆ ವಾಪಸು ಬರುವರು

ಕೇಂದ್ರ ಸರ್ಕಾರದ ಆಹಾರದ ಅಧಿಕಾರಿಗಳು

ಕೇಂದ್ರ ಸರ್ಕಾರದ ಆಹಾರದ ಇಲಾಖೆಯ ಡೈರೆಕ್ಟರುಗಳು ಅನಿರ್ಬಲ ಮಿ॥ ಸೋಮಪ್ಪ ಸೆಟಲ್‌ಮೆಂಟ್‌ಗೆ ... ಈ ಪ್ರಾಂತ್ಯಕ್ಕೆ ಬಂದು ... ಅಧಿಕಾರಿಗಳೊಡನೆ ಮಾತನಾಡಿದರು.

ಸ್ಥಳ ಸಚಿವರ ವಿಮಾನ ಪ್ರವಾಸ

ಸ್ಥಳ ಸಂಸ್ಥೆಗಳ ಸಚಿವರು ಸೆಪ್ಟಂಬರ್ ೩ ನೇ ತಾರೀಕು ಪ್ರಾತಃಕಾಲ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಮಾಡುವರು ... ಕೇಂದ್ರ ... ಸಭೆ ... ಸೆಪ್ಟಂಬರ್ ... ನೇ ತಾರೀಕು ... ವಾಪಸು ಬರುವರು.

ಡಾ|| ಬ್ರಾಮ್ಲಿ ಸನ್ನರ ನಿಧನ

ಮೈಸೂರು ೩೦

ನಿನ್ನೆ ರಾತ್ರಿ [illegible] ಗಂಟೆ ಸಮಯದಲ್ಲಿ [illegible] ಮಿಸೆಸ್ಸನ ರೆಸಿಡೆನ್ಸ್ [illegible] ಬ್ರಾಮ್ಲಿ ಸನ್ನರು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ [illegible] ವರ್ಷ ವಯಸ್ಸಾಗಿತ್ತು.

[illegible] ಬಾಡಿ [illegible] ಆಗಿದೆ. ಅವರನ್ನು ಮನೆಗೆ ಸಾಗಿಸಬೇಕಾಗಿದೆ. ನಾಳೆ ಬೆಳಗ್ಗೆ ಅವರ [illegible] ನಡೆಯುತ್ತದೆ.

ಡಾ|| ಬ್ರಾಮ್ಲಿ [illegible]ರು ೧೯೦೦ ರಲ್ಲಿ [illegible] ಮೆಡಿಕಲ್ ಕಾಲೇಜಿನ [illegible] ಹೊಂದಿದರು. ಇಂಡಿಯಾ ದೇಶಕ್ಕೆ [illegible] ಬಂದಿರುವ ಈವರೆಗೂ [illegible] ಅನೇಕ ವರ್ಷ ಮೈಸೂರು ದೇಶದಲ್ಲಿ [illegible] ಕೆಲಸ ಮಾಡಿದರು.

[illegible] ಪ್ರಭಾವಗಳಲ್ಲೂ [illegible] ಆಸ್ಪತ್ರೆಗಳಲ್ಲಿಲ್ಲ [illegible] ಮಾಡಿರುವ ಪ್ರಸಂಗ [illegible] ಪ್ರಸಂಗ [illegible] ಗ್ರಾಮಗಳನ್ನು [illegible] ಕನ್ನಡ ಭಾಷೆ [illegible] ಕನ್ನಡ ಭಾಷೆಯಲ್ಲಿ ಗ್ರಂಥಗಳನ್ನು [illegible] 'ಧರ್ಮರಾಜ ಚಂದ್ರ' [illegible]

'ಬೋಧಕ ಬೋಧಿನಿ' ಎಂಬ ಮಾಸ [illegible] ವರ್ಷ [illegible] ಪ್ರಕಟವಾಗುತ್ತಿದ್ದ [illegible] ಹಲವು ವರ್ಷಗಳು ಸಂಪಾದಕರಾಗಿದ್ದರು [illegible]

[illegible] ಸ್ತ್ರೀಯರ ವಿಷಯದಲ್ಲಿ ಬ್ರಾಮ್ಲಿ [illegible] ದಯಾರ್ದ್ರ ಹೃದಯರಾಗಿದ್ದರು. [illegible] ಕರ್ತವ್ಯವೆಂದು [illegible] ಸ್ತ್ರೀಯರಿಗೆ [illegible] ಹಲವು [illegible]

[illegible]

ಜೆ. ಪ್ಯಾಮಿದಾಸ್.

ಉಪಾಧ್ಯಕ್ಷರ ಚುನಾವಣೆ

ಸ್ವಂ ವ.] [illegible]

[illegible]

ಪಾನ ಇಲಾಖಾ ಉತ್ಪತ್ತಿ ವಿನಿಮಯ

ಸ್ವಂ.ವ.] ಬೆಂಗಳೂರು ೨೯

ಪಾನದಿಂದ ಬರುವ ಸುಂಕದ ಉತ್ಪತ್ತಿಯನ್ನು ತನ್ನಲ್ಲಿ ಸರಿಯಾಗಿ ಹಂಚಿಕೊಳ್ಳಲು ಮೈಸೂರು ಮತ್ತು ಮದರಾಸು ಸರಕಾರಗಳ ಪರ್ಯಾಲೋಚನೆಯಲ್ಲಿದೆ. ಮದರಾಸಿನಲ್ಲಿರುವ ಕೇಂದ್ರ ಪಾನ ಇಲಾಖಾ ಕಮಿಷನರು ನೆನ್ನೆ ದಿನ ದಿವಾನರೊಂದಿಗೆ ಈ ವಿಷಯವಾಗಿ ಸಂಭಾಷಿಸಿದರು. ವಿದ್ಯಾ ಮಂತ್ರಿಗಳೂ, ಎಕ್ಸೈಜು ಕಮಿಷನರೂ, ಫೈನಾನ್ಸಿಯಲ್ ಸೆಕ್ರೆಟರಿಯವರೂ ಹಾಜರಿದ್ದರು.

ಉದಾರ ದಾನ

೨೩. ಮೂಗು ಮತ್ತು ಗಂಟಲಿನ ವಿಭಾಗವೊಂದನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏರ್ಪಡಿಸಲು ಶ್ರೀ ರಾಮನಾರಾಯಣ ಚಲ್ಲಾರಾಂರವರು, ಆಸ್ಪತ್ರೆಗೆ ನೆನ್ನೆ ದಿವಾನರು ಭೇಟಿಯಿತ್ತ ಸಮಯದಲ್ಲಿ ಅವರ ವಶಕ್ಕೆ ೧೦ ಸಾವಿರ ರೂ. ಗಳನ್ನು ಕೊಟ್ಟರು. ಅಲ್ಲದೇ ಕೆಂಪೇಗೌಡ ರಸ್ತೆಯಲ್ಲಿ ಆಸ್ಪತ್ರೆಯೊಂದನ್ನು ನಿರ್ಮಿಸುವ ಸಲುವಾಗಿ ಇನ್ನು ೧೦ ಸಾವಿರ ರೂ. ಗಳ ವಾಗ್ದಾನ ಮಾಡಿದ್ದಾರೆ.

ವಿದ್ಯಾರ್ಥಿಗಳ ಕೂಟ

ಸಂಸ್ಥಾನದ ವಿದ್ಯಾರ್ಥಿಗಳ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಎಲ್ಲಾ ಹೈಸ್ಕೂಲು ಕಾಲೇಜು ಮತ್ತು ವಿದ್ಯಾರ್ಥಿ ಸಂಘಗಳ ಪ್ರತಿನಿಧಿ ಸಭೆಯು ಚಾಮರಾಜಪೇಟೆ ರೆಡ್ಡಿ ಹಾಸ್ಟೆಲಿನಲ್ಲಿ ಸೆಪ್ಟೆಂಬರ್ ೩ ರಲ್ಲಿ ಸೇರುವುದು.

ಮೋಟಾರಿನಿಂದ ಅಪಮೃತ್ಯು

ನೆನ್ನೆ ಸಂಜೆ [illegible] ಬಾಗಿನ ಕಡೆಯಿಂದ ಬರುತ್ತಿದ್ದ ಮೋಟಾರೊಂದು ವಾಣಿ ವಿಲಾಸ ಸರ್ಕಲ್ ಬಳಿ ಒಬ್ಬ ವೃದ್ಧ ಸ್ತ್ರೀಯ ಮೇಲೆ ಹರಿಯಿತು. ಆಕೆಗೆ ತೀವ್ರ ಗಾಯಗಳಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸುವಾಗ ದಾರಿಯಲ್ಲಿ ಮೃತಿ ಹೊಂದಿದಳು. ಪೋಲೀಸರು ವಿಚಾರಣೆ ನಡೆಸಿ, ತನಿಖೆಯಲ್ಲಿದ್ದಾರೆ.

Edited, printed and published by A. R. Nagarajan, at the Sadhvi Press, D Subbiah Road, Mysore

ಕಾಂಗ್ರೆಸ್ ಜಯ

ವಿ ಬಾ] ಬೇಗೂರು ೨೯

ಬೇಗೂರ ಪಂಚಾಯಿತಿ ಸಭೆಗೆ ಕಾಂಗ್ರೆಸ್ಸಿನವರಾದ ಮ|| ಬಿ. ದಾಸೇಗೌಡ, ಚಿಕ್ಕದಾಸೇಗೌಡ, ಬಿ. ಟಿ. ತಿಮ್ಮೇಗೌಡ, ಬಿ ಕೆ ಶಿವಲಿಂಗಯ್ಯ, ಬಿ ಜೇಮೇಗೌಡ, ಎ ಕೆ. ಯಸ್. ಯಜಮಾನ್ ಮರಿಯಪ್ಪ, ಪಿ. ದೇವೇಗೌಡ ಮತ್ತು ಮರಿಕಾಳೇಗೌಡರೂ ಚುನಾಯಿತರಾಗಿದ್ದಾರೆ. ಮ|| ಚಿಕ್ಕದಾಸೇಗೌಡರು, ಚೇರ್ಮನ್ನರಾಗಿಯೂ, ಮ|| ಬಿ. ಟಿ ತಿಮ್ಮೇಗೌಡರು ಸೆಕ್ರೆಟರಿಯಾಗಿಯೂ ಚುನಾಯಿತರಾಗಿದ್ದಾರೆ.

ಗೃಹದಾನ

ಮ|| ಡಿ. ದೇವೇಗೌಡರು ೫ ಸಾವಿರ ರೂ ಬೆಲೆ ಬಾಳುವ ತಮ್ಮ ಸ್ವಂತ ಕಟ್ಟಡವನ್ನು ಆಸ್ಪತ್ರೆಯನ್ನು ನಿರ್ಮಿಸುವ ನಿಮಿತ್ತ ದಾನ ಮಾಡಿದ್ದಾರೆ. [illegible]ರು ಕಟ್ಟಡ ಕೊಟ್ಟರೆ, ಆಸ್ಪತ್ರೆ ಕೊಡುವುದಾಗಿ ಸರ್ಕಾರ ಹೇಳಿದ್ದಾರೆ. ಅದನ್ನು ನೆರವೇರಿಸಿಕೊಡುವರೆಂದು ಭರವಸೆ ಇಡಲಾಗಿದೆ.

ಮಸೀದಿಯ ಅಪವಿತ್ರತೆ

ಮಕ್ಕಾಯಾತ್ರೆ ಮುಗಿಸಿಕೊಂಡು ಹಿಂತಿರುಗಿದ ಯಾತ್ರಿಕನೊಬ್ಬನು ಪವಿತ್ರವಾದ ದೇವರ ಒಂದು ಮಸೀದಿಯಲ್ಲಿದ್ದಾಗ ಬಿಸಿಲಿನ ತಾಪ ತಡೆಯಲಾರದೆ ವಾಂತಿಯನ್ನು ಮಾಡಿಕೊಂಡನು. ಆದರಿಂದ ಅದು ಅಪವಿತ್ರವಾಯಿತೆಂಬ ಕಾರಣದ ಮೇಲೆ ಖಡ್ಗದಿಂದ ಅವನ ಕೊರಳು ಕತ್ತರಿಸಲಾಯಿತು

ನಾಟಕರತ್ನ ಜಿ.ಹೆಚ್. ವೀರಣ್ಣನವರ

ಗುಬ್ಬಿ ಥಿಯೇಟ್ರಿಕಲ್ ಕಂಪನಿ

ಟೌನ್ ಹಾಲ್ ಮೈದಾನದ ಸ್ವಂತ ಧನಲಕ್ಷ್ಮೀ ಥಿಯೇಟರಿನಲ್ಲಿ

ತಾ|| 30-8-44 ಬುಧವಾರ

ರಾತ್ರಿ 10-30 ಕ್ಕೆ

ಸಂಪೂರ್ಣ ಶ್ರೀ ಕೃಷ್ಣಲೀಲ

ಎಂಬ ನಾಟಕವನ್ನು ಅಭಿನಯಿಸುವರು

M. C. M. Swamy,
Manager, Gubbi Co.,

ಬೆಲೆ ಕಡಿಮೆ ! ಬಣ್ಣ ಗ್ಯಾರಂಟಿ !

— ಮಹಿಳೆಯರಿಗೆ ಮಂಗಳಪ್ರದವಾದುದು —

— ಹೊಸದಾಗಿ ತರಿಸಿರುವ ನಾನಾಬಗೆಯ ಬಳೆಗಳು —

ಜಾಳಿಕೆ, ಅಂದ, ಬಣ್ಣದಲ್ಲಿ ಪ್ರಖ್ಯಾತಿಯಾದುವು

ಮೈಸೂರು ಸಿಲ್ಕ್ ಫಿಲೇಚರಿನ ರಿಬ್ಬನ್‌ಗಳು ನಾನಾ ಬಣ್ಣದವು ಬಂದಿವೆ.

ಸೌಭಾಗ್ಯ ಸ್ಟೋರ್ಸ್, ದೇವರಾಜ ಮಾರ್ಕೆಟ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕೆ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

[illegible]

ಡಿ. ಪುಟ್ಟಯ್ಯ, ದಿವಾನಮಂಡಿ. ದೇವರಾಜ ಮಾರ್ಕೆಟ್, ಮೈಸೂರು

[illegible]

SRI KRISHNARAJENDRA MILLS, LIMITED

MYSORE.

NOTICE IS H[EREBY] GIVEN that the Twenty-fourth Ordinary General Meeting of the Shareholders of the Sri Krishnarajendra Mills Ltd., will be held at the Co-operators' Home, Chamaraja Road, Mysore, on Saturday the 14th October 1944 at 5 p.m., to transact the following business:—

1. To adopt the directors' Report and the Audited statements of Accounts of the Company for the year ended 30th June 1944.

2. To declare a dividend and bonus.

3. To elect two Directors.

4. To appoint Auditors for the current year (1st July 1944 to 30th June 1945) and fix their remuneration.

The Share Transfer Books of the Company will be closed from 23rd September to 15th October 1944, both days inclusive.

By Order of the Board,

Mysore, 19-8-44 } A. N. CHALUVAIYA, Secretary.

N.B:—The final dividend and bonus when declared will be made payable at the Bank of Mysore, Ltd., Mysore, on and after 21st October 1944. In the case of moffusal shareholders, the dividend and bonus totalling Rs. 10 and less will be sent per money order less money order commission to the registered address of the shareholder. The dividend and bonus warrants will be posted to those shareholders whose names stand on the register of members on 23rd September 1944.

Shareholders are requested to immediately advise the Company of any change in their address.

ಸಂಪುಟ ೩] ಗುರುವಾರ ೩೧—೮—೪೪ [ಸಂಚಿಕೆ ೩೨

ಹಂಗೇರಿ ಸರ್ಕಾರ — ರಾಜಿನಾಮೆ ಇತ್ತಿತು

ಕರ್ನಾಟಕ ಪ್ರಾಂತೀಯ ಕಾಂ|| ಸಮಿತಿ ಆಸ್ತಿ ಹರಾಜು

ಜಪಾನಿನೊಡನೆ ಯುದ್ಧ ಹೂಡಲು ಫ್ರಾನ್ಸಿನ ತೀರ್ಮಾನ

ವಿಶ್ವವಿದ್ಯಾನಿಲಯ ಸಂಘ ಮುಚ್ಚಲ್ಪಟ್ಟಿತ್ತು

ಮೈಸೂರು ೩೦

[illegible] ಕ್ಷದ ಆಡಳಿತ ಮಂಡಲಿ ಸದಸ್ಯರಾ [illegible] ರಾಮಭಟ್ಟರ ನಿಧನದ ಗೌರ [illegible] ಗಿ ನಿನ್ನೆ ಪೂರ್ತಿ, ಸಂಘವನ್ನು ಮುಚ್ಚಲಾಗಿದ್ದಿತು

ಸಂತಾಪ ಸೂಚಕ ಸಭೆ

ನಿನ್ನೆ ದಿನ ಸಾಯಂಕಾಲ ತಿಲಕ್ ಸಂಘದಲ್ಲಿ ತಿಲಕ್ ಸಂಘದ ಸದಸ್ಯರೂ, ವಿದ್ಯಾರ್ಥಿ ಮುಖಂಡರೂ ಆದ ವಿ ರಾಮಭಟ್ಟರ ನಿಧನದ ಪ್ರಯುಕ್ತ ಒಂದು ಸಂತಾಪ ಸೂಚಕ ಸಭೆಯನ್ನೇರ್ಪಡಿಸಿದ್ದರು. ಶ್ರೀ ರಾಮನಾಥರವರು ರಾಮಭಟ್ಟರ ನಿಧನದ ಬಗ್ಗೆ ಒಂದು ಸಂತಾಪ ಸೂಚಕ ನಿರ್ಣಯವನ್ನು ತಂದರು. ಸಭೆಯು ಅದನು ಅಂಗೀಕರಿಸಿತು. ವಂದೇಮಾತರಂನೊಡನೆ ಸಭೆ ಮುಕ್ತಾಯವಾಯಿತು.

ನಿಧನ

ಮೈಸೂರಿನ ಪ್ರಸಿದ್ಧ ಅಡ್ವೋಕೇಟರಾದ ಶ್ರೀಮಾನ್ ವಿ ಲಿಂಗಪ್ಪಯ್ಯನವರ ಪುತ್ರ ಶ್ರೀ ವಿ ಎಲ್. ಕೃಷ್ಣಮೂರ್ತಿಯವರು ಈ ದಿನ ಟೈಫಾಯಿಡ್ ಕಾಯಿಲೆಯಿಂದ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಎಲ್ ಎಲ್. ಬಿ ಕ್ಲಾಸಿನಲ್ಲಿ ವ್ಯಾಸಂಗ ಮಾಡುತ್ತಿದ್ದರು.

ರಾಜಧಾನಿಯ ಪೌರಸಭಾ ಸದಸ್ಯರೂ, [illegible]ಸಂತ ಸ್ಟೋರ್ಸ್ ಮಾಲೀಕರೂ ಆದ ಶ್ರೀಮಾನ್ ಎಂ ವಿ ವೆಂಕಟರಾಮಯ್ಯನವರ ಪುತ್ರ ಸತ್ಯನಾರಾಯಣ ಎಂಬುವರು [illegible] ಶೀತ ಜ್ವರದಿಂದ ನರಳುತ್ತಿದ್ದು ನಿನ್ನೆ ದಿನ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಕಾಂಗ್ರೆಸ್ಸಿಗೆ ಸೇರಿದರು

ತುಮಕೂರು ಜಿಲ್ಲಾ ಬೋರ್ಡು ಉಪಾ[illegible]ಗಿದ್ದ ಶ್ರೀ|| ಕಾಳೇಗೌಡರ ಮೇಲೆ ಕ್ರಮ ತೆಗೆದುಕೊಳ್ಳಲಾಯಿತಷ್ಟೆ. [illegible]ರು ತಮ್ಮ ಕಾಂಗ್ರೆಸ್ಸಿಗೆ [illegible] ಯಿಸಿದುದರಿಂದ ಮತ್ತೆ ಅವರನ್ನು [illegible]ಸ್ಸಿಗೆ ತೆಗೆದುಕೊಳ್ಳಲಾಗಿದೆಯೆಂದು ತುಮಕೂರು ಜಿಲ್ಲಾ ಕಾಂಗ್ರೆಸ್ [illegible]ರ ಸಭೆಯಲ್ಲಿ ತಿಳಿಸಿದರು.

LATEST NEWS

ಫುಟ್‌ಬಾಲಿನಲ್ಲಿ ಮೈಸೂರಿನ ವಿಜಯ

(ಸ್ವಂ. ತಂತಿ) ಬೆಂಗಳೂರು ೩೦

ಅಂತರ ಪ್ರಾಂತೀಯ ಫುಟ್ ಬಾಲ್ ಪಂದ್ಯದಲ್ಲಿ ನಿನ್ನೆ ದಿನ ಮೈಸೂರಿನವರು [illegible]ದರಾಬಾದಿನವರನ್ನು ೨-೧ ಗೋಲುಗಳಿಂದ ಸೋಲಿಸಿದರು. ೧೫ ಸಾವಿರ ಜನ [illegible]ಕರು ನೆರೆದಿದ್ದರು. ಚಿನ್ನಸ್ವಾಮಿ, [illegible] ಇಬ್ಬರೂ ಮೈಸೂರು ಪರವಾಗಿ ಒಂದೊಂದು ಗೋಲು ಹೊಡೆದರು.

o o o o

ಬಿಹಾರ [illegible] ವಿಧಾನಗಳನ್ನು [illegible]ಸಲು ಸಚಿವರು [illegible] ಸಮ್ಮೇಳನ ನಡೆಸಿದರು. ಮುಂದಿನ ಸಮ್ಮೇಳನವು ಸೆಪ್ಟೆಂಬರ್ ೪ ನೇ [illegible] ಶಾಸನ ಸಭಾ ಭವನದಲ್ಲಿ ನಡೆಯುವುದು.

o o o o

ಶ್ರೀ ಮಾಧವರಾಯರು [illegible] ಭಾ ಇಂಜಿನಿಯರ [illegible] ವಹಿಸಿಕೊಂಡರು.

ಹಂಗೇರಿ ಸರ್ಕಾರ ರಾಜಿನಾಮೆ ಇತ್ತಿತು

ಹಂಗೇರಿ ಸರ್ಕಾರವು ರಾಜೀನಾಮೆ ಇತ್ತಿದೆಯೆಂದು ಜರ್ಮನ್ ಓವರ್‌ಸೀಸ್ ನ್ಯೂಸ್ ಏಜೆನ್ಸಿಯು ತಿಳಿಸಿದೆ. ಕರ್ನಲ್ ಜನರಲ್ ಲ್ಯಾಕೋಟೋಸ್‌ರವರು ಹೊಸ ಮುಖ್ಯ ಮಂತ್ರಿಯಾಗಿ ನೇಮಿಸಲ್ಪಟ್ಟಿದ್ದಾರೆ. ಎಂ ಲೇಜಸ್ ಹ್ಯಾಟೆರವರು ರಕ್ಷಣಾ ಮಂತ್ರಿಗಳಾಗಿ ಇದ್ದಾರೆ. ಮತ್ತು ಇತರ ಕೆಲವು ಸ್ಥಾನಗಳಿಗೆ ಹೊಸ ಮಂತ್ರಿಗಳನ್ನು ನೇಮಿಸಲಾಗಿದೆ. ಹಿಂದಿನ ಮಂತ್ರಿಮಂಡಲವು ಮಾರ್ಚಿ ೨೨ ನೇ ತಾ|| ನಿಂದ ಕೆಲಸ ನಡೆಸುತ್ತಿತ್ತು. ಈ ಮಂತ್ರಿ ಮಂಡಲವು ಜರ್ಮನಿಯು ಹಂಗೇರಿಯಲ್ಲಿ ತನ್ನ ಸೈನ್ಯವನ್ನು ಇಟ್ಟುಕೊಳ್ಳಲು ಮುಂದಿಟ್ಟ ಕೋರಿಕೆಗಳನ್ನು ತಿರಸ್ಕರಿಸಿತೆಂದು ಲಂಡನ್ನಿನ ಸುದ್ದಿ ತಿಳಿಸುತ್ತದೆ.

ಅಮೇರಿಕನ್ ಪಡೆಗಳು ಜರ್ಮನಿ ಕಡೆಗೆ ಮುನ್ನುಗ್ಗುತ್ತಿವೆ

ಮಿತ್ರ ಪಡೆಗಳು ಪ್ಯಾರಿಸ್ ಪಟ್ಟಣದಿಂದ ಹಿಡಿದು ಟ್ರಾಯ್ಸ್ ಪಟ್ಟಣದ ವರೆವಿಗೂ ಎಲ್ಲಾ ಕಡೆಗಳಲ್ಲೂ ಸೀನ್ ನದಿಯನ್ನು ದಾಟಿವೆ. ಬ್ರಿಟಿಷ್ ಪಡೆಗಳು ೧೪ ಮೈಲಿಗಳು ಮುಂದೆಹೋಗಿ ಪ್ಯಾರಿಸ್ ಮತ್ತು ರೂಯೆನ್ ರಸ್ತೆಯಲ್ಲಿ ಸ್ಥಳ ಮಾಡಿಕೊಂಡು ಮುನ್ನುಗ್ಗುತ್ತಿದ್ದಾರೆ. ಈ ಸ್ಥಳಗಳಲ್ಲಿ ಜರ್ಮನರ ಪಡೆಗಳು ಪ್ರತಿಭಟನೆಯನ್ನು ಜೋರಾಗಿ ತೋರಿಸುತ್ತಿವೆ. ಕೆನೇಡಿಯನ್ ಪಡೆಗಳು ರೂಯೆನ್ ನಗರದ ಕಡೆಗೆ ಗುರಿಯಿಟ್ಟು ಮುನ್ನುಗ್ಗುತ್ತಿವೆ. ಜರ್ಮನರ ಪ್ರತಿಭಟನೆಯು ಮಾತ್ರ ಜೋರಾಗಿದೆ. ಜನರಲ್ ಪ್ಯಾಟನ್‌ರವರ ಸೇನೆಯು ಶ್ಯಾಂಪೇನ್ ನಗರದ ಎರಡು ಕಡೆಗಳಲ್ಲಿ ಆಗಲೆ [illegible] ನಡೆಸಿವೆಯೆಂದು. [illegible] ನಗರಕ್ಕೆ ಭಯವು ಜಾಸ್ತಿಯಾಗುತ್ತಾಯಿದೆ.

ಶಾಂತಿ ಪಾಲನೆ ಬಗ್ಗೆ ಚೀನಾ ಮಂತ್ರಿಯ ಹೇಳಿಕೆ

ಚೀನಾದ ಹಣಕಾಸಿನ ಸಚಿವರು, ಪ್ರಪಂಚದ ಶಾಂತಿಯನ್ನು ರಕ್ಷಿಸಲು, ಅಂತರ ರಾಷ್ಟ್ರೀಯ ಪೋಲೀಸ್ ದಳದ ವ್ಯವಸ್ಥೆ ಮಾಡಬೇಕು. ರಾಷ್ಟ್ರವಾದ [illegible] ನಿಟ್ಟಿನಲ್ಲಿ [illegible] ಸೂಚನೆ [illegible] ದರು.

ಫ್ರಾನ್ಸ್-ಜಪಾನ್ ಯುದ್ಧ

ಫ್ರಾನ್ಸಿನ ಹಂಗಾಮಿ ಸರ್ಕಾರವು [illegible] ಮಾಡುತ್ತಾ, ಫ್ರಾನ್ಸು ಜಪಾನಿನೊಡನೆ ಯುದ್ಧ ಹೂಡುವ ಅಪೇಕ್ಷೆ ಹೊಂದಿರುವುದಾಗಿಯೂ ಡಿಸೆಂಬರ್ ೮ ನೇ ತಾರೀಕಿನಿಂದಲೂ ಅವರೊಡನೆ ಯುದ್ಧ ಸ್ಥಿತಿಯಲ್ಲಿರುವುದಾಗಿಯೂ, ಅದು ತನ್ನ ಎಲ್ಲಾ ಸಂಪತ್ತನ್ನೂ ಉಪಯೋಗಿಸಿ ಫ್ರಾನ್ಸನ್ನು ಸ್ವತಂತ್ರಗೊಳಿಸುವುದಲ್ಲದೆ ಮಿತ್ರರೊಡಗೂಡಿ ಏಷ್ಯಾ ಮತ್ತು ಯೂರೋಪಿನಲ್ಲಿನ ತನ್ನ ಶತ್ರುವನ್ನು ಸಂಪೂರ್ಣವಾಗಿ ನಾಶ ಮಾಡುವುದಾಗಿಯೂ ತಿಳಿಸಿದೆ.

ಬಲ್ಗೇರಿಯಾ ತಾಟಸ್ಥ್ಯವನ್ನು ರಷ್ಯವು ಅಂಗೀಕಾರಮಾಡಿಲ್ಲ

ಮಾಸ್ಕೋವಿನ ರೇಡಿಯೋವು ಬಲ್ಗೇರಿಯಾದ ತಟಸ್ಥತೆಗೆ ಅಂಗೀಕಾರ ಕೊಟ್ಟಿಲ್ಲವೆಂದು ತಿಳಿಸಿದೆ. ಪರಿಸ್ಥಿತಿಯಲ್ಲಿ ಆದ ತಟಸ್ಥಭಾವವು ಏನೇನೂ ಇಲ್ಲವೆಂದು ತಿಳಿಸುತ ಡೆ

ಯುದ್ಧಾನಂತರದ ರಾಷ್ಟ್ರೀಯ ಭದ್ರತೆ

ಅಧ್ಯಕ್ಷ ರೂಸ್‌ವೆಲ್ಟರು ನಿನ್ನೆ ಅಂತರ ರಾಷ್ಟ್ರೀಯ ರಕ್ಷಣಾ ಸಮ್ಮೇಳನದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಅಂತರ ರಾಷ್ಟ್ರೀಯ ರಕ್ಷಣಾ ಸಂಸ್ಥೆಗಳು ಎರಡು ಅಂಗವಾಗಿ, ಒಂದು ಶಕ್ತಿಯೊಂದು ರಾಷ್ಟ್ರಕ್ಕಾಗಲಿ [illegible] ಮುಂದಿನ ಯುದ್ಧವನ್ನು ತಡೆಯುವುದಕ್ಕೂ ಅವಶ್ಯ [illegible] ಬೇಕೆಂದು ತಿಳಿಸಿದರು. ರಾಷ್ಟ್ರಗಳಿಗೆ ಜಗಳವುಂಟಾದರೆ ಅವನ್ನು ತೀರ್ಮಾನಿಸಲು ಅಂತರರಾಷ್ಟ್ರೀಯ ನ್ಯಾಯಾಸ್ಥಾನಗಳು ಬೇಕು. ಇದರಿಂದ ತೀರ್ಮಾನವಾಗದಿದ್ದ ಪಕ್ಷದಲ್ಲಿ ಸಭೆಗಳಲ್ಲಿ ಚರ್ಚೆ [illegible]. ಈ ಮಧ್ಯದಲ್ಲಿ ಯಾವುದಾದರೂ ರಾಷ್ಟ್ರವು ಹಿಂಸಾಪ್ರವೃತ್ತಿಯಲ್ಲಿ ತೊಡಗಿದಲ್ಲಿ ಅವರ ಮೇಲೆ ತಕ್ಕ ಕ್ರಮ [illegible] ಕೈಗೊಳ್ಳಲು [illegible] ಸಭೆ ಇರಬೇಕು.

ಈ ಸಮ್ಮೇಳನದಲ್ಲಿ ಭಾಗ ವಹಿಸಲು ಬ್ರಿಟಿಷ್ ಮತ್ತು ಸೋವಿಯಟ್ ಪ್ರತಿನಿಧಿಗಳು [illegible] ಅಂತರ ರಾಷ್ಟ್ರೀಯ ರಕ್ಷಣಾ [illegible] ಸಮಾನ [illegible] ಪ್ರತಿನಿಧಿ [illegible] ಬೇಕೆಂದೂ ತಿಳಿಸಿದರು.

ಕಾಂಗ್ರೆಸ್ ಆಸ್ತಿ ಹರಾಜು

ಧಾರವಾಡದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಆಸ್ತಿಗಳನ್ನೆಲ್ಲ ಸರ್ಕಾರದವರು ಕಳೆದ ವಾರ ಹರಾಜು ಹಾಕಿದರೆಂದು ಗೊತ್ತಾಗಿದೆ. ಇವರಲ್ಲಿ ಮಹಾತ್ಮರ ದೊಡ್ಡ ಸೈಜಿನ ಭಾವಚಿತ್ರವೊಂದು ಸಹ ಸೇರಿದ್ದಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಟ್ಟಡವನ್ನು ೧೯೪೨ ನೇ ಇಸವಿಯಲ್ಲಿ ಸರ್ಕಾರದವರು ಆಕ್ರಮಿಸಿಕೊಂಡು ಅದರ ಸ್ವತ್ತುಗಳೆಲ್ಲವನ್ನೂ ಜಪ್ತು ಮಾಡಿದ್ದರು.

ಮಹಾತ್ಮರೊಡನೆ ವಿದ್ಯಾರ್ಥಿ ಮುಖಂಡರ ಭೇಟಿ

ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಜಂಟಿ ಕಾರ್ಯದರ್ಶಿಯವರಾದ ಶ್ರೀ [illegible] ಎಂಬುವರು ಮಹಾತ್ಮರನ್ನು ಭೇಟಿ ಮಾಡಿ ವಿದ್ಯಾರ್ಥಿ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಕುರಿತು ಮಾತನಾಡಿ ಬೊಂಬಾಯಿನಲ್ಲಿ ಮುಂದೆ ನಡೆಯಲಿರುವ ವಿದ್ಯಾರ್ಥಿ ಸಮ್ಮೇಳನ ಕುರಿತು ಮಹಾತ್ಮರ ಸಲಹೆಯನ್ನು ತೆಗೆದುಕೊಂಡರು.

ಹುಚ್ಚಾಪಟ್ಟೆ ಮಾತನಾಡಬೇಡಿ!

ಕಲ್ಕತ್ತೆಯಲ್ಲಿ ಹುಚ್ಚಾಪಟ್ಟೆ ಮಾತನಾಡುವವರ ಮೇಲೆ ಉಸ್ತುವಾರಿ ಇಟ್ಟು ಸರಕಾರಕ್ಕೆ ವರದಿ ಮಾಡಲು ಒಂದು ಗುಪ್ತ ಸಮಿತಿಯನ್ನು ಏರ್ಪಡಿಸಲಾಗಿದೆ. ಇದರಲ್ಲಿ ಸೈನಿಕ ಮತ್ತು ಸಿವಿಲ್ ನೌಕರರುಗಳು ಇರುವರು. ದೇಶದ ಭದ್ರತೆ, ಸೈನ್ಯಗಳ ಚಲನ ವಲನ ಮುಂತಾದ ವಿಷಯವಾಗಿ ಜನರು ಸಿಕ್ಕಿದಂತೆ ಮಾತನಾಡುವುದನ್ನು ತಪ್ಪಿಸುವುದೇ ಇದರ ಉದ್ದೇಶ.

ಸೆಪ್ಟೆಂಬರ್ ೭ರನಂತರ ಭೇಟಿ

ಜಿನ್ನಾರವರು ಮಹಾತ್ಮರಿಗೆ ಒಂದು ತಂತಿ ಕಳುಹಿಸಿ ತಮ್ಮ ಮತ್ತು ಮಹಾತ್ಮರ ಭೇಟಿಯು ಸೆಪ್ಟೆಂಬರ್ ೭ ಆದನಂತರ ಯಾವುದಾದರೊಂದು ದಿನ ನಡೆಯಬಹುದೆಂದು ತಿಳಿಸಿದ್ದಾರೆ.

ಗಾಥಿಕ್ ವ್ಯೂಹದ ಮುತ್ತಿಗೆ

ಇಟಲಿಯಲ್ಲಿ ಫ್ಲಾರೆನ್ಸ್ ನಗರವನ್ನು ಹಿಡಿದ ಮಿತ್ರ ಪಡೆಗಳು ನಗರದ ಪೂರ್ವಕ್ಕೆ [illegible] ನಗರಕ್ಕೆ ಬಂದಿವೆ. ಪೆಸಾರೋ ನಗರದ ಪಶ್ಚಿಮಕ್ಕೆ [illegible] ಸೇನೆಯನ್ನು ಹಿಡಿದ ಪೋಲಿಷ್ ಪಡೆಗಳು ಬಂದಿವೆ. ಈ ಮಿತ್ರ ಕಾರ್ಯಾಚರಣೆಯಿಂದ ಜರ್ಮನರು ರಚಿಸಿದ್ದ ಗಾಥಿಕ್ ವ್ಯೂಹಕ್ಕೆ ಅಪಾಯವು ಉಂಟಾಗುತ್ತಿರುವುದಾಗಿ ತಿಳಿಯಬಹುದು.

ಅಗ್ನೇಯ ಚೀನಾದಲ್ಲಿ ಜಪಾನರ ಹಿನ್ನಡೆ

ಅಗ್ನೇಯ ಚೀನಾದಲ್ಲಿ ಚೀನೀ ಸೈನಿಕರು [illegible] ಎಂಬ ಊರನ್ನು ಹಿಡಿದಿರುವರು. ಇದರಿಂದ [illegible] ಜಪಾನೀಯರನ್ನು [illegible] ಹಿಂದೆ ಹೋಗುವಂತೆ ಮಾಡಲಾಗಿದೆ.

ಸೂಚನೆ

ನಾಳೆ [illegible] ಪ್ರಯುಕ್ತ "ಸಾಧ್ವಿ" ಪತ್ರಿಕೆ ಪ್ರಕಟವಾಗುವುದಿಲ್ಲ —ವ್ಯವಸ್ಥಾಪಕ

ಸಂಪುಟ ೩] ಶನಿವಾರ ೨--೯--೪೪ [ಸಂಚಿಕೆ ೩೩

ಹಂಗೆರಿ ಶಾಂತಿ ಭಿಕ್ಷೆ

ಮಹಾತ್ಮರ ಮುಂದೆ ಪಾಕಿಸ್ತಾನ ವಿರುದ್ಧ ಪಿಕೆಟಿಂಗು

ಜರ್ಮನಿಗೂ ಶಾಂತಿ ದಾಹವುಂಟಾಗಿದೆಯೇ?

ಹಂಗೆರಿ ಹಿಂಸರಿಯುತ್ತಿದೆ?

ಹಂಗೇರಿಯಲ್ಲಿ ಜನರಿಗೆ ಪ್ರಭಾವವು ಕುಸಿದು ಬೀಳುತ್ತಿದೆಯೆಂದೂ ಅಲ್ಲಿನ ಮಂತ್ರಿ ಮಂಡಲದ ಪುನರ್ರಚನೆಯೇ ಇದಕ್ಕೆ ಸೂಚನೆಯೆಂದೂ ಹೇಳಲಾಗಿದೆ. ಹಂಗೇರಿಯು ಶಾಂತಿ ಷರತ್ತುಗಳಿಗಾಗಿ ಮಿತ್ರರನ್ನು ಬೇಡಿದೆಯೆಂದು ವರ್ತಮಾನ.

* * * *

ತುರ್ಕಿ-ಬಲ್ಗೇರಿಯಾ ಗಡಿಯನ್ನು ಬಲ್ಗೇರಿಯಾವು ಬಂದು ಮಾಡಿದೆ.

* * * *

ಜ॥ ಮಾಂಟ್ಗೊಮರಿ-ಯವರನ್ನು ಫೀಲ್ಡ್ ಮಾರ್ಷಲ್ ಪದವಿಗೆ ಏರಿಸಲಾಗಿದೆ.

ಬೆಲ್ಜಿಯಂ ಗಡಿ ಸಮೀಪಿಸಿತು

ಬ್ರಿಟಿಷ್ ಮತ್ತು ಅಮೇರಿಕದ ಸೇನೆಗಳು ಬೆಲ್ಜಿಯಂ ಗಡಿ ಬಳಿ ಬಂದಿವೆ. ಬ್ರಿ॥ ಎರಡನೇ ಸೈನ್ಯವು ಪಿಕಾರ್ಡಿಯನ್ನು [illegible] ಕನೇಡಿಯನ್ನರು [illegible] ವಶಪಡಿಸಿಕೊಂಡಿರುವರು. ಮೂರನೇ [illegible] ಸೈನ್ಯವು ಜರ್ಮನಿಗೆ ೭೦ ಮೈಲಿ ದೂರದಲ್ಲಿದೆ. ಬಿರುಸಾದ ಟ್ಯಾಂಕ್ ಕದನ ನಡೆಯುತ್ತಿರುವುದಾಗಿ ಜರ್ಮನರು ಹೇಳುತ್ತಾರೆ.

ಬುಖಾರೆಸ್ಟ್ ವಶ

[illegible] ಬುಖಾರೆಸ್ಟನ್ನು ಪ್ರವೇಶಿಸಿದ್ದಾರೆ. ರುಮೇನಿಯಾದಲ್ಲಿ ಜರ್ಮನರ ಪ್ರತಿಭಟನೆಯನ್ನು ನಿರ್ಮೂಲಗೊಳಿಸಲಾಗಿದೆ. ಪೂರ್ವ ಪ್ರಷ್ಯದ ಸುತ್ತಿಗೆಯನ್ನು [illegible] ಹೊಸ ಸೈನ್ಯಗಳನ್ನು [illegible]

ಫ್ರಾನ್ಸಿನಲ್ಲಿ ಮುಂದೋಟ

[illegible] ಜರ್ಮನರು ಯುದ್ಧ ಮಾಡದೆ ಪ್ರಾಣ ಭಯದಿಂದ ಓಡುತ್ತಿರುವರು. ಅಮೇರಿಕನರು [illegible] ಮತ್ತು ಮೊಂಟ್ ಪೆಲಿಯರ್‌ಗಳನ್ನು [illegible] ವಶವಾಗಿದೆ.

ಗಣಿಗಳು ಸರ್ಕಾರದ ವಶ

ಪೆನ್ಸಿಲ್ವೇನಿಯಾ ಮತ್ತು ಇಂಡಿಯಾನಾ [illegible] ಗಣಿಗಳ ಕೆಲಸ ನಿಂತುಹೋಗಿರುವುದರಿಂದ ಅವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ನಡೆಸುವಂತೆ ಅಧ್ಯಕ್ಷ ರೂಸ್ವೆಲ್ಟರು ಆಜ್ಞೆ ಮಾಡಿದ್ದಾರೆ.

ವೆರೋನಾ ಮಿತ್ರ ವಶ

[illegible] ವೆರೋನಾ ಎಂಬ ದುರ್ಗದ ನಗರವನ್ನು ಮಿತ್ರರು ಸ್ವಾಧೀನಪಡಿಸಿಕೊಂಡಿರುವರು. [illegible] ಜರ್ಮನ್ ಸೇನೆ [illegible]

ಅಮೆರಿಕದ ಉತ್ಪತ್ತಿ ಕಾಲಿಯು

[illegible]

ಎ.ಆರ್.ಪಿ. ನಾಶ ವಶ

[illegible]

ಚರ್ಚಿಲ್ - ರೂಸ್ವೆಲ್ಟ್ ಭೇಟಿ

[illegible] ಚರ್ಚಿಲರಿಗೂ ಮಿ॥ ರೂಸ್ವೆಲ್ಟರಿಗೂ ಭೇಟಿ ನಡೆಯಬಹುದೆಂದು ನಂಬಲಾಗಿದೆ. [illegible] ಯುದ್ಧವನ್ನು [illegible] ಜರ್ಮನಿಯ [illegible] ಚರ್ಚೆಗೆ ಬರಬಹುದು.

ಬರ್ಮಾ ಸರ್ಕಾರ ರಂಗೂನಿಗೆ

[illegible] ರಂಗೂನಿಗೆ [illegible] ಬರ್ಮಾ [illegible] ರಂಗೂನಿನಲ್ಲಿ [illegible] ಹುದೆಂದು ತಿಳಿದು ಬಂದಿದೆ.

ಬರ್ಮಾ ರಸ್ತೆ

ಬರ್ಮಾ ರಸ್ತೆ [illegible]

ಫಿನ್ಲೆಂಡಿನ ರಣ ಸಿದ್ಧತೆ

ಜರ್ಮನಿಯು ಮಾಡಿದಂತೆಯೇ [illegible] ಫಿನ್ಲೆಂಡು ಸಂಪೂರ್ಣ ಯುದ್ಧ ಸಿದ್ಧತೆಗೆ ಆಜ್ಞೆ ಮಾಡಿದೆ. [illegible]

ಕ್ವಿನೈನ್ ಬೆಲೆ ಇಳಿಯಿತು

[illegible]

ಪ್ರೋಣ ಪಾನ ನಿರೋಧವಿಲ್ಲ

[illegible]

ಮಹಾತ್ಮರ ಮುಂದೆ ಪಿಕೆಟಿಂಗು

ಅಖಿಲ ಭಾರತ ಪಾಕಿಸ್ತಾನ ವಿರೋಧ ಸಂಸ್ಥೆ [illegible] ಶ್ರೀ॥ [illegible] ಗಾಂಧೀಜೀಯವರ [illegible] ಪಿಕೆಟಿಂಗು [illegible]

ಗಾಂಧಿ-ಜಿನ್ನಾ ಭೇಟಿ

ಈ ನೇ ತಾ॥

[illegible] ಗಾಂಧೀಜಿಯವರು [illegible] ಜಿನ್ನಾರವರು [illegible]

ಸಲಾಂ ಗೌರವ ಬೇಡಿ

[illegible] "ಸಲಾಂ" [illegible]

ಗೌರ್ನರರುಗಳ ಸಮ್ಮೇಳನದ ಮುಕ್ತಾಯ

[illegible]

ಸ್ಲೇಟುಗಳನ್ನುಪಯೋಗಿಸಿ

[illegible]

ಜಿಲ್ಲಾ ಬೋರ್ಡ್ ಉಪಾಧ್ಯಕ್ಷರ ಚುನಾವಣೆ

ಸ್ವಂ ವ.] ಮಂಡ್ಯ [illegible]

ಮೊನ್ನೆ ದಿನ ಮಂಡ್ಯ ಜಿಲ್ಲಾ ಬೋರ್ಡ್ ಉಪಾಧ್ಯಕ್ಷರ ಚುನಾವಣೆಯು ಅಧ್ಯಕ್ಷರಾದ ಶ್ರೀ ಕೆ. ಎಂ. ಕೃಷ್ಣಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಶ್ರೀ ಕೃಷ್ಣಮೂರ್ತಿಯವರಿಗೆ [illegible] ಕಾಂಗ್ರೆಸ್ ಸ್ಪರ್ಧಿಸಲಿಲ್ಲ.

ಹೋಟೆಲು ಮಾಲೀಕರುಗಳ ಸಭೆ

ನೆನ್ನೆ ದಿನ ಮಂಡ್ಯದ ಹೋಟೆಲ್ ಮಾಲೀಕರುಗಳ ಸಭೆಯು ವೆಂಕಟೇಶ್ವರ ಭವನದಲ್ಲಿ ಶ್ರೀ ನಾರಾಯಣಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. [illegible] ಎಲ್ಲಾ ಹೋಟೆಲುಗಳಲ್ಲೂ [illegible]

ನಿಮ್ಮ ಮನೆಯವರನ್ನು ಅಕ್ಷರಸ್ಥರನ್ನಾಗಿ ಮಾಡಿ

[illegible] "ನಿಮ್ಮ ಮನೆಯವರನ್ನು ಅಕ್ಷರಸ್ಥರನ್ನಾಗಿ ಮಾಡಿ" [illegible]

ವಿದ್ಯಾಗಣಪತಿ ಮಂಗಳಾರತಿ

[illegible] "ಭಕ್ತಿ" [illegible]

ಶಿಕ್ಷಕ ವಿದ್ಯಾರ್ಥಿಯ ಸಂಘ

[illegible]

ಲೇಬರ್ ಮಂತ್ರಿಗಳಲ್ಲಿ ನಿಯೋಗ

ಮೈಸೂರು ೩

ಮೈಸೂರು ಕೃಷ್ಣರಾಜೇಂದ್ರ ಮಿಲ್, ಗಣಪತಿ ಎಣ್ಣೆ ಕಾರ್ಖಾನೆ ಮತ್ತು ಬೀಡಿ ಕಾರ್ಖಾನೆಗಳ ಕೂಲಿಗಾರರ ಪರವಾಗಿ ಶ್ರೀ ಸಿದ್ಧರಾಮಣ್ಣ ಮತ್ತು ಎಸ್. ಅನಂತರಾಮಣ್ಣ ಮುಂತಾದ ಆರು ಮಂದಿ ಲೇಬರ್ ಮಂತ್ರಿಗಳಾದ ಹೆಚ್. ಬಿ. ಗುಂಡಪ್ಪಗೌಡರಲ್ಲಿಗೆ ನಿಯೋಗ ಹೋಗಿ ಕೂಲಿಗಾರರ ಕಷ್ಟ ಸುಖಗಳನ್ನೂ, ಕುಂದುಕೊರತೆಗಳನ್ನೂ ಬಿನ್ನವಿಸಿಕೊಂಡರು. ಮತ್ತು ಕೂಲಿಗಾರರ ಆದಾಯ ಮತ್ತು ವೆಚ್ಚ ತಿಳಿಯಲು ಒಂದು ವಿಚಾರಣಾ ಸಮಿತಿಯನ್ನು ನಿರ್ಮಿಸಬೇಕೆಂದು ಕೇಳಿಕೊಂಡರು. ಕೂಲಿಗಾರರ ಕನಿಷ್ಠ ವೇತನವನ್ನು ಗೊತ್ತು ಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಮಂತ್ರಿಗಳು ಎಲ್ಲವನ್ನೂ ಸಾವಧಾನದಿಂದ ಕೇಳಿ, ನಿವಾರಿಸುವುದಾಗಿ ಭರವಸೆ ಕೊಟ್ಟರು.

ಆರಂಭ ಭಾಷಣ

ತಾ|| ೩೦-೮-೪೪ ನೇ ಬುಧವಾರ ಸಾಯಂಕಾಲ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನೀಲಕಂಠ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಕನ್ನಡ ನಾಡಿನ ಉಜ್ವಲ ಸಾಹಿತಿಗಳಲ್ಲಿ ಒಬ್ಬರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರವರು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಸರ್ದಾರ್ ಕೆ. ಎನ್. ವಾಸುದೇವಾಚಾರ್ಯರವರು ಅಗ್ರಾಸನವನ್ನು ವಹಿಸಿದ್ದರು.

ಹರಿಕಥೆ

ಈ ದಿನ ರಾತ್ರಿ ೯|| ಗಂಟೆಗೆ ಮೈಸೂರು ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಶ್ರೀ ರಾಮ ಪ್ರೆಸ್ಸಿನಲ್ಲಿ ಪದ್ಧತಿ ಮೀರಿ ಹುಣ್ಣಿಮೆ. ಪ್ರಯುಕ್ತ ವೇ|| ಸೀತಾರಾಮಾಚಾರ್ಯರು "ಪುರಂದರದಾಸರ ಚರಿತ್ರೆ" ಯು ವಿಷಯವಾಗಿ ಹರಿಕಥೆ ನಡೆಸುವರು. ಸರ್ವರಿಗೂ ಸ್ವಾಗತವುಂಟು.

Edited, printed and published by A. R. Nagarajan, at the Sadhvi Press, D. Subbiah Road, Mysore

ರಾಷ್ಟ್ರೀಯ ರಕ್ಷಣಾ ಬಲ

ನೀಲಕಂಠ ಸಂಸ್ಥೆಯ ಆಶ್ರಯದಲ್ಲಿ ಮ|| ಶ್ರೀಕಂಠಯ್ಯನವರು ಕೃಷ್ಣರಾಜನಗರದ ಹೈಸ್ಕೂಲಿನಲ್ಲಿ ೩೧-೮-೪೪ ರಲ್ಲಿ ರಾಷ್ಟ್ರೀಯ ರಕ್ಷಣಾ ಬಲದ ವಿಚಾರವಾಗಿ ಉಪನ್ಯಾಸ ಮಾಡಿದರು. ಹೈಸ್ಕೂಲಿನ ಹೆಡ್‌ಮಾಸ್ಟರವರು ಸಭೆಯು ಯಶಸ್ವಿಯಾಗಿ ನಡೆಯಲು ತಕ್ಕ ಏರ್ಪಾಡನ್ನು ಮಾಡಿದ್ದರು. ಮ|| ವೈ.ವಿ. ಗುಂಡೂರಾವ್, ಎಂ.ಎ. ರವರು ಅಗ್ರಾಸನವನ್ನು ವಹಿಸಿದ್ದರು.

ನಿಧನ

ಸ್ವಂ.ವ.] ಕೃಷ್ಣರಾಜನಗರ ೩೦

ಕೃಷ್ಣರಾಜನಗರದ ಕಾಂಗ್ರೆಸ್ ಕೆಲಸಗಾರರೂ ಮತ್ತು ದೇಶಪ್ರೇಮಿಗಳೂ ಆದ ಬಿ. ವೈ. ಸೋಮೋಜಿರಾಯರವರ ಚಿಕ್ಕಪ್ಪಂದಿರಾದ ಬಿ. ಕೆ. ಚಿಕ್ಕಯ್ಯಪ್ಪನವರು ಕೆಲವು ದಿವಸಗಳಿಂದ ಕಾಯಿಲೆ ಇದ್ದು ೨೮-೮-೪೪ ನೇ ದಿನ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೩-೪ ಜನ ಚಿಕ್ಕ ವಯಸ್ಸಿನ ಮಕ್ಕಳು ಮತ್ತು ಪತ್ನಿ ಸಹ ಇರುತ್ತಾರೆ. ಇವರು ಜನಪ್ರಿಯರಾಗಿದ್ದರು. ಅಲ್ಲದೆ ಅವರು ದೊಡ್ಡ ಸಂಸಾರವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರು.

ಅಡಿಕೆ ಕೂದಲು ರಫ್ತು

ನಮ್ಮ ದೇಶದಲ್ಲಿ ಈಗ ಆಡಿನ ಕೂದಲಿಗೆ ವಿಶೇಷ ಗಿರಾಕಿಗಳಿಲ್ಲದೆ ಇರುವುದರಿಂದ ಅದನ್ನು ಮಧ್ಯ ಪ್ರಾಚ್ಯದ ದೇಶಗಳಿಗೆ ಕಳುಹಿಸಲು ಇರುವ ಅಡ್ಡಿಗಳನ್ನು ತೆಗೆದು ಹಾಕಲು ದಕ್ಷಿಣ ಇಂಡಿಯಾ ವಾಣಿಜ್ಯ ಸಂಘದವರು ಕೇಂದ್ರ ಸರ್ಕಾರದವರನ್ನು ಬೇಡಿಕೊಂಡಿದ್ದಾರೆ.

ಮತಾಂತರ ತಪ್ಪಿತು

ಚಿಕ್ಕಮಗಳೂರಿನಲ್ಲಿ ಇಸ್ಲಾಂ ಮತಾಂತರವಾಗುತ್ತಿದ್ದ ಚೆನ್ನಬಸಮ್ಮ ಎಂಬ ಸ್ತ್ರೀಯನ್ನು ಹಿಂದೂ ಮಹಾಸಭೆಯವರು ತಪ್ಪಿಸಿ ಆಕೆಯನ್ನು ಮಂಗಳೂರಿನ ಎಂ. ರಾಮಯ್ಯ ಎಂಬುವರಿಗೆ ಕೊಟ್ಟು ವಿಧ್ಯುಕ್ತವಾಗಿ ವಿವಾಹವನ್ನು ನಡೆಸಿದರು. ಶ್ರೀ ಮಾದಪ್ಪಶೆಟ್ಟರು ಮತ್ತು ಜಿ. ಆರ್. ಯೋಗಿ ಮುಂತಾದವರು ಹಿಂದೂ ಸನಾತನ ಧರ್ಮದ ವಿಷಯವಾಗಿ ಭಾಷಣ ಮಾಡಿದರು.

ಹೊಸ ಹುಜೂರ್ ಖಜಾನೆ ಅಧಿಕಾರಿಗಳು

ಸ್ವಂ.ವ.] ಬೆಂಗಳೂರು ೧

ಅಸಿಸ್ಟೆಂಟ್ ಕಮೀಷನರಾದ ಶ್ರೀ ಎಸ್. ಹಿರಿಯಣ್ಣಯ್ಯನವರನ್ನು ಸ್ಟೇಟ್ ಹುಜೂರ್ ಖಜಾನೆ ಅಧಿಕಾರಿಗಳನ್ನಾಗಿಯೂ, ಈಗ ಆ ಕೆಲಸದಲ್ಲಿರುವ ಅ|| ಕಮೀಷನರ್ ಮಿ|| ಸೈಯದ್ ಅಬ್ದುಲ್ ಘನಿಯವರನ್ನು ಕಂಟ್ರೋಲರ್ ಕಚೇರಿಯಲ್ಲಿ ಟ್ರೈನಿಂಗಿಗೂ ನೇಮಕ ಮಾಡಲಾಗಿದೆ.

ದಿವಾನರು

ದಿವಾನರು ಈ ದಿನ ಮೈಸೂರಿನಿಂದ ವಾಪಸು ಬಂದರು.

ರೆವಿನ್ಯೂ ಸಚಿವರು

ರೆವಿನ್ಯೂ ಸಚಿವರು ಈ ಮಧ್ಯಾಹ್ನ ಮೈಸೂರು ಜಿಲ್ಲಾ ಪ್ರವಾಸಕ್ಕಾಗಿ, ರೈಲಿನಲ್ಲಿ ರಾಜಧಾನಿಗೆ ಹೋಗಿದರು. ೪ ನೇ ತಾ|| ಅವರು ಶ್ರೀಮನ್ಮಹಾರಾಜರನ್ನು ಭೇಟಿ ಮಾಡುವರೆಂದು ಗೊತ್ತಾಗಿದೆ.

ವಿದ್ಯುಚ್ಛಕ್ತಿ ಇಲಾಖೆ

ಯುದ್ಧಾನಂತರ ಪುನರ್ರಚನೆ ಸಂಬಂಧದಲ್ಲಿ ಕೇಂದ್ರ ಸರ್ಕಾರವು ವಿದ್ಯುಚ್ಛಕ್ತಿಯಲ್ಲಿ ಇಂಗ್ಲೆಂಡಿನಲ್ಲಿ ಹೆಚ್ಚು ಪರಿಶ್ರಮ ಪಡೆಯುವುದಕ್ಕಾಗಿ ಭಾರತದ ನಾನಾ ಭಾಗಗಳಿಂದ ಕೆಲವರನ್ನು ಕಳುಹಿಸುವ ಆಲೋಚನೆ ಮಾಡಿದೆ. ಮೈಸೂರು ಸಂಸ್ಥಾನದಿಂದ ಒಬ್ಬರನ್ನು ಆರಿಸಿ ಕಳುಹಿಸಬೇಕೆಂಬುದಾಗಿ ನಮ್ಮ ಸರ್ಕಾರಕ್ಕೆ ಸೂಚನೆ ಬಂದಿದ್ದರ ಮೇಲೆ, ಇಲ್ಲಿಂದ ಶಿವನಸಮುದ್ರದ ಜನರಲ್ ಸೂಪರಿಂಟೆಂಡೆಂಟರಾದ ಶ್ರೀ ರಾಮಕೃಷ್ಣರವರನ್ನು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲಾಗಿದೆಯೆಂದು ಗೊತ್ತಾಗಿದೆ.

ಫಿನ್ಲೆಂಡಿನ ಶಾಂತಿ ಓಡಾಟವೇ?

ಸ್ಟಾಕ್‌ಹೋಂನಿಂದ ಬರುತ್ತಿರುವ ವರದಿಗಳ ಪ್ರಕಾರ ಫಿನ್ಲೆಂಡು ರಷ್ಯದೊಂದಿಗೆ ಶಾಂತಿ ಮಾಡಿಕೊಳ್ಳುವ ಸಲುವಾಗಿ ಓಡಾಡುತ್ತಿರುವ ಚಿಹ್ನೆಗಳು ಕಂಡು ಬರುತ್ತಿವೆ.

ಸರಿಯಾದ ಆಕರ್ಷಣೆಗಳನ್ನು ಭಾರತದ ಮುಂದಿಡಿ

ದಕ್ಷಿಣ ಇಂಗ್ಲೆಂಡಿನಲ್ಲೊಂದು ಕಡೆ ಗೋಪ್ಯವಾಗಿ ಕೇಂದ್ರೀಕರಿಸಲ್ಪಟ್ಟಿದ್ದ ಪೆಟ್ರೋಲ್ ಎಣ್ಣೆಯ ಶೇಖರಕ್ಕೆ ಜರ್ಮನ್ ಯುದ್ಧದ ಹಡಗೊಂದು ಹೊಡೆದುದರ ಪರಿಣಾಮವಾಗಿ ಭಯಂಕರವಾದ ಬೆಂಕಿಯುಂಟಾಯಿತು. ಗುಡ್ಡ ಪ್ರದೇಶದಲ್ಲಿದ್ದ ಈ ಸ್ಥಳದಿಂದ ಹರಿಯುತ್ತಿದ್ದ ಎಣ್ಣೆಯು ನೀರಿನ ಮೇಲೆ ಹರಡಿಕೊಂಡು, ಕಣಿವೆ ಮುಖಾಂತರವಾಗಿ ಬಂದಿತು. ಅಲ್ಲಿದ್ದ ಹಳ್ಳಿಯೊಂದಕ್ಕೆ ಅಪಾಯ ಸಂಭವಿಸುವುದರಲ್ಲಿತ್ತು. ಅಷ್ಟರಲ್ಲಿಯೇ ಇಂಗ್ಲೆಂಡಿನ ಬೆಂಕಿ ಆರಿಸುವ ಕೆಲಸಗಾರರು ೨೧ ಗಂಟೆಗಳ ತನಕ ಹೋರಾಡಿ ಬೆಂಕಿಯನ್ನು ಹತೋಟಿಗೆ ತರಲು ಪ್ರಯತ್ನಪಟ್ಟರು. ಅನೇಕ ಮನೆಗಳು ಸುಟ್ಟುವು. ಈ ವಿಷಯವನ್ನು ಹೋಂ ಸೆಕ್ರೆಟರಿ ಮಿ॥ ಹರ್ಬರ್ಟ್ ಮಾರಿಸನ್‌ರವರು ಈಗ ತಾನೇ ತಿಳಿಸಿದ್ದಾರೆ.

Edited, printed and published by A R Nagarajan at the Sadhvi Press, D. Subbiah Road, Mysore

ಅಪೇರಾ ಟಾಕೀಸ್

ತಾ॥ ೮-೯-೪೪ ರಿಂದ

ಪ್ರತಿ ದಿನ ೩ ಆಟಗಳು

ವಿಷ್ಣು ಪಂತ ಪಗ್ನಿಸ್, ದುರ್ಗಾ ಖೋಟೆ, ಪ್ರಹ್ಲಾದ್, ಸ್ನೇಹ ಪ್ರಭ [illegible] ಮುಂತಾದವರು ಪಾತ್ರವಹಿಸಿರುವ

ಮಹಾತ್ಮವಿದುರ್

(ಹಿಂದಿ ಭಾಷೆಯ ಚಿತ್ರ)

ಮುಂದಿನ ವಿನೋದ :-

ಮುಮ್ತಾಜ್ ಶಾಂತಿ, ಉಲ್ಲಾಸ್ ಆಗ, ರಾಧಾರಾಣಿ ನಟಿಸಿರುವ

ಸವಾಲ್

ಬೆಲೆ ಕಡಿಮೆ ! ಬಣ್ಣ ಗ್ಯಾರಂಟಿ !

— ಮಹಿಳೆಯರಿಗೆ ಮಂಗಳಪ್ರದವಾದುದು —

— ಹೊಸದಾಗಿ ತರಿಸಿರುವ ನಾನಾಬಗೆಯ ಬಳೆಗಳು —

ಬಾಳಿಕೆ, ಅಂದ, ಬಣ್ಣದಲ್ಲಿ ಪ್ರಖ್ಯಾತಿಯಾದುವು

ಮೈಸೂರು ಸಿಲ್ಕ್ ಫಿಲೇಚರಿನ ರಿಬ್ಬನ್‌ಗಳು ನಾನಾ ಬಣ್ಣದವು ಬಂದಿವೆ

ಸೌಭಾಗ್ಯ ಸ್ಟೋರ್ಸ್, ದೇವರಾಜ ಮಾರ್ಕೆಟ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕೆ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಶ್ರೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

ಟಿ. ತಿಪ್ಪಯ್ಯ, ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] [redacted] [illegible]

[illegible] [redacted] [illegible]

ಸುಭಾಷ್ ಚಂದ್ರ ಬೋಸ್

ಗುಟ್ಟಾಗಿ ಹಿಂದೆ ೨೫ ವರ್ಷಗಳಿಂದ ನಮ್ಮ ಮನೆತನದಲ್ಲಿ ಚಾಲ್ತಿಯಲ್ಲಿರುವ "ಸಂತಾನ ಸಿಂಧೂರ" ಎಂಬ ಅದ್ಭುತ ಔಷಧ [illegible] ನಂತರ ಸಂತಾನ [illegible] ಡಾಕ್ಟರುಗಳ [illegible] ಅನೇಕ ಪ್ರಶಂಸಾ ಪತ್ರಗಳು [illegible]

ಎ. ರಾಮಸ್ವಾಮಿ ಅಯ್ಯರ್,

ಪ್ರೊಪ್ರೈಟರ್, 'ಸಂತಾನ ಸಿಂಧೂರ' ಆಫೀಸ್

[illegible]

ಸಂಪುಟ ೩] ಶುಕ್ರವಾರ ೮--೯--೪೪ [ಸಂಚಿಕೆ ೩೮

ಪೋರ್ಚುಗಲ್ಲಿಗೆ ಹಿಟ್ಲರರ ವಿಮಾನಯಾನವೇ ?

ಪೋರ್ಚುಗಲ್-ಜರ್ಮನ್ ಸಂಬಂಧ ಕಡಿದುಹೋಗುವುದು

ಚರ್ಚಿಲರ ಹತ್ತಿರ ಹಾರುವ ಬಾಂಬು ಬಿತ್ತು

ಪ್ರೈತರ್ ದಂಪತಿಗಳಿಗೆ ಸನ್ಮಾನ

ಮೈಸೂರು ೭

ಇಂಡಿಯಾ ದೇಶವನ್ನು ಬಿಟ್ಟು ಅಮೆರಿಕಾಕ್ಕೆ ವಾಪಸು ಹೋಗಬೇಕೆಂದು ಆಜ್ಞಪ್ತರಾಗಿರುವ ಡಾ|| ಆರ್. ಆರ್. ಪ್ರೈತರ್ ಮತ್ತು ಅವರ ಧರ್ಮಪತ್ನಿಯವರು ನಾಳೆ ರಾಜಧಾನಿಗೆ ಆಗಮಿಸುವರು. ಮೈಸೂರು ವಿದ್ಯಾರ್ಥಿ ಸಂಘದವರು ನಾಳೆ ಸಂಜೆ ೬ ಘಂಟೆಗೆ ರತ್ನಾವಳಿ ಥಿಯೇಟರಿನಲ್ಲಿ ಪ್ರೈತರ್ ದಂಪತಿಗಳಿಗೆ ಬಿನ್ನವತ್ತಳೆಯೊಂದನ್ನು ಅರ್ಪಿಸುತ್ತಾರೆ. ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಬಿ. ನಾರಾಯಣಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವುಂಟು.

ವಿಶ್ವವಿದ್ಯಾಲಯ ಸಂಘ

ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನವರಿಂದ ನಿಯೋಜಿತರಾದ ಬೊಂಬಾಯಿನ ಸಮಾಜ ಸೇವಾ ಕಾರ್ಯಕ್ಕಾಗಿರುವ ದೊರಾಬ್ಜಿ ಟಾಟಾರವರ ಪಾಠಶಾಲೆಯ ಡಾಕ್ಟರ್ ಕೇವಲ್ ಮೊತ್ವಾನಿಯವರು ಮೈಸೂರು ವಿಶ್ವವಿದ್ಯಾನಿಲಯದ ಸಂಘದ ಆಶ್ರಯದಲ್ಲಿ ವಿಷಯ ಉಪನ್ಯಾಸಗಳನ್ನು ಮಾಡುವರು. ಈ ದಿನ ಸಾಯಂಕಾಲ ೬-೩೦ ಗಂಟೆಗೆ ಜ್ಯೂನಿಯರ್ ಬಿ.ಎ. ಹಾಲಿನಲ್ಲಿ ಅವರ ಮೊದಲನೆಯ ಉಪನ್ಯಾಸವು ನಡೆಯುತ್ತದೆ.

ವಿವಿಧ ವಿನೋದಾವಳಿ

ನಾಣಿ ವಿಲಾಸ ಮೊಹಲ್ಲಾದಲ್ಲಿರುವ ರಂಗ್ಸ್ಲೀಯ ಸಂಘದ ಅಭಿವೃದ್ಧಿಗಾಗಿ ಇದೇ ಸಪ್ಟೆಂಬರ್ ೧೦ ನೇ ತಾ|| ಭಾನುವಾರ ಸಂಜೆ ೬-೩೦ ಕ್ಕೆ ಟೌನ್‌ಹಾಲಿನಲ್ಲಿ ವಿವಿಧ ವಿನೋದಾವಳಿ ನಡೆಯುತ್ತದೆ. ಉತ್ಪತ್ತಿಯಲ್ಲಿ ಕಸ್ತೂರಿ ಬಾ ನಿಧಿಗೂ ಕೊಡಲಾಗುತ್ತೆ.

ಚಿನ್ನದ ಧಾರಣೆ ಇಳಿಯಿತು

ಯೂರೋಪಿನಲ್ಲಿ ಮಿತ್ರರಿಗಾಗುತ್ತಿರುವ ವಿಜಯ ಪರಂಪರೆಗಳ ದೆಸೆಯಿಂದ ಬೊಂಬಾಯಿಯಲ್ಲಿ ಚಿನ್ನದ ಧಾರಣೆ ಹಠಾತ್ತನೆ ಇಳಿಯುತ್ತಿದೆ ತೊಲಕ್ಕೆ ೭೫ ರೂ. ಇದ್ದದ್ದು ೭೧ ರೂ. ಗೆ ಇಳಿದಿದೆ. ಬೆಳ್ಳಿಯ ಬೆಲೆಯೂ ಇಳಿದಿತ್ತಾದರೂ ಅನಂತರ ಹೆಚ್ಚಿತು.

ಅಖಂಡ ಹಿಂದೂಸ್ಥಾನ ಸಮ್ಮೇಳನ

ದೆಹಲಿಯಲ್ಲಿ ಮುಂದಿನ ಅಕ್ಟೋಬರ್ ೭ ಮತ್ತು ೮ ನೇ ತಾ|| ಗಳಲ್ಲಿ ಅಖಂಡ ಹಿಂದೂಸ್ಥಾನದ ಸಮ್ಮೇಳನವೊಂದನ್ನು ಡಾಕ್ಟರ್ ಪಿ. ಡಿ. ಸಾವರ್‌ಕರ್‌ರವರು ಸೇರಿಸುತ್ತಾರೆ. ಡಾ|| ಶ್ಯಾಮಪ್ರಸಾದ್ ಮುಖರ್ಜಿ, ಚಿರಂಜೀವ್, ಕಾರಾಸಿಂಗ್, ಸರ್ ಗೋಕುಲಚಂದ ನಾರಂಗರವರು ಭಾಗವಹಿಸುವರು.

ಸಿವಿಲ್ ಖಾತೆಗೆ ಮಿಲಿಟರಿ ಅಧಿಕಾರಿಗಳು

ನಾನಾ ಪ್ರಾಂತಗಳಲ್ಲಿ ಸಿವಿಲ್ ಖಾತೆಗಳ ಉನ್ನತ ಸ್ಥಾನಗಳಿಗೆ ಸಕ್ಕ ಅಧಿಕಾರಿಗಳು ದೊರೆಯದ ಕಾರಣದಿಂದ ಬಿಟ್ಟುಹೋಗಿರುವ ಜಾಗ ಮಿಲಿಟರಿ ಅಧಿಕಾರಿಗಳನ್ನು ಎಲ್ಲಾ ಪ್ರಾಂತಗಳಿಗೂ ಕಳುಹಿಸಲಾಗುವುದು. ಆ ಪ್ರಕಾರ ಬಂಗಾಳಾ ಪ್ರಾಂತಕ್ಕೆ ಕೆಲವು ಜನರನ್ನು ಕಳುಹಿಸಲಾಗಿದೆ. ಇವರು ಸಿವಿಲ್ ಸರ್ವಿಸ್ ಅಧಿಕಾರಿಗಳ ಸ್ಥಾನಗಳಲ್ಲಿ ಕೆಲಸ ಮಾಡುವರು.

ಹಿಟ್ಲರನು ಲಿಸ್ಬನ್ನಿಗೆ ಹೋಗಿರುವನೆ ?

ಬರ್ಲಿನ್ನಿನಿಂದ ಪೋರ್ಚುಗಲ್ ರಾಜಧಾನಿಗೆ ಅಪ್ಪಟ ಕಪ್ಪು ಬಣ್ಣದ ವಿಮಾನವೊಂದು ಬಂದಿತು. ಅದರಲ್ಲಿ ಹೆರ್ ಪ್ರೈವಮಾಯರ ಎಂದು ನಾಮಸೂಚಿಸಿದ ಪ್ರಮುಖರೊಬ್ಬರು ಬಂದಿದ್ದರು. ಈ ವಿಷಯವಾಗಿ ಈಗ ಗಾಳಿ ಸುದ್ದಿ ಕುತೂಹಲಕ್ಕೆ ಕಾರಣವಾಗಿದೆ. ಆಗಮಿಸಿದವನು ಹಿಟ್ಲರ್ ಅಥವಾ ಜರ್ಮನಿಯ ವಿದೇಶಾಂಗ ಮಂತ್ರಿ ರಿಬ್ಬೆನ್‌ಟ್ರಾಪ್ ಆಗಿರಬೇಕು ಎಂದು ಸಂಶಯಪಡಲಾಗಿದೆ. ಇದಲ್ಲದೆ ವಾನ್ ಪೇಪನ್ ಮತ್ತು ಇಬ್ಬರು ಜೈನಾಧಿಕಾರಿಗಳ ಮುಖ್ಯರು ಲಿಸ್‌ಬನ್ನಿಗೆ ಬರುವರೆಂದೂ, ಗೊತ್ತಾಗಿದೆ. ಫ್ರಾನ್ಸಿನಲ್ಲಿ ಜರ್ಮನ್ ಸೇನಾಪತಿಯಾಗಿದ್ದ ವಾನ್ ರೂನ್‌ಸ್ಟೆಟ್ ಮತ್ತು ಹೆರ್ ಗಾಯರಿಂಗ್ ಇವರುಗಳ ಓಡಾಟದ ವಿಷಯ ಇನ್ನೂ ಗೂಢವಾಗಿದೆ.

ಇವರೆಲ್ಲರೂ ಪಲಾಯನ ಮಾಡಿದರೆ, ಮುಂದೆ ಸಂಭವಿಸುವ ಯುದ್ಧಕ್ಕೆ ಇಂದೇ ಅದಿವರಿಯ ಕಡೆಯಿಂದ ಮಾತುಕತೆ ನಡೆಸಬಹುದೆಂದೂ ಇಂಗ್ಲೆಂಡಿನಿಂದ ಜರ್ಮನಿಯು ಶರಣಾಗತವಾಯಿತೆಂದು ವದಂತಿಗಳು ಬರುತ್ತಲಿವೆ. ಆದರೆ ಇದು ನಾಜಿಗಳ ಕುತಂತ್ರವೆಂದು ಅಭಿಪ್ರಾಯಪಡುತ್ತಿದೆ. ಮಿತ್ರಬಲಗಳು ಇನ್ನೂ ಮುಂದೆ ಬರದಿರುವಂತೆ ತಡೆಯಲು ಮಾಡಿರುವ ತಂತ್ರವಿರಬಹುದು.

ಜರ್ಮನಿ ಶಾಂತಿ ಸೂಚನೆಗಳಿಲ್ಲ

ಕಳೆದ ಎರಡು ದಿನಗಳಿಂದಲೂ ಹಬ್ಬಿದ್ದ ಶಾಂತಿಯಾಗುವುದೆಂಬ ವದಂತಿಗಳ ಸತ್ಯಾಂಶವನ್ನು ವಿಚಾರಿಸಲಾಗಿ, ಜರ್ಮನಿಯ ವಿದೇಶ ಕಛೇರಿಯವರು ಯಾವ ಸೂಚನೆಯೂ ಬಂದಿಲ್ಲವೆಂದೂ, ರಾಬರ್ಟ್ ಲೇ ಕಡೆಯಿಂದ ತಿಳಿಸುತ್ತಾರೆ. ಹಿಟ್ಲರ್ ಮತ್ತು ಅವನ ನಾಜಿ ಸೈನ್ಯದೊಂದಿಗೆ ಶಾಂತಿ ಮಾಡುವುದು ಎಂದಿಗೂ ಸಾಧ್ಯವಿಲ್ಲವೆಂದೂ ಜರ್ಮನಿಯ ಸೋಲಿನಿಂದ ಕ್ರಮವಾಗಿ ಶರಣಾಗತರಾಗಬೇಕೆಂದೂ ಹೇಳಲಾಗಿದೆ.

ಮೋಟರು ಅಪಘಾತ

ಬೆಂಗಳೂರಿನ ಬಂಗಿ ಪ್ರದೇಶದ ಕೊಯಿರಿ ಹತ್ತಿರ ಹರಿಯುವ ಕಾಲುವೆಯಲ್ಲಿ ಮೋಟರೊಂದು ಮಗುಚಿ ಬಿದ್ದಿತು. ಶಿವಾಜಿನಗರ ಪಕ್ಷದ ಪೈಲಟಿನವರ ಕ್ಯಾಪ್ಟನ್ ಒಬ್ಬರು ಮರಣ ಹೊಂದಿದರು. ಸತ್ರಿಯ ಸ್ಥಳವಾಗಿದೆ ಎಂದು ಕೆಲವು ವಿದ್ಯಾರ್ಥಿಗಳೆ ಇದನ್ನು ಹೇಳಿ ಇದ್ದರು.

ದಿವಾನರು ಮದರಾಸಿಗೆ

ಸ್ವಂ.ಸು.ಪ್ರೋ] ಬೆಂಗಳೂರು ೮

ದಿವಾನರು ಈ ದಿನ ಮತ್ತು ನಾಳೆ ಆಫೀಸಿನಲ್ಲಿ ಇರುವುದಿಲ್ಲ. ಅವರು ಸ್ವಂತ ಕೆಲಸದ ಮೇಲೆ ಮದರಾಸಿಗೆ ಪ್ರಯಾಣ ಮಾಡುತ್ತಾರೆ. ಸೋಮವಾರ ವಾಪಸು ಬರುವರೆಂದು ಹೇಳಲಾಗಿದೆ.

ದಿವಾನರು, ಸಚಿವರುಗಳು ರಾಜಧಾನಿಗೆ

ನವರಾತ್ರಿ ಉತ್ಸವಗಳ ಮತ್ತು ಪ್ರ. ಪ್ರ. ಸಭೆಯ ಅಧಿವೇಶನದ ಸಂಬಂಧದಲ್ಲಿ ದಿವಾನರು ಮತ್ತು ಸಚಿವರುಗಳು ೧೭ ನೇ ತಾರೀಖು ರಾಜಧಾನಿಗೆ ಪ್ರಯಾಣ ಮಾಡುವರು.

ಮಿಲಿಟರಿ ಮುಖ್ಯಾಧಿಕಾರಿಗಳು

ದೇಶೀಯ ಸಂಸ್ಥಾನಗಳ ಮತ್ತು ಮಿಲಿಟರಿ ಸಲಹೆಗಾರರಾದ ಮೇಜರ್-ಜನರಲ್ ಹಾರ್ವೆಯವರು ನಿನ್ನೆ ಸಂಜೆ ಕಂಟೋನ್‌ಮೆಂಟಿನಲ್ಲಿ ದಿವಾನರನ್ನು ಭೇಟಿ ಮಾಡಿ, ದೀರ್ಘಕಾಲ ಮಾತುಕತೆ ನಡೆಸಿದರು. ಸಚಿವರಾದ ಶ್ರೀ ಕಪ್ಪಣ್ಣನವರೂ ಹಾಜರಿದ್ದರು.

ನೂತನ ಜಾತಿಗೆ ಸರ್ಕಾರಿ ಬಗ್ಗೆ ಹೊಸ ಆಜ್ಞೆ

ಮೈಸೂರು ಸಂಸ್ಥಾನದ ಹರಿಜನರ ಪರವಾಗಿ ಈಗ ಕೆಲವು ಹಕ್ಕುಗಳನ್ನು ತಂದಿರುತ್ತಾರೆ. ಕೋರ್ಟಿನಲ್ಲಿ ಪಡೆದಿರುವ ಅಥವಾ ಕಾನೂನು ಮತ್ತು ಸಂಪ್ರದಾಯದಂತೆ ವಿದ್ಯುಕ್ತ ಮಾರ್ಗದಲ್ಲಿ ಸರ್ಕಾರಿ ಕಚೇರಿಗಳಿಗೆ ಪ್ರವೇಶ ಮಾಡಬಹುದೆಂದೂ, ಈಗ ಬಡವರ ಮನೆ ಬಾಡಿಗೆ ಮುಟ್ಟಿಸಿ ಅರ್ಜಿ ತೆಗೆದುಕೊಳ್ಳಬೇಕೆಂದೂ ಸೂಚಿಸಲಾಗಿದೆ.

ವರ್ತಕರುಗಳಿಗೆ ಎಚ್ಚರಿಕೆ

ಸೆಂಟ್ರಲ್ ಜೈಲಿನಲ್ಲಿ ಪ್ರಯೋಗವಾಗಿದ್ದ ಸರಕುಗಳನ್ನು ಬಿ ವಿಯೇಷಿಯ ಬೆಂಗಳೂರಿನ ಸಂಗ್ರಹದಲ್ಲಿ ಹಾಕಿದ ಸರಕಾರದ ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರ್ ಎಂಬುದಾಗಿ ಹೇಳಿಕೊಂಡು ಹಿಡಿದಿದ್ದಾನೆಂದು, ಕೆಲವು ವರ್ತಕರು ಎಚ್ಚರದಿಂದ ಇದ್ದು ವ್ಯಕ್ತಿಗೆ ಅವರು ಬಂದರೆ ಸಿವಿಲ್ ಸಪ್ಲೈಸ್ ಆಫೀಸಿಗೆ ಅಥವಾ ಪೋಲೀಸಿನವರಿಗೆ ತಿಳಿಸಬೇಕೆಂದು ಸೂಚಿಸಲಾಗಿದೆ.

ಚರ್ಚಿಲರ ಬಳಿ ಹಾರುವ ಬಾಂಬು

ಚರ್ಚಿಲರ ಸ್ವಂತ ಗೃಹದ ಹತ್ತಿರ ಹಾರುವ ಬಾಂಬೊಂದು ಬಿದ್ದಿತು, ಅವರೇನೂ ಗಾಯಗೊಳ್ಳಲಿಲ್ಲ.

ಪೋರ್ಚುಗಲ್-ಜರ್ಮನ್ ಸಂಬಂಧ ತಪ್ಪುತ್ತಿದೆ

ಸದ್ಯದಲ್ಲಿಯೇ ಪೋರ್ಚುಗಲ್ ರಾಷ್ಟ್ರವು ಜರ್ಮನಿಯೊಂದಿಗೆ ರಾಜತಂತ್ರದ ಸಂಬಂಧವನ್ನು ಬಿಡುವುದೆಂದೂ, ಪೆಸಿಫಿಕ್ ಸಾಗರದಲ್ಲಿರುವ ಟಿಮೋರ್ ದ್ವೀಪವನ್ನು ಜಪಾನಿನಿಂದ ಪುನಃ ಕಿತ್ತುಕೊಳ್ಳಲು ಸೇನೆಯನ್ನು ಕಳುಹಿಸಲೇ ಬೇಕಾಗುತ್ತದೆಯೆಂದೂ ವರ್ತಮಾನ.

ಜಪಾನ್ ಅಪಾಯಸ್ಥಿತಿಯಲ್ಲಿದೆ

ಜಪಾನು ದೇಶದ ಪ್ರತಿನಿಧಿ ಸಭೆಯು ನೆನ್ನೆ ಸೇರಿದ ಸಮಯದಲ್ಲಿ ನೂತನ ಮುಖ್ಯ ಮಂತ್ರಿಗಳಾದ ಕೊಯಿಸೋರವರು ಜಪಾನಿಯರನ್ನು ಎಚ್ಚರಿಸುತ್ತಾ, ಜಪಾನ್ ರಾಜ್ಯದಲ್ಲಿಯೇ ಮಿತ್ರರು ಬಂದಿಳಿಯುವ ಪ್ರಯತ್ನಗಳಾಗಬಹುದೆಂದೂ, ಇದಕ್ಕೆ ಜನರು ತಯಾರಾಗಿರಬೇಕೆಂದೂ ತಿಳಿಸಿದರು. ಜಪಾನ್ ಸಾಮ್ರಾಜ್ಯದ ಏಳಿಗೆ ಅಧಿನಾಯಕರ ಅಂತ್ಯಕ್ರಿಯೆಯನ್ನು ಶೀಘ್ರವಾಗಿಸಿರುವ ಸಂದಿಗ್ಧ ಪರಿಸ್ಥಿತಿಯು ಜಪಾನಿಗೆ ಬಂದಿದೆಯೆಂದು ಅವರು ತಿಳಿಸಿದ್ದಾರೆ. ಪ್ರತಿನಿಧಿ ಸಭೆಯು ಈ ಅಧಿವೇಶನವು ಶಾಂತರೀತಿಯಿಂದ ಮುಗಿಯಿತೆಂದು ಅವರು ಹೇಳಿದರು.

ಕಸ್ತೂರಿ ಬಾ ನಿಧಿಗೆ ಸ್ಥಳೀಯ ಸಂಸ್ಥೆಗಳ ದಾನ ಕೊಡದು

ಕಸ್ತೂರಿ ಬಾ ಸ್ಮಾರಕ ನಿಧಿಗೆ ಸ್ಥಳೀಯ ಸಂಸ್ಥೆಗಳು ಹಣ ಸಹಾಯ ಮಾಡಕೂಡದೆಂದು ಮದರಾಸು ಸರಕಾರದ ಪ್ರಕಟಣೆಯೊಂದು ತಿಳಿಸುತ್ತದೆ. ಆದರೆ ಈ ಬೋರ್ಡುಗಳು ತಮ್ಮ ಆಯವ್ಯಯ ಪಟ್ಟಿಯನ್ನು ಸರಿಹೊಂದಿಸಿಕೊಳ್ಳುವ ಸ್ಥಿತಿಯಲ್ಲಿ ಮತ್ತು ಇನ್ನೂ ಪ್ರಾಮುಖ್ಯವಾದಂತಹ ತುರ್ತು ಖರ್ಚಿನ ಮೊಬಲಗುಗಳನ್ನು ಕೊಡುವ ಬೋರ್ಡುಗಳಲ್ಲಿ ಹಣವಿಲ್ಲ.

ತಿಂಗಳಿಗೆ ೧೮೦೦ ಬಾಂಬರು

ಅಮೆರಿಕಾ ಸರಕಾರವು ತಿಂಗಳಿಗೆ ೧೮೦೦ ರಂತೆ ಬಾಂಬರುಗಳು ತಯಾರಾಗುತ್ತಿವೆ.

ಗಣಪತಿ ಮಂಗಳಾರತಿ

ಸ್ವಂ.ಪ್ರ] ನಂಜನಗೂಡು, ೭

ನಂಜನಗೂಡಿನಲ್ಲಿ ೬ ನೇ ತಾ|| ನ ದಿನ ಜನತಾ ಮಹಿಳಾ ಸಂಘದ ಆಶ್ರಯದಲ್ಲಿ ಗಣಪತಿ ಮಂಗಳಾರತಿಯು ನೆರವೇರಿತು. ಹಿರಿಯ ಹೆಣ್ಣು ಮಕ್ಕಳು, ಬಾಲಿಕೆಯರು ಪದ್ಯಗಳನ್ನು ಹಾಡಿದರು. ಬಾಲಿಕೆಯರಿಗೆ ಬಹುಮಾನಗಳನ್ನು ಹಂಚಲಾಯಿತು.

ಕಾನೂನುಗಳಿಗೆ ಪ್ರಭುಗಳ ಅಂಗೀಕಾರ

ಮೈಸೂರು ಶಾಸನಸಭೆಗಳು ಅಂಗೀಕರಿಸಿದ ಕಾನೂನು ನಿರ್ಣಯಗಳಿಗೆ ಶ್ರೀಮನ್ಮಹಾರಾಜರವರು ಅಂಗೀಕಾರ ನೀಡಿದ್ದಾರೆ.

ಪರಿಶೀಲನೆ

[illegible]

ಉಪನ್ಯಾಸ

[illegible]

ಮೈಸೂರು ಮಕ್ಕಳ ಕೂಟ

[illegible]

ಗಣಪತಿ ಮಂಗಳಾರತಿ

[illegible]

ಕಸ್ತೂರಿ ಬಾ ನಿಧಿ

[illegible]

ರಂಗವಲ್ಲಿ ಬಂಡೆ ಉರುಳಿ ದುರಂತ

ಸ್ವಂ.ಸು.] ಬೆಂಗಳೂರು ೭

[illegible] ರಂಗವಲ್ಲಿ ಬಂಡೆಯೊಂದು ಮೇಲಿನಿಂದ ಉರುಳಿಕೊಂಡು ಬರುವ [illegible] ಆರು ಜನರು ಮೃತರಾದರು. [illegible] ಆಸ್ಪತ್ರೆಗೆ ಸಾಗಿಸಲಾಯಿತು.

ಪೌರಸಭಾಧ್ಯಕ್ಷರಿಗೆ ಸನ್ಮಾನ

[illegible]

ಇಟಲಿಗೆ ಅಪಾಯ

[illegible]

ಬಡವರಿಗೆ ಗೃಹವಸತಿ

[illegible]

ಮಕ್ಕಳ ಆಹಾರ ವಸ್ತು ಮಾರಾಟ

[illegible]

ನಾಟಕರತ್ನ ಜಿ.ಹೆಚ್. ವೀರಣ್ಣನವರ
ಗುಬ್ಬಿ ಥಿಯೇಟ್ರಿಕಲ್ ಕಂಪೆನಿ
ಟೌನ್‌ಹಾಲ್ ಮೈದಾನದ
ಸ್ವಂತ ಧನಲಕ್ಷ್ಮೀ ಥಿಯೇಟರಿನಲ್ಲಿ
ತಾ|| ೭-೯-೪೪ ನೇ
ಗುರುವಾರದಿಂದ
೩ ದಿನಗಳು ಪ್ರತಿದಿನರಾತ್ರಿ [illegible]
ಶ್ರೀ ಕೃಷ್ಣಲೀಲ

ಆಪೇರಾ ಟಾಕೀಸ್
ತಾ|| ೮-೯-೪೪ ರಿಂದ
ಪ್ರತಿ ದಿನ ೩ ಆಟಗಳು
[illegible]
ಮಹಾತ್ಮ ವಿದುರ
([illegible])
ಮುಂದಿನ ಆಕರ್ಷಣೆ:-
ಸವಾಲ್

MEDICINES
Take your requirements from
RAGHULAL & CO.,
1748, Sayaji Rao Road.
(Upstairs, Mysore Hall), MYSORE
ಔಷಧಗಳು
ನಿಮಗೆ ಬೇಕಾಗುವುದೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೋ,
1748, ಸಯ್ಯಾಜೀರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು

Edited, printed and published by A. R. Nagarajan at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕೆ
[illegible]
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರ್ಯಾಂಡ್ ಕಾಫಿ ಪುಡಿ
ಉಪಯೋಗಿಸಿ
ಬಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
[illegible] ಮಾರಲು ಕಮೀಷನ್ [illegible]

ಬಿಲ್ಡಿಂಗ್ ಸಾಮಾನು
ಸಿಮೆಂಟ್ ಗ್ಲಾಸ್ ಶೀಟ್ ಪುಸ್ತಕ ಮೋಜು
ಟೀಕ್ ಬಚ್ಚಲ ರ್ಯಾಕ್ ಪೆಟ್ಟಿಗೆ ನೇಗಿಲು
ಮಿಂಚು ಗಡಿಯಾರ ಕೊಪ್ಪರಿಗೆ ಬೆಂಚು
ಬಾಗಿಲು ವಿನ್ಯಾಸಗಳು ಇನ್ನೂ ಅನೇಕ
ಸಿಟಿ ಎಂಜನೀರಿಂಗ್ ಕೋ
[illegible], ಮೈಸೂರು.

Morning Shows From 8-9-44 at NEW OPERA TALKIES
For 4 Days
"You'll Never Get Rich"
Starring:- Fred Astaire, Rita Hayworth, with
Robert Benchley, John Hubbard.



ಸಂಪುಟ ೩] ಶನಿವಾರ ೫-೫-೪೫ [ಸಂಚಿಕೆ ೩೯

ಮೆಡ್ರಿಡ್ಡಿನಲ್ಲಿ ಹಿಟ್ಲರನಿಗೆ ಆಶ್ರಯವೇ?

ವ್ಯೂಸ್ ನದಿ ಹತ್ತಿರ ಅಮೆರಿಕನರೊಡನೆ ಜರ್ಮನರ ಕಾಳಗ
ಜಪಾನ್ ರಾಯಭಾರಿಯೊಂದಿಗೆ ಹಿಟ್ಲರರ ಸಮಾಲೋಚನೆ

ಜಂಬೂಸವಾರಿ ಮಾರ್ಗದಲ್ಲಿ ಬದಲಾವಣೆ

ಮೈಸೂರು ೪

ಈ ಸಲದ ದಸರಾ ವಿಜಯದಶಮಿಯ ದಿನ ನಡೆಯುವ ಜಂಬೂಸವಾರಿ ಉತ್ಸವ ಮೆರವಣಿಗೆಯ ಮಾರ್ಗದಲ್ಲಿ ಬದಲಾವಣೆಯಾಗಿದೆಯೆಂದು ತಿಳಿಯುಬರುತ್ತದೆ. ದಿನದ ಸಂಜೆ ಪದ್ಧತಿಯಂತೆ ಉತ್ಸವವು ಅರಮನೆಯಿಂದ ಉತ್ತರ ಕೋಟೆಬಾಗಿಲು, ... ಬ್ಯಾಂಕ್ ... ಹೋಗುವ ... ಆಯುರ್ವೇದ ಆಸ್ಪತ್ರೆ ... ಸೀದಾ ಬನ್ನಿಮಂಟಪ ... ಸೇರುವುದು ... ಉತ್ತರ ಕೋಟೆ ಬಾಗಿಲಿನಿಂದಲೇ ಎಂದಿನಂತೆ ಅರಮನೆಯ ... ತಲುಪುವುದು. ಇದಕ್ಕಾಗಿ ಸದರಿ ... ಅಲಂಕೃತವಾಗುತ್ತಿದೆ.

ನಗುವ ನಂದ'ನ ಪುನರಾಗಮನ

ರಾಜಧಾನಿಯಲ್ಲಿ ಚಿರಪರಿಚಿತ ಪತ್ರಿಕೋದ್ಯೋಗಿಗಳಾಗಿದ್ದು ಇತ್ತೀಚೆಗೆ "ಜನವಾಣಿ" ಪತ್ರಿಕೆಯ ಸಂಪಾದಕರಾಗಿ ... ಸುದ್ದಿಯ ... ಸಲುವಾಗಿ ನಡೆದಿದ್ದ ಶ್ರೀ|| ಕೆ. ಜೀವಣ್ಣನವರು ನಗುವ ನಂದನ ಸಂಪಾದಕತ್ವವನ್ನು ಪುನರ್ವಹಿಸಿಕೊಂಡು ... ಸಂಚಿಕೆಯ ಪ್ರಕಟಣೆಯಂದನ್ನು ... ಇದರಲ್ಲಿ "... ಚಿತ್ರ", "ಹುಸಿ ನಗೆ", "ರಾಜಕೀಯ ...", "ಸಿನಿಮಾ ಪ್ರಪಂಚ" ... ಹಾಗೂ ... ಕಥೆಗಳು ... ಪತ್ರಿಕೋದ್ಯೋಗಿಗಳಾದ ... ವ್ಯಸನ ... ಮಾಸಿಕ ... ಪ್ರಗತಿಪಥ ... ನಗುವ ನಂದನಾಗಲೆಂದು ಆಶಿಸುತ್ತೇವೆ.

ಪ್ರೆಂಚ್ ದಂಪತಿಗಳ ಆಗಮನ

ಈ ದಿನ ಮಧ್ಯಾಹ್ನ ಬೆಂಗಳೂರು ಮೇಲ್ ... ರೆವರೆಂಡ್ ಆರ್. ಆರ್. ... ದಂಪತಿಗಳು ಮೈಸೂರಿಗೆ ಆಗಮಿಸಿದರು. ... ಶ್ರೀ ನಂದಿ ... ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ... ವಿದ್ಯಾರ್ಥಿ ... ಅವರನ್ನು ಸ್ವಾಗತಿಸಿದರು. ...

ವೀರಶೈವ ವಿದ್ಯಾರ್ಥಿ ಸಂಘ

ಮೈಸೂರಿನ ... ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ|| ... ಅವರು ... ಸಂಸ್ಕೃತ ... "ಕನ್ನಡ ಸಾಹಿತ್ಯದಲ್ಲಿ ಕ್ರಾಂತಿ" ಎಂಬ ವಿಷಯವಾಗಿ ಭಾಷಣ ಮಾಡುವರು. ... ಶ್ರೀಮತಿ ... "ವಚನ ಸಂಗೀತ" ವೂ ನಡೆಯುವುದು. ಸರ್ವರಿಗೂ ಆಹ್ವಾನವಿದೆ.

ಶ್ರೀ ಕೃಷ್ಣ ಜಯಂತಿ ಮಹೋತ್ಸವ

ಮೈಸೂರು ... ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಪದ್ಧತಿ ಪ್ರಕಾರ ಈ ವರ್ಷವೂ ... ಶ್ರೀ ಕೃಷ್ಣ ಜಯಂತಿ ... ದಿನವೂ ... ಗಂಟೆ ವೇಳೆ ... ಸಂಗೀತ ಮತ್ತು ಹರಿಕಥೆಗಳು ನಡೆಯುತ್ತವೆ.

ದಸರಾ ಫುಟ್ ಬಾಲ್ ಪಂದ್ಯ

ದಸರಾ ಫುಟ್ ಬಾಲ್ ಪಂದ್ಯಗಳು ಈ ಸಲವೂ ನಡೆಯಲೇರ್ಪಾಡಾಗಿವೆ. ಪಂದ್ಯಗಳಲ್ಲಿ ಭಾಗವಹಿಸುವ ಟೀಮುಗಳು ... ಕೊಡಬಹುದೆಂದು ಮೈಸೂರು ಸಂಸ್ಥಾನದ ಫುಟ್ ಬಾಲ್ ... ತಿಳಿಸಿದ್ದಾರೆ. ... ಪಂದ್ಯಗಳ ತಾರೀಕನ್ನು ... ಪಡಿಸುವರು.

ಜರ್ಮನ್ ಪ್ರತಿಭಟನೆ

ಇದೇ ಪ್ರಥಮತಃ ಅಮೆರಿಕ ಸೇನೆಗೆ ಜರ್ಮನರಿಂದ ಪ್ರತಿಭಟನೆಯಾಗುತ್ತಿರುವುದು. ವ್ಯೂಸ್ ... ಪೂರ್ವದಲ್ಲಿಂದ ... ಸೀಗ್ ಫ್ರಿಡ್ ... ಜರ್ಮನ್ ಸೇನೆಗ ... ಎದುರಿಸಬೇಕಾಗಿದೆ.

ಸೋಫಿಯಾದಲ್ಲಿ ದಂಗೆ

ಸೋಫಿಯಾದಲ್ಲಿ (ಬಲ್ಗೇರಿಯಾ ರಾಜಧಾನಿ) ... ದಂಗೆ ... ವರದಿಯಾಗಿದೆ.

ಸಂಗ್ರಾಮ ದುಷ್ಕರ್ಮಿಗಳು ಅರ್ಜಂಟೈನಾಕ್ಕೆ ಹೋದರೆ?

ಜರ್ಮನಿಯ ಸಂಗ್ರಾಮಕ್ಕೆ ಕಾರಣಕರ್ತರಾದ ದುಷ್ಕರ್ಮಿಗಳು ಅರ್ಜಂಟೈನಾ ದೇಶಕ್ಕೆ ತಪ್ಪಿಸಿಕೊಂಡು ಪಲಾಯನ ಮಾಡಿರಬಹುದೆಂಬ ಸುದ್ದಿಯು ... ಎಂಬುದನ್ನು ಗೊತ್ತು ... ಸಂಯುಕ್ತ ಸಂಸ್ಥಾನದ ... ನಡೆಸುತ್ತಿದ್ದಾರೆ.

ಜಪಾನ್ ರಾಯಭಾರಿ-ಹಿಟ್ಲರರ ಸಂಭಾಷಣೆ

ಜರ್ಮನ್ ಸೇನಾಪತಿಗಳ ... ಹಿಟ್ಲರರು ಜಪಾನ್ ರಾಯಭಾರಿ ಜನರಲ್ ಓಶಿಮಾರನ್ನು ಕರೆಸಿಕೊಂಡು ಸಂಭಾಷಣೆ ನಡೆಸಿದರು. ... ಯುದ್ಧದ ... ಚರ್ಚಿಸಲಾಯಿತೆಂದು ... ಸ್ಟೇಲಿನ್ ... ಜರ್ಮನ್ ರಾಯಭಾರಿ ... ಬರ್ಲಿನ್ನಿಗೆ ... ಮ್ಯಾಡ್ರಿಡ್ ... ಗೊತ್ತಾಗಿದೆ.

ಮೆದ್ರಿಡ್ ನಲ್ಲಿ ಹಿಟ್ಲರರು ಆಶ್ರಯ ಪಡೆಯುವರೆ?

ಹಿಟ್ಲರು ಮತ್ತು ಇನ್ನಿತರ ಪ್ರಮುಖ ಯುದ್ಧೋತ್ಸಾಹಿಗಳು ಮೆದ್ರಿಡ್ಡಿನಲ್ಲಿ ಆಶ್ರಯ ಪಡೆಯಬಹುದೆಂದೂ, ಈ ಘಟನೆಯು ಯಾವ ಕ್ಷಣದಲ್ಲಾದರೂ ಸಂಭವಿಸಬಹುದೆಂದೂ ಲಂಡನ್ನಿನ ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆ ಪ್ರಕಟಿಸಿದೆ. ... ನಾಜಿ ... ಸ್ಪೇನ ... ಜರ್ಮನ್ ರಾಯಭಾರಿ ... ಎಂದೂ ಗೊತ್ತಾಗುತ್ತದೆ.

ಟೋಕಿಯೋ ... ಜರ್ಮನ್ ... ವಾಗುತ್ತಿದೆ.

ಕೆ. ವಿ. ಅನಂತರಾಮರ ಕಾರ್ಯಕ್ರಮ

ಸ್ವಂ.ವ.ರಿಪೋರ್ಟರ್] ಬೆಂಗಳೂರು ೪

... ಅನಂತರ ದಕ್ಷಿಣ ... ಇಂಟರ್ ನ್ಯಾಷನಲ್ ... ಸ್ವೀಕರಿಸುವರು.

ಮೊದಲನೆ ಟರ್ಮ್ ಪರೀಕ್ಷೆ ಇಲ್ಲ

ಕಾಗದದ ಅಭಾವದಿಂದ, ಕಳೆದ ವರ್ಷದಂತೆಯೇ, ಈ ವರ್ಷವೂ, ಶಾಲೆಗಳಲ್ಲಿ ಮೊದಲನೇ ಟರ್ಮ್ ಪರೀಕ್ಷೆಯನ್ನು ನಡೆಸಬೇಕಾದ್ದಿಲ್ಲವೆಂದು ವಿದ್ಯಾಇಲಾಖೆಯಿಂದ ಪ್ರಕಟಿಸಲಾಗಿದೆ.

ಪೈಲಟರಿಗೆ ಅವಕಾಶ

... ಪೈಲಟರವರು ... ಹೋಗಲು ... ಮೈಸೂರು ಸಂಸ್ಥಾನದಲ್ಲಿ ... ಸರ್ಕಾರದವರು ... ಆಜ್ಞೆಯಾಗಿತ್ತು.

ವಿದ್ಯುಚ್ಛಕ್ತಿ ಮೋಟಾರ್ ತಯಾರಿ

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ... ಮೋಟಾರನ್ನು ತಯಾರಿಸಿದ್ದಾರೆ. ಅವುಗಳನ್ನು ಪ್ರಯೋಗ ಕ್ಷೇತ್ರಕ್ಕೆ ... ಪರೀಕ್ಷಿಸಲಾಗಿದೆ.

ಹಣಕಾಸು ಸ್ಥಿತಿ ಪರಿಶೀಲನೆ ಅಧಿಕಾರಿ

... ಹಣಕಾಸಿನ ಸ್ಥಿತಿಯನ್ನು ಪರಿಶೀಲಿಸಿ ... ಶ್ರೀ ಎಂ. ಸುಬ್ರಹ್ಮಣ್ಯಂ ಎಂಬುವರನ್ನು ... ನೇಮಿಸಲಾಗಿದೆ. ಅವರಿಗೆ ತಿಂಗಳಿಗೆ ೭೦೦೦ ರೂ. ಕೊಡುವುದಾಗಿ ...

ಅಡ್ವೋಕೇಟರಿಗೆ ಜಿಲ್ಲಾ ಜಡ್ಜ್ ಹುದ್ದೆ

ಬೆಂಗಳೂರು ಜಿಲ್ಲಾ ಮತ್ತು ಸೆಷನ್ಸ್ ... ಶ್ರೀ ... ಬೆಂಗಳೂರಿನ ಪ್ರಮುಖ ವಕೀಲರಲ್ಲೊಬ್ಬರಾದ ಶ್ರೀ ಆರ್. ... ನೇಮಿಸುವ ಸಂಭವವಿದೆಯೆಂದು ... ತಿಳಿದುಬಂದಿದೆ.

ವಿದ್ಯುಚ್ಛಕ್ತಿ ಯೋಜನೆಗಳ ಪರಿಶೀಲನೆ

... ವಿದ್ಯುಚ್ಛಕ್ತಿ ಯೋಜನೆಗಳನ್ನು ಪರಿಶೀಲಿಸಲು ... ಸರ್ಕಾರದಿಂದ ... ಬೆಂಗಳೂರಿಗೆ ... ತಿಂಗಳ ... ಪರಿಶೀಲನೆ ...

ಜನತೆ ಪತ್ರಕರ್ತರ ಸಂಘ

ಸ್ವಂ.ವ.] ಚನ್ನಪಟ್ಟಣ ೮

ಈ ಊರಿನ ಜನತೆ ಪತ್ರಕರ್ತರೆಲ್ಲಾ ಸೇರಿ ಒಂದು ಸಂಘವನ್ನು ಸ್ಥಾಪಿಸಿಕೊಂಡಿರುತ್ತಾರೆ. ಸಂಘದ ಉದ್ದೇಶ, ಪತ್ರಿಕೆಗಳಿಗೆ ಸುದ್ದಿಗಳನ್ನು ಕಳುಹಿಸುವುದರಲ್ಲಿ ದೊರೆಯುತ್ತಿಲ್ಲವಾದ್ದರಿಂದ ಪತ್ರಿಕೆಗೆ ಸುದ್ದಿಗಳನ್ನು ಸಮರ್ಪಕವಾಗಿ ಒದಗಿಸುವುದು, ಪತ್ರಕರ್ತರ ಸರ್ವತೋಮುಖವಾದ ಬೆಳವಣಿಗೆ ಬಗ್ಗೆ ಪ್ರಯತ್ನಿಸುವುದು. ಈ ಸಂಘಕ್ಕೆ ಶ್ರೀ|| ಸಿ ಟಿ ರಾಮಕೃಷ್ಣಶೆಟ್ಟಿ ರವರು ಅಧ್ಯಕ್ಷರನ್ನಾಗಿಯೂ, ಶ್ರೀ|| ಅಂಕಂ ರಾಮಶೆಟ್ಟಿ ರವರು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಮುಂದೆ ಕಂಡವರನ್ನು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿ ಆರಿಸಲಾಯಿತು:- ಶ್ರೀ ಗಣಪತಿ ಶೆಟ್ಟಿ, ಅಬ್ದುಲ್ ವಹಾಬ್ ಸಾಹೇಬ್, ಬಿ. ಬೋರೇಗೌಡ, ಸಿ. ಆರ್. ನಾರಾಯಣರಾವ್, ಸಿ.ಎಂ. ರಾಮರಾವ್ ಮತ್ತು ರುಕ್ಮಂ ವೆಂಕಟಾಚಲಶೆಟ್ಟಿ

ಅಕ್ಕಿ ಸರಬರಾಜು

ಈ ಊರಿನ ಎಲ್ಲಾ ಡಿಪೋಗಳಲ್ಲಿಯೂ ಈಗ ಹೊಸದಾಗಿ ಬಂದಿರುವ ಕಾರು ಭತ್ತದ ಅಕ್ಕಿ ಸರಬರಾಜಾಗುತ್ತಿದೆ. ಈ ಭತ್ತ ಎಂಬ ಹಳೆ ಅಕ್ಕಿಯಾದ್ದರಿಂದ ಅನ್ನ ಸರಿಯಾಗಿ ಆಗದೆ ಜನರು ತೊಂದರೆಪಡುತ್ತಿದ್ದಾರೆ. ಈ ವ್ಯರ್ಥ ಅಕ್ಕಿ ಅನ್ಯಾಯವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಗಮನಿಸಿ, ಒಂದು ತಿಂಗಳನಂತರ ಒಳ್ಳೆ ಭತ್ತದಿಂದ ಅಕ್ಕಿ ಮಾಡಿಸಿ ಸರಬರಾಜು ಮಾಡಬೇಕಾಗಿ ಜನರಿಗೂ ಅನುಕೂಲ

ಸಭಾ ತ್ಯಾಗ

ಸಂಘದ ಸಭೆಯು ಮೊನ್ನೆ ದಿನ ಸೇರಿದ್ದಾಗ ಅಧ್ಯಕ್ಷರಿಗೂ ಉಪಾಧ್ಯಕ್ಷರಿಗೂ ಬಿಸಿ ಬಿಸಿ ಮಾತುಗಳು ನಡೆದು, ಉಪಾಧ್ಯಕ್ಷರನ್ನು ಹೊರಕ್ಕೆ ಹೋಗಬೇಕೆಂತೆ ಅಧ್ಯಕ್ಷರು ಅಪ್ಪಣೆ ಮಾಡಿದರು. ಉಪಾಧ್ಯಕ್ಷ ಶ್ರೀ|| ಅಂಕಂ ಸಂಜೀವಶೆಟ್ಟರ, ಶ್ರೀ|| ಕೃಷ್ಣಪ್ಪ, ಶ್ರೀ|| ನರಸಿಂಹಶೆಟ್ಟಿ, ಇವರುಗಳು ಅಸಮಾಧಾನ ಸೂಚಕವಾಗಿ ಸಭೆಯನ್ನು ಬಿಟ್ಟು ಹೊರಟುಹೋದರು.

ಈ ತಿಂಗಳು ೧ನೇ ತಾರೀಖಿನಿಂದ ಈ ಊರಿನ ಪತ್ರಗಳಲ್ಲಿ ನೀರು ಬಿಡುತ್ತಿದ್ದಾರೆ.

ಕಸ್ತೂರಿ ಬಾ ನಿಧಿ ಸಂಗ್ರಹ

ಸ್ವಂ.ವ.] ಕೃಷ್ಣರಾಜನಗರ ೮

ಈ ಊರಿನ ಶ್ರೀ ಗಳಾದ ಆರ್. ಬಿ ಪುಟ್ಟಬಸಪ್ಪ, ಪೇಟೆ ಅಂಗಡಿ ಚನ್ನಮಲ್ಲಪ್ಪ ಮತ್ತು ಟಿ. ಎಸ್. ಸುಬ್ಬಣ್ಣ, ಇವರುಗಳು ಕಸ್ತೂರಿಬಾ ನಿಧಿಯನ್ನು ಶೇಖರಿಸುತ್ತಿರುವರು.

ಶ್ರೀ ಗಳಾದ ಕಗ್ಗ ರೈಸ್ ಮಿಲ್ ೧೦೧ ರೂ, ರಾಮಸ್ವಾಮಿ ಮತ್ತು ಹಿರಿಯಣ್ಣ ರವರು ೩೧ ರೂ, ಡಾ. ಎ. ಶ್ರೀಕಂಠಶೆಟ್ಟರು ೩೧ ರೂ, ಕೆ. ಮಲ್ಲಪ್ಪಶೆಟ್ಟಿ ಅಂಡ್ ಸನ್ಸ್ ೨೫ ರೂ., ಚಿಲ್ಲರೆ ಅಂಗಡಿ ಕೃಷ್ಣರಾಜು ೧೧ ರೂ., ಬಿ. ವೈ. ಸಿದ್ದಲಿಂಗಶೆಟ್ಟರು ೧೦ ರೂ, ಬಿ ವೈ. ನಂಜುಂಡಶೆಟ್ಟರು ೫ ರೂ., ಆರ್ ಎಸ್ ಹನುಮಂತಶೆಟ್ಟರು ಮತ್ತು ಬ್ರದರ್ಸ್ ೬ ರೂ, ಬಿ.ಕೆ. ಬಸಪ್ಪನವರು ೫ ರೂ, ವೈ ಆರ್. ನಾಗರಾಜಗುಪ್ತರು ೫ ರೂ, ಡಾ|| ನಟೇಶಗುಪ್ತರು ೩ ರೂ. ಈ ರೀತಿ ಇದುವರೆಗೆ ವಸೂಲಾಗಿದೆ.

ಗೀತಾ ಉಪನ್ಯಾಸಗಳು

ಸ್ವಂ.ವ.] ನಂಜನಗೂಡು ೮

ಶ್ರೀ ಶ್ರೀಕಂಠೇಶ್ವರಸ್ವಾಮಿ ಸಭೆಯ ವಾರ್ಷಿಕೋತ್ಸವವು ೧೬ ನೇ ತಾರೀಕು ಬುಧವಾರ ಸಂಜೆ ಹುಜೂರು ಸೆಕ್ರೆಟರಿಯವರಾದ ಶ್ರೀ|| ಟಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಇದಕ್ಕೆ ಅಂಗವಾಗಿ ೧೦ ನೇ ತಾರೀಕಿನಿಂದ ೧೬ ನೇ ತಾರೀಕಿನ ವರೆಗೂ ಭಗವದ್ಗೀತೆಯ ಸಂಬಂಧದ ಉಪನ್ಯಾಸಗಳು ನಡೆಯುತ್ತವೆ. ಬ್ರ|ಶ್ರೀ|| ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು, ಶ್ರೀ ಗಳಾದ ಬಿ ಎಂ ಚಕ್ರವರ್ತಿ, ಹೆಚ್. ಎಂ ರಾಘವೇಂದ್ರಾಚಾರ್ಯ, ಬ್ರ|| ಶ್ರೀ|| ವೆಂಕಟೇಶಶಾಸ್ತ್ರಿಗಳು, ವೇದಾಂತ ಶಿರೋಮಣಿ ಶ್ರೀ|| ಚಂದ್ರಶೇಖರ ಭಟ್ಟ ಪಟಂಕರ್, ಯಾಮುನಾಚಾರ್ಯರು ಮತ್ತು ವೇದಾಂತ ಶಿರೋಮಣಿ ಎನ್ ವಿಠಲಶಾಸ್ತ್ರಿಗಳು ಅನುಕ್ರಮವಾಗಿ ಭಾಷಣ ಮಾಡುವರು

Edited, printed and published by A. R. Nagarajan, at the Sadhvi Press, D. Subbiah Road, Mysore

ಕಾಂಗ್ರೆಸ್ಸಿಗೆ ರಾಜೀನಾಮೆ

ಸ್ವಂ.ವ.] ಚಾಮರಾಜನಗರ ೮

ಚಾಮರಾಜನಗರದ ಸಿ. ಡಿವಿಜನ್ನಿನಿಂದ ಕಾಂಗ್ರೆಸ್ ಪರವಾಗಿ ಪೌರ ಸಭೆಗೆ ಚುನಾಯಿತರಾಗಿದ್ದ ಶ್ರೀ|| ಸಿ. ಎಸ್. ಅನಂದರಾಯರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿದ್ದಾರೆ. ಶ್ರೀಯುತರು ಸ್ವತಂತ್ರವಾಗಿ ಪೌರ ಸಭಾ ಉಪಾಧ್ಯಕ್ಷತೆಗೆ ಸ್ಪರ್ಧಿಸಿ ಪರಾಜಿತರಾದರು. ಶ್ರೀ|| ಜಿ ವೆಂಕಟಶೆಟ್ಟರು ಸ್ವಂತ ಅನಾನುಕೂಲಗಳಿಂದ ಪೌರಸಭಾ ಸದಸ್ಯತ್ವಕ್ಕೂ, ಕಾಂಗ್ರೆಸ್ಸಿಗೂ ರಾಜೀನಾಮೆ ಸಲ್ಲಿಸಿರುವರೆಂದು ಗೊತ್ತಾಗಿದೆ.

ಮಕ್ಕಳ ಮೇಲೆ ಗುಂಡು

ಪ್ರೊಲ್ಲಾಚಿಯ ಬಾಲಕೃಷ್ಣನ್ನಾಯರ್ ಎಂಬ ಪೋಲೀಸನನು ತನ್ನ ಮೂವರು ಮಕ್ಕಳ ಮೇಲೂ, ಮತ್ತು ಸಾಕಿಸ್ತಬ್ಬ ಹೆಂಗಸಿನ ಮೇಲೂ ಗುಂಡಿನಿಂದ ಹೊಡೆದ ನೆಂಬ ಅಪಾದನೆ ಮೇಲೆ ದಸ್ತಗಿರಿಯಾಗಿದ್ದಾನೆ. ಎಲ್ಲರೂ ಸತ್ತಿದ್ದಾರೆ. ಪೋಲೀಸ್ ಅಫೀಸಿನಲ್ಲಿದ್ದ ೩೧ ರೂ. ಗಳನ್ನು ಕಳುವು ಮಾಡಿ, ಮಕ್ಕಳನ್ನು ಹೊಡೆದು ಗುಡಿಯೊಂದರಲ್ಲಿ ಅವಿತುಕೊಂಡಿದ್ದವನು ಅವನ ದಸ್ತಗಿರಿಯಾಯಿತು.

ಸೇನೆಗೆ "ಬ್ರಿಟಿಷ್ ಬೀರ್"

ಭಾರತದಲ್ಲಿರುವ ಸೇನೆಗಳಿಗೆ ಇನ್ನು ಮುಂದೆ ಈಗ ಕೊಡಲಾಗುತ್ತಿರುವುದಕ್ಕಿಂತಲೂ ಉತ್ತಮವಾದ "ಬೀರ್" ಎಂಬ ಮದ್ಯವನ್ನೂ ಸಿಗರೇಟುಗಳನ್ನೂ ಕೊಡಲಾಗುವುದೆಂದೂ, ಈಗ ಕೊಡಲಾಗುತ್ತಿದ್ದ ವಸ್ತುಗಳು ಅವರಿಂದವರು ಕೊಡುತ್ತಿದ್ದುದಕ್ಕೆ ಹೋಲಿಸಿದರೆ ಬಹಳ ಕಳಪೆಯಾಗುತ್ತಿದ್ದಿತೆಂದೂ ದೂರು ಬರುತ್ತಿತ್ತೆಂದೂ ಹೇಳಲಾಗಿದೆ.

ನೂಲು ಮತ್ತು ಬಟ್ಟೆಗಳ ವಿನಿಯೋಗ

ನೂಲು ಮತ್ತು ಬಟ್ಟೆಯನ್ನು ದೇಶದ ನಾನಾ ಭಾಗಗಳಿಗೆ ಅಲ್ಲಲ್ಲಿಗೆ ಬೇಕಾಗುವ ಪಡಿತರದಂತೆ ಇನ್ನು ಮುಂದೆ ಹಂಚಿಕೆ ನಿರ್ಣಯವನ್ನು ಮಾಡಲು ತಕ್ಕ ಯೋಜನೆಯೊಂದನ್ನು ಕೈಗೊಳ್ಳಲಾಗುವುದೆಂದು ಬೊಂಬಾಯಿನಲ್ಲಿರುವ ಟೆಕ್ಸ್‌ಟೈಲ್ ಕಮೀಷನರರು ಹೊರಡಿಸಿದ ಪ್ರಕಟನೆ ತಿಳಿಸುತ್ತದೆ. ಜಪಾನು ಯುದ್ಧಕ್ಕಿಂದ ನಂತರ ಹೊರಗಿನಿಂದ ನಮ್ಮ ದೇಶಕ್ಕೆ ನೂಲು, ಬಟ್ಟೆ ಆಮದಾಗುವುದು ನಿಂತು, ದೇಶದ ಎಲ್ಲಾ ಬಟ್ಟೆ ಮಿಲ್ಲುಗಳೂ, ಹೆಚ್ಚು ಬಟ್ಟೆ ತಯಾರಿಕೆಗೆ ನಿರಂತರವಾಗಿ ಕೆಲಸಮಾಡುತ್ತಿವೆಯೆಂದೂ, ಇನ್ನೂ ನೂಲಿನ ಅವಶ್ಯಕತೆಯು ಹೆಚ್ಚಿರುವುದರಿಂದಲೂ, ಇನ್ನು ಮುಂದೆ ಕೈಮಗ್ಗಗಳ ಉತ್ಪತ್ತಿಯು ಇದಕ್ಕಿಂತ ಹೆಚ್ಚಲು ಸಧ್ಯದಲ್ಲಿಯೇ ಅವಕಾಶಕೊಡಲು ಸಾಧ್ಯವಿಲ್ಲವೆಂದೂ ಅವರು ತಿಳಿಸಿದ್ದಾರೆ.

ಪರ್ವತವನ್ನು ಸಿಡಿಸಿದರು

ಬರ್ಮಾ ಪೂರ್ವ ಗಾಗ ವನ್ನು ಸುಗಮ ಮಾಡಿಕೊಳ್ಳುವ ಕಾರ್ಯದಲ್ಲಿ ನಿರತರಾಗಿರುವ ಚೀಣಿ ಸೈನಿಕರು ಸಾಲ್ವೀನ ನದಿಯ ಪಕ್ಕದಲ್ಲಿರುವ ೭೦೦೦ ಅಡಿ ಎತ್ತರದ ಪರ್ವತ ಶಿಖರವೊಂದನ್ನು ಸಿಡಿಸಿದರು. ಅದರ ಮೇಲೆ ಇದ್ದ ಜಪಾನರೂ ನಿರ್ನಾಮವಾದರು. ಪರ್ವತದ ಬುಡದಲ್ಲಿ ೬೫ ಅಡಿ ಉದ್ದ ಸುರಂಗವನ್ನು ಕೊರೆದು ೬ ಸಾವಿರ ಪೌಂಡುಗಳ ಸಿಡಿಮದ್ದನ್ನು ಇಟ್ಟು, ಈ ಶಿಖರವನ್ನು ಉಡಾಯಿಸಿದರು.

ಅಪೇರಾ ಟಾಕೀಸ್

ತಾ|| ೮-೯-೪೬ ರಿಂದ

ಪ್ರತಿ ದಿನ ೩ ಆಟಗಳು

ವಿಷ್ಣು ಪಂತ ಪಗ್ನಿಸ್, ದುರ್ಗಾ ಕೋಟಿ, ಪ್ರಹ್ಲಾದ್, ನ್ಯಾಂಪಲ್ಲಿ ಮುಂತಾದವರು ಪಾತ್ರವಹಿಸಿರುವ

ಮಹಾತ್ಮವಿದುರ್

(ಹಿಂದೀ ಚಿತ್ರ)

ಮುಂದಿನ ವಿನೋದ:- ಸುಮ್ರಾಜ್ ಶಾಂತಿ, ಉಲ್ಲಾಸ್ ಆಗ, ರಾಧಾರಾಣಿ ನಟಿಸಿರುವ ಸವಾಲ್

ನಾಟಕರತ್ನ ಜಿ.ಹೆಚ್. ವೀರಣ್ಣನವರ

ಗುಬ್ಬಿ ಥಿಯೇಟ್ರಿಕಲ್ ಕಂಪೆನಿ

ಟೌನ್‌ಹಾಲ್ ಮೈದಾನದ

ಸ್ವಂತ ಧನಲಕ್ಷ್ಮೀ ಥಿಯೇಟರಿನಲ್ಲಿ

೭-೯-೪೬ ಶನಿವಾರ ರಾತ್ರಿ ೧೦-೩೦ಕ್ಕೆ

೧೦-೯-೪೬ ಭಾನುವಾರ ಸಂಜೆ

೬-೩೦ ಕ್ಕೆ ಮ್ಯಾಟಿನಿ

ಶ್ರೀಕೃಷ್ಣಲೀಲ

Public Auction

BENCH	BOOKS	CLOTHES RACK
TABLE	SAREES	GAS LIGHT
BOX	PLOUGH	PILLOWS
TUB	CRADLE	CLOCK
PEN	BATH	ETC.

CITY AUCTIONEERING Co.

4. M. PALACE VIEW, MYSORE.

ಸ್ತ್ರೀಯರ ಸೌಕರ್ಯಕ್ಕೆ

ತಾ|| ೧-೧-೧೯೪೫ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಮತ್ತು ಸಂತೇಪೇಟೆ ಮಂಡಿಯಲ್ಲೂ, ಇತರ ಎಲ್ಲಾ ವೋಟಲ್ಲುಗಳಲ್ಲೂ ದೊರೆಯುತ್ತದೆ. ಏಜೆಂಟರುಗಳಿಗೆ ಪ್ರತ್ಯೇಕ ಕಮೀಷನ್ನೂ ಮತ್ತು ಕಲ್ಪಸ್ತರ ಕೊಡಲಾಗುತ್ತದೆ.

ಹೆಂಗಸರ ಮೆಚ್ಚಿಗೆಗೆ ಪಾತ್ರವಾದ ಸೌಭಾಗ್ಯ ಸ್ಟೋರ್ಸ್ ದೇವರಾಜ ಮಾರ್ಕೆಟ್, ಮೈಸೂರು

ಅರಿಶಿನ, ಕುಂಕುಮ, ಗಂಧ, ಚಂದನ್ ಇನ್ನು ಅನೇಕ ... ಬಳೆಗಳೂ, ಪ್ರೈಸ್, ಪ್ಲಾಸ್ಟಿಕ್ ಬಿಟ್ಟಿಗಳೂ ಇಲ್ಲಿ ದೊರೆಯುವವು.

ಸು ಗೂಡು, ದಸರಾ ವಸ್ತು ಪ್ರದರ್ಶನಾಲಯದಲ್ಲಿ ಕೆ. ಬ್ಲಾಕ್, ನಂ. 8 ರಲ್ಲಿ — ಎನಾಮಲ್ ಬಳೆಗಳನ್ನು ಕೊಳ್ಳಲು ಮರೆಯಬೇಡಿ!

ಸಂಪುಟ ೩] ಭಾನುವಾರ ೧೦--೯--೪೪ [ಸಂಚಿಕೆ ೪೦

ಗಾಂಧೀಜಿ ಜಿನ್ನಾರನ್ನು ಭೇಟಿಮಾಡಿದರು

ಇಂಡೋಚೀನಾದಲ್ಲಿ ಜಪಾನರ ಅಗಾಧ ಸೇನಾ ಸಂಗ್ರಹ

ಜರ್ಮನಿಯಿಂದ ಶಾಂತಿ ಸೂಚನೆ ಬಂದಿಲ್ಲ

ಕಸ್ತೂರಿ ಬಾ ನಿಧಿಗೆ ಅಡ್ಡಿ ?

ಮೈಸೂರು ೧೦

ರಾಜಧಾನಿಯ ಹೈಸ್ಕೂಲೊಂದರಲ್ಲಿ ವಿದ್ಯಾರ್ಥಿಗಳು ಕಸ್ತೂರಿ ಬಾ ನಿಧಿಯನ್ನು ಸಂಗ್ರಹಿಸಲು ತೊಡಗಿದ್ದಾಗ ಅಲ್ಲಿನ ಮುಖ್ಯೋಪಾಧ್ಯಾಯರು ಹಾಗೆ ಹಣ ಸಂಗ್ರಹ ಮಾಡಲು ಅವಕಾಶವೀಯಲಿಲ್ಲವೆಂದೂ, ಇದರಿಂದ ವಿದ್ಯಾರ್ಥಿಗಳಿಗೆ ಅಸಮಾಧಾನವಾಗಿದೆಯೆಂದೂ ತಿಳಿಯಬರುತ್ತದೆ.

ಶಾಲಾ ವಿದ್ಯಾರ್ಥಿಗಳ ಪ್ರವಾಸ

ಶ್ರೀ ಶಂಕರ ವಿಲಾಸ ಹೈಸ್ಕೂಲಿನ ವಿದ್ಯಾರ್ಥಿಗಳೂ, ಅಧ್ಯಾಪಕರುಗಳೂ, ಮೊನ್ನೆ ಮತ್ತು ನಿನ್ನೆ ಎರಡು ದಿನಗಳೂ ಹಾಸನ, ಬೇಲೂರು ಮತ್ತು ಹಳೇಬೀಡುಗಳಲ್ಲಿ ಪ್ರವಾಸಮಾಡಿ ನಿನ್ನೆ ದಿನ ಸಾಯಂಕಾಲ ವಾಪಸು ಬಂದರು. ಹಾಸನ ಜಿಲ್ಲಾಧಿಕಾರಿಗಳಾದ ಶ್ರೀ॥ ನಿರಂಜನಸ್ವಾಮಿ ಅರಸಿನವರು ಸ್ಥಳೀಯ ಅಧಿಕಾರಿಗಳಿಂದ ಸಕಲ ಸೌಲಭ್ಯಗಳನ್ನೆಲ್ಲಾ ಏರ್ಪಡಿಸಿಕೊಟ್ಟಿದ್ದರು

ಬ್ಯಾಡ್‌ಮಿಂಟನ್ ಟೋರ್ನಮೆಂಟ್

ರಾಜಧಾನಿಯ ಶ್ರೀ ಕೃಷ್ಣ ಸ್ಪೋರ್ಟ್ಸ್ ಕ್ಲಬ್ಬಿನವರು ಈ ತಿಂಗಳು ೧೮ ನೇ ತಾರೀಖಿನಿಂದ ಬ್ಯಾಡ್‌ಮಿಂಟನ್ ಟೋರ್ನಮೆಂಟನ್ನು ಶ್ರೀ [illegible] ರವರ ಛತ್ರದ ಆವರಣದಲ್ಲಿ ಪ್ರಾರಂಭ ಮಾಡುವರು

ನಿಧನ

ಈ ದಿನ ಬೆಳಿಗ್ಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಸಿವಿಲ್ ಸಪ್ಲೈ ಇಲಾಖೆಯ ಡೆಪ್ಯುಟಿ ಕಂಟ್ರೋಲರಾಗಿ ಕೆಲಸಮಾಡುತ್ತಿದ್ದ ಶ್ರೀ ಪುಟ್ಟಕೃಷ್ಣ ನರಸಿಂಹಾಚಾರ್ಯರು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರಿಗೆ ೫೫ ವರ್ಷ ವಯಸ್ಸಾಗಿತ್ತು.

ಕೆಲಸಗಾರರ ಮುಷ್ಕರವೇ ?

ಸ್ವಂ.ಸು.] ಬೆಂಗಳೂರು ೯

ನಿನ್ನೆ ಸಾಯಂಕಾಲ ರಾಜಾ ಮಿಲ್ಲಿನ ಕೆಲಸಗಾರರ ಸಭೆಯು ಶ್ರೀ ಕೆ. ಎಸ್. ಕುಮಾರನ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕಳೆದ ಜೂನ್ ತಿಂಗಳಲ್ಲಿ ವಿದ್ಯುಚ್ಛಕ್ತಿ ಕ್ಷಾಮದಿಂದ ಮಿಲ್ಲುಗಳಲ್ಲಿ ಕೆಲಸ ನಡೆಯದಿರುವ ಕಾಲದಲ್ಲಿ ಹಿಂದಿನ ಆದೇಶದ ಪ್ರಕಾರ ಕೆಲಸಗಾರರಿಗೆ ಕೊಟ್ಟಿದ್ದ ಅಡ್ವಾನ್ಸನ್ನು ವಜಾಮಾಡಬೇಕೆಂದೂ, ೬೦ ದಿವಸದ ಹಿಂದೆ ಕೆಲಸದಿಂದ ತೆಗೆದ ೧೧೦ ಜನ ಕೆಲಸಗಾರರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ, ಇಲ್ಲದಿದ್ದಲ್ಲಿ ಕೆಲಸಗಾರರು ಮುಷ್ಕರ ಹೂಡಬೇಕಾಗುವುದೆಂದೂ ಶ್ರೀ ಕುಮಾರನ್‌ರವರು ಹೇಳಿದರು

ಗೋಧಿ ಬೆಳೆ

ಸಂಸ್ಥಾನದ ಹಲವು ಭಾಗಗಳಲ್ಲಿ ಕ್ರಿಮಿ ಕೀಟದ ನಿಬಂಧನೆಯು ಪ್ರಕಾರ ಗೋಧಿ ಮತ್ತು ಬಾರ್ಲಿಯನ್ನು ಬೆಳೆಯಕೂಡದೆಂಬ ಆಜ್ಞೆಯನ್ನು ಮುಂದಿನ ವರ್ಷ ಏಪ್ರಿಲ್‌ನಿಂದ ಜಾರಿಗೆ ಕೊಡಲಾಗುತ್ತದೆ.

ಕಸ್ತೂರಿ ಬಾ ನಿಧಿ

ಇದುವರೆಗೆ ಸಂಸ್ಥಾನದಲ್ಲಿ ಸುಮಾರು [illegible] ಗಳು ಕಸ್ತೂರಿ ಬಾ ನಿಧಿಗೆ ಕೂಡಿಬಂದಿವೆ

ತಪ್ಪೊಪ್ಪಿದವರ ಸೆರೆ

ಶಿಕ್ಷೆಗೆ ಒಳಗಾದವರು ಪ್ರದರ್ಶನ ಮತ್ತು ಪಿಕೆಟಿಂಗುಗಳನ್ನು ಮಾಡಕೂಡದೆಂಬ [illegible] ಅಪ್ಪಣೆ [illegible] ಇಬ್ಬರು ವಿದ್ಯಾರ್ಥಿಗಳನ್ನು ದಸ್ತಗಿರಿಮಾಡಲಾಗಿದೆ.

ಗಾಂಧಿ-ಜಿನ್ನ ಗಾಢಾಲಿಂಗನ

ಮಹಾತ್ಮರು ನಿನ್ನೆ ಸಾಯಂಕಾಲ ನಾಲ್ಕು ಗಂಟೆಗೆ ಸರಿಯಾಗಿ ಜಿನ್ನಾರವರ ಭವನದಲ್ಲಿ ಬಂದಿಳಿದರು. ಇಬ್ಬರು ಮುಖಂಡರ ಚಿತ್ರಗಳನ್ನು ತೆಗೆಯಲು ಪತ್ರಿಕೆಗಳವರು ಕಾದಿದ್ದರು. ಮಹಾತ್ಮರು ಜಿನ್ನರ ಹೆಗಲ ಮೇಲೆ ಕೈ ಹಾಕಿ ನಿಂತರು. ಅನಂತರ ಇಬ್ಬರೂ ಗಾಢಾಲಿಂಗನ ಮಾಡಿಕೊಂಡರು. ಪುನಃ ಪತ್ರಿಕೆಗಳವರು ಇನ್ನೊಂದು ನಿಮಿಷ ಇವರಿಬ್ಬರು ಹಾಗೆಯೇ ಇರಬೇಕೆಂದು ಕೇಳಿಕೊಂಡರು. ಜಿನ್ನರು ಒಪ್ಪಿದರು. "ನೀವು ಬಳಲುತ್ತಿದ್ದೀರಿ" ಎಂದು ಗಾಂಧಿಯವರು ಅವರನ್ನು ವಿನೋದವಾಗಿ ಕಂಬೋಧಿಸಿದರು. ಅನಂತರ ಇಬ್ಬರು ಮುಖಂಡರೂ ಭವನದೊಳಕ್ಕೆ ಹೋದರು. ಇಬ್ಬರೂ ಒಳಗೆ ಸೇರುವುದರಿಂದಲೂ ಹೊರಕ್ಕೆ ಬರುವಲ್ಲಿಯೂ ಕೂಡ ಅಲ್ಲಿದ್ದ ಪತ್ರಿಕೆಗಳ ಒಳಗೆ ಪ್ರವೇಶವಿರಲಿಲ್ಲ [illegible].

ಇಬ್ಬರ ಭೇಟಿಯ ಈ ಒಡಂಬಡಿಕೆ [illegible] ಪೂರಕವಾಗಿತ್ತು. ಭೇಟಿಯಲ್ಲಿ ಇವರಿಬ್ಬರೂ ಮಾತ್ರವೇ ಇದ್ದರು. ಬೇರೆಯವರಿಗೆ ಅವಕಾಶವಿರಲಿಲ್ಲ. ಇಬ್ಬರೂ ಸೇರಿ ನಾಳೆ ಒಂದು ಹೇಳಿಕೆ ಕೊಡುವರು

ಜಿನ್ನಾ ಭವನದ ಬಳಿ ಪೋಲೀಸ್ ಬಂದೋಬಸ್ತು ಬಹಳವಾಗಿತ್ತು. ಅನುಮತಿ ಹೊಂದಿದವರು ವಿನಾ ಇತರರಿಗೆ ಆ ರಸ್ತೆಯಲ್ಲೇ ಪ್ರವೇಶವಿರಲಿಲ್ಲ

ಬೊಂಬಾಯಿ ಭೇಟಿ ನಿರರ್ಥಕವಾದರೆ ?

ಮುಲಿಯೃಷ್ಣವರಾತ್ [illegible] ಬೊಂಬಾಯಿ ಮುಖಂಡ ಭೇಟಿಯು ವಿಫಲಗೊಂಡರೆ, ಗಾಂಧಿಜಿಯವರು ಸೇವಾಗ್ರಾಮಕ್ಕೆ ಹಿಂದಿರುಗುವರೆಂದೂ, ಮುಂದೆ ಪ್ರಕಾಂತವಾಗಿ ಯಶಸ್ವಿಯಾಗಿ ನಡೆಯದಿದ್ದರೆ ಸಬಲವಾಗಿ ಹಿಂದೂಸ್ಥಾನದ ಸ್ವಾತಂತ್ರ್ಯ ಸಿದ್ಧಾಂತ [illegible] ವನ್ನು ವಿಸ್ತರಿಸಲು ತಮ್ಮ ಕಾಲವನ್ನು ಅವರ ವಿನಿಯೋಗಿಸುವರೆಂದೂ, ಈ [illegible] ಕಾರ್ಯದಲ್ಲಿ ನಿರತರಾಗಲು [illegible] ಕಾರ್ಯ [illegible] ಶಕ್ತಿ [illegible] ಕಾಂಗ್ರೆಸ್ [illegible] ತಿಳಿಯಬಂದಿದೆ

ಬೊಂಬಾಯಿಗೆ ಮಹಾತ್ಮರ ಆಗಮನ

ನಿನ್ನೆ ದಿನ ಮಹಾತ್ಮ ಗಾಂಧಿಯವರು ತಮ್ಮ ಪರಿವಾರದೊಂದಿಗೆ ಬೊಂಬಾಯಿಗೆ ಆಗಮಿಸಿದರು. ಬೆಲ್ಲಾರ್ಡ್ ಪಿಯರ್‌ನಿಂದ ರ ಬಳಿ ಅವರು ರೈಲು ಇಳಿದರು. ರೈಲು ನಿಲ್ದಾಣಕ್ಕೆ ಗಾಡಿ ಬರುತ್ತಿದ್ದ ಹಾಗೆ ಪ್ರಯಾಣಿಕರು ಪಾಲಿಸಬೇಕಾದ ನಿಷಿದ್ಧವಾಗಿ ಕೂಗಿಕೊಂಡರು. ಅದೇ ಕೈಬೀಸುತ್ತಿದ್ದ ಮಾರ್ಕರರು ಗಾಂಧಿಯವರು ಇಳಿದಾಗ ಕಾವಲಿದ್ದು ಅವರನ್ನು ಅವರ ಮೋಟಾರ್ ಕಾರಿನವರೆಗೂ ಕರೆದುಕೊಂಡು ಹೋದರು.

ಚಿನ್ನದಲ್ಲಿ ಗವರ್ನರರ ತುಲಾಭಾರ

ಆಗ್ರಾ ಪಟ್ಟಣಿಗರು ಸಂಯುಕ್ತ ಪ್ರಾಂತದ ಗವರ್ನರರನ್ನು ತಕ್ಕಡಿಯಲ್ಲಿ ಕೂಡಿಸಿ ತೂಗಿ, ಚಿನ್ನದ ಗಟ್ಟಿಗಳನ್ನು ಇಟ್ಟರೆಂದೂ, ಆ ಚಿನ್ನದ ಬೆಲೆ ೫ ಲಕ್ಷ ರೂಪಾಯಿಗಳಷ್ಟಾಯಿತೆಂದೂ, ಇದನ್ನು ಯುದ್ಧ ನಿಧಿಗೆ ಸಮರ್ಪಿಸಲಾಯಿತೆಂದೂ ಹೇಳಲಾಗಿದೆ. ಇದಲ್ಲದೆ ೨ ಲಕ್ಷದ ನಿಧಿಯನ್ನು ಸಹ ಅವರಿಗೆ [illegible].

ಯುವತಿಯ ಆಕಾಂಕ್ಷೆ

"ವಿಮಾನಯಾನ ಮಾಡುವ ವಿಷಯದಲ್ಲಿ ನನಗೆ ಅಭಿರುಚಿಯಿದೆ. ನಾನು ಆ ಯೋಗ್ಯ ದಾರ್ಢ್ಯತ್ವವುಳ್ಳವಳಾಗಿದ್ದೇನೆ. ವಿಮಾನ ನಡೆಸುವವಳಾಗಿ ಯುದ್ಧದಲ್ಲಿ ಭಾಗವಹಿಸಬೇಕೆಂಬ ಆಕಾಂಕ್ಷೆ ನನಗಿದೆ. ನಾನು ಏರ್ ಫೋರ್ಸ್ ದಳಕ್ಕೆ ಸ್ತ್ರೀಯರು ಸೇರಬಹುದೇ ಎಂಬುದನ್ನು ನಿಮ್ಮಿಂದ ತಿಳಿದುಕೊಳ್ಳಲು ನನಗೆ ಇಷ್ಟ ಇದೆ"-ಹೀಗೆಂದು ಪಿರ್ ನಾಗಪುರದ ೧೮ ವರ್ಷ ವಯಸ್ಸಿನ ಯುವತಿಯು ಯುದ್ಧ ಇಲಾಖೆಗೆ ಬರೆದುಕೊಂಡಿದ್ದಾಳೆ

ಜಪಾನ್ ಮೇಲೆ ರಷ್ಯಾ ಯುದ್ಧ ಮಾಡಲು ಬೇಡಿಕೆ

ಬರಲಿರುವ ಚರ್ಚಿಲ್-ರೂಸ್ವೆಲ್ಟ್ ಸಮಾಗಮ [illegible] ಜಪಾನಿನ ಮೇಲೆ [illegible] [illegible] ಬೇಡಿಕೆ ಸಲ್ಲಿಸ [illegible] ಇವರು [illegible] ಭೇಟಿ [illegible] ಮಾಡಲಾಗುವುದು

ಜರ್ಮನಿಯಿಂದ ಶಾಂತಿ ಸೂಚನೆಯಿಲ್ಲ

ಜರ್ಮನಿಯೊಳಗಿನಿಂದ [illegible] ಸಂಧಾನದ ಸೂಚನೆಗಳೂ ಬಂದಿಲ್ಲವೆಂದು ಅಧ್ಯಕ್ಷ ರೂಸ್ವೆಲ್ಟರು ಹೇಳಿರುವರು

ಇಂಡೋ-ಚೀನಾದಲ್ಲಿ ಜಪಾನ್ ಸೇನಾ ಸಂಗ್ರಹ

ಕ್ವಾಂಗ್ಸಿ ಪ್ರಾಂತವನ್ನು ಹಿಡಿಯುವ ಸಲುವಾಗಿ ಜಪಾನರು ಇಂಡೋ-ಚೀನಾದಲ್ಲಿ ಮತ್ತು ಉತ್ತರಕ್ಕೆ ಹುನಾನ್ ಪ್ರಾಂತದಲ್ಲಿ ಸಹ ಅಗಾಧವಾದ ಸೇನಾ ಸಂಗ್ರಹದ ಉದ್ಯಮದಲ್ಲಿದ್ದಾರೆ. ಚೇಕಿಯಾಂಗ್ ಪ್ರಾಂತದಲ್ಲಿರುವ ವೆಂಚೌ ಎಂಬ ರೇವು ನಗರವನ್ನು ಹಿಡಿಯಲು ಜಪಾನರು ಹೊರಟಿದ್ದಾರೆ

ಜಪಾನ್ ವಿದ್ಯಾರ್ಥಿಗಳೂ ಸೈನ್ಯಕ್ಕೆ

ಯುದ್ಧಕ್ಕೆ ಹೆಚ್ಚು ಹೆಚ್ಚಾಗಿ ಜನರನ್ನು ಸೇರಿಸಲು ಜಪಾನಿನ ವಿದ್ಯಾರ್ಥಿಗಳನ್ನೂ ಬಾಲಕ ಮಕ್ಕಳನ್ನೂ ಸೇರಿಸಿಕೊಳ್ಳಲಾಗುವುದೆಂದು ಅಲ್ಲಿನ ಮುಖ್ಯ ಮಂತ್ರಿ ಹೇಳಿದ್ದಾರೆ. ಜಪಾನಿನ ಇಡೀ ಜನಾಂಗದವರನ್ನೆಲ್ಲಾ ಶಸ್ತ್ರಸಜ್ಜಿತರನ್ನಾಗಿ ಮಾಡಲಾಗುವುದೆಂದೂ ಅವರು ಹೇಳಿರುವರು

ಹಾರುವ ಬಾಂಬಿನ ಕಾಟ ತಪ್ಪಿತೇ ?

ಹಾರುವ ಬಾಂಬಿನ ಹಾವಳಿಯು ಇನ್ನು ಮುಂದೆ ತಪ್ಪುವುದೆಂದು ಅಧಿಕಾರಯುತವಾಗಿ ಲಂಡನ್ನಿನಲ್ಲಿ ತಿಳಿಸಲಾಗಿದೆ. ಆದರೆ ಅಗತ್ಯವಾದರೆ ಮತ್ತೆ ಜನರನ್ನು ಬೇರೆ ಪ್ರದೇಶಗಳಿಗೆ ಸಾಗಿಸಲು ಎಲ್ಲಾ ಏರ್ಪಾಡುಗಳನ್ನೂ ಮಾಡಲಾಗುತ್ತದೆ.

ಯುಗೊಸ್ಲೇವಿಯಾದಲ್ಲಿ ದಂಗೆ

ಯುಗೊಸ್ಲೇವಿಯಾ ರಾಜ್ಯದಲ್ಲಿ ಜನರು ಭಾರಿ ದಂಗೆ ಎದ್ದಿದ್ದಾರೆ. ಸುಮಾರು ೩೫ ಡಿವಿಜನ್ ಅನುಯಾಯಿಗಳು ಜರ್ಮನ್ ಸೇನೆ ಇವರ ಮಧ್ಯದಲ್ಲಿ ಸಿಕ್ಕಿಕೊಂಡಿದೆ.

ದೆಹಲಿ ಅಧಿಕಾರಿಗಳ ಶಂಕೆ

ಜಿನ್ನಾ-ಗಾಂಧಿ ಭೇಟಿಯು ಪರಿಣಾಮಕಾರಿಯಾಗಿ ದೆಹಲಿಯಲ್ಲಿ ಆಗಲೇ ಶಂಕೆಯು ಕಾಣಬರುತ್ತಿದೆ. ಇಬ್ಬರು ಮುಖಂಡರೂ ಒಪ್ಪಂದವಾಗುವುದಿಲ್ಲವೆಂಬ ಅಭಿಪ್ರಾಯವನ್ನು ಅಧಿಕಾರಿ ವರ್ಗದವರಲ್ಲಿ ಕಾಣಲಾಗುತ್ತಿದ್ದರೂ, ಒಂದುವೇಳೆ ಈ ಇಬ್ಬರು ಮುಖಂಡರೂ [illegible] ಒಪ್ಪಂದಕ್ಕೆ ಬಂದರೂ [illegible] ಶಂಕೆಯೂ ಗೋಚರವಾಗುತ್ತಿದೆ. ಇದರಿಂದ ಚರ್ಚಿಲ್, ಅಮೆರಿ ಮತ್ತು ವೇವೆಲ್ ಮೊದಲು "ಮುಸ್ಲಿಂ ಲೀಗ್-ಕಾಂಗ್ರೆಸ್ ಪ್ರಯತ್ನ" [illegible] ಹೇಳಲಾಗುತ್ತಿದೆ.

ನೆಹರೂ ಪೆರೋಲ್ ನಿರಾಕರಿಸಿದರು

ಪಂಡಿತ ನೆಹರೂರವರು [illegible] [illegible] ಪೆರೋಲ್ [illegible] [illegible] [illegible] ಹೇಳಿದೆ

'ಮಾತಿಗಿಂತಲೂ ಕೆಲಸ ಮೇಲು'

ವಿದ್ಯಾರ್ಥಿಗಳಿಗೆ ವೈತ್ರಾಣರವರ ಸಂದೇಶ

ಮೈಸೂರು. ೧೦

ನಿನ್ನೆ ದಿನ ಸಂಜೆ ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ ಮೈಸೂರಿನ ವಿದ್ಯಾರ್ಥಿ ಸಂಘದವರು ವೈತ್ರಾಣ ದಂಪತಿಗಳನ್ನು ಸನ್ಮಾನಿಸಿ ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. [illegible] ಯುವ-ಧುರೀಣರಾದ ಶ್ರೀ ಬಿ ನ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯೊಡನೆ ಸಭೆಯು ಪ್ರಾರಂಭವಾಯಿತು. ಶ್ರೀ ಟಿ. ಕೆ ಕುಮಾರಸ್ವಾಮಿಯವರು ವೈತ್ರಾಣ ದಂಪತಿಗಳನ್ನು ಸ್ವಾಗತಿಸಿ ವಿದ್ಯಾರ್ಥಿಗಳಿಗೂ ಅವರಿಗೂ ಪರಿಚಯ ಕಾರ್ಯವನ್ನು ವಿವರಿಸಿ ಸ್ವಾಗತ ಭಾಷಣ ಮಾಡಿದರು.

ಅನಂತರ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಬಿ ಶ್ರೀಕಂಠಯ್ಯನವರು ಬಿನ್ನವತ್ತಳೆಯನ್ನು ಓದಿ ಅರ್ಪಿಸಿದರು.

ಬಿನ್ನವತ್ತಳೆಯಲ್ಲಿ ವೈತ್ರಾಣರವರು ಮಾಡುತ್ತಿರುವ ಸೇವೆಗಳನ್ನು ಪ್ರಶಂಸಿಸಿದರು. [illegible] ಧುರಂಧರರನ್ನು ಸಂಪ್ರದಾಯ [illegible] ಗಳಿಗಾಗಿ [illegible] ಅವರ [illegible] ಕೊಂಡ. [illegible] ಹೋದರೂ ಕೂಡ ಅವರ ತಮ್ಮ ದೇಶದಲ್ಲಿ ಭಾರತದ ವಿಷಯವಾಗಿ ನಡೆಯುತ್ತಿರುವ ಅಪಪ್ರಚಾರವನ್ನು ಪ್ರತಿಭಟಿಸಿ ನಿಜಾಂಶವನ್ನು ತಿಳಿಸಲು ಸಾಧಕರಾಗಿವೆ [illegible] ಭಾರತಕ್ಕೆ [illegible] ಎಂದು ನಮೂದಿಸಲಾಗಿತ್ತು.

ಉತ್ತರಕೊಡುತ್ತಾ ವೆನರೆಂಡ್ ವೈತ್ರಾಣರವರು ಹೀಗೆ ಹೇಳಿದರು:—

"ಸ್ವಾಮಿ ವಿವೇಕಾನಂದರು ತಮ್ಮ ಪತ್ರವೊಂದರಲ್ಲಿ "ಕೆಲಸ, ಕೆಲಸ, ಕೆಲಸ ಮಾಡಿ" ಎಂದು ಬರೆದಿದ್ದಾರೆ ಯಾವ ಮಹಾ ಪುರುಷ ಈಗ್ಗೆ ೫೦ ವರುಷಗಳ ಕೆಳಗೆ ನಿಮಗೆ "ಕೆಲಸ, ಕೆಲಸ, ಕೆಲಸ," ಎಂದು ಹೇಳಿದ್ದಾನೆಯೋ ಅದನ್ನೆ ನಾನು ಇಂದು ನಿಮಗೆ ಹೇಳಬಯಸುತ್ತೇನೆ ಸ್ನೇಹಿತರೆ, ಆ ಸಂದೇಶವನ್ನು ನೀವು ನಿಮ್ಮ ದೇಶದ ಪ್ರತಿಯೊಂದು ಮೂಲೆಯಿಂದ ಕೇಳ್ಪಡುವಂತೆ ಮಾಡಿಕೊಂಡು ಮುಂದೆ ನುಗ್ಗಿ ಕೆಲಸ ನಡೆಸಿ. ಹಿಂದೆ ನೋಡಬೇಡಿ. ಮುಂದೆ ನುಗ್ಗುತ್ತಿರಿ. ನಿಮ್ಮ ದೇಶದ ಪ್ರತಿಯೊಂದು ಭಾಗದಲ್ಲಿಯೂ ಕೆಲಸ ಕೆಲಸ ಕೆಲಸ ಎಂಬ ಧ್ವನಿ ಕೇಳಬರುತ್ತಿರಲಿ ಕೆಲಸವೇ ನಿಮ್ಮ ಗುರಿಯಾಗಿರಲಿ ಹತ್ತು ವರುಷಗಳಿಂದಲೂ ಭಾರತದಲ್ಲಿದ್ದು ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಭಾರತವು ಪ್ರಪಂಚದ ಇನ್ನಾವ ದೇಶವೂ ಪಡೆಯದೆ ಇರುವಂತಹ ಮಹಾ ನಾಯಕರುಗಳನ್ನೂ, ಮಹಾ ಪುರುಷರುಗಳನ್ನೂ ಹೊಂದಿದೆ ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ [illegible] ವೇದಾಂತಿಗಳೂ ಮಹಾತ್ಮ ಗಾಂಧೀಜಿಯವರಂತಹ ಕರ್ಮಯೋಗಿಗಳೂ ನಿದರ್ಶನರಾಗಿದ್ದಾರೆ.

ಬಿಳಿಯ ಜನ, ಕಪ್ಪು ಜನ, ಎಂಬ ಭೇದ ಭಾವನೆ ತೊಲಗಬೇಕು. ಕಪ್ಪು ಮನುಷ್ಯನಾದರೇನು? ಬಿಳಿಯನಾದರೇನು? ಒಬ್ಬರಿಂದೊಬ್ಬರು ತಿಳಿಯಬಹುದಾದ ವಿಷಯಗಳು ಬಹಳವಿವೆ.

"ಭಾರತವು ಗುಲಾಮತನವನ್ನು ಬಿಡಿಸಿಕೊಳ್ಳಬೇಕು. ಪ್ರಜಾ ಪ್ರಭುತ್ವವನ್ನು ಹೊಂದಬೇಕು ಮಹಾನಾಯಕರುಗಳ ಸಂಗಡ ಬೆರೆತು ಅಹಿಂಸೆ, ಸತ್ಯಾಗ್ರಹದ ಮೂಲಕ ನಾವು ಆ ಪ್ರಜಾ ಪ್ರಭುತ್ವವನ್ನು ಹೊಂದೋಣ ದಾಸ್ಯತ್ವವನ್ನು ನಿರ್ಮೂಲ ಮಾಡೋಣ. ಸತ್ಯ ಅಹಿಂಸೆ ಇವೆರಡೂ ಒಂದಕ್ಕೊಂದು ಸೇರಿಸಲ್ಪಟ್ಟು ಸತ್ಯಾಗ್ರಹವೆಂಬ ಹೊಸ ರೂಪವನ್ನು ತಾಳಿದೆ ಸತ್ಯಾಗ್ರಹ, ಅಹಿಂಸೆ ಇವುಗಳನ್ನು ಕಾರ್ಯರಂಗಕ್ಕೆ ತರಬಹುದು ಎಂಬುದನ್ನು ನಾವು ಪ್ರಪಂಚಕ್ಕೆ ಮಾದರಿಯನ್ನಾಗಿ ಮಾಡಿ ತೋರಿಸೋಣ ಅಹಿಂಸೆಯು ನಾಯಕತ್ವದಲ್ಲಿ ಪ್ರಪಂಚದಲ್ಲಿ ಮುಂದೆ ನಡೆಯಲು ಸಾಧ್ಯ ಎಂಬುದನ್ನು ನಾವು ಕಾರ್ಯರಂಗದಲ್ಲಿ ತೋರಿಸೋಣ.

"ನಾವು ಯಾವ ರಾಷ್ಟ್ರವನ್ನೂ ನಮ್ಮ ದಾಸ್ಯತ್ವವನ್ನೂ ಬಿಡಿಸಿಕೊಳ್ಳಲು ಅವಲಂಬಿಸಕೂಡದು ನಿಮ್ಮ ಕೆಲಸ ನೀವು ಮಾಡಿಕೊಳ್ಳಿ, ಮತ್ತೊಬ್ಬರನ್ನು ಕಾಯಬೇಡಿ. ಪ್ರಪಂಚದಲ್ಲಿರುವ ಈಗಿನ ಎಲ್ಲಾ ಸರ್ಕಾರಗಳೂ ಸ್ವಾರ್ಥಿಗಳಿಂದಲೂ, ಬಂಡವಾಳಗಾರರಿಂದಲೂ, ಸಾಮ್ರಾಜ್ಯವಾದಿಗಳಿಂದಲೂ ಕೂಡಿದವುಗಳಾಗಿವೆ ಆದ್ದರಿಂದ ಯಾವ ಸರ್ಕಾರದಿಂದಲೂ ಭಾರತವು ಯಾವ ತರಹದ ಸಹಾಯವನ್ನೂ ಅಪೇಕ್ಷಿಸಕೂಡದು ಭಾರತದ ವಿಷಯದಲ್ಲಿ ಚೀನಾ ದೇಶವು ಸಹಾನುಭೂತಿಯ ಮಾತುಗಳನ್ನಾದರೂ ಆಡಿದೆ. ಆದರೆ ರಷ್ಯಾವು ಒಂದು ಮಾತೂ ಹೇಳದಿರುವುದು ಒಂದು ವಿಶೇಷ

"ದಾಸ್ಯ ಸ್ವಭಾವವನ್ನ ಬಿಡುವವರಾಗಿ. ನಿಮ್ಮ ಕಾಲವನ್ನು ವ್ಯರ್ಥ ಕಳೆಯಬೇಡಿ. ಸಮಯ ಸಿಕ್ಕಿದಾಗಲೆಲ್ಲಾ ನಿಮ್ಮ ನರೆಹೊರೆಯ ಸೇವೆಗೆ ಸಿದ್ಧರಾಗಿರಿ. ದೇಶದ ಸೇವೆಯನ್ನು ಟೊಂಕಕಟ್ಟಿ ಮಾಡಿರಿ ಸೇವೆಯೇ ನಿಮ್ಮ ಆದರ್ಶವಾಗಿರಲಿ ನಾವು ಊರಿನ ಪ್ರತಿಯೊಂದು ಪ್ರದೇಶಕ್ಕೂ ಕಲ್ಪಲಗಳಿಂದ ಕೂಡಿರುವ ಪ್ರತಿಯೊಂದು ಭಾಗಗಳಿಗೂ ಬಿಡದೆ ಹೋಗಿ ಜನಗಳು ತೃಪ್ತರಾಗಿರುವಂತೆ ಕೆಲಸಮಾಡಬೇಕು.

"ನಾನು ಕಡೆಗೆ ಕೊನೆಯದಾಗಿ ಕೊಡುವ ಸಂದೇಶವೆಂದರೆ "ಕೆಲಸ". ನಿಮ್ಮ ಹಿರಿಯರ ಆಶೀರ್ವಾದವನ್ನು ಹೊತ್ತು ಪ್ರಪಂಚಕ್ಕೆ ಏನಾದರೊಂದು ಕೆಲಸಮಾಡಿ. ಇಂದಿನಿಂದಲೇ ದುಡಿಯಲು ಸಿದ್ಧರಾಗಿರಿ. ಪ್ರತಿಯೊಬ್ಬ ಮನುಷ್ಯನಿಗೂ ಸ್ವಾಭಾವಿಕವಾದ ದೈವದತ್ತವಾದ ಕೆಲವು ಗುಣಗಳಿರುತ್ತವೆ. ಆ ಗುಣಗಳನ್ನೆಲ್ಲಾ ಸೇವಾಕಾರ್ಯಕ್ಕೆ ಉಪಯೋಗಿಸಿ, ನಾವೆಲ್ಲರೂ ಸೇರಿ ಕೆಲಸಮಾಡೋಣ, ನಾವೆಲ್ಲರೂ ಮಾನವ ಸಮಾಜಕ್ಕೆ ಸೇವೆಮಾಡಲು ಮರೆಯಬಾರದು."

ಕೆಲವರ ಪ್ರಶ್ನೆಗಳಿಗೆ ಉತ್ತರಕೊಟ್ಟರು. ಪಾಕಿಸ್ಥಾನದ ವಿಷಯವಾಗಿ ಈ ರೀತಿ ಹೇಳಿದರು:- ಅಮೆರಿಕಾದಲ್ಲಿ ೪೮ ಪ್ರತ್ಯೇಕ ಪ್ರಾಂತ್ಯಗಳಿವೆ ಇದರಿಂದ ಅಮೆರಿಕಾ ದೇಶಕ್ಕೆ ಯಾವರೀತಿಯಾದ ತೊಂದರೆಯಾಗಿಲ್ಲ. ಆ ಪ್ರಾಂತ್ಯಗಳು ಒಟ್ಟಿಗೆ ಸೇರಿ ನಾವೆಲ್ಲರೂ ಒಂದೇ ರಾಷ್ಟ್ರದವರು ಎಂಬ ಭಾವನೆಯಿಂದ ಕೂಡಿವೆ. ಭಾರತದಲ್ಲಿಯೂ ಕೂಡ ಅನೇಕ ಬೇರೆ ಬೇರೆ ಪ್ರಾಂತ್ಯಗಳಿದ್ದರೆ ತೊಂದರೆಯೇನೂ ಇಲ್ಲ. ಆದರೆ ಎಲ್ಲಾ ಪ್ರಾಂತ್ಯಗಳೂ ನಾವೆಲ್ಲರೂ ಒಂದೇ, ನಾವೆಲ್ಲರೂ ಸಹೋದರರು ಎಂಬ ಭಾವನೆಯಿಂದ ಕೂಡಿದವುಗಳಾಗಬೇಕು.

ನಂತರ ಅಧ್ಯಕ್ಷರಾದ ಶ್ರೀ ನಾರಾಯಣ ಸ್ವಾಮಿಯವರು ಭಾಷಣಮಾಡಿದ ನಂತರ ವಂದನಾರ್ಪಣೆಯಾಗಿ, ವಂದೇ ಮಾತರಂನೊಡನೆ ಸಭೆ ಮುಗಿಯಿತು.

ಜರ್ಮನಿ ಬಲ್ಗೇರಿಯಾ ಸಂಬಂಧವಿಲ್ಲ

ಜರ್ಮನಿಯೊಂದಿಗೆ ಬಲ್ಗೇರಿಯವು ಸಂಬಂಧ ತ್ಯಾಗಮಾಡಿದುದರ ಫಲವಾಗಿ [illegible] ರ್ಮ್ಯ ಮಂತ್ರಿಯು ಸೋಫಿಯಾವನ್ನು ಬಿಡಲು ತಯಾರಾಗುತ್ತಿದ್ದಾರೆ ಇಟಲಿ, ಮು[illegible] ತಾದ ರಾಜ್ಯಗಳೊಂದಿಗೂ ಸಂಬಂಧ [illegible] ಸ್ಸಿತು ಜರ್ಮನ್ ಸೇನೆ ಯಾವುದೂ [illegible] ಲ್ಗೇರಿಯಾದಲ್ಲಿಲ್ಲವೆಂದು ಹೇಳಲಾಗಿದೆ

Edited, printed and published by A. R. Nagarajan at the Sadhvi Press, D. Subbiah Road, Mysore.

ಆಪರೇಷನ್ ಬೇಡಿರಿ—ಕಣ್ಣುಗಳಿಗೆ—ಆಪರೇಷನ್ ಬೇಡಿರಿ

ಆಪರೇಷನ್ ಕಣ್ಣುಗಳಿಗೆ ಅಕಾಲ ಮರಣ

ಮಕ್ಕಳು ಮೊದಲು ದೊಡ್ಡವರ ಪರ್ಯಂತ ಅಂದರೆ ಆಬಾಲ ವೃದ್ಧರಾದರೂ ಎಂಥ ಭಯಂಕರವತ್ತ ಕಠಿಣವಾದ ಕಣ್ಣು ವ್ಯಾಧಿಯಾದರೂ ನಮ್ಮ ಷಾಪಿಗೆ ಬಂದು ಉಚಿತ ಪರೀಕ್ಷಿಸಿದಲ್ಲಿ ಆಪರೇಷನ್ ಇಲ್ಲದೆ ಗ್ಯಾರಂಟಿಯಾಗಿ ಕಣ್ಣು ವ್ಯಾಧಿಗಳು ಗುಣಮಾಡಲ್ಪಡುತ್ತೆ.

ಈವರೆವಿಗ ನಮ್ಮಲ್ಲಿ 405 ಮಂದಿ ನಮ್ಮ ಔಷಧಿಯಿಂದ ಗುಣಹೊಂದಿದ್ದಾರೆ. ಇವರಲ್ಲಿ ಕಣ್ಣು ಊದಿ ಉರಿಗೆ ಬಂದದ್ದು 11. ಕಟ್ಟಿ ಔಷಧಿ ಹಾಕಿ ಕರಗಿಸಿದ್ದ ಈಚೆಗೆ ಬಂದವರು 5, ಈ 16 [illegible] ಊದು ಕರಗಿ ಕಣ್ಣು ಗುಡ್ಡೆ ಒಳಗೆ ಸೇರಿ ವಾಸಿಯಾಗಿವೆ ರಣವಾದ ಕಣ್ಣುಗಳು 85, ಪೊರೆ ಬಂದು ಕಾಣದ ಕಣ್ಣು 75, ತಲೆ ನೋವಿನ ಕಾರಣದಿಂದ ಕಣ್ಣು ಹೊರ್ನಾಗಿ ಮರ್ಮಾಂಗ ಬೆಳೆದು ಕಣ್ಣು ಕಾಣದ್ದು 24 ಸಿಡುಬು ಬಂದು ಆ ಕಣ್ಣು ಹೊರ್ನಾಗಿ ಕಾಣಿಸದ್ದು 2, ಹೂ ಬಿದ್ದು ಕಣ್ಣು ಬೆಳ್ಳಗಾದದ್ದು 9, ಕಣ್ಣು ನೋವು, ರಣ, ಗಡ್ಡೆ, ಕೀವು, ರಕ್ತ ಮಂಜು, ಪ್ರಾರಂಭದ ಪೊರೆ, ಮೇಹ ಉಷ್ಣದಿಂದ ಕಟ್ಟಿ ಕಣ್ಣು ಇತ್ಯಾದಿ ಹಲವು ವಿಧವಾದ ಕಾರಣದಿಂದ ಬಂದ ವ್ಯಾಧಿಗಳು 341.

ಮೇಲ್ಕಂಡ 405 ಜನರುಗಳಿಗೂ ಆಪರೇಷನ್ ಇಲ್ಲದೆ, ಕಣ್ಣು ಕೆಡದೆ, ನಮ್ಮ ಅತ್ಯುತ್ತಮವಾದ ಬರೀ ಔಷಧಿಯಿಂದ ಗುಣ ಹೊಂದಿರುವಲ್ಲಿ ಇದಕ್ಕೆ ಪರಿಶುದ್ಧವಾದ ಬೇರೊಂದು ಔಷಧಿ ಉಂಟೋ, (ಯೋಚಿಸಿರಿ)

ಶಿವ ಪಾರ್ವತಿ ಮೆಡಿಕಲ್ ಹಾಲ್,
ತ್ಯಾಗರಾಜ ರೋಡು, ಕೃಷ್ಣರಾಜ ಮೊಹಲ್ಲಾ, ಮೈಸೂರು.

MEDICINES
Take your requirements from
RAGHULAL & CO.,
1748, Sayaji Rao Road.
(Upstairs, Mysore Hall), MYSORE.

ಔಷಧಗಳು
ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೋ,
1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

ಸ್ತ್ರೀಯರ ಸೌಕರ್ಯಕ್ಕೆ

[illegible] ದಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು [illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ಬಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೇಪೇಟೆ ಮಂಡಿಯಲ್ಲೂ, ಸಿಟಿಯ ಎಲ್ಲಾ ಮೊಹಲ್ಲಾ ದೇಶ ಕಾರ್ಡುಗಳಿಗೆ ಸಕ್ಕರೆ ಕೊಟಾಕ್ಕೆ ಪ್ರತಿವಾಗಿ ಬೂರಾ ಮತ್ತು ಬೆಲ್ಲಕ್ಕರೆ ಕೊಡಲ್ಪಡುತ್ತದೆ.

ಸ್ತ್ರೀಯರ ಮೆಚ್ಚಿಗೆಗೆ ಪಾತ್ರವಾದ ಸೌಭಾಗ್ಯ ಶ್ರೀ ಸ್ಟೋರ್ಸ್ ದೇವರಾಜ ಮಾರ್ಕೆಟ್, ಮೈಸೂರು

[illegible] ಸ್, ವಸ್ತ್ರ, ಬಂಡನ್ ಇನ್ನೂ ಅನೇಕ [illegible] ಬಳೆಗಳೂ, [illegible] ಡಬ್ಬಿಗಳೂ [illegible]

ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ ಕೆ. ಬ್ಲಾಕ್, ನಂ. 8 ರಲ್ಲಿ — ಎನಾಮಲ್ ಬಳೆಗಳನ್ನು ಕೊಳ್ಳಲು ಮರೆಯಬೇಡಿ!

WEEKLY EDITION

ಸಂಪುಟ ೯] ಸೋಮವಾರ ೧೧—೯—೪೪ [ಸಂಚಿಕೆ ೮

ಆಲ್ಬರ್ಟ್ ಕಾಲುವೆಗಾಗಿ ವಿಪರೀತ ರಕ್ತಪಾತ

ಗಾಂಧಿ-ಜಿನ್ನಾ ಮಾತುಕತೆಯಲ್ಲಿ ಆಶಾಭಾವನೆ ಮೂಡಿದೆ

ಜಪಾನಿಗೆ ನಾಜಿ ಮುಖಂಡರ ಓಟವೆ?

ದಸರಾ ದರ್ಬಾರು ಕಾರ್ಯಕ್ರಮ

ಮೈಸೂರು ೧೧

ನವರಾತ್ರಿ ಉತ್ಸವದ ಕಾರ್ಯಕ್ರಮದ ಪಟ್ಟಿ ಕೆಳಗೆ ಕಂಡ ರೀತಿ ಇರುತ್ತದೆ:—

೧೮ ನೇ ತಾರೀಖು ಹಗಲು ೧೧-೨೦ ಕ್ಕೆ ಪ್ರಭುಗಳು ದರ್ಬಾರ್ ಹಾಲಿಗೆ ದಯಮಾಡಿಸುವರು, ೧೧-೪೦ ಕ್ಕೆ ಸಿಂಹಾಸನಾರೋಹಣ, ರಾಜಕುಮಾರರು, ದಿವಾನರು, ಸರದಾರ್ ಎಂ. ಲಕ್ಷ್ಮೀಕಾಂತರಾಜ ಅರಸ್, ಪ್ರೈವೇಟ್ ಸೆಕ್ರೆಟರಿ, ಮಂತ್ರಿಗಳ, ಲೆಜಿಸ್ಲೆಟಿವ್ ಕೌನ್ಸಿಲ್ ಪ್ರೆಸಿಡೆಂಟ್ ಮತ್ತು ಅರಸು ಗಳು ನಜರೊಪ್ಪಿಸುವರು. ಸಂಜೆ ೭ ಗಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡಿಸುವುದು, ೮ ಗಂಟೆಗೆ ದರ್ಬಾರು, ಸಿವಿಲ್ ಆಫೀಸರುಗಳಿಂದಲೂ, ಅರಸುಗಳಿಂದಲೂ ನಜರ್

೧೯ ನೇ ತಾರೀಖು ಪ್ರಾತಃಕಾಲ ೯ ಗಂಟೆಗೆ ಪಟ್ಟದ ಆನೆ ಮತ್ತು ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡಿಸುವುದು, ರಾತ್ರಿ ೮ ಗಂಟೆಗೆ ದರ್ಬಾರು, ಮಿಲಿಟರಿ, ಪೋಲೀಸ್ ಆಫೀಸರುಗಳ ನಜರ್.

೨೦ ನೇ ತಾರೀಖಿನಿಂದ ೨೫ರ ವರೆಗೆ, ಬೆಳಗ್ಗೆ ಮತ್ತು ಸಂಜೆ ಪಟ್ಟದ ಆನೆ ಮತ್ತು ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡಿಸುವುದು, ಅನಂತರ ನಜರ್.

೨೬ ನೇ ತಾರೀಖು ಬೆಳಗ್ಗೆ ೭-೪೦ ಗಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು [illegible] ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡುವುದು, ಆಮೇಲೆ [illegible] ಕ್ಕೆ [illegible] ಬಿಜಮಾಡಿಸುವುದು ಅನಂತರ ಆಯುಧ, ಗಜಾಶ್ವಾದಿಗಳ ಪೂಜೆ, ಸಂಜೆ [illegible] ಗಂಟೆಗೆ ಯೂರೋಪಿಯನ್ ದರ್ಬಾರ್.

೨೭ ನೇ ತಾರೀಖು ಪ್ರಾತಃಕಾಲ ಪೂಜೆ ಬಳಿಕ ೧೧ ೧೫ ಗಂಟೆಗೆ ಆಯುಧ, ಆಭರಣಗಳು ಬನ್ನಿ ಮಂಟಪಕ್ಕೆ ಬಿಜಮಾಡುವುದು, ಅನಂತರ ಪಟ್ಟದ ಕಳಚ.

ಸಾಯಂಕಾಲ [illegible] ಗಂಟೆಗೆ [illegible] ಸವಾರಿ.

ಫುಟ್ ಬಾಲ್

ಬಹಳ ದಿನದಿಂದ ನಿರೀಕ್ಷಿಸಿಕೊಂಡಿದ್ದ ಮೈಸೂರು ಬ್ಲೂಸ್ ಮತ್ತು ಬ್ಯಾಲೆಂಜ್ ಯೂರೋಪಿಯನ್ ಟೀಮುಗಳ ಚೆಂಡಾಟದ ಪಂದ್ಯವು ನಿನ್ನೆ ದಿನ ಸಂಜೆ ದೊಡ್ಡ ಕೆರೆ ಮೈದಾನದಲ್ಲಿ ನಡೆಯಿತು. ಸಹಸ್ರಾರು ಜನ ಪ್ರೇಕ್ಷಕರು ಬಂದಿದ್ದರು. ಬ್ಲೂಸ್ ಟೀಮಿನ ಆಟಗಾರರಾದ ಶ್ರೀಗಳಾದ [illegible] ಮತ್ತು [illegible]ನವರುಗಳು ಕಡೇ ಅರ್ಧ ಗಂಟೆ ಆಟದಲ್ಲಿ ಒಂದೊಂದು ಗೋಲುಗಳನ್ನು ಹೊಡೆದು ಜಯವನ್ನು ಗಳಿಸಿದರು. ಆಟವು ಕೊನೆಯ ವರೆಗೂ ಎರಡು ಕಡೆಯೂ ಚೆನ್ನಾಗಿತ್ತು.

ಶ್ರೀ ಕೃಷ್ಣೋತ್ಸವ

ಈ ದಿನದಿಂದ ಗೋಕುಲಾಷ್ಟಮಿ ಪ್ರಯುಕ್ತ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ಉತ್ಸವ ಮತ್ತು ಗೋವಿಂದ ವೆಂಕಟೇಶಗಳ ಉತ್ಸವ ಎಂದಿನಂತೆ ಅರಮನೆ ಕೋಟೆ ಆವರಣದಲ್ಲಿ ನಡೆಯುವುವು.

ಗಣಪತಿ ಉತ್ಸವ

ಸಂಸ್ಕೃತ ಮಹಾ ಪಾಠಶಾಲೆಯ ವಿದ್ಯಾ ಗಣಪತಿಯ ಉತ್ಸವವು ನಡೆದು ೪ ದಿನ ಮಧ್ಯಾಹ್ನ [illegible] ಮಾಡಲಾಯಿತು.

ಜರ್ಮನಿಗಾಗಿ ಕದನ

ಈಗ ನಡೆಯುತ್ತಿರುವ ಆಲ್ಬರ್ಟ್ ಕಾಲುವೆಯ ಕದನವೇ ಜರ್ಮನಿಗಾಗಿ ನಡೆಯುವ ಯುದ್ಧವಾಗಿ ಪರಿಣಮಿಸಬಹುದು. ಈ ಕಾಲುವೆಯ ಬಳಿಯಲ್ಲಿ ಮಹತ್ತರವಾದ ಕಾಳಗವು ನಡೆಯುತ್ತಿದ್ದು ವಿಪರೀತ ರಕ್ತಪಾತವಾಗುತ್ತಿದೆ. ಇದರ ಹಿಂದೆ ಇರುವುದು ಸೀಗ್‌ಫ್ರೀಡ್ ರಕ್ಷಣಾ ಪಂಕ್ತಿ. ಹಾಲೆಂಡಿನ ಹಿಂದೆ ಒಳವಲ್ಲದ ರಕ್ಷಣಾ ಪಂಕ್ತಿಯಿಲ್ಲ [illegible]

ಆಲ್ಬರ್ಟ್ ಕಾಲುವೆ ಬಳಿ ಜರ್ಮನರು [illegible] ತೋಪುಗಳನ್ನೂ ಮಾರ್ಟರ್ ಎಂಬ ಅಸ್ತ್ರಗಳನ್ನೂ ಉಪಯೋಗಿಸುತ್ತಿರುವರು

ಸಂಧಾನ ಸಮಿತಿ

ಭಾರತದ ಪ್ರಶ್ನೆಯ ಬಗ್ಗೆ ಇಂಗ್ಲೆಂಡಿನಲ್ಲಿ [illegible] ಅಭಿಪ್ರಾಯ [illegible] ಹಿಂದೆ ಇದ್ದುದಕ್ಕಿಂತ ಹೆಚ್ಚು [illegible] ಜನರಿಂದ ಭಾರತದವರೊಡನೆ ಸಂಧಾನ ನಡೆಸಬೇಕೆಂಬ ಅಭಿಪ್ರಾಯ ಬಂದಿರುವುದಾಗಿ [illegible] ಪತ್ರಿಕೆಯು ತಿಳಿಸುತ್ತದೆ

ಮೈಸೂರು ನಾಟಕ ಸಂಘ

ನೆನ್ನೆ ದಿನ ಸಂಜೆ ಮೈಸೂರು ನಾಟಕ ಸಂಘದ ನಾಲ್ಕನೇ ವಾರ್ಷಿಕೋತ್ಸವವೂ ಮತ್ತು ವಿದ್ಯಾ ಗಣಪತಿ ಮಂಗಳಾರತಿಯೂ ವೇದಾಶಾಲೆಯ ಸ್ಕೂಲಿನಲ್ಲಿ ನಡೆದುವು. ದರ್ಬಾರು ಬಕ್ಷಿ ಶ್ರೀ [illegible] ಅವರು ಅಧ್ಯಕ್ಷತೆ ವಹಿಸಿದ್ದರು. ದೇವತಾ ಪ್ರಾರ್ಥನೆ, ಕಾರ್ಯದರ್ಶಿಯವರ ವರದಿ, ಅಧ್ಯಕ್ಷರ ಭಾಷಣ, ಮಹಾ ಮಂಗಳಾರತಿ, ಪುಷ್ಪ ತಾಂಬೂಲ ವಿನಿಯೋಗವಾದನಂತರ ಉತ್ಸವವು ಮುಕ್ತಾಯವಾಯಿತು.

ನಾಟಕ ಕಲಾ ಪತ್ರಿಕೆ

ಇತ್ತೀಚೆಗೆ ಮಲಿನವಾಗುತ್ತಿರುವ ನಾಟಕ ಕಲೆ, [illegible] ಭೂಮಿಯ ಉದ್ಧಾರ ಕಾರ್ಯಕ್ಕಾಗಿಯೇ ಮೈಸೂರು ನಾಟಕ ಸಂಘದ ಆಶ್ರಯದಲ್ಲಿ [illegible] ವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು [illegible] ಪತ್ರಿಕೆಯೊಂದನ್ನು ನಡೆಸಲು ಹವಣಿಸುತ್ತಿರುವರು. ಇದರ ಪ್ರಥಮ ಸಂಚಿಕೆಯು [illegible] ವಿಜಯದಶಮಿ ದಿನ ಹೊರಬೀಳಲಿದೆ

ಗಾಂಧಿ-ಜಿನ್ನಾ ಸಂಭಾಷಣೆ

ಮೂರು ಗಂಟೆ ಮತ್ತು ನಿಮಿಷಗಳ ವರೆಗೆ ಮಹಾತ್ಮರಿಗೂ ಜಿನ್ನಾರವರಿಗೂ ಜಿನ್ನಾರ ಭವನದಲ್ಲಿ ಸಂಭಾಷಣೆ ನಡೆಯಿತು. ಇಬ್ಬರಿಗೂ ಸ್ನೇಹ ಪೂರಿತ ಮತ್ತು ಯಥಾರ್ಥವಾದ ಮಾತುಕತೆಗಳು ನಡೆದುವೆಂದು ಇವರಿಬ್ಬರೂ ಕೊಟ್ಟ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಜಿನ್ನಾರವರೇ ಬಹು ಕಾಲ ಮಾತನಾಡಿದರೆಂದೂ, ಮಹಾತ್ಮರು ಸುಮ್ಮನೆ ಕೇಳುತ್ತಾ ಆಲಿಸುತ್ತಿದ್ದರೆಂದೂ ಗೊತ್ತಾಗಿದೆ. ಜಿನ್ನಾ ಮತ್ತು ಗಾಂಧೀಜಿಯವರ ಮಾತುಕತೆಯಿಂದ ಆಶಾಭಾವನೆಯು ಮೂಡಿದೆ

ಗಾಂಧೀಜಿಯವರು ಜಿನ್ನಾರವರಿಗೆ ರಾಜಾಜಿಯವರಿಂದ ತಯಾರಾದ ಯೋಜನೆಯನ್ನು ವಿವರಿಸಿದರು. ಅದನ್ನು ಜಿನ್ನಾರವರು ಪರಿಶೀಲನೆ ಮಾಡುವರು. ದರ್ಬಾರಿಗೆ ಹಬ್ಬದ ಪ್ರಯುಕ್ತ ನೆನ್ನೆ ಸಂಭಾಷಣೆ ನಡೆಯಲಿಲ್ಲ. ಈ ದಿನ ಮತ್ತೆ ಪ್ರಾರಂಭವಾಗುತ್ತದೆ.

ಗಾಂಧೀಜಿಯವರು ಕರೆಬ ಬರಲು ಸಿದ್ಧ

ಗಾಂಧೀ-ಜಿನ್ನಾರ ಮಾತುಕತೆ ನಡೆಯುತ್ತಿದ್ದಾಗ ಇಲ್ಲಿ ಆಶ್ಚರ್ಯವಾದ ವಿಷಯಗಳು ನಡೆದುವು. ಸಂಭಾಷಣೆ ಕಾಲದಲ್ಲಿ ಜಿನ್ನಾರವರು ಹೊಗೆ ಬತ್ತಿಯನ್ನು ಸೇದುತ್ತಿದ್ದರು. ಗಾಂಧೀಜಿಯವರಿಗೆ ಒಂದು ಬಟ್ಟಲು ಹಾಲನ್ನು ಅಥವಾ ಹಣ್ಣಿನ ರಸವನ್ನು ಕೊಡಲಿ. ಹೋಗುವಾಗ ಮಹಾತ್ಮರು ಒಂದು ಲೋಟ ನೀರೇ ಸಾಕೆಂದು ಹೇಳಿ ಅದನ್ನು ಕುಡಿದರು. ಭಾಷಣ [illegible] ಜಿನ್ನಾ ಹಬ್ಬದ ಕಡೆಯ ದಿನವಾದ ಪ್ರಯುಕ್ತ ಹೋಮ ಮಾಡಿ [illegible] ಗಾಂಧೀಜಿಯವರು ಮನುಷ್ಯರು ಒಪ್ಪಿದವರೆಂದು ಜಿನ್ನಾರವರು ಹೇಳುತ್ತಿದ್ದಾಗ ಪಕ್ಕ ಮಹಾತ್ಮರು ಪ್ರವೇಶಿಸಿ "ದಯವಿಟ್ಟು ನನಗೆ ಸಹ [illegible] ಸಿದ್ಧನಿರುವೆನು" ಎಂದು ಉತ್ತರ ಕೊಟ್ಟರು

ಉಪವಾಸ ಪ್ರಯತ್ನವೆ?

ಗಾಂಧಿ-ಜಿನ್ನಾ ಮಾತುಕತೆ ನಡೆಯುವಾಗ ವಿರೋಧ ಪ್ರದರ್ಶನ ಮಾಡಲು [illegible] ಜನರು [illegible] ಗುಡ್ಡದ ಹತ್ತಿರ ಬಂದಿದ್ದರು. ಅವರನ್ನು ಪೋಲೀಸರು ತಡೆದರು. [illegible] ಜನರು ಹೆಚ್ಚು [illegible] ಗಳು ಪ್ರಯತ್ನ ಪಟ್ಟಾಗ ಅವರ ದಸ್ತಗಿರಿ

ಜಪಾನಿಗೆ ಓಡುವರೇ?

ನಾಜಿ ಮುಖಂಡರು ಜಪಾನಿಗೆ ಓಡುವರೆಂದು ಇತ್ತೀಚಿನ ವರದಿ. [illegible] ರ್ ಮುಂತಾದ ನಾಜಿಗಳ ಮೇಲೆ ನ್ಯಾಯ ಮಾಡಬೇಕೆಂಬ ಇಂಗ್ಲಿಷರಿಂದ ಜಪಾನಿನ ರಕ್ಷಣೆ ತಯಾರಾದ [illegible] ಗಳಲ್ಲಿ ಕೆಲವು ಹೋಗುವುದನ್ನು [illegible] ಗಳಾಗುತ್ತಿವೆಯಂತೆ

ಜಪಾನ್ ಯುದ್ಧ ಗುರಿ ಏನು

ಜಪಾನ್ ರಾಜ್ಯದ ಯುದ್ಧ ಗುರಿಯನ್ನು ಕುರಿತು ವಿವರಿಸುತ್ತಾ, ಅಲ್ಲಿನ ವಿದೇಶಾಂಗ ಮಂತ್ರಿ ಶಿಗೆಮಿಟ್ಸುರವರು ಜಪಾನಿಗೆ ಮೊದಲು ಆತ್ಮರಕ್ಷಣೆ ಮುಖ್ಯ, ಅಂದರೆ ಪ್ರಪಂಚದಲ್ಲಿ ಅದಕ್ಕೆ ಸರಿಯಾದ ಸ್ಥಾನವನ್ನು ಮಾಡಿಕೊಳ್ಳುವುದು, ಆಂಗ್ಲೋ-ಅಮೆರಿಕದವರ ಹಿಡಿತವನ್ನು ಬಿಡಿಸುವುದು ಶಾಂತಿಯುತ ಮತ್ತು ಸೌಹಾರ್ದಯುತ ರಾಜ್ಯಗಳ ನಿರ್ಮಾಣ ಮತ್ತು ಆತ್ಮಗೌರವ ಪ್ರಬೋಧನೆ, ಇವುಗಳು ಮುಖ್ಯವಾದ ಅಂಶಗಳೆಂದೂ ತಿಳಿಸಿದರು. ಇಲ್ಲಿದೆ ಪ್ರಪಂಚದಲ್ಲಿ ಕಚ್ಚಾ ಪದಾರ್ಥಗಳು ಎಲ್ಲ ರಾಜ್ಯಗಳಿಗೂ ಸಿಗುವಂತಾಗಬೇಕು ಮತ್ತು ರಾಷ್ಟ್ರ ರಾಜ್ಯಗಳಿಗೆ ಸಾಂಸ್ಕೃತಿಕ ಸಂಬಂಧವು ಬೆಳೆದು ಸಕಲರ ಗೌರವವನ್ನು ಹೆಚ್ಚಿಸುವಂತಾಗಬೇಕು, ಎಂಬುದಾಗಿ ಅವರು ತಿಳಿಸಿದ್ದಾರೆ.

LATEST NEWS

ದಿವಾನರು ವಾಪಸು

ಸ್ವಂ. ಸು. ವರದಿ] ಬೆಂಗಳೂರು ೧೧

[illegible] ಕೆಲಸದ ಮೇಲೆ ಮದ್ರಾಸಿಗೆ ಹೋಗಿದ್ದ ದಿವಾನರು ಈ ಪ್ರಾತಃಕಾಲ ವಾಪಸು ಬಂದರು

ಸ್ಥಳೀಯ ಸಂಸ್ಥೆಗಳ ಸಚಿವರು

ಸ್ಥಳೀಯ ಸಂಸ್ಥೆಗಳ ಸಚಿವರು [illegible] ಸಂಜೆ ದೆಹಲಿಯಿಂದ ರೈಲಿನಲ್ಲಿ ಬೆಂಗಳೂರಿಗೆ ವಾಪಸು ಬಂದರು

ಹೊಸ ಆಜ್ಞೆ

ಪೊಟಾಸಿಯಂ ಕ್ಲೋರೇಟ್, ಸೋಡಿಯಂ ಕ್ಲೋರೇಟ್, ಬೇರಿಯಂ ಕ್ಲೋರೇಟ್, ರೆಡ್ ಫಾಸ್ಫರಸ್ ಮೊದಲಾದ ಕೆಲವು ಪದಾರ್ಥಗಳನ್ನು ಯಾರೂ ಆಯಾಯ ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಂದ ಲೈಸೆನ್ಸ್ ಪಡೆಯದ ಹೊರತು ಇಟ್ಟುಕೊಳ್ಳತಕ್ಕದ್ದಲ್ಲ, ಕೊಡುವುದು ಮಾರುವುದು ಎಂದು ನಿಷೇಧಿಸಿ ಸರಕಾರದವರು ಭಾರತ ರಕ್ಷಣಾ ಶಾಸನದ ರೀತ್ಯಾ ಒಂದು ಹೊಸ ಆಜ್ಞೆಯನ್ನು ಹೊರಡಿಸಿದ್ದಾರೆ.

ಆಯಾ [illegible] ಪ್ರದರ್ಶನ ಕಾರಣ [illegible] ಭವನದಲ್ಲಿ [illegible] ಮನುಷ್ಯರ ಕೂಡಲು ಪ್ರಯತ್ನಿಸಿದರು. ಅವರನ್ನು ಪೋಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು.

ಜಿನ್ನಾರವರ ಬಂಗಲೆಯ ಆವರಣದಲ್ಲಿ [illegible] ಪತ್ರಿಕೋದ್ಯೋಗಿಗಳು ಮಾತ್ರ ಇದ್ದರು. ಇವರ [illegible] ಯಾವ ಪ್ರಾಮುಖ್ಯತೆ ಬರಲಿಲ್ಲ.

ಕಾಲ್ನಡೆಯಲ್ಲಿ ವಾಪಸು

ಮಾತುಕತೆ ಮುಗಿದನಂತರ ಗಾಂಧೀಜಿಯವರು ಜಿನ್ನಾರವರಿಂದ [illegible] ಬೀಳ್ಕೊಂಡು [illegible] ಭವನದಿಂದ [illegible] ಬಿರ್ಲಾ ಭವನಕ್ಕೆ ತೆರಳಿದರು.

ವಾರ ಭವಿಷ್ಯ

[illegible] ರಿಂದ [illegible] ರವರೆಗೆ

(ಶ್ರೀ [illegible] ಯವರ [illegible])

ಮೇಷ - ಆರೋಗ್ಯ, ಆರ್ಥಿಕ, ಮಾನಸಿಕ [illegible] ವ್ಯಾಪಾರ, ನೌಕರಿಗಳಲ್ಲಿ [illegible] ವಾರದಲ್ಲಿ [illegible] ಶ್ರೀ [illegible] ಭೇಟಿ

ವೃಷಭ - [illegible] ವ್ಯಾಪಾರ [illegible] ನೌಕರಿ [illegible]

ಮಿಥುನ - ಆರೋಗ್ಯ ಸ್ವಲ್ಪ ಕೆಡುವಿಕೆ [illegible] ವ್ಯಾಪಾರ, ನೌಕರಿಗಳಲ್ಲಿ [illegible]

ಕರ್ಕ - ಆರೋಗ್ಯ, ಆರ್ಥಿಕ, ಮಾನಸಿಕ [illegible] ವ್ಯಾಪಾರ, ನೌಕರಿಗಳಲ್ಲಿ [illegible]

ಸಿಂಹ - [illegible] ಆರ್ಥಿಕ [illegible] ನೌಕರಿ [illegible]

ಕನ್ಯಾ - ಆರೋಗ್ಯ, ಆರ್ಥಿಕ, ಮಾನಸಿಕ [illegible] ಉದ್ಯೋಗ, ವ್ಯಾ [illegible]

ತುಲಾ - ಆರೋಗ್ಯ, ಮಾನಸಿಕ ವ್ಯಾ [illegible], ನೌಕರಿ, ಪ್ರಯಾಣಗಳಲ್ಲಿ ಯಶ [illegible] ಶ್ರೀ [illegible]

ವೃಶ್ಚಿಕ - ಆರೋಗ್ಯ, ಆರ್ಥಿಕ, ಮಾನಸಿಕ [illegible] ವ್ಯಾಪಾರ, ನೌಕರಿಗಳಲ್ಲಿ [illegible] ಪ್ರವಾಸ [illegible] ಶ್ರೀ [illegible]

ಧನು - ಆರೋಗ್ಯ, ಧನ, ಮಾನಸಿಕ ಉತ್ತಮ. ವ್ಯಾಪಾರ, ನೌಕರಿ, ವ್ಯವಸಾಯ [illegible] ಶ್ರೀ [illegible] ಧನ ವ್ಯಯ.

ಮಕರ - ಆರೋಗ್ಯ ಸಾಧಾರಣ [illegible] ಮಾನಸಿಕ, ಆರ್ಥಿಕ ಸಾಧಾರಣ. ವ್ಯಾಪಾರ ನೌಕರಿಗಳಲ್ಲಿ ಅವಮಾನ. ಪ್ರವಾಸದಲ್ಲಿ [illegible]

ಬಚ್ಚಲುಗಳಲ್ಲಿ ವಾಸನೆ

ಸ್ವಂ. ವ.] ನಂಜನಗೂಡ, ೧೦

ಊರಿನ ಕಡೆ [illegible] ಪೋಲೀಸ್ ಸ್ಟೇಷನ್ ಎದುರಿನ ಚೌಕದಲ್ಲೂ ಬಚ್ಚಲುಗಳಲ್ಲಿ ಕೊಳೆತ ವಾಸನೆಯಿದ್ದು ಸಹಿಸಲು ಅಸಾಧ್ಯವಾಗಿದೆ. ಇಂತಹ ದೊಡ್ಡ ಜಾಗದಲ್ಲಿಯೇ [illegible] ಸಂದಿ ಬೀದಿಗಳಲ್ಲಿ ಇನ್ನು ಹೇಗಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ಜನರು ತುಂಬಾ ತೊಂದರೆ ಪಡುತ್ತಿದ್ದಾರೆ. ಅಧಿಕಾರಿಗಳು ಇವುಗಳನ್ನು ನೋಡಿ ಸರಿಪಡಿಸುವರೆಂದು ನಂಬಲಾಗಿದೆ.

ಕುಂಭ — ಆರೋಗ್ಯ, ಆರ್ಥಿಕ ಮಾನಸಿಕ ಉತ್ತಮ. ಅಕಸ್ಮಾತ ವಸ್ತುಗಳಿಂದ ದೂರವಾಗಿರಿ [illegible] ಒಳ್ಳೆಯದಾಗುವುದು. ಶ್ರೀ [illegible]

ಮೀನ - ಆರೋಗ್ಯ ಆರ್ಥಿಕ ಉತ್ತಮ. ದುಷ್ಟ ಜನರ ಕಡೆ ಜಾಗರೂಕರಾಗಿರಿ. ವ್ಯಾಪಾರ, ನೌಕರಿಗಳಲ್ಲಿ ಅಲ್ಪ ಕ್ಲೇಶವಾದರೂ ಮಿತ್ರರಿಂದ ಸಿಹಾಯ. ಶ್ರೀ [illegible] ಇಂದ ಸಹಾಯ, ಲಾಭ

ಅಮಲ್ದಾರರಿಗೆ ನೋಟೀಸು

ಪೌರಸಭೆಯಲ್ಲಿ 'ಸದಾರಮೆ' ನಾಟಕ ಪ್ರಸಂಗವೇ?

ಸ್ವಂ. ವ.] ಚನ್ನರಾಯಪಟ್ಟಣ

ಏಳನೇ ತಾ|| ಈ ಊರಿನ ಪೌರಸಭೆಯ ಅಧಿವೇಶನ ನಡೆದ ಸಮಯದಲ್ಲಿ ಜವಾನರುಗಳ [illegible] ವಿಚಾರವಾಗಿ ಅಧ್ಯಕ್ಷರಾದ ಎ|| ಚನ್ನರೆಡ್ಡಿಯವರೂ, ಉಪಾಧ್ಯಕ್ಷರಾದ ಶ್ರೀ [illegible] ಮಾತ್ರವಲ್ಲದೆ [illegible] ತ್ಯಾಗ ಮಾಡಿದರು. ಅಮಲ್ದಾರ್ ಅಧ್ಯಕ್ಷರು ಉಪಾಧ್ಯಕ್ಷರನ್ನು [illegible] ಮಾಡುವುದಾದರೆ ಮಾಡಿ, ಇಲ್ಲವಾದರೆ ಎದ್ದು ಹೋಗಿ; ಇದೇನು ಸದಾರಮೆ ನಾಟಕವಲ್ಲವೆಂದು ಹೇಳಿದರೆಂದೂ ತಿಳಿದುಬಂದಿದೆ. ಈ ಸಂದರ್ಭದಲ್ಲಿ ಶ್ರೀ [illegible] ಅಧ್ಯಕ್ಷರಿಗೆ ರಿಜಿಸ್ಟರ್ ನೋಟೀಸು ಕೊಟ್ಟಿರುವರೆಂದೂ, ಅವರ [illegible] ಕೋರ್ಟಿನಲ್ಲಿ [illegible] ಹಾಕುವರೆಂದೂ ತಿಳಿದುಬರುತ್ತದೆ.

ಸಭಾ ಬಹಿಷ್ಕಾರದ ದಿನ ಸಭೆಯಿಂದ ತಾವೇ ಎದ್ದು ಹೋಗುತ್ತೇವೆಂದು ತಿಳಿಸಿ, ಅವರುಗಳು ಎದ್ದು ಹೋದರೆಂದು ಅಧ್ಯಕ್ಷರು ಸಭೆಯ ಪ್ರೊಸೀಡಿಂಗ್ಸ್‌ನಲ್ಲಿ ರಿಕಾರ್ಡ್ ಮಾಡಿಕೊಂಡಿದ್ದಾರೆಂದು ತಿಳಿದುಬಂದಿದೆ

* * * *

ಮೊನ್ನೆ ರಾತ್ರಿ ಕಲ್ಲುಕೆರೆ ಸಂತೆಯಿಂದ ಬರುತ್ತಿದ್ದ ಗಾಡಿಗಳನ್ನು ಕಳ್ಳರ ಗುಂಪೊಂದು ತಡೆದು ಗಾಡಿಯಲ್ಲಿದ್ದವರ ದುಡ್ಡನ್ನೂ ಸಾಮಾನುಗಳನ್ನೂ ಕಿತ್ತುಕೊಂಡು, ಅವರನ್ನು [illegible], ದೊಣ್ಣೆಗಳಿಂದ ಹೊಡೆದರೆಂದೂ, ನಾಲ್ಕಾರು ಜನಗಳಿಗೆ ಗಾಯಗಳಾಗಿವೆಯೆಂದೂ, ಪೋಲೀಸರು ತನಿಖೆ ನಡೆಸುತ್ತಿರುವರೆಂದೂ ತಿಳಿದುಬರುತ್ತದೆ.

ಪ್ಲೇಗ್ ಕಮ್ಮಿಯಾಗಿದೆ

ಮಂಡ್ಯ ತಾಲ್ಲೂಕು [illegible] ಪ್ಲೇಗ್ ಉಪದ್ರವವು ಕಮ್ಮಿಯಾಗಿದೆ. [illegible] ಮತ್ತು ಹೋಟೆಲುಗಳು ತೆರೆಯಲಾಗಿದೆ.

Edited, printed and published by A. R. Nagarajan, at the Sadhvi Press, D. Subbiah Road, Mysore

Stock Clearance Sale

[illegible] Clear [illegible]

[illegible] ನಾರಾಯಣ ಶೆಟ್ಟಿ ಅಂಡ್ ಸನ್ಸ್.

[illegible] ಮೈಸೂರು.

ಎಂದಿಗೂ ಇದನ್ನು ಮಾಡದಿರಿ

ಗಾಡಿಯ ಹೊರಗಡೆ ಪ್ರಯಾಣಮಾಡದಿರಿ. ಹಾಗೆ ಮಾಡಿದಿರಾದರೆ, ಕೈಕಂಬಕ್ಕೋ, ಸೇತುವೆಗೋ ತಗಲಿ, ನಿಮ್ಮ ದೇಹವು ಜಖಂ ಆಗುವದು. ಈ ರೀತಿಯ ಪ್ರಯಾಣವು ಕಾಯಿದಾ ವಿರುದ್ಧವಾದದ್ದರಿಂದ, ಅಪಘಾತವು ಸಂಭವಿಸಿದರೆ, ಅದಕ್ಕಾಗಿ ಯಾವ ಉಪಶಮನವೂ ಸಿಕ್ಕುವದಿಲ್ಲ. ಗಾಡಿಯ ಒಳಕ್ಕೆ ಪ್ರವೇಶವು ಸಿಕ್ಕದಿದ್ದರೆ, ಪ್ರಯಾಣವನ್ನೇ ಮಾಡದಿರಿ. ಮರಣಕ್ಕಾ ಅಥವಾ ಶಕ್ತಿಗಾ ಅನ್ನುವದಕ್ಕಿಂತಲೂ ಅಪಾಯಕರವಾದ ಹವ್ಯಾಸವು ನಿಮಗಾ, ನಿಮ್ಮ ಕುಟುಂಬಕ್ಕಾ ಒಳ್ಳೆಯದಲ್ಲ

ರೈಲುಗಾಡಿಗಳ ಮತ್ತು ರೈಲುದಬ್ಬಿಗಳ ಸಂಖ್ಯೆಯು ಕಡಮೆಯಾಗಿರುವದರಿಂದ, ಈಚೆಗೆ ಗಾಡಿಗಳು ವಿಶೇಷವಾಗಿ ಜನರಿಂದ ಭರ್ತಿಯಾಗಿರುತ್ತವೆ. ಹೀಗೆ ಕಡಮೆಯಾಗಿರುವದಕ್ಕೆ ಕಾರಣವೆಂದರೆ, ಈ ಜಗದ್ವ್ಯಾಪಿಯುದ್ಧದ ಪ್ರಥಮಕೆಲಸವೆಂದರೆ, ದೇಶದ ಎಲ್ಲಾ ಭಾಗಕ್ಕೂ ಆಹಾರಪದಾರ್ಥ, ಬಟ್ಟೆ ಮತ್ತು ಸಾಧನಸಾಮಗ್ರಿಗಳನ್ನು ರವಾನಿಸುವದು. ಪ್ರಯಾಣಕ್ಕಿಂತಲೂ ನಿಮಗೆ ನಿಮ್ಮ ಆಹಾರ, ಬಟ್ಟೆ ಮತ್ತು ಆರೋಗ್ಯ ಇವುಗಳೇ ಮುಖ್ಯವಾದವುಗಳು.

ಕ್ಷೇಮವಾಗಿ ಪ್ರಯಾಣಮಾಡಿರಿ

ಸುಖ ಮತ್ತು ಆರಾಮಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣ ಮಾಡಿರಿ

[illegible]

ಮಿತ್ರ ಮುಖಂಡರ ಸಭೆಗೆ ಸ್ಟಾಲಿನರು ಹೋಗುವುದಿಲ್ಲ

ಕ್ವಿಬೆಕ್ ಪಟ್ಟಣದಲ್ಲಿ ಅಧ್ಯಕ್ಷ ರೂಸ್ವೆಲ್ಟರಿಗೂ, ಚರ್ಚಿಲರಿಗೂ ಸಮಾಲೋಚನೆ ನಡೆಯುವುದು ಸರಿಯಷ್ಟೆ. ಆ ಸಭೆಗೆ ಬರುವಂತೆ ಸ್ಟಾಲಿನರಿಗೂ ಆಹ್ವಾನ ಹೋಗಿತ್ತು. ರಷ್ಯನರಿಗೆ ದೊರೆಯುತ್ತಿರುವ ಜಯ ಪರಂಪರೆಯಿಂದ ಉದ್ಭವಿಸುವ ಹೊಸ ಹೊಸ ಸಮಸ್ಯೆಗಳನ್ನು ಬಗೆ ಹರಿಸುವ ಕರ್ತವ್ಯವು ಬಹಳ ಇರುವುದರಿಂದ ಅವರು ಹೋಗಲಿಕ್ಕಾಗುವುದಿಲ್ಲವೆಂದು ತಿಳಿಸಿದ್ದಾರೆ.

ಬಲ್ಗೇರಿಯಾ ರಾಜಪ್ರತಿನಿಧಿಗೆ ಪದಚ್ಯುತಿ

ಬಲ್ಗೇರಿಯಾದಲ್ಲಿ ರಷ್ಯಾ ಸೈನ್ಯವು ಯುದ್ಧ ನಿಲ್ಲಿಸಿದೆ. ರಾಜಪ್ರತಿನಿಧಿಯಾಗಿದ್ದ ರಾಜ ಕುಮಾರ ಸಿರಿಲ್ ಮತ್ತು ಜನರಲ್ ಮೈಕಾಫ ಇವರು ಪದಚ್ಯುತರಾಗಿದ್ದಾರೆ. ಬಲ್ಗೇರಿಯಾವು ಜರ್ಮನಿ ಮೇಲೆ ಯುದ್ಧ ಹೂಡಿದೆ. ಆದರೆ ಜರ್ಮನರು ಪ್ರೊ|| ಟ್ಸಾಂಕಾಫ ಎಂಬುವರ ಮುಖಂಡತ್ವದಲ್ಲಿ ಬೇರೊಂದು ಸರಕಾರ ರಚಿಸಿದ್ದಾರೆ. ಇದು ಜರ್ಮನಿಯೊಂದಿಗೆ ಸ್ನೇಹದಿಂದ ವರ್ತಿಸಿಕೊಂಡು ಬರುತ್ತದೆ.

ಬ್ರಿಟರ ಮೇಲೆ ಅಮೇರಿಕನರ ಅಸಮಾಧಾನ

ಅಮೇರಿಕನರ ರಾಜ ತಂತ್ರ ಕೆಲಸಕಾರ್ಯಗಳಲ್ಲಿ ಬ್ರಿಟನರು ಕೈಹಾಕಿರುವರೆಂದು ಆಪಾದನೆ ಮಾಡಿ, ಅಮೇರಿಕದ ಒಳನಾಡಿನ ವ್ಯವಹಾರಗಳಲ್ಲಿ ಬ್ರಿಟನರು ಪ್ರವೇಶ ಮಾಡಿರುವರೋ ಇಲ್ಲವೋ ಎಂಬುದನ್ನು ಗೊತ್ತುಪಡಿಸಲು ಪ್ರತಿನಿಧಿ ಮತ್ತು ಸೆನೇಟ್ ಸಭೆಗಳ ತನಿಖೆಯಾಗಬೇಕೆಂದು ಒತ್ತಾಯಪಡಿಸುವ ಭಾಷಣಗಳಾಗುತ್ತಿವೆಯೆಂದೂ, ಫಿಲಿಪ್ಪರು ಹಿಂದಕ್ಕೆ ಬಂದರೂ ಪರಿಣಾಮವಾಗಿ ಇನ್ನೆಲ್ಲವೂ ಆಗುತ್ತಿದೆಯೆಂದೂ ಜರ್ನಲ್ ಅಮೇರಿಕ ಪತ್ರಿಕೆ ತಿಳಿಸುತ್ತದೆ.

ಕೇಡಿಗೆ ಕೇಡು

ರಾಷ್ಟ್ರಗಳು ಹೂಡುವ ಯುದ್ಧವು ನಾಯಕತ್ವದ ಪ್ರಶ್ನೆಯ ದುಷ್ಪರಿಣಾಮವಾಗುವುದಿಲ್ಲ, ಸೇಡನ್ನು ತೀರಿಸಿಕೊಳ್ಳಲು ಜರ್ಮನಿಯು ತನ್ನ ಮಿತ್ರರೊಂದಿಗೆ ಯುದ್ಧ ನಡೆಸುವ ನಿಟ್ಟಿನಲ್ಲಿ ಹಾಕಿದರೆ ಮುಂದೆ ಅದಕ್ಕೆ ಅದೇ ರೀತಿಯಲ್ಲಿ ಪ್ರಾಯಶ್ಚಿತ್ತ ಹೊಂದಬೇಕಾದ ಪ್ರಸಂಗವು ಒದಗುತ್ತದೆ, ಎಂಬುದಾಗಿ ಬ್ರೈಡ್ ವ್ಹಾಲ್ಟರವರು ಫಿಲಡೆಲ್ಫಿಯಾದಲ್ಲಿ ತಿಳಿಸಿದ್ದಾರೆ. ರಷ್ಯಾ, ಬ್ರಿಟನ, ಅಮೇರಿಕಾ, ಮತ್ತು ಚೀನಾಗಳು ಯುದ್ಧಾನಂತರ ಸನ್ನದ್ಧವಾಗಿರಬೇಕೆಂದು ಅದರಿಂದ ಶಾಶ್ವತ ಶಾಂತಿಯು ಆಗುವುದೆಂಬ ಭರವಸೆ ಇರಲಾರದು. ಜರ್ಮನಿಯನ್ನು ನಿಶ್ಶಸ್ತ್ರವನ್ನಾಗಿ ಮಾಡಬೇಕೆಂದೂ, ಜರ್ಮನಿಯು ಮಾಡಿದ ಅನ್ಯಾಯ ಮಾಡಬೇಕಾದರೆ, ಇತರ ದೊಡ್ಡ ರಾಷ್ಟ್ರಗಳೂ ಅದೇ ರೀತಿ ಶಸ್ತ್ರ ಸನ್ಯಾಸ ಮಾಡಬೇಕಾಗಬೇಕೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಅನಾಥ ಸ್ತ್ರೀಯರಿಗೆ ವಸ್ತ್ರದಾನ

ಶ್ರೀಕಂಠಾಚಾರು ಸರ್ಕಾರವು ಅನಾಥ ಸ್ತ್ರೀಯರಿಗೆ ಬಟ್ಟೆಯನ್ನು ದಾನ ಮಾಡಲು ಬಟ್ಟೆ ಒಕ್ಕಲಿಗರಾಗುವನ್ನು ಮಂಜೂರ ಮಾಡಿದೆ. ಸ್ಥಳೀಯ ನಗರದಲ್ಲಿರುವ ಬಡ ಅನಾಥ ಸ್ತ್ರೀಯರಿಗೆ ಬಟ್ಟೆಯನ್ನು ವಿತರಣೆಯಾಗುವುದು.

ಸಂಪುಟ ೩] ಮಂಗಳವಾರ ೧೨—೯—೪೪ [ಸಂಚಿಕೆ ೬೧

ಜಪಾನನ್ನು ೧ ವರ್ಷದಲ್ಲಿ ಸೋಲಿಸಲು ಪ್ರತಿಜ್ಞೆ

ಜರ್ಮನರು ಲಿಯೊಪೋಲ್ಡ ಕಾಲುವೆ ಕಡೆ ಓಡುತ್ತಿದ್ದಾರೆ

ಮಾ|| ಸ್ಟಾಲಿನರು ಮುಖಂಡರ ಸಭೆಗೆ ಹೋಗುವುದಿಲ್ಲ

ಅಧಿಕಾರದ ಸ್ಥಾನದಿಂದಲೇ ಉಮೇದುವಾರಿಕೆ

ಸ್ವಂ.ಸು.ಪ್ರೋ] ಬೆಂಗಳೂರು ೧೧

ನ್ಯಾಯವಿಧಾಯಕ ಸಭೆಯ ಅಧ್ಯಕ್ಷರೂ ಮತ್ತು ಉಪಾಧ್ಯಕ್ಷರೂ ಅಧಿಕಾರ ಸ್ಥಾನದಲ್ಲೇ ಅವಧಿಯ ವರೆಗೂ, ಅಂದರೆ, ಗಣಕ ಮೇ ಅವಧಿಯ ವರೆಗೂ ಇದ್ದು, ಚುನಾವಣೆಗೆ ನಿಲ್ಲಲು ಅವಕಾಶ ಕೊಡತಕ್ಕದ್ದೆಂತೆ, ನ್ಯಾಯವಿಧಾಯಕ ಸಭೆಯ ನಿಯಮಾವಳಿಯನ್ನು ತಿದ್ದುಪಾಟು ಮಾಡಲಾಗುವುದೆಂದು ಅಧಿಕೃತವಾಗಿ ತಿಳಿದುಬಂದಿದೆ.

ವಿಮಾನದಲ್ಲಿ ಬೊಂಬಾಯಿಗೆ

ಹದಿನೈದು ದಿನಗಳಿಂದ ಬೆಂಗಳೂರಿನಲ್ಲೇ ಇದ್ದ ರೀವಾ ಸಂಸ್ಥಾನದ ದಿವಾನ, ಮಂತ್ರಿಗಳಾದ ರಾಜಸೇವಾ ಪ್ರಸಕ್ತ ಶ್ರೀ ಬಿ. ಟಿ. ಕೇಶವಯ್ಯಂಗಾರ್ಯರವರು ಈ ಪ್ರಾತಃಕಾಲ ವಿಮಾನದಲ್ಲಿ ಬೊಂಬಾಯಿಗೆ ತೆರಳಿದರು.

ರೀವಾ ಮಹಾರಾಜಕುಮಾರರು

ಅಡಚಣೆ ಶಿಕ್ಷಣಕ್ಕಾಗಿ ಈಗ ಬಂದಿದ್ದ ರೀವಾ ಮಹಾರಾಜ ಕುಮಾರರು ೧೬ನೇ ತಾರೀಖು ಒಂದು ಪಕ್ಷಿಯ ಕಾಟ ನಿಲ್ಲಿಸಿದ್ದಾರೆ.

ವಾರ್ಸಾದ ಜನರ ದುಸ್ಥಿತಿ

ಪೋಲೆಂಡಿನ ಒಳ ಸೈನ್ಯಗಳ ದಳಪತಿಯಾದ ಜನರಲ್ ಬೋರ್ ರವರು ಹೇಳುವ ಪ್ರಕಾರ, ವಾರ್ಸಾ ನಗರದ ಮಧ್ಯ ಭಾಗದಲ್ಲಿ ಜರ್ಮನರೊಂದಿಗೆ ಬಲವಾದ ಕಾಳಗ ನಡೆಯುತ್ತಿದ್ದು, ಮನುಷ್ಯ ಮಾತ್ರದವನು ಸಹಿಸಲಾರದ ಕಷ್ಟದ ಎಲ್ಲೆ ಮೀರಿ ಹೋಗಿದೆ.

ವಾನ್ ಕ್ಲೂಗರ ಮರಣ

ಫ್ರಾನ್ಸಿನಲ್ಲಿ ಜರ್ಮನ ಸೇನಾ ನಾಯಕರಾಗಿದ್ದ ವಾನ್ ಕ್ಲೂಗರ ಸತ್ತಿರುವರೆಂದೂ, ರೋಮೆಲ್ಲರು ತೀವ್ರ ಗಾಯ ಹೊಂದಿ, ಸ್ಪ್ರೊ ಮತ್ತು ಮಾಡೆಲ್ ಎಂಬುವವರೂ ಮೊದಲು ಬಿಟ್ಟಿರುವ ಕಡೆಗೆ ಒಬ್ಬನೇ ಜರ್ಮನ್ ಸೇನಾ ನಾಯಕರೊಬ್ಬನ ಹೇಳಿದ್ದಾನೆ.

ಲಕ್ಸೆಂಬರ್ಗ್ ಪಟ್ಟಣ ವಶ

ಜನರಲ್ ಪ್ಯಾಟನ್ ಸೈನ್ಯದಲ್ಲಿ ಮುನ್ನುಗ್ಗುತ್ತಿದ್ದ ವಿಚಿತ್ರ ಸೈನಿಕರು ಲಕ್ಸೆಂಬರ್ಗ್ ನಗರವನ್ನು ಶತ್ರು ಹಿಡಿತದಿಂದ ವಿಮೋಚನೆ ಮಾಡಿದರು.

ಒಂದು ವರ್ಷದಲ್ಲಿ ಜಪಾನಿನ ಸಂಹಾರಕ್ಕೆ ಪ್ರತಿಜ್ಞೆ

ಜಪಾನ್ ರಾಜ್ಯವನ್ನು ಒಂದು ವರ್ಷದ ಕ್ಷಿಪ್ರ ಮತ್ತು ಪೂರ್ತಿ ನಾಶ ಮಾಡುವ ಸಲುವಾಗಿ ಬ್ರಿಟನ್ನು ಸಂಯುಕ್ತ ಸಂಸ್ಥಾನಕ್ಕೆ ಸಂಪೂರ್ಣ ಸಹಾಯವೀಯುವುದೆಂಬ ಪ್ರತಿಜ್ಞೆಯನ್ನು ಚರ್ಚಿಲರು ಕೊಟ್ಟಿದ್ದಾರೆ. ಚರ್ಚಿಲರು ಭೂ, ಜಲ, ವಾಯು ಸೈನ್ಯಾಧಿಕಾರಿಗಳೊಡಗೂಡಿ ಕ್ವಿಬೆಕ್ ರಾಜಧಾನಿಗೆ ಬಂದಿದ್ದಾರೆ. ಅಧ್ಯಕ್ಷ ರೂಸ್ವೆಲ್ಟರು ತಮ್ಮ ಅಧಿಕಾರಿಗಳೊಂದಿಗೆ ಬರಲಿರುವರು.

ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ

ಬ್ರಿಟಿಷ್ ಕಾಲುವೆಯ ಸಂಸ್ಥಾನದ ಬಳಿ ಹೋರಾಡುತ್ತಿರುವ ಜರ್ಮನರು, ಲಿಯೊಪೋಲ್ಡ್ ಕಾಲುವೆ ಅಭಿಮುಖವಾಗಿ ಹಿಮ್ಮೆಟ್ಟುತ್ತಿದ್ದಾರೆ. ಕೆನಡಾ ಸೈನಿಕರು ಬ್ರುಗ್ಸ್ ಎಂಬ ಬೆಲ್ಜಿಯಂ ದೇಶದ ನಗರವನ್ನು ಹಿಡಿದುಕೊಂಡರು. ಫ್ರಾನ್ಸ್, ಬೆಲ್ಜಿಯಂ, ಮತ್ತು ಲಕ್ಸೆಂಬರ್ಗ್ ಗಡಿ ಪ್ರದೇಶದ ಜರ್ಮನಿಯ ಕಡೆಗೆ ನುಗ್ಗಲು ಸನ್ನದ್ಧರಾಗಿರುವ ಮಿತ್ರ ಸೈನ್ಯಗಳನ್ನು ತಡೆಯಲು ಜರ್ಮನರು ಹೊಸ ಹೊಸದಾಗಿ ಹೆಚ್ಚು ಸೈನ್ಯಗಳನ್ನು ರಣರಂಗಕ್ಕೆ ಕಳುಹಿಸುತ್ತಿದ್ದಾರೆ.

ಸಾಮ್ರಾಜ್ಯ ಶಾಹಿ ಹೋಗಬೇಕು

ದಕ್ಷಿಣಾಫ್ರಿಕದಲ್ಲಿ ಯುದ್ಧದ ವಿಷಯ ವಾರ್ತಾಪತ್ರದಲ್ಲಿ ಭಾಷಣ ಮಾಡುತ್ತಾ, ಕಾಶಿ ಹಿಂದೂ ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಸರ್ ಎಸ್. ರಾಧಾಕೃಷ್ಣನವರು, “ಯುದ್ಧ ನಡೆಯುವ ಕಾಲದಲ್ಲಿ ಮಾತ್ರ ಹೊಸ ಪ್ರಪಂಚದ ಸೃಷ್ಟಿಗಾಗಿ ಶಾಂತಿ ನಡೆಯುತ್ತಿರುವುದೆಂದೂ, ಯುದ್ಧ ಮುಗಿದನಂತರ ಹಳೇ ಪ್ರಪಂಚವನ್ನೇ ಉಳಿಸುವುದಕ್ಕಾಗಿ ಒಪ್ಪಂದ ಮಾಡಿಕೊಂಡಿರುವುದೆಂದೂ ಹೇಳುತ್ತಿರುತ್ತಾರೆ; ಇಂಥಹ ಮಾತುಗಳನ್ನು ಮಾತ್ರ ಆಡಿದರೆ, ಈಗ ಮಾಡಿರುವ ತ್ಯಾಗವೆಲ್ಲಾ ಕೇವಲ ಅಪವ್ಯಯವಾಗಿ ಹೋಗುತ್ತದೆ” ಎಂದು ತಿಳಿಸಿದ್ದಾರೆ. ಜಗತ್ತಿನಿಂದ ಸಾಮ್ರಾಜ್ಯ ಶಾಹಿ ಮನೋಭಾವವು ತೊಲಗಬೇಕೆಂದೂ, ಪ್ರಪಂಚಕ್ಕೆಲ್ಲಾ ಒಂದೇ ಸರ್ಕಾರವೇ ಇರಬೇಕೆಂದೂ ಅವರು ಕೋರಿರುವರು.

[illegible]

ಗಣಪತಿ ಮಂಗಳಾರತಿ

ಮೈಸೂರು ೧೧

ನೆನ್ನೆ ದಿನ ಗಣಪತಿ ಮಂಗಳಾರತಿ ಉತ್ಸವವು ನಗರದ ಅನೇಕ ಕಡೆ ನಡೆಯಿತು. ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಗಣಪತಿ ಮಂಗಳಾರತಿಯು ವಿಜೃಂಭಣೆಯಿಂದ ಆಯಿತು. ಶ್ಯಾಸಿಸ್ಟರ್ ವಿಶ್ವನಾಥಯ್ಯನವರು ವಹಿಸಿದ್ದರು. ರಾತ್ರಿ, ಶ್ರೀಮಾನ್ ಹಿರಣ್ಣಯ್ಯನವರು ಶ್ರೀ ಟಿ. ರಾಮಯ್ಯನವರ ಅಧ್ಯಕ್ಷತೆಯಲ್ಲಿ, ಗಣಪತಿ ಮಂಗಳಾರತಿ ಪ್ರಯುಕ್ತ, ಎಂ. ಎಸ್. ಚಂದ್ರಶೇಖರಭಟ್ಟರ ಭಾಷಣವೂ, ಸಂಗೀತ ವಿದ್ವಾಂಸರವರ ಸಂಗೀತವೂ ನಡೆದುವು. ಅಧ್ಯಕ್ಷರ ಭಾಷಣ, ಪ್ರಸಾದ ವಿನಿಯೋಗ ಮಂಗಳಾರತಿಯು ನೆರವೇರಿದುವು.

ಕ್ಲೈವ್ ಇನ್ಸ್ಟಿಟ್ಯೂಟ್ ಚರ್ಚ್ ರಾಮಸ್ವಾಮಿ ಕಟ್ಟಡದಲ್ಲಿ ಗಣಪತಿ ಮಂಗಳಾರತಿಯು ಆಗಿ, ಶುಕ್ಲಪಕ್ಷದ ಕೆರೆಯ ಹತ್ತಿರ ಪ್ರಸಾದ ವಿನಿಯೋಗವಾಯಿತು.

ಅರಸು ಬೋರ್ಡಿಂಗ್ ಸ್ಕೂಲ್ ಯೂನಿಯನ್

ಡಾಕ್ಟರ್ ಕೇವಲ್ ಮೊದಲಾದವರು ಅರಸು ಬೋರ್ಡಿಂಗ್ ಸ್ಕೂಲಿನಲ್ಲಿ “ಇಂಡಿಯಾವು ಒಂದಾಗುವುದೇ ಅಥವಾ ವಿಭಾಗವಾಗುವುದೇ?” ಎಂಬ ವಿಷಯವಾಗಿ ನಡೆದ ಚರ್ಚಾಪ್ರಸಂಗ ಭಾಷಣವನ್ನು ನಡೆಸಿದರು. ರಾಜಕಾಲೇಜಿನ ಡಾ|| ಟಿ. ಎ. ಪುರುಷೋತ್ತಮರವರು ಅಧ್ಯಕ್ಷತೆ ವಹಿಸಿದ್ದರು.

ಕಳುಹಿಸಿದ ಆಹ್ವಾನ

[illegible]

ದುರುಪಯೋಗದ ಆಪಾದನೆ

[illegible]

ಫುಟ್‌ಬಾಲ್

ಬೆಂಗಳೂರು ವೆಸ್ಟ್ ಎಂಡ್ ಮತ್ತು ರಾಜಾ ಕಾಲೇಜಿನ ನೆನ್ನೆ ಮೊದಲ ದಿನ ಮೈದಾನದಲ್ಲಿ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರಿನವರು ಗೆದ್ದರು.

ಗಾಂಧಿ–ಜಿನ್ನಾ ಸಂಭಾಷಣೆ

[illegible]

ಪತ್ರ ವ್ಯವಹಾರ

ಪೌರ ಸಭಾ ವ್ಯಾಗ

[illegible] ಚನ್ನಪಟ್ಟಣ [illegible]

ಈ ಊರಿನ ಪೌರ ಸಭಾ [illegible] ಶ್ರೀ ಎಂ. ಚನ್ನರೆಡ್ಡಿಯವರು [illegible] ಆಗಸ್ಟ್ [illegible] ಎಂದು ತಿಳಿಸಿದೆ. ಅಧ್ಯಕ್ಷರ [illegible] ರಿಜಿಸ್ಟರ್‌ನಲ್ಲಿ ಎಲ್ಲ [illegible] ನಿಮ್ಮ [illegible] ರಿಜಿಸ್ಟರ್ ನೂ [illegible]

ಪ್ರಸ್ತಾಪಿಸಿದ [illegible] ನಾನು ಈ ವಿಷಯ [illegible] ನಮ್ಮ ಮನಸ್ಸು [illegible] ಅಧಿಕಾರವೂ [illegible] ಮಾತ್ರ ಇಲ್ಲಿ [illegible] ನಾನು ಈ ವಿಷಯ [illegible] ಎಂದು [illegible] ಗಮನಕ್ಕೆ [illegible] ತನ್ನನ್ನು [illegible] ಹೊರಗೆ ಹೋಗು ವಂತೆ ತಿಳಿಸಿದ ಪ್ರಯುಕ್ತ ನಾನು ಹೊರ [illegible]

[illegible] ಅವಮಾನ ಮಾಡಿದ್ದ [illegible] ರಿಜಿಸ್ಟರ್ಡ್ ನೋಟೀಸ್ [illegible] ಕೋರ್ಟಿನಲ್ಲಿ [illegible] ಅಂತಃ ಸಂದೇಶ ಪಟ್ಟಿ, ಮುನಿಸಿಪಲ್ [illegible]

ಕರ್ನಾಟಕ ಸಂಘ

[illegible] ಸಂಘದ [illegible] ಶ್ರೀ [illegible] "ದಾಸ [illegible]" ಎಂಬ ವಿಷಯವಾಗಿ [illegible]

ನೀರಿಲ್ಲದೆ ಹಾಹಾಕಾರ!

ಸ್ವಾಮಿ, ಮೈಸೂರು ೧೨

ಬೇಸಿಗೆ ಕಾಲವಲ್ಲಂತೂ ನೀರಿಗೆ ಹಾಹಾಕಾರ ಸರಿ [illegible] ಪ್ರಾತಃಕಾಲದ ಗಂಟೆಗಳಲ್ಲಿ [illegible] ಮುಂದೆ ನಾನು ಮುಂದು ತಾನು ಮುಂದು ಎಂದು ಕೊಡಗಳ ಕುಕ್ಕಾಟ ಅದರಲ್ಲೂ ಹಳೇ ಅಗ್ರಹಾರದ ಮಾದರಿ ಮನೆಗಳ ರಸ್ತೆ, [illegible] ಕಟ್ಟೆ, [illegible] ಒಡೆಯರ [illegible] ನಿವಾಸಿಗಳು [illegible] ನೀರಿಲ್ಲದೆ ಎಷ್ಟು ನೊಂದಿದ್ದಾರೆಂಬುದು ಪತ್ರಿಕೆಗಳ ಮುಖೇನ ವ್ಯಕ್ತವಾಗಿರುತ್ತದೆ. ಈಗ ಮಳೆಗಾಲವಾಗಿದ್ದರೂ ಅಲ್ಲಿ [illegible] ಇಲ್ಲ. ಕೆಲವು ಮನೆಗಳಿಗೆ ಬೆಳಗ್ಗೆ [illegible] ಗಂಟೆವರೆಗೂ ನೀರಿಲ್ಲ. ಮತ್ತೆ ಕೆಲವು [illegible] ನೀರು [illegible] ಮನೆಯವರು ತಪಸ್ಸು ಮಾಡುತ್ತ ಕೂತಿರಬೇಕು. ಹೀಗಾಗಿದೆ ನೀರಿನ ಪರಿಸ್ಥಿತಿ. ಪೌರಸಭಾಧಿಕಾರಿಗಳು ಕಂದಾಯ ವಸೂಲಿಯ ಮುತುವರ್ಜಿಯನ್ನು ಈ ವಿಷಯದಲ್ಲೂ ತೋರಿಸಿ ನೀರಿಗಾಗಿ ಪಡುತ್ತಿರುವ ಕಷ್ಟವನ್ನು ಪರಿಹರಿಸಬಾರದೇಕೆ?—ನೊಂದವ.

ಪ್ರತಿಭಟನಾ ಪತ್ರ

ಪ. ಫೊಡಿಕ್ಸ್ [illegible] ಕಾರ್ಯಸಮಿತಿಯಿಂದ ಒಂದು ಪ್ರಕಟನೆಯು ಹೊರಡಿಸಲ್ಪಟ್ಟಿದ್ದು ಅದರ ಸಂಬಂಧವಾಗಿ [illegible] ಸಮಸ್ಯೆಗಳನ್ನು [illegible] ಬರೆದಿದ್ದೆನು. [illegible] ಒಂದು [illegible] ಪತ್ರವನ್ನು ಬರೆದು ಅದರಲ್ಲಿ ಹಲವು ಪ್ರಶ್ನೆಗಳನ್ನೂ, ಕೆಲವು ಉದಾಹರಣೆಗಳನ್ನೂ ಕೇಳಲಾಗಿದೆ. ಮತ್ತು ಈ ಸಂಬಂಧವಾಗಿ ವಿದ್ಯಾ ಇಲಾಖೆಯ ಡೈರೆಕ್ಟರವರಿಗೂ, ಮೆ [illegible] ಅಧ್ಯಕ್ಷರಿಗೂ ಪತ್ರಗಳನ್ನು ಬರೆಯಲಾಗಿದೆ—ಜೆ. ಸ್ವಾಮಿದಾಸ್.

MEDICINES

Take your requirements from

RAGHULAL & CO.,

1748, Sayaji Rao Road,
(Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ.,

1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು

Edited, printed and published by A. R. Nagarajan, at the Sadhvi Press, D Subbiah Road, Mysore

ಕೃಷ್ಣಪ್ಪಗೌಡರಿಗೆ ಮಾನಪತ್ರ

ಸ್ವಂ. ವ.] ಮಂಡ್ಯ ೧೦

